3 ಮೇಲ್ಕಂಡ ಪ್ರದರ್ಶನಕ್ಕೆ ಪ್ರೆಸಿಡೆಂಟರನ್ನಾಗಿ ಮೆ ಬಾಚಮಾಡ ಸಂಜೀವನವರನ್ನು ಸರ್ವ ಸಮ್ಮತದಿಂದ ಆರಿಸಲಾಯಿತು

4 ಈ ವರ್ಷದ ಗೋಣಿಕೊಪ್ಪಲಿನ ಜಾತ್ರೆಯನ್ನು 1936ನೇ ಇಸವಿ ಫೆಬ್ರವರಿ ತಾ 2ನೇ ಬುಧವಾರದಿಂದ ಪ್ರಾರಂಭ ಮಾಡಿ 9ನೇ ಆದಿತ್ಯವಾರಕ್ಕೆ ಅಂತ್ಯವಾಗುವಂತೆ ತೀರ್ಮಾನವಾಯಿತು.

5 ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳಿಗೆ ಆವಶ್ಯಕವೆಂದು ಕಂಡಲ್ಲಿ ಹೆಚ್ಚಿಗೆ ಕಮಿಟಿ ಮೆಂಬರುಗಳನ್ನು ಆರಿಸಿಕೊಳ್ಳುವಂತೆ ತೀರ್ಮಾನವಾಯಿತು

6 ಈ ಪ್ರದರ್ಶನದ ಕಾರ್ಯ ನಿಮಿತ್ತ ಖರ್ಚಿಗಾಗಿ ಡಿ ಬೋರ್ಡಿನಿಂದ ರೂ 200ನ್ನೂ, ಗವರ್ನ್ಮೆಂಟಿನಿಂದ ಕಮಿಷನರವರನ್ನು ಮತ್ತು ಸೆಂಟ್ರಲ್ ಬ್ಯಾಂಕಿನವರನ್ನೂ ಸ ತ ಧನ ಸಹಾಯ ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

7 ಬಂದಾ ಹಣ ಸಹಾಯ ಕೊಟ್ಟ ಮೆಂಬರುಗಳ ಹೆಸರನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಸರ್ವ ಸಮ್ಮತದಿಂದ ತೀರ್ಮಾನಿಸಲಾಯಿತು

8 ಅಧ್ಯಕ್ಷರಿಗೆ ವಂದನೆಯಿಂದ ಮೀಟಿಂಗು ಬರಖಾಸ್ತಾಯಿತು.

ತಾ 5—12—35 ಕೆ ಎ ಮೇದಪ್ಪ, (ಅಧ್ಯಕ್ಷರು)

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.



ಗ್ಯಾರಂಟಿಯಾದ ಹೊಸ ಮಾಲುಗಳು.

ಬರಲಿಕ್ಕಿರುವ ಶಿಕಾರಿ ಸಮಯಕ್ಕಾಗಿ.

ASHOO TOSH DAW & CO.,
GUN MAKERS.
"DAW BUILDING" 184, DHURMTALA ST., CALCUTTA

ಒಮ್ಮೆ ವಿಚಾರಿಸಿ ನೋಡಿ] [ಬಂದು ಪರೀಕ್ಷಿಸಿರಿ

7 ನಿಮ್ಮ ಕಳೆದ ಹಣವನ್ನು ವೃಥಾ ದುಂದು ಮಾಡಬೇಡಿ ... ಪಡೆದು ಕೊಳ್ಳಿ

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಟ್ಟಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 2೦ರ ವರೆಗೆ ಬೋನಸ್ಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಂಬಂಧಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಂ ದರದಲ್ಲಿ ಪಾಲಿಸಿ ಕೊಡುವ ಕಂಪನಿ ಇದೆಂದು ಮನಪೂರ್ತಿ ನಂಬಿರಿ.

ಪತಿ ಪತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ವಿಶೇಷವಾದ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.

ಪಾಲಿಸಿದಾರರು ಆಕಸ್ಮಾತ್ತಾಗಿ ಅಂಗಹೀನರಾದರೆ ಅಂಥವರ ಪಾಲಿಸಿಯ ಮೊಬಲಗನ್ನು ಮುಂದಿನ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲಿ ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ

ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗೌಡರು ಮತ್ತು ಹೆಗಡೆಗೆ ಉತ್ತಮ ತರದ ಕಮಿಶನ್ ವಗೈರೆಯಿಂದ ಏಜನ್ಸಿ ಕೊಡಲಾಗುತ್ತೆ.

ಹೆಚ್ಚಿನ ವಿವರಕ್ಕೆ—ಬಿ. ಎಸ್. ವಾಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
26—2 ಮಹದೇವಪೇಟೆ, ಮಡಿಕೇರಿ.

ಅವೆಲ್ಲವೂ ಒಂದೇ ಸಮ ತೂಗುತ್ತವೆ.



ಆದರೆ ವಸ್ತುವಿನಿಂದರಲ್ಲಿ ಅರ್ಧ ನೀರು.

ಕಡಿಮೆ ಬೆಲೆಯ ಸಾಧಾರಣ ಸಾಬೂನುಗಳಲ್ಲಿ ಅರ್ಧಾಂಶವು ಬರೀ ನೀರಾಗಿದೆ. ಆದ್ದರಿಂದ ಕೊಳೆವಲ್ಲಿ ಅವುಗಳಲ್ಲಿ ವ್ಯತ್ಯಾಸಗಳು ಕಾಣಬರುವುದಿಲ್ಲ. ಆದರೆ ಅವುಗಳಲ್ಲಿ ನೊರೆ ಕಡಿಮೆ ಅವು ಕರಗುವವು ಆದರೆ 501 ಮಾರ್ಕಿನ ಸಾಬೂನಿನಲ್ಲಿ ಗಟ್ಟಿ ಸಾಬೂನು ಇರುವುದರಿಂದ ನಿಮಗೆ ತಕ್ಕ ಪ್ರತಿಫಲಗಳು ದೊರೆಯುವವು ನಿಮ್ಮ ವಸ್ತ್ರಗಳನ್ನು ಶೀಘ್ರದಲ್ಲೇ ಶುಭ್ರಗೊಳಿಸುವವು

501 Soap ನೆಲ್ಲ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಿಮೆ :!

ಟಾಮ್ಯಾಕೋ ವಾರಾಟದ ಮಳಿಗೆ,
೧. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ಸಿಟಿ.

ತಯಾರಿಸುವವರು—[illegible] ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ಕಾಲಿಕಟ್.

52—30. ಕೊಡಗಿನ ಡಿಸ್ಟ್ರಿಕ್ಟ್ ಏಜೆಂಟ್—ಬಿ ಎಸ್ ಪಟ್ಟ, ಸೋಮವಾರಪೇಟೆ, ಮೈಸೂರು.

ಪತ್ರವ್ಯವಹಾರ.

[ಪತ್ರಿಕೆಯಲ್ಲಿ ಪ್ರಕಟವಾದ ಅಭಿಪ್ರಾಯಗಳಿಗೆ ಪತ್ರಾಂಗ ... ಹೊಣೆಗಾರರಲ್ಲ ಸಂ]

ಸಂಪಾಜೆ ನಾಡಿ.

ಆರ್ಯ,

ಇಲ್ಲಿ ಗದ್ದೆ ಬಂದಲು ಬಂದು ಕಡೆ ಕಾಡಾನೆಗಳು ಹಾವಳಿ ಮಾಡುತ್ತಿರುವುದು ವಾಚಕ ಮಹಾಶಯರಿಗೂ, ನಮ್ಮ ಸರಕಾರಕ್ಕೂ ತಿಳಿದಾಕಹೇ ಸರಿ ಈ ವರ್ಷವೇ 2—3 ಸಲ ಹಿಂಡಾನೆಗಳು ಹಾವಳಿಮಾಡಿದ್ದನ್ನು ಮತ್ತು ಒಂಟಿಗ (ರೋಗ್) ಆನೆಯ ಉಪದ್ರವನ್ನೂ ಕೊಡ ಪತ್ರಿಕೆ ಮೂಲಕ ಪ್ರಕಟಿಸಿರುತ್ತೇವೆ

ಈಗ ಪುನಃ ತಾ 10—12—35ನೇ ರಾತ್ರಿ ಹಿಂಡಾನೆಗಳು ಮೆ. ಕೀಲಾರು ರಾಮಚಂದ್ರಯ್ಯನವರ ಅವರ ತೋಟಕ್ಕೆ ನುಗ್ಗಿ 75 ಅಡಿಕೆ ಸಸಿ ಮರಗಳನ್ನು ಸುಮಾರು 100ಕ್ಕಿಂತ ಮಿಕ್ಕಿ ಬಾಳೆ ಬುಡವನ್ನು ಮುರಿದು ತಿಂದು ನಾಶಪಡಿಸಿದ ನಷ್ಟವನ್ನು ಕಂಡಾರೆ ಕೂಡಲೆ ವ್ಯವಸಾಯಗಾರನಲ್ಲದವನಿಗೂ ಎದೆ ಕರಗದಿರದು ಆಗಾಗ್ಯೆ ಇಂಥಾ ಘೋರದ ಸ್ಥಿತಿಯಲ್ಲಿ ನಷ್ಟಪಡುತ್ತಿರುವಾಗ್ಯೆ ಈ ಪ್ರಾಂತ್ಯದಲ್ಲಿ ಯಾವ ತರಹದ ವ್ಯವಸಾಯ ಮಾಡಲಿಕ್ಕೂ ಧೈರ್ಯ ಮತ್ತು ಮನಸ್ಸು ಬರುವುದಿಲ್ಲವೆಂದು ಬರೆದರೆ ಅತಿಶಯೋಕ್ತಿಯಾಗಲಾರದು.

ಆದ ದರಿಂದ ಈ ಪ್ರಾಂತ್ಯದ ಜನ ಸ್ಥಿತಿಯ ಕಷ್ಟವನ್ನು ದಯಾಳು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಇಲ್ಲಿ ಖೆಡ್ಡಾ (ಕಪ್ಪ) ತೋಡಿಸಿ ಆನೆಗಳನ್ನು ಹಿಡಿದು ಅವುಗಳ ಹಾವಳಿಯನ್ನು ತಪ್ಪಿಸಿ ಕೃಷಿಕರ ಕಷ್ಟವನ್ನು ನಿವಾರಿಸುವಷ್ಟು ಕರುಣೆ ತೋರಿಸಬೇಕಾಗಿ ಬೇಡುವ 'ಒಬ್ಬ ಕೃಷಿಕ'

ಗಂಧದ ಬೇನಸ್ಸು ರೂಲ್ಸುಗಳು

ಆರ್ಯ್ಯ ಕೊಡಗುದೇಶ ಜಾಗೃತನವರೇ,—

ನಾನು ಮಾನ್ಯರಾದ ಚೀಫ್ ಕಮಿಶನರ್ ಸಾಹೇಬರವರಿಗೆ ಗಂಧದ ಮರದ ಕರಡು ರೂಲ್ಸುಗಳ ವಿಚಾರವಾಗಿ ಬರೆದಿರುವುದನ್ನು ತಾವಾದರೂ ಗಮನಕ್ಕೆ ತೆಗೆದುಕೊಂಡು, 25-10-35 ರ 'ಕೊಡಗು' ಪತ್ರಿಕೆಯಲ್ಲಿ ಪತ್ರವ್ಯವಹಾರ ಪ್ರಕಟಣೆಗಳ ಕಲಂನಲ್ಲಿ, ಸದರಿ ವಿಚಾರದಲ್ಲಿ ತಾವು ಪ್ರಕಟಪಡಿಸಿರುವ ತಿದ್ದುಪಡಿಯನ್ನು ನಾನು ನೋಡಿದೆ. ನಾನು ಬರೆದಿರುವ ಪತ್ರ ಆರ್ಗ್ಯುಮೆಂಟಲ್ಲ. ವಿಷಯಗಳನ್ನು ಹೊರಗೆಡವಿರುವುದಾಗಿದೆ. ಅದರ ಮೇಲೆ ದೇಶೀಯರೂ ಮತ್ತು ಸರಕಾರದವರೂ ಸಹ ನಾನು ಉದಹರಿಸಿರುವುದು ಸರಿಯೋ ತಪ್ಪೋ ಎಂಬುದನ್ನು ವಿಚಾರಮಾಡಿ ತೀರ್ಮಾನಿಸಬೇಕು. ಆ ಬಗ್ಗೆ ತಾವೊಬ್ಬರು ಗಮನ ಕೊಟ್ಟಿರುವುದು ಕಂಡು ಬಂದಿತೇ ಹೊರತು ದೇಶೀಯರಲ್ಲಿ ಬೇರೆ ಯಾರೂ ಗಮನ ಕೊಟ್ಟಂತೆ ಇಲ್ಲ. ಮತ್ತೊಂದು ವಿಷಯ ಸರಕಾರದವರು ಕರಡು ರೂಲ್ಸುಗಳನ್ನು 11—11—35 ನೇ ಕೊಡಗು ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವುದರ ಮೂಲಕವೂ, ಈ ರೂಲ್ಸುಗಳನ್ನು ವಿಮರ್ಶೆ ಮಾಡಿ ಆಕ್ಷೇಪಣೆ ಯಾ ಸಲಹೆಗಳನ್ನು ಕೊಡಲು ಅವಧಿಯನ್ನು ಹೆಚ್ಚಿಸಿ ಕೊಟ್ಟಿರುವುದರ ಮೂಲಕವೂ ಸ್ವಲ್ಪ ಮಟ್ಟಿಗೆ ಈ ವಿಷಯದಲ್ಲಿ ನಿಗಳೆಯಟ್ಟು ಬಾಕಿ ಇತರ ವಿಷಯಗಳನ್ನು ತೀರ್ಮಾನಕ್ಕೆ ಬಾಕಿ ಇಟ್ಟುಕೊಂಡಿದ್ದಾರೆ. ನೀವು ಪ್ರಕಟಪಡಿಸಿರುವ ತಿದ್ದುಪಡಿಗೆ ನನ್ನ ಆಕ್ಷೇಪಣೆ ಯಾವುದೂ ಇಲ್ಲ. ಇಂಥಾ ಪ್ರಾಮುಖ್ಯ ವಿಚಾರದಲ್ಲಿ ನನ್ನೊಬ್ಬನ ಅಭಿಪ್ರಾಯವೇ ಪ್ರಾಧಾನ್ಯವಲ್ಲ ದೇಶೀಯರಾದ ಸಮಸ್ತರ ಅಭಿಪ್ರಾಯವೂ ಮುಖ್ಯ ಅನೇಕ ಜನರ ಅಭಿಪ್ರಾಯವನ್ನು ತಿಳಿಯಗೊಡುವ ಉದ್ದೇಶದಿಂದಲೇ ನಾನು ಆ ಪತ್ರವನ್ನು ಪ್ರಕಟಮಾಡಿದೆ. ಈ ವಿಷಯದಲ್ಲಿ ನೀವು ಇಷ್ಟಕ್ಕೇ ಬರೆದ ಬನೋಪಕಾರವೂ ದೇಶೋಪಕಾರವೂ, ಸರಕಾರದಲ್ಲಿ ಸಹಕಾರವೂ ಉಂಟಾಗುವಂತಹ ವಿಧಾನಗಳನ್ನು ಮಾಡುವಿರಾಗಿ ನಂಬಿದ್ದೇನೆ ನಿಮ್ಮಂತೆಯೇ ಉಳಿದ ದೇಶಾಭಿಮಾನಿಗಳೆಲ್ಲರೂ ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಆ ಬಗ್ಗೆ ಸಹಾಯಕವಾದ ಅಭಿಪ್ರಾಯಗಳನ್ನು ಸ್ವೀಕರಿಸಿಕೊಂಡು ದೇಶೋಪಕಾರವಾಗುವುದನ್ನು ನೋಡಲು ಬಯಸುವುದರಿಂದ ನಿರೀಕ್ಷಿಸುತ್ತಿದ್ದೇನೆ.

ಯನ್. ಆರ್. ಸುಬ್ಬಯ್ಯ

ಸ್ಥಳ ದೇಶ.

ಕೊಡಗಿನ ಸರ್ಕಾರದ 1934—35ನೇ ವರ್ಷದ ಆಡಳಿತ ವರದಿಯು ಒಂದು ಪ್ರತಿಯನ್ನು ವಂದನಾಪೂರ್ವಕ ಸ್ವೀಕರಿಸಿದ್ದೇವೆ.

ಗೋಣಿಕೊಪ್ಪಲಲ್ಲಿ ದನಗಳ ಪ್ರದರ್ಶನವು ಬರುವ ಫೆಬ್ರವರಿ ತಾ. 5ರಿಂದ 9 ರ ವರೆಗೆ ನಡೆಯುವದಾಗಿ ತಿಳಿಯಬರುತ್ತದೆ.

ಕಳೆದ ವಾರ ಶನಿವಾರಸಂತೆಯಲ್ಲಿ ಒಬ್ಬರಿಗೂ, ಈ ವಾರ ಮಡಿಕೇರಿಯಲ್ಲಿ ಒಬ್ಬರಿಗೂ ಪ್ಲೇಗು ಅಂಟಿದೆಯಾಗಿ ತಿಳಿಯುತ್ತೇವೆ.

ಹಾತೂರು ಶ್ರೀನಿವಾಸ ಸಹಕಾರ ಸೊಸೈಟಿಯ ಆಶ್ರಯದಲ್ಲಿ ಕಳ್ಳಬೆಯಲ್ಲಿ ಒಂದು ಶಾಲೆಯನ್ನು ಈ ತಿಂಗಳ ಮೊದಲಿನಿಂದ ಪ್ರಾರಂಭಿಸಿರುವರು.

ಗೋಣಿಕೊಪ್ಪಲಿನ 'ಆತ್ಮಾನಂದ' ಪ್ರೆಸ್ಸಿನ ಮಾಲೀಕರಾದ ಮಿ. ಆರ್. ಸುಂದರ ಸಿಂಗರವರ ಪತ್ನಿಯವರು ಈ ತಾ 11 ರಲ್ಲಿ ಶಿವಾಧೀನರಾದರೆಂದು ತಿಳಿಯುತ್ತೇವೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗೊಂದು ಈ ತಾ. 17ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಬೋರ್ಡಿನ ಪ್ರೆಸಿಡೆಂಟರಾದ ರಾ ಸಾ ಪಾಂಡಂಡ ಚಂಗಪ್ಪನವರು ಅಧ್ಯಕ್ಷರಾಗಿದ್ದರು.

ನೆಲಜಿ ಗ್ರಾಮದ ಮುಂಡಂಡ ತೋಟದಲ್ಲಿ ಸೈನೆ ಮರದಿಂದ ಜೇನು ತೆಗೆಯಲಿಕ್ಕೆ ಹತ್ತಿದ್ದ ಕುರುಬನೊಬ್ಬನು ಈ ತಾ. 15ರಲ್ಲು ಮರದಿಂದ ಬಿದ್ದು ಮೃತನಾದನೆಂದು ತಿಳಿಯಬರುತ್ತದೆ.

ಬೊಂಬಾಯಿಯಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಾಗತ ಸಮಿತಿಯ ಉಪಾಧ್ಯಕ್ಷರಲ್ಲೊಬ್ಬರನ್ನಾಗಿ ಪೆ ಮುಂ ಡಂಡ ಮುತ್ತಣ್ಣ ಬಿ. ಎ ಎಲ್ಎಲ್ ಬಿ. ಯವರನ್ನು ಬೊಂಬಾಯಿಯ ಕನ್ನಡಿಗರು ಆರಿಸಿರುವರು.

ಮೈಸೂರು ಪಟ್ಟಣದ ಕೊಡವರ ಸಂಘದ ನೂತನ ವಾರ್ಷಿಕೋತ್ಸವವೂ ಹುತ್ತರಿ ಹಬ್ಬವೂ ಈ ತಾ 15ರಲ್ಲಿ ಮಿ. ಪಾಂಡಂಡ ಮಾದಪ್ಪನವರ ಭವನದಲ್ಲಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತ್ತಾಗಿ ತಿಳಿಯುತ್ತೇವೆ.

ಉತ್ತರ ಕೊಡಗಿನಾಗಿ ಮಡಿಕೇರಿಯಲ್ಲಿ ಒಬ್ಬ 'ಮಾಸ್' ಸೀಫನ್ ಹುದ್ದೆಯನ್ನು ಸರ್ಕಾರದವರು ಹೊಸದಾಗಿ [illegible] ದು ಮಾಡಿರುವರೆಂದೂ, ಅದನ್ನು 1936ನೇ ಫೆಬ್ರವರಿ [illegible] ಯಲ್ಲಿ ಜಾರಿಗೆ ತರುವರೆಂದೂ ತಿಳಿಯಬರುತ್ತದೆ.

1936ನೇ ಜನವರಿ 10ರಿಂದ ಸಬ್ ಅಸಿಸ್ಟೆಂಟ್ ಸರ್ಜನರುಗಳಾದ ಮಿ. ಮಾಳೇಟಿರ ಗಣಪತಿಯವರನ್ನು ವೀರಾಜಪೇಟೆಯಿಂದ ಪೊನ್ನಂಪೇಟೆಗೂ, ಮಿ. ರುದ್ರಪ್ಪನವರನ್ನು [illegible] ದಿಂದ ವೀರಾಜಪೇಟೆಗೂ ವರ್ಗಾಯಿಸಿರುವರೆಂದು [illegible] ರುತ್ತದೆ.

ಈ ವಾರ ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 130, ಯಾಲಕ್ಕಿ ಮಣಕ್ಕೆ ರೂ. 22 ಮತ್ತು ವೀರಾಜಪೇಟೆಯಲ್ಲಿ ಭತ್ತ 120 ಪಡಿಯ ಗಾಡಿಗೆ ರೂ. 40, ಗೋಣಿಕೊಪ್ಪಲಲ್ಲಿ 140 ಪಡಿಯ ಗಾಡಿಗೆ ರೂ. 50 ರ ವರೆಗೆ ಕ್ರಯವಿತ್ತೆಂದು ತಿಳಿಯುತ್ತೇವೆ.

ಶ್ರೀಮಂಗಲ ನಾಡು ಸೆಮ್ಮಲೆ ಗ್ರಾಮದ ಮಿ. ಚೆಟ್ಟಿಯಂಡ ಗಣಪತಿಯವರು ಈ ತಾ 11ರಲ್ಲಿ ಅಲ್ಲಿಯ ಕೋಲು ಮಂದಿನ ಬಳಿ ದೊಣ್ಣೆಯ ಪೆಟ್ಟುಗಳಿಂದ ಮೃತರಾದರೆಂದೂ, ಈ ಸಂಬಂಧ ಅವರ ಮನೆಯ ಮಾಡುವರು ಪತ್ತೆಗಾಗಿ ವಾಡಲ್ಪಟ್ಟಿರುವರೆಂದೂ ವರ್ತಮಾನ.

ಕೊಡಗು ಟೆರಿಟೋರಿಯಲ್ ಪಟಾಲಮಿನ ಹೊಸ ಸಿಪಾಯಿಗಳ ಪ್ರಥಮ ತರಬೇತು 1936ನೇ ಮಾರ್ಚ 10ರಿಂದ ಏಪ್ರಿಲ್ 9ರ ವರೆಗೂ ಮತ್ತು ಹಳೇ ಸಿಪಾಯಿಗಳ ವಾರ್ಷಿಕ ತರಬೇತು ಏಪ್ರಿಲ್ 10ರಿಂದ ಮೇ 9ರ ವರೆಗೂ ಮಡಿಕೇರಿಯಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಕ್ರಿಸ್‌ಮಸ್ ರಜೆಕ್ಕಾಗಿ ಕೊಡಗಿನ ಎಲ್ಲಾ ಕೋರ್ಟು ಕಛೇರಿಗಳು ಈ ತಾ. 24ರಿಂದ 1936ನೇ ಜನವರಿ 1ರ ವರೆಗೆ ಮುಚ್ಚಲ್ಪಡುವವು. ತುರಿತದ ಕೆಲಸಗಳಿಗೆ ತಕ್ಕ ಏರ್ಪಾಡು ಮಾಡಲಾಗುವುದು. ಅಲ್ಲದೆ ಈ ತಾ 30ರಲ್ಲಿ ಮಡಿಕೇರಿ ಕೊಡಗಿನ ಎಲ್ಲಾ ಖಜಾನೆಗಳು ತೆರೆದಿರ್ಪುದಿಲ್ಲವು.

ಈ ತಾ. 21ರಲ್ಲಿ ನಡೆಯುವ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗಿಗೆ ಅಧ್ಯಕ್ಷರಾಗಿ ಬರಲು ತನಗೆ ಸಾಧ್ಯವಿಲ್ಲವೆಂದು ಮದ್ರಾಸಿನ ಮಿ. ಕೆ ಭಾಷ್ಯಮ್‌ರವರು ಇತ್ತ ತಿಳಿಸಿರುವರು. ಆದುದರಿಂದ ಮೈಸೂರು ಪ್ರಾಂತೀಯ ಸಹಕಾರಿ ಎಪೆಕ್ಸ್ ಬ್ಯಾಂಕಿನ ಪ್ರೆಸಿಡೆಂಟರಾದ ಮಿ. ಯಂ. ವೆಂಕಟಕೃಷ್ಣಯ್ಯನವರು ಅಧ್ಯಕ್ಷ ಪದವಿಯನ್ನು ವಹಿಸುವರು.

ಕ್ರೈಟರ್ ಪೇಟೆ ನಾಡು ಕಚೇರಿಯಲ್ಲಿ ಗುಮಾಸ್ತರಾಗಿದ್ದ ಮಿ. ಕೋರೆರ ನಂಜಪ್ಪನವರು ಕೆಲವು ಸಮಯದ ಹಿಂದೆ ಸರಕಾರಿ ಹಣ ದುರುಪಯೋಗ ಪಡಿಸಿದರೆಂಬ ಕಾರಣದಿಂದ ಅವರಿಗೆ ಈ ತಾ. 17ರಲ್ಲಿ ಸಬ್ ಉತ್ತರ ಕೋರ್ಟಿನಲ್ಲಿ 1 ವರ್ಷ 3 ತಿಂಗಳು ಕಠಿಣ ಸಜೆಯೂ, ರೂ. 300 ಜುಲುಮಾನೆಯೂ, ಜುಲುಮಾನೆ ಕೊಡಲು ತಪ್ಪಿದರೆ 3 ತಿಂಗಳ ಹೆಚ್ಚಿನ ಸಜೆಯೂ ವಿಧಿಸಲಾಯಿತು. ಅವರು ಅಪ್ಪೀಲು ಸಲಿಸುವ ಕಾರಣ ಅವರನ್ನು ಜಾಮೀನು ಮೇಲೆ ಬಿಡಲಾಗಿದೆಯೆಂದು ತಿಳಿಯಬರುತ್ತದೆ.

ಶಿಕ್ಷಣ.

ಮಡಿಕೇರಿಯ ಮಿಡ್ಲ್ ಮೇಜಿಸ್ಟ್ರೇಟರುಗಳಿಗೆ 2 ವರ್ಷಗಳ ವರೆಗೆ ಸಜೆ ವಿಧಿಸುವ ಅಧಿಕಾರ ಕೊಡಲಾಗಿದೆಯೆಂದು ಈ ತಾ 6ರ ಸಂಚಿಕೆಯಲ್ಲಿ ಪ್ರಕಟವಾದ ವರ್ತಮಾನ ಸರಿಯಲ್ಲವೆಂದೂ, ಅವರು ಕೆಲವು ಅಕ್ಷೇಪಗಳನ್ನು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 260ನೇ ಸೆಕ್ಷನಿನ ಮೇರೆ ವಿಚಾರಿಸಿ 262 (2) ನೇ ಸೆಕ್ಷನಿನ ಪ್ರಕಾರ ಮೂರು ತಿಂಗಳ ವರೆಗೆ ಸಜೆ ವಿಧಿಸುವ ಅಧಿಕಾರ ಮಾತ್ರ ಅವರಿಗೆ ಕೊಡಲಾಗಿದೆಯೆಂದೂ ಇತ್ತಲಾಗಿ ತಿಳಿಯಬಂದಿದೆ.

ಹಿಂದೂ ದೇಶ.

ಮಿ. ಶ್ರೀನಿವಾಸ ಐಯ್ಯಂಗಾರರು ಮದರಾಸಾಧಿಪತ್ಯದ ಕಾಂಗ್ರೆಸ್ ನಾಯಕರಾಗುವರೆಂದು ಬಲವಾದ ಸುದ್ದಿ.

ಪೂನಾದಲ್ಲಿ ನಡೆಯಲಿರುವ ಹಿಂದೂ ಮಹಾ ಸಭೆಗೆ ಪಂಡಿತ ಮದನಮೋಹನ ಮಾಲವೀಯರು ಅಧ್ಯಕ್ಷರಾಗುವರು.

ಬೊಂಬಾಯಿಯಲ್ಲಿ ಬೆಳ್ಳಿಯ ಮಾರ್ಕೆಟಿನಲ್ಲಿ ಬೆಳ್ಳಿಯ ಬೆಲೆ ಪತ್ತನ ಕಳದು, ಆ ವ್ಯಾಪಾರಿಗಳಲ್ಲಿ ಗಾಬರಿಯುಂಟಾಗಿದೆ [illegible] ಮುಂದೇನೆಂದು ತಿಳಿದಿಲ್ಲ.

ಕಾಂಗ್ರೆಸ್ ಜುಬಿಲಿ ಮಹೋತ್ಸವದ ಸಂಬಂಧವಾದ ನಾಗಪುರದ ಅಖಿಲ ಭಾರತ ಸ್ವದೇಶೀ ವಸ್ತುಪ್ರದರ್ಶನವನ್ನು ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರಪ್ರಸಾದರವರು ಇದೇ ಡಿಸೆಂಬರ್ ತಾ. 25ರಲ್ಲಿ ತೆರೆಯಲಿರುವರು.

ಕಳೆದ 53 ವರ್ಷಗಳಲ್ಲಿ ಕೋಲಾರದ ಚಿನ್ನದ ಗಣಿಯಿಂದ ಸುಮಾರು 120 ಕೋಟಿ ರೂಪಾಯಿ ಬೆಲೆ ಬಾಳುವ ಚಿನ್ನವನ್ನು ತೆಗೆಯಲಾಗಿದೆ. ಇದರಿಂದ ಮೈಸೂರು ಸರ್ಕಾರಕ್ಕೆ ಬಂದಿರುವ ವರಮಾನ ಸುಮಾರು 7 ಕೋಟಿ ರೂಪಾಯಿ.

ಮುನ್ಸಿಪಲ್ ಮೀಟಿಂಗಿನ ನಡವಳಿಕೆಗಳೂ, ಸರಕಾರದೊಡನೆ ಪತ್ರವ್ಯವಹಾರವೂ ಸಾಧ್ಯವಿದ್ದ ಮಟ್ಟಿಗೆ ದೇಶಭಾಷೆಯಾದ ತಮಿಳಿನಲ್ಲಿಯೇ ಜರುಗಬೇಕೆಂದು ಮಧುರೆಯ ಮುನಿಸಿಪಾಲಿಟಿಯಲ್ಲಿ ಬಂದ ಒಂದು ಠರಾವು ಬಹುಮತದಿಂದ ಅಂಗೀಕಾರವಾಗಿದೆ.

ಡಾ ಮೂಂಜೆಯವರು ಸ್ಥಾಪಿಸಬೇಕೆಂದಿರುವ ಸೈನಿಕ ಶಿಕ್ಷಣ ಶಾಲೆಗೆ ಹಣವನ್ನು ಶೇಖರಿಸಲು ಸಂಚರಿಸುತ್ತಿದ್ದಾರೆ. ಬೊಂಬಾಯಿಯಲ್ಲಿ 3 ದಿನಗಳಲ್ಲಿ ರೂ 17 ಸಾವಿರವನ್ನು ಶೇಖರಿಸಿದರು. ಇನ್ನು 6 ತಿಂಗಳೊಳಗಾಗಿ 2 ಲಕ್ಷ ರೂಪಾಯಿಗಳನ್ನು ಶೇಖರಿಸುವ ಭರವಸೆ ಅವರಿಗೆ ಇದೆ

ಸರ್ ಭೂಪೇಂದ್ರ ಮಿತ್ರರು ಇಂಗ್ಲೆಂಡಿನಲ್ಲಿದ್ದಾಗ, ಆರೋಗ್ಯ ಕೆಟ್ಟದ್ದರಿಂದ ಅವರಿಗೆ ಅಲ್ಲಿಗೆ ಬರಲು ಅನುಕೂಲವಿಲ್ಲವೆಂದು ತಿಳಿದು ಅವರ ಸ್ಥಾನದಲ್ಲಿ ಕಾವ್ಸ್‌ಜೀ ಜಹಾಂಗೀರ ಬಟ್ಲರ್‌ರವರು ಹೋದರು. ಆರೋಗ್ಯ ಸುಧಾರಿಸಿ ಇಂಗ್ಲೆಂಡ್ ವಾಸವು ಆಗತ್ಯವೆಂದು ತೋರಿದಲ್ಲಿ ಅನುಕೂಲವಾಗುವದೆಂದರು.

ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಜುಬಿಲಿ ದಿನ ವಾದ ಡಿಸೆಂಬರ್ 28ನೇ ತಾರೀಖಿನ ಬೀಳುವದರಿಂದ ಆ ದಿನವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರಬೇಕೆಂದು ಬಾಬು ರಾಜೇಂದ್ರಪ್ರಸಾದರೂ, ಪಂಡಿತ ಅಬ್ದುಲ್ ಕಲಾಮ್ ಆಜಾದ್‌ರವರೂ ವಿಜ್ಞಾಪಿಸಿಕೊಂಡಿದ್ದಾರೆ.

ಕಳೆದ ವಾರ ಅಮೇರಿಕಾ ದೇಶಕ್ಕೆ 80,92,805 ರೂಪಾಯಿ ಬೆಲೆ ಬಾಳುವದೂ, ಯುರೋಫ್ ದೇಶಕ್ಕೆ 1,09,333 ರೂಪಾಯಿಯದ್ದೂ ಚಿನ್ನವು ಬೊಂಬಾಯಿಯಿಂದ ರಫ್ತಾಗಿದೆ. ಇದು ವರೆಗೆ ಗ್ರೇಟ್‌ಬ್ರಿಟನ್ನಿಗೆ ಇಂಡಿಯಾ ದೇಶದಿಂದ ರೂ. 15,45,06,057 ರಷ್ಟು ಚಿನ್ನ ರಫ್ತಾಗಿದೆ. ಅದೇ ದಿನ ಲಂಡನ್ ಪಟ್ಟಣಕ್ಕೆ 9762 ಬೆಳ್ಳಿ ಇಟ್ಟಿಗೆಗಳೂ, ಅಮೇರಿಕಾ ದೇಶಕ್ಕೆ 1952 ಇಟ್ಟಿಗೆಗಳೂ ರವಾನೆಯಾದವೆಂದು ಪ್ರಕಟವಾಗಿದೆ.

ಮೈಸೂರಿನ ಮಂಡ್ಯ ಸಕ್ಕರೆ ಕಾರ್ಖಾನೆಯ ಡೈರೆಕ್ಟರುಗಳ ವಾರ್ಷಿಕ ಕೂಟವು ಕಳೆದ ಶುಕ್ರವಾರ ರಾಜಮಂತ್ರಪ್ರವೀಣ ಮಿ ಕೆ ಮಾತ್ಯನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. 1935 ನೇ ಸೆಪ್ಟೆಂಬರ್ ತಾ. 30ಕ್ಕೆ ಮುಗಿದ ಒಂದು ವರ್ಷದಲ್ಲಿ ಕಂಪೆನಿಗೆ 3,86,853 ರೂಪಾಯಿ ಆದಾಯ ಬಂದಿರುವುದಾಗಿ ಡೈರೆಕ್ಟರು ರಿಪೋರ್ಟಿನಿಂದ ತಿಳಿದುಬಂದಿತು. ಶೇರುದಾರರಿಗೆ ಶೇಕಡ 10 ರಂತೆ ಡಿವಿಡೆಂಡ್ ಕೊಡಬೇಕೆಂದೂ, ಆದಾಯ ತೆರಿಗೆಯಿಲ್ಲದ ಬೋನಸನ್ನು ಶೇಕಡ 1½ ರಂತೆ ಕೊಡಬೇಕೆಂದೂ, ಒಂದು ಲಕ್ಷ ರೂಪಾಯಿ ರಿಜರ್ವ್ ಫಂಡಿಗೆ ಜಮಾ ಮಾಡಬೇಕೆಂದೂ ತೀರ್ಮಾನವಾಗಿದೆ.

ಹೌಸ್ ಆಫ್ ಕಾಮನ್ಸ್ ಎಂಬ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಕಳೆದ ವಾರ ಮಿ. ಲ್ಯಾನ್ಸ್‌ಬರಿಯವರು ಕ್ರಿಸ್ಮಿಯನ್ ಮತ್ತು ಹೊಸ ವರ್ಷೋತ್ಸವದ ಕಾಲದಲ್ಲಿ ಇಂಡಿಯಾ ದೇಶದಲ್ಲಿ ರಾಜಕೀಯ ಕೈದಿಗಳನ್ನೆಲ್ಲಾ ಬಿಡುಗಡೆ ಮಾಡುವಂತೆ ಬ್ರಿಟಿಷ್ ಸರ್ಕಾರದವರು ಇಂಡಿಯಾ ವೈಸರಾಯರಿಗೆ ಸಲಹೆಯನ್ನು ಮಾಡುವರೋ ಎಂದು ಕೇಳಿದರು. ಇಂಡಿಯಾ ಸ್ಟೇಟ್ ಅಂಡರ್ ಸೆಕ್ರೆಟರಿಗಳಾದ ಮಿ. ಬಟ್ಲರ್‌ರವರು ಉತ್ತರ ಹೇಳುತ್ತಾ, ಈ ವಿಷಯವನ್ನು ವೈಸರಾಯರವರೇ ಇತ್ಯರ್ಥಪಡಿಸುವುದಾಗಿದೆಯೆಂದೂ ತಮಗೆ ತಿಳಿದ ಮಟ್ಟಿಗೂ ಅಂಥಾ ನಿರ್ವಾಹಗಳೇನೂ ನಡೆಯುವಂತಿಲ್ಲವೆಂದೂ, ಕಳೆದ ಸೆಪ್ಟೆಂಬರ್ ತಿಂಗಳಿಂದೀಚೆಗೆ ಕಾನೂನು ವಿರೋಧ ಚಳವಳಿಯ ಕೈದಿಗಳಾಗಿ 21 ಮಂದಿ ಮಾತ್ರ ಬಂಧನದಲ್ಲಿದ್ದಾರೆಯೆಂದೂ ಹೇಳಿದರು.

ದಿ ಕೆನರಾ ಬ್ಯಾಂಕಿಂಗ್ ಕೋಪರೇಶನ್, ಲಿಮಿಟೆಡ್, ಮಡಿಕೇರಿ.

ಈ ಬ್ಯಾಂಕಿನಿಂದ ತಾ 9—1—35 ರಲ್ಲಿ ನಂಬ್ರ 20/35 ನೇ ಸಾಲವಾಗಿ ನಗಗಳ ಆಧಾರದ ಮೇಲೆ, ಪೆನ್‌ಶನ್ ಲೈನ್ಸ್ [illegible] ಬಾಬು ಮಗನ ಬಾಬಿ ಎಂಬವಳ, ಪಡಕೊಂಡ ಸಾಲದ ಪ್ರಯಂ ರೂ 6/(ಆರು) ಮತ್ತು ಇದರ ಮೇಲಣ ಬಡ್ಡಿ ಸಹ ಕೊಡತಕ್ಕ ಬಾಕಿಯಾಗಿ ಪದರಿ ಮನೆಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಸಹ ಪಡರು ಮರಳಿ ನ್ಯಾಕ ಪಟ್ಟಿರುವಳಾಗಿ ವಾಪಾಸು ಬಂದಿರುತ್ತದೆ. ಆದುದರಿಂದ ನಗ ಬಾಬು ಸ್ವಾಮಿಯಾದ ವಾರೀಸುದಾರರು ಬ್ಯಾಂಕಿಗೆ ಅವರ ತಕ್ಕಿನ ವಿಷಯ ಸಮಾಧಾನಪಡಿಸಿ ಬಾಕಿ ಇರುವ ಅಸಲು ಬಡ್ಡಿಯನ್ನು ಕೊಟ್ಟು ಸದರಿ ನಗಗಳನ್ನು ತಾ. 10—1—36 ರ ಒಳಗೆ ಬಿಡಿಸಿ ತೆಗೆಯಬೇಕೆಂದು. ಹಿಂಗದಿದ್ದರೆ ಸದರಿ ನಗಗಳನ್ನು ತಾ. 11—1—36 ನೇ ಶನಿವಾರ ಮಧ್ಯಾಹ್ನ 1 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಬ್ಯಾಂಕಿಗೆ ಬರತಕ್ಕ ಹಣಗಳನ್ನು ಜಮಾ ಮಾಡಿಕೊಳ್ಳಲಾಗುವದು ಎಂದು ಈ ಮೂಲಕ ತಿಳಿಸಲಾಗುತ್ತದೆ.

ಮಡಿಕೇರಿ, ತಾ 11—12—'35. K S SHENAI (Agent.)

ನೂತನ! ಮನೋಲ್ಲಾಸಕರ!! ರುಚಿಕರ!!! ಅನರ್ಘ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೊಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—

ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ— ವಿಶಾಲ ಕೊಠಡಿಗಳ—ಶಾಯಿಕೋಣೆಗಳ ವಿಶೇಷ ಸುಖಕರ ಏರ್ಪಾಡು ಇದೆ.

ಆಯಾ ಕಾಲಕ್ಕೆ ತಕ್ಕ ವ್ಯವಹಾರಕರು, ಪ್ರತಿಯಾಗಿ ತಕ್ಕ ಆಯವನ್ನು ಹೊಂದಬೇಕಾದ ಆಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಬೇಕೆನಿಸಿದ—

ಸಕಲ ಅನುಕೂಲಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ" ಪಾರ್ಟಿ—

"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—1 ಪ್ರೊಪ್ರೈಟರ್:— ವಾಮನ ರಾವ್, ಗಾಯತೊಂಡೆ.

ಕಾಂಗ್ರೆಸು ಸುವರ್ಣ ಮಹೋತ್ಸವ.

ನಮ್ಮ ಸಲುವಾಗಿ ಕಾಂಗ್ರೆಸು ಏನು ಮಾಡಿದೆ?

(೧) ನಮ್ಮಲ್ಲಿ ಮ [illegible] ಎಚ್ಚರಿಸಿದ್ದು .... ಕಾಂಗ್ರೆಸು
(೨) ನಮ್ಮಲ್ಲಿ ಮ [illegible] ಬಿತ್ತಿದ್ದು .... ಕಾಂಗ್ರೆಸು
(೩) ನಮ್ಮಲ್ಲಿ [illegible] ಹಚ್ಚಿದ್ದು .... ಕಾಂಗ್ರೆಸು
(೪) ನಮ್ಮಲ್ಲಿ [illegible] ಕಲಿಸಿದ್ದು .... ಕಾಂಗ್ರೆಸು
(೫) ನಮ್ಮಲ್ಲಿ [illegible] ಸ್ವಾಭಿಮಾನ [illegible] ಬೆಳೆಗೊಳಿಸಿದ್ದು ಕಾಂಗ್ರೆಸು
(೬) ನಮ್ಮಲ್ಲಿ [illegible] .... ಕಾಂಗ್ರೆಸು
(೭) ನಮ್ಮಲ್ಲಿ [illegible] ಕೈಕೊಳ್ಳಹಚ್ಚಿದ್ದು ಕಾಂಗ್ರೆಸು
(೮) ನಮ್ಮಲ್ಲಿ [illegible] ಮಾಡಿದ್ದು .... ಕಾಂಗ್ರೆಸು
(೯) ನಮ್ಮಲ್ಲಿ [illegible] ಭಾವನೆಯನ್ನು ಹುಟ್ಟಿಸಿದ್ದು .... ಕಾಂಗ್ರೆಸು
(೧೦) ನಮ್ಮಲ್ಲಿ [illegible] ತೋರಿಸಿದ್ದು .... ಕಾಂಗ್ರೆಸು

ಆ [illegible] ಕಾಂಗ್ರೆಸ್ ಸುವರ್ಣ ಮಹೋತ್ಸವ [illegible] ಪ್ರತಿಯೊಬ್ಬ ಭಾರತೀಯನ ಕರ್ತವ್ಯವು.

ಪ್ರಾಂತಿಕ ಕಾಂಗ್ರೆಸ್ ಪ್ರಚಾರ ಮಂಡಳಿ.

ಯುದ್ಧ ವಾರ್ತೆ.

ಇತಾಲಿ ಎಸಗೆ [illegible]

[illegible] ಪ್ರಸ್ತಾಪಗಳ [illegible]

[illegible] ಸಹಸ್ರ ಬಾಂಬು [illegible]

[illegible] ಪ್ರಸ್ತಾಪಗಳಿಗೆ ಚಕ್ರವರ್ತಿಯ [illegible] ತಿರಸ್ಕಾರ

ಡಿಸೆಂಬರು ತಾ. 5ರಿಂದ 15ರ ವರೆಗೆ.

ಇಟಲಿಯವರನ್ನು [illegible]

500 ಸೈನಿಕರ ಇಟಲಿ [illegible] 50 ಇಟಲಿ [illegible] ಅಬಿಸೀನಿಯರ [illegible]

ಅಬಿಸೀನಿಯರ ಸೈನ್ಯವು [illegible]

ಅಬಿಸೀನಿಯಾದವರ [illegible]

ರಾಜಿ [illegible]

ಪ್ಯಾರಿಸಿನಲ್ಲಿ [illegible] ಇಟಲಿ ಮತ್ತು ಅಬಿಸೀನಿಯವು [illegible] ಪ್ರಾಂತ [illegible] ಗಳನ್ನು [illegible]

ಇತಾಲಿಯವರ [illegible]

ಇತಾಲಿಯನರು [illegible] ಸೈನ್ಯವನ್ನು [illegible]

ಇಟಲಿ [illegible] ಬಾಂಬು [illegible]

'ಇಟಲಿಯವರು ಬಾಂಬುಗಳಿಂದ [illegible]

[illegible]

ಶತ್ರುಗಳ ಮೇಲೆ ಬಾಂಬು

ಅಬಿಸೀನಿಯಾ [illegible] ಇಟಲಿಯ 9 ವಿಮಾನಗಳು [illegible] 'ನಿಷ್ಪ [illegible] ಬಾಂಬುಗಳ

[illegible] ಬಾಂಬಿನ ಧಾಳಿಯಲ್ಲಿ [illegible]

ಅಬಿಸೀನಿಯರ [illegible] ಬಾಂಬಿನ [illegible]

ಇಟಲಿ [illegible]

ಪ್ರಾಂತಗಳ [illegible] ಚಕ್ರವರ್ತಿಗಳ [illegible]

ಇಟಲಿ [illegible]

ಇಟಲಿಯವರು [illegible] ಬಾಂಬು [illegible]

ಡಿಸೆಂಬರು ತಾ. 15.

ರಾಜಿ [illegible]

[illegible] ಚಕ್ರವರ್ತಿಗಳಿಗೆ [illegible]

ಇತಾಲಿ [illegible]

[illegible] 'ಇಟಲಿಯವರ [illegible] ಇಟಲಿಯ ಸೈನ್ಯ [illegible] ಅಬಿಸೀನಿಯರು [illegible] ಇಟಲಿಯನರ [illegible] ಸೈನ್ಯ [illegible] ಚಕ್ರವರ್ತಿ ಅಧಿಕಾರ [illegible] ಇಟ್ಟಿರುವದಿಲ್ಲ.

ಡಿಸೆಂಬರು ತಾ. 16.

ಇತಾಲಿಯ [illegible] ತಿರಸ್ಕಾರ.

ಇತಾಲಿಯ [illegible] ರಾಜಿಪ್ರಸ್ತಾಪಗಳನ್ನು [illegible]

ಒಗಾಡನ್ ಪ್ರಾಂತದಲ್ಲಿ ಮಳೆ.

ಒಗಾಡನ್ ಪ್ರಾಂತದಲ್ಲಿ ಕಳೆದ ಒಂದು ವಾರದಿಂದ ಮಳೆ ಪ್ರಾರಂಭವಾಗಿದೆ. [illegible] ಧಾಳಿಯು [illegible] ಮಳೆಯಿಂದ ಇಟಲಿಯ [illegible] ಮತ್ತು ಟ್ಯಾಂಕುಗಳು [illegible]

ಡಿಸೆಂಬರು ತಾ. 17.

ಅಬಿಸೀನಿಯರ ಮುಂದುವರಿಯುವಿಕೆ.

3000 ಅಬಿಸೀನಿಯನ ಸೈನಿಕರು ಟಕಾಜೆ ನದಿಯನ್ನು ದಾಟಿ ಇಟಲಿಯ ಸೈನ್ಯವನ್ನು [illegible] ಅಬಿಸೀನಿಯರಿಂದ [illegible] ಅವರ ಆಕ್ರಮಣದಲ್ಲಿ ವಿಮಾನಗಳೂ [illegible] ಇವೆ. ಇದಲ್ಲದೆ ಮತ್ತೊಂದು ಭಾಗದಿಂದ [illegible] ಎಂಬವರ ಸಹಾಯಕತ್ವದಲ್ಲಿ ಅಬಿಸೀನಿಯರು ಇಟಲಿಯವರ ಮೇಲೆ ಬೀಳುವ ತವಕದಲ್ಲಿರುವರು.

ರಾಜಿ ಸಂಧಾನಗಳು [illegible]

ಚಕ್ರವರ್ತಿಯವರು ರಾಜಿ ಸಂಧಾನವನ್ನು [illegible] ಅಭಿಪ್ರಾಯ [illegible]—'ಯುದ್ಧಕ್ಕೆ ಒಂದು [illegible] ರಾಜೀ ಪ್ರಸ್ತಾಪಗಳಿಗೆ ಇಟಲಿಯವರು [illegible] ತಿರಸ್ಕರಿಸಿದ್ದಾರೆ. ಅಲ್ಲದೆ [illegible] ಮಕ್ಕಳ ಮೇಲೆ ಬಾಂಬುಗಳನ್ನು ಸುರಿದರು. ಅವರಿಂದ ರಾಜಿ ಮಾತೇ ಒಪ್ಪತಕ್ಕದ್ದಲ್ಲ.'

ಡಾಕ್ಟರ್ [illegible] ಎಬ್ರಹಾಮ್.

ದಂತ ವೈದ್ಯರು.

[illegible] ಬಳ್ಳಿ.

(ಧಾರವಾಡ [illegible])

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, [illegible] ಕೃತ್ರಿಮ ಹಲ್ಲುಗಳನ್ನು [illegible] ಪರೀಕ್ಷಿಸಿ [illegible] [52—10]

ಮಾರಾಟಕ್ಕೆ ಸಿದ್ಧ.

[illegible] 3 ಮೈಲು ದೂರದ [illegible] 1 ಎಕರೆ [illegible] 7 ಎಕರೆ [illegible]

ವಿವರಗಳನ್ನು [illegible] ತಿಳಿಯಬಹುದು.

[illegible]
159 [illegible]
[illegible]

3—1

ಕೊಡಗು

ಡಿಸೆಂಬರ್ ೨೬ನೇ ಗುರುವಾರ ೧೯೩೫

ಸಹಕಾರಿ ಸ್ಟೋರುಗಳು.

ಕಳೆದ ಸಂಚಿಕೆಯಲ್ಲಿ ಕೊಡಗಿನ ಮುಖ್ಯ ಧಾನ್ಯವಾದ ಭತ್ತವೊಂದರ ಸ್ಟೋರಿನ ಪ್ರಯೋಜನಗಳನ್ನು ಕುರಿತು ಬರೆದಿದ್ದೆವು. ಆದರೆ ಕೊಡಗಿನಲ್ಲಿ ಇನ್ನೂ ಹಲವು ವ್ಯವಸಾಯದ ಉತ್ಪತ್ತಿಗಳಿಗೆ ಸರಿಯಾದ ಬೆಲೆಯೂ, ಮಾರಾಟವೂ ದೊರೆಯದೆ ವ್ಯವಸಾಯಗಾರರು ತುಂಬಾ ನಷ್ಟಕ್ಕೊಳಗಾಗುತ್ತಿದ್ದಾರೆ. ಭತ್ತವನ್ನು ಬಿಟ್ಟ ಮೇಲೆ ಕಾಫಿಯು ಪ್ರಾಮುಖ್ಯವಾದದ್ದಾಗಿದೆ. ಈಕಾಲದಲ್ಲಿ ಇದರ ಉಪಯೋಗವು ಹಾಗೂ ಮಾರಾಟವು ಇಳಿಮುಖವಾಗುತ್ತಿರುವುದು ಕಡಿಮೆ. ಇದರ ಉಪಯೋಗವನ್ನು ಹಿಂದೂ ದೇಶದಲ್ಲಿ ಪ್ರಚಾರಗೊಳಿಸಲಿಕ್ಕಾಗಿ ಕೆಲವು ಸಮಯದ ಹಿಂದೆ ಒಂದು ಕಾಫಿ ಸೆಸ್ ಕಮಿಟಿಯು ನೇಮಿಸಲ್ಪಟ್ಟಿದೆ. ಈಗಿನ ಪರಿಸ್ಥಿತಿಯಲ್ಲಿ ಕಾಫಿಯ ಬೆಳೆಯು ಇಂಡಿಯದ ತೋಟಗಳ ಮಾಲೀಕರುಗಳನ್ನು ಅವಲಂಬಿಸಿದೆ. ಅಲ್ಲದೆ ಅದರ ಮಾರಾಟದ ಸ್ಟೋರನ್ನು ಏರ್ಪಡಿಸಲು ದೊಡ್ಡ ಧನದ ಅವಶ್ಯವೂ ಬೇಕಾಗಿದೆ. ಸದ್ಯಕ್ಕೆ ಇದರ ವಿಚಾರವನ್ನು ಬಿಟ್ಟರೂ ಯಾಲಕ್ಕಿ, ಒಳ್ಳೆ ಮೆಣಸು, ಕಿತ್ತಳೆ ಹಣ್ಣು, ಬಾಳೆ ಹಣ್ಣು, ಜೇನು ಮುಂತಾದವುಗಳ ಮಾರಾಟಕ್ಕಾಗಿ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸುವುದು ಅವಶ್ಯವಾಗಿದೆ. ಈಗ ಇವುಗಳನ್ನು ಸ್ಥಳೀಕ ವ್ಯಾಪಾರಿಗಳು ಕೊಂಡುಕೊಂಡು ಹೊರಗೆ ಕಳುಹಿಸುತ್ತಿರುವರು. ಅವರು ಇವುಗಳನ್ನು ಬೆಳೆಸುವ ವ್ಯವಸಾಯಗಾರರಿಗೆ ಹಣದ ಮುಂಗಡವನ್ನಿತ್ತುಕೊಂಡು, ಕೆಲವು ವೇಳೆ ಅಧಿಕ ಲಾಭವನ್ನು ಪಡೆಯುವರು. ಬೆಳೆಸುವವರಿಂದ ಕಮ್ಮಿ ಕ್ರಯಕ್ಕೆ ತೆಗೆದುಕೊಂಡು, ಉಪಯೋಗಿಸುವವರಿಗೆ ಹೆಚ್ಚಿನ ಬೆಲೆಯಲ್ಲಿ ಮಾರಿ ತುಂಬಾ ಲಾಭ ಸಂಪಾದಿಸುವರು. ಇದರಿಂದ ಬೆಳೆಸುವವರಿಗೂ, ಉಪಯೋಗಿಸುವವರಿಗೂ ವಿಶೇಷ ನಷ್ಟ ಉಂಟಾಗುತ್ತಿದೆ. ಇದ ಕಾರಣ ಒಬ್ಬ ಕಮ್ಮಿ ದರದ ಕಮಿಷನಿನಿಂದ ಅಂದರೆ ವ್ಯಾಪಾರದ ಖರ್ಚಿಗೆ ಬೇಕಾದಷ್ಟು ಮಾತ್ರ ತೆಗೆದುಕೊಂಡು ಇತರ ದವಸ ಧಾನ್ಯಗಳನ್ನು ಮಾರಾಟ ಮಾಡಿಕೊಡುವ ಏರ್ಪಾಡಿನ ಅವಶ್ಯಕತೆಯು ತುಂಬಾ ಇದೆ.

ಕಾಡುಗಳಿಂದ ತುಂಬಿರುವ ಈ ಪ್ರಾಂತ್ಯದಲ್ಲಿ ಹಲವು ಕಡೆಗಳಲ್ಲಿ ಜೇನು ಸ್ವಾಭಾವಿಕವಾಗಿ ದೊರೆಯುತ್ತಿದೆ. ಆದರೆ ಜೇನು ಹುಳುಗಳನ್ನು ತಂದು ಗೂಡುಗಳಲ್ಲಿ ಸಾಕಿ ಜೇನು ತಯಾರಿಸಿಕೊಳ್ಳಲು ತುಂಬಾ ಅವಕಾಶವಿದೆ. ಈ ವಿಚಾರದಲ್ಲಿ ಪೊನ್ನಂಪೇಟೆಯ ಶಾರದಾಶ್ರಮದ ಸ್ವಾಮಿ ಶಂಭವಾನಂದರವರು ಶ್ರದ್ಧೆವಹಿಸಿ, ಪರಿಶೋಧನೆಗಳನ್ನು ನಡಿಸುತ್ತಿರುವುದು ಸ್ತುತ್ಯರ್ಹವಾಗಿದೆ. ಅವರು ತಮ್ಮ ಪರಿಶೋಧನೆಯ ಫಲಿತಾಂಶಗಳನ್ನು ಗ್ರಾಮಸ್ಥರಿಗೆ ಬೋಧಿಸಿ, ಹೆಚ್ಚಾಗಿ ಜೇನು ಸಂಗ್ರಹಿಸಲು ಏರ್ಪಾಡು ಮಾಡಬಹುದು. ಆದರೆ ಇಲ್ಲಿಯ ಜೇನಿಗೆ ತಕ್ಕದಾದ ಬೆಲೆಯು ದೊರೆಯುವಂತೆ ವ್ಯವಸ್ಥೆಮಾಡದೆ ಹೋದರೆ ಗ್ರಾಮಸ್ಥರೆಲ್ಲರೂ ಈ ಕೆಲಸಕ್ಕೆ ಕೈಹಾಕಲಾರರು. ಆದ ಕಾರಣ ಸ್ಥಳೀಯರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಒಂದು ಸುಲಭದ ದಾರಿಯಾದ ಜೇನು ಸಂಗ್ರಹಕ್ಕೆ ಉತ್ತೇಜನಕೊಡುವುದಕ್ಕಾಗಿ ಅದರ ಮಾರಾಟದ ಸಂಸ್ಥೆಯನ್ನು ಆಗುವಷ್ಟು ಬೇಗನೆ ಸ್ಥಾಪಿಸುವುದು ಯುಕ್ತವಾಗಿದೆ.

ಜನರು ಬೆಳೆಸುವ ದವಸ ಧಾನ್ಯಗಳ ಮಾರಾಟಕ್ಕೆ ಸಹಕಾರ ಸಂಸ್ಥೆಗಳನ್ನು ಏರ್ಪಡಿಸುವಂತೆಯೇ ಅವರ ಉಪಯೋಗಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡುವ ಸ್ಟೋರುಗಳನ್ನು ಸ್ಥಾಪಿಸುವುದು ಅತ್ಯವಶ್ಯವಾಗಿದೆ. ಈಗ ಕೊಡಗಿನಲ್ಲಿ ಇಂಥಾ ಐದು ಸ್ಟೋರುಗಳು ಮಾತ್ರ ಇವೆ. ಇವುಗಳಲ್ಲಿ ಒಂದೆರಡು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಇದಕ್ಕೆ ಸುತ್ತಮುತ್ತಲಿನ ಜನರು ಸಾಕಷ್ಟು ಉತ್ತೇಜನ ಕೊಡದಿರುವುದು ಒಂದು ಮುಖ್ಯ ಕಾರಣವಾಗಿದೆ. ಸ್ಟೋರುಗಳನ್ನು ನಡೆಸುವವರ ಕಾರ್ಯದಕ್ಷತೆಯೂ ಅವುಗಳ ಜಯಕ್ಕೆ ಸಹಾಯವಾಗುವುದರಲ್ಲಿ ಸಂಶಯವಿಲ್ಲ.

ಇಂಥಾ ಸ್ಟೋರುಗಳಿಗೆ ಸಹಕಾರಿಗಳು ಯಾಕೆ ಉತ್ತೇಜನಕೊಡಬೇಕೆಂಬುದನ್ನು ಸ್ವಲ್ಪ ವಿಚಾರಿಸುವ. ಮೇಲೆ ಹೇಳಿದಂತೆ ಸಹಕಾರ ಸಂಸ್ಥೆಗಳು ಲಾಭದ ದೃಷ್ಟಿಯಿಂದ ಕೆಲಸ ಮಾಡುವುದಿಲ್ಲ. ಅಂದರೆ ಅವುಗಳಿಂದ ಜನರಿಗೆ ಉಂಟಾಗುವ ಪ್ರಯೋಜನಗಳಿಂದ ಪ್ರಕ್ರಿಯೆ ನಡೆಯುತ್ತದೆ. ಸ್ಟೋರುಗಳಿಂದ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೆ ಸರಿಯಾದ ಅಳತೆಯು ದೊರೆಯುತ್ತದೆ. ಕೆಲವು ವ್ಯಾಪಾರಿಗಳು ಮಾರ್ಕೆಟ್ಟಿನ ಸ್ಥಿತಿಗತಿಯ ದಿನಸಿ ಸಾಮಾನುಗಳ ಕ್ರಯವನ್ನು ಸ್ವಲ್ಪ ಇಳಿಸಿ, ಜನರನ್ನು ತಮ್ಮ ಕಡೆಗೆ ಸೆಳೆದು, ಮರುವಾಗಿ ಗಿರಾಕಿಗಳು ಕೈಯಲ್ಲಿ ಸಿಕ್ಕಿದ ಮೇಲೆ ಹೆಚ್ಚು ಲಾಭದಿಂದ ಅಳೆದು ಅವರಿಗೆ ಕಮ್ಮಿ ಅಳತೆ ಕೊಟ್ಟು ತಮ್ಮ ಲಾಭವನ್ನು ಗಳಿಸಿಕೊಳ್ಳುತ್ತಾರೆ. ಅವರು ಕೆಲವು ಸಮಯ ಕಮ್ಮಿ ತೂಕ ಮತ್ತು ಕಮ್ಮಿ ಅಳತೆಯ ಪಾತ್ರಗಳನ್ನು ಉಪಯೋಗಿಸುವುದೂ ಉಂಟು. ಸಾಧುಗಳಾದ ಗ್ರಾಮಸ್ಥರಿಗೆ ಇದನ್ನು ಕಂಡು ಹಿಡಿಯಲು ಸಾಧ್ಯವಾಗುವುದಿಲ್ಲ. ಹೇಗೂ ತಾವು ಕೊಡುವ ಬೆಲೆಗಿಂತ ಕಮ್ಮಿ ಸಾಮಾನುಗಳು ಅವರಿಗೆ ದೊರೆಯುತ್ತವೆ. ಆದರೆ ಸ್ಟೋರುಗಳಲ್ಲಿ ಇಂಥಾ ಕುಂದುಕೊರತೆಗಳಿಗೆ ಎಡೆ ಇಲ್ಲ. ಕೊಳ್ಳುವವರಿಗೆ ಇಷ್ಟಬಂದರೆ ತೂಗಲಿ, ಮತ್ತೊಮ್ಮೆ ಅಳೆಯಲಿ, ಸ್ಟೋರುಗಳಲ್ಲಿ ಅಳತೆಯ ಮೋಸ ಉಂಟಾಗುವುದಿಲ್ಲ.

ಅತ್ಯುತ್ತಮ ಸಾಮಾನುಗಳನ್ನು ಮಾರುವುದು ಸ್ಟೋರುಗಳ ಎರಡನೇ ಗುಣ. ಪೇಟೆಗಳಲ್ಲಿ ಕೆಲವು ಇತರ ವ್ಯಾಪಾರಿಗಳು ದಾಸ್ತಾನು ಮಾಡಿ, ಚೀಲದಲ್ಲಿ ಮೇಲ್ಗಡೆ ಇಟ್ಟಿರುವ ಉತ್ತಮವಾದ ಸಾಮಾನುಗಳನ್ನು ತೋರಿಸಿ, ಅಳೆದು ಕೊಡುವಾಗ ಕೆಳಗಿನ ಹಾಳು ಸಾಮಾನುಗಳನ್ನು ಕೊಡುವುದುಂಟು. ಇಲ್ಲವಾದರೆ ಕಮ್ಮಿ ಕ್ರಯದ ಹಾಳು ಸಾಮಾನನ್ನು ಸ್ವಲ್ಪ ಒಳ್ಳೆ ಸಾಮಾನಿನೊಂದಿಗೆ ಬೆರಸಿ ಒಳ್ಳೆ ಸಾಮಾನಿನ ಕ್ರಯಕ್ಕೆ ಮಾರುವುದೂ ಉಂಟು. ಸಾಮಾನುಗಳ ಗುಣಗಳನ್ನು ಅರಿತುಕೊಳ್ಳಲಾರದ ಜನರೂ, ಮಕ್ಕಳೂ ಸುಲಭವಾಗಿ ನಷ್ಟ ಹೊಂದುತ್ತಾರೆ. ಆದರೆ ಸ್ಟೋರುಗಳಲ್ಲಿ ಇಂಥಾ ಮೋಸಗಳು ಸಂಭವಿಸಲಾರದು.

ಮೂರನೇದಾಗಿ ಸ್ಟೋರುಗಳಲ್ಲಿ ದೊರೆಯುವ ಲಾಭವು ಅವುಗಳ ಮೆಂಬರುಗಳಿಗೆ ಮತ್ತು ಅವುಗಳಿಂದ ಸಾಮಾನುಗಳನ್ನು ಕೊಂಡುಕೊಳ್ಳುವವರಿಗೇ ದೊರೆಯುತ್ತದೆ. ವರ್ಷದಲ್ಲಿ ದೊರಕಿದ ಲಾಭವು ಶೇರುದಾರರಿಗೆ 'ಡಿವಿಡೆಂಡಿನ' ರೂಪದಲ್ಲಿಯೂ, ಗಿರಾಕಿಗಳಿಗೆ 'ಬೋನಸ್' ನ ರೂಪದಲ್ಲಿ ಹಂಚಲ್ಪಡುವುದು. ಆದುದರಿಂದ ತಾವು ಲಾಭವಾಗಿ ಕೊಡುವ ಹಣದ ಒಂದು ಭಾಗವು ತಮಗೇ ವಾಪಸು ಬರುತ್ತದೆ.

ಸ್ಟೋರುಗಳನ್ನು ನಡಿಸುವವರು ಮೇಲಿನ ಮೂರು ತತ್ವಗಳನ್ನು ಸಂಪೂರ್ಣವಾಗಿ ನಡಿಸಿ, ಜನರ ವಿಶ್ವಾಸವನ್ನು ಸಂಪಾದಿಸಬೇಕಾಗಿದೆ. ಸ್ಟೋರಿನ ಕೆಲಸ ಕಾರ್ಯಗಳನ್ನು ಮುಖ್ಯವಾಗಿ ಪ್ರಾರಂಭದಲ್ಲಿ ಕಮ್ಮಿ ಖರ್ಚಿನಿಂದಲೂ, ಕಾರ್ಯದಕ್ಷತೆಯಿಂದಲೂ ನಡಿಸಿ ನಷ್ಟಕ್ಕೆ ಅವಕಾಶ ಕೊಡಬಾರದು. ಪ್ರಮಾಣಿಕತನವನ್ನು ಎಡೆಬಿಡದೆ ಪಾಲಿಸಬೇಕು. ಸ್ಟೋರಿನವರು ಮಾರ್ಕೆಟ್ಟಿನ ದರಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರಿ ದುಸ್ಸಾಹಸವೂ ತರವಾದ ಸ್ಪರ್ಧೆಗೆ ಎಡೆಕೊಡುವುದು ಉಚಿತವಲ್ಲ. ಅದರ ಬದಲು ಮಾರ್ಕೆಟ್ಟಿನ ದರದಲ್ಲಿಯೇ ಮಾರಿ ವರ್ಷಾಂತ್ಯದಲ್ಲಿ ಹೆಚ್ಚಿಗೆ ಬಂದ ಲಾಭವನ್ನು ಗಿರಾಕಿಗಳಿಗೆ 'ಬೋನಸ್' ಆಗಿ ವಾಪಸು ಕೊಡುವುದು ಉತ್ತಮ.

ಜನರು ಸ್ಟೋರುಗಳ ಮೇಲಿನ ಪ್ರಯೋಜನಗಳನ್ನು ಚೆನ್ನಾಗಿ ಅರಿತುಕೊಂಡು, ಅವುಗಳಿಗೆ ಸಂಪೂರ್ಣ ಉತ್ತೇಜನ ಕೊಡಬೇಕಾಗಿದೆ. ಪ್ರತಿಯೊಬ್ಬನಿಗೂ ಸ್ಟೋರು ತನ್ನದೆಂಬ ಅಭಿಮಾನವಿರಬೇಕು. ಒಂದು ವೇಳೆ ಪ್ರಾರಂಭದಲ್ಲಿ ತನಗೆ ಸ್ವಲ್ಪ ನಷ್ಟ ಸಂಭವಿಸುವಂತಿದ್ದರೂ ತನ್ನ ಸ್ಟೋರನ್ನು ಕೈ ಬಿಡಬಾರದು. ತನ್ನ ಸ್ಟೋರಿನ ಮೇಲಿರುವ ಭಕ್ತಿ ಎಂದಿಗೂ ಕಡಿಮೆಯಾಗಬಾರದು. ಸಹಕಾರದ ಈ ತತ್ವಗಳನ್ನು ಅನುಸರಿಸಿ ನಡೆದರೇನೇ ಬೆಳೆಸುವವನಿಗೂ ಉಪಯೋಗಿಸುವವನಿಗೂ ಮಧ್ಯೆ ಇರುವ ಮೂರನೇ ಮನುಷ್ಯನಿಗೆ ಹೋಗುವ ವಿಪರೀತ ಲಾಭವನ್ನು ನಿಲ್ಲಿಸಲು ಸಾಧ್ಯವಾಗುವುದು.

ಕಾಂಗ್ರೆಸ್ ಸುವರ್ಣ ಮಹೋತ್ಸವದಲ್ಲಿ

ಕೊಡಗಿನಲ್ಲಿ ಆಚರಿಸಲ್ಪಡುವ ಕಾರ್ಯಕ್ರಮಗಳು.

ತಾರೀಕು 28–12–1935 ನೇ ಶನಿವಾರ.

ಮಡಿಕೇರಿಯಲ್ಲಿ

ಪ್ರಾತಃಕಾಲ:—ಪ್ರಭಾತಭೇರಿ.
ರಾಷ್ಟ್ರಧ್ವಜಾರೋಹಣ ಮತ್ತು ಧ್ವಜವಂದನೆ.
ಅಪರಾಹ್ನ:— ಸುವರ್ಣ ಮಹೋತ್ಸವದ ಬಗ್ಗೆ ಹಸ್ತಪತ್ರಗಳ ಮಾರಾಟ
ಖಾದಿ ಮಾರಾಟ.

ವೀರಾಜಪೇಟೆಯಲ್ಲಿ

ಪ್ರಾತಃಕಾಲ:—ಪ್ರಭಾತಭೇರಿ.
ರಾಷ್ಟ್ರಧ್ವಜಾರೋಹಣ ಮತ್ತು ಧ್ವಜ ವಂದನೆ
ಅಪರಾಹ್ನ:— ಸುವರ್ಣ ಮಹೋತ್ಸವದ ಬಗ್ಗೆ ಹಸ್ತಪತ್ರಗಳ ಮಾರಾಟ
ಖಾದಿ ಮಾರಾಟ.

ಗೋಣಿಕೊಪ್ಪಲಲ್ಲಿ

ಪ್ರಾತಃಕಾಲ:—ಪ್ರಭಾತಭೇರಿ.
ರಾಷ್ಟ್ರಧ್ವಜಾರೋಹಣ ಮತ್ತು ಧ್ವಜ ವಂದನೆ.
ಅಪರಾಹ್ನ:— ಸುವರ್ಣ ಮಹೋತ್ಸವದ ಬಗ್ಗೆ ಹಸ್ತಪತ್ರಗಳ ಮಾರಾಟ
ಆಟೋಟಗಳು (ಮಕ್ಕಳಿಗೂ ಮತ್ತು ಇತರರಿಗೂ)
ಸಾಯಂಕಾಲ:— ಭಜನೆ. (ಶ್ರೀ ರಾಮ ಮಂದಿರದಲ್ಲಿ)
ಸಂಗೀತ ಸ್ಪರ್ಧೆ. („)
ವಿವಿಧ ಅಭಿನಯಗಳು („)

ಪೊನ್ನಂಪೇಟೆಯಲ್ಲಿ

ಪ್ರಾತಃಕಾಲ:—ಪ್ರಭಾತಭೇರಿ.
ಧ್ವಜಾರೋಹಣ ಮತ್ತು ಧ್ವಜ ವಂದನೆ.
ಸುವರ್ಣ ಮಹೋತ್ಸವದ ಬಗ್ಗೆ ಹಸ್ತಪತ್ರಗಳ ಮಾರಾಟ.

ಕುದಿಕೇರಿಯಲ್ಲಿ

ಪ್ರಾತಃಕಾಲ:—ಪ್ರಭಾತಭೇರಿ.
ಧ್ವಜಾರೋಹಣ ಮತ್ತು ಧ್ವಜ ವಂದನೆ.
ಅಪರಾಹ್ನ:— ಸುವರ್ಣ, ಮಹೋತ್ಸವದ ಬಗ್ಗೆ ಹಸ್ತಪತ್ರಗಳ ಮಾರಾಟ.

ತಾ. 29ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿಯೂ, ತಾ. 30ನೇ ಸೋಮವಾರ ಕುದಿಕೇರಿಯಲ್ಲಿಯೂ, ತಾ. 31ನೇ ಮಂಗಳವಾರ ಅಮ್ಮತ್ತಿಯಲ್ಲಿಯೂ 1936ನೇ ಜನವರಿ ತಾ. 1ನೇ ಬುಧವಾರ ವೀರಾಜಪೇಟೆಯಲ್ಲಿಯೂ 12–30 ಗಂಟೆಗೆ ಮೊದಲಾಗಿ, ಸಾರ್ವಜನಿಕ ಸಭೆ, ಕಾಂಗ್ರೆಸು ಸಾಹಿತ್ಯ ಮಾರಾಟ ಮುಂತಾದ ಕಾರ್ಯಕ್ರಮಗಳು ಆಚರಿಸಲ್ಪಡುವವು.

ದೇಶಾಭಿಮಾನಿಗಳೆಲ್ಲರೂ ಈ ಅದ್ವಿತೀಯ ಸಮಾರಂಭದಲ್ಲಿ ಭಾಗವಹಿಸಿ ಪವಿತ್ರ ಮಂಗಲ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಬೇಕಾಗಿ ಪ್ರಾರ್ಥನೆ.

ಚೆಪ್ಪುಡೀರ ಪೂಣಚ್ಚ,
(ಕಾರ್ಯದರ್ಶಿ)

ಸೂಚನೆ.—ಸುವರ್ಣ ಮಹೋತ್ಸವದ ಸಲುವಾಗಿ ಅಚ್ಚು ಹಾಕಿಸಿದ ಈ ಕೆಳಗಿನ ಪುಸ್ತಕಗಳು ಕಾಂಗ್ರೆಸ್ಸಿನ ಕಚೇರಿಯಲ್ಲಿ ಮಾರಾಟಕ್ಕೆ ಸಿಗುವವು.

ನಮ್ಮ ಕಾಂಗ್ರೆಸ್—	(ರಂಗರಾವ ದಿವಾಕರರಿಂದ)	ಒಂದಕ್ಕೆ	0–0–3
ಭಾರತೀಯ ರಾಷ್ಟ್ರ—	(ಡಾ. [illegible]ರಿಂದ)	„	0–2–0.
ಕಾಂಗ್ರೆಸಿನ ಕಥೆ—	(ಶ್ರೀ [illegible]ರಿಂದ.)	„	1–0–0.
ಕಾಂಗ್ರೆಸಿನ ಇತಿಹಾಸ—	(ಡಾ. ಪಟ್ಟಾಭಿ ಸೀತಾರಾಮಯ್ಯನವರಿಂದ)	„	2–8–0.

ಕಾಂಗ್ರೆಸ್ ಸುವರ್ಣ ಮಹೋತ್ಸವ.

ಪ್ರಾಂತಿಕ ಕಾಂಗ್ರೆಸ್ ಪಬ್ಲಿಸಿಟಿ ಮಂಡಳ.

ಕಾಂಗ್ರೆಸ್ ಕಾರ್ಯಕರ್ತರಲ್ಲಿ ಬಿನ್ನಹ.

ವೀರರೇ,

ನಾವೆಲ್ಲರೂ ಒಂದು ವಿಶಿಷ್ಟವಾದ ಕಾಂಗ್ರೆಸ್ ಕಾರ್ಯಕ್ರಮಕ್ಕಾಗಿ ಕೂಡಿಹ ಒಟ್ಟುಗೂಡುವ ಸುಪ್ರಸಂಗವು ಒದಗಿದಕ್ಕಾಗಿ ಸಂತೋಷವಾಗುತ್ತದೆ. ಈ ಪ್ರಸಂಗದಲ್ಲಿ ಕಾಂಗ್ರೆಸಿನ ಕೆಲಸವಾಗಿ ತತ್ವವನ್ನು ಘೋಷಿಸಬೇಕಾಗಿಲ್ಲ. ಯಾವ ಕಾಂಗ್ರೆಸಿನ ಕೆಲಸವಾಗಿ ನಾವು ಆತ್ಮಾರ್ಪಣ ಬುದ್ಧಿಯಿಂದ ಇಷ್ಟು ದಿವಸಗಳ ವರೆಗೆ ಹೆಣಗಾಡಿದೆವೋ ಆ ಕಾಂಗ್ರೆಸಿನ ಸುವರ್ಣ ಮಹೋತ್ಸವವನ್ನು ಉತ್ಸಾಹದಿಂದ ನೆರವೇರಿಸಬೇಕಾಗಿದೆಯಷ್ಟೇ? ಕಳೆದ ಹದಿನೈದು ವರ್ಷಗಳಲ್ಲಿ ಯಾವ ರೀತಿ ಅವಿಚ್ಛಿನ್ನವಾಗಿ ದುಡಿದು ಕಾಂಗ್ರೆಸ್ಸಿನ ಗೌರವವನ್ನು ಭಾರತೀಯರು ಕಾಯುತ್ತಾ ಬಂದಿರುವರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. 1920 ರಲ್ಲಿ ಅಸಹಕಾರ ಚಳವಳವು ಸಾರಲ್ಪಟ್ಟೊಡನೆ ನಮ್ಮ ಕರ್ನಾಟಕದಲ್ಲಿ 50 60 ಜನರು ಹೋರಾಟದಲ್ಲಿ ಧುಮುಕಿದರು. ಮುಂದೆ ನಾಗಪುರ ಸತ್ಯಾಗ್ರಹ ಕಾಲಕ್ಕೆ ಕರ್ನಾಟಕದಿಂದ ಸರಾಸರಿ 60 ಜನರು ಅದರಲ್ಲಿ ಭಾಗ ವಹಿಸಲು ಹೋದರು. ಬರಬರುತ್ತಾ ಕಾಂಗ್ರೆಸಿನ ಕರೆಯು ದಿನದಿನಕ್ಕೆ ಹೋಗಹತ್ತಿದಂತೆ ಕನ್ನಡಿಗರ ಕರ್ತವ್ಯ, ಶಕ್ತಿ, ಉತ್ಸಾಹ, ಆತ್ಮಾರ್ಪಣ ಬುದ್ಧಿಗಳು ಬೆಳೆಯಹತ್ತಿದವು. 1930ರಲ್ಲಿನ ಉಪ್ಪಿನ ಸತ್ಯಾಗ್ರಹದಲ್ಲಿ, ಅರಣ್ಯ ಸತ್ಯಾಗ್ರಹದಲ್ಲಿ ಅಸಂಖ್ಯ ಜನರು ಸೆರೆಮನೆಯನ್ನು ಸೇರಿದರು ಮತ್ತು ಸಾವಿರಾರು ಜನರು ಈಚಲು ಗಿಡಗಳನ್ನು ಕಡೆದರು. ಅದರಲ್ಲಿಯೂ ಅಧಿಕಾರದ ಸಂಗತಿಯೆಂದರೆ, ಪುರುಷರಷ್ಟೇ ತಮ್ಮ ಪೌರುಷವನ್ನು ತೋರಿಸಿದ ಸ್ತ್ರೀಯರು ಭಾಗ ವಹಿಸಿ ತಮ್ಮ ಅಣ್ಣ ತಮ್ಮಂದಿರ ಜೊತೆ ಸತ್ಯಾಗ್ರಹ ಸಮರದಲ್ಲಿ ಸಹಭಾಗಿಗಳಾಗಿ ಸೆರೆಮನೆಯನ್ನು ಸೇರಿದರು! ದುಃಖಕರವಾದ ಗೃಹಭಂಗವನ್ನು ಸಹಿಸಿದರು! ಮನೆಗಳು ಮನೆಗಳನ್ನು ಕಟ್ಟಿಕೊಂಡು ಕಷ್ಟಪರಂಪರೆಗಳನ್ನನುಭೋಗಿಸಿದರು! ಮುಂದೆ 1932ರ ಕಾಯ್ದೆಭಂಗದ ಕಾಲಗಳಲ್ಲಿ ಜರುಗಿದ ಸಂಗತಿಯು ಎಲ್ಲರ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಇದೆ. ಆ ಕಾಲದಲ್ಲಿಯೂ ಅಗಣಿತ ಪುರುಷರೂ, ಸ್ತ್ರೀಯರೂ ಕಾರಾಗೃಹವನ್ನು ಸೇರಿದರು. ಈ ರೀತಿ ಕಾಂಗ್ರೆಸಿನ ಸಲುವಾಗಿ ದುಡಿದವರಿಗೆ ಕಾಂಗ್ರೆಸಿನ ಮಹಾತ್ಮೆಯನ್ನು ವಿವರಿಸಿ ಹೇಳುವ ಕಾರಣವಿಲ್ಲ. ಆದರೂ ತಮ್ಮೆಲ್ಲರಲ್ಲಿ ಒಂದು ಬಿನ್ನಹವೇನೆಂದರೆ—ಕಷ್ಟ ಕಾಲದಲ್ಲಿ ನಾವು ತಮ್ಮ ಕರ್ತವ್ಯವನ್ನು ನಿರ್ವಹಿಸಿದಂತೆ ಸುವರ್ಣಮಹೋತ್ಸವದಂತಹ ಈ ಆನಂದ ಕಾಲದಲ್ಲಿಯೂ ಮುಂದೆ ಒಂದು ನಿಶ್ಚಿತ ಕರ್ತವ್ಯವನ್ನು ಪೂರೈಸಬೇಕಾಗುವದೇ ಆಗಿದೆ.

ನೀವು ಇರುವ ಸ್ಥಳಗಳಲ್ಲಿ ಉತ್ಸವದ ಕಾರ್ಯಕ್ರಮವು ಈಗಾಗಲೇ ನಡೆದಿದ್ದರೆ ನೀವು ಅದರಲ್ಲಿ ಭಾಗ ವಹಿಸಿ ಅದನ್ನು ಯಶಸ್ವಿಯನ್ನಾಗಿ ಮಾಡಬೇಕು. ನೀವು ಹಳ್ಳಿಹಳ್ಳಿಗಳಲ್ಲಿದ್ದರೆ ಅಲ್ಲಿ ನೀವೇ ಸುವರ್ಣ ಮಹೋತ್ಸವ ಮಂಡಳಗಳನ್ನು ಮಾಡಿಕೊಂಡು ಹಳ್ಳಿಗರೆಲ್ಲರಿಗೂ ಕಾಂಗ್ರೆಸಿನ ಇತಿಹಾಸವನ್ನು ಅದು ಇಲ್ಲಿಯ ವರೆಗೆ ಮಾಡಿದ ಹಾಗೂ ಮುಂದೆ ಮಾಡಲಿರುವ ಕಾರ್ಯವನ್ನು ತಿಳಿಸಿ ಹೇಳಬೇಕು. ಡಿಸೆಂಬರ್ 28ನೇ ತಾರೀಖಿನ ದಿನದ ಸುವರ್ಣ ಮಹೋತ್ಸವವನ್ನು ಜರುಗಿಸಬೇಕು. ಆ ದಿನ ಮಾಡಬೇಕಾದ ಕಾರ್ಯಕ್ರಮವು ಈಗಾಗಲೇ ಪ್ರಕಟವಾಗಿದೆ. ಹೆಚ್ಚಿಗೆ ಸಂಗತಿ ಅಥವಾ ಸಲಹೆಗಳೇನಾದರೂ ಬೇಕಾದಲ್ಲಿ "ಕರ್ನಾಟಕ ಪ್ರಾಂತಿಕ ಪಬ್ಲಿಸಿಟಿ ಮಂಡಳ, ಹುಬ್ಬಳ್ಳಿ" ಇವರಿಗೆ ಬರೆದು ಅವಶ್ಯವಾಗಿ ಕೇಳಬೇಕು.

ಕರ್ನಾಟಕ ಮಹಿಳೆಯರಲ್ಲಿ ವಿನಂತಿ.

ಇದೇ ಡಿಸೆಂಬರ 28 ನೇ ತಾರೀಖಿನ ದಿವಸ ಕಾಂಗ್ರೆಸ್ಸು ಸುವರ್ಣಮಹೋತ್ಸವವನ್ನಾಚರಿಸಬೇಕೆಂದು ಕಾಂಗ್ರೆಸ್ಸು ನಿರ್ಧರಿಸಿದ ಮೇರೆಗೆ ಆ ದಿವಸ ನಮ್ಮ ರಾಷ್ಟ್ರದಲ್ಲಿ ಎಲ್ಲ ಕಡೆಗೂ ಅದೊಂದು ದೊಡ್ಡ ಹಬ್ಬದಂತೆ ಆಚರಿಸಲ್ಪಡುವದಿದೆಯಷ್ಟೇ! ಕಾಂಗ್ರೆಸ್ಸಿನ ಮಹತಿ ಏನೆಂಬುದನ್ನು ನಮ್ಮ ಅಕ್ಕ ತಂಗಿಯರಿಗೆ ಬೇರೆ ಹೇಳುವ ಕಾರಣವಿಲ್ಲ. ರಾಷ್ಟ್ರೀಯ ಮಹಾಸಭೆಯು ನಡೆಸಿದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ಭಗಿನಿಯರು ಭಾಗವಹಿಸಿ ಬಂಧುಗಳಿಗೆ ನೆರವಾಗಿ ತಮ್ಮ ತಮ್ಮ ಕರ್ತವ್ಯವನ್ನು ಮಾಡಿದ್ದು ಸರ್ವಶ್ರುತವಾಗಿದೆ.

ಈಗ ನಮ್ಮ ಭಗಿನಿಯರಿಗೆ ಒಂದು ಹಿರಿ ಹಬ್ಬವನ್ನಾಚರಿಸುವ ಸುಸಂಧಿಯು ಪ್ರಾಪ್ತವಾಗಿದೆ. ಸತ್ಯಾಗ್ರಹದ ಯುದ್ಧದ ಸಮಯದಲ್ಲಿ ನಮ್ಮ ಭಗಿನಿಯರು ಹೇಗೆ ಮುಂದಾಗಿ ಬಂದರೋ ಹಾಗೆಯೇ ಈ ಉತ್ಸವಾಚರಣೆಯಲ್ಲಿಯೂ ಮುಂದಾಗಿ ಬರುವರೆಂದು ನನ್ನ ಭರವಸೆ.

ಕಾಂಗ್ರೆಸ್ಸು ಸುವರ್ಣಮಹೋತ್ಸವವನ್ನು ವೈಭವದಿಂದ ಆಚರಿಸಬೇಕಾದರೆ ನಮಗೆ ನಮ್ಮ ಭಗಿನಿಯರ ಸಹಾಯವು ಅತ್ಯವಶ್ಯವು. ಆದುದರಿಂದ ನಮ್ಮ ಭಗಿನಿಯರು ಈ ಹಬ್ಬದಲ್ಲಿ ಹೇಗೆ ಭಾಗವಹಿಸಬೇಕೆಂಬ ವಿಷಯದಲ್ಲಿ ನಾನು ಕೆಳಗಿನ ಸೂಚನೆಗಳನ್ನು ಮಾಡುತ್ತಿರುವೆನು.

1 ಕಾಂಗ್ರೆಸ್ಸು ಸುವರ್ಣಮಹೋತ್ಸವವನ್ನು ಇದೇ ಡಿಸೆಂಬರ 28 ನೇ ತಾರೀಖಿನ ದಿವಸ ಒಂದು ರಾಷ್ಟ್ರೀಯ ಹಬ್ಬದಂತೆ ಆಚರಿಸಬೇಕು.

2 ಮನೆಯನ್ನು ಎಲ್ಲ ಕಡೆಗೂ ಸ್ವಚ್ಛಮಾಡಿ, ಸಾರಿಸಿ, ತಳಿರುತೋರಣಗಳಿಂದಲಂಕರಿಸಬೇಕಲ್ಲದೆ ಮನೆಯ ಮುಂದೆ ಸಾರಿಸಿ ರಂಗವಲ್ಲಿ ಹಾಕಬೇಕು.

3. ಆ ದಿನ ನಡೆಯುವ ಪ್ರಭಾತಫೇರಿ, ಧ್ವಜವಂದನ ಮೊದಲಾದ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು.

4 ಚಿಕ್ಕ ಮಕ್ಕಳಿಗೆ ಎರೆದು ಹೊಸ ಖಾದಿಯ ಹೊಸ ಉಡಿಗೆ ತೊಡಿಗೆಗಳನ್ನು ತೊಡಿಸಿ ಅವರಲ್ಲಿ ರಾಷ್ಟ್ರೀಯ ಸ್ಫೂರ್ತಿ ಕಲ್ಪನೆಯನ್ನುಂಟುಮಾಡಬೇಕು.

5 ಮನೆಯ ಮೇಲೆ ರಾಷ್ಟ್ರಧ್ವಜವನ್ನು ಏರಿಸಬೇಕು

6 ಮುಂಜಾನೆ ಸಂಜೆಗೆ ಮನೆಯ ಮುಂದೆ ಪ್ರಣತಿಗಳನ್ನೂ ನಾನಾ ದೀಪಿಗೆಗಳನ್ನೂ ಹಚ್ಚಿ ದೀಪೋತ್ಸವ ಮಾಡಬೇಕು

7 ಅಂದು ಬಡ ಬಗ್ಗರಿಗೆ ದಾನಮಾಡಬೇಕು. ಅನ್ನದಾನವನ್ನು ವ್ಯಕ್ತಿಶಃ ಮಾಡುವದಕ್ಕಿಂತ ಕೆಲವರು ತಮ್ಮ ತಮ್ಮ ಆಹಾರ ಪದಾರ್ಥಗಳನ್ನು ಒಂದೆಡೆಗೆ ಕಲೆಹಾಕಿ ಸಂಘಟಿತವಾಗಿ ಭಗಿನಿಮಂಡಳಗಳ ಮೂಲಕವಾಗಿ ಹಂಚುವದು ಯೋಗ್ಯವು.

ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸ್ತ್ರೀವರ್ಗವು ಒಂದು ಪ್ರಮುಖ ಅಂಗವಾಗಿದೆ. ರಾಷ್ಟ್ರೋದ್ಧಾರಕ್ಕಾಗಿ ಟೊಂಕಕಟ್ಟಿರುವ ಕಾಂಗ್ರೆಸ್ಸು ಸುವರ್ಣಮಹೋತ್ಸವದಲ್ಲಿ ಸ್ತ್ರೀಯರು ಭಾಗವಹಿಸಲೇಬೇಕಲ್ಲವೆ?

ಎಂತಹ ಮಾನವೋ!

ಲೇಖಕರು.—ಪಂಡಿತ ತಾರಾನಾಥರು

ಕೆಲವು ವಿಷಯಗಳನ್ನು ಯೋಚಿಸದೆ ಬಿಡುವದರಿಂದ ಅವುಗಳಿಗೆ ಒಂದು ರೀತಿಯಾದ ಮಾನ ಕೊಟ್ಟಂತಾಗುತ್ತದೆ. ಹಾಗಾಗುವದಿಲ್ಲವಾದರೆ ಅವುಗಳ ಮಾನವನ್ನು ಕಳೆದಂತಾದರೂ ಆಗುತ್ತದೆ. ಹೀಗೆಂದು ಅನೇಕವಿಚಾರಶೀಲರ ಮತ. ಕೆಲವು ವಿಷಯಗಳು ಗುಹ್ಯವಾಗಿಯೇ ಇದ್ದುಕೊಂಡು ಗೌರವವನ್ನು ಪಡೆಯುತ್ತವೆ. ಅವುಗಳನ್ನು ಮಾಡಬೇಕು ಎಂದು ಮಾಡುವದಾಗಲೀ ಏತಕ್ಕೆ ತೋರಿಸಬೇಕು ಎಂದು ತೋರಿಸುವದಾಗಲೀ ಅವುಗಳಿಗೆ ಮಾನಕೊಟ್ಟಂತಾಗುವದಿಲ್ಲ. 'ಶಾಸ್ತ್ರಕ್ಕಾಗಿ ಮಾಡುವದು' ಹಿಂದೂ ಜನರಲ್ಲಿ ಸಾಮಾನ್ಯವಾದ ಒಂದು ಮಾತು. ಅದರ ಅರ್ಥವೇನು? ಹಾಗೆಂದರೆ ಶಾಸ್ತ್ರೋಕ್ತ ಸರಿಯಾಗಿ ಮಾಡುವದು ಎಂದಲ್ಲ. 'ಏನೋ ಮಾಡಬೇಕು' ಎಂದು ಬಿಟ್ಟು ಸಾಗಿಸುವದು ಎಂದರ್ಥ. 'ಅವನಿಗೆ ನೆಗಡಿ, ಆದರೂ ಸ್ನಾನ ಮಾಡದೇ ತೀರದು. ಏನೋ ಶಾಸ್ತ್ರಕ್ಕಾಗಿ ಸ್ವಲ್ಪ ಸ್ನಾನ ಮಾಡಿಯೇ ಬಿಟ್ಟ'. 'ಅವನಿಗೆ ಹೊಟ್ಟೆ ಸರಿಯಾಗಿಲ್ಲ. ಶಾಸ್ತ್ರಕ್ಕಾಗಿ ಹೀಗೇ ಸ್ವಲ್ಪ ತುಪ್ಪ ಹಾಕಿದರು.' 'ಕೂತುಕೊಳ್ಳಲಿಕ್ಕೆ ಸಮಯವಿಲ್ಲ. ಹೀಗೆಯೇ ಶಾಸ್ತ್ರಕ್ಕಾಗಿ ಸ್ವಲ್ಪ ಸಂಧ್ಯಾ ವಂದನೆ ಮಾಡಿಬಿಡುತ್ತೇನೆ' ಮುಂತಾದ ಮಾತುಗಳಲ್ಲಿ 'ಶಾಸ್ತ್ರಕ್ಕಾಗಿ' ಎಂಬ ಪದದ ಅರ್ಥವು ವಿಚಿತ್ರವಾಗಿದೆ. ಶಬ್ದವು ಎಷ್ಟು ದೊಡ್ಡದೋ ಅಷ್ಟೇ ಅದರ ಅರ್ಥ ಮಹತ್ತು. ಅದರ ಸ್ಥಾನವು ಅಲ್ಪವಾಗಿದೆ. ಶಾಸ್ತ್ರಕ್ಕಾಗಿ ಎಂದರೆ ಪೂರ್ತಿಯಾಗಿ, ಮನಃಪೂರ್ವಕವಾಗಿ ಸಹಾಸ್ಯವಾಗಿ ಎಂದಲ್ಲ. ಬಿಟ್ಟಿಗಾಗಿ ಏನೋ ಮಾಡಿಬಿಟ್ಟೆ ಎಂದು ದುರ್ಬಲ ಮನಸ್ಸಿಗೆ ಶಾಂತಿಯನ್ನು ಕೊಡುವದಕ್ಕಾಗಿ ಅಂದರೆ ಅತೃಪ್ತಿಯಿಂದ ಅಪೂರ್ಣವಾಗಿ ಎಂದು ಶಬ್ದದಲ್ಲಿ ಅಡಗಿರುವ ಅರ್ಥ ಎಲ್ಲಿಯದು ಎಲ್ಲಿಗೆ ಇಳಿಯಿತು ನೋಡಿ! ಇದು ಹಿಂದೂ ಸಮಾಜದ ಮನೋಗತಿಯ ಒಂದು ಪ್ರತಿಬಿಂಬ. ಪದ ದೊಡ್ಡದು ಅದಕ್ಕೆ ಸರಿಯಾದ ಕಾರ್ಯವು ಎಷ್ಟು ಅಧಮವಾದುದು! ಆದರೆ ಪದಕ್ಕೆ ತಕ್ಕ ಕಾರ್ಯವಿಲ್ಲ! ಕಾರ್ಯಕ್ಕೆ ತಕ್ಕ ಪದವಿಲ್ಲ! ಸ್ವರಾಜ ಆಡುವವರಿಂದಾದರೆ ಮಾಡುವದಿನ್ನೆಂದು! ಶಬ್ದದ ಅರ್ಥದಂತೆಯೇ ಭಾವ, ಭಾವಕ್ಕೆ ತಕ್ಕ ಬುದ್ಧಿ, ಬುದ್ಧಿಗೆ ತಕ್ಕ ಕಾರ್ಯ—ಇದು ಸಹಜ (Natural). ಹೀಗಿರುವಾಗ ಶಬ್ದವೇ ಅನರ್ಥಕವಾದರೆ ಕಾರ್ಯದಿಂದ ಸಾರ್ಥಕವಾಗುವದೇನು? ಅರ್ಥ ಸಾಂಕರ್ಯವೇ ವರ್ಣ ಸಾಂಕರ್ಯದ ತಾಯಿ. ಅನುಕರಣವಾದ ವರ್ಣವು ತಾನೇ ಕಲಿಯಾಗುವದು. ಇಂತಹ ಬಿಟ್ಟೀ ಸಾಗಿಸುವ ಕೆಲಸವೋ ಮಾನವೋ—ಏನೋ ಒಂದು ಅದೇನೆಂದು ಹೇಳಲಿಕ್ಕಾಗುವದಿಲ್ಲ—ಅದು ವ್ಯಕ್ತಿಗಳನ್ನು ಹಿಡಿದುಕೊಂಡಿದೆ. ಸಮಾಜ ಸಂಸ್ಥೆಗಳನ್ನು ಬಿಗಿದಪ್ಪಿಕೊಂಡಿದೆ. ಅನೇಕ ಭಾರತೀಯ ರಾಷ್ಟ್ರ ಸಂಸ್ಥಾನಗಳು ಭಾರತೀಯ ವಿದ್ಯಾ ಕಲಾ ಕೌಶಲ್ಯಗಳಿಗೆ ಮಾನವನ್ನು ಕೊಡಬೇಕೆಂದು ಒಂದು ಶಾಸ್ತ್ರವನ್ನಿಟ್ಟುಕೊಂಡಿದ್ದಾರೆ. ಗಾಯನ, ಆಯುರ್ವೇದ, ಲಲಿತ ಕಲೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕು ಎಂದು ಒಂದು ಶಾಸ್ತ್ರ; ದರ್ಬಾರುಗಳಲ್ಲಿ ರಾಷ್ಟ್ರಾಂಗದ ಪದ್ಧತಿ! ಭಳರೇ ಶಾಸ್ತ್ರವೇ! ಭಾಪುರೇ ಗೌರವವೇ! ಪ್ರೋತ್ಸಾಹವೇ ಭೇಷ್! ಗಾಯಕರಿಗೆ ಸಿಗುವ ಪ್ರೋತ್ಸಾಹವನ್ನು ನೋಡೋಣ. ಯುರೋಪ್ಯ ವಾದ್ಯ (Europeon Band) ಗುಂಪು ಗುಂಪಾಗಿ ನಿಂತುಕೊಂಡು ಬಾರಿಸುವವರೇನು, ಅವರ ದುಸ್ತು ಠೀವಿಗಳೇನು, ಅವರ ಶಿಸ್ತು ತಯಾರಿಗಳೇನು, ಅವರ ಸಂಬಳಗಳೇನು! ಸಾವಿರಾರು ಜನರನ್ನು ಆಕರ್ಷಿಸಿ ಬೆರಗುವಂತೆ ಮಾಡುವ ಏರ್ಪಾಡುಗಳೇ ಎಲ್ಲವೂ! ಹಾಗೆಯೇ ಸ್ವದೇಶಿ ವಾಲಗದವರನ್ನೂ ಇಟ್ಟುಕೊಂಡಿದ್ದಾರೆ. ಮತ್ತು ಆ ಸ್ಥಾನವಿದ್ದುದೆಯೇ! ಅವರ ಆ ಶಾಸ್ತ್ರಕ್ಕಾಗಿ ಮಾತ್ರ. ಅವರ ಬಟ್ಟೆಗಳೇನು ಆಡಂಬರವಾಗಿವೆ! ಜುಟ್ಟುಗಳ ಎಣ್ಣೆಬರವೇನು! ಉಡಿಗೆ ತೊಡಿಗೆಗಳ ಅಲಂಕಾರವೇನು! ಬಾರಿಸುವಾಗ ಅವರ ತಲೆ ಮೋರೆಗಳ ಠೀವಿಯೇನು! ವರ್ಣಿಸಲಿಕ್ಕೆ ಶತ ಕವೀಂದ್ರರಿಗೂ ಸಾಧ್ಯವಲ್ಲ! ಇದ್ದ ರವೀಂದ್ರರಿಂದಲೂ ಆಗುವ ಕೆಲಸವಲ್ಲ! ಗಾನ ವಾದನಗಳು ಸುವ್ಯವಸ್ಥೆಯ ಶಿಬಿರಗಳು ಕಾವ್ಯವೂ ವ್ಯವಸ್ಥೆಯು ರೂಪ ಹೀಗಿರುವಾಗ ನಮ್ಮ ಸ್ವದೇಶೀ ವಾಲಗದವರ ಅವ್ಯವಸ್ಥೆಯನ್ನು ವರ್ಣಿಸುವದರಿಂದ ಕವಿಗಳು ಏನಾಗುವರೋ ಅವರ ಗತಿಯು ಏನಾಗುವದೋ!

ಹಾಗೆಯೇ ಆಯುರ್ವೇದಕ್ಕೆ ಗೌರವ. ಪಾಶ್ಚಿಮಾತ್ಯ ರೀತಿಯಿಂದ ನಡೆಯುವ ಆಸ್ಪತ್ರೆಗಳು ಬೇಕಾದಷ್ಟು ಇದ್ದಾರ. ಎಂತಹ ಗಗನಚುಂಬಿ ಕಟ್ಟಡಗಳು, ವಿಶಾಲವಾದ ಕೋಣೆಗಳು, ಮಿಂಚುವ ಸಾಮಾನುಗಳು, ಸಾವಿರಾರು ರೂಪಾಯಿಗಳನ್ನು ಗಳಿಸಿ ಮೋಟಾರುಗಳಲ್ಲಿ ತಿರುಗುವ ಡಾಕ್ಟರರು! ಎಲ್ಲವೂ ಆಕರ್ಷಕವೇ. ಅದರ ಹತ್ತಿರವೇ ಆ ಆಸ್ಪತ್ರೆಯ ಅಡಿಗೆ ಮನೆಯಷ್ಟೋ, ಪಾಯಿಖಾನೆಯಷ್ಟೋ ದೊಡ್ಡದಾದ ಒಂದು ಆಯುರ್ವೇದ ಶಾಲೆಯನ್ನೋ ಆಸ್ಪತ್ರೆಯನ್ನೋ ಇಟ್ಟರದು ಹೇಗೆ ತೋರುವದು? ಆಯುರ್ವೇದದ ಗೌರವದ ಕಲ್ಪನೆಯೋ—ಅಂತಹ ದರಿದ್ರ ವ್ಯವಸ್ಥೆಯುಳ್ಳ ಮನೆ ಅಥವಾ ಆ ದೊಡ್ಡ ಪಾಶ್ಚಿಮಾತ್ಯ ಆಸ್ಪತ್ರೆಯ ದೃಷ್ಟಿಪರಿಹಾರವೋ? ಯಾವದೇ ಒಂದು ವಿದ್ಯೆಯು ಅಥವಾ ಕಲೆಯು ತತ್ವವನ್ನು ತಿಳಿದುಕೊಂಡು ಅದನ್ನು ಗೌರವಿಸುವವರು ವಿದ್ವಾಂಸರು ಮಾತ್ರ. ಅವರು ತೀರ ಕಡಿಮೆ. ಸಾಮಾನ್ಯರಿಗೆ ಬಾಹ್ಯ, ರೂಪ, ವ್ಯವಸ್ಥೆಗಳೇ ಗೌರವಕ್ಕೆ ಮುಖ್ಯ ಕಾರಣಗಳು. ಹೀಗಿರುವಾಗ ಅಂಥವರ ಮನಸ್ಸಿಗೆ ಈ ಶಾಸ್ತ್ರಕ್ಕಾಗಿ ಇಟ್ಟುಕೊಂಡ ಸ್ವದೇಶಿ ವಿದ್ಯೆಗಳ ಸಂದರ್ಶನವು ಅಲ್ಪವಿದ್ಯೆಗಳಾಗಿ ತೋರುವವೋ ಇಲ್ಲವೋ? ಇಂತಹ ಗೌರವವನ್ನು ಕೊಡದೆಯೇ ಇರುವದು ಒಳ್ಳೆಯದೇ ಅಲ್ಲವೇ? ಹಾಗೆ ಮಾನವನ್ನು ಕೊಡಲು ಯತ್ನಿಸುವದರಿಂದ ಇದ್ದ ಮಾನವೂ ಹೋಗುವ ಸಂಭವವೇ ಹೆಚ್ಚು. ಇದು ಎಂತಹ 'ಮಾನ'ವೋ? ಮನಃಪೂರ್ವಕ ಅಭಿಮಾನವಿಲ್ಲದೆಯೇ 'ಶಾಸ್ತ್ರ'ಕ್ಕಾಗಿ ಕೊಡುವ ಮಾನವೂ ಒಂದು ಅವಮಾನವೇ ಅಲ್ಲವೇ?

ಇದೇ ೨೮—೧೨—೧೯೩೫ನೇ ದಿನ ಕಾಂಗ್ರೆಸ್ಸಿಗೆ ೫೦ ವರ್ಷಗಳಾದವು.

ಇದು ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವ ದಿನವು.

ಹಳ್ಳಿ ಹಳ್ಳಿಗಳಿಗೂ ಕಾಂಗ್ರೆಸ್ ಸಂದೇಶವನ್ನು ಹರಡಿರಿ.

ಕೆಳಗಿನ ಕಾರ್ಯಕ್ರಮದಲ್ಲಿ ಮುಂದೆ ಬಂದು ಕೆಲಸ ಮಾಡಿರಿ!

(೧) ಪ್ರಭಾತಫೇರಿಗಳನ್ನು ಹೊರಡಿಸುವುದು.
(೨) ವೇಳೆಗೆ ಸರಿಯಾಗಿ ಸುವ್ಯವಸ್ಥಿತ ರೀತಿಯಿಂದ ಧ್ವಜವಂದನೆಯನ್ನು ಮಾಡುವುದು.
(೩) ಮೆರವಣಿಗೆಗಳನ್ನು ಹೊರಡಿಸುವುದು.
(೪) ಸಭೆಗಳಲ್ಲಿ ಸುವ್ಯವಸ್ಥೆಯನ್ನು ಕಾಯುವುದು.
(೫) ಖಾದಿ ಕಮಿಟಿಗಳ ಕಾರ್ಯದಲ್ಲಿ ನೆರವಾಗುವುದು.

ಕರ್ನಾಟಕದ ಜ್ಯೋತಿಗಳು ನೀವು! ನಿಮ್ಮ ಸ್ವಾರ್ಥತ್ಯಾಗದ ಹಾಗೂ ದೇಶ ಸೇವೆಯ ಬೆಳಕನ್ನು ಬೀರಿರಿ! ಏಳಿರಿ, ಕಾರ್ಯತತ್ಪರರಾಗಿರಿ!!

ಹುಬ್ಬಳ್ಳಿ,
ತಾ. ೧೦-೧೨-೧೯೩೫.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಪಬ್ಲಿಸಿಟಿ ಮಂಡಳ.

ವಿವಿಧ ವಾರ್ತಾವಳಿ.

ಫ್ರೆಂಚ್ ಭಾರತದಲ್ಲಿ ಆದಾಯ ತೆರಿಗೆ

ಫ್ರೆಂಚರಿಗೆ ಸೇರಿರುವ ಭಾರತದ ಪ್ರಾಂತ್ಯಗಳಲ್ಲಿ ಇದುವರೆಗೂ ಆದಾಯ ತೆರಿಗೆ ಇರಲಿಲ್ಲ. ಇನ್ನು ಮುಂದೆ ಅದು ಜಾರಿಗೆ ಬರುತ್ತದೆ. [illegible] ನೂತನ ತೆರಿಗೆ ಅಧಿಕಾರಿಗಳು ಎಲ್ಲ ಫ್ರೆಂಚ್ ಭಾರತದ ನಿವಾಸಿಗಳಿಗೂ ಒಂದು ನಿರೂಪವನ್ನು ಕಳುಹಿಸಿದ್ದಾರೆ. 1934ನೇ ವರ್ಷದ ಆದಾಯವನ್ನು ತಿಳಿಸಬೇಕೆಂದು ಆ ನಿರೂಪವು ಕೇಳುತ್ತದೆ.

—೦೦೦—

ಸೌಂದರ್ಯದ ಬೆಲೆ.

1936ನೇ ಇಸವಿಯಲ್ಲಿ ಅಮೇರಿಕ ದೇಶದಲ್ಲಿ ಅಲಂಕಾರ ಸಾಮಗ್ರಿಗಳಿಗಾಗಿ ಕಡಮೆಯೆಂದರೆ 30,000,000 ಪವನುಗಳು ವೆಚ್ಚ ಹೊಂದುವುವಂತೆ. ಕೃತ್ರಿಮವಾದ ಹುಬ್ಬು ಎವೆ, ಕಪೋಲ ಮೊದಲಾದುವುಗಳನ್ನು ಅಲ್ಲಿನ 'ಸ್ವಾಭಾವಿಕ' [illegible] ಅವುಗಳನ್ನು ಬಳಸಿಯೂ [illegible] ಧರಿಸಿಕೊಳ್ಳುತ್ತಾರೆ, [illegible] ಬೆಡಗಿಯರೆಂದು ಮೆರೆಯುತ್ತಾರೆ.

—೦೦೦—

ಮದ್ರಾಸ್ ನಗರಸಭೆಯಲ್ಲಿ ಕಾಂಗ್ರೆಸ್ ಜುಬಿಲಿಯು

ಮದ್ರಾಸ್ ನಗರಸಭೆಯಲ್ಲಿ ಕಾಂಗ್ರೆಸ್ ಸುವರ್ಣ ಮಹೋತ್ಸವವನ್ನು ಆಚರಿಸಬೇಕೆಂದು ಬಹುಮತದಿಂದ ನಿರ್ಧಾರವಾಯಿತು. ಜಸ್ಟಿಸ್ ಪಕ್ಷದ ಧುರೀಣರು ಇದಕ್ಕೆ ಪ್ರತಿಭಟಿಸಿದರು. ಹರಿಜನ ಪ್ರತಿನಿಧಿಗಳಾದ ಶ್ರೀ ಶಿವರಾಜರು [illegible]ಯವರಿಗೆ ಅವರ ಕರ್ತವ್ಯದ ಕುರಿತು ನೀತಿ ಹೇಳಿದರು. ಆದರೆ ಮಹಾಪೌರರು ಶ್ರೀ. ಶಿವರಾಜರ ಮಾತಿಗೆ ಕಿವಿಗೊಡಲೇ ಇಲ್ಲ! ಬಹುಮತದಿಂದ ಠರಾವು ಮಂಜೂರಾಯಿತು.

—೦೦೦—

ಹಾರಿಹೋದ ಗಾಜು

ಲಂಡನ್ನಿನ ಕೈಗಾರಿಕೆ ಮತ್ತು ವಿಜ್ಞಾನ ಶೋಧನಾ ಶಾಖೆಯವರು ಟಾರಿನಿಂದ ಒಂದು ಒಡೆಯದ ಗಾಜನ್ನು ತಯಾರಿಸುವ ವಿಧಾನವನ್ನು ಕಂಡು ಹಿಡಿದಿರುವರು. ಇದು ಸರ್ವಸಾಮಾನ್ಯ ಗಾಜಿನಷ್ಟೇ ಪಾರದರ್ಶಕವಾಗಿದ್ದರೂ ಗಾಜಿನಂತೆ ಒಡೆಯುವಂತಹದಲ್ಲ. ಒಡೆಯಬೇಕಾದರೆ ಅದನ್ನು ಸುತ್ತಿಗೆಯಿಂದ ಒಡೆಯಬೇಕು. ಇದರಿಂದ ತಯಾರಿಸಲ್ಪಟ್ಟಿರುವ ಸಾಮಾನುಗಳು [illegible] ಹೌಸ್ ಎಂಬಲ್ಲಿ ನಡೆದ ಪ್ರದರ್ಶನದಲ್ಲಿ ಇಡಲ್ಪಟ್ಟಿದ್ದವು.

—೦೦೦—

ಟರ್ಕಿಯ ಸರ್ವಾಧಿಕಾರಿಯ ಕೊಲೆಯ ಪ್ರಯತ್ನ.

ಟರ್ಕಿಯ ಸರ್ವ ಸ್ವತಂತ್ರಾಧಿಕಾರಿ ಮುಸ್ತಫ ಕೆಮಲ್ ಪಾಷಾರವರನ್ನು ಕೊಂದು ಹಾಕಬೇಕೆಂದು ಅವರ ಕೆಲವು ರಾಜಕೀಯ ಶತ್ರುಗಳು ನಡೆಸಿದ ಪಿತೂರಿಯು ಬಯಲಿಗೆ ಬಂದಿದೆ.

ಅಂಕಾರಾ ಬಳಿ ಕೆಮಾಲನು ಒಂದು ಮಾದರಿ ಹೊಲವನ್ನು ಸ್ವಂತ ವ್ಯವಸಾಯ ಮಾಡುತ್ತಿದ್ದಾನೆ. ವಾರದಲ್ಲಿ ಒಂದು ದಿನ ಹೊಲವನ್ನು ನೋಡಬೇಕೆಂದು ಅವನು ತಿರುಗಾಡಿಕೊಂಡು ಬರುವನಂತೆ. ಇದು ಹೇಗೋ ಅವನ ಶತ್ರುಗಳಿಗೆ ತಿಳಿದು, ಅವರು ಆ [illegible] ಆ ಹೊಲದ ಬಾಂಬುಗಳನ್ನು ಹೂತಿಟ್ಟರು. ಆ ಅವಸರದಲ್ಲಿ ಒಂದು ಬಾಂಬು ಮಣ್ಣಿನ ಮೇಲೆ ಕಾಣುವಂತೆ ಬಿಟ್ಟಿದ್ದರಂತೆ. ಮಾರನೆಯ ದಿನ ಮುಂಜಾನೆ ಆ ಬಾಂಬನ್ನು ಕಂಡ ಕೃಷಿಕರು ಇದ್ದ ಸಂಗತಿಯನ್ನು ಕೆಮಾಲನಿಗೆ ಅರಿಕೆ ಮಾಡಿಕೊಂಡರು. ಈ ಭಯಂಕರ ಒಳಸಂಚು ಗುಟ್ಟು ಹೊರಬಿತ್ತು. ಅಪರಾಧಿಗಳ ಮೇಲೆ ಕೆಲವು ಬಂಧನಗಳಾಗಿವೆ.

—೦೦೦—

ರಾಷ್ಟ್ರೀಯ ಧ್ವಜಕ್ಕೆ

[illegible]

ಸಂಯುಕ್ತ ಪ್ರಾಂತದ [illegible] ಜಿಲ್ಲೆಯಲ್ಲಿ ಈಗ ಮುನಿಸಿಪಾಲಿಟಿ ಚುನಾವಣೆ ನಡೆದಿದೆ. ಅಲ್ಲಿ ಕಾಂಗ್ರೆಸ್ಸಿನವರು ತಮ್ಮ ಪ್ರತಿನಿಧಿಗಳಿಗಾಗಿ ಪ್ರಚಾರ ನಡೆಸುತ್ತಿದ್ದಾರೆ.

ಇತ್ತೀಚೆ ಒಂದು ದಿನ ಪೋಲೀಸರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾದ ಸುರೇಂದ್ರನಾಥ ರಾಘವ ಎಂಬವರು ತಮ್ಮ ಮನೆಯ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಿದ್ದನ್ನು ಕಿತ್ತು ಹಾಕಿದರು. ಅದೇ ರಾತ್ರಿಯಲ್ಲಿ ಪೋಲೀಸರಲ್ಲಿ ಕೆಲವರು ಬೇರೆ [illegible] ರಾಷ್ಟ್ರೀಯ ಧ್ವಜವನ್ನು ಕಿತ್ತುಕೊಂಡು ಹೋದರು. ಸುರೇಂದ್ರನಾಥರು ಅದು [illegible] ಗುರುತು [illegible] ಕಿತ್ತು [illegible] ಧ್ವಜವನ್ನು ಹಿಂದಕ್ಕೆ ಕೊಡ[illegible].

—೦೦೦—

ಕೈರೋದಲ್ಲಿ ವಿದ್ಯಾರ್ಥಿಗಳ ಗಲಭೆ.

ಈಜಿಪ್ಟಿನ ಮುಖ್ಯ ನಗರವಾದ ಕೈರೋದಲ್ಲಿ ವಿದ್ಯಾರ್ಥಿಗಳ ಗಲಭೆಯು ಪುನಃ ಪ್ರಾರಂಭವಾಗಿರುತ್ತದೆ. ಈಗಿನ ಸರಕಾರಕ್ಕೂ ಬ್ರಿಟಿಷರಿಗೂ ವಿರೋಧ ಚಳವಳಿಯಲ್ಲಿ ಎಲ್ಲಾ ಶಾಲಾ ಮಕ್ಕಳೂ ಭಾಗವಹಿಸಿರುವರು. ಕೆಲವು ವಿಶ್ವವಿದ್ಯಾಲಯಗಳು ಮುಚ್ಚಲ್ಪಟ್ಟಿವೆ. ವಿದ್ಯಾರ್ಥಿ ವಿಷಯದ ಮೆರವಣಿಗೆ ನಡೆಸುತ್ತಿರುವರು. ತಮಗೆ ಸ್ವರಾಜ್ಯ ಸಹಿತದ ರಾಜ್ಯಾಂಗವನ್ನು ಕೊಡಬೇಕಾಗಿ ಈಜಿಪ್ಟಿನ [illegible] ಬ್ರಿಟಿಷ್ ಸರಕಾರದೊಡನೆಯೂ ಹೋರಾಡುತ್ತಿರುತ್ತಾರೆ.

—೦೦೦—

ಗಾಂಧೀಜಿಯವರಿಗೆ ದೇಹಾಲಸ್ಯ.

ಕಳೆದ ವಾರ ಮಹಾತ್ಮರ ದೇಹಾರೋಗ್ಯವು ಸ್ವಲ್ಪ ಕೆಟ್ಟಿತು. ಅವರ ಸ್ಥಿತಿ ಸ್ವಲ್ಪ [illegible]ವಾಯಿತೆಂದು ತಿಳಿದು, ಮಹಾದೇವ ದೇಸಾಯಿಯವರು ತಂತಿ ಮೂಲಕ ಬೊಂಬಾಯಿಯಿಂದ ಪ್ರವೀಣ ವೈದ್ಯರಾದ ಜೀವರಾಜ ಮೆಹ್ತಾ ಎಂಬವರನ್ನು ಕರೆಸಿದರು. ಇವರು ಬಂದು ಗಾಂಧೀಜಿಯವರನ್ನು ಪರೀಕ್ಷಿಸಿ, ಗಾಂಧಿಯವರು ಇತ್ತೀಚೆಗೆ ಸೇವಿಸುತ್ತಿದ್ದ ಆಹಾರ (ಸೀಡು ಮುಂ, ಅವರೆ) ದಿಂದಲೂ, ಸೂರ್ಯನ ರವಿಗೆ ತನ್ನ ದೇಹವನ್ನು ಒಡ್ಡಿರುವುದರಿಂದಲೂ ಅವರ ಅನಾರೋಗ್ಯಕ್ಕೆ ಕಾರಣ ಮತ್ತು ಇವರು ಇತ್ತೀಚೆಗೆ ಅನೇಕ ಕಾರ್ಯಗಳಲ್ಲಿ ಪರಿಶ್ರಮಿಸಿರುವುದರಿಂದ ಅವರಿಗೆ ಸರಿಯಾದ ವಿಶ್ರಾಂತಿ ದೊರೆಯದೆ ಅವರ ಆರೋಗ್ಯವು ಕೆಟ್ಟು ಹೋದುದರಿಂದ ಇನ್ನು ಒಂದು ತಿಂಗಳ ವಿಶ್ರಾಂತಿ ಪಡೆಯಬೇಕೆಂದೂ ಆಹಾರ ಬದಲಾವಣೆಯನ್ನು ಮಾಡಬೇಕೆಂದೂ ತಿಳಿಸಿರುವರು. ಮಹಾತ್ಮಾಜೀಯವರು ಈಗ ಆರೋಗ್ಯವಂತರಾಗಿರುವರು. ಸಂಪೂರ್ಣ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ.

—೦೦೦—

ಗುಣ ಪಡಿಸುವೆನು.
ಡಾ. ಜಾನ್ಸನ್‌ರವರ ತಂತಿ.

ಹೋಮಿಯೋಪಥಿಕ್ ವೈದ್ಯರಾದ ಡಿ. ಡಿ. ಎಸ್ ಜಾನ್ಸನ್ ಇವರು ಮಹಾತ್ಮ ಗಾಂಧಿಯವರ ಕಾರ್ಯದರ್ಶಿಗಳಾದ ಮಹಾದೇವ ದೇಸಾಯಿಯವರಿಗೆ ಪ್ರಾರ್ಥಿಸಿ ತಂತಿ ಕಳಿಸಿ, ಮಹಾತ್ಮರಿಗೆ ಉಪಚಾರ ಮಾಡಲು ತಾವು ಸಿದ್ಧರಿರುವುದಾಗಿಯೂ ತನ್ನ ಉಪಚಾರದಿಂದ ಅವರಿಗೆ ಗುಣವಾಗುವದೆಂದು ತನಗೆ ನಂಬಿಗೆಯಿದೆಯೆಂದೂ ತಿಳಿಸಿದ್ದಾರೆ. ಒಂದು ವಾರ ಉಪಚಾರ ಮಾಡಿ ನೋಡಲು ತಮಗೆ ಅವಕಾಶ ಕೊಡಬೇಕೆಂದು ಅವರು ಬೇಡಿಕೊಂಡಿರುವರು.

—೦೦೦—

ಡಾಕೋರಿನ ಗಲಭೆ.

ಈಗ [illegible] ಜನರಲ್ [illegible] 144 ನೇ ಕಲಮು [illegible] ಬಂದಿರುತ್ತದೆ. ಜನರು [illegible] ಸಂಚಾರ [illegible] ಗುಂಪಾಗಿ [illegible] ಕಾಣಸಿಗುವುದಿಲ್ಲ. ಸಿಕ್ಖ [illegible] ಧರಿಸಬಾರದೆಂದಾಗಿದೆ. [illegible] ಧರಿಸುವ ಹಕ್ಕು [illegible] ಸ್ವಾತಂತ್ರ್ಯ [illegible] ಒಂದು [illegible] ಆದರೆ, [illegible] ಗಲಭೆಯು [illegible] ಸರಕಾರದವರು [illegible] ನಡೆಯುತ್ತಿದ್ದಾರೆ. [illegible]

ಗ್ರೀಸಿನಲ್ಲಿ ರಾಜಪಟ್ಟಾಭಿಷೇಕ.

ಗ್ರೀಕ್ ದೊರೆಗೆ ಮತ್ತೆ ಪಟ್ಟಾಭಿಷೇಕವಾಯಿತು. ಜೆನರಲ್ ಕೊಂಡಿಲಿಸ್ ಎಂಬಾತನು ಪ್ರಧಾನಾಮಾತ್ಯನಾಗಿ ಸರಕಾರವನ್ನು ರಚಿಸಿದ್ದಾನೆ. ದೊರೆಯು ದೇಶದ ಸರ್ವ ಅಪರಾಧಿಗಳಿಗೂ ಕ್ಷಮೆಯನ್ನು ಕೊಟ್ಟು ಬಿಟ್ಟು ಬಿಡುಗಡೆ ಮಾಡಿದ್ದಾನೆ. ಈ ವಿಚಾರವಾಗಿ ದಂಡನಾಯಕ ಕಾಂಡಲಿಸನಿಗೂ ದೊರೆಗೂ ಭಿನ್ನಾಭಿಪ್ರಾಯ ಬಂದು, ಸರ್ವರಿಗೂ ಕ್ಷಮೆ ಕೊಡದಿದ್ದರೆ ತಾನು ಸಿಂಹಾಸನವನ್ನು ಹತ್ತುವುದೇ ಇಲ್ಲವೆಂದೂ ಮತ್ತೆ ಹಿಂತಿರುಗುವೆನೆಂದೂ ದೊರೆಯು ಹೇಳಿದ ಮೇಲೆ ಕಾಂಡಲೀಸನು ರಾಜೀನಾಮೆಯನ್ನು ಕೊಟ್ಟು ಪ್ರತ್ಯೇಕವಾದನು. ಯುವ ದೊರೆಗೆ ಪಟ್ಟಾಭಿಷೇಕವಾಯಿತು! ಗ್ರೀಕ್ ಚರಿತ್ರೆಯಲ್ಲಿ ಈಗ ಮತ್ತೊಂದು ಘಟ್ಟವು ಪ್ರಾರಂಭವಾಯಿತೆಂದು ಹೇಳಬಹುದು.

—೦೦೦—

ರಷ್ಯದಲ್ಲಿನ ಮತವಿಚಾರ.

ರಷ್ಯದಲ್ಲಿ ಮಹಮ್ಮದೀಯರಿಗೆ ಮರಣವೇ ಗತಿ. ಅಬ್ದುಲ್ ಮುಕಾಲಿಬ್ ಎಂಬ ಮುಸಲ್ಮಾನನು ಮತ್ತು ಸ್ಥಾನಿಕರನ್ನು ಎತ್ತಿ ಕಟ್ಟಿ ಮತ ವೈಷಮ್ಯವನ್ನು ರಷ್ಯದಲ್ಲಿ ಬಿತ್ತುತ್ತಿದ್ದರಿಂದ ಆತನನ್ನು ಕೊಲಲ್ಲೇಬೇಕೆಂದು ರಷ್ಯದ ಸೋವಿಯಟ್ ಸರ್ಕಾರವು ತೀರ್ಮಾನಿಸಿದೆ. ಆತನ ಅನುಯಾಯಿಗಳಿಗೆ ಆಜೀವ ಪರ್ಯಂತ ಕಠಿಣ ಶಿಕ್ಷೆಯೂ ವಿಧಿಸಲ್ಪಟ್ಟಿದೆ.

ಅಬ್ದುಲ್ ಮುಕಾಲಿಬನು ಮುಸಲ್ಮಾನ, ಮಹಮ್ಮದೀಯ ತನ್ನ ಅನುಯಾಯಿಗಳನ್ನೆಲ್ಲ ಕಟ್ಟಿಕೊಂಡು ರಷ್ಯದ ಮುಸಲ್ಮಾನರನ್ನು ಸರಕಾರದ ಮೇಲೆ ಎತ್ತಿ ಕಟ್ಟಲು ಬಹಳ ಸಾಹಸಪಡುತ್ತಿದ್ದ. ಈ ಕಾರ್ಯವನ್ನು ಯಶಸ್ವಿಯಾಗಿ ಸಾಧಿಸಲು ತಾನು ದೇವರ ದೂತನೆಂದೂ ರಷ್ಯದ ಮುಸ್ಲಿಮರ ಉದ್ಧಾರಕ್ಕಾಗಿ ಜನ್ಮವೆತ್ತಿರುವನೆಂದೂ ಹೇಳಿಕೊಂಡು [illegible] ತನ್ನ ಒಲೆಗೆ ಹಾಕಿಕೊಳ್ಳುತ್ತಿದ್ದ. [illegible] ಹೆಂಡರನ್ನು ಕಟ್ಟಿಕೊಂಡು ಅನೀತಿಜೀವನವನ್ನು ನಡೆಸುತ್ತಿದ್ದರೂ ಮಹಾತ್ಮರಂತೆ ಜನರನ್ನು ಮರುಳುಗೊಳಿಸುತ್ತಿದ್ದ.

—೦೦೦—

ಪ್ರೊಫೆಸರಿಗೆ ಆರು ತಿಂಗಳು ಶಿಕ್ಷೆ

ಕಲಿಕತ್ತೆಯ ಬಂಗವಾಸಿ ಕಾಲೇಜಿನ ಪ್ರೊಫೆಸರ್ ಅಶ್ವಿನೀಗುಪ್ತರಿಗೆ ತಮ್ಮ ವಿದ್ಯಾರ್ಥಿಯ ಪ್ರತಿಯಾಗಿ ವೇಷ ಮರೆಸಿಕೊಂಡು ತಾವೇ ಪರೀಕ್ಷೆಗೆ ಕೂತುದಕ್ಕಾಗಿ 6 ತಿಂಗಳು ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು.

ಸಮರೇಶ [illegible] ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿತ್ತು. ಆದರೆ ಆತನು ಹಾಗೆ ಮಾಡಲಿಲ್ಲ. ಏನೋ ಸಂಧಾನ ನಡೆದಿರಬೇಕು. ಅವನಿಗೆ ಪ್ರತಿಯಾಗಿ ಅವನ ಆಚಾರ್ಯರಾದ ಶ್ರೀ ಅಶ್ವಿನಿಗುಪ್ತರು ಪರೀಕ್ಷೆಗೆ ಕೂತರು. ಶ್ರೀ ಗುಪ್ತರಿಗೆ ಮೀಸೆ ಇರಲಿಲ್ಲ. ಗಡ್ಡ ಬೆಳೆದಿರಲಿಲ್ಲ. ಮೀಸೆ ಗಡ್ಡಗಳನ್ನು ಕಟ್ಟಿಕೊಂಡರು. [illegible] ಕಣ್ಣಿಗೆ ಕನ್ನಡಕ ಹಾಕಿಕೊಂಡರು. ಅದರೂ ಪರೀಕ್ಷೆಯ ಮಂದಿರದಲ್ಲಿದ್ದ ಮೇಲ್ವಿಚಾರಕರಿಗೆ ಇವರ ಮೇಲೆ ಅನುಮಾನ ಬಂತು. [illegible] ಕೆಲಸ ಕೆಟ್ಟಿತೆಂದುಕೊಂಡು ಶ್ರೀ ಅಶ್ವಿನೀಗುಪ್ತರು ಪರೀಕ್ಷೆಯ ಮಂದಿರದಿಂದ ಓಡಿದರು. ತಲೆತಪ್ಪಿಸಿಕೊಳ್ಳಲು ಓಡಿ ಹೋಗುತ್ತಿರುವಾಗ ಸಿಕ್ಕಿಬಿದ್ದರು. ಆ ವಿದ್ಯಾರ್ಥಿ ಸಮರೇಶನು [illegible] ಹೋಗಿದ್ದನಂತೆ. [illegible] ಪೋಲೀಸರು ಹಿಡಿದರು. ಕೋರ್ಟಿಗೆಳೆದರು. ಮೇಲ್ಕಂಡಂತೆ ಶಿಕ್ಷೆಯಾಯಿತು.

—೦೦೦—

ವಿಚಿತ್ರ ಗ್ರಹ.

ಅಬಿಸೀನಿಯದಲ್ಲೊಂದು ವಿಚಿತ್ರ ಪ್ರಸಂಗವು ಘಟಿಸಿತು. ಒಂದು ವಿಚಿತ್ರ ನಕ್ಷತ್ರವು ಹಗಲಲ್ಲಿ [illegible]ಯಂತೆ ದೊಡ್ಡ ನಕ್ಷತ್ರ, ಸೂರ್ಯನ ಬೆಳಕಿನಲ್ಲಿ ಹೊಳೆಯುವಷ್ಟು ಪ್ರಕಾಶಮಾನವಾದ ವಸ್ತು. ಅಬಿಸೀನಿಯನ್ನರು ಕಂಡು ಬಾಯಿ ಬಿಟ್ಟುಕೊಂಡು ಅದನ್ನು ನೋಡುತ್ತಿದ್ದಾರಂತೆ. [illegible] ಅನಾಗರಿಕ [illegible] ಇದು [illegible] ಇಟಲಿಯ [illegible] ಅದು ಕಂಡು ಬಾಯಿ ಬಿಡುತ್ತಿದೆಯಂತೆ. [illegible] ಕೆಲವು [illegible] ಅವರು [illegible] ಹಗಲೆಲ್ಲ [illegible] ಯಂತ್ರಗಳನ್ನು [illegible] ನೋಡಿದ್ದೇ. [illegible] ಅದು ಬಗೆಹರಿದಿಲ್ಲ. [illegible] ಅದು ಧೂಮಕೇತುವೆನ್ನುತ್ತಾರೆ. ಕೆಲವರು ಅದು [illegible] ನಕ್ಷತ್ರವೆನ್ನುತ್ತಾರೆ. ನಕ್ಷತ್ರ [illegible] ಅಲ್ಲ, ಅದು ಇಟಲಿಯ ವಿಮಾನ. ಬಾಂಬು [illegible] ಯುದ್ಧದ ಸ್ಥಳಗಳನ್ನು ನೋಡಿಕೊಂಡು ಹೋಗುತ್ತದೆ ಎಂದು ಕೆಲವರಾಡಿಕೊಳ್ಳುತ್ತಿದ್ದಾರೆ. [illegible] ಅಲ್ಲ ಎನ್ನುವವರಿಗೆ [illegible] ಮಂದಿ! [illegible] ವಿಚಿತ್ರ ಪ್ರಸಂಗ [illegible]

IF NOT

delivered

please return to

"KODAGU" OFFICE, MERCARA.

KODAGU

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿ

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩-೮-೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, [illegible] ೨೦ನೇ [illegible] [ಸಂಚಿಕೆ ೨೭

By Appointment
To H. E. The Governor of Madras

CUPS AND MEDALS



Telephone, 3145

Telegrams 'PRECIOUS.'



V. SUBRAMANIA IYER.

Jeweller. & Diamond Merchant,

52—4 2 & 3 Kuppemuthu Street Tiruvateeswaranpet MADRAS. POST BOX 4/3 TRIPLICANE

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906] [Incorporated in British India.

Head office —UDIPI (S Kanara)

Branches —

1. Udipi 2. Coondapoor 3. Car Street Mangalore 4. Bunder, Mangalore 5. Shimoga 6. G. T. Madras 7. Mercara and 8. Vijayanadipet,

DEPOSITS

1922	1926	1930	1934
Rs 2 28 419/-	6 43 940/-	20 73 507/-	24 95 329/-

30 11 1935

Rs 27,40,812

SAVINGS BANK ACCOUNTS

Interest allowed at 3½ % p. a.

Facilities —

(1) Withdrawal by cheques (2) Production of pass books unnecessary at the time of withdrawal. (3) Accounts transferred FREE of charge from one office to another

FIXED DEPOSITS now accepted up to 5 per cent.

M. Srinivasa Prabhu, Manager.

52—5

"ಜನರಲ್ ಅಷ್ಯೂರೆನ್ಸ್" ಏಜೆಂಟ್.

ಉದಾರವಾದ ಕೃಷ್ಟಿ ಭೂಕ ಪ ಪಾಲಿಸ್ಸಿಗಳು

(1) [illegible] ತಿಂಗಳುಗಳವರೆಗೆ ಪ್ರೀಮಿಯಂ ಕಲ್ಲದೆ ಪಾಲಿಸಿಗಳು ಜಾರಿಯಲ್ಲಿರ [illegible]
(2) [illegible]
(3) [illegible]
(4) [illegible]

[illegible] 70 ಲಕ್ಷ

[illegible] 16 ಲಕ್ಷ

[illegible] 33 ಲಕ್ಷ

ಬೋನಸನ್ನು ಬೇರೆ ಕಂಪನಿಗಳಿಗಿಂತ ಅಧಿಕ

[illegible] 25%o } { ಎಂಡೋಮೆಂಟ್ ಪಾಲಿಸಿಗೆ [illegible] 20 %o

[illegible]

ಐ. ಬಿ. ಭಾಗವತ, ಎಫ್. ಎಸ್. ಎಸ್. (ಲಂಡನ್)

ಜನರಲ್ [illegible] ದಿ ಜನರಲ್ ಅಷ್ಯೂರೆನ್ಸ್

[illegible] ಏಜೆಂಟ್ ಅಥವಾ —

[illegible]

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, [illegible], 3ನೇ ರೋಡು

5—28 ಬೆಂಗಳೂರು [illegible]

ಪ್ರಕಟಣೆ.

[illegible] ಸೆಂಟ್ರಲ್ [illegible] ಬ್ಯಾಂಕ್, ಲಿಮಿಟೆಡ್, [illegible]

(ಸ್ಥಾಪಿತವಾದದ್ದು 1922ರಲ್ಲಿ)

	ರೂ.
[illegible]	50,000—0—0
[illegible]	36 690—0—0
[illegible]	2,54 429—11—6
[illegible]	1,03,114—12—0

[illegible]

[illegible] 4 [illegible] ಬಡ್ಡಿ ದೊರೆಯುತ್ತೆ. [illegible] 4ರ ಬಡ್ಡಿ ದೊರೆಯುತ್ತೆ.

[illegible]

[illegible] [illegible]

[illegible] ಡಾ. [illegible] ಚಂಗಪ್ಪನವರು.

[illegible]

[illegible]

[illegible] 1 11—1935

[illegible]

[illegible] ಬಾಲ [illegible]

[illegible]

(52—42 [illegible]

ಷಿಕಾರಿಗೆ ಬೇಕಾಗುವ ನಾನಾ ವಿಧದ

[illegible], [illegible], [illegible], [illegible] ಮತ್ತು ವಿಜನ [illegible] ಅವಶ್ಯಕವಾದ ಎಲ್ಲಾ ಸಲ [illegible]



[illegible]] [CURRENT CATALOGUE FREE.

The Bombay Armoury,
329–331, Abdul Rehman Street,
26–16 BOMBAY, 3.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

[illegible]

ದ್ರಾಕ್ಷಾಮೃತ.

[illegible]

ಬೆಲೆ—1 ಬಾಟ್ಲಿಗೆ ರೂ 1—4—0, 3 ಬಾಟ್ಲಿಗೆ ರೂ 3—8—0 1 ಡಜನ್ ಬಾಟ್ಲಿಗಳಿಗೆ ರೂ 12—0—0.

[illegible]

52—14 [illegible]

[illegible]

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

[illegible]) ([illegible]—ಬೊಂಬಾಯಿ.

1934ನೇ [illegible]—

[illegible]	ರೂ.	7,02,42,761
[illegible]	ರೂ.	3 14,01,970
[illegible]	ರೂ	54,20,38,518
[illegible]	ರೂ.	16,29,88 814
[illegible]	ರೂ	15 53,98 843

[illegible] 'ಓರಿಯಂಟಲ್' [illegible]

[illegible]

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

[illegible]

[illegible]

ಓರಿಯಂಟಲ್ ಬಿಲ್ಡಿಂಗ್ಸ್, [illegible], ಬೆಂಗಳೂರು. } 52—48 [illegible] ವಿ. [illegible], ([illegible])

[illegible] & Published by P. I. Pelliappa, at "Kodagu" Press, Mercara, for "Kodagu" Ltd.

COORG CIVIL SURGEON'S OFFICE
Mercara, the 26th November 1935

NOTICE.

Sealed tenders will be received at the Civil Surgeon's Office Mercara, upto 11 a.m. on Friday the 17th January 1936, for the supply by contract of all articles of diet etc., required seperately for the use of the in-patients of (1) Mercara, (2) Virajpet and (3) Somwarpet from 1st April 1936 to 31st March 1937 (both days inclusive).

For further particulars apply to the Medical Officer in charge of the Hospital concerned

R. D MacRae,
Captain I. M. S.,
Civil Surgeon Coorg

ನೋಟೀಸು.

ಕೊಡಗು ಸಿವಿಲ್ ಸರ್ಜನರ ಆಫೀಸು.
ಮಡಿಕೇರಿ, 28—11—35

(1) ಮಡಿಕೇರಿ, (2) ವಿರಾಜಪೇಟೆ ಮತ್ತು (3) ಸೋಮವಾರಪೇಟೆ ಆಸ್ಪತ್ರೆಗಳಲ್ಲಿರುವ ಒಳ ರೋಗಿಗಳಿಗೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಕಂಟ್ರಾಕ್ಟು ಮೂಲಕ 1936ನೇ ಏಪ್ರಿಲ್ 1ರಿಂದ 1937ನೇ ಮಾರ್ಚ್ 31ರ ವರೆಗೆ (ಆ ಎರಡು ದಿವಸಗಳು ಸೇರಿ) ಈ ಮೂರು ಆಸ್ಪತ್ರೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ [illegible] (ಟೆಂಡರ್) 1936ನೇ [illegible] 17ನೇ ಶುಕ್ರವಾರ ಬೆಳಗ್ಗೆ 11 ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುವದು.

ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ಆಸ್ಪತ್ರೆಯ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರಿಗೆ ಬರೆದುಕೊಳ್ಳುವದು.

ಆರ್. ಡಿ. ಮೆಕ್ರೆ.
ಕ್ಯಾಪ್ಟನ್, ಐ. ಎಂ. ಯಸ್
2—2 ಸಿವಿಲ್ ಸರ್ಜನ, ಕೊಡಗು.

ಡಾಕ್ಟರ್ ಮೋತ್ಯಾಸ್ ಎಬ್ರಹಾಮ.
ದಂತ ವೈದ್ಯರು.

ಗಿಡ್ಡಾಂಬಲ ಬಂಗ್ಲೆ.
(ಕೋರ್ಟ್ ಕೆಳಗೆ ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸಲಾಗುವದು, ಕೃತ್ರಿಮ ಹಲ್ಲುಗಳನ್ನು [illegible] ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು [52—10]

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪಂಚಕಲಶವನ್ನು ಮಹಪ್ಪರ ದೇವಸ್ಥಾನದ ಪರವಾಗಿ [illegible] ಜನಗಳಿಂದ ಹರಕೆ ಮತ್ತು ಕಾಣಿಕೆ ಪಡೆಯುವುದನ್ನು [illegible] ತಿಳಿಯುವುದರಿಂದ ಅವ್ವರಿಂದ [illegible] ಮಹಪ್ಪರ ದೇವಸ್ಥಾನದ [illegible] ಈ ದೇವಸ್ಥಾನಗಳಲ್ಲಿ ಕೊಡವರಿಗಾಗಿ ಕೊಡಗಿನ ಮತ್ತು [illegible] ದೇವಸ್ಥಾನದಿಂದ ಆ [illegible] ಈ ಜಾಗಗಳಲ್ಲಿ [illegible] ಇವರು [illegible] ಮತ್ತು [illegible] ಕಾಣಿಕೆ [illegible] ವಿಚಾರಪಡಿಸಬೇಕೆಂದು [illegible] ವಿನಂತಿ.

ಪಿ. ಯಂ. ಕುಂಞರಾಮನ್
[illegible] [26—4] ಮೇನೇಜರ್,
25—5—35 [illegible] ಮಹಪ್ಪರ ದೇವಸ್ಥಾನ

ಅರವತ್ತು ವರ್ಷಗಳಿಂದ ಅನುಭವದಲ್ಲಿ ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿಕ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. 1. ವಿ. ಪಿ. [illegible] ಬೇರೆ. [illegible]

ಗಣೇಶ ರಾಮಚಂದ್ರ ಕರ್ಕ,
12—10 ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಧಾತುಪುಷ್ಟಿ ಲೇಹ

ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಎಲ್ಲರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ [illegible] ಧಾತು [illegible] ಶೀಘ್ರ ಸ್ಖಲನ, ಅಶಕ್ತಿ, ಇವುಗಳನ್ನೆಲ್ಲಾ ಹೋಗಲಾಡಿಸಿ [illegible] ಶಕ್ತಿಯನ್ನು ಮತ್ತು [illegible] ಕಾಂತಿಯನ್ನೂ ಉಂಟುಮಾಡುವುದು [illegible] ರೂ 2—8—0 3ಕ್ಕೆ ರೂ 7—0—0

ಮಲೇರಿಯಾ ನಿವಾರಿಣಿ.

ಮಲಬದ್ಧತೆ ಚಳಿಜ್ವರ ದಿನಬಿಟ್ಟು ಬರುವ ಜ್ವರ, [illegible] ಜ್ವರ, ಗಿಡ್ಡ ಬರುವ ಜ್ವರ, ಪುರಾಣ ಜ್ವರ, [illegible] ಜ್ವರ ಮಲೇರಿಯಾ [illegible], ಸಿಮೋನಿಯಾ ಜ್ವರ, ಕಫ ಜ್ವರ, [illegible] ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವದು.

ಬಾಟ್ಲಿ 1ರ ರೂ 1—8—0 ಸಣ್ಣ ಬಾಟ್ಲಿಗೆ 0—13—0

ಅಶೋಕಾರಿಷ್ಟ ಮತ್ತು ಮಾತ್ರೆ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. [illegible] ಮುಟ್ಟಾಗುವಿಕೆ ಅತೀವ ಅಥವಾ ಅಲ್ಪ ಸ್ರಾವ [illegible] ರಕ್ತಹೀನತೆ, [illegible] ಗರ್ಭಪಾತ [illegible] ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ರೋಗಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ ಬಾಟ್ಲಿ 1ರ ರೂ. 2—4—0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ [illegible] ತುರಿಕಜ್ಜಿ, [illegible] ಫರಂಗಿ [illegible] ಇವುಗಳ ಮೇಲೆ ಶ್ರೇಷ್ಠ ಔಷಧ ಬಾಟ್ಲಿ 1ರ ರೂ. 1—2—0 3 ಬಾಟ್ಲಿಗಳಿಗೆ 3—4—0

ಕೆಟಲಾಗಿಗೆ ಬರಿರಿ. [illegible] ರೋಗಗಳಿಗೆ ತಕ್ಕದಾದ ಔಷಧ [illegible]

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಾರ್ಮಸಿ, ರಥಬೀದಿ, ಮಂಗಳೂರು.

(1) ವಿ ಬಿ [illegible] ಮಹದೇವಪೇಟೆ, ಮಡಿಕೇರಿ (ಕೊಡಗು).
(52—22) (2) ಎ ಎಸ್ [illegible], ಪುತ್ತೂರು

SHIROMANI NARAYANACHARYA
Choukhamba Benares City.

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯದ ಅಧೀನರು. ರುದ್ರಾಕ್ಷಿಯನ್ನು ಧರಿಸಿದರೆ ಆರೋಗ್ಯ [illegible] ರುದ್ರಾಕ್ಷಿಯನ್ನು ಬರದೆ [illegible] ಧರಿಸುವವರು [illegible] ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವನ [illegible], ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಐಶ್ವರ್ಯವೃದ್ಧಿ [illegible] ಅದು [illegible] ರುದ್ರಾಕ್ಷಿ ಎಲ್ಲಿ ದೊರೆಯುತ್ತದೆ? ಅದು [illegible] ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುತ್ತದೆ.

[illegible] 1ಕ್ಕೆ ಆಣೆ 1 ರಿಂದ ರೂ 250 ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 250 ವರೆಗೆ. [illegible] ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 500 ವರೆಗೆ. ಮತ್ತು 3—4—5—6—7—8 ಮುಖಗಳ [illegible] 1ಕ್ಕೆ ಆಣೆ 4 ರಿಂದ ರೂ 10, ಮತ್ತು 9—10—11 ಮುಖಗಳುಳ್ಳ [illegible] 1ಕ್ಕೆ ರೂ 10ರಿಂದ 300 ವರೆಗೆ, 12—13—14 ಮುಖದ [illegible] 1ಕ್ಕೆ ರೂ 40ರಿಂದ 1000 ವರೆಗೆ. [illegible] ರುದ್ರಾಕ್ಷಿ [illegible] (ಮತ್ತೆ [illegible] 3 [illegible]— 1 [illegible], 1 [illegible], 1 [illegible] 3 [illegible].)

ಶಿರೋಮಣಿ ನಾರಾಯಣಾಚಾರ್ಯ,
52—15 ಚೌಖಂಬಾ, ಬೆನಾರಸ್ (ಸಿಟಿ)

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಿಮ್ಮ ಹಿಡಿಗೆ ಭರವಸೆಯುಳ್ಳದ್ದಾಗಿರುತ್ತದೆ.

ಎಲ್ಲಾ ಅಂಗಡಿಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—41 **ಬೆಂಗಳೂರು.**

ಶಾಂತಿ ಸಂಧಾನಗಳು.

ಪ್ಯಾರಿಸಿನಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಮಂತ್ರಿಗಳು ಶಾಂತಿಯ ಮಾತು ಕತೆಗಳನ್ನು ನಡೆಸುತ್ತಿರುವರು. ಇವರ ಪ್ರಕಾರ ಇಟಲಿಗೆ ಅಬಿಸೀನಿಯಾದಲ್ಲಿ ಆರ್ಥಿಕ ರಿಯಾಯಿತಿಗಳೂ, ಒಗಾಡೆನ್ ಪ್ರಾಂತ್ಯವೂ ಕೊಡಲ್ಪಡುವ ಸೂಚನೆ ಇದೆಯಂತೆ. ಫ್ರೆಂಚ್ ಪ್ರಧಾನ ಮಂತ್ರಿಯವರು ಶಾಂತಿಯ ಹೊಸ ಕರಡುಗಳನ್ನು ಸಮರ್ಥಿಸುವಂತೆ ಮುಸ್ಸೋಲಿನಿಯವರನ್ನು ಕೇಳಿಕೊಂಡಿರುವರಂತೆ.

ಸ್ವೀಡಿಷರು ಹಣವನ್ನು ಬಿಟ್ಟರು.

ಹಾಳಾದ ಜನರನ್ನು ಬಾಂಬುಗಳ ಹೊಡೆತದಿಂದ ತಪ್ಪಿಸಲು ಇಥಿಯೋಪಿಯ ಸ್ವೀಡಿಷರು ಆ ಹಣಗಳನ್ನು ಬಿಡಲು ನಿಶ್ಚಯಿಸಿರುವರೆಂದೂ, ಅದನ್ನು ಒಗಾಡನ್ನಿನಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ಕೊಡಲು ಮಾತ್ರ ಉಪಯೋಗಿಸಲಾಗುವುದೆಂದೂ ಇಥಿಯೋಪಿಯನ್ ಸರ್ಕಾರದವರು ಜನಾಂಗಗಳ ಕೂಟಕ್ಕೆ ತಿಳಿಸಿರುವರು.

ಹಿಂದೂ ದೇಶ.

ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯು ಕಳೆದ ತಿಂಗಳ ಅಂತ್ಯದಲ್ಲಿ ನಡೆಯಿತು. ಅದರ 44 ಸದಸ್ಯರುಗಳಲ್ಲಿ 27 ಮಂದಿ ಕಾಂಗ್ರೆಸ್ ಹುರಿಯಾಳುಗಳು ಚುನಾಯಿತರಾಗಿರುವರು.

ಅಬಿಸೀನಿಯಾ ದೇಶದ ಪದಚ್ಯುತ ದೊರೆಯಾಗಿದ್ದ ಲಿಜ್ ಯಾಸು ಎಂಬವರು ಕಳೆದ ಮಂಗಳವಾರ ಗಿಂದೋಲೆಟಿ ಎಂಬ ಊರಿನಲ್ಲಿ ಕಾಲವಾದರೆಂದು ಪ್ರಕಟವಾಗಿದೆ. 1916ನೇ ಇಸವಿಯಲ್ಲಿ ಇವರನ್ನು ರಾಜ್ಯಭ್ರಷ್ಟರನ್ನಾಗಿ ಮಾಡಿ ಕಳೆದ ಮೂರು ವರ್ಷಗಳಿಂದಲೂ ಬಂಧನದಲ್ಲಿಟ್ಟಿದ್ದರೆಂದೂ ಇವರ ಕಾಲದಲ್ಲಿ ಸರ್ಕಾರದ ಬಗೆ ತಪ್ಪಿ ರಾಜ್ಯದಲ್ಲಿ ಅಕ್ರಮಗಳು ಹುಟ್ಟಿ ಪ್ರಜೆಗಳಿಗೆ ವಿಶೇಷ ತೊಂದರೆಯಾಗುತ್ತಿದ್ದಿತೆಂದೂ ಹೇಳಲಾಗಿದೆ.

ಇಟಲಿ ದೇಶಕ್ಕೆ ಕೆಲವು ಸಾಮಾನುಗಳನ್ನು ರಫ್ತು ಮಾಡಕೂಡದೆಂದು ಹಲವು ಜನಾಂಗದವರು ಕಟ್ಟುಮಾಡಿಕೊಂಡಿದ್ದಾರಷ್ಟೆ. ಇದರಿಂದ ಅನೇಕ ವಿಧದಲ್ಲಿ ಇಟಲಿಯವರಿಗೆ ತೊಂದರೆಯಾಗಿದೆ. ಯಂತ್ರೋಪಕರಣಗಳನ್ನು ತಯಾರಿಸಲು ಕಬ್ಬಿಣವಿಲ್ಲದಂತಾಗಿದೆ. ಇದಕ್ಕಾಗಿ ಕಬ್ಬಿಣವನ್ನು ಕೇಳಿ ಬರಲು ಒಂದು ಸಿನಿಮಾ ಮಂದಿರದವನು ಟಿಕೇಟಿಗೆ ಹಣ ತೆಗೆದುಕೊಳ್ಳುವುದರ ಬದಲು ಇಷ್ಟು ಚೂರು ಕಬ್ಬಿಣ ಕೊಟ್ಟರೆ ಒಳಕ್ಕೆ ಬಿಡುತ್ತೇವೆಂದು ಹೇಳಿ ಕಬ್ಬಿಣ ಸೇರಿಸಿ ಅದನ್ನು ಸರ್ಕಾರದವರಿಗೆ ಒಪ್ಪಿಸುತ್ತಿದ್ದಾರೆಂದು ಹೇಳಲಾಗಿದೆ.

ಪತ್ರವ್ಯವಹಾರ.

[ವಾಚಕರು ಬರೆಯುವ ಅಭಿಪ್ರಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ]

ಕೊಡಗು ವಿದ್ಯಾಭಿವೃದ್ಧಿ ಫಂಡು.

ಈ ಫಂಡಿನ ಸೆಕ್ರೆಟರಿಯವರಾಗಿದ್ದ ಮೇ. ಕೆ. ಯಂ. ಬೆಳ್ಯಪ್ಪನವರೇ,

ನೀವು ಕಳೆದ ಜನವರಿ 18ನೇ ತಾರೀಕಿನ 'ಕೊಡಗು' ಪತ್ರಿಕೆಯಲ್ಲಿ ಮೇಲಿನ ಫಂಡಿಗೆ ನಮ್ಮ ಈ 'ಇನ್ಸ್ ಅಫಿಶಿಯಲ್ ಕುಗ್ಸ್ ಯೂನಿಯನ್' ಕೊಂಚ ಹಣ ಸಹಾಯ ಮಾಡಲಿಲ್ಲವೆಂದು ಬಹಿರಂಗವಾಗಿ ಬರೆದ ಲೇಖನವು ಪ್ರಕಟವಾಗಿ ಬಹಳ ದಿವಸವಾದರೂ ಸಹ ಅದು ನಿಮಗೆ ನೆನಪಿರಬಹುದು. ನಿಮ್ಮ ಈ ಪ್ರಕಟನೆಗೆ ನಮ್ಮ ಸಂಘದ ಸೆಕ್ರೆಟರಿಯವರು—ಅಂಥಾ ಲೇಖನವನ್ನು ಬರೆಯಲು ಕಾರಣವೇನೆಂದೂ ಮತ್ತು ಅದರ ಜವಾಬು 'ಕೊಡಗು' ಪತ್ರಿಕೆಯ ಮುಖಾಂತರವೇ ಕೊಡಬೇಕೆಂದೂ ತಾ. 18—5—35ರಲ್ಲಿ ಕೇಳಿದರೂ ಸಹ ನೀವು ಅದನ್ನು ಗಮನಿಸದೆ ಮೌನಿಗಳಾಗಿ ಮನಸ್ಸಾಕ್ಷಿಯನ್ನು ತಾಳಿದ ವಿಷಯಕ್ಕೆ ಈ ಸಂಘವು ವಿಷಾದಿಸುತ್ತದೆ.

1934ನೇ ಇಸವಿಯಲ್ಲಿ ನಿಮ್ಮ ಸಂಘಕ್ಕೆ ದ್ರವ್ಯ ಸಹಾಯ ಮಾಡಬೇಕೆಂದು ಕಳುಹಿಸಿದ ನಿಮ್ಮ ವಿನಂತಿಗೆ ನಮ್ಮ ಸಂಘದ ಸೆಕ್ರೆಟರಿಯವರು ಕಾಗದ ನಂಬರು c v/v/27 ತಾರೀಕು 24—9—34ರಲ್ಲಿ 'Your requisition will be borne in mind' ಎಂದು ಬರೆದ ಸಂಗತಿಯನ್ನು ಮರೆತು ನಮ್ಮ ಸಂಘವು ನಿಮ್ಮ ಕೋರಿಕೆಯನ್ನು ದ್ವೇಷದ ಅಭಿಪ್ರಾಯದಿಂದಲೋ, ಅಥವಾ ಬೇರೆ ಯಾವುದಾದರೂ ಕಾರಣಗಳಿಂದಲೋ ನಿರಾಕರಿಸಿದಂತೆ ನೀವು ಅಂಥಾ ವಿಷಯವನ್ನು ಪತ್ರಿಕೆಯ ಮೂಲಕ ಬರೆದದ್ದನ್ನು ಪರ್ಯಾಲೋಚಿಸಿದರೆ ನಿಮ್ಮದು ಅದೆಂಥಾ ಗೌರವ ಎಂಬುದನ್ನು ತಿಳಿಯಲಾರೆವು. 'ಇದ್ದಷ್ಟು ಹೋಯಿತು ಮುದ್ದಿನ ಗುಣದಿಂದ' ಎಂಬಂತೆ ಕೊಂಚ ಸಹಾಯ ಮಾಡಬೇಕೆಂದಿದ್ದ ಕಾಂಕ್ಷೆಯು ಹಿಂದುಳಿದಂತಾಯಿತು. ನಿಮ್ಮ ಲೇಖನವನ್ನು ಓದಿ ನಾವೆಲ್ಲರೂ ವಿಸ್ಮಯಗೊಂಡೆವು. ನೀವು ವಿನಂತಿಯನ್ನು ಕಳುಹಿಸಿದ ಬೇರೆ ಕಡೆಯ ಎಷ್ಟೋ ಕೂಟ ಮತ್ತು ಸಂಘಗಳು ನಿಮ್ಮ ಧ್ಯೇಯ ಪ್ರತಿಜ್ಞೆಗೆ ಮೆಚ್ಚಿ ಹಣ ಸಹಾಯ ಮಾಡಿರಬಹುದು. ಆದರೆ ನಮ್ಮ ಸಂಘದಂತೆ ಮೇಲೆ ಸೂಚಿಸಿದ ಕಾರಣಗಳಿಂದ ಧನ ಸಹಾಯವನ್ನು ಬೇರೆ ಸಂಘಗಳು ಮಾಡದಿದ್ದರೆ 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸುವುದು ನ್ಯಾಯವಲ್ಲವೆಂಬುದು ನಿಮ್ಮ ಮನಸ್ಸಿಗೆ ಇಷ್ಟರಲ್ಲಿ ಗೋಚರವಾಗಿರಬಹುದು. 'ಅನ್ನ ಸಂಪಿಗೆ ಅಪ್ಪಂದ ಎಪ್ಪೆ ಕೊಟ್ಟ್ ಕೂಡು' ಎಂಬ ನಾಣ್ಣುಡಿಯಂತೆ ನೀವು ಪತ್ರಿಕೆಯ ಮೂಲಕ ಅನಾವಶ್ಯಕವಾದ ವಿಷಯಗಳನ್ನು ಪ್ರಚುರಪಡಿಸುವುದರ ಬದಲು ನ್ಯಾಯವಾದ ದಾರಿಯನ್ನು ಅವಲಂಬಿಸಿದ್ದರೆ ನಿಮ್ಮ ಫಂಡಿಗೆ ಸ್ವಲ್ಪ ಹಣ ಸಹಾಯ ಮಾಡಲು ನಮ್ಮ ಸಂಘವು ಹಿಂಜರಿಯುತ್ತಿರಲಿಲ್ಲ.

'ಇನ್ಸ್ ಅಫಿಶಿಯಲ್ ಕುಗ್ಸ್ ಯೂನಿಯನ್' — ಯಂ. ಬಿ. ಕುಶಾಲಪ್ಪ, (ಗೌ. ಕಾರ್ಯದರ್ಶಿ.)

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್, ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೋಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸ್ಸು ಕೊಡಲ್ಪಟ್ಟಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂಧಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಸ್ಪೂರ್ತಿ ನಂಬಿರಿ.
ಪತಿ ಪತ್ನಿಯರು ಮತ್ತು ವ್ಯಾಪಾರಸ್ಥರು ಪಾಲುಗಾರರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂಚಿತ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿಡಿರಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರತರದ ಕಮಿಶನ್ ಪದ್ಧತಿಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—**ಬಿ. ಎಸ್. ಐಯ್ಯಪ್ಪ,**
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ.

26—1

“501 ಮಾರ್ಕಿನ ಸಾಬೂನನ್ನು ಉಪಯೋಗಿಸತೊಡಗಿದಂದಿನಿಂದ ಬಟ್ಟೆ ಒಗೆಯುವ ದಿನಗಳು ಆನಂದಮಯವಾಗಿವೆ.”

501 Soap ಹೆಚ್ಚು ನೊರೆ, ಹೆಚ್ಚು ಬಾಳಿಕೆ. ಕ್ರಯ ಅತೀ ಕಡಮೆ!

ಟಾಟಾ ಕಂಪೆನಿಯ ಮಾರಾಟದ ಮಳಿಗೆ,
೧. ಸೌತ್ ಪರೇಡ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಕರು—ಟಾಟಾ ಆಯಿಲ್ ಮಿಲ್ಸ್, ಕಂಪೆನಿ ಲಿಮಿಟೆಡ್, ಬೊಂಬಾಯಿ, ಮತ್ತು ಟಾಟಾಪುರ.

52—39 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಗಣಪತಿ, ಸಂತೆಪೇಟೆ, ಮೈಸೂರು.

ಸೆಂಟ್ರಲ್ ಬ್ಯಾಂಕ್ ಜನರಲ್ ಮೀಟಿಂಗ್ ನೋಟೀಸು.

ಈ ಬ್ಯಾಂಕಿನ ಜನರಲ್ ಮೀಟಿಂಗು ತಾ. 21—12—35 ನೇ ಶನಿವಾರ ದಿನ ಬೆಳಗ್ಗೆ 11 ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಬಳಿ ಇರುತಕ್ಕ ಚಪ್ಪರದಲ್ಲಿ ಮದ್ರಾಸು ಪ್ರಾವಿನ್ಶಿಯಲ್ ಕೋ-ಆಪರೇಟಿವ್ ಬ್ಯಾಂಕಿನ ವೈಸ್ ಪ್ರೆಸಿಡೆಂಟರು ಮತ್ತು ಅಗ್ರಸ್ಥಲರಾದ ಶ್ರೀಮಾನ್ ಕೆ. ಭಾಷ್ಯಂ ಅಯ್ಯಂಗಾರ್ ಬಿ. ಎ. ಬಿ. ಎಲ್ ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಬೆಳಗ್ಗೆ 11 ಗಂಟೆಗೆ ಸರಿಯಾಗಿ ಸ್ವಾಗತ ಅಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣಗಳಿಂದ ಮೀಟಿಂಗು ಪ್ರಾರಂಭವಾಗುವುದರಿಂದ ಎಲ್ಲರೂ ಸಮಯಕ್ಕೆ ಸರಿಯಾಗಿ ಬರಬೇಕಾಗಿ ಕೋರಲಾಗಿದೆ.

ಆಲೋಚನೆಗೆ ವಿಷಯಗಳು.

1. ಕಳೆದ ಜನರಲ್ ಮೀಟಿಂಗಿನ ಪ್ರೋಸಿಡಿಂಗ್ಸ್ ಓದುವುದು.
2. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚುವಿಕೆ.
3. 1935—36ನೇ ಸಂವತ್ಸರದ ಬಡ್ಜೆಟ್.
4. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ.
5. ಇತರ ಠರಾವುಗಳು.

ಯಂ. ಯಂ. ಬೆಳ್ಯಪ್ಪ
(ಗೌರವ ಕಾರ್ಯದರ್ಶಿ)

ಕೊಡಗು ಸಂಪ್ರದಾಯ ಇಲಾಖೆ.

ಹುತ್ತರಿ ಹಬ್ಬದ ಮುಹೂರ್ತ ಪಟ್ಟಿ.

ಸನ್ 1935ನೇ ಇಸವಿ ಡಿಸೆಂಬರ್ ತಾರೀಕು 8 ನೇ ಆದಿತ್ಯವಾರ ದಿನ ಕೃತ್ತಿಕಾ ನಕ್ಷತ್ರದಲ್ಲಿ ಪಾಡಿ ಸುಬ್ರಾಯ (ಇಗ್ಗುತಪ್ಪ) ದೇವರ ಕಟ್ಟು ಹಬ್ಬವಾಗುತ್ತೆ.

ಅದೇ ಡಿಸೆಂಬರ್ ತಾ 9ನೇ ಸೋಮವಾರ ದಿನ ರೋಹಿಣಿ ನಕ್ಷತ್ರದಲ್ಲಿ ದೇವ ಪೊಳೆದು. ಆ ದಿನ ಸಾಯಂಕಾಲ 9 ಗಂಟೆಗೆ ನೆರೆಕಟ್ಟುವದು, 10 ಗಂಟೆಗೆ ಕದಿರು ಕೊಯ್ಯುವದು, 11 ಗಂಟೆಗೆ ಊಟಮಾಡುವ ಶುಭ ಮುಹೂರ್ತ.

Sealed tenders for the hiring out of calves, to the Vaccine Depot at Mercara for one year commencing from 1st April 1936 to 31st March 1937 will be received at the Civil Surgeon's Office, Mercara upto 11 A.M. on Friday the 17th January 1936

For terms and other particulars apply to the Vaccine Inspector or the Civil Surgeon's Office at Mercara.

R. D. MacRae,
Captain I. M. S.,
Civil Surgeon Coorg.

ಕೊಡಗು ಸಿವಿಲ್ ಸರ್ಜನ್ ಆಫೀಸು,
ಮಡಿಕೇರಿ, ತಾ. 28–11–35.

ನೋಟೀಸ್.

1936ನೇ ಏಪ್ರಿಲ್ 1ರಿಂದ 1937ನೇ ಮಾರ್ಚ್ 31ರ ವರೆಗೆ ಒಂದು ವರ್ಷ ಮಡಿಕೇರಿ ವ್ಯಾಕ್ಸಿನ್ ಡಿಪೋಗೆ ಕರುಗಳನ್ನು ... ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ 1936ನೇ ಇಸವಿ ಜನವರಿ ತಾ 17ನೇ ಶುಕ್ರವಾರ ಬೆಳಿಗ್ಗೆ 11 ಗಂಟೆ ವರೆಗೆ ... [illegible]

ಶರತ್ತುಗಳು ಮತ್ತು ವಿವರಗಳಿಗೆ ವ್ಯಾಕ್ಸಿನ್ ಇನ್ಸ್‌ಪೆಕ್ಟರ್ ... ಮಡಿಕೇರಿ ಸಿವಿಲ್ ಸರ್ಜನರ ಆಫೀಸಿಗೆ ... [illegible]

ಆರ್. ಡಿ. ಮೆಕ್ರೆ,
ಕ್ಯಾಪ್ಟನ್, ಐ. ಎಂ. ಎಸ್.
ಸಿವಿಲ್ ಸರ್ಜನ್, ಕೊಡಗು

2–1



"501 ಬಾರ್‌ನ ಸಾಬೂನನ್ನು ಉಪಯೋಗಿಸತೊಡಗಿದಂದಿನಿಂದ ಬಟ್ಟೆ ಒಗೆಯುವ ದಿನಗಳು ಅನಾಯಾಸವಾಗಿವೆ."

TOMCO

501 Soap

ಬೆಳ್ಳಗೆ ಕೊಳೆ... ಶೀಘ್ರ ... [illegible]

... ಸಂಟ್ರಲ್ ಸ್ಟ್ರೀಟ್, ಬೆಂಗಳೂರು ... [illegible]

... ಟಾಟಾ ಆಯಿಲ್ ಮಿಲ್ಸ್, ಕಂಪನಿ ಲಿಮಿಟೆಡ್, ... ಮುಂಬಯಿ ... [illegible]

52–19. ... ಸಂತೇಪೇಟೆ, ಮೈಸೂರು.

FRASER'S

FOOTWE...
have
the HALLMA...
distinctive
upto-da...
fine work...
best

AMAZING VALUE FO...

HARDWEAR FO...
for estate and m...

G. W. FRA...

1–9

ಕೊಡಗು

ನವಂಬರ್ ತಾ. ೨೯ನೇ ಶುಕ್ರವಾರ ೧೯೩೫.

ಈಜಿಪ್ಟಿನಲ್ಲಿ ಗಲಭೆ.

ದಕ್ಷಿಣ ಆಫ್ರಿಕಾ, ಇಂಡಿಯಾ ಮತ್ತು ಐರ್ಲೆಂಡಿನಲ್ಲಿ ಬಲವಾದ ಗಲಭೆಗಳುಂಟಾಗದೆ ಬ್ರಿಟಿಷ್ ಸರ್ಕಾರದವರು ಆಲ್ಲಿಯ ಜನರ ಕೋರಿಕೆಗಳನ್ನು ನಡೆಸಿಕೊಡಲು ಯತ್ನಿಸಿರುವುದಿಲ್ಲ. ಕೆಲವು ದಿವಸಗಳ ಹಿಂದೆ ಪರರಾಷ್ಟ್ರಗಳ ಸೆಕ್ರಟರಿಯವರಾದ ಸರ್ ಸ್ಯಾಮುವೆಲ್ ಹೋರರು ಲಂಡನಿನಲ್ಲಿ ಈಜಿಪ್ಟನ್ನು ಕುರಿತು ಭಾಷಣ ಮಾಡಿದಾಗ್ಯೆ ಈಜಿಪ್ಟಿನ ಮುಖ್ಯ ಪಟ್ಟಣವಾದ ಕೈರೋದಲ್ಲಿ ದಂಗೆಗಳುಂಟಾಗುವವೆಂದು ಸ್ವಲ್ಪವೂ ಯೋಚಿಸಿರಲಿಲ್ಲ. ಈಜಿಪ್ಟಿನಲ್ಲಿ ಬಹು ಮತ ಪಕ್ಷವೇ ವಾಫ್ಡ್ ಪಾರ್ಟಿ. ಈಗ ಒಂದು ವರ್ಷದಿಂದ ಆ ದೇಶದಲ್ಲಿ ಜಾರಿಯಲ್ಲಿದ್ದ ನಿರಂಕುಶಸ್ವಭಾವವಾದ ಸರ್ಕಾರ ಪದ್ಧತಿಯನ್ನು ವಜಾ ಮಾಡಿ ಟ್ಯೆಫಿಕ್ ನೆಸ್ಸಿಮ್ ಪಾಷಾರವರು ಬ್ರಿಟಿಷರ ಬೆಂಬಲದಿಂದ ಪ್ರಧಾನ ಮಂತ್ರಿತ್ವವನ್ನು ಕೈಕೊಂಡು ಅಧಿಕಾರವನ್ನು ನಡೆಸುತ್ತಾ ಬಂದಿರುವರು. ಇವರು 1923ರ ಆಡಳಿತ ರಚನೆಯನ್ನು ಬೇಗನೆ ಜಾರಿಗೆ ತರುವರೆಂಬ ಭರವಸೆಯ ಮೇಲೆ ವಾಫ್ಡ್ ಪಾರ್ಟಿಯ ಮುಂದಾಳಾದ ನಹಾಸ್ ಪಾಷಾರವರು ಇವರ ಮಂತ್ರಿ ಮಂಡಳಿಯೊಂದಿಗೆ ಸಹಕರಿಸುತ್ತಾ ಬಂದರು. ಆದರೆ ನೆಸ್ಸಿಮ್ ಪಾಷಾರವರು ತಮ್ಮ ಭಾಷೆಯನ್ನು ನಡೆಸಿಕೊಡಲು ಪ್ರಯತ್ನಪಡಲಿಲ್ಲ. ಆದುದರಿಂದ ರಾಷ್ಟ್ರೀಯ ಪಕ್ಷದವರಿಗೆ ಬಹಳ ಅತೃಪ್ತಿ ಉಂಟಾಗಿ ವಾಫ್ಡ್ ಪಾರ್ಟಿಯವರು ಮಂತ್ರಿ ಮಂಡಳಿಯಿಂದ ತಮ್ಮ ಸಹಕಾರವನ್ನು ಹಿಂತೆಗೆಯಬೇಕಾಯಿತು. ಇದರ ಪರಿಣಾಮವಾಗಿಯೇ ಕೈರೋದಲ್ಲಿ ಗಲಭೆಗಳುಂಟಾದುದಾಗಿದೆ. ಕೆಲವು ದಿವಸಗಳ ಹಿಂದೆ ಕೈರೋದಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಿದಾಗ್ಯೆ ಜನರು ಬ್ರಿಟಿಷರ ಮೇಲೆ ತಮಗಿದ್ದ ವಿರೋಧಭಾವವನ್ನು ಪ್ರಕಟಿಸಿದರು. ಅಧಿಕಾರಿಗಳು ಅದನ್ನು ಅಡಗಿಸಲು ಯತ್ನಿಸಿದಾಗ್ಯೆ ವಿದ್ಯಾರ್ಥಿಗಳು ಅತೃಪ್ತಿಯ ಪ್ರದರ್ಶನಕ್ಕೆ ಹೆಚ್ಚಾಗಿ ಸೇರಿದರು. ಅದು ಪಟ್ಟಣದಲ್ಲೆಲ್ಲಾ ಹಬ್ಬಿತು. ಪೋಲೀಸಿನವರೂ, ಮಿಲಿಟರಿಯವರೂ ವಿದ್ಯಾರ್ಥಿಗಳ ಮೆರವಣಿಗೆಯ ಮೇಲೆ ಗುಂಡು ಹಾರಿಸಿದಲ್ಲಿ ಕೆಲವರು ಸತ್ತರು(?), ಹಲವರಿಗೆ ಗಾಯಗಳಾದವು. ಆವಕಾಶದ(?) ಎಲ್ಲಾ ರಾಜಕೀಯ ಪಂಗಡಗಳ ಸಹಾನುಭೂತಿಯು ವಿದ್ಯಾರ್ಥಿಗಳ ಚಳವಳದ ಕಡೆಗೆ ಇರುವುದು. ಈ ಸಂಬಂಧ ಜನಾಂಗಗಳ ಕಡೆಯಿಂದ ಶಾಂತಿ [illegible] ಪೆಟ್ಟು(?) [illegible] ಕಳುಹಿಸಲ್ಪಟ್ಟಿವೆ.

ಈಗಿನ ಮುಖ್ಯ ಮಂತ್ರಿಯಾಗಿರುವ ನೆಸ್ಸಿಮ್ ಪಾಷಾರವರು ಪರಕೀಯ(?) ಮಂತ್ರಿಗಳು. ಅವರು ಪಬ್ಲಿಕಿನವರ ಅಭಿಪ್ರಾಯಗಳಿಗೆ, ಪತ್ರಿಕೆಗಳ ಟೀಕೆಗಳಿಗಾಗಲೀ ಗಮನಕೊಡುವವರಲ್ಲ. ತನ್ನ ಧೋರಣೆಯನ್ನು ಪಬ್ಲಿಕಿನವರಿಗೆ ತಿಳಿಸುವುದೇ ಇಲ್ಲವು; ಕೆಲವು ಸಮಯ ತನ್ನ ಜೊತೆ ಕೆಲಸಗಾರರಿಗೂ ಅದು ತಿಳಿಯಗೊಡಿಸುವದಿಲ್ಲ. ಅವರು ಪಬ್ಲಿಕ್ ಭಾಷಣಗಳನ್ನೇ ಮಾಡುವದಿಲ್ಲ. ಅದರೂ ಕೂಡ ದೇಶದ ಏಳಿಗೆಗಾಗಿ ಜನರಲ್ಲಿ ಹೊಸ ಹೊಸ ಸ್ವಾತಂತ್ರ್ಯ ಸ್ಫೂರ್ತಿದಾಯಕವಾದ(?) ಅಭಿಪ್ರಾಯಗಳನ್ನು ಅಲಕ್ಷ್ಯ ಮಾಡಲು ಅವರಿಗೆ ಸಾಧ್ಯವಿಲ್ಲ. ಅವರ ಒಂದು ವರ್ಷದ ಆಡಳಿತವು ಈಜಿಪ್ಟಿನಲ್ಲಿ ಶಾಂತತೆಯನ್ನು ಕಾಪಾಡಿರುವುದು ನಿಜ. ಆದರೆ ಸ್ಥಿರವಾದ ಸರ್ಕಾರವು ಸ್ವರಾಜ್ಯಕ್ಕಿಂತ ಉತ್ತಮವಾದದ್ದಲ್ಲವೆಂಬುದೂ, ರಾಜಕೀಯ ಶಾಂತಿಯು ರಾಜಕೀಯ ಅಭಿವೃದ್ಧಿಗಿಂತ ಮೇಲಾದದಲ್ಲವೆಂಬುದೂ ಒಪ್ಪುವವರಲ್ಲಿ ನೆಸ್ಸಿಮ್ ಪಾಷಾರವರು ಒಬ್ಬ ಪ್ರಮುಖರಾಗಿರುವರು. ಈಜಿಪ್ಟು ಈಗಿನ ಸ್ಥಿತಿಯಿಂದ ಸಮಾಧಾನಗೊಂಡಿಲ್ಲ. ಪ್ರಜಾ ಜವಾಬ್ದಾರಿಯಿಲ್ಲದ ಸರ್ಕಾರದ ಮೇಲೆ ಅಲ್ಲಿಯ ಜನರಿಗೆ ಮೋಹವಿಲ್ಲ. ಆದುದರಿಂದ ಈಗಿನ ಸರ್ಕಾರದ ವಿರೋಧ ಪಕ್ಷದವರು ಮಾತ್ರವಲ್ಲ ಪ್ರಧಾನ ಮಂತ್ರಿಯವರೂ ಕೂಡ ಶಾಸನಾನುಸಾರ ಸರ್ಕಾರ ಪದ್ಧತಿಯನ್ನು ಪುನಃ ಜಾರಿಗೆ ತರಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿರುವುದಾಗಿದೆ. ಈಗಿನ ಮಂತ್ರಿ ಮಂಡಳಿಯವರೂ, ಅರಸರೂ 1923ರ ಆಡಳಿತ ರಚನೆಯನ್ನು ಜಾರಿಗೆ ತರಲು ಬ್ರಿಟಿಷ್ ಸರ್ಕಾರದವರು ಒಪ್ಪದಿದ್ದರೆ 1920ರ ರಚನೆಯಂತೆಯಾದರೂ ಕೂಡಲೆ ಆಡಳಿತ ನಡೆಸಲು ಪ್ರಾರಂಭಿಸಬೇಕೆನ್ನುತ್ತಿರುವರು. ದೇಶದ ದೊಡ್ಡ ಪಾರ್ಟಿಯಾದ ವಾಫ್ಡ್ ಪಕ್ಷದವರು 1923ರ ರಚನೆಯನ್ನೇ ಜಾರಿಗೆ ತರಬೇಕೆನ್ನುತ್ತಿರುವರು. ಲಿಬರಲ್ ಮತ್ತು ಇತರ(?) ಪಾರ್ಟಿಗಳೂ ಪಾರ್ಲಿಮೆಂಟ್ ಸರ್ಕಾರವನ್ನೇ ಸ್ಥಾಪಿಸಬೇಕೆಂಬುವುದಕ್ಕೆ ಪೂರ್ಣ ಬೆಂಬಲಿಸುತ್ತಿರುವರು. ಅಲ್ಲಿಯ ಪಾರ್ಟಿಗಳೊಳಗೆ ಅಲ್ಪ ಸ್ವಲ್ಪ ಭಿನ್ನಾಭಿಪ್ರಾಯಗಳಿದ್ದರೂ ಅವರೆ ದೇಶವು ರಾಜಕೀಯ ವಿಚಾರದಲ್ಲಿ ಮುಂದುವರಿಯಬೇಕೆನ್ನುವುದರಲ್ಲಿ ಎಲ್ಲರೂ ಒಪ್ಪಿದವರಾಗಿದ್ದಾರೆ. ಆದುದರಿಂದ ಎಲ್ಲದಕ್ಕಿಂತಲೂ ಈಗಿನ ನೆಸ್ಸಿಮ್ ಪಾಷಾರವರ ಕೋರಿಕೆಗಳನ್ನು ಬ್ರಿಟಿಷ್ ಸರ್ಕಾರದವರು ಕೂಡಲೆ ಸಲ್ಲಿಸಿಕೊಡಬೇಕಾಗಿದೆ. ಈಜಿಪ್ಟ್ ನೆರೆ ರಾಜ್ಯವಾದ ಅಬಿಸೀನಿಯಾದಲ್ಲಿ ಯುದ್ಧವು ನಡೆಯುತ್ತಿರುವ ಈ ಸಮಯದಲ್ಲಿ ಈಜಿಪ್ಟಿನಲ್ಲಿ ಅಸಮಾಧಾನಕ್ಕೆ ಎಡೆಕೊಡುವುದು ರಾಜನೀತಿಯಾಗಲಾರದು. ಈಗ ಈಜಿಪ್ಟಿನವರ ಅತೃಪ್ತಿಯು ಗಲಭೆಗಳಿಗೆ ಗಮನಕೊಡದಿದ್ದರೆ ಅವರಿಂದುಂಟಾಗುವ ಕಠಿಣ ಪರಿಣಾಮಗಳಿಗೆ ಬ್ರಿಟಿಷ್ ಸರ್ಕಾರದವರೇ ಜವಾಬ್ದಾರರಾಗಬೇಕಾಗುವುದು. ಆದುದರಿಂದ ಬ್ರಿಟಿಷ್ ರಾಜಕೀಯ ಪಟುಗಳು ಈಜಿಪ್ಟಿನವರ ನ್ಯಾಯವಾದ ಕೋರಿಕೆಗಳನ್ನು ನಡೆಸಿಕೊಡಲು ತಡಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ.

"ಕೊಡಗು" ಲಿಮಿಟೆಡ್ ಕಂಪೆನಿಯ ವಾರ್ಷಿಕ ಮೀಟಿಂಗು.

'ಕೊಡಗು ಲಿಮಿಟೆಡ್' ಕಂಪೆನಿಯ ಶೇರುದಾರರ 13 ನೇ ವಾರ್ಷಿಕ ಜನರಲ್ ಮೀಟಿಂಗು ತಾ. 23—11—35 ರಲ್ಲಿ ಮೇರಾಜಪೇಟೆ ಬಂಗಾಳ ಬೀದಿಯ ಆಂಜನೇಯ(?) ಹಾಲ್‌ನಲ್ಲಿ ನಡೆಯಿತು. ಕಂಪೆನಿಯ ಡೈರೆಕ್ಟರುಗಳ ಬೋರ್ಡಿನ ಪ್ರೆಸಿಡೆಂಟರಾದ ಮ. ರಾ. ಜೆ. ಯಂ. ಮಂಜುನಾಥಯ್ಯನವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

1. ಕಳೆದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. 1934—35 ನೇ ವರ್ಷದ ಡೈರೆಕ್ಟರುಗಳ ವರದಿ, ಆದಾಯ ವೆಚ್ಚ, ಬ್ಯಾಲೆನ್ಸ್‌ಶೀಟ್, ಲಾಭ ನಷ್ಟಗಳ ಪಟ್ಟಿ ಮತ್ತು ಆಡಿಟರುಗಳ ಸರ್ಟಿಫಿಕೇಟ್—ಇವುಗಳನ್ನು, ಮೊದಲೇ ಶೇರುದಾರರಿಗೆ ಕಳುಹಿಸಿದ್ದ ಕಾರಣ, ಓದಿದಂತೆ ತೆಗೆದುಕೊಳ್ಳಲಾಯಿತು.

ನಂತರ ಅವುಗಳನ್ನು ಕುರಿತು ಕೆಲವು ಪ್ರಶ್ನೋತ್ತರಗಳು ಆದವು. ಆ ಮೇಲೆ ಸ್ವಲ್ಪ ಚರ್ಚೆ ನಡೆಯಿತು.

3. 1934—35 ನೇ ವರ್ಷದ ಡೈರೆಕ್ಟರುಗಳ ವರದಿ, ಆದಾಯ ವೆಚ್ಚ, ಬ್ಯಾಲೆನ್ಸ್‌ಶೀಟು, ಲಾಭ ನಷ್ಟಗಳ ಪಟ್ಟಿಗಳನ್ನು ಸ್ವೀಕರಿಸಬೇಕೆಂದು(?) ಮ. ರಾ. ಮಂಡೆಯಂಡ ಪೂಣ್ಣಪ್ಪನವರು ಸೂಚಿಸಿದರು. ಮ. ರಾ. ಅಜ್ಜಮಾಡ ಮಾದಪ್ಪನವರು ಅನುಮೋದಿಸಿದರು. ಸೂಚನೆಯು ಸರ್ವಸಮ್ಮತದಿಂದ ಮಂಜೂರಾಯಿತು.

4. 1929—1930 ಮತ್ತು 1930—1931 ಈ ಎರಡು ವರ್ಷಗಳಲ್ಲಿ ವಸೂಲಿಯಾಗದೆ ಬಾಕಿ ಇರುವ ಚಂದಾ ಮೊಬಲಗನ್ನು ವಜಾಮಾಡಬೇಕೆಂದು ಮ. ರಾ. ಪಂಡ ಕಾರ್ಯಪ್ಪನವರು ಸೂಚಿಸಿದ್ದನ್ನು ಮ. ರಾ. ಕೆ. ಸಿ. ಕುಂಬಯ್ಯನವರು ಅನುಮೋದಿಸಲಾಗಿ, ಅದನ್ನು ವಿರೋಧವಿಲ್ಲದೆ ಪಾಸಾಯಿತು.

5. ಮ. ರಾ. ಬಿ. ಲಕ್ಷ್ಮಣನವರನ್ನು 1935—36 ನೇ ವರ್ಷಕ್ಕೆ ಕಂಪೆನಿಯ ಆಡಿಟರಾಗಿ ನೇಮಿಸಬೇಕೆಂದು ಮೆ. ಕೊಳ್ಳಮಾಡ ಕುಂಬಯ್ಯನವರು ಸೂಚಿಸಿದ್ದನ್ನು ಮೆ. ನಲ್ಲಮಕ್ಕಳ ಅಚ್ಚಯ್ಯನವರು ಅನುಮೋದಿಸಿದರು. ಗೊತ್ತುವಳಿಯು ಒಮ್ಮತದಿಂದ ಮಂಜೂರಾಯಿತು.

6. 1934—35 ನೇ ವರ್ಷಕ್ಕೆ ಆಡಿಟರವರಿಗೆ ರೂ. 50 ಫೀಸು ಕೊಡಬೇಕೆಂದು ಮ. ರಾ. ಆರ್. ಎಂ. ಕಾಶಯ್ಯನವರು ಸೂಚಿಸಿದರು. ಮ. ರಾ. ಮಂಡೆಯಂಡ ಕುಟ್ಟಪ್ಪನವರು ಅನುಮೋದಿಸಿದರು. ವಿರೋಧವಿಲ್ಲದೆ ಪಾಸಾಯಿತು.

7. ಈ ಮೀಟಿಂಗಿನಲ್ಲಿ ರಿಟಯರಾದ ಐದು ಡೈರೆಕ್ಟರುಗಳ ಸ್ಥಳಗಳಿಗೆ ಮ. ರಾ. ಗಳಾದ ಕೆ. ಸಿ. ಕುಂಬಯ್ಯನವರು, ಯಂ. ಯಂ. ಸಿದ್ದೇಶ್ವರವರು(?), ಕಾಡೆಮಂಡ ಕುಶಾಲಪ್ಪನವರು, ಉದಿಯಂಡ ಅಣ್ಣಯ್ಯನವರು ಮತ್ತು ಆರ್. ಯಂ. ಕಾಶಯ್ಯನವರು ಸರ್ವಸಮ್ಮತದಿಂದ ಡೈರೆಕ್ಟರುಗಳಾಗಿ ಆರಿಸಲ್ಪಟ್ಟರು.

8. ಅನುಕ್ರಮವಾಗಿ ನಾಲ್ಕು ಮೀಟಿಂಗುಗಳಿಗೆ ಹಾಜರಾಗದ ಡೈರೆಕ್ಟರುಗಳನ್ನು ವಜಾಮಾಡಬೇಕೆಂಬ ಠರಾವನ್ನು ಮೆ. ನಲ್ಲಮಕ್ಕಳ ಅಚ್ಚಯ್ಯನವರು ಸಭೆಯ ಮುಂದಿಟ್ಟರು. ಇದನ್ನು ಮೆ. ಮಂಡೆಯಂಡ ಪೊನ್ನಪ್ಪನವರು ಅನುಮೋದಿಸಲಾಗಿ ಒಮ್ಮತದಿಂದ ಮಂಜೂರಾಯಿತು.

9. ರಿಟಯರಾದ ಡೈರೆಕ್ಟರುಗಳಿಗೆ ಧನ್ಯವಾದಗಳನ್ನೂ, ಈ ದಿನ ಮೀಟಿಂಗು ನಡೆಸಲು ಹಾಲನ್ನು ಬಿಟ್ಟುಕೊಟ್ಟದ್ದಕ್ಕೆ ಆಂಜನೇಯ(?) ಹಾಲ್‌ನ ಅಧಿಕಾರಿಗಳಿಗೆ ವಂದನೆಗಳನ್ನೂ ಅರ್ಪಿಸಬೇಕೆಂದು ಮ. ರಾ. ಸಿ. ಯಸ್. ನಾರಾಯಣನವರು ಸೂಚಿಸಿದ್ದಕ್ಕೆ ಸಭಿಕರೆಲ್ಲರೂ ಸಮ್ಮತಿಸಿದರು.

ಅಧ್ಯಕ್ಷರಿಗೆ ವಂದನೆಗಳೊಡನೆ ಸಭೆಯು ಬರಖಾಸ್ತಾಯಿತು.

ಜೆ. ಯಂ. ಮಂಜುನಾಥಯ್ಯ,
(ಅಧ್ಯಕ್ಷರು.)

23—11—'35

ಕೊಡಗು ಕಾಂಗ್ರೆಸು ಮೀಟಿಂಗು.

ವೀರಾಜಪೇಟೆಯಲ್ಲಿ ಈ ತಾ. 23—11—35ರಲ್ಲಿ ನಡೆದ ವಾರ್ಷಿಕ ಜನರಲ್ ಮೀಟಿಂಗಿನ ನಡವಳಿಗಳು.

ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯ ಜನರಲ್ ಮೀಟಿಂಗು ವೀರಾಜಪೇಟೆಯಲ್ಲಿ 23—11—35 ನೇ ಶನಿವಾರ [illegible] ಗಂಟೆಗೆ ಮೆ. ಕೊಳ್ಳಮಾಡ ಕುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

1 ಕಾರ್ಯಕ್ರಮ ಪಟ್ಟಿಯ ಪ್ರಕಾರ ಕಾರ್ಯಕ್ರಮವನ್ನು ಕೈಕೊಳ್ಳುವದರ ಮೊದಲು ಕೊಡಗು ಕಾಂಗ್ರೆಸಿನ ಒಬ್ಬ ವೀರ ಸತ್ಯಾಗ್ರಹಿಯಾಗಿದ್ದ ಶ್ರೀ ಮಂಡೇಪಂಡ ಕಾರ್ಯಪ್ಪನವರ ಅಕಾಲ ನಿಧನದ ಬಗ್ಗೆ ದುಃಖವನ್ನು ಸೂಚಿಸುತ್ತಾ ಶ್ರೀಯುತ ಮೆ. ಅಜ್ಜಿಕುಟ್ಟಿರ ಚಿಣ್ಣಪ್ಪನವರು ಮಂಡಿಸಿದ ಠರಾವನ್ನು ಸಭಿಕರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವಾಗಿ ಮೃತರ ಆತ್ಮಕ್ಕೆ ಶಾಂತಿಯನ್ನು ಬಯಸಿ ಪ್ರಾರ್ಥನೆಯನ್ನು ಸಲ್ಲಿಸುವದಾಗಿ ಠರಾಯಿಸಿತು.

2 ಕಾರ್ಯಕ್ರಮ ಪಟ್ಟಿಯ ಮೇರೆ ಕಾಂಗ್ರೆಸು ಸುವರ್ಣ ಮಹೋತ್ಸವವನ್ನು ಆಚರಿಸುವ ವಿಷಯದ ಸಂಗತಿಗಳನ್ನು ಚರ್ಚಿಸಲಾಗಿ ಅಖಿಲ ಭಾರತ ಕಾಂ. ಕ. ಯವರು ಪ್ರಕಟಿಸಿರುವ ಕಾರ್ಯಕ್ರಮಕ್ಕನುಗುಣವಾಗಿ ಇಲ್ಲಿಯೂ ಈ ಪ್ರಕಾರ ಜರುಗಿಸಬೇಕೆಂದು ಒಪ್ಪಲಾಯಿತು:—

ಡಿಸಂಬರ ತಾ. 28 ನೇ ಶನಿವಾರ ಕಾಂಗ್ರೆಸು ಸುವರ್ಣ ಮಹೋತ್ಸವವನ್ನು ಆಚರಿಸಬೇಕು. ವಿರಾಜಪೇಟೆ, ಗೋಣಿಕೊಪ್ಪಲು ಮತ್ತು ಮಡಿಕೇರಿಯಲ್ಲಿ ಪ್ರಭಾತಫೇರಿ ಮತ್ತು ಧ್ವಜಾರೋಹಣವಾಗತಕ್ಕದ್ದು. ಅನಂತರ ಸಭೆ ಸೇರಿ(?), ಕಾಂಗ್ರೆಸು ಸುವರ್ಣ ಮಹೋತ್ಸವದ ಬಗ್ಗೆ ಚರ್ಚಾ ಬುಲೆಟಿನ್‌ಗಳನ್ನು ಹಂಚುವುದು, ಕಾಂಗ್ರೆಸ ಧ್ಯೇಯದ ಬಗ್ಗೆ ಪ್ರಚಾರ ನಡೆಸುವ ಹಸ್ತಪತ್ರಗಳ ವಿತರಣೆ(?) ಮುಂತಾದ ಕಾರ್ಯಕ್ರಮಗಳು ಈ ಮೂರು ಸ್ಥಳಗಳಲ್ಲಿ ಆಗತಕ್ಕದ್ದು. ಅಲ್ಲದೆ ಈ ಮಹೋತ್ಸವದ ಸಂಬಂಧವಾಗಿ ತಾ. 29 ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ತಾ. 30ನೇ ಸೋಮವಾರ ಮಡಿಕೇರಿಯಲ್ಲಿ ಮಧ್ಯಾಹ್ನ 12½ ಗಂಟೆಗೆ ಸಾರ್ವಜನಿಕ ಭಾಷಣಗಳು ನಡೆಯತಕ್ಕದ್ದು.

3 ಕೊಡಗು ಕಾಂಗ್ರೆಸು ಹೊಸ ಕಮಿಟಿಯ ಚುನಾವಣೆಯು ನಡೆದು ಈ ಸದಸ್ಯರುಗಳು ಮುಂದಿನ ವರ್ಷದ ಕಮಿಟಿಯ ಸದಸ್ಯರುಗಳಾಗಿ ಚುನಾಯಿತರಾದರು:—ಮೆ. ಗಳಾದ 1. ಪಿ. ಐ. ಬೆಳ್ಯಪ್ಪನವರು, 2. ಐ. ಪಿ. ಕಾರ್ಯಪ್ಪನವರು, 3. ಮಂಡೇಪಂಡ ಸೋಮಯ್ಯನವರು, 4 ಪೂಜಾರಿ ರಾಮಪ್ಪನವರು, 5. ನಾಯಡ ಬೆಳ್ಯಪ್ಪನವರು, 6 ಅಜ್ಜಮಾಡ ಮಾದಪ್ಪನವರು, 7. ಐಮ್ಮಂಡ(?) ಮಾದಪ್ಪನವರು, 8 ಅಜ್ಜಿಕುಟ್ಟಿರ ಪೊನ್ನಪ್ಪನವರು, 9 ಚೇಕೇರಂಗಡ ಚಿಣ್ಣಪ್ಪನವರು, 10 ಅಪ್ಪಚೆಟ್ಟೋಳಂಡ ಮಾಚಯ್ಯನವರು, 11 ಕೊಳ್ಳಮಾಡ ಕುಂಬಯ್ಯನವರು, 12. ಅಜ್ಜಿಕುಟ್ಟಿರ ಚಿಣ್ಣಪ್ಪನವರು, 13. ಅಬ್ದುಲ್ ಗಫೂರ್ ಖಾನ್ ಸಾಹೇಬರು(?), 14 ಪುತ್ತಮನೆ ಮುದ್ದಪ್ಪಯ್ಯನವರು, 15 ಹಂಚಿನ ನಂಜನವರು, 16 ಸೋಮಯಂಡ ಅಚ್ಚಯ್ಯನವರು, 17. ಪುಟ್ಟಿಚಂಡ ವೆಂಕಣಪ್ಪನವರು, 18 ಚೆಪ್ಪುಡೀರ ಪೂಣಚ್ಚನವರು, 19. ಸೋಮವಂಡ ನಂಜಪ್ಪನವರು, 20 ಚೇಂದಂಡ ಚಂಗಪ್ಪನವರು, 21. ಹೆಚ್. ಆರ್. ಕೃಷ್ಣಯ್ಯನವರು, 22. ಕಡೇಮಾಡ ನಂಜಪ್ಪನವರು, 23 ಪುಲಿಯಂಡ ಸುಬ್ಬಯ್ಯನವರು, 24 ಆರ್. ಯಂ. ಕಾಶಯ್ಯನವರು ಮತ್ತು 25. ಚೆಟ್ಟೊಳಿರ(?) ಅಕ್ಕವಮ್ಮನವರು.

ಈ ಕಮಿಟಿಯವರ ಸೈಕಿ ಮೆ. ಗಳಾದ ಕೊಳ್ಳಮಾಡ ಕುಂಬಯ್ಯನವರು ಅಧ್ಯಕ್ಷರಾಗಿಯೂ, ಚೆಪ್ಪುಡೀರ ಪೂಣಚ್ಚನವರು ಕಾರ್ಯದರ್ಶಿಯಾಗಿಯೂ, ಅಜ್ಜಿಕುಟ್ಟಿರ ಚಿಣ್ಣಪ್ಪನವರು ಜಂಟಿ ಕಾರ್ಯದರ್ಶಿಯಾಗಿಯೂ ಮತ್ತು ಪಿ. ಐ. ಬೆಳ್ಯಪ್ಪನವರು ಖಜಾನ್ಜಿಯಾಗಿಯೂ ಚುನಾಯಿತರಾದರು.

4 ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಸದಸ್ಯರನ್ನು ಗೊತ್ತುಪಡಿಸುವ ಕಾರ್ಯವು ಕಮಿಟಿಯವರಿಗೆ ಬಿಡಲಾಯಿತು.

5 ಕಳೆದ ಸತ್ಯಾಗ್ರಹ ವರದಿಯನ್ನು ತಯಾರಿಸಲು ಒಂದು ಕಮಿಟಿಯನ್ನು ಚುನಾಯಿಸಲಾಯಿತು. ಆ ಕಮಿಟಿಗೆ ಮೆ. ಗಳಾದ ಕೊಳ್ಳಮಾಡ ಕುಂಬಯ್ಯನವರು, (ಅಧ್ಯಕ್ಷರು) ಚೆಪ್ಪುಡೀರ ಪೂಣಚ್ಚನವರು, ಅಜ್ಜಿಕುಟ್ಟಿರ ಚಿಣ್ಣಪ್ಪನವರು, ಪಾರ್ಥಂಡ(?) ಬೆಳ್ಯಪ್ಪನವರು ಮತ್ತು ಪಂಡ ಕಾರ್ಯಪ್ಪನವರು ಚುನಾಯಿತರಾದರು. ಕಮಿಟಿಯು [illegible] ಯೊಂದಿಗೆ ಕಮಿಟಿಯು 1936 ನೇ ಮಾರ್ಚ್ ತಿಂಗಳೊಳಗೆ ವರದಿಯನ್ನು ತಯಾರಿಸಬೇಕೆಂದೂ ಗೊತ್ತಾಯಿತು.

6 ಕರ್ನಾಟಕ ಕಾಂಗ್ರೆಸು ಕಮಿಟಿಗೆ ಮೆ. ಗಳಾದ ಐಮ್ಮಂಡ ಮಾದಪ್ಪನವರು, ಪಂಡ ಕಾರ್ಯಪ್ಪನವರು, ಮಂಡೇಪಂಡ ಸೋಮಣ್ಣನವರು ಮತ್ತು ಅಜ್ಜಿಕುಟ್ಟಿರ ಚಿಣ್ಣಪ್ಪನವರುಗಳನ್ನು ಚುನಾಯಿಸಲಾಯಿತು.

7. ಸಭೆಯ ಕಾರ್ಯಕ್ರಮಗಳು ಮುಗಿದ ನಂತರ ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಸೇರಿದವರನ್ನು ವಂದಿಸಿ ಎಂದಿನಂತೆ ಸಭೆಯನ್ನು ಮುಕ್ತಾಯಗೊಳಿಸಿದರು.

ಚೆಪ್ಪುಡೀರ ಪೂಣಚ್ಚ,
(ಕಾರ್ಯದರ್ಶಿ.)

ಅಬಿಸೀನಿಯೊದ ಚರಿತ್ರೆ.

ಅಬಿಸೀನಿಯವು ಆಫ್ರಿಕದೊಳಗಿನ ಎರಡು ಸ್ವತಂತ್ರ ಸಂಸ್ಥಾನಗಳಲ್ಲಿ ಒಂದಾಗಿದೆ. ಸುಮಾರು 4 ಲಕ್ಷ ಚದರ ಮೈಲು ವಿಸ್ತೀರ್ಣದ ದೇಶವದು. ಸುತ್ತ ಮುತ್ತಲಿನ ಆಫ್ರೀಕದ ಪರ್ವತಗಳಿದ್ದು, ಘೋರ ಅರಣ್ಯಗಳೂ, ಇಗಸ ಮ್ನ ರಕ್ಷಿಸುತ್ತಿವೆ. ಪೂರ್ವ ಮತ್ತು ದಕ್ಷಿಣ ಪ್ರಾಂತ್ಯಗಳಲ್ಲಿ ಕೆಲವು ಬಂಜರು ಭೂಮಿಗಳೂ ಇವೆ. ಇದರ ಪರ್ವತ ಮತ್ತು ವೈದಾನ ಸ್ಥಳಗಳಲ್ಲಿ, ಹೆಚ್ಚನಂತವು ಸುಂದರ ಮತ್ತು ಶೀತವಲ್ಲ ಹವೆಯುಳ್ಳದಾಗಿದೆ. ಜನ ಸಂಖ್ಯೆ ಸುಮಾರು 8 ರಿಂದ 10 ಮಿಲ್ಲಿಯದಷ್ಟು ಇದೆ. ನಾವು 'ಸಿದ್ದಿ' ಮನುಷ್ಯರೆಂದು ಕರೆಯುತ್ತಿರುವ ಜನರೇ ಇಲ್ಲಿ ಹೆಚ್ಚಾಗಿ ವಾಸಿಸುವರು. ಇವರ ವೃದ್ಧಿಯು ಶೀಘ್ರ ಗತಿಯಿಂದಾಗುತ್ತಿದ್ದರೂ, ಪರದೇಶೀಯ ವ್ಯಾಪಾರೀ ಜನಾಂಗಗಳಿಗೆ ಅಬಿಸೀನಿಯವು ಒಳ್ಳೆಯ ವ್ಯಾಪಾರೀ ಕ್ಷೇತ್ರವಾಗಿದೆ. ಅದೇಕೆಂದರೆ, ಅಬಿಸೀನಿಯವು ಸರ್ವಸಾಧಾರಣವಾಗಿ ಮುಖ್ಯ ವ್ಯಾಪಾರ ಗಾರರೆಲ್ಲರೂ ಇಲ್ಲದಂತಹ ದೇಶ. ಎಲ್ಲ ಬಗೆಯ ಸರಕುಗಳೂ ಪರದೇಶಗಳಿಂದ ಅಲ್ಲಿಗೆ ಬರಬೇಕು.

ಅಬಿಸೀನಿಯದಲ್ಲಿ, ಕಲ್ಲಿದ್ದಲು, ಪದಾರ್ಥ ಖನಿಗಳಿವೆ. ಇವು, ಇನ್ನೂ ಅಜ್ಞಾತವಾಗಿಯೇ ಉಳಿದಿವೆ ಎನ್ನ, ಸಾಹಸೀ ವಾಣಿಜ್ಯ ಸ್ವಪ್ನಗಳ ಕೈಗೆ ಬಂದಿಲ್ಲ. ಕಲಕ್ಕ ಜೋಳದ ಕಾಳಿಯೂಗಳು ಮೂಡಿವೆ. ಕೆಲವು ಸ್ಥಳಗಳು ಅನುಕೂಲ ಹವೆಯೂ ಇದೆ. ಅದ ರಿಂದ ಈ ದೇಶವನ್ನು ಇದನ್ನು ಕೃಷಿಕ್ಷೇತ್ರಗಳಿಂದ ಸೋಲಿಸಬಹುದು.

ಫಲವತ್ತಾದ ಭೂಮಿಗನುಕೂಲವಾಗಿ ನೈಲ್ ನದಿಯ ಉಗಮವೂ ಅಬಿಸೀನಿಯದಲ್ಲೇ! 'ನೀಲಿ ನೈಲ್' ನದಿಯ ಉಗಮವು ಅಬಿಸೀನಿಯದಲ್ಲಿ ಇದರ ಜೊತೆಗೆ ಮಹತ್ವದ 'ಬಿಳಿ ನೈಲ್' ನದಿಯ ಆಟ್‌ಬರಾ ನದಿಯೂ ಅಬಿಸೀನಿಯದಲ್ಲಿ ಹುಟ್ಟಿ, ಹರಿಯುತ್ತವೆ. ಇದಲ್ಲದೆ ಫಲವತ್ತಾದ ನೈಲ್ ಕಣಿವೆಗೆ ... ಅನುಕೂಲವಾಗುವಂತೆ ಪೂರ್ವದಿಂದ ನೀರಿನ ಸಮೃದ್ಧಿ ... ಇದೆ ... ಅನುಕೂಲ ... ಹೀಗಾಗಿ, ಬ್ರಿಟಿಷರಿಗೆ ಅಬಿಸೀನಿಯದ ಸರೋವರಗಳಲ್ಲಿ ವಿಶೇಷವಾದ ಆಸಕ್ತಿ ಇದೆ. ಅಬಿಸೀನಿಯದ ಟಾನಾ (ಸರೋವರ) ಮುಖಾಂತರ—ಅದರ ಸುತ್ತಲಿನ ಪ್ರದೇಶ—ಇತರರ ವಶದಲ್ಲಿ ಹೋದಲ್ಲಿ ಬ್ರಿಟಿಷರಿಗೆ ಈಜಿಪ್ತ ಮತ್ತು ಸುಡಾನದ ನೀರಿನ ಆಧಾರದಲ್ಲಿ ಭಂಗ ಬರುವಂತೆ ಮಾಡಲು ಸಾಧ್ಯವಿದೆ.

ಆಫ್ರಿಕಕ್ಕಾಗಿ 1880 ರಿಂದ ಯೂರೋಪು ರಾಷ್ಟ್ರಗಳ ಆಕ್ರಮಣ ... ಇದರ ... ದಿಂದ ಆರಂಭ ... ಇದು ಕ್ರಮೇಣ ಉತ್ತರಾಫ್ರಿಕಕ್ಕೆ ವ್ಯಾಪಿಸಿತು. ಈಜಿಪ್ತವನ್ನು ಬ್ರಿಟಿಷರೂ ಟ್ಯುನಿಸ್ ಪ್ರಾಂತ್ಯವನ್ನು ಫ್ರೆಂಚರೂ ಆಕ್ರಮಿಸಿದ್ದರು. ಇದ್ದರೂ ಸಹಜವಾಗಿ ತಮ್ಮ ದೃಷ್ಟಿಯನ್ನು ನೈಲ್ ನದಿಯ ಮತ್ತು ಫಲವತ್ತಾದ ವೈದಾನಗಳ ಕಡೆಗೆ ತಿರುಗಿಸಿದರು. ಪೂರ್ವ ದೇಶಗಳಿಗೆ ಹೋಗುವ ಕೆಂಪು ಸಮುದ್ರದ ಮಾರ್ಗದ ಮೇಲೂ ದೃಷ್ಟಿಯಾಯಿತು. ಅತ್ತ, ಇಟಲಿಯ ಮುಖ್ಯ ಮಂತ್ರಿಯಾಗಿದ್ದ ಕ್ರಿಸ್ಪಿಯು, ಪೂರ್ವಾಫ್ರಿಕದ ತನ್ನ ಇಟಲಿ ಸಾಮ್ರಾಜ್ಯವನ್ನು ವಿಸ್ತರಿಸುವ ಯೋಜನೆಗಳಲ್ಲಿದ್ದನು. ಇಟಲಿ—ಫ್ರಾನ್ಸು ಮತ್ತು ಬ್ರಿಟನು. ಈ ಮೂರು ರಾಷ್ಟ್ರಗಳಿಗೆ ಕೆಂಪು ಸಮುದ್ರದ ತೀರದ ಒಂದು ತುಂಡು ಬೇಕಾಗಿತ್ತು. ಈ ಮೂರು ದೇಶಗಳೂ ಈ ದಿಶೆಯಿಂದಲೇ ಅಬಿಸೀನಿಯದ ವ್ಯಾಪಾರಕ್ಕಾಗಿ ಸ್ಪರ್ಧೆಗೆ ತೊಡಗಿದ ಹೊಸ ನಾಟಕವನ್ನಾರಂಭಿಸಿದುವು.

ಇಟಲಿಯು ಅಸ್ಸಾಬ್ ಪ್ರಾಂತ್ಯವನ್ನಾಕ್ರಮಿಸಿ, ಫ್ರೆಂಚರು ಉತ್ತರ ಪ್ರಾಂತ್ಯಕ್ಕೆ ಹುಡುಕುವಂತೆ ಕಾದಿಟ್ಟಿತು. ಝೈಲಾ ಎಂಬಲ್ಲಿಂದ ಬ್ರಿಟಿಷರು ಒಂದು ಸಮುದ್ರತೀರ ಪ್ರದೇಶವನ್ನಾಕ್ರಮಿಸಿ, ಫ್ರೆಂಚರು ದಕ್ಷಿಣ ಪ್ರಾಂತ್ಯಕ್ಕೆ ಹರಡುವಂತೆ ಮಾಡಿಟ್ಟಿದರು. ಹೀಗೆ ಈ ಮೂರು ರಾಷ್ಟ್ರಗಳು ಭೂಭಾಗ ಭೂಭಾಗಳನ್ನು ಕೊಟ್ಟು ನಾಶವಾಗಿ, ಅಬಿಸೀನಿಯದ ಹೊರಗೆ ಕಾಣಿಸಿಕೊಳ್ಳುತ್ತ, ಜಿಬೂತಿ ಎಂಬಲ್ಲಿಂದ ಅಬಿಸೀನಿಯದ ವ್ಯಾಪಾರವು ನಡೆಯಬೇಕೆಂದು ಫ್ರೆಂಚರೂ, ಝೈಲಾದಿಂದ ನಡೆಯಬೇಕೆಂದು ಬ್ರಿಟಿಷರೂ ಹವಣಿಸಲು—ಇವೆರಡಕ್ಕೂ ಅನುಕೂಲವಾದ ಹರ್‍ರ್ ಪ್ರಾಂತ್ಯದ ಮೇಲಣ ಅಧಿಕಾರಕ್ಕಾಗಿಯೇ ಈ ಹೋರಾಟವು ಆರಂಭಿಸಿತು.

1881–85 ರಲ್ಲಿ ಸುಡಾನಿನ ಮಹ್ದಿ ಎಂಬಾತನ ಮುಂದಾಳತನದಲ್ಲಿ ದಂಗೆಯೆದ್ದಿತು. ಆತನು ಜನರಲ್ ಗಾರ್ಡನ್ನನ ಸೈನ್ಯವನ್ನು ಸೋಲಿಸಿ, ಸುಡಾನನ್ನು ಸಂಪೂರ್ಣ ಆಕ್ರಮಿಸಿದನು. ಸುಡಾನಿನಿಂದ ಕಾಲು ತೆಗೆದ ಬ್ರಿಟಿಷರಿಗೆ ಹರ್‍ರ್‌ದ ಮೇಲೆ ಅಧಿಕಾರವಿರಿಸಲು ಅಸಾಧ್ಯವಾಯಿತು. ಇದರಿಂದ ಫ್ರೆಂಚರಿಗೆ ಅಲ್ಲಿ ಒಂದು ಕೆಚ್ಚು ದೊರೆಯಿತೆಂದೂ ತಿಳಿಯಿತು. ಅದೇ ಕಾಲಕ್ಕೆ ಮಹ್ದಿಯ ವಿನಾಶಕ್ಕೆ ಅಬಿಸೀನಿಯದ ಚಕ್ರವರ್ತಿಯ ಸಹಾಯವನ್ನು ಕೋರಿದರು. ಬಿನಿಸಾಗಿ, ಬ್ರಿಟಿಷರು ಮತ್ತು ಅಬಿಸೀನಿಯವು ಬ್ರಿಟಿಷರ ರಕ್ಷಣೆಯಲ್ಲಿ, ಸಂಬಂಧವಾಗಿ—ಕರ್ಥೌಮ್—ಗುಂಡು ಮಧ್ಯೆ ಬೆಳೆದರೂ ... ಈ ಅವರ ದು—ನೈಲ್ ನದಿಯನ್ನು ಮಾಡಲು ... ಸಹಾಯವನ್ನು ಅಬಿಸೀನಿಯದ ಚಕ್ರವರ್ತಿಗಳಿಗೆ ತಿಳಿಸಿದರು. ಅಬಿಸೀನಿಯ ಸೇನಾನಿ ರಾಸ್ ಅಲುಲಾ ಅವರ ವಿದ್ದ ಸೂಡಾನ್ ... ಬ್ರಿಟಿಷರ ... 1885 ರಲ್ಲಿ ಬ್ರಿಟನು ಹೀಗೆ ಅಬಿಸೀನಿಯದ ಚಕ್ರವರ್ತಿಯದ ರಿಂದಾದ ಸ್ನೇಹಾಚಾರದಿಂದಿತ್ತು. ಮಸ್ಸವಾ ಪ್ರಾಂತ್ಯದ 'ಇಟಲಿ' ಬೇಕಕ್ಕೆ ಸೇರಿತು. ಇಟಲಿ ಬ್ರಿಟನಿಗಾಯಿತು. ಅಬಿಸೀನಿಯವು ಆ ಮಸ್ಸವಾವನ್ನು ತನಗೆ ಕೊಡಬೇಕೆಂದು ಬ್ರಿಟನದೊಡನೆ ಕೇಳಿತು. ಆದರೆ ರಾಜತಂತ್ರವು ಬ್ರಿಟನನ್ನು ಕಾಪಾಡಲೇ ಬೇಕಾಗಿ ಬರಲಿಲ್ಲ. ಮಸ್ಸವಾದ ಮೇಲೆ ಇಟಲಿಯು ದಂಡೆತ್ತಿ ಬರುವಂತೆ ತಂತ್ರಗಳಾದುವು. ಇಟಲಿ, ಫ್ರಾನ್ಸು ಮತ್ತು ಅಬಿಸೀನಿಯ ಈ ಮೂರು ಪಕ್ಷಗಳನ್ನು ಒಂದೇ ಕಲ್ಲಿನಿಂದ ಕೊಲ್ಲುವ ಹಂಚಿಕೆ ಬ್ರಿಟನದು.

ಇಟಲಿಯು ಸಾಮ್ರಾಜ್ಯ ವಿಸ್ತರಣೆಗಾಗಿ ದಾಪುಗೊಂಡಿತು. ಬ್ರಿಟನ ವಿತ್ತನಾದ ಅಬಿಸೀನಿಯದ ಚಕ್ರವರ್ತಿ ಜೋನ್ ನನ್ನು ಒಲಿಸುವ ಕೋಟ್ಸೇ ಇಟಲಿಯು ತನ್ನ ದಾಳಿಯನ್ನು ಪ್ರಾರಂಭಿಸಬೇಕಾಗಿತ್ತು. ಅದೇ ಕಾಲದಲ್ಲಿ ಇಟಲಿಯು, ಅಬಿಸೀನಿಯದ ಚಕ್ರವರ್ತಿಯ ಶತ್ರುವಾದ ಶೋವಾಪ್ರದೇಶದ ಅರಸ ಮೆನೆಲಿಕನಿಗೆ ಸಹಾಯಮಾಡಬೇಕೆಂದು ನಿರ್ಧರಿಸಿತು. ಮೈತ್ರಿಯ ಚಾತುರ್ಯದಲ್ಲಿ ಬರೆಯುವಂತೆ ಇಂಗ್ಲೆಂಡು ಈ ಸಮಯದಲ್ಲಿ, ಅಬಿಸೀನಿಯದ ಚಕ್ರವರ್ತಿಗೆ ಕೊಟ್ಟ ವಚನವನ್ನು ಪಾಲಿಸುವಾಗ, ಆ ವಚನದಂತೆ ಪ್ರಾಂತ್ಯಗಳನ್ನು ಸರಾಗವಾಗಿ ಸಾಗಿಸುವಂತೆ ಅಬಿಸೀನಿಯದ ಚಕ್ರ ಮೆನೆಲಿಕನಿಗೇ ಸೇರುವುದಾಯಿತು. 'ಇಂಗ್ಲೆಂಡ, ತನಗೆ ಅವಶ್ಯವಿದ್ದ ಕಾಲದಲ್ಲಿ ಅಬಿಸೀನಿಯದ ಚಕ್ರವರ್ತಿಯ ಉಪಯೋಗಿಸಿಕೊಂಡು, ... ಎಂದ ಆತನನ್ನು ಇಟಲಿಗೆ ... ಇಂಗ್ಲೆಂಡಿನ ... ಅಬಿಸೀನಿಯದ ... ತನ್ನ ... ಮಾಡಿದ ಮೇಲೆ ಇಂಗ್ಲೆಂಡಿನ ... ತನ್ನ (ಇಂಗ್ಲೆಂಡಿನ) ಕರ್ತವ್ಯಪಾಲನೆಯ ... ಮುಂದುವರಿಗೊಳಿಸಿತು. (ಮೈತ್ರಿ) ಮತ್ತು ಈ ನೀತಿಯು ಬ್ರಿಟನಿಗೆ ಅನುಕೂಲ ಬರುವಂತೆ ಗುಪ್ತವಾಗಿಟ್ಟಿತ್ತು. ಏರಲಿಕ್ಕೆ ಅಬಿಸೀನಿಯದ ಚಕ್ರವರ್ತಿ ಜೋನ್ ನಿಗೂ ... ಜರ್ಮನರೊಡನೆ ಯುಂಟಾಗಿ ಮುಂತಾದ ಕಲ್ಪಕತೆಗಳು ವ್ಯಾಪಾರದಲ್ಲಿ ತರಲ್ಪಟ್ಟವು. ಏಕೆಂದರೆ, ಅಂತಹ ಕಲ್ಪಕತೆಗಳು 'ಇಟಲಿಯು ದುರ್ಬಲ ಸಿದ್ಧತೆಗಳಿಂದ ಸಾಗಲೇಕ ಪ್ರದೇಶದಲ್ಲಿ ಸಹಾಯ ಮಾಡಿ ಅಂತರಂಗದಲ್ಲಿ ಅನ್ಯನಾಗಿರುವ ಯೂರೋಪಿಯರ ರಾಜಕೀಯ ಚಟ್ಟದ ರುಚಿ ನೋಡುವ ಮೊದಲು ಜೋನ್‌ನನು ಮರಣಪಟ್ಟನು.

ಅಬಿಸೀನಿಯದ ೧೮೮೯ ರಿಂದ ೧೮೯೬ ರ ವರೆಗೆ

ಜೋನ್‌ನನ ನಂತರ ಮೆನೆಲಿಕನು ಸಿಂಹಾಸನವನ್ನೇರಿದನು. ಆತನಿಗೆ ಇಟಲಿಯ ಸಹಾಯವಿತ್ತು. ಇವರೊಳಗೆ 1889 ರಲ್ಲಿ 'ಉಚ್ಚಿಯಲಿ ಸಂಧಿ' (Treaty of Uccialli) ಯಾಯಿತು. ಇದಾದ ನಂತರ ಇಟಲಿಯ ಅಬಿಸೀನಿಯದಲ್ಲಿ ಪ್ರಬಲವಾಯಿತು. ಫ್ರಾನ್ಸು ಹರ್‍ರ್‌ದಿಂದ ದೂರವಾಗುವಂತೆ ಇಂಗ್ಲೆಂಡು ಪ್ರಯತ್ನ ಪಟ್ಟಿತು. ಆದರೆ ಸಂಧಿಯಿಂದಾಗಿ ಇಟಲಿಯು ಉದ್ದೇಶಗಳಿಗನುಸರಿಸಿ ನಡೆಯಲಿಲ್ಲ. ಆದಿಗೆ, ಹರ್‍ರ್‌ದಿಂದ ಎರಡು ಪಕ್ಷದವರೂ ದೂರವಾಗಿರುವಂತೆ 1888 ರಲ್ಲಿ ಫ್ರಾನ್ಸು, ಇಂಗ್ಲೆಂಡಿನೊಳಗೆ ರಹಸ್ಯವಾದೊಂದು ಒಪ್ಪಂದವಾಯಿತು.

'ಅಬಿಸೀನಿಯದ ರಾಜಾಧಿರಾಜರು ಇತರ ರಾಷ್ಟ್ರಗಳ ಮತ್ತು ಸರಕಾರಗಳ ಪ್ರಶ್ನೆಗಳನ್ನು ವಿಚಾರಿಸಲು ತಮಗೆ ಇಷ್ಟ ಬಿದ್ದರೆ ಇಟಲಿ ಆರಸರ ಸಹಾಯ—ಸಹಕಾರ ಪಡೆಯಬಹುದು' ಎಂದು ಉಚ್ಚಿಯಲಿ ಸಂಧಿಯಲ್ಲಿ ಉಲ್ಲೇಖಿಸಿತ್ತು. ಆದರೆ, ಇಟಲಿಯವರು ಇದನ್ನು 'ಸಹಾಯ ಪಡೆಯಲು ಬೇಕು' ಎಂದು ತಿದ್ದಿದರು. ಈ ತಿದ್ದುಪಡಿಯಿಂದಾಗಿ ಇಟಲಿಗೆ ಮೇಲಧಿಕಾರ ಉಂಟಾದಂತಾಯಿತು. ಇದನ್ನು ತಿಳಿದ ಕೂಡಲೇ ಮೆನೆಲಿಕನ 1893 ರಲ್ಲಿ ಬಹಿರಂಗವಾಗಿ ಈ ವಿಷಯ ಸಕ್ತತ್ವವನ್ನು ಸಾರಿ, ಒಪ್ಪಂದವನ್ನು ಅಲ್ಲಗಳೆದನು.

ಆದರೆ, ಇದರ ವಿಷಯ ಇಟಲಿಗೆ ಮೆನೆಲಿಕನಿಗಿಂತಲೂ ಇಂಗ್ಲೆಂಡು ಒಪ್ಪಿಗೆ ಬೇಕಾಗಿತ್ತು. ತನ್ನ ಅಧಿಕಾರಕ್ಕಾಗಿ ಅಬಿಸೀನಿಯವನ್ನು ಎರಡು ವಿಭಾಗಗಳಾಗಿ ವಿಂಗಡಿಸಿ ಇಟಲಿ—ಇಂಗ್ಲೆಂಡುಗಳೊಳಗೆ ಗುಪ್ತವಾದ ಒಪ್ಪಂದವಾಯಿತು. ಇದರಿಂದಾಗಿ ಬ್ರಿಟನ್, ಉಗಾಂಡದಿಂದ ಕೈರೋ ವರೆಗಿನ ರೈಲುಮಾರ್ಗದ ಸಂಬಂಧವನ್ನು ಇಟ್ಟು, ನೈಲ್ ಮತ್ತು ಬ್ಲೂ ನೈಲ್ ಕಣಿವೆಗಳ ಮೇಲಣ ಇಂಗ್ಲೆಂಡಿನ ಅಧಿಕಾರವು ತನ್ನದು ಭದ್ರವಾಯಿತು. 1894 ರಲ್ಲಿ ಇದು ಫ್ರಾನ್ಸಿಗೆ ತಿಳಿದು 1888 ರ ಒಪ್ಪಂದವನ್ನು ಮುರಿದಿರೆಂದು ಬಹಿಷ್ಕರಣವನ್ನು ಪ್ರಕಟಿಸಿತು. 'ಸಹಾಯಕನಾದ ಇಟಲಿಯು ತನ್ನ ದೇಶವನ್ನು ನುಂಗಿ ಬಿಡುವ ಹವಣಿಕೆಯಲ್ಲಿದೆಯೆಂದು ತಿಳಿದ ಕೂಡಲೇ ಮೆನೆಲಿಕನು ಈ ಒಪ್ಪಂದವನ್ನು ಅಲ್ಲಗಳೆದು 'ಅಬಿಸೀನಿಯವು ಯಾರ ಸಹಾಯವನ್ನೂ ಬೇಡುವುದಿಲ್ಲ; ದೇವರೊಡನೆ ಮಾತ್ರ ಬೇಡುವುದು' ಎಂದು ಸಾರಿದನು.

ಇತ್ತ ಫ್ರಾನ್ಸಿನೊಡನೆ ಸಹವಾಸವನ್ನು ಬೆಳಸಿ, ಯುದ್ಧ ಸಾಮಗ್ರಿಗಳನ್ನೂ ಯುದ್ಧ ಕಲೆಗಾಗಿ ಶಿಕ್ಷಕರನ್ನೂ ಅಬಿಸೀನಿಯಕ್ಕೆ ಒದಗಿಸುವುದಾಗಿ ಫ್ರಾನ್ಸು ಒಪ್ಪಿತು. ಇವರ ಒಡಲಿಗೆ ಜಿಬೂತಿಯಿಂದ ಹರ್‍ರ್‌ಗೂ ಅಲ್ಲಿಂದ ಅಡಿಸ್ ಅಬಾಬಕ್ಕೂ ರೈಲ್ವೆ ಸ್ಥಾಪಿಸುವ ರೈಲು ಮಾರ್ಗವನ್ನು ಹಾಕಲು ಫ್ರಾನ್ಸಿಗೆ ಒಪ್ಪಿಗೆ ಸಿಕ್ಕಿತು. ಫ್ರೆಂಚ್ ಶಿಕ್ಷಕರಿಂದ ಶಿಕ್ಷಣಹೊಂದಿದ 90,000 ದ ಸೈನ್ಯವು ಮೆನೆಲಿಕನೊಡನೆ ಇದ್ದು, ಆತನು 1896 ರಲ್ಲಿ ಆಡೋವಾ ಯುದ್ಧದಲ್ಲಿ ಇಟಲಿಯನ್ನು ಸೋಲಿಸಿದನು. ಆ ಮೇಲೆ ಇಟಲಿಯು ಅಬಿಸೀನಿಯೊಡನೆ ಒಪ್ಪಂದವನ್ನು ಮಾಡಿ, ಮೆನೆಲಿಕನಿಗೆ ಎರಡು ಮಿಲ್ಲಿಯ ಡಾಲರುಗಳ ನಷ್ಟ ಪರಿಹಾರ ದ್ರವ್ಯವನ್ನು ಕೊಟ್ಟು, ಅಬಿಸೀನಿಯದ 'ಸಂಪೂರ್ಣ ಸ್ವಾತಂತ್ರ್ಯ'ವನ್ನು ಒಪ್ಪಿ, ಆನಂದದ ಆಕ್ರಮಣ ಮಾಡಿಕೊಂಡ ಪ್ರಾಂತ್ಯಗಳನ್ನು ಹಿಂದಕ್ಕೆ ಕೊಟ್ಟುಬಿಟ್ಟಿತು. ಇದು, ಸಾಮ್ರಾಜ್ಯತ್ವದ ತಿಕ್ಕಾಟ ಪೊಂದನಲ್ಲಿ ಸಿಕ್ಕಿತು. ಇತ್ತ ರಷ್ಯವು, ಕೆಂಪು ಸಮುದ್ರದ ದಡವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಆಲೋಚನೆಯಲ್ಲಿರಲು ಇಟಲಿಯು ಆಕ್ರಮಣಕ್ಕೆ ತಡೆಕಟ್ಟುವ ಆಲೋಚನೆಯಲ್ಲಿ ಫ್ರಾನ್ಸಿಗೆ ಸಹಾಯ ಮಾಡಲು ಸಿದ್ಧವಿತ್ತು. ಆದರೆ, ಇಂಗ್ಲೆಂಡು ಮಾತ್ರ ಸ್ವಾಭಾವಿಕವಾಗಿಯೂ ಹಿಂದೂ ದೇಶಕ್ಕೆ ಹೋಗುವ ದಾರಿಯ ಸಮೀಪದ ರಷ್ಯದ ಸುಳಿಯನ್ನು ತಪ್ಪಿಸಲು ಪ್ರಯತ್ನಿಸಿತು. ಈ ತರದ ಸಾಮ್ರಾಜ್ಯದ ವೈರತ್ವವು ಇನ್ನೊಮ್ಮೆ ಅಬಿಸೀನಿಯವನ್ನು ರಕ್ಷಿಸಿತು.

ಆಡೋವಾದಿಂದಾಗಿ ಇಟಲಿಯು ಇಥಿಯೋಪಿಯದ ಗೋಜಿಗೆ ಹೋಗದೆ ಫ್ರಾನ್ಸು ಮತ್ತು ಇಂಗ್ಲೆಂಡನ್ನು ಮಾತ್ರ ಪ್ರತಿದ್ವಂದ್ವಿಯಾಗಿ ನೆನೆದಂತಾಯಿತು. ಫ್ರಾನ್ಸಿಗೆ ಆಸೆ, ಮೂರಿದ ಸಹಾಯದಿಂದಾಗಿ ಮೆನೆಲಿಕನ ದರ್ಬಾರದಲ್ಲಿ ಪ್ರಬಲ ಆಧಿಕಾರದಿಂದಿರಲು ಸಾಧ್ಯವಾಯಿತು. ಪೂರ್ವದಿಂದ ಪಶ್ಚಿಮದ ವರೆಗೆ ವಿಸ್ತರಿಸುವ ಸಾಮ್ರಾಜ್ಯದ ವಿಷಯ ಹವಣಿಕೆಯನ್ನು ಕಾಣುವಾಗ, ಇಂಗ್ಲೆಂಡು ಉತ್ತರದಿಂದ ದಕ್ಷಿಣದ ವರೆಗಿನ ಸಾಮ್ರಾಜ್ಯವನ್ನು ಆಶಿಸಿತು. ಇವರ ಈ ಹಂಚಿಕೆಗಳು ನೈಲ್ ಕಣಿವೆಯ ವಿಷಯವಾಗಿದ್ದುವು. ಫಶೋಡ—ಆಕ್ಷನ್ ಬಳಿ ಒಸ ನೈಲ್ ನದಿಯ ಒಪ್ಪಿಗೆಯಿಂದ ಅಬಿಸೀನಿಯ ವ್ಯಾಪಾರವನ್ನು ತನ್ನ ಕೈವಶಮಾಡಲು ಫ್ರೆಂಚರು ಹವಣಿಸಿದರು. ಬ್ರಿಟನು ಕಡೆಗೆ ಯುದ್ಧ ಮಾಡುವಂತೆ ಇದೇ ಕಾಲದ ಪರಿಣಾಮವಾಯಿತು.

ಬ್ರಿಟನಿನ ಅಧಿಕ ಬಲದಿಂದಾಗಿ ಫ್ರೆಂಚರ ಇಷ್ಟಾರ್ಥವು ಕೈಗೂಡಲಿಲ್ಲ. ಈ ಅಪಜಯದಿಂದ ರೈಲು ಮಾರ್ಗದ ರಾಜಕಾರಣ ಮಹತ್ವವು ಕಟ್ಟುಹೋಯಿತು. 1896 ರಲ್ಲಿ ಫ್ರೆಂಚರು ರೈಲುಮಾರ್ಗದ ಕೆಲಸವನ್ನಾರಂಭಿಸಿ ... ಅಲ್ಲದೆ ಬ್ರಿಟಿಷರು ಕಂಪೆನಿಯಲ್ಲಿ ಹೆಚ್ಚು ಭಾಗಗಳನ್ನು ಖರೀದಿಸಿದ್ದರು. ಹಣದ ಅಡಚಣೆಗೆ ಸಿಕ್ಕಿಬಿದ್ದ ಕಂಪೆನಿಯು ಕಡೆಗೆ ಅರಸರ ಸಹಾಯದಿಂದ ಮುಂದುವರಿಯಬೇಕು. ಕೆಲವು ಫ್ರೆಂಚ ಕೈಯಲ್ಲಿದ್ದ ವಿಷಯದಲ್ಲಿ ಇವರಿಗೂ ಕೆಲಸಕ್ಕೆ ಇರುವುದನ್ನು ಕಂಡು ಭಯಗೊಂಡರು. 1901 ರೊಳಗಾಗಿ ಬ್ರಿಟಿಷರು ಕಂಪೆನಿಯ ಸಂಚಾಲಕತ್ವದ ಪಕ್ಷವನ್ನು ಪಡೆಸಿದ್ದರು. ಫ್ರಾನ್ಸಿನ ಪಕ್ಷಿಗಳೆಲ್ಲಾ ಬೆಂಬಲಿಸಲು, ಕಂಪೆನಿಯು ಬ್ರಿಟಿಷರ ಕೈಕಪ್ಪುವಂತೆ ಸರಕಾರವು ರಕ್ಷಣೆಯಾಗುವಂತೆ ಮಾಡಿತು. ಕಂಪೆನಿಯು ಬಳಿಕ ಜನರಿಂದ ಫ್ರೆಂಚ್ ಸರಕಾರದ ವಶವಾದರೂ ಇದರ ಫಲವಾಯಿತು. ಈ ವಿಷಯವನ್ನು ಬ್ರಿಟಿಷರು ಜನಲೋಕನ ರೀತಿಯಲ್ಲಿ ಹಾಕಿದೆನೆಂದೇ ಇಟಲಿಯಂತೆ ಫ್ರಾನ್ಸ್ ಕಡೆಗಾ ಪಡೆದ ಕಾಯ್ದೆಗಳನ್ನು ನಡೆಸಲಾರದಾದನು. ಫಲವಾಗಿ ಆದಿಸ್ ಅಬಾಬದಲ್ಲಿ ಫ್ರೆಂಚರಿಗೆ ಏಕಛತ್ರವಾದರೂ ಪ್ರಾಬಲ್ಯಕ್ಕೆ ಇರಲಿಲ್ಲ. ಒಡಲಾಗಿ ಬ್ರಿಟನು ಕೆಚ್ಚಿತು. ರೈಲ್ವೆಯನ್ನು ಎಲ್ಲಾ ಬಂದರಗಳ ವಾಡನ್ನಾಗಿ ಮಾಡುವ ಬ್ರಿಟಿಷರ ಹವಣಿಕೆಯನ್ನು ಇಟಲಿಯೂ ಅನುಮೋದಿಸಿ ತಿರುಗಿಸಲು ಸೇರಿತು. ಆದರೆ ಇದು ಫ್ರೆಂಚರಿಗೆ ರುಚಿಸಲಿಲ್ಲ. ಜಿಬೂತಿಯಿಂದ ಆಡಿಸ್ ಅಬಾಬದ ವರೆಗೆ ರೈಲುಮಾರ್ಗವು ಫ್ರೆಂಚರದೇ ಆಗಿತ್ತು. ಆದರೆ ಇದನ್ನು ಬ್ರಿಟಿಷ್, ಇಟಲಿಯನ್, ಮತ್ತು ಅಬಿಸೀನಿಯದ ಪ್ರತಿನಿಧಿ ಗಳು, ಆಡಿಸ್ ಅಬಾಬದ ವರೆ ಮತ್ತೆ ಬ್ರಿಟಿಷರನ್ನೇ ರೈಲು ಇಟ್ಟರು. ರೈಲಿನ ಮೇಲೆ ಅವರ ಹಿಡಿತವಿತ್ತು. ಇಟಲಿಯನ್ ರಾಜ್ಯಗಳನ್ನು ಸೇರಿಸುವ ರೈಲು ಮಾರ್ಗವು ಸ್ವಂತದಾದರೂ, ಅದಕ್ಕೆ ಅಂತರಾಷ್ಟ್ರೀಯ ಮೇಲಧಿಕಾರಗಳೇ ಇದ್ದವೆಂದು ಕೇಳಿದಾಯಿತು. ಹೀಗಾಗಿ, ಇತರ ರಾಷ್ಟ್ರಗಳ ವೈರತ್ವವು ಅಬಿಸೀನಿಯದ ಸ್ವಾತಂತ್ರ್ಯವನ್ನು ಬಲಪಡಿಸಿತು.

ಆದರೆ 1907 ರಲ್ಲಿ ಅಬಿಸೀನಿಯದ ಸ್ವಾತಂತ್ರ್ಯವನ್ನು ರಕ್ಷಿಸಿದ ಒಪ್ಪಂದವಾಯಿತು.—1915 ರಲ್ಲಿ ಈ ಮೂರು ಪ್ರಬಲ ರಾಷ್ಟ್ರಗಳೊಳಗಿನ ಐಕ್ಯತೆಯು ಒಡೆಯದ ಸ್ವರಕ್ಷಣೆ ಮತ್ತು ಇಂಗ್ಲೆಂಡು ಬ್ರಿಟಿಷರಿಗೆ ಆಫ್ರಿಕದಲ್ಲಿ ಜರ್ಮನರ ರಾಜ್ಯವನ್ನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಇಟಲಿಯು ಅಬಿಸೀನಿಯದಲ್ಲಿ ಹಕ್ಕು ಪಡೆದಿದ್ದಿತು.

1919 ರಲ್ಲಿ ಗ್ರೇಟ್ ಬ್ರಿಟನ್ ಮತ್ತು ಇಟಲಿಗಳಿಗೆ ಒಪ್ಪಿಗೆಯಾಗಿ ಬ್ರಿಟಿಷರು ಸಹಾಯವನ್ನು ಪಡೆದರೂ, ಇಟಲಿಯವರು ಉತ್ತರ ಮತ್ತು ದಕ್ಷಿಣ ತಮ್ಮ ಭೂಭಾಗಗಳನ್ನು ಅಬಿಸೀನಿಯದ ಮೂಲಕ ಹೋಗುವ ರೈಲ್ವೆ ನುಂಗಬೇಕಾದ

(7ನೇ ಪುಟಕ್ಕೆ)

ವಿ ವಿ ಧ ವಾ ರ್ತಾ ವ ಳಿ .

ಶಾಲಾ ಅಧ್ಯಾಪಕಿಯನ್ನು ಕೈಹಿಡಿದರು!

ಬಂಗಾಳ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ ಯನ್ವಯ, ಬಿಡಲ್ಪಟ್ಟ ಹಿಜ್ಲಿಯ ಕೈದಿಯೊಬ್ಬನು ಎಂಬ ಶಾ ಲಾಧ್ಯಾಪಕಿಯನ್ನು ಕೈಹಿಡಿದಿರುವನು. ಆ ಹಿಜ್ಲಿಯಲ್ಲಿ ಆ ಮಹಿಳೆಯಂತೆ ಸ್ತ್ರೀಯರ ಕೈದಿ ಇದೇ ಮೊದಲನೆಯ ದು. ವಧುವಿನ ವಯಸ್ಸು 22 ವರ್ಷ.

—೦೦೦—

ಹೊಸ ಪ್ರೋಸ್ಟ್ ಕಾರ್ಡುಗಳು, ತುಂಬಾ ಸ್ಥಳವಿದೆ.

ಹೊಸ ಪೋಸ್ಟ್ ಕಾರ್ಡುಗಳು ಬೇಗನೆ ಬರಲಿವೆ. ಇ ವುಗಳಲ್ಲಿ ಬರೆಯುವ ಸ್ಥಳ ಹೆಚ್ಚಿಸಲ್ಪಡುವುದು. ಅದರ ಆಕಾ ರದ ಆಕಾರದಲ್ಲಿ ಸ್ವಲ್ಪ ಕಡಿಮೆ ಇಲ್ಲ.

ಹಿಂದೀ ಸರಕಾರದವರು ಟಪಾಲು ದರಗಳನ್ನು ಕಡಿಮೆ ಮಾಡಬೇಕೆಂಬ ಬೇಳಿಕೆಯನ್ನು ಮುಂದೊತ್ತುತ್ತಲೇ ಇದ್ದುದ ಕ್ಕಾಗಿ ಈ ಬಗೆಯ ದಯವಾಯಿತು!

—೦೦೦—

ಜಪಾನಿನಲ್ಲಿ ಭಾರತೀಯರ ವಿದ್ಯಾಭ್ಯಾಸ.

ಕಲ್ಕತ್ತದ 'ದಿ ಇಂಟರ್ ನೇಶನಲ್ ಎಜ್ಯುಕೇಶನ್ ಟ್ರಸ್ಟ್' ಸಂಸ್ಥೆಯವರು ಜಪಾನಿನ ಹಲವು ಕೈಗಾರಿಕೆ ಮತ್ತು ವಿ ದ್ಯಾ ಸಂಸ್ಥೆಗಳಲ್ಲಿ ಭಾರತೀಯರಿಗೆ ತರಬೇತು ಹೊಂದು ವದಕ್ಕಾಗಿ 5 ರಿಂದ 10 ವಿದ್ಯಾರ್ಥಿಗಳನ್ನು ಕಳುಹಿಸಲು ವೇ ತನಗಳನ್ನು ಏರ್ಪಡಿಸಿದ್ದಾರೆ. ವಿದ್ಯಾರ್ಥಿಗಳ ಚುನಾವಣೆ ಗಾಗಿ ಮದ್ರಾಸು, ಮುಂಬಯಿ, ಕಲ್ಕತ್ತಾ, ಲಾಹೋರ್ ಮ ತ್ತು ದಿಲ್ಲಿಯಲ್ಲಿ ಬರುವ ಮಾರ್ಚ ತಿಂಗಳಲ್ಲಿ ಪರೀಕ್ಷೆಗಳು ನಡೆಯುವವು. ಡಿಸೆಂಬರ್ ತಾ. 15ರ ಒಳಗೆ ವಿದ್ಯಾರ್ಥಿ ಗಳು ಸಂಘದ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು.

—೦೦೦—

ವಯಸ್ಸು ಮೂರೇ—ಸಕಲ ವಿದ್ಯಾ ಪಾರಂಗತಳು!

ನ್ಯೂಯಾರ್ಕಿನಲ್ಲಿ ವಾಸವಾಗಿರುವ ಒಬ್ಬ ಜರ್ಮನ್ ವಾಸ್ತುಶಾಸ್ತ್ರಜ್ಞನ ಮಗಳು. ವಯಸ್ಸು ಬರೀ 3 ವರ್ಷ. ಚಿತ್ರ, ರಾಸಾಯನಿಕ, ಶಾಸ್ತ್ರ, ವಿಜ್ಞಾನ ಭೂಗೋಳ ಇತ್ಯಾದಿಗಳಲ್ಲಿ ಬಹು ತೀಕ್ಷ್ಣ, ಪ್ರಶ್ನೆಗಳಿಗೆ ಉತ್ತರ ಕೊಡಬಲ್ಲಳು. ನ್ಯೂ ಯಾರ್ಕಿನ ಹಲವು ಎಂದಿ ಮಹಾನೀಯರು ಮುಂದೆ ಇವಳನ್ನು ಪರೀಕ್ಷಿಸಿದರು. ಸಂಯುಕ್ತ ಅಮೇರಿಕದ ಈಗಿನ ಮತ್ತು ಹಿಂದಿನ ರಾಷ್ಟ್ರಪತಿಯ ವಿಷಯಗಳ ಕುರಿತ ಪ್ರಶ್ನೆಗಳನ್ನು ಕೇಳಲಾಯಿತು. ಬಾಲಿಕೆಯು ಇದನ್ನು ವಿನಾ ತಪ್ಪದೆ ಸರ ಯಾದ ರೀತಿಯಲ್ಲಿ ಉತ್ತರಿಸಿದಳು.

—೦೦೦—

ಮೆದುಳಿಲ್ಲದ ಮಗು.

ನ್ಯೂಯಾರ್ಕಿನಲ್ಲಿ ಮೆದುಳಿಲ್ಲದ ಒಂದು ವಿಚಿತ್ರ ಮಗು ವು ಜನಿಸಿ, 27 ದಿವಸಗಳ ಜೀವದಲ್ಲಿದ್ದು ಸಾಯುತ್ತಿರುವುದು. ಮನುಷ್ಯನ ಸಹಜವಾದ ಕಾರ್ಯಗಳು ಅಂದರೆ ತಿನ್ನುವುದು, ಅಳುವುದು, ಚಲಿಸುವುದು, ನೋವನ್ನು ತಿಳಿಯುವುದು ಮೊದ ಲಾದುವೆ ಆಗಬಲ್ಲ ಎಂದು ವೈದ್ಯಕೀಯ ಜನರ ವಾದ. ಆದ ರೆ ಈ ವಿಚಿತ್ರ ಮಗುವು ಮೆದುಳಿಲ್ಲದೆ ಇರುವುದರಿಂದ ಪೂರ್ತಿ ಇಲ್ಲದೆ ಆಹಾರವನ್ನು ಸ್ವೀಕರಿಸಿದೆ. ಕೈಕಾಲುಗಳನ್ನು ಅಲ್ಲಾಡಿ ಸಿದೆ. ಈ ಮಗುವನ್ನು ಪರೀಕ್ಷಿಸಿದ ವೈದ್ಯರು ಅದರ ತಲೆ ಯಲ್ಲಿ ಮಾತ್ರ ಒಂದು ದ್ರಾವಕವಿತ್ತೆಂದು ಹೇಳುತ್ತಿದ್ದಾರೆ. ಮೆದುಳಿಲ್ಲದ ಈ ಮಗುವು ನಾಲ್ಕಾರು ದಿವಸಗಳ ಸರಿ ಯಾ ರೀತಿಯಲ್ಲಿ ವರ್ತಿಸುದುದರಲ್ಲಿ ಪ್ರಖ್ಯಾತ ವೈದ್ಯರು ದಿಗಿಲು ಗೊಂಡಿರುತ್ತಾರೆ.

—೦೦೦—

ಗುಬ್ಬಿ ಪ್ರಾಣ ಉಳಿಸಿತು.

ಅಸ್ಟ್ರೀಯಾ ದೇಶದ ರಾಜಧಾನಿಯಾದ ವಿಯೆನ್ನದಲ್ಲಿ ಒಂದು ವಿಚಿತ್ರ ಪ್ರಸಂಗ ನಡೆಯಿತು. ಫ್ರಾನ್ಸ್ ಓಬರ್ ಲೆ ಎಂಬಾತ 75 ವರ್ಷದ ಮುದಿ ಹುಡುಗ ಮುದುಕ. ಅ ವನು ಬಡವನಾದ್ದರಿಂದ ಪ್ರತಿನಿತ್ಯವೂ ಎದ್ದು ತನ್ನ ಮನೆ ಹಿಂದೆ ಕಿಟಕಿಯ ಗುಬ್ಬಿಗಳಿಗೆ ಕಾಳುಹಾಕುತ್ತಿದ್ದನಂತೆ. ಒಂದು ದಿನ ಎಂದಿನಂತೆ ಗುಬ್ಬಿಗಳಲ್ಲಿ ಕಿಟಕಿ ಬಳಿ ಸೇರಿದವು. ಆದರೆ ಕಿಟಕಿಯಲ್ಲಿ! ಕಾಳಿ ಅವಾಂತರ ಮಾಡಬಿಟ್ಟವು!! ಅದರೂ ಹಾಕಿದ ಬಾಗಿಲು ಮುಚ್ಚಿಯೇ ಇತ್ತು. ಅವು ಮಾ ತ್ರ ಅವಾಂತರ ಮಾಡುವುದನ್ನು ಕಡಿಮೆ ಮಾಡಲಿಲ್ಲ. ಅಕ್ಕ ಪಕ್ಕದ ಮನೆಯವರು ಈ ಅವಾಂತರವನ್ನು ಕಂಡು ಅವನ ಮನೆ ಮುಂದೆ ನೆರೆದರು. ಬಾಗಿಲು ತಟ್ಟಿದರು, ಕೂಗಿದರು ಒಳಗಿನಿಂದ ಸದ್ದೇ ಕೂಡಲಿಲ್ಲ. ಅವನಿಗೆ ಅಸ್ವಸ್ಥನ ಒಂ ದು, ಬಾಗಿಲೊಡೆದು ನೋಡುವಲ್ಲಿ ಮುದುಕ ಪ್ರಜ್ಞೆ ತಪ್ಪಿ ಬಿದ್ದು ಬಿದ್ದಿದ್ದಾನೆ! ಆ ಕೂಡಲೆ ಅವನನ್ನು ಆಸ್ಪತ್ರೆಗೆ ಸಾಗಿ ಸಿದರು. ಚಿಕಿತ್ಸೆ ನಡೆಸಿದರು, ಪ್ರಜ್ಞೆ ಬಂತು. ಹು ಪಾ ರಾದ!

ಪ್ರಪಂಚದ ಮಹಾ ಪುರುಷರ ಭೋಜನ ಪದಾರ್ಥಗಳು.

ಹರ್ ಹಿಟ್ಲರ್—ಜರ್ಮನಿಯ ಸರ್ವಾಧಿಕಾರಿಯಾದ ಈ ಮನುಷ್ಯನು ಬಹಳವರಂತೆ ಬರಿಯ ಶಾಕಾಹಾರವನ್ನೇ ತಿನ್ನುವ ನು. ಸಾರಾ ಉಡುಪನ್ನು ಧರಿಸುವನು. ಮಾಂಸವನ್ನು ಮುಟ್ಟುವುದಿಲ್ಲ. ಸಾರಾಯಿ ಅಥವಾ ಸಿಗರೇಟಿನ ಅಭ್ಯಾ ಸವೂ ಈತನಿಗೆ ಇಲ್ಲ.

ಸ್ಟ್ಯಾಲಿನ್—ರಷ್ಯಾ ಪ್ರಭುತ್ವದ ಸೂತ್ರಧಾರನೆನಿಸಿದ ಈ ತನು ಊಟಮಾಡುವುದು ಬರಿ ಸಾಮಾನ್ಯ ಪದಾರ್ಥಗಳು. ಈತನಿಗೆ ರೊಟ್ಟಿ, ಉಪ್ಪು, ಬೆಣ್ಣೆ, ಚಹಾ—ಇಷ್ಟು ಇದ್ದರೆ ಸಾಕು.

ಮುಸೋಲಿನಿ—ಅತಿಶ್ರಮದಿಂದ ತನ್ನ ದೇಹಾ ರೋಗ್ಯವನ್ನು ಚೆನ್ನಾಗಿ ಕಾಪಾಡಿಟ್ಟುಕೊಂಡಿರುವ ಈತನು ಇಟಲಿಯ ಸರ್ವಾಧಿಕಾರಿಯಾಗಿದ್ದಾನೆ. ಇವನಿಗೆ ಮಾಂಸ ಮದ್ಯಾ ದಿಗಳು ಇಲ್ಲ. ಹಣ್ಣುಗಳನ್ನು, ಸುರೆಯನ್ನು ಇವನು ಮು ಟ್ಟುವುದೇ ಇಲ್ಲ. ಬೇಯಿಸಿದ ತರಕಾರಿ ಮತ್ತು ಹಾಲು ಮೊಸರು ಇವನ ಆಹಾರ.

ಜನರಲ್ ಬೂಥ್—ಮುಕ್ತಿದಳದ ಈ ಪ್ರಸಿದ್ಧ ಸೇ ನಾಪತಿಯು ತನ್ನ ದೀರ್ಘಾಯುಷ್ಯಕ್ಕೆ ಕಾರಣವನ್ನು ಹೀಗೆ ಹೇಳುವನು—"ಅನೇಕ ವರ್ಷಗಳಿಂದ ನಾನು ಮಾಂಸ ಮ ತ್ತು ಮಿಠಾಯಿಗಳನ್ನು ತಿನ್ನುತ್ತಿಲ್ಲ. ರೊಟ್ಟಿ, ಬೆಣ್ಣೆ—ಇವುಗ ಳೇ ನನ್ನ ಮುಖ್ಯ ಆಹಾರ. ಕೆಲವು ಸಂದರ್ಭಗಳಲ್ಲಿ ಹಾ ಲುಗಳನ್ನೂ ತಿನ್ನುವೆನು. ಬರೀ ಬಾಯಿಗಾಗಿ ಅದಂಗ ನಾ ನು ನೀರಾ ಸೇರಿಸಿದ ನೀರನ್ನು ಕುಡಿಯುತ್ತೇನೆ"

ಜಾರ್ಜ್ ಬರ್ನಾರ್ಡ್ ಶಾ—ವಿಲಾಯಿತಿಯ 80 ವ ರ್ಷದ ಈ ಪ್ರಸಿದ್ಧ ನಾಟಕಕಾರನು ಹೀಗೆ ಹೇಳುತ್ತಾನೆ—'ಕಳೆ ದ 40 ವರ್ಷಗಳಿಂದ ನಾನು ಮಾಂಸವನ್ನೇ ಮುಟ್ಟಿಲ್ಲ. ನಾ ನು ಮದ್ಯವನ್ನು ಕುಡಿಯುವುದಿಲ್ಲ. ಸಿಗರೇಟು ಸೇದುವು ದೂ ಇಲ್ಲ. ನನ್ನನ್ನು ಕೇಳಿದರೆ ನನಗೆ ಅವು ಆರೋಗ್ಯನಾಶಕಾರಕ ಗಳೆಂದು'

ಮಹಾತ್ಮ ಗಾಂಧಿ—ಹಾಲು, ಹಣ್ಣು, ಬೆಲ್ಲ ಕಡಲೆ ಇವೇ ಗಾಂಧೀಜೀಯವರ ಮುಖ್ಯಾಹಾರಗಳು.

ಸರ್ ಸಿ. ವಿ. ರಾಮನ್—ನಮ್ಮ ದೇಶದ ಸುಪ್ರಸಿದ್ಧ ಶಾಸ್ತ್ರಜ್ಞರಾದ ಇವರು ಸಂಪೂರ್ಣ ಶಾಕಾಹಾರಿಗಳು. ಕೋಳಿ ಮೊಟ್ಟೆಯನ್ನು ಕೂಡ ಇವರು ಸೇವಿಸುವುದಿಲ್ಲ.

—೦೦೦—

ಮನುಷ್ಯನ ಬೇಟೆ.

ದಕ್ಷಿಣ ಆಫ್ರಿಕದಲ್ಲಿರುವ ಕೇಪ್ ಪ್ರಾಂತ್ಯದಲ್ಲಿ ಸು ಮಾರು 500 ಮಂದಿ ಶಸ್ತ್ರಧಾರಿ ಪೋಲೀಸರು ಕ್ಯಾಲಿನ್ ಟಿನ್ ಪರ್ವತ ಪ್ರದೇಶಗಳಲ್ಲಿ ಒಬ್ಬ ಮನುಷ್ಯನ ಬೇಟೆಯಾ ಡುವುದರಲ್ಲಿ ನಿರತರಾಗಿದ್ದಾರೆ. ಆ ಪ್ರದೇಶದಲ್ಲಿಂದ ಆ ಬ್ಬ ಪ್ರಸಿದ್ಧ ದರೋಡೆಕೋರನು ಬೆಟ್ಟಗುಡ್ಡಗಳಲ್ಲಿ ಮಿಂ ಚಿನ ವೇಗದಲ್ಲಿ ಓಡಾಡುತ್ತಾನಂತೆ. ಮೂರು ಕುದುರೆಗ ಳನ್ನು ಕೊಂದು ಕದ್ದೊಯ್ದಿರುವುದರಿಂದ ಅವನನ್ನು ಪೋ ಲೀಸರು ಹುಡುಕುತ್ತಿದ್ದಾರೆ. ಅವನು ಇದನ್ನು ತಿಳಿದು ಇಲ್ಲ. ಅನೇಕ ಕಾಡುಮೇಡುಗಳಲ್ಲಿದ್ದುಕೊಂಡು ಈಗ ಪೋ ಲೀಸ ಬಲದ ದಳಗಳನ್ನು ನೋಡುತ್ತಿದ್ದಾನೆ. ಒಂದು ದಿ ನ ರಾತ್ರಿ, ಬೋಟಾರಿಯಿಂದ ತುದಿ 'ಇವತ ನಡುವೆ ನಿಲ್ಲ ಅದು ಜಾಗಕ್ಕೆ 'ನಾನೇನೂ ಹುಚ್ಚನು ಮೂರ್ಖನಲ್ಲ. ನನ್ನಲ್ಲಿ ಯೂ ಜೀವದಾಸೆಯನ್ನು ಮದ್ದು ಗುಂಡುಗಳಿವೆ. ನೀವು ಗುಂಡ ನಾಂಗಿದ್ದರೆ ಬಂದು ನನ್ನನ್ನು ಹಿಡಿಯಿರಿ ನೋಡೋಣ.' ಎಂ ದು ಚೀಟಿಯನ್ನು ಕಟ್ಟಿ ಪರಾರಿಯಾಗಿರುವನಂತೆ. ಪೋಲೀಸ ರಿಗೆ ಬಹಳ ತಲೆನೋವಾಗಿದೆ.

—೦೦೦—

ಎರಡೇ ದಿನಗಳಲ್ಲಿ ಕೂದಲು ಬೆಳ್ಳಗಾಯಿತು!

ಇದು ಪ್ಯಾರಿಸ್ಸಿನಲ್ಲಿ ನಡೆದ ಕತೆ. ಒಂದು ಸಂಸಾರದ ಮೂರು ಮಕ್ಕಳು ರಾತ್ರಿ ಮಲಗಿ ನಿದ್ರಿಸುತ್ತಿದ್ದಾಗ 'ಗ್ಯಾಸ್' ಕೊಳವೆಯಿಂದ 'ಗ್ಯಾಸ್' ಅಡಿಗೆ ನುಗ್ಗಿ ಆ ಕೋಣೆಯ ಬಳಿಯನ್ನೆಲ್ಲಾ ತುಂಬಿಕೊಂಡಿತು. ನಿದ್ರಿಸುತ್ತಿದ್ದ ಮಕ್ಕಳು ಆ ವಿಷಗಾಳಿಯನ್ನು ಕುಡಿದು ಪ್ರಾಣಬಿಟ್ಟವು. ಇದು ಎಲ್ಲರ ಬಾಯ್ಮಾತು ಆಗಿದ್ದಿತು. 'ಇದು ನಮಗೆ ಹೀಗಾದುದು ಕೇಳಿ!' ಎಂ ದು ಎಲ್ಲರೂ ಆಡಿಕೊಂಡಳು. ಮೊದಲು ಬಂದವರು. ಆ ಮಕ್ಕಳ ತಾಯಿ ತಿಳಿಸಿ ಬಿದ್ದಿತು. ಅನ್ಯಾಯವಾದ ಅವರಾ ದುಃಖವು ಹೇಳತೀರದು' ಎಂದು ಹೀಗೆ ಎರಡು ದಿನ ನಡೆಯಲು ಹೊತ್ತಿಗೆ ಅವಳ ತಲೆಯ ಕೂದಲೆಲ್ಲಾ ಬೆಳ್ಳಗಾಗಿ ಹೋಯಿತು! ಹಿಂದೆನ್ನು ಹೀಗೇ ಆಗಿತ್ತಂತೆ. ಯಾವುದೋ ಕೆಟ್ಟ ಆಘಾತವಾಗಿ ಒಬ್ಬ ಯುವಕನನ್ನು ಶವಪೆಟ್ಟಿಗೆಯಲ್ಲಿಟ್ಟು ಹೂ ಳುವಾಗ ಮಾಡಲಾಯಿತು. ಮರುದಿನ ದಿನ ಅವನನ್ನು ಕಂಡಾಗ ಕೂದಲು ಮಂದೆ ನಿದ್ದೆ ಸಿದ್ದ ಅವನ ಗುರ್ತ ಸಿಕ್ಕದಂತೆ ಅವನ ತಲೆಯೆಲ್ಲಾ ನರೆತು ಹೋಗಿತ್ತಂತೆ. ಅವನು ಆಸ್ಪತ್ರೆಯಲ್ಲಿ ಮ

ಬಾಲಿಕೆಯ ಅದ್ಭುತ ಪೂರ್ವಜನ್ಮ ಸ್ಮರಣೆ.

ದಿಲ್ಲಿಯ ಚಾಂದ್‌ಬಾಗ್ ಬಿ.ಡಿ.ಮಾಥೂರ್ ಎಂಬುವರ ಶಾಂತಾ ಎಂಬ ಹೆಸರಿನ ಎಂಟು ವರ್ಷ ಪ್ರಾಯದ ಬಾಲಿಕೆ ತನ್ನ ಪೂರ್ವಜನ್ಮ ವೃತ್ತಾಂತವನ್ನು ಸ್ಪಷ್ಟ ಹೇಳುತ್ತಿದ್ದಾಳೆ ಜನರು ವಿಸ್ಮಯಗೊಳ್ಳುವಂತೆ ಹಲವು ಪ್ರಮಾಣಗಳಾ ದೊರೆತಿವೆ. ಮೂರು ವರುಷಗಳಿಂದ ತಾನು ತನ್ನ ಪೂರ್ವದಲ್ಲಿ ಮಥುರೆಯ ಅಮುಕ ಗೃಹಸ್ಥನೊಬ್ಬನ ಪತ್ನಿಯಾಗಿದ್ದೆನೆಂದು ಆ ಕೆ ಹೇಳುತ್ತಿದ್ದಳು; ಅವನು ಎಲ್ಲಿ ವಾಸಿಸಿದ್ದನೆಂದೂ ಹೇಳು ತ್ತಿದ್ದಳು. ಇತ್ತೀಚೆಗೆ ಆಕೆಯ ತಾಯಿ ತಂದೆಗಳು ಈ ವಿಷ ಯವಾಗಿ ಆ ವಿಳಾಸಕ್ಕೆ ಬರೆಯಲು ಆ 'ಗಂಡ'ನು ಬಂದನು. ಶಾಂತೆಯು ಅವನನ್ನು ಗುರುತಿಸಿದಳು. ಗಂಡ-ಹೆಂಡರಿಗೆ ಮಾತ್ರ ತಿಳಿದಿದ್ದ ಕೆಲವೊಂದು ವಿಷಯಗಳನ್ನೆತ್ತಿ ಹೇಳಲು ಗಂಡನು ಅದುದೆಂದು ಒಪ್ಪಿದನು.

ನರೆ ಗುರುತುಗಳನ್ನು ತಾನು ಮನೆಯಲ್ಲಿ ಒಂದು ಸ್ಥಳದಲ್ಲಿ ಮುಚ್ಚಿಟ್ಟಿರುವೆನೆಂದೂ, ತಾನು ಸಾಯುವ ಸಮಯದಾಗ ಹತ್ತು ರೂಗಳು ಬೂದಿ ಜಾಡ' ಆ ಮಥುರೆ ಕಾಳಿಕಾ ದೇವಿ ಗೆ ಅರ್ಪಣವೆಂದು ಮಡಿಕಟ್ಟಿದೆಂದೂ ಶಾಂತೆ ಹೇಳಿದಳು. ಅದು 11 ವರ್ಷಗಳ ಹಿಂದಿನ ಮಾತು. ಆ ಮಗು ಈಗ 11 ವರ್ಷದ ಹುಡುಗ. ಶಾಂತೆಯು ಆ ಹೆಂಗಸು ಸಾಯು ಮ ತ್ತೊಂದು ಕಡೆಯಲ್ಲಿ ಜನಿಸಿ, 2½ ವರ್ಷಗಳಲ್ಲಿ ಮರಣಪಟ್ಟು, ಈಗ ಪುನಃ ಜನಿಸಿರುವೆನೆನ್ನುತ್ತಾಳೆ.

ಸ್ವೀಕಾರ ಮತ್ತು ವಿಮರ್ಶೆ.

ವಿ ಮಾ ವಾ ಣಿ ಜ್ಯ .

ಭಾರತದ ದಾರಿದ್ರ್ಯವನ್ನಿಗೆ ಕಾರಣಗಳು ಹಲವಿರುವದಾ ದರೂ ಆರ್ಥಿಕ ವ್ಯವಹಾರ ಹಣ ಕಾಸಿನ ವಿಷಯದ ಮತ್ತು ಸ್ವದೇಶಿ ಉದ್ಯಮಗಳ ಪರಿಜ್ಞಾನ ಮತ್ತು ಅನುಭವದ ಕೊರತೆಯೂ ಒಂದು ಪ್ರಬಲವಾದ ಕಾರಣವೆನ್ನಬಹುದು ಎಂದಿಗೆ ಪ್ರಾರಂಭವಾದ ವ್ಯಾಪಾರದಲ್ಲಿ ಈ ವಿಷಯದ ಅರಿವು ಜನತೆಯಲ್ಲಿ ಬಲವತ್ತಾಗಿ ಬೇರೂರಿದಲ್ಲವೋ ಅಂದಿನ ವರೆ ಗೆ ನಮ್ಮ ದೇಶದ ದುರ್ದೆಶೆಗೆ ಅಂತ್ಯವಿಲ್ಲ; ನಮ್ಮ ಕೃಷಿಗೆ ಪುರಸ್ಕಾರವಿಲ್ಲ; ನಮ್ಮ ದಾರಿದ್ರ್ಯಕ್ಕೆ ಅಂತ್ಯವಿಲ್ಲ. ಆರ್ಥಿಕ ವ್ಯವಸ್ಥೆಯಿಲ್ಲದ ಮೇಲೆ ರಾಜಕೀಯ ವಿವೇಚನೆಯು ಬರ ದು ಅಧಿಕ ಪ್ರಸಂಗವೇ ಆಗುವದು.

ಈ ಬಗೆಯ ವಿಚಾರದಲ್ಲಿ ಜನತೆಯಲ್ಲಿ ತಕ್ಕ ಪರಿಜ್ಞಾನ ಗಳುಂಟಾಗಲು ಪತ್ರಿಕಾ ಪ್ರಪಂಚವು ಒಂದು ಅತ್ಯುತ್ತಮ ಸಾ ಧನ. ಈ ರೀತಿಯ ಉದ್ದೇಶಗಳನ್ನು ಸಾಧಿಸಲು ಭಾರತದ ಇತರ ಪ್ರಾಂತಗಳಲ್ಲಿ ಅನೇಕ ಪತ್ರಿಕೆಗಳು ಜನ್ಮವೆತ್ತಿ ದೇಶದ ಜ್ಞಾನ ಜ್ಞಾನಾಂಧಕಾರವನ್ನು ಹೋಗಲಾಡಿಸುತ್ತಲಿವೆ. ಕರ್ನಾ ಟಕದಲ್ಲೂ ಇಂಥ ಪತ್ರಿಕೆಗಳ ಅವಶ್ಯಕತೆಯು ಇತ್ತು. ಮೈಸೂರಿನಿಂದ 'ವಿಮಾ ವಾಣಿಜ್ಯ'ವೆಂಬ ಕನ್ನಡ ಮಾಸಿಕ ಪತ್ರಿಕೆಯು ಕನ್ನಡಿಗರಿಗೆ ವರವಿತ್ತಂತೆ ಹೊರಟಿದೆ. ವಾಣಿಜ್ಯ ಶಾಸ್ತ್ರ ಜ್ಞಾನವನ್ನು ಬೀರಲು ಟೊಂಕಕಟ್ಟಿದೆ. 'ವಿಮಾ ವಾಣಿಜ್ಯ' ವೆಂಬ ಹೆಸರಿಗನುಸಾರವಾಗಿ ವಿಮಾ ಸಂಬಂಧದ ಲೇಖನಗಳೇ ಹೆಚ್ಚಿನದ್ದರೂ ಆರ್ಥಿಕ ಕವನದ ವಾಣಿಜ್ಯಾಂಗಗಳಿಂದ ಕೂಡಿದ ಲೇಖನಗಳೂ ಕೂಡಿರುತ್ತವೆ.

ಇನ್ನು ಸಂಪಾದಕೀಯ ಲೇಖನ ಮತ್ತು ಟಿಪ್ಪಣಿಗಳ ವಿ ಷಯ. ಸಮಕಾಲೀನ ವಿಷಯಗಳನ್ನು ಕುರಿತು ಸಮಯೋಚಿತ ಹಿತದೃಷ್ಟಿಯಿಂದ ಬರೆಯಲ್ಪಡುತ್ತಿರುವ ಸಂಪಾದಕೀಯ ಲೇ ಖನಗಳು ಪತ್ರಿಕೆಯ ಧ್ಯೇಯವನ್ನು ಸ್ಪಷ್ಟಗೊಳಿಸಿದೆ. ವಾ ರ್ಷಿಕ ಚಂದಾ ರೂ. 3 ಇರುವದಾದರೂ ಪತ್ರಿಕೆಯ ಮುದ್ರ ಣ, ಕಾಗದ, ಪುಟ ಮತ್ತು ಚಿತ್ರಗಳ ದೃಷ್ಟಿಯಿಂದ ಇದು ನ್ಯಾ ಯವಾಗಿದೆ. ಕನ್ನಡಿಗರ ಸಹಾನುಭೂತಿಯು ತಕ್ಕ ಪ್ರಮಾ ಣದಿಂದ ಇದಕ್ಕೆ ದೊರೆಯಬೇಕೆಂದೇ ನಮ್ಮ ಉದ್ದೇಶ.

ವ ರ್ತ ಕ ಧು ರೀ ಣ .

ಕರ್ನಾಟಕದಲ್ಲಿ, ಮೇಲಿನ ಉದ್ದೇಶದಿಂದಲೂ ಮತ್ತು ವ್ಯಾ ಪಾರ ಶಿಕ್ಷಣ ದೃಷ್ಟಿಯಿಂದಲೂ ಕಾರ್ಯಾರಂಭ ಮಾಡಿದಂತೆ ವ ರ್ತಕರಿಗಾಗಿ ಒಂದು ಪತ್ರಿಕೆಯು ಈ 'ವರ್ತಕ ಧುರೀಣ'. ದೇಶ ದ ಕಲ್ಯಾಣವು ಜನತೆಯ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿದೆ. ಅಂಥ ಸ್ಥಿತಿಯ ಉತ್ಕೃಷ್ಟತೆ ಮತ್ತು ಸುಖ ಸಾಧನೆಯ ಧ್ಯೇಯದ ಈ ಪತ್ರಿಕೆಗೆ ಪ್ರೋತ್ಸಾಹವೂ ಪ್ರಚಾರವೂ ವಿಶೇಷ ಆವಶ್ಯ ಕವಾಗಿರುತ್ತದೆ. ಉತ್ತಮ ಶೈಲಿಯ ಸುರಸ ಲೇಖನಗಳು, ಯೋಗ್ಯ ಟಿಪ್ಪಣಿ ಮತ್ತು ವಿಮರ್ಶೆಗಳು ಸಮಯೋಚಿತ ವಿಷಯಗಳೂ ಮತ್ತು ಅಂಕಿಗಳಲ್ಲಿ ಒಂದು ವ್ಯವಹಾರ ಕೋಶವೂ ಈ ಮಾಸ ಪತ್ರಿಕೆಯಲ್ಲಿ ಅಡಕವಾಗಿದೆ. ಇಂಥ ಮಾಸಪತ್ರಿಕೆಗಳ ಜನ್ಮವು ರಾಷ್ಟ್ರಕ್ಕೆ ಅಭಿಮಾನಾಸ್ಪದವಾ ದ ಸಂಗತಿಯಾಗಿದೆ. ಇದು ಧಾರವಾಡ ಓಣಿ ರೂ. 1–8– ಇದ್ದು ಸರ್ವರ ಕೈಸೇರಬೇಕಿಲ್ಲದೆ. ವರ್ತಕ ಧುರೀಣನು ಕ ರ್ನಾಟಕದ ಧ್ಯೇಯದೊಡನೆ ಕರ್ನಾಟಕ ಪತ್ರಿಕೆಗಳ ಧುರೀಣ ಗಲಿಮೆ ನಮ್ಮ ಬಯಕೆ. ಈ ಎರಡು ಮಾಸಿಕಗಳನ್ನ ನಾವು ಆತ್ಮೀಯತೆಯಿಂದ ಸ್ವೀಕರಿಸಿರುವೆವು.

Reg. No. M. 1550

29—11—1935

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೊಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್, ಮಡಿಕೇರಿ.

ಹಚ್ಚಿನ ವಿಷಯಕ್ಕೆ ಕೊನೆಗೆ ನೋಡಿರಿ

[illegible] ಅಶ್ವಮೇಧ ಸಹಸ್ರಾಣಿ ಸತ್ಯಂ ಚ ತುಲಯಾ ಧೃತಂ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಸಂದ್ಯಂಡ ಎ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ನವೆಂಬರ್ ತಾರೀಖು ೨೯ನೇ ಶುಕ್ರವಾರ. [ಸಂಚಿಕೆ ೨೮

By Appointment
To H. E. The Governor of Madras

CUPS AND MEDALS



Telephone, 3145

Telegrams 'PRECIOUS



V. SUBRAMANIA IYER.

Jeweller, & Diamond Merchant,

52-2 2 & 3 Kuppumuthu Street Tiruvateswaranpet MADRAS. POST BOX 473 TRIPLICANE

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906] [Incorporated in British India

Head office —UDIPI (S Kanara)

Branches —

1. Udipi 2. Coondapoor, 3 Car Street Mangalore 4 Pandur, Mangalore 5 Shimoga, 6. G T Madras 7 Mercara and 8 Vijayendrapet,

DEPOSITS.

1922	1926	1930	1934
Rs 2 28 419/-	6 43 940/-	20 23 837/-	24 95 329/-

15 11—1935
Rs 26.85,980

SAVINGS BANK ACCOUNTS
Interest allowed at $3\frac{1}{2}$ % p. a.

FACILITIES —

(1) Withdrawal by cheques (2) Production of pass books unnecessary at the time of withdrawal. (3) Accounts transferred FREE of charge from one office to another

FIXED DEPOSITS now accepted up to 5 per cent.

M. Srinivasa Prabhu,

"ಜನರಲ್ ಅಷ್ಯೂರೆನ್ಸ್" ಅಜೆನ್ಸಿ.
ಉದಾರವಾದ ಕ್ಲೈಮ್ ಭೋನಸ ಪಾಲಿಸ್ಯಗಳು

(1) [illegible]
(2) [illegible]
(3) [illegible]
(4) [illegible]

[illegible] 26 ಲಕ್ಷ
[illegible] 70 ಲಕ್ಷ
[illegible] 16 ಲಕ್ಷ
[illegible] ರೂ 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

[illegible] 25% | ಎಂಡೋಮೆಂಟ್ ಪಾಲಿಸಿಗಳಿಗೆ [illegible] 20%

[illegible]

ಪಿ ಡಿ ಭಾರ್ಗವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೇನೇಜರ್ ದಿ ಜನರಲ್ ಅಷ್ಯೂರೆನ್ಸ್
ಸೊಸೈಟಿ ಲಿಮಿಟೆಡ್, ಅಜ್ಮೀರ್ ಅಥವಾ —
[illegible] ಅಯ್ಯಂಗಾರ್
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ [illegible]
[illegible] 3ನೇ ರೋಡು
[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000—0—0
ವಸೂಲಾದ ಶೇರ್ ಹಣ	—	36,690—0—0
ಜನರಿಂದ ಠೇವಣಿ	—	2,34,429—11—6
ವಸೂಲಾದ ಕ್ಷೇಮನಿಧಿ	—	1,03,114—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೇರಳವಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ೪ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಂದ್ಯಂಡ ಐ. ಬೆಳ್ಯಪ್ಪನವರು.	ರಾ. ಸಾ. ಪಾಂಡಂಡ ಬಂಗಪ್ಪನವರು.

ಸೆಕ್ರೆಟರಿ

ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—11—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ತಾಯಿಯರ ಮತ್ತು ಸಾರ್ವಜನಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಿರುವರು. ಮಗುವು ಹೆಚ್ಚು ಕೃಶವಾಗಿ, ವಿಚಾರಶೀಲರಾಗದೆ ಕಾಯಿಲೆಯನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿ ಬಡವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಜೋಂಗರೆ ಬಾಲಾಮೃತವನ್ನು

ಕೊಡಬೇಕು. ಜೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲಾ ಕಡೆಗಳಲ್ಲೂ ದೊರೆಯುವುದು.

ತಯಾರಕರ್—

ಕೆ. ಟಿ. ಜೋಂಗರೆ ಕಂಪೆನಿ,

(52—40) ಗಿರಿಗಾಂವ್, ಬೊಂಬಾಯಿ.

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ಪಿಸ್ತೂಲು, ರಿವಾಲ್ವರು,
ತೋಟಾಗಳು, ಬೇಟೆಯುಡುಪು
ಮತ್ತು ಇತರ ಶಿಕಾರಿಯ
ಅವಶ್ಯಕವಾದ ಎಲ್ಲಾ ಸಲಕರಣೆಗಳ ವಿಶೇಷ ಅಂಗಡಿ
ಕ್ರಯಪಟ್ಟಿ ಕಳುಹಿಸುವೆವು.

ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,

329–331, Abdul Rehman Street,

BOMBAY, 3.

26—13

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ನಾನಾ ಭಾಗಗಳಲ್ಲಿರುವ ಜನರಿಂದ ವರ್ಣನೆಯೊಡನೆ ಆಯುರ್ವೇದೋಕ್ತ ರೀತಿ ಮತ್ತು ಶಾಸ್ತ್ರೀಯ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ಪದಾರ್ಥಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ. ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನದೋಷ, ತಲೆನೋವು, ಕಣ್ಣುಗಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅಲ್ಲೂ ಗುಣವಾಗಿ ಹೆಂಗಸರ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಖಂಡಿತ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡುಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್)

ಕೊಡಗಿನ ಏಜಂಟರು.—ಶ್ರೀ ಶಿವರಾಮರಾವ್ & ಬ್ರದರ್ಸ್, ಮಡಿಕೇರಿ

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ

52—12 ಎ ಎಸ್ ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

ಗವರ್ನಮೆಂಟ್ ಅಧಿಕಾರದಲ್ಲಿ ಸ್ಥಾಪಿತವಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88 814
ಫಂಡ್ಸ್ ಹೆಚ್ಚಳ	ರೂ.	15,53,88 843

ಈ ಮೇಲಿನ ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಪೇಶಾವರ	ರಂಗೂನ
ಅಹ್ಮದಾಬಾದು	ಕಲ್ಕತ್ತಾ	ಕೊಲಂಬೋ	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲಹಾಬಾದು	ಡಾಕ್ಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬೆಳ್ಗಾಂ	ಗೌಹತಿ	ಮಂಡಲೆ	ರಾವಲ್ಪಿಂ	ತಿರುವೆಂದ್ರಮ್
ಬರೇಲಿ	ಜಲಗಾಂವ	ಮೀರತ್	ರಾಂಚಿ	ವಿಶಾಖಪಟ್ಟಣ
ಬೆಂಗಳೂರು	ಗುಂಟೂರು	ಜಲ್‌ಪೈಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಪೋರ್ಟ್ ರೋಡ್, ಬೆಂಗಳೂರು. | 52—46 | ಯಂ. ವಿ. ವೆಂಕಟಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by P. I. Belliappa at "Kodagu" Press, Mercara for "Kodagu" Ltd.

ಊರುಗಳಲ್ಲಿ ಮನರಂಜನೆಯ ಸಾಧನಗಳನ್ನು ಪೂರೈಸುವ ವ್ಯವಸ್ಥೆಯು ಮಾಡಲ್ಪಡುವದು. ಪ್ರತಿನಿಧಿಗಳು ಮತ್ತು ಇತರರು ಅವುಗಳಿಗೆ ಪ್ರೇಕ್ಷಕರಾಗಿರಬೇಕಿದರೆ ಟಿಕೇಟುಗಳನ್ನು ಕೊಂಡುಕೊಳ್ಳಬೇಕಾಗುವದು.

ಕರ್ನಾಟಕದ ಕಲಾ ಕೌಶಲ್ಯ ಪ್ರದರ್ಶನ.

ತಾ. 25ನೇ ಡಿಸೆಂಬರ್‌ನಿಂದ 31ರ ವರೆಗೆ ಸಾಂಗಲಿಯ ಹೊಲು ಪ್ರೇಕ್ಷಕರ ಕರ್ನಾಟಕದ ಕಲಾ ಕೌಶಲ್ಯ ಪ್ರದರ್ಶನವು ಬೇರೊಂದು ಕಟ್ಟಡದಲ್ಲಿ ಕಲಾಭಿಮಾನಿಗಳ ಪ್ರದರ್ಶನಕ್ಕಾಗಿ ತೆರೆದಿಡಲ್ಪಡುವದು. ಕಲಾ ಕೌಶಲ್ಯಗಳ ವಸ್ತುಗಳನ್ನು ಪ್ರದರ್ಶನಕ್ಕಾಗಿ ತೆರೆದಿಡಲ್ಪಡುವದು. ಕಲಾ ಕವ್ಯಗಳ ವಸ್ತುಗಳನ್ನು ಪ್ರದರ್ಶಿಸುವದರ ಹೊರತಾಗಿ ಗಾಯನ ವಾದನ ಕಾರ್ಯಕ್ರಮಗಳ ಯೋಜನೆಯು ಸಹ ಪ್ರದರ್ಶನ ಭವನದಲ್ಲಿ ಮಾಡಲ್ಪಡುವದು. ಈ ಪ್ರದರ್ಶನದಲ್ಲಿ ಹೋಗಿ ನೋಡಲು ಪ್ರವೇಶ ಫೀಯನ್ನು ಆಕರಿಸಲಾಗುವದು. ಈ ಬಗ್ಗೆ ಟಿಕೇಟುಗಳು ಆ ಸ್ಥಳದಲ್ಲಿಯೇ ದೊರೆಯುವವು. ಪ್ರದರ್ಶನದ ಸಮ್ಮೇಲನ ವ್ಯವಸ್ಥಾಪಕರು ಈ ವಿಷಯದಲ್ಲಿ ಬೇರೊಂದು ಸಮಿತಿಯ ಪತ್ರಿಕೆಯನ್ನು ಪ್ರಸಿದ್ಧಪಡಿಸುವರು.

ಸಮ್ಮೇಲನಕ್ಕೆ ಗ್ರಂಥಗಳನ್ನು ಕಳಿಸಬೇಕಾಗಿ ವಿನಂತಿ.

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ [illegible] ಈ ಮೊದಲೇ ತಮ್ಮ ಸಣ ವಾರ ಪತ್ರಿಕೆಗಳಲ್ಲಿ ಪ್ರಸಿದ್ಧ [illegible] ಪ್ರಕಾರ ನಮ್ಮ ಪ್ರದೇಶದ ಮುಂತಾದ ಊರುಗಳನ್ನು ನಡೆಸುವದಕ್ಕಾಗಿ ತಮ್ಮ ಗ್ರಂಥಗಳನ್ನು ಸಮ್ಮೇಲನಕ್ಕೆ ಕಳಿಸಿದ ವಿಷಯದಲ್ಲಿರುವ ಗ್ರಂಥಕಾರರು ಬೆಂಗಳೂರು ಸಾಹಿತ್ಯ ಪರಿಷತ್ತಿನ ಕಡೆಗಾಗಲೀ ಮುಂಬಯಿಯ ಸ್ವಾಗತ ಸಮಿತಿಯ ಕಡೆಗಾಗಲಿ ತಮ್ಮ ತಮ್ಮ ಗ್ರಂಥಗಳನ್ನು ಅತಿ ಜಾಗರೂಕತೆಯಿಂದ ಬೇಗನೆ ಕಳುಹಿಸಬೇಕು. ಇಂಥ ಗ್ರಂಥಕರ್ತರು ಅಥವಾ ಪ್ರಕಾಶಕರು ಸಮ್ಮೇಲನಕ್ಕೆ ಪ್ರತಿನಿಧಿಗಳೆಂದು ಸೇರುವದು ಅವರ [illegible]

ವಿನಂತಿ.

[illegible] ಗಳ ಸಾಹಿತ್ಯ [illegible] ಇತಿಹಾಸದಲ್ಲಿ ಅದ್ವಿತೀಯವಾದ [illegible] ಅವಿಸ್ಮರಣೀಯವಾದುದೆಂದೆನಿಸುವ [illegible] ಕನ್ನಡ ಸಾಹಿತ್ಯ ಸಮ್ಮೇಲನ [illegible] ಆಗ ಮುಂಬಯಿ ನಗರದ [illegible] ಸಮ್ಮೇಲನದ [illegible] ಮುಂತಾದವುಗಳ [illegible] ಪತ್ರಿಕೆಗಳ [illegible] ಮುಖ್ಯಮಾದ ಮಹತ್ವದ ಪ್ರತಿಗಳು. ಸಮ್ಮೇಲನದ ಜನ್ಮವನ್ನು ಶತಮಾನಕ್ಕೆ ಎಳಿಯುವ ಸಂಭವವಿದೆ. ಹಿಂದೂಸ್ಥಾನದ ಹೆಬ್ಬಾಗಿಲೆಂದೆನಿಸಿದ ಮುಂಬಯಿಯಂಥ ಪಟ್ಟಣದಲ್ಲಿ ಈ ಸಮ್ಮೇಲನವು ಜರುಗುತ್ತಿರುವದರಿಂದ ಆ ಪಟ್ಟಣದ ಅನೇಕ ಬಗೆಗಳಲ್ಲಿಯ ಜೀವನಾಗೆಯನ್ನು ಪ್ರತ್ಯಕ್ಷ ಕಣ್ಣಿನಿಂದ ನೋಡುವ ಸುಸಂಧಿಯು ಒದಗಿಬಂದಿದೆ. ಮುಂಬಯಿ ಶಹರದ ಮಾಹಿತಿಯು ಸಚಿತ್ರ ಸ್ಥಳಪಿಕೆಗಳು ಇಂಗ್ಲೀಷ ಮತ್ತು ಕನ್ನಡ ಭಾಷೆಗಳಲ್ಲಿ ತಯಾರಾಗುತ್ತಿದ್ದು ಅವು ಕ್ಷೇತ್ರದಲ್ಲಿಯೇ ಅಲ್ಪ ಬೆಲೆಗೆ ದೊರಕುವವು. ಪಾಠಶಾಲೆಯ ಶಿಕ್ಷಕರು ಮತ್ತು ಪ್ರೊಫೆಸರರು ತಮ್ಮ ತಮ್ಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಒಗ್ಗೆ ಈ ಧನ್ಯ ಕಟ್ಟಣವನ್ನು ಮತ್ತು ಅದರ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವದಕ್ಕಾಗಿ ಶೈಕ್ಷಣಿಕ ಪ್ರವಾಸಗಳ ಯೋಜನೆಯನ್ನು ಮಾಡಬಹುದು. ಸಾರಾಂಶವೆಂದರೆ ಈ ಶೋಭಾಯಮಾನವಾದ ಪಟ್ಟಣವನ್ನು ನೋಡುವದೆಂದರೆ ಅದೊಂದು ಶಿಕ್ಷಣದ ಭಾಗವೇ ಎನಿಸುವದು. ಈ ವಿಷಯದಲ್ಲಿ ಪ್ರತಿನಿಧಿಗಳಿಗೆ ಶಕ್ಯವಿರುವ ಎಲ್ಲ ತರದ ಅನುಕೂಲತೆಗಳನ್ನು ಒದಗಿಸಿಕೊಡಲಾಗುವದು.

ಸಮ್ಮೇಲನದ ದಿನಗಳಲ್ಲಿ ಸ್ವಾಗತ ಸಮಿತಿಯ ಪ್ರಮುಖ ಸಭಾಸದರು ಪ್ರತಿನಿಧಿಗಳೊಡನೆ ಸಂಪೂರ್ಣವಾಗಿ ಬೆರತು ಅವರ ಸ್ನೇಹ ಸಂಪಾದನೆ ಮಾಡುವದಕ್ಕಾಗಿ ಮತ್ತು ವಿಚಾರ ವಿನಿಮಯ ಮಾಡಿ ಪರಸ್ಪರ ಸಾಮಾನ್ಯ ಪ್ರಶ್ನೆಗಳ ವಿಷಯಗಳಲ್ಲಿ ಏಕಾಭಿಪ್ರಾಯವುಳ್ಳವರಾಗುವದಕ್ಕಾಗಿ ಪಟ್ಟಣದಲ್ಲಿಯ ತಮ್ಮ ಬಿಡಾರಗಳನ್ನು ಬಿಟ್ಟು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವರು. ಅದ್ದರಿಂದ ಯಾವತ್ತೂ ಪ್ರತಿನಿಧಿಗಳು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವದು ಎಲ್ಲ ದೃಷ್ಟಿಯಿಂದ ಇಷ್ಟವಾಗಿರುವದು.

ಕೊನೆಯ ವಿನಂತಿ ಏನಂದರೆ, ವಿಶ್ವಕರ್ನಾಟಕದ ಯಾವತ್ತೂ ಕನ್ನಡಿಗರು ಪ್ರತಿನಿಧಿಗಳೆಂದು ಮತ್ತು ಪ್ರೇಕ್ಷಕರೆಂದು ಬಹುಸಂಖ್ಯೆಯಿಂದ ಸೇರಿ ಸಮ್ಮೇಲನವನ್ನು ಯಶಸ್ವಿಯಾಗಿ ಸಾಂಗಗೊಳಿಸಿ ಮಹಾರಾಷ್ಟ್ರಭಾಷೆಯಂತೆ ಕನ್ನಡ ಭಾಷೆಯ ಸೇವೆಯನ್ನು ಉತ್ಸಾಹದಿಂದ ಮಾಡಬೇಕು.

ರಾ. ದ್ಯಾಮರಾಜನ ವೋನ್ಸನ್, ಜನರಲ್ ಸೇಕ್ರೆಟರಿ, ಗಿರಗಾಂವ ಮುಂಬಯಿ ೪. } ಜಿ ಬಿ ಜಡಗೇರಿ B. A LL. B. ಜ. ಸೇಕ್ರೆ, ಎಲ್ ಯಸ್. ಕಲ್ಲಾಪ, ಗೌರವ ಸಾಮಾನ್ಯ ಕಾರ್ಯದರ್ಶಿಗಳು.

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನ ಕಡವು ಮುಡಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾ ಜನಗಳಿಂದ ಹರಕೆ ಮತ್ತು ಕಾಣಿಕೆ ವಸೂಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿಯಬಂದಿದೆ. ಅದ್ದರಿಂದ ಮಲಯಾಳದಲ್ಲಿರುವ ಪರಸಿನಕಡವು ಮುಡಪ್ಪುರ ದೇವಸ್ಥಾನದ ಯಾವ ಕಾಣಿಕೆ ಯಾ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದ್ದರಿಂದ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದವರಿಗೇನೇ ಕಳುಹಿಸಬೇಕಾಗಿದೆ. ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಪಿ. ಯಂ. ಕುಂಞಾರಾಮನ್
ಪರಸಿನಕಡವು, [25—22] ಮೆನೇಜರ್,
25—5—'35. ಪರಸಿನಕಡವು ಮುಡಪ್ಪುರ ದೇವಸ್ಥಾನ

೪೦ ವರ್ಷಗಳಿಂದ ಅನುಭವಸಿದ್ಧವು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ

ರವರ ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಬ್ಯಾಂಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧, [illegible] ಬೇರೆ, ಬಜಾರು ಕರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(೨೭—8) ಮುಖ್ಯ ಕಂಪನಿ,
ಗಿರಗಾಂವ, ಮುಂಬಯಿ.
[illegible]

ಧಾತುಪುಷ್ಟಿ ಲೇಹ

ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಎಲ್ಲರಿಗೂ ಅತ್ಯವಶ್ಯವಾದ ಶಕ್ತಿವರ್ಧಕ ರಸಾಯನ [illegible] ಶರೀರದ [illegible] ಧಾತು [illegible] [illegible]

ಬಾಟ್ಲಿ [illegible] 7—0—0

[illegible]

ಜ್ವರ, ಕೆಮ್ಮು, [illegible] ಶಕ್ತಿ [illegible]
ಬಾಟ್ಲಿ 15 ರೂ 1—8—0 ಸಣ್ಣ ಬಾಟ್ಲಿಗೆ 0—13—0

ಅಶೋಕಾರಿಷ್ಟ ಮತ್ತು ಮಾತ್ರೆ.

ಇದು ಸ್ತ್ರೀಯರಿಗೆ ಅತ್ಯಗತ್ಯವಾದ ಟಾನಿಕ್ ಔಷಧವು. [illegible] ಆರೋಗ್ಯ ಅಥವಾ ಅತ್ಯಲ್ಪ ಸ್ರಾವ [illegible] ಬಿಳುಪು ಹೋಗುವದು, [illegible] ಗರ್ಭಾಶಯ [illegible] ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ರೋಗಗಳನ್ನು ಹೋಗಲಾಡಿಸಿ [illegible] ಬಾಟ್ಲಿ ೧ಕ ರೂ. 2—4—0

ರಕ್ತಶೋಧಕ.

ದೇಹದೊಳಗಿನ ರಕ್ತದ ಕೆಟ್ಟ ದೋಷ [illegible] [illegible] ಬಾಟ್ಲಿ 15 ರೂ. 1—2—0, 3 ಬಾಟ್ಲಿಗಳಿಗೆ 3—4—0.

[illegible]

ಎಂ. ಗಣಪತಿ [illegible] ಆಯುರ್ವೇದಿಕ ಫಿಸಿಶಿಯನ್ಸ್. ರಥವಿಧಿ, ಮಂಗಳೂರು.
[illegible] ಮಡಿಕೇರಿ (ಕೊಡಗು)
(52—20) [illegible] ಪೇಟೆ, ಸೋಮವಾರಪೇಟೆ

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—39 ಬೆಂಗಳೂರು.

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಪ್ರಸವಾನಂತರ ಮುಟ್ಟುಗಳಿಂದುಂಟಾಗುವ [illegible] ನೋವು, ಸೊಂಟನೋವು, ಹೊಟ್ಟೆನೋವು, ಬಿಳಿಮುಟ್ಟು [illegible] ಮುಂತಾದ ಎಲ್ಲಾ ರೋಗಗಳಿಗೂ [illegible] ಶ್ರೀಘ್ರ ಗುಣಕಾರಿ.

ದೊಡ್ಡ ಸೀಸೆ 2—8—0.
ಅರ್ಧ ಸೀಸೆ 1—6—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ, ಅರುಚಿ, ನಿಶ್ಶಕ್ತಿ ಮುಂತಾದ [illegible] ರಕ್ತವೃದ್ಧಿಯನ್ನು ಉಂಟುಮಾಡಿ [illegible] ಬಲವನ್ನು ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಸೀಸೆ 1—8—0. ಅರ್ಧ ಸೀಸೆ 1—13—0

ವಿ. ಪಿ.—ಔಷಧ ಪಡೆಯುವುದಕ್ಕೆ ನವರತ್ನ ಫಾರ್ಮಸಿಯ ವಿಳಾಸಕ್ಕೆ ನೇರ ಬರೆಯಿರಿ.

ಸ್ಟಾಕಿಸ್ಟ್—ಎ. ಎಸ್. ನಾರಾಯಣ, ಚಿಕ್ಕಪೇಟೆ, ಬೆಂಗಳೂರು.
ಏಜೆಂಟ್—ವಿ. ಬಿ. [illegible], ಮಹಾದೇವಪೇಟೆ, ಮಡಿಕೇರಿ.

52—29

ನವರತ್ನ ಫಾರ್ಮಸಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಬೇಟೆಗಾರರಿಗೆ:—

ನಮ್ಮ ಕೋವಿ ಮತ್ತು ಕೋವಿಗಳ ಕೈಪಿಡಿ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಸೂಕ್ಷ್ಮ ವಿಧಾನಗಳ ವಿಷಯ ಉಪಯುಕ್ತ ಸೂಚನೆಗಳಿವೆ



Goolamhusain Allibhoy & Sons. Ltd.,

76—9 210, Abdulrehman Street, BOMBAY 3.

EMPIRE OF INDIA LIFE ASSURANCE CO., LTD.

INCREASE IN INTERIM BONUS RATES.

We are pleased to announce the following increase in the INTERIM RATES of BONUS payable on With Profit Policies becoming claims by death or maturity from 1st March, 1936 to 28th February, 1937 when the next valuation will be made.—

Rs. 18 per annum per Rs. 1,000 Assured on WHOLE LIFE ASSURANCES.
Rs. 16 per annum per Rs. 1,000 Assured on ENDOWMENT ASSURANCES.

In Respect of each Year's Premiem Due and Paid During the aboves Period.

The premium rates charged by this company are very moderate and are prepared with the object of providing the **largest possible immediate assurances** consistent with safety. At most of the insuring ages the average premium at present charged by other offices for a policy of Rs 1000 with Profits will secure in this Company a With Profit assurance **for much larger amount**. Thus for the same premium an additional amount of assurance can be obtained in this Company which is equivalent to an **immediate and certain Bonus** as large as can be looked for in other Life Offices only after very many years. This additional assurance **also** shares in the future profits of the Company.

The increase in the interim rates of Bonus coupled with the low rates of premiums charged by the Company has considerably enhanced the value of our Policies. It is really a splendid record showing the results of economical management, sound investments and careful selection of lives.

Ask for our leaflet 'Why is a Policy in the Empire of India Life Assurance Company, Limited, of Special Interest? **and convince yourself that a policy in the Company is decidedly to your benefit.**

Active Agents wanted in all important places of Mysore State, Coorg etc., on attractive terms.

Branch Secretary,
EMPIRE OF INDIA LIFE ASSURANCE Co., LTD.,
52—3 152/3, Commercial Street Bangalore

ಕನ್ನಡ ಸಾಹಿತ್ಯ ಸಮ್ಮೇಳನ.

(ಇಪ್ಪತ್ತೊಂದನೆಯ ಅಧಿವೇಶನ, ಮುಂಬಯಿ)

ಸಮ್ಮೇಳನದ ದಿವಸಗಳು

ಕನ್ನಡ ಸಾಹಿತ್ಯ ಸಮ್ಮೇಳನದ 21ನೇ ಅಧಿವೇಶನ ಮುಂಬಯಿಯಲ್ಲಿ ಬರುವ ಡಿಸೆಂಬರ್ ತಾ 26 27, 28ರಲ್ಲಿ ಜರಗುವುದು. ಅಧಿವೇಶನವು ಜರಗುವ ಸ್ಥಳ, ಇತ್ಯಾದಿಗಳ ಬಗ್ಗೆ ಮುಂದೆ ತಿಳಿಸಲಾಗುವ ಇತರ ವಿವರಗಳನ್ನು ಕ್ರಮೇಣ ಪ್ರಸಿದ್ಧಿಸಲಾಗುವುದು.

ಪ್ರತಿನಿಧಿಗಳು.

"ಕರ್ನಾಟಕ ಸಾಹಿತ್ಯ ಸಮ್ಮೇಳನದ ಉದ್ದೇಶಗಳನ್ನು ಅಂಗೀಕರಿಸಿ ನಿಯಮಾನುಸಾರವಾಗಿ ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು ಇಚ್ಛಿಸುವವರನ್ನು ಸ್ವಾಗತ ಮಂಡಳಿಯು ಸಮ್ಮೇಳನದ ಬಗ್ಗೆ ಪ್ರತಿನಿಧಿಗಳೆಂದು ಅಂಗೀಕರಿಸುವುದು. ಇಂಥ ಪ್ರತಿನಿಧಿಗಳು ಸ್ವಾಗತ ಮಂಡಳಿಯು ನಿಯಮಿಸುವ ರುಸುಮನ್ನು (ಫೀಯನ್ನು) ಕೊಟ್ಟು ಅದರ ಕಾಣಿಕೆಯಾಗಿ ಒಂದು ಪತ್ರವನ್ನು ಪಡೆಯತಕ್ಕದ್ದು. ಇಂಥ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಷಣ ಮಾಡಬಹುದು, ಪ್ರಬಂಧಗಳನ್ನೋದಬಹುದು, ನಿರ್ಣಯಗಳನ್ನು ಸೂಚಿಸಬಹುದು ಹಾಗೂ ಬೇರೆಬೇರೆ ಕಾರ್ಯಗಳಲ್ಲಿ ಭಾಗವಹಿಸಲು ಅರ್ಹರಾಗುವರು."

ಫೀಗಳು.

ಪುರುಷ ಪ್ರತಿನಿಧಿಗಳ ಬಗ್ಗೆ 2ರೂ, ಸ್ತ್ರೀ ಪ್ರತಿನಿಧಿ ಬಗ್ಗೆ 8 ಆಣೆ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳ ಬಗ್ಗೆ 8 ಆಣೆ ಹೀಗೆ ಪ್ರತಿನಿಧಿತ್ವದ ಫೀಯನ್ನು ಗೊತ್ತುಪಡಿಸಿರುತ್ತದೆ. [illegible] ಪುರುಷರಿಗೆ ಮತ್ತು ಸ್ತ್ರೀಯರಿಗೆ ಯಥಾಶಕ್ತಿ [illegible] ವೇಶನದ ಬಗ್ಗೆ ಅನುಕ್ರಮವಾಗಿ 1ರೂ. ಮತ್ತು 8 ಆಣೆ [illegible] ಗೆ ಫೀಯನ್ನು ಗೊತ್ತುಪಡಿಸಲಾಗಿದೆ. ಪ್ರತಿನಿಧಿಗಳೆಂದಾಗ ಪ್ರೇಕ್ಷಕರೆಂದಾಗಲೀ ಸಮ್ಮೇಳನಕ್ಕೆ ಬರಬೇಕೆಂದಿರುವವರು ಪೋಸ್ಟಲ್ ಮನಿಯಾರ್ಡರ್ ರೂಪದಲ್ಲಿ ಮಾತ್ರ ಅವರ ಫೀಯ ಹಣವನ್ನು ಡಿಸೆಂಬರ್ ತಾ. 1 ರೊಳಗಾಗಿ ಅವರ [illegible] ನ್ನು ಕಳುಹಿಸಬೇಕು. ಫೀಯು ಮುಟ್ಟಿದ ಬಗ್ಗೆ ಪಾವತಿಯನ್ನು ಕಳುಹಿಸಲಾಗುವುದು.

ಸಭಾಗೃಹದಲ್ಲಿ ಸ್ಥಳ ಕ್ರಮ ಯೋಜನೆ.

ಈ ಕೆಳಗಿನಂತೆ ಸ್ಥಾನಕ್ರಮವು ಯೋಜನೆಯು ಗೊತ್ತುಪಡಿಸಲ್ಪಟ್ಟಿದೆ.—(1) ಸನ್ಮಾನ್ಯ ಅತಿಥಿಗಳು, (2) ಬೇರೆ [illegible] ಟ್ಟವರು, (3) ಪ್ರತಿನಿಧಿಗಳು, (4) ಸ್ವಾಗತ ಸಮಿತಿಯ ಸದಸ್ಯರು ಮತ್ತು (5) ಪ್ರೇಕ್ಷಕರು.

ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸುವವರು

ಸ್ವಾಗತ ಸಮಿತಿಯ ಸಭಾಸದರಿಗೆ ಮತ್ತು ಪ್ರತಿನಿಧಿಗೆ ಮಾತ್ರ ಸಮ್ಮೇಳನದ ಚರ್ಚೆ ಮತ್ತು ಕಾರ್ಯಗಳಲ್ಲಿ ಭಾಗವಹಿಸಲಿಕ್ಕೆ ಅಧಿಕಾರವಿರುವುದು.

ಪ್ರತಿನಿಧಿಗಳ ಬಗ್ಗೆ ವಾಸಸ್ಥಳ ಮತ್ತು ಭೋಜನದ ವ್ಯವಸ್ಥೆ.

ಪ್ರತಿನಿಧಿಗಳನ್ನು ಯಥಾಶಕ್ತಿ ಒಂದೇ ಕಟ್ಟಡದಲ್ಲಿ ಇರಿಸುವುದು ಸಾಧ್ಯವಾಗದಿದ್ದರೆ ಒಂದಕ್ಕಿಂತ ಹೆಚ್ಚಿನ ಅನೇಕ ಕಟ್ಟಡಗಳಲ್ಲಿ ಇಳಿದುಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಸ್ತ್ರೀ ಪ್ರತಿನಿಧಿಗಳ ಬಗ್ಗೆ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳ ಬಗ್ಗೆ ಪ್ರತ್ಯೇಕವಾದ ವಾಸಸ್ಥಳ ಯೋಜನೆಯು ಮಾಡಲ್ಪಡುವುದು. ಸಹ ಕುಟುಂಬ ಬಂದ ಪುರುಷ ಪ್ರತಿನಿಧಿಗಳ ಬಗ್ಗೆ ಪ್ರತ್ಯೇಕ ವ್ಯವಸ್ಥೆ ಮಾಡಲ್ಪಡುವುದು. ಇಳಿದುಕೊಳ್ಳುವ ಮತ್ತು ಭೋಜನದ ಬಗ್ಗೆ ಪ್ರತಿದಿವಸಕ್ಕೆ ಪ್ರತಿ ವ್ಯಕ್ತಿಗೆ ರೂ. 2—8—0 ಎಂದು ಅಂದಾಜು ಮಾಡಲಾಗಿದೆ. ಪ್ರತ್ಯೇಕ ವೆಚ್ಚವು [illegible] ಹಣವು ತಿಂಗಳ [illegible] [illegible] ಒಬ್ಬರ ಬಗ್ಗೆ ಯೋಜನೆ ಮಾಡಲಿಕ್ಕೆ ಕೊಡಲ್ಪಡುವುದು. ಪ್ರತಿನಿಧಿಗಳ ಬರುವಿಕೆಯನ್ನು [illegible] ತಿಳಿಸಿರುವ ಅವಧಿಯ ಸಂಪೂರ್ಣ ಹಣವನ್ನು ಮುಂದಾಗಿ ಕಳುಹಿಸಬೇಕು. ಈ ಹಣವು ಮುಟ್ಟಿದ ನಂತರ [illegible] ವ್ಯವಸ್ಥೆ ಮಾಡಲಾಗುವುದು. ಈ ಅವಶ್ಯಕ ರಕಮು ಬಂದಿಲ್ಲದೆ ಬಂದವರಿಗಾಗಿ ವಿಚಾರಕ್ಕೆ ತೆಗೆದುಕೊಳ್ಳಲಾಗುವದಿಲ್ಲ. [illegible] ರಕಮನ್ನು ಪೋಸ್ಟಲ್ ಮನಿಯಾರ್ಡರ್ ರೂಪದಲ್ಲಿ [illegible] ಕಳುಹಿಸಬೇಕು.

ವಾಹನಗಳ ಅನುಕೂಲತೆಗಳು.

ಪ್ರತಿನಿಧಿಗಳನ್ನು ಸ್ಟೇಷನ್ನಿನಿಂದ ಪ್ರತಿನಿಧಿಗಳ [illegible] ಗಳಿಗೆ ಮತ್ತು ಆ ಬಿಡಾರಗಳಿಂದ ಸಭಾಗೃಹಕ್ಕೆ ಮತ್ತು [illegible] ಕರೆದೊಯ್ಯಲು ವಾಹನಗಳ ವ್ಯವಸ್ಥೆಯು ಮೂರು ದಿವಸಗಳ ಬಗ್ಗೆ ಪುಕ್ಕಟೆಯಾಗಿ ಮಾಡಲಾಗುವುದು. ಇತರ ಪ್ರಸಂಗಗಳಲ್ಲಿ ವಾಹನಗಳನ್ನು ಉಪಯೋಗಿಸಬೇಕಾದಲ್ಲಿ ಅದರ ಪ್ರಸಂಗದ ಪ್ರಕಾರ ವೆಚ್ಚವನ್ನು ಅವರು ತಮ್ಮ ಸಂಬಂಧಪಟ್ಟ ಖರ್ಚು [illegible] ಕೊಡಬೇಕಾಗುವುದು.

ಪತ್ರವ್ಯವಹಾರ.

ಸಮ್ಮೇಳನವು ಸಮೀಪಿಸುತ್ತ ಬರುವ ದಿವಸಗಳಲ್ಲಿ ಟಿ. ಗಾಯಸ್, ವಿವಿಧ ಮಾಹಿತಿಯನ್ನು ಕಾರ್ಯ [illegible]

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ವೀರಶೈವ ವಿದ್ಯಾಭಿವೃದ್ಧಿ ಸಂಘ.

ಅಯ್ಯಾ,

ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘದ ಮೀಟಿಂಗು 12—11—35 ರಲ್ಲು ಸೇರಿಸಲ್ಪಟ್ಟಿತು. ಆ ಮೀಟಿಂಗಿಗೆ ವೀರಶೈವ ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರನ್ನು ಸಂಘದ, ರಿಜಿಸ್ಟರ್ ಆದ ಬುಕ್ಕಿನ ಪ್ರಕಾರ ದೊಡ್ಡಳ್ಳಿ ದೇವಸ್ಥಾನಕ್ಕೆ ಬರಬೇಕೆಂದು ಪತ್ರದ ಮೂಲಕ ತಿಳಿಸಿದಾಗ್ಯೂ, ಅವರು ಬಾರದೇ ಹೋದದ್ದು ಸಮಾಜಕ್ಕೆ ಬಹಳ ಕೊರತೆಯಾಗಿದೆ. ಇದೇ ಸಂಬಂಧವಾಗಿ ಬರುವ ತಿಂಗಳು ತಾ 5 ನೇ ಗುರುವಾರ ದಿವಸ ಶ್ರೀ ಕೊಡ್ಲಿಪೇಟೆಯಲ್ಲು ಮಠದಲ್ಲು ಮೀಟಿಂಗ್ ನಡೆಯುವಂತೆ ನಿಶ್ಚಯಿಸಿರುವುದರಿಂದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ವೀರಶೈವ ಸಮಾಜಕ್ಕೆ ಒಳಪಟ್ಟ ಸರ್ವರೂ ಬರುವದು ಅವಶ್ಯಕವಾಗಿ ವಿನಯದಿಂದ ಕೇಳಿಕೊಂಡಿದ್ದೇನೆ.

ವೀರೇಗೌಡರು,
(ಅಧ್ಯಕ್ಷರು)

ಡಿಸ್ಟ್ರಿಕ್ಟ್ ಬೋರ್ಡ್ ಗ್ರಾಮಾಂತರ ರಸ್ತೆಗಳು

ಅಯ್ಯಾ,

ನೈಕರ ಸ್ಥಳೀಕರುಗಳ ಅಂದರೆ ಭೂಮಿ, ಕಾಫಿ, ಏಲಕ್ಕಿ, ಕಿತ್ತಳೆ ಬಗ್ಗೆರ ವ್ಯವಸಾಯಗಳಿಗೆ ಸರಕಾರಕ್ಕೆ ಕಂದಾಯ ಕೊಡಲೂ, ಗ್ರಾಮಾಭಿವೃದ್ಧಿಗೆ ಅಂದರೆ, ಹೈಸ್ಕೂಲ್, ಮತ್ತು ಬೋರ್ಡು ಸ್ಕೂಲ್, ಹುಡುಗಿಯರ ಸ್ಕೂಲ್ ಸರಕಾರಕ್ಕೆ ಕಟ್ಟುವ ಕಂದಾಯದಿಂದಲೂ, ಮ್ಯಾಡರ್ ಮತ್ತು ಲೋವರ್ ಎಲಿಮೆಂಟರಿ ಸ್ಕೂಲ್‌ಗಳು, ಒಂದೆರಡು ದೊಡ್ಡ ಆಸ್ಪತ್ರೆಗಳನ್ನು ಬಿಟ್ಟು ಸಣ್ಣ ಸಣ್ಣ ಆಸ್ಪತ್ರೆಗಳೂ, ಎಲ್ಲಾ ಪೇಟೆಯ ದೇವಸ್ಥಾನಗಳೂ, ಬೋರ್ಡಿಂಗ್ ಹೋಮ್‌ಗಳೂ, ಕೆಲವು ಪಾಠಗಳೂ ಮತ್ತು ಗ್ರಾಮಾಂತರ ಹೋಗುವ ರಸ್ತೆಗಳೂ ಡಿಸ್ಟ್ರಿಕ್ಟ್ ಫಂಡ್‌ನಿಂದಲೂ ನಡಿಸುವದಾಗಿದೆಯೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಗ್ರಾಮಾಂತರದ ರಸ್ತೆಗಳು ಕೆಲವು ವರ್ಷಗಳ ಹಿಂದೆ ನಾಡುಕಚೇರಿಯವರ ಮೂಲಕ ಕಾಂಟ್ರಾಕ್ಟಿನಿಂದ ರಸ್ತೆ ರಿಪೇರಿ ಮಾಡಲ್ಪಡುತಿತ್ತು. ಇತ್ತೀಚೆಗೆ ಸ್ಥಳೀಕರು ತಮ್ಮ ಕೆಲಸ ತಾವೇ ಸಹಕಾರ ಸಂಘಗಳನ್ನು ಸ್ಥಾಪಿಸಿ ಆ ಸಂಘಗಳ ಮೂಲಕವೇ ಆಯಾ ಗ್ರಾಮದ ಹತ್ತಿರದ ಒಳಗಿನ ರಸ್ತೆ ಕೆಲಸ ವಗೈರೆ ನಡೆಸುವಂತಾಯಿತು. ಆಯಾ ಸಂಘಗಳ ಪ್ರೆಸಿಡೆಂಟ್ ಮತ್ತು ನಾಡು ಕಚೇರಿಯವರ ಉಭಯತರ ಪ್ರೋತ್ಸಾಹದಿಂದ ಈಗ 4—5 ವರ್ಷಗಳಿಂದ ಗ್ರಾಮರಸ್ತೆಗಳು ಎಷ್ಟೋ ಉತ್ತಮವಾಗಿ ಬಂದ ಸಂಗತಿಯಾಗಿ ಪತ್ರಿಕೆಗಳಲ್ಲು ಈ ಮೊದಲು ಓದಿ ನೋಡಿರಬಹುದಷ್ಟೆ. ಅಂಥಾ ಕೆಲಸವನ್ನು ಸಂಘದವರಿಗೆ ಈ ವ-

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟಿಯುಳ್ಳ ಜೋಡು ನಳಿಗೆಗಳು.

ಬರೆದಲ್ಲಿ ಕಳುಹಿಸ ಪಡೆ ಉಚಿತ ಕೆಟಲಾಗ್.

ASHOO TOSH DAW & CO.,
GUN MAKERS,
"DAW BUILDING" 184, DHARMTALA ST, CALCUTTA.

ಒಮ್ಮೆ ಪರೀಕ್ಷಿಸಿ ನೋಡಿ] [ಓದುಗರ ಪರೀಕ್ಷೆಗಾಗಿ

4 ಹಿಸ್ಟ್ರಿ ಕರ್ನಲ ಹಣವನ್ನು ವೃಥಾ ದುಂದುಮಾಡದೆ ಇಂದು ಕಾಗದಕ್ಕೆ ಬರೆದು ವಿವರಗಳನ್ನು ಪಡೆಯಿರಿ

ರ್ ಕೊಡದೆ ನಾಡುಕಚೇರಿ ಡಿಸ್ಟ್ರಿಕ್ಟ್ ಬೋರ್ಡುಗಳು ಗ್ರಾಮದ ಪಟೇಲರುಗಳಿಗೆ ಕಂಟ್ರಾಕ್ಟು ಕೊಟ್ಟು ಮಾಡಿಸಿ ಮೊದಲಿನಂತೆ ಕೆಲಸ ನಡಿಸುತ್ತಲಿದ್ದಾರೆ. ಈ ಕೆಲಸವನ್ನು ನೋಡಿದರೆ ರಸ್ತೆಗಳು ಎಷ್ಟರ ಮಟ್ಟಿಗೆ ದುರಸ್ತಿಗೊಳ್ಳುವದೆಂದು ಗೊತ್ತಾಗುವದು.

ನಮ್ಮ ಜನಪ್ರಿಯ ಸದಸ್ಯರಾದ ಡಿ ಬೋರ್ಡ್ ಮೆಂಬರುಗಳು ಈ ಸಂಗತಿ ತಿಳಿದು ತಿಗಿದು ಕೆಲಸ ನೋಡಿ ಕೆಲಸಕ್ಕೆ ತಕ್ಕ ಹಣ ಕೊಡುವಂತೆ ಮಾಡಬೇಕಲ್ಲದೆ ಒಳ್ಳೇ ನಾಡುಕಚೇರಿಯವರಿಗೇನ ನಿಷ್ಪಕ್ಷಪಾತವಾಗಿ ಬೆಂಬಲ ಗಳನ್ನು ಕೇಳುವದಲ್ಲದೆ ಪರಿಶೀಲಿಸಿ ಸರಿ ಕೆಲಸ ನೋಡಿ ಆಯಾಯ ಸ್ಥಳೀಕ ಬೋರ್ಡ್ ಮೆಂಬರುಗಳ ಮೂಲಕ ವಿಚಾರಿಸಿ ಒಂದು ಮೆಮೊರಾಂಡಮ ಒಟ್ಟಾಗಿ ಒಗ್ಗಿ ಸಂಬಂಧಿಸಿದ ಕಡೆಯವರಿಗೆ ದಯಾಗಿಯೂ, ಈ ಸಂಗತಿ ತಾಲೋಕು ಸಭೆಯಲ್ಲಿ ನಾಡುಕಚೇರಿಗಳಿಗೆ ಆಯಾ ಸ್ಥಳದ ಬೋರ್ಡ್ ಮೆಂಬರುಗಳ ಸಲಹೆ ಕೊಟ್ಟು ಹಣ ಕಾಣಿಸುವಂತೆ ಮುಖ್ಯ ಕೊಡುವದಾಗಿಯೂ ಕರು ಣೆ ಕೋರುತ್ತೇನೆ.

ದೇಶಭಕ್ತ

ಡಾಕ್ಟರ್ ಪೋಲ್ಸನ್ಸ್ ಎಬ್ರಹಾಮ್.
ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತಕ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು [52—8]

SHIROMANI NARAYANACHARYA
Choukhamba Benares City.

ಶಾಸ್ತ್ರಗಳು, ಪೂರ್ವಿಕರು ಆರೋಗ್ಯರೇ ಅಧಿಕ ಹಣವಂತರೇ ರಾಜಮಾನ್ಯನವರೇ ಈ ವರ್ಗದ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಮುಂತಾದ ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುತ್ತವೆ. ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಷ್ಟ ಪ್ರಮಾಣದ ಕಂಠದ 1ಕ್ಕೆ ಆಣೆ 1 ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ ಗೌರಿಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ 10 ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ, 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಆಡಕೆಗಿಂತ ಗಟ್ಟಿದಾಗುತ್ತ ಕ್ರಯ ಜಾಸ್ತಿ ಆಗುವವು. (ದಯಾಳಿ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ 1 ಕಾಶೀ ನಕ್ಷೆ 1 ಕಾಶೀ ಪಂಚಾಂಗ ಕೆಟಲಾಗಿನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯರ,

5°—14 ಚೌಖಂಬಾ, ಬೆನಾರಿಸ್ (ಕಾಶೀ)

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಿ ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ॥ ಮುಂಡೇಪಂಡ ಸೋಮಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ॥ ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ॥ ಪಿ. ಜಿ ಮುದ್ದಯ್ಯನವರು
ಹುದಿಕೇರಿ & ತಿತಿಮತಿ—ಮೆ॥ ಜಿ ಮಾದಯ್ಯನವರು
ಸುಂಟಿಕೊಪ್ಪ—ಮೆ॥ ಅಪ್ಪಚೆಟ್ಟೋಳಂಡ ಪೊಣ್ಣಯ್ಯನವರು,
ಸೋಮವಾರಪೇಟೆ—ಮೆ॥ ಕೆ ಬೋಗಪ್ಪನವರು
ನಾಪೋಕ್ಲು—ಮೆ॥, ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮ್ಯಾನೇಜರ್.
"ಕೊಡಗು" ಆಫೀಸ್.
ಮಡಿಕೇರಿ.

ಲಾಭಕರವಾದದ್ದು ಯಾವುದು?



501 ನಂಬರಿನ ಒಂದು ಇಡೀ ಸಾಬೂನೋ ಯಾ ಅರ್ಧ ನೀರು ಮತ್ತು ಅರ್ಧ ಸಾಬೂನಿರುವ ಇತರ ಸಾಬೂನುಗಳೋ?

ಅನೇಕ ಸುಲಭ ಕ್ರಯದ ಸಾಬೂನುಗಳಲ್ಲಿ ಅರ್ಧಾಂಶವು ನೀರಾಗಿರುತ್ತೆ. ಆದ್ದರಿಂದಲೇ ಅವು ಥಟ್ಟನೆ ನೀರಾಗುವುದು. 501 ಸಾಬೂನು ಅತೀ ಸುಲಭ ಖರ್ಚಿನದು. ಯಾಕೆಂದರೆ ಅದು ಒಳ್ಳೇ ಗಟ್ಟಿ ಸಾಬೂನು. ಅದರಲ್ಲಿ ಅವಶ್ಯಕವಾದಷ್ಟೇ ನೀರಿನ ಅಂಶವಿರುವುದು.

501 Soap

ಟ್ರಾಮ್ ಕೋ
ಪಾರಿವಾಳ ಮುಳಿಗೆ,
೧, ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು

ದೊಡ್ಡ ಕಡಿಮೆ. ವಸ್ತ್ರ ಬಾಳಿಕೆ. ಕ್ರಯ ಅತೀ ಕಡಿಮೆ!

ತಯಾರಕರು—ಟಾಟಾ ಆಯಿಲ್ ಮಿಲ್, ಕಂಪನಿ, ಲಿಮಿಟೆಡ್, ಬೊಂಬಾಯಿ, ಶುಂಠಿ ಕಾರ್ಖಾನೆ,
52—19 ಕೊಡಗಿನ ಡಿಸ್ಟ್ರಿಬ್ಯೂಟರ್—ಪಿ. ಎಸ್. ಸ. ಲೇಕ್ಕ, ಸಂತೆಪೇಟೆ, ಮೈಸೂರು.

ಒಗೆದವನ್ನಲ್ಲಿ ಇಟೆಲೀಯನರು ೯ ಜನ.

ಅನೇಕ್ ಎಬಲ್ಲಿ ಇಟೆಲಿಯ ಸೈನಿಕರು ಇಟೆಲಿಯವರ ಮೇಲೆ ಬೆಳಗ್ಗಿನ ಸಮಯದಲ್ಲಿ ಬಂದು ಮಧ್ಯಾಹ್ನದ ವರೆಗೆ ಹೋರಾಡಿ ಅಲ್ಲಿಂದ ಅವರನ್ನು ಅಟ್ಟಿದರೆಂದೂ, ಇನ್ನು ಇಟೆಲಿಯವರ ಮೇಲೆ ಬೀಳುವ ವಿಚಾರದಲ್ಲಿರುವರೆಂದೂ ತಿಳಿದು ಬಂದಿದೆ.

ಸ್ವ ದೇ ಶ .

1934—35ನೇ ವರ್ಷದಲ್ಲಿ ಕೊಡಗಿನಲ್ಲಿ ಮಲೇರಿಯಾ ನಿವಾರಣೆ ಬಗ್ಗೆ ಮಾಡಿದ ಏರ್ಪಾಡುಗಳ ರಿಪೋರ್ಟಿನ ಒಂದು ಪ್ರತಿಯು ನಮಗೆ ಸಿಕ್ಕಿದೆ.

ಸಹಕಾರ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 30 ನೇ ಶನಿವಾರ ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯುವುದು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಈ ತಾ 30 ರಲ್ಲಿ ಕಮಿಷನರಾದ ಮಿ. ಪಾಸ್‌ಮನರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ಭಾಗಮಂಡಲದ ಬಳಿ ತರಕರ ಎಂಬ ಊರಿನಲ್ಲಿ ಒಬ್ಬ ಸ್ತ್ರೀಯನ್ನು ಕತ್ತಿಯಿಂದ ಕಡಿದು ಕೊಲೆಮಾಡಿರುವರೆಂದೂ, ಪೋಲೀಸಿನವರು ಪತ್ತೆಯ ತನಿಖೆಯಲ್ಲಿರುವರೆಂದೂ ವರ್ತಮಾನ.

ಈ ವಾರ ಸುಂಟಿಕೊಪ್ಪದ ಸಂತೆಗೆ ಬಂದ ಒಬ್ಬರಿಗೆ ಹೊಸದಾಗಿ ಪ್ಲೇಗು ಆರಂಭವಾಯಿತೆಂದೂ, ಸೋಮವಾರಪೇಟೆ ಮತ್ತು ಶನಿವಾರಸಂತೆಯಲ್ಲಿ ಪ್ಲೇಗು ಇಳಿದು ಕಡಿಮೆಯಾಗುತ್ತಿರುವುದೆಂದೂ ವರ್ತಮಾನವಿದೆ.

ಅಖಿಲ ಕೊಡಗು ಉಪಾಧ್ಯಾಯರ ಸಹಕಾರ ಸಂಘದ ಹೆಡ್ ಆಫೀಸನ್ನು ವೀರರಾಜಪೇಟೆಯಿಂದ ಮಡಿಕೇರಿಗೆ ವರ್ಗಾಯಿಸಬೇಕೆಂದು ಆ ಸಂಘದ ತಾ 16ರಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ತೀರ್ಮಾನಿಸಲಾಗಿದೆ.

ಈ ವಾರ ವೀರರಾಜಪೇಟೆಯಲ್ಲಿ ಭತ್ತ ಗಂಡುಗ ಒಂದಕ್ಕೆ 42 ರೂಪಾಯಿಯೂ, ಮಡಿಕೇರಿಯಲ್ಲಿ ಕಾಫಿ ಖಂಡಿಗೆ 140 ರೂಪಾಯಿಯೂ, ಮೆಣಸು ಮಣಕ್ಕೆ 25 ರೂಪಾಯಿಯಿಂದ 26 ರೂಪಾಯಿ ವರೆಗೂ ಕ್ರಯವಿತ್ತೆಂದು ತಿಳಿಯುತ್ತೇವೆ.

ಇಂಡಿಯಾ ಕಾಫಿ ಸೆಸ್ ಕಮಿಟಿಯ ಮೀಟಿಂಗು ಈ ತಾ 23ರಿಂದ 25ರ ವರೆಗೆ ಬೆಂಗಳೂರಿನಲ್ಲಿ ನಡೆಯುವುದೆಂದೂ, ಅದಕ್ಕಾಗಿ ಕೊಡಗಿನ ಪ್ರ್ಯಾಂಟೇಶನ್ಸಿನ ಡೆಪ್ಯುಟಿ ಡೈರೆಕ್ಟರರು ತಾ. 22ರಲ್ಲಿ ಬೆಂಗಳೂರಿಗೆ ಹೋಗಲಿರುವರೆಂದೂ ತಿಳಿಯುತ್ತೇವೆ.

ಹಿಪ್ಪದ ವರೆಗೆ ಕಣ್ಣನೂರಿಂದ ವೀರರಾಜಪೇಟೆ ವರೆಗೆ ನಡೆಯುತ್ತಿದ್ದ ರಾಧಾಕೃಷ್ಣ ಮೋಟಾರು ಬಸ್ಸು ಸರ್ವಿಸು ಈ ತಾ. 22ರಿಂದ ಕುಟ್ಟಂದೊಳೆಯ ವರೆಗೆ ನಡೆಯುವುದೆಂದು ತಿಳಿಯುತ್ತೇವೆ. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಕೊಡಗಿನ ಆರ್ಥಿಕ ಹೀನ ಸ್ಥಿತಿಯನ್ನು ವಿಚಾರಿಸಿ ಅದನ್ನು ನಿವಾರಿಸಲು ಉಪಾಯಗಳನ್ನು ಸೂಚಿಸುವ ಬಗ್ಗೆ ನೇಮಿಸಿದ್ದ (ಎಕಾನಮಿಕ್) ಕಮಿಟಿಯ ವರದಿಯು ಪ್ರಕಟವಾಗಿದೆ. ಅದರ ಒಂದು ಪ್ರತಿಯನ್ನು ವಂದನಾಪೂರ್ವಕ ಸ್ವೀಕರಿಸಿದ್ದೇವೆ.

ಕೊಡಗು ಕರ್ನಾಟಕ ಸಂಘದವರು 'ನಾಟಕೋತ್ಸವ'ವನ್ನು ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಈ ತಾ 24ರ ಸಾಯಂಕಾಲ 3½ ಗಂಟೆಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮ. ರಾ. ಎ. ಎಸ್. ಮಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆಸುವರು.

ತೀರ್ಥ ಸೇತ್ರವಾದ ಕಾವೇರಿ ಜಾತ್ರೆಗಾಗಿ ದೂರದಿಂದ ಭಾಗಮಂಡಲಕ್ಕೆ ಬಂದಿದ್ದ ಬ್ರಾಹ್ಮಣನೊಬ್ಬನು ಈ ತಾ. 16ರಲ್ಲಿ ತೀರ್ಥ ಸ್ನಾನ ಮಾಡಿ ದೇವಸ್ಥಾನದ ಮೆಟ್ಟಿಲಲ್ಲಿ ಕುಳಿತಿದ್ದವನು ಅಲ್ಲಿಯೇ ಶಿವಾಧೀನನಾದನೆಂದು ವರ್ತಮಾನ.

ಅಖಿಲ ಕೊಡಗು ಉಪಾಧ್ಯಾಯರ ಎರಡನೇ ವಾರ್ಷಿಕ ಸಮ್ಮೇಳನವು ಈ ತಾ. 17 ಮತ್ತು 18 ರಲ್ಲಿ ವೀರರಾಜಪೇಟೆ ಹೈಸ್ಕೂಲಿನಲ್ಲಿ ಜರಗಿತು. ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಜೆ. ಸಿ. ರೋಲೋ ಎಂ ಎ. ಅವರು ಅಧ್ಯಕ್ಷರಾಗಿದ್ದರು.

ಮಡಿಕೇರಿ ಕಾನ್ವೆಂಟ್ ಸಾಲಿನ ಸ್ಕೂಲಿನ ಬಳಿಯ ರೋಡ್ ಬಂಗ್ಲೆಯಲ್ಲಿ ಸಾಲ ಅಸಿಸ್ಟೆಂಟ್ ಸರ್ಜನ್ ಮಿ ಕೋದಂಡ ಕಾವೇರಪ್ಪನವರ ಇನಾಮಿನ ಒಂದನ್ನು ಈ ತಾ 20ರಲ್ಲಿ ಕಳವುಮಾಡಿದರು ಪತ್ತೆ ಹಚ್ಚಿದವರಿಗೆ ಕೊಡಲಾಗಿದೆ ತಿಳಿಯುತ್ತೇವೆ.

ಈ ತಾ 16 ನೇ ಶನಿವಾರ ಫ್ರೇಜರ್‌ಪೇಟೆಯಲ್ಲಿ ಮ ರಾ ಕಾಳೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆದು ಅನ್ ರೇಮ್ನ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವುದನ್ನು ಕುರಿತ ಕರಡು ನಿಬಂಧನೆಗಳು ಅತೃಪ್ತಿಕರವೆಂದು ಖಂಡಿಸಲ್ಪಟ್ಟವು.

ಕೊಡಗಿನ ಶಾಲಾ ಇನ್ಸ್‌ಪೆಕ್ಟರಾದ ಮಿ. ಯಜ್ಞಾ. ಸಿ. ಎಡ್‌ಮಂಡ್‌ನವರು ಬರುವ ಜನವರಿ ತಿಂಗಳಿಂದ 8 ತಿಂಗಳು ರಜೆ ತೆಗೆದುಕೊಳ್ಳುವರೆಂದೂ, ಅವರ ಬದಲಿಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹೆಡ್ ಮಾಸ್ಟರಾಗಿದ್ದ ಮಿ. ಥಾಮಸ್ ಪೀಟರರು ಇನ್ಸ್‌ಪೆಕ್ಟರಾಗಿ ನೇಮಿಸಲ್ಪಡುವರೆಂದೂ ವರ್ತಮಾನವಿದೆ.

ಇಂಡಿಯಾ ಕಾಫಿ ಸೆಸ್ ಕಮಿಟಿಗೆ ಕೊಡಗಿನಿಂದ ಪ್ಲ್ಯಾಂಟೇಶನ್ಸಿನ ಡೆಪ್ಯುಟಿ ಡೈರೆಕ್ಟರರು, ಮಿ. ಬಿ. ಕೆ. ಕೇಶವ ರೆಡ್ಡಿ ಜಂಗಮನವರು, ಮಿ. ರಾ ಮಡೆಯಂಡ ತಿಮ್ಮಯ್ಯನವರು, ಮಿ ಎ. ಆ. ಬಿ. ನಿಕಲ್ಸನ್‌ರವರು ಮತ್ತು ಮಿ. ಜೆ ಹೆಚ್. ಸ್ಕಾಟ್‌ರವರು ಮೆಂಬರುಗಳಾಗಿ ನೇಮಿಸಲ್ಪಟ್ಟಿರುವರಾಗಿ ತಿಳಿಯುತ್ತದೆ.

ನವಂಬರು ತಾ 21 ಮತ್ತು 22 ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿರುವ ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗಿನ ಮತ್ತು ಸಹಕಾರ ಸಮ್ಮೇಳನದ ಸ್ವಾಗತ ಕಮಿಟಿಯ ಮೀಟಿಂಗೊಂದು ಈ ತಾ. 20 ರಲ್ಲಿ ಮಡಿಕೇರಿಯಲ್ಲಿ ನಡೆದು 20 ಮೆಂಬರುಗಳ ಒಂದು ಕಾರ್ಯಕಾರಿ ಮಂಡಳಿಯು ಆರಿಸಲ್ಪಟ್ಟಿತು.

'ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್, ಉಡುಪಿ, ಲಿಮಿಟೆಡ್'ನವರು, ಅವರ ಲೇಟ್ ಪ್ರೆಸಿಡೆಂಟರ ಸ್ಮಾರಕಾರ್ಥವಾಗಿ ಸೆಂಟ್ರಲ್ ಹೈಸ್ಕೂಲಿಗೆ ದಾನವಾಗಿ ಕೊಟ್ಟಿರುವ 'ಹಾಜಿ ಅಬ್ದುಲ್ಲಾ ಸಾಹೇಬ್ ಮೆಮೋರಿಯಲ್ ಸ್ಕಾಲರ್‌ಶಿಪ್' ಈ ವರ್ಷ 4ನೇ ಫಾರಂನ ವಿದ್ಯಾರ್ಥಿ ವಿ ಸಿ. ಅಪ್ಪಯ್ಯನಿಗೆ ದೊರೆತ್ತಿದೆಯಾಗಿ ತಿಳಿದುಬರುತ್ತದೆ.

ಕ್ರಿಟ್ಟದಲ್ಲಿ ಭಗವಂತನ ಮೇಲೆ ಏರ್ಪಡಿಸಿದ ಕ್ರೀಡೆಯನ್ನು ಕೆಲಸಗಳನ್ನು ಮಾಡಿದ್ದಕ್ಕಾಗಿ ಸರ್ಕಾರದವರು ಹಲವರಿಗೆ ಬಹುಮಾನಗಳನ್ನು ಕೊಟ್ಟಿರುವರು. ಅದರಲ್ಲಿ 'ಕೈಸರ ಹಿಂದ್ ಮೆಡಲ'ನ್ನು (3ನೇ ಕ್ಲಾಸ್) ಪಡೆದಿರುವವರು ಪೈಕಿ ಕ್ಯಾಪ್ಟನ್ ಕೊಡಂದೆರ ಟಿ. ಸುಬ್ಬಯ್ಯನವರ ಪತ್ನಿಯವರು ಒಬ್ಬರಾಗಿರುವರು.

ಫ್ರೇಜರ್‌ಪೇಟೆಯ ಗಣಪತಿ ರಥೋತ್ಸವವು ತಾ 12ರಿಂದ 17ರ ವರೆಗೆ, ದನಗಳ ಪ್ರದರ್ಶನವು ತಾ. 14ರಿಂದ 16 ರ ವರೆಗೂ ನಡೆಯಿತು. ಪ್ರದರ್ಶನವು ತಾ 11 ರಲ್ಲಿ ಶ್ರೀಯುತ ಡಿ. ಸಾಕಮ್ಮನವರಿಂದ ತೆರೆಯಲ್ಪಟ್ಟಿತು. ತಾ 16 ರಲ್ಲಿ ಉತ್ತಮ ದನಗಳಿಗೆ ಇನಾಮುಗಳು ಅಸಿಸ್ಟೆಂಟ್ ಕಮಿಷನರಾದ ಮ. ರಾ. ಯಂ ಯಸ್. ಮಂದಣ್ಣನವರಿಂದ ಹಂಚಲ್ಪಟ್ಟವು. ಸುಮಾರು 2000 ದನಗಳ ಪ್ರದರ್ಶನಕ್ಕೆ ಬಂದಿದ್ದವು.

ಈ ತಾ. 15 ರಿಂದ ಅದಿ ಶ್ರೀ ಕಾವೇರಿ ಮೋಟಾರು ಸರ್ವಿಸಿನ ಬಸ್ಸೊಂದು ಕುಟ್ಟದಿಂದ ಬೆಳಗ್ಗೆ 6 ಗಂಟೆಗೆ ಹೊರಟು 8-40 ಗಂಟೆಗೆ ವೀರರಾಜಪೇಟೆಗೆ ತಲಪಿ, ಅಲ್ಲಿಂದ 9-15 ಗಂಟೆಗೆ ಹೊರಟು 11-20 ಗಂಟೆಗೆ ಮಡಿಕೇರಿಗೆ ತಲಪುವುದೆಂದೂ, ಮಡಿಕೇರಿಯಿಂದ ಮಧ್ಯಾಹ್ನ 1 ಗಂಟೆಗೆ ಹೊರಟು, 2-10 ಗಂಟೆಗೆ ವೀರರಾಜಪೇಟೆಗೆ ತಲಪಿ ಅಲ್ಲಿಂದ 3 30 ಗಂಟೆಗೆ ಹೊರಟು ಕುಟ್ಟಕ್ಕೆ ಸಾಯಂಕಾಲ 6 ಗಂಟೆಗೆ ತಲಪುವುದೆಂದೂ ತಿಳಿಯಬರುತ್ತದೆ.

ಈಗ ಮದ್ರಾಸು ಯುನಿವರ್ಸಿಟಿ ಟ್ರೈನಿಂಗ್ ಕಾಲೇಜಿನ ಎಡ್‌ಮಿನಿಸ್ಟ್ರೇಟಿವ್ ಕರಸ್ಪಾಂಡೆಂಟರಾಗಿರುವ ಕ್ಯಾಪ್ಟನ್ ಚೆಪ್ಪುಡಿರ ಬಿ. ಪೂವಪ್ಪನವರು ಬರುವ ಏಪ್ರಿಲ್ ತಿಂಗಳಿಂದ ಕಾಂಗ್ರೆಸಿನಲ್ಲಿರುವ ಲೈಟ್ ಪೋಲೀಸ್ ವಿಭಾಗದ ಕರಸ್ಪಾಂಡೆಂಟರಾಗಿಯೂ, ಅವರ ಬದಲಿಗೆ ಕ್ಯಾಪ್ಟನ್ ಕೊಡಂದೆರ ಟಿ ಸುಬ್ಬಯ್ಯನವರು ಮದ್ರಾಸ್ ಯುನಿವರ್ಸಿಟಿ ಟ್ರೈನಿಂಗ್ ಕಾಲೇಜಿನ ಕರಸ್ಪಾಂಡೆಂಟರಾಗಿಯೂ ನೇಮಿಸಲ್ಪಟ್ಟಿರುವರೆಂದು ವರ್ತಮಾನ.

ಹಿಂ ದೂ ದೇ ಶ .

ಬ್ರಿಟಿಷ್ ಗಿಯಾನದಲ್ಲಿರುವ ಪ್ರಮುಖ ಹಿಂದೀ ವ್ಯಾಪಾರಿಗಳಾದ ಶ್ರೀ ಹೆಚ್. ಬಿ ಗಜರಾಜರೆಂಬವರು ಕ್ವೀನ್ಸ್ ಟೌನಿನ ಮಸೀದಿಯ ದುರಸ್ತಿನ ಖರ್ಚಿನಲ್ಲಿ ಸಗ ಅರ್ಧಾಂಶವನ್ನು ತಾವು ಕೊಡುವುದಾಗಿ ತಿಳಿಸಿದ್ದಾರೆ ಸ್ತುತ್ಯ!

ಕಲ್ಕತ್ತೆಯ ಸಂಸ್ಥಾನದ ಏರ್ಪಾಟುಗಳು ಗವರ್ನಮೆಂಟ್ ಕಾಲೇಜಿನಲ್ಲಿ ಒಬ್ಬ ಹಿಂದೀ ಲೆಕ್ಚರರ ನೇಮಕವಾಗಿದೆ. ಕಳೆದ 4 ವರ್ಷಗಳಿಂದ ಇಂಟರ್‌ಮೀಡಿಯೆಟ್ ಮತ್ತು ಬಿ ಎ ಪರೀಕ್ಷೆಗೆ ವಿದ್ಯಾರ್ಥಿಗಳು ಹಿಂದಿಯನ್ನು ತೆಗೆದುಕೊಳ್ಳುತ್ತಿದ್ದುದರಿಂದಲೇ ಈ ನೇಮಕ. ದಕ್ಷಿಣ ಹಿಂದೂಸ್ಥಾನದಲ್ಲಿ ಇಂತಹ ನೇಮಕವಾದುದಿದೇ ಮೊದಲು.

ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರ ಪ್ರಸಾದರ ಗೃಹವು ಪ್ರತ್ಯಕ್ಷ ಕ್ರಿಮಿನಲ್ ಲಾಯರ್ ಅಧೀನವಿದ್ದು ಅದನ್ನು ಡೆಲ್ಲಿ ಕಾಂಗ್ರೆಸ್ ಕಮಿಟಿಯವರು ತನ್ನದೆನ್ನುತ್ತಾರೆ. ಈ ವಿವಾದವೇ ಬೇಡವೆಂದು ಬಾಬೂಗಳು ಅದನ್ನು ಕಾಂಗ್ರೆಸಿನ ಗೋಲ್ಡನ್ ಜುಬಿಲಿ ಕಾಲದಲ್ಲಿ ಭಾರತ ರಾಷ್ಟ್ರೀಯ ಸಭೆಗೆ ಒಪ್ಪಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಪಾಟ್ನಾದಲ್ಲಿ ಮುಸ್ಲಿಮರದೊಂದು ಹೊಸ ರಾಜಕೀಯ ಸಂಗವು ಏರ್ಪಡಲಿದೆ. ಇದರ ಸ್ಥಾಪನೆಗೆ ಉದ್ದೇಶವು ಆ ಪ್ರಾಂತ್ಯದ ಮುಸ್ಲಿಮರ ಮುಂದಿನ ಅಭಿವೃದ್ಧಿಯನ್ನು ಮುಂದಿಡುವುದೇ. ಇದರಲ್ಲಿ ಕಾಂಗ್ರೆಸ್ ಮುಸ್ಲಿಮರು ಮತ್ತು ನ್ಯಾಶನಲಿಸ್ಟರ ಸಹಾನುಭೂತಿ ಇದೆ. ಹಲವು ಬಿಹಾರಿ ನೇತಾರರಿಗೆ ಮುಖಂಡರಿಗೆ ಆಮಂತ್ರಣ ಪತ್ರಗಳು ಹೋಗಿವೆ. ಅಲ್ಲದೆ ಈ ಸಂಗದ ಪರವಾಗಿ 'ಅಜದ್' ಎಂಬ ಪತ್ರಿಕೆಯನ್ನು ಹೊರಡಿಸಲು ಸರ್ಕಾರದ ಅಪ್ಪಣೆಯೂ ದೊರೆತಿದೆ.

ಈ ಬಾರಿಯ ಇಂಗ್ಲೆಂಡಿನ ಪಾರ್ಲಿಮೆಂಟ್ ಚುನಾವಣೆಗೆ ಸಲಹೆಗಾರರಲ್ಲ ಹಿಂದಿಯರು ಉಮೇದುವಾರರಾಗಿರುವರು. ಅವರಲ್ಲಿ ಇಲ್ಲ. ಕಳೆದ ಸಲ ಕಮ್ಯೂನಿಸ್ಟ್ ಪಕ್ಷದಿಂದ ನಿಂತಿದ್ದ ಮಿ. ಸಕಲತವಾಲಾರು ತಮ್ಮ ಉಮೇದಿಯನ್ನು ಹಿಂತೆಗೆದುಕೊಂಡಿದ್ದಾರೆ. ಈ ಸಲ ನಿಲ್ಲಲು ಇಂಡಿಯಾ ಲೀಗಿನ ಶ್ರೀ ಕೃಷ್ಣ ಮೆನೋನರಿಗೆ ಅನುಕೂಲವು ಸಿಕ್ಕಲಿಲ್ಲ. ಬರ್ಮಾದ ಮು ಜಾರಾಬರ ಮತ್ತು ಸರ್ ಆಲ್ಫ್ರೆಡ್ ಬ್ಯಾನರ್ಜಿ ಮೊದಲಾದವರು ಪ್ರಸ್ತಾಪವೇ ಈ ಸಂಬಂಧ ಈಗ ಕೇಳಬಂದಿಲ್ಲ. ಮಿ. ಬೆಸ್ಸರರವರನ್ನು ಹಿಂದೆ ಲೇಬರ್ ಪಂಗಡದವರೇ ಹಿಡಿದಿದ್ದರು. ಅವರು ಈಗ ಯಾರಿಗೂ ಬೇಡವಾದುದು! ಆದರೂ ಭಾರತ ಪ್ರತಿನಿಧಿಗಳು ಯಾರೂ ಇಲ್ಲ.

ವಿ ದೇ ಶ .

ಅರ್ಜೆಂಟೈನಿನಲ್ಲಿರುವ 15 ಲಕ್ಷ ಇಟೆಲಿಯವರು ಬ್ರಿಟಿಷರ ಸಾಮಗ್ರಿಗಳನ್ನು ಬಹಿಷ್ಕರಿಸಬೇಕೆಂದು ಅಲ್ಲಿನ ಇಟೆಲಿಯವರ ಒಂದು ಸಂಘವು ಅವರಲ್ಲಿ ವಿನಂತಿಮಾಡಿಕೊಂಡಿದೆ.

ಇಟಾಲ್ಲಿ ಎಂಬಾಕೆ ರೀಗಾ ಪ್ರಾಂತ್ಯದ ಒಬ್ಬ ರೈತನ 10 ವರ್ಷದ ಮಗಳು. ಈಕೆಯು ಬಾಲ್ಯದಲ್ಲಿಯೇ ದೇವಿಯೇ ಆವೇಶವಾಗಿ ವಿದ್ವಾಂಸರ ಅಭಿಪ್ರಾಯ. ಈಕೆ ಒಬ್ಬಳು, ಆದರೆ ಪಕ್ಕದ ಕೋಣೆಯಲ್ಲಿ ಯಾರಾದರೂ ಮತ್ತು ಬೇರಾಗಿ ಒಮ್ಮತ್ತಿರುವಾಗ ಅದನ್ನು ಈಕೆ ಗಟ್ಟಿಯಾಗಿ ಹೇಳಬಲ್ಲಳು. ಈಕೆಗೆ ಸ್ವಭಾಷೆಯ ಹೊರತು ಬೇರೆ ಭಾಷೆ ಬಾರದು; ಆದರೆ ಫ್ರೆಂಚ್, ಇಂಗ್ಲಿಷಿನಲ್ಲಿ ಇತರರು ಓದುವುದನ್ನೇ ಈಕೆ ತಿರುಗಿ ಹೇಳಬಲ್ಲಳು! ಈಕೆಯ ಪರೀಕ್ಷೆ ಇನ್ನೂ ನಡೆಯುತ್ತಿದೆ.

ಫ್ರೇಜರ್‌ಪೇಟೆ ಮೀಟಿಂಗು

ಈ ತಾ. 16ರಲ್ಲಿ ಫ್ರೇಜರ್‌ಪೇಟೆಯಲ್ಲಿ ಮ. ಕಾಳೇಗೌಡರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಅನ್‌ರೇಮ್ನ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವುದನ್ನು ಕುರಿತ ಕರಡು ನಿಬಂಧನೆಗಳ ವಿಷಯವಾಗಿ ಜಮೀನ್ದಾರರ ಸಂಘದ ಅಧ್ಯಕ್ಷರಾದ ಮ. ರಾ. ಪಿ. ಬಿ. ಚಿಣ್ಣಪ್ಪನವರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಮ. ರಾ. ಎಸ್. ಎಸ್. ರಾಮಶೆಟ್ಟಿಯವರು ವಿವರವಾಗಿ ಭಾಷಣ ಮಾಡಿದರು. ನಂತರ ಈ ಕೆಳಗಿನ ಠರಾವುಗಳು ಸರ್ವಸಮ್ಮತಿಯಿಂದ ಮಂಜೂರಾದವು.

1. ಅನ್‌ರೇಮ್ನ್ ಜಾಗದಿಂದ ತೆಗೆಯುವ ಗಂಧದ ಮರಗಳಿಗೆ ಬೋನಸು ಕೊಡುವುದನ್ನು ಕುರಿತು ಸರ್ಕಾರದವರು ಪ್ರಕಟಿಸಿರುವ ಕರಡು ನಿಬಂಧನೆಗಳು ಸಂಪೂರ್ಣ ಅತೃಪ್ತಿಕರವೆಂದು ಈ ಸಭೆಯ ಅಭಿಪ್ರಾಯವಾಗಿದೆ.

2 ಈ ವಿಷಯವನ್ನು ಕುರಿತು ದೇಶದಲ್ಲಿ ಸುತ್ತಿ ಜನರ ಅಭಿಪ್ರಾಯ ತಿಳಿದುಕೊಂಡು ನ್ಯಾಯವಾದ ನಿಬಂಧನೆಗಳನ್ನು ರಚಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದು ಈ ಸಭೆಯು ಸರ್ಕಾರದವರನ್ನು ಕೇಳಿಕೊಳ್ಳುತ್ತದೆ.

ವಂ ದ ನೆ ಗ ಳು .

ಇದೇ ಅಕ್ಟೋಬರ್ ತಾ 16ನೇ ಬುಧವಾರ ಸ್ವರ್ಗಸ್ಥರಾದ ನನ್ನ ಪ್ರಿಯ ಪತಿಯವರ ಅಗಲುವಿಕೆಯಿಂದ ನನಗುಂಟಾದ ದುಃಖಕ್ಕಾಗಿ ಸಂತಾಪವನ್ನು ಸೂಚಿಸಿ ಬರೆದ ಪತ್ರಗಳು ಅನೇಕ ನನ್ನ ಸಂಗಡಿಗರಿಂದಲೂ, ಹಿತಚಿಂತಕರಿಂದಲೂ ನನಗೆ ತಲಪಿದೆ. ಇವುಗಳೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿ ಪತ್ರದ್ವಾರ ವಂದನೆಗಳನ್ನು ಅರ್ಪಿಸಲು ನನಗೆ ಸಾಧ್ಯವಿಲ್ಲ. ನನ್ನ ದುಃಖದಲ್ಲಿ ಆ ಪತ್ರಗಳು ಎಷ್ಟರ ಮಟ್ಟಿಗೆ ನನ್ನನ್ನು ಶಾಂತಿಸಿದೆ ಎಂಬುದನ್ನು ಬರೆದು ವರ್ಣಿಸಲಸಾಧ್ಯ. ಮಹಾನುಭಾವರ ಈ ಕೃಪೆಗಾಗಿ ನಾನು ಈ ಪತ್ರಿಕೆಯ ಮುಖಾಂತರ ನನ್ನ ಸಾದರ ವಂದನೆಗಳನ್ನರ್ಪಿಸುತ್ತೇನೆ.

ಮಡಿಕೇರಿ. ನೆರವಂಡ ಸೀತಮ್ಮ.

1—1 (ಮಿಸೆಸ್ ಎನ್. ಅಪ್ಪಯ್ಯ)

ಪ್ರ ಕ ಟ ಣೆ .

ಇದರಿಂದ ಎಲ್ಲಾ ಮಹನೀಯರುಗಳಿಗೆ ತಿಳಿಸುವದೇನೆಂದರೆ:—ನಮ್ಮ 'ರಾಧಾಕೃಷ್ಣ ಮೋಟಾರು ಸರ್ವಿಸು' ಇದೇ ತಾ. 22ರಿಂದ ಕಣ್ಣನೂರಿನಿಂದ ಬೆಳಗ್ಗೆ 7 ಗಂಟೆಗೆ ಹೊರಟು 9 ಗಂಟೆಗೆ ವೀರರಾಜಪೇಟೆಗೆ ತಲಪಿ ಅಲ್ಲಿಂದ 10½ಗೆ ಹೊರಟು ಪೊಂಬಾಗಾಗಿ ಕುಟ್ಟಂದೊಳೆಗೆ 11-45ಕ್ಕೆ ತಲಪಿ, ಕಣ್ಣನೂರಿಂದ 9 ಗಂಟೆಗೆ ಹೊರಟು ಕುಟ್ಟಂದೊಳೆ ವರೆಗೆ ಬಂದು ಹಿಂತಿರುಗುವ 'ರಾಮ್ ಮೋಟಾರು ಸರ್ವಿಸಿಗೆ' ಕನೆಕ್ಷನ್ ಕೊಟ್ಟು, 12 ಗಂಟೆಗೆ ಕುಟ್ಟಂದೊಳೆಯಿಂದ ಹೊರಟು ಮಧ್ಯಾಹ್ನ 1—15 ಗಂಟೆಗೆ ವೀರರಾಜಪೇಟೆಗೆ ಪುನಃ ತಲಪಿ, 4 ಗಂಟೆಗೆ ವೀರರಾಜಪೇಟೆಯಿಂದ ಹೊರಟು ಕರಂಗದ ಮಾರ್ಗವಾಗಿ ಕಣ್ಣನೂರಿಗೆ ಮರಳಿ ಬರುತ್ತಿದೆ. (ತಲಚ್ಚೇರಿ ಕೈಟಿ ವರೆಗೆ) ಮಡಿಕೇರಿಯಿಂದಲೂ ಮತ್ತು ಕುಟ್ಟದಿಂದಲೂ ಹೊರಡುವ 'ಅದಿ ಶ್ರೀ ಕಾವೇರಿ ಮೋಟಾರು ಸರ್ವಿಸಿನ' ಬೆಳಗ್ಗೆ ಬರುವ ಬಸ್ಸಿಗೂ ಮತ್ತು ಮಧ್ಯಾಹ್ನದ ಮೇಗೆ ಹೊರಡುವ ಸರ್ವಿಸಿಗೂ ಕನೆಕ್ಷನ್ ಕೊಟ್ಟು, ಕಣ್ಣನೂರಿಗೆ ಹೋಗುವ ಮತ್ತು ಬರುವ ಪ್ರಯಾಣಕ್ಕೆ ಅನುಕೂಲ ಕಲ್ಪಿಸಲಾಗಿದೆ. ವೀರರಾಜಪೇಟೆಯಿಂದ ಕಣ್ಣನೂರಿಗೂ ಕಣ್ಣನೂರಿಂದ ವೀರರಾಜಪೇಟೆಗೂ ಕೊಡಲ್ಪಡುವ ಬಸ್ಸು ಟಿಕೇಟುಗಳು ನಮ್ಮ ಆಫೀಸಿನಲ್ಲೂ 'ಅದಿ ಶ್ರೀ ಕಾವೇರಿ ಸರ್ವಿಸಿನ' ಆಫೀಸಿನಲ್ಲೂ ದೊರೆಯುತ್ತವೆ.

ಸರ್ವ ಮಹನೀಯರುಗಳು ಉದಾರ ಭಾವದಿಂದ ನಮ್ಮ ಸರ್ವಿಸಿಗೆ ಪ್ರೋತ್ಸಾಹ ಕೊಡಬೇಕಾಗಿ ಅತಿ ವಿನಯದಿಂದ ಬೇಡಿಕೊಳ್ಳಲಾಗಿದೆ.

2—1 ಮಾಲೀಕರು ಪುತ್ತೂರು.

ಇಟಲಿ-ಅಬಿಸೀನಿಯಾ ಯುದ್ಧ.

ಅನೇಲೆಯಲ್ಲಿ ಇಥಿಯೋಪಿಯನರ ಜಯ. ಟೈಗ್ರೆ ಪ್ರಾಂತ್ಯದಲ್ಲಿ ಭೀಕರ ಕದನ.
ಇಟಲಿ ಸೇನಾಧಿಪತಿಗಳ ಬದಲಾವಣೆ.
ಅಬಿಸೀನಿಯಾ ಸೈನ್ಯದ ಮೇಲೆ ಬಾಂಬಿನ ಸುರಿ ಮಳೆ.

ನವೆಂಬರ್ ತಾ. 13.

ಇಥಿಯೋಪಿಯನರ ಜಯ.

ಅನೆಲಿಯಲ್ಲಿ ಇಥಿಯೋಪಿಯನರು ಗೆದ್ದರೆಂದು, ಇಟ. 12 ಇಟಲಿಯನರು ಕೊಲ್ಲಲ್ಪಟ್ಟರು. ಇಟಲಿಯ ಕಡೆ 1000 ಕ್ಕೆ ಸೈನಿಕರು ಕೈದಿಗಳಾದರು. 6 ಟ್ಯಾಂಕುಗಳು ಇಥಿಯೋಪಿಯನರ ಕೈವಶವಾದವು. ರಾಸ್ ಡೆಸ್ಟನರು ಕ್ರಮವಾಗಿ ಹಿಂತಿರುಗಿ ಇಟಲಿ ಸೈನ್ಯವನ್ನು ದಕ್ಷಿಣದಿಂದ ಮುತ್ತಿಗೆ ಮಾಡುತ್ತಿರುವರು. ಇಥಿಯೋಪಿಯನರು ತಮ್ಮ ಒಳ ತಮ್ಮ ಯುದ್ಧರಂಗವನ್ನು ಬಲಪಡಿಸುತ್ತಿರುವ 5 ಇಟಲಿ ವಿಮಾನಗಳು ಅಗಾದ ಗ್ರಾಮದ ಮೇಲೆ ಬಾಂಬುಗಳನ್ನು ಹಾಕಿದರು.

ಇಥಿಯೋಪಿಯಕ್ಕೆ ಯುದ್ಧ ಸಾಮಾನುಗಳು.

ಇಥಿಯೋಪಿಯಕ್ಕೆ ಬೇರೆ ದೇಶಗಳಿಂದ ಯುದ್ಧ ಸಾಮಾನು ದೊಡ್ಡ ಪ್ರಮಾಣದಲ್ಲಿ ಬರುತ್ತಿವೆ. 5000 ಮಿಷಿನ್ ಗನ್ನುಗಳು, ಸಾವಿರ ಔಷಧಗಳೂ ಬಂದು ತಲುಪಿವೆ. ಅಧಿಸೀನಿಯ 'ಗಾಸ್ ಮಾಸ್ಕು'ಗಳೂ ಬೇಗನೆ ಬರುವವು.

ಜನರಲ್ ಗ್ರಾಜಿಯಾನಿಯವರು ಮರುಭೂಮಿಯ ಮಧ್ಯದಲ್ಲಿರುವ ನೀರಿನ ಬುಗ್ಗೆಗಳನ್ನು ಒಂದರ ನಂತರ ಒಂದನ್ನು ಭದ್ರವಾಗಿ ಕಾಯುವಂತೆ ಏರ್ಪಾಡು ಮಾಡುತ್ತಿದ್ದಾರೆ. ಅಲ್ಲಿ ಕಾಡುಗಳಿಲ್ಲದ್ದರಿಂದ ಇಥಿಯೋಪಿಯನರಿಗೆ ಇಟಲಿಯವರ ಮೇಲೆ ಬೀಳಲು ಕಷ್ಟವಾಗುವುದು.

ನವೆಂಬರು ತಾ. 14.

ಟೈಗ್ರೆ ಪ್ರಾಂತ್ಯದಲ್ಲಿ ಗುಲಾಮಗಿರಿ.

ಇಟಲಿಯವರ ಪ್ರಕಟಣೆಯನ್ನು ವಿರೋಧಿಸಿ ಅಬಿಸೀನಿಯಾದ ಸರಕಾರದವರು ಹೀಗೆಂದು ಬಹಿರಂಗಪಡಿಸಿರುವರು— 'ನಮ್ಮ ಪ್ರಾಂತ್ಯದಲ್ಲಿ 16,000 ಗುಲಾಮರನ್ನು ಇಟಲಿಯವರು ಬಿಡುಗಡೆ ಮಾಡಿದ ವಿಷಯ ಸುಳ್ಳಾಗಿದೆ. ಇಡೀ ಟೈಗ್ರೆ ಪ್ರಾಂತ್ಯದಲ್ಲೇ 16,000 ಗುಲಾಮರಿಲ್ಲ. ಅದರಲ್ಲಿ ಒಂದು ಭಾಗವನ್ನು ಮಾತ್ರ ಇಟಲಿಯವರು ಹಿಡಿದಿರುವರು. ಇಥಿಯೋಪಿಯನರನ್ನು ನಾಗರೀಕರನ್ನಾಗಿ ಮಾಡುತ್ತೇವೆಂದು ಸಾರುತ್ತಿರುವ ಇಟಲಿಯ ಸೈನ್ಯವು ಅಬಿಸೀನಿಯಾದ ನಿವಾಸಿಗಳನ್ನು ಮುಖ್ಯವಾಗಿ ಹೆಂಗಸರು ಮಕ್ಕಳನ್ನು ಕೊಲ್ಲುವ ಕೆಲಸದಲ್ಲಿ ಮಗ್ನವಾಗಿದೆ.'

ಸೋಮಾಲಿ ರಂಗದ ಕದನ

ಜನರಲ್ ಡಿ ಬೋನೊರ ಪ್ರಕಟಣೆ ಮೇರೆ—ಸೋಮಾಲಿ ರಂಗದಲ್ಲಿ ಇಥಿಯೋಪಿಯನರ ಸೈನ್ಯಕ್ಕೆ 1000 ಜನ ಹೆಚ್ಚು ಸೇರಿದ್ದರು. ಅವರು ಹಿಂದಕ್ಕೆ ಓಡಿಸಲ್ಪಟ್ಟರಲ್ಲದೆ ಅವರಲ್ಲಿ 300 ಜನರು ಮೃತರಾದರು. ಹಲವು ಮೆಷಿನ್ ಗನ್ನುಗಳನ್ನೂ, ಬೇರೆ ಯುದ್ಧ ಸಾಮಾನುಗಳನ್ನೂ ಬಿಟ್ಟು ಓಡಿಹೋದರು. ಇಟಲಿ ಕಡೆ ಇಬ್ಬರು ಆಫೀಸರುಗಳೂ, 16 ಸೈನಿಕರೂ ಸತ್ತರು; 3 ಆಫೀಸರುಗಳಿಗೂ, 60 ಸಿಪಾಯಿಗಳಿಗೂ ಗಾಯಗಳಾದವು.

ಟೈಗ್ರೆ ಪ್ರಾಂತ್ಯವು ಇಟಲಿ ಪ್ರದೇಶವಾಯಿತು.

ಜನರಲ್ ಡಿ ಬೋನೋರವರು ಟೈಗ್ರೆ ಪ್ರಾಂತ್ಯವನ್ನು ಇಟಲಿಯ ಅರಸರ ಹೆಸರಿನಲ್ಲಿ ಇಟಲಿಯ ಪ್ರದೇಶಕ್ಕೆ ಸೇರಿಸಿದರು. ಈಗ ಇಥಿಯೋಪಿಯದ 12,000 ಚದರ ಮೈಲು ಪ್ರದೇಶವು ಇಟಲಿಯವರ ಸ್ವಾಧೀನವಿದೆ.

ಇಥಿಯೋಪಿಯಕ್ಕೆ ಬ್ರಿಟಿಷ್ ರೆಡ್ ಕ್ರಾಸ್.

ಪ್ರಥಮ ಬ್ರಿಟಿಷ್ ರೆಡ್ ಕ್ರಾಸ್ (ಚಲಿಸುವ) ಆಸ್ಪತ್ರೆಯು ತಾ. 14 ರಲ್ಲಿ ಲಂಡನ್ನಿನಿಂದ ಇಥಿಯೋಪಿಯಕ್ಕೆ ಹೊರಟಿತು. ಅದರಲ್ಲಿ 16 ವಾಹನಗಳೂ, ಸಾಕಷ್ಟು ಔಷಧಗಳೂ ಇರುವವು. ರೆಡ್ ಕ್ರಾಸ್ ಸಂಘದವರು ಇನ್ನೂ ಹೆಚ್ಚು ಹಣ ಸಂಗ್ರಹ ಮಾಡುತ್ತಿದ್ದಾರೆ.

ನವೆಂಬರು ತಾ. 15.

ಸಿಲೋನಿನಲ್ಲಿ 'ಸ್ಯಾಂಕ್ಷನ್'ನ ಜಾರಿ.

ಸಿಲೋನಿನಿಂದ ಇಟಲಿಗೆ ಹೋಗುವ ಮತ್ತು ಇಟಲಿಯಿಂದ ಸಿಲೋನಿಗೆ ಬರುವ ಸಾಮಾನುಗಳ ವ್ಯಾಪಾರವನ್ನು ಈ ತಾ. 18 ರಿಂದ ನಿಲ್ಲಿಸುವಂತೆ ಸಿಲೋನಿನ ಸರಕಾರವು ಹುಕುಂ ಹೊರಡಿಸಿದೆ.

ಟೈಗ್ರೆ ಪ್ರಾಂತ್ಯದಲ್ಲಿ ಕದನ.

ಕರ್ನಲ್ ಮಾಲೆಟ್ಟಿಯವರ ಅಶ್ವಾರೋಹಿ ಸೈನ್ಯ ಒಂದನ್ನು ಜನರಲ್ ಸಾಂಟಿನಿಯವರ ಸೈನ್ಯದೊಂದಿಗೆ ಸೇರಿಸಲು ಅಸ್ಸಿಯ ಕಡೆ ನಡೆಸುತ್ತಿದ್ದಾಗ್ಯೂ ಬೆಟ್ಟದ ಸಂಧಿನಲ್ಲಿ 500 ಇಥಿಯೋಪಿಯನರು ಅವರನ್ನು ಎದುರಿಸಿದರು. ಭೀಕರವಾದ ಮೆಷಿನ್ ಗನ್ನುಗಳ ಗುಂಡುಗಳಿಗೆ ಹೆದರದೆ ಮಾಲೆಟ್ಟಿಯ ಸೈನಿಕರು ಇಥಿಯೋಪಿಯನರನ್ನು ಮುತ್ತಿದರು. ಇಡೀ ದಿನ ಕದನವಾಯಿತು. ಇಥಿಯೋಪಿಯನರು 55 ಹೆಣಗಳನ್ನೂ, ಗಾಯಗೊಂಡ ಹಲವರನ್ನೂ, ಕುದುರೆ ಮುಂತಾದ ಯುದ್ಧ ಸಾಮಾನುಗಳನ್ನೂ ಬಿಟ್ಟು ಓಡಿಹೋದರು. ಇಟಲಿಯ 4 ಆಫೀಸರುಗಳೂ, 20 ಅಶ್ವಾರೋಹಿಗಳೂ ಮಡಿದರು; 40 ಜನರು ಗಾಯಗೊಂಡರು. ಕರ್ನಲ್ ಮಾಲೆಟ್ಟಿಯವರ ಸೈನ್ಯವು ಇನ್ನು ಜನರಲ್ ಸಾಂಟಿನಿಯವರ ಸೈನ್ಯದೊಂದಿಗೆ ಸೇರಿರುವುದಿಲ್ಲ. ಅವರಿಗೆ ಅಬಿಸೀನಿಯಾದ ವಿಶೇಷ ಸೈನ್ಯವು ಅಡ್ಡ ಬರುತ್ತಿದೆ. ಮಕೆಲೆಯ ದಕ್ಷಿಣದಲ್ಲಿ ಇಥಿಯೋಪಿಯನರ ಮೂರು ದೊಡ್ಡ ಭಾಗಗಳು ಏರ್ಪಾಡಾಗಿವೆ. ರಾಸ್ ಸೆಯೂಮರ ಒಳ ಇಥಿಯೋಪಿಯನರ 30 ಸಾವಿರ ಜನ ಹಿಂದುಗಡೆಯಿಂದ ಅಡ್ವಾದ ಮೇಲೆ ಬೀಳುವರೆಂದು ಹೇಳಲ್ಪಟ್ಟಿದೆ. ಈ ಕಾರಣದಿಂದಲೇ ಇಟಲಿಯವರು ಮಕೆಲೆ…

ಅಮೇರಿಕದ ವ್ಯಾಪಾರಿಗಳಿಗೆ ಎಚ್ಚರಿಕೆ

ಇತ್ತೀಚಿನ ಅಮೇರಿಕದ ವ್ಯಾಪಾರದ ಲೆಕ್ಕ ನೋಡಿದರೆ ಇಟಲಿ ಮತ್ತು ಇಥಿಯೋಪಿಯಕ್ಕೆ ಕಳುಹುವ ಯುದ್ಧ ಸಾಮಾನುಗಳು ಹೆಚ್ಚುತ್ತಿರುವುದು ಕಂಡುಬರುತ್ತದೆ. ಇದು ಪ್ರೆಸಿಡೆಂಟ್ ರೂಸ್‌ವೆಲ್ಟರ ಪ್ರಕಟಣೆಗೆ ವಿರೋಧವಾದುದಾಗಿದೆ. ವ್ಯಾಪಾರಿಗಳು ತಮ್ಮ ಸ್ವಂತ ಜವಾಬ್ದಾರಿಕೆ ಮೇಲೆಯೇ ಸಾಮಾನು ಕಳುಹಿಸಬೇಕಾಗುವುದು ಎಂದು ಅಮೇರಿಕ ಸರಕಾರದ ಸೆಕ್ರೆಟರಿ ಮಿ. ಕಾರ್ಡೆಲ್ ಹಲ್ ರವರು ವ್ಯಾಪಾರಿಗಳನ್ನು ಎಚ್ಚರಿಸಿದರು.

ನವೆಂಬರ್ ತಾರೀಕು 16.

ಗ್ರಾಜ್ಯೆ ಡೆಲೋರ್‌ನಲ್ಲಿ ಕದನ.

ಇಟಲಿಯ ಸೈನಿಕರಿಗೂ, ಅಬಿಸೀನಿಯಾದ ದಂಗೆಕಾರರಿಗೂ ಗ್ರಾಜ್ಯೆ ಡೆಲೋರ್ ಎಂಬಲ್ಲಿ ಯುದ್ಧವು ಸಂಭವಿಸಿತು. ಈ ಯುದ್ಧದ ಪರಿಣಾಮವಾಗಿ ಅಬಿಸೀನಿಯರು ಸಸ್ಸಬನೆ ಮತ್ತು ದಗ್ಗಾಬೂರ್ ಎಂಬೆರಡು ಸ್ಥಳಗಳಿಂದ ಇಟಲಿಯ ಬಾಂಬಿನ ಧಾಳಿಯನ್ನು ಸೈರಿಸಲಾರದೆ ಬಿಟ್ಟು ಓಡಿಹೋಯಿತು.

ಒಗಾಡೆನ್ನಿನಲ್ಲಿ ಮಳೆ. ದೈವ ಸಹಾಯ.

ದಕ್ಷಿಣದ ಒಗಾಡೆನ್ ಪ್ರಾಂತದಲ್ಲಿ ಮಳೆಯು ವಿಪರೀತವಾಗಿ ಸುರಿಯುತ್ತಿದೆ. ಇದರ ಸಹಾಯದಿಂದ ಅಬಿಸೀನಿಯರಿಗೆ ಅವರ ಸ್ಥಾನವನ್ನು ರಕ್ಷಿಸಲು ಸಹಾಯವಾಗಿದೆ. ಅಬಿಸೀನಿಯಾದವರ ಪರ್ವಮಾನಕ್ಕನುಸಾರವಾಗಿ ಇಟಲಿಯವರ 12 ಟ್ಯಾಂಕುಗಳು ಕೆಸರಿನಲ್ಲಿ ಹುಗಿದು ಹೋಗಿವೆ. ಅಲ್ಲದೆ ಮಲೇರಿಯಕ್ಕೆ ಇಟಲಿ ಸೈನಿಕರು ಹೆಚ್ಚಾಗಿ ತುತ್ತಾಗುತ್ತಲಿದ್ದಾರೆ.

ಅಬಿಸೀನಿಯಕ್ಕೆ ಅಪರಿಮಿತ ಆಯುಧ.

ಅಬಿಸೀನಿಯಕ್ಕೆ ಅನೇಕ ಯೂರೋಪು ದೇಶಗಳಿಂದ ಅಪರಿಮಿತ ಆಯುಧಗಳು ಬಂದು ಸೇರುತ್ತಲಿವೆ. ಫ್ರೆಂಚ್ ಸೋಮಾಲಿಲ್ಯಾಂಡಿನ ಮುಖಾಂತರ ಸಾಗಿಸುವುದು ಕಷ್ಟವಾದದ್ದರಿಂದ ಒಂದು ಹೊಸ ರಸ್ತೆಯನ್ನು ಮಾಡಿ ಲಾರಿಗಳ ಮೂಲಕ ಸಾಗಿಸುವ ಏರ್ಪಾಡು ತ್ವರೆಯಿಂದಾಗುತ್ತಲಿದೆ.

ಸೈನ್ಯಾಧಿಕಾರಿಗಳ ಬದಲಾವಣೆ

ಈ ವರೆಗೆ ಪೂರ್ವ ಆಫ್ರಿಕಾದ ಹೈಕಮಿಷನರಾಗಿಯೂ, ಇಟಲಿ ಸೈನ್ಯದ ಮುಖ್ಯ ಸೇನಾಧಿಪತಿಯಾಗಿಯೂ ನೇಮಿತರಾಗಿದ್ದ ಜನರಲ್ ಎಮಿಲಿಯೋ ಡಿ ಬೋನೋರವರನ್ನು ಇಟಲಿಗೆ ಕರೆದುಕೊಳ್ಳಲಾಗಿದೆ. ಅವರ ಬದಲಿಗೆ ಮಾರ್ಷಲ್ ಪೀಟ್ರೊ ಬಾಡೊಗ್ಲಿಯೊ ಎಂಬವರ ನೇಮಕವಾಗಿದೆ. ಜನರಲ್ ಡಿ ಬೋನೋರವರು 69 ವಯಸ್ಸಿನ ವೃದ್ಧರಾದ ಕಾರಣ ಯುದ್ಧ ಕಾರ್ಯವು ಅವರಿಗೆ ಹೆಚ್ಚು ಶ್ರಮದ್ದಾಗಿರುವುದರಿಂದ ಈ ಬದಲಾವಣೆಯೆಂದು ರೋಮಿನಿಂದ ಪ್ರಕಟಣೆ. ಅವರ ಬದಲಿ ಬರುವ ಮಾರ್ಷಲ್ ಬಾಡೊಗ್ಲಿಯೋರವರಿಗೂ 64 ವಯಸ್ಸಾಗಿದೆ. ಇವರು ಯೂರೋಪಿನಲ್ಲಿ ಪ್ರಸಿದ್ಧಿ ಹೊಂದಿದ ಅತ್ಯಂತ ವಿಚಕ್ಷಣರಾದ ಯುದ್ಧ ಸೇನಾಧಿಪತಿಗಳು. ಇವರ ನಾಯಕತ್ವದಲ್ಲಿ ಅಬಿಸೀನಿಯದ ಆಕ್ರಮಣವು ಭರದಿಂದ ಸಾಗಬಹುದೆಂದು ಊಹಿಸಲಾಗಿದೆ.

ನವೆಂಬರು ತಾರೀಕು 17.

ಅಬಿಸೀನಿಯರ ಸಂತೃಪ್ತಿ

ಸೇನಾಧಿಕಾರಿಗಳ ಬದಲಾವಣೆಯು ಅಬಿಸೀನಿಯರಲ್ಲಿ ಸಂತೃಪ್ತಿಯನ್ನುಂಟುಮಾಡಿದೆ. ಈ ಬದಲಾವಣೆಯು ಮುಸೋಲಿನಿಯವರಿಗೆ ಯುದ್ಧದಿಂದುಂಟಾಗಿರುವ ಅಸಂತೃಪ್ತಿಯ ಪರಿಣಾಮವೆಂದೂ ಮುಂದಿನ ನಾಯಕರ ನಾಯಕತ್ವದಲ್ಲಿ ಇಟಲಿಯನರು ಭರದಿಂದ ಮುಂದೊತ್ತಿ ಅಬಿಸೀನಿಯಾದ ಒಳಗೆ ಬೀಳುವರೆಂದೂ ಅವರ ಊಹನೆ.

ಫೇಸಿಸ್ಟ್ ಕೌನ್ಸಿಲಿನವರ ನಿರೋಧ

ಇಟಲಿಯ ಅಖಿಲ ಫೇಸಿಸ್ಟ್ ಸಂಸ್ಥೆಯ ಕೌನ್ಸಿಲು ಸಭೆಯು ಮುಸಲೋನಿಯವರ ಅಧ್ಯಕ್ಷತೆಯಲ್ಲಿ ಸೇರಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದರ ಪ್ರಕಾರ ಇಟಲಿಯು, ಬಹಿಷ್ಕಾರವು ಆರಂಭವಾಗುವ ನವೆಂಬರು 18ನ್ನು ಒಂದು ಅಪಮಾನಕರವಾದ ದಿನವೆಂದು, ಭಾವಿಸುವುದಾಗಿಯೂ, ಇಟಲಿಯ ಮೇಲೆ ಹಾಕುವ ಬಹಿಷ್ಕಾರವನ್ನು ಕೇವಲ ನಿರ್ಧರಿಸುವ ರಾಷ್ಟ್ರಗಳು ಇಟಲಿಯ ಉತ್ಪತ್ತಿಗೆ ತಡೆಯನ್ನುಂಟು ಮಾಡುವ ಉದ್ದೇಶವಿದ್ದವರೆಂದೂ, ಇಟಲಿಯು ಪ್ರಯತ್ನಪಟ್ಟು ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದಾಗಿಯೂ ದೃಢವಾಗಿ ಧೈರ್ಯದಿಂದ ಎದುರಿಸುವೆವೆಂದೂ ಪ್ರಕಟವಾಗಿದೆ.

ಬಹಿಷ್ಕಾರಕ್ಕೆ ಪ್ರತೀಕಾರ

ಇಟಲಿಯ ಮೇಲೆ ಹಾಕಲಿರುವ ಬಹಿಷ್ಕಾರದ ಯೋಜನೆಯಿಂದ ಇಟಲಿಗೆ ಹೆಚ್ಚು ಹಾನಿ ತಟ್ಟದಂತೆ ಆಗಲೇ ಪ್ರತೀಕಾರ ಏರ್ಪಾಡುಗಳಾಗುತ್ತಲಿವೆ. ಕಲ್ಲಿದ್ದಲು ಹೆಚ್ಚು ಖರ್ಚಾಗದಂತೆ ಎಲ್ಲಾ ಸ್ಥಳಗಳಲ್ಲಿ ಆದಷ್ಟು ಕಡಿಮೆ ಕಲ್ಲಿದ್ದಲು ಉಪಯೋಗಿಸಲು ಕಟ್ಟಪ್ಪಣೆಯಾಗಿದೆ. ಪೆಟ್ರೋಲು ಹೆಚ್ಚು ಖರ್ಚಾಗದಂತೆ ಖಾಸಗಿ ಕಾರುಗಳ ಸಂಖ್ಯೆಯನ್ನು ಕಡಿಮೆ ಮಾಡಿ ಆಫೀಸು ಮತ್ತು ಕಾರ್ಖಾನೆಗಳಿಗೆ ಜನರು ಬಸ್ಸುಗಳಲ್ಲಿ ಹೋಗುತ್ತಿದ್ದಾರೆ. ಈಗ ರಾತ್ರಿಯಲ್ಲಿ ಹೋಗುತ್ತಿರುವ ಎಲ್ಲಾ ಬಸ್ಸು ಕಾರು ವಾಹನಗಳು ಎಲ್ಲಾ ಥಿಯೇಟರುಗಳು 4½ ಗಂಟೆಗೆ ಬಾಗಿಲು ಮುಚ್ಚಬೇಕಾಗಿದೆ. ವಿದೇಶೀ ಆಹಾರ ಸಾಮಗ್ರಿಗಳನ್ನು ಯಾರೂ ಕೊಂಡುಕೊಳ್ಳಬಾರದೆಂತಲೂ ಎಲ್ಲರೂ ಇಟಲಿಯ ವಸ್ತುಗಳನ್ನು ಕೊಂಡುಕೊಳ್ಳಬೇಕೆಂತಲೂ ಕಟ್ಟಪ್ಪಣೆಯಾಗಿದೆ. ಈ ನಿಯಮದಲ್ಲಿ ಬಾಧಕ ದೃಷ್ಟಿಯಿಂದ ವಿದೇಶೀ ಸಾಮಾನುಗಳ ವ್ಯಾಪಾರ ನಡೆಸುವ ಎಷ್ಟೋ ಮಂದಿಗೆ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

ಸ್ತ್ರೀಯರ ಉಜ್ವಲ ದೇಶಭಕ್ತಿ

ಇಟಲಿಯ ಸ್ತ್ರೀಯರು ತಮ್ಮ ಚಿನ್ನದ ಉಂಗುರಗಳನ್ನು ಮುಸೋಲಿನಿಯವರಿಗೆ ಕಳುಹಿಸಿಕೊಡುತ್ತಿರುವರಂತೆ. ಅರ್ಥಿಕ ಬಹಿಷ್ಕಾರದಿಂದುಂಟಾಗುವ ಆರ್ಥಿಕ ಮುಗ್ಗಟ್ಟಿನ ದೃಷ್ಟಿಯಿಂದ ಈ ಸ್ತ್ರೀಯರು ಮುಸೋಲಿನಿಗೆ ಈ ರೀತಿ ಧನ ಸಹಾಯ ಮಾಡುತ್ತಿರುವರು. ಅವರು ಬದಲಿಗೆ 'ನನ್ನ ದೇಶಕ್ಕಾಗಿ' ಎಂಬ ಅಕ್ಷರಗಳನ್ನು ಕೆತ್ತಿದ ಉಕ್ಕಿನ ಉಂಗುರಗಳನ್ನು ಧರಿಸಿಕೊಳ್ಳುತ್ತಿರುವರು. 10 ಮಿಲಿಯ ಸ್ತ್ರೀಯರು ತಮ್ಮ ಚಿನ್ನದ ಉಂಗುರವನ್ನು ತಮ್ಮ ಸರಕಾರಕ್ಕೊಪ್ಪಿಸಿದಲ್ಲಿ 15 ಮಿಲಿಯ ಪೌಂಡಿನಷ್ಟು ಚಿನ್ನವು ಖಜಾನೆಯಲ್ಲಿ ಶೇಖರವಾಗುವದೆಂದು ಊಹಿಸಲಾಗಿದೆ.

ನವೆಂಬರ್ ತಾರೀಕು 18.

ತ್ವರಿತದ ಆಕ್ರಮಣಯೋಜನೆಯು.

ಇನ್ನು ಅಬಿಸೀನಿಯಾದ ಆಕ್ರಮಣವು ಇಟಲಿ ಸೈನಿಕರಿಂದ ಮುಂದಿನ ಹಾಗೆ ಸಾವಧಾನವಾಗಿರದೆ ತ್ವರಿತದಿಂದ ಮುಂದೊತ್ತುವದು. ಹೊಸ ಸೇನಾನಾಯಕರು ಬಂದು ತಮ್ಮ ಕಾರ್ಯವನ್ನು ಕೈಕೊಂಡರು. ಜನರಲ್ ಡಿ ಬೋನೋರವರು ಹಿಂತಿರುಗಿದರು.

ಚಕ್ರವರ್ತಿಗಳು ಉತ್ತರ ರಣರಂಗಕ್ಕೆ.

ಅಬಿಸೀನಿಯಾ ಚಕ್ರವರ್ತಿಗಳು ಉತ್ತರ ರಣರಂಗಕ್ಕೆ ಬೇಗನೆ ಹೋಗಲಿರುವರು. ಅವರ ಸಾಮಾನುಗಳನ್ನು ಆಗಲೇ 12 ಲಾರಿಗಳಲ್ಲಿ ಸಾಗಿಸಲಾಗಿದೆ. ಆದರೆ ಅಲ್ಲಿನ ಜೋತಿಷಿಯೊಬ್ಬರ ಹೇಳಿಕೆಯಂತೆ ಈ ನವೆಂಬರು 2ರಲ್ಲಿ ಜರಗುವ ವಾರ್ಷಿಕ ಪಟ್ಟಾಭಿಷೇಕವನ್ನು ಮುಗಿಸಿ ಹೋಗುವದರಿಂದ ಏನೂ ವಿಘ್ನಗಳಾಗುವದಿಲ್ಲವೆಂದೂ, ಮೊದಲು ಹೊರಟರೆ ಕೇಡಾಗಬಹುದೆಂದೂ ತಿಳಿದದ್ದರಿಂದ ಚಕ್ರವರ್ತಿಗಳು ಪಟ್ಟಾಭಿಷೇಕವನ್ನು ಮುಗಿಸಿ ತೆರಳುವರು.

ನವೆಂಬರು ತಾರೀಕು 19.

ಬ್ರಿಟಿಷ್ ನವರ ಜಾಗೃತೆ.

ಹಾಂಗಕಾಂಗಿನ ಮೇಲೆ ಇಟಲಿಯ ಧಾಳಿಯು ಶೀಘ್ರದಲ್ಲೇ ಆಗುವದರಿಂದ ಅದರ ಪಕ್ಕದಲ್ಲಿರುವ ಬ್ರಿಟಿಷ್ ಸೋಮಾಲಿ ಲ್ಯಾಂಡಿನ ಎಲ್ಲ ಕಟ್ಟಿನಲ್ಲಿ ಬ್ರಿಟಿಷರು ಬಹಳ ಬಂದೋಬಸ್ತುಗಳನ್ನು ಮಾಡುತ್ತಲಿರುವರು.

ಅಬಿಸೀನಿಯದ ಕಾಫಿ.

ಅಬಿಸೀನಿಯರೊಂದಿಗೆ ಇಟಲಿಯವರು ಯುದ್ಧ ಮಾಡುತ್ತಲಿರುವದಾದರೂ ಅಬಿಸೀನಿಯದ ಕಾಫಿಗೆ ಇವರು ಒಳ್ಳೆ ಗಿರಾಕಿಗಳಾಗಿರುವರು. ಅಬಿಸೀನಿಯಾದ ಮುಖ್ಯ ಉತ್ಪತ್ತಿಗಳಲ್ಲಿ ಕಾಫಿ ಒಂದು. ಕಾಫಿ ವ್ಯಾಪಾರಿಗಳೆಲ್ಲ ಈ ಯುದ್ಧ ಕಾರಣದಿಂದ ನಗದು ವ್ಯಾಪಾರವನ್ನೇ ಮಾಡುತ್ತಲಿರುವರು.

ಬಾಂಬಿನ ಸುರಿಮಳೆ.

ಕೌಂಟ್ ಸಿಯಾನೋ ಮತ್ತು ಮುಸೋಲಿನಿಯವರ ಇಬ್ಬರು ಪುತ್ರರ ನಾಯಕತ್ವದಲ್ಲಿ 20 ದೊಡ್ಡ ವಿಮಾನಗಳು ಇತ್ತ ವರೆಗೆ ಕೈಕೊಳ್ಳದಂಥ ಬಾಂಬಿನ ಧಾಳಿಯನ್ನು ಮಕೇಲ್ ಪ್ರಾಂತದ ದಕ್ಷಿಣದಲ್ಲಿ ನಡೆಸಿದರು. 15,000 ಅಬಿಸೀನಿಯಾ ಸೈನ್ಯವಿದ್ದ ಸ್ಥಳವನ್ನು ಗುರಿಯಿಟ್ಟು 2 ಪೌಂಡು ಭಾರದ 6 ಟನ್ನು ಬಾಂಬುಗಳನ್ನು ಸುರಿದರು. ಅಬಿಸೀನಿಯಾ ಸೈನಿಕರು ಮೆಷಿನ್ ಗನ್ನುಗಳಿಂದಲೂ, ವಿಮಾನಗಳಿಗೆ ತೂರಿಬರುವ ತೋಪುಗಳಿಂದಲೂ ಎದುರಿಸಿದರು. ಬಾಂಬಿನ ಧಾಳಿಯಲ್ಲಿ ಮೂರು ಇಟಲಿಯವರಿಗೆ ಗಾಯವಾಗಿರುವದೆಂದೂ ಅನುಮಾನ 1,000 ಅಬಿಸೀನಿಯರು ಮಡಿದಿರುವರೆಂದೂ ಇಟಲಿಯ ಪ್ರಕಟಣೆ.

ಚಕ್ರವರ್ತಿಗಳು ತೆರಳರು.

ರಾಜಧಾನಿಯಲ್ಲಿ ಅಬಿಸೀನಿಯಾ ಚಕ್ರವರ್ತಿಯವರು ರಣರಂಗಕ್ಕೆ ಹೋಗುವದಿಲ್ಲವೆಂದು ಹೇಳುತ್ತಿರುವದಾದರೂ ಚಕ್ರವರ್ತಿಗಳು ಎಲ್ಲಿಗೋ ವಿಮಾನದ ಮೂಲಕ ಹೋಗಿರುವರೆಂದು ತಿಳಿದು ಬಂದಿದೆ.

ಕೊಡಗು

ನವೆಂಬರ್ ೨೨-ನೇ ಶುಕ್ರವಾರ ೧೯೩೫.

ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆ.

ಬ್ರಿಟಿಷ್ ಪಾರ್ಲಿಮೆಂಟಿನ ಅಂದರೆ 'ಕಾಮನ್ಸ್' ಸಭೆಯ ಮಹಾ ಚುನಾವಣೆಯು ಈ ತಾ 14 ರಲ್ಲಿ ನಡೆಯಿತು. 'ಕಾಮನ್ಸ್' ಸಭೆಯು 615 ಮೆಂಬರುಗಳಿಂದ ಕೂಡಿದ್ದಾಗಿದೆ. [illegible] 40 ಮೆಂಬರುಗಳು [illegible] ಉಳಿದ 575 ಸ್ಥಳಗಳಿಗೆ 1348 ಉಮೇದುವಾರರುಗಳು ಚುನಾವಣೆಗೆ ನಿಂತಿದ್ದರು. 1929 ರಲ್ಲಿ ನಡೆದ ಕಳೆದ ಚುನಾವಣೆಯಲ್ಲಿ ಇದ್ದ ಓಟರುಗಳ ಸಂಖ್ಯೆ 28,952,361 ರಿಂದ ಈ ಸಾರಿ 31,305,529 ಕ್ಕೆ ಏರಿತು. ಇದರ ಪೈಕಿ ತಾ 14 ರಲ್ಲಿ 21,920,017 ಓಟರುಗಳು ತಮ್ಮ ಓಟಿನ ಹಕ್ಕನ್ನು ಉಪಯೋಗಿಸಿರುವರು; [illegible] 611 ಸ್ಥಳಗಳ ಫಲಿತಾಂಶವು ಗೊತ್ತಾಗಿದೆ [illegible] 611 ಮೆಂಬರುಗಳ ಪೈಕಿ 430 [illegible] 181 [illegible] 384 [illegible] 33 [illegible] 154 [illegible] 20 [illegible] 61 [illegible] 8 [illegible] 75 [illegible]

[illegible]

[illegible] 430 [illegible] 384 [illegible]

[illegible] 21 [illegible] 12 [illegible]

[illegible]

[illegible]

ಇಥಿಯೋಪಿಯಾ ಯುದ್ಧ.

[illegible] 12 [illegible] 60 [illegible]

[illegible]

ಇಂಡಿಯಾಕ್ಕೆ ಬೇಕಾದ ಶಿಕ್ಷಣ.

ಸರ್. ಸಪ್ರೂರವರ ಭಾಷಣ.

ಸಂಯುಕ್ತ ಪ್ರಾಂತದ [illegible] ವಿದ್ಯಾರ್ಥಿಗಳ [illegible] ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಸರ್. ತೇಜ್ ಬಹದ್ದೂರ್ ಸಪ್ರೂರವರು [illegible] ಈ ಪ್ರಕಾರ ಭಾಷಣವನ್ನಿತ್ತರು:—

'[illegible] ವಿದ್ಯಾ ಶಿಕ್ಷಣವನ್ನು [illegible]

[illegible] ಇಂದಿನ ನಮ್ಮ ಹಿಂದೂ ದೇಶಕ್ಕೆ ಬೇಕಾದ ಶಿಕ್ಷಣ.

[illegible]

[illegible] ಫಂಡ್.

[illegible]	2700—0—0
[illegible]	7307—8—0
[illegible]	4000—0—0
[illegible]	672—0—0
ಒಟ್ಟು.	14,679—8—0

ಈ ಮೇಲಿನ ಲೆಕ್ಕವು [illegible] ಫಂಡಿನ ವಿವರವನ್ನು ಸೂಚಿಸುತ್ತದೆ.

21—11—35 [illegible]

[illegible]

ಕೊಡಗಿನಲ್ಲಿ ಹರಿಜನ ಸೇವಾ ಕಾರ್ಯ.

ಕೊಡಗು ಹರಿಜನ ಸೇವಕ ಸಂಘದ ವಾರ್ಷಿಕ ವರದಿ.

ದೀನ ಸೇವಾಶ್ರಮ, ಗೋಣಿಕೊಪ್ಪಲು.

ಕೊಡಗು ಹರಿಜನ ಸೇವಕಸಂಘದವರು [illegible]

[illegible]

ಅಸ್ಪೃಶ್ಯ ಬಾಲಕರ ಶಾಲೆ

[illegible] 1934 ನೇ ಅಕ್ಟೋಬರ್ [illegible] 15 [illegible] 1934 ನೇ ಅಕ್ಟೋಬರದಲ್ಲಿ [illegible] 25 [illegible] 55 [illegible] 25 [illegible]

ಚನ್ನಯ್ಯನಕೋಟೆ ಹರಿಜನ ಶಾಲೆ

[illegible] 10 [illegible] 1934 [illegible] 30 [illegible]

ವಿದ್ಯಾ ವೇತನಗಳು.

[illegible] 20 [illegible]

ಪ್ರಚಾರ ಕಾರ್ಯ.

[illegible]

1934ನೇ ಅಕ್ಟೋಬರ್ 1ರಿಂದ 1935ನೇ ಸಪ್ಟಂಬರ್ ತನಕ ಆಗಿನ ಲೆಕ್ಕಗಳು.

ಜಮಾ	ರೂ.	ಅ.	ಪೈ.
1 ಪ್ರೊವಿನ್ಶಿಯಲ್ ಬೋರ್ಡಿನಿಂದ ಅಡ್ವಾನ್ಸು	50	0	0
2. ಗಾಂಧಿ ನಿಧಿಯಿಂದ ಸಿಕ್ಕಿದ ಗ್ರಾಂಟು ಹಣ	982	12	0
3 [illegible] ಸಿಕ್ಕಿದ ಹಣ	18	0	0
4 [illegible] ಸಿಕ್ಕಿದ ಹಣ	50	0	0
ಜುಮ್ಲಾ.	1100	12	0

ಖರ್ಚು.	ರೂ.	ಅ.	ಪೈ.
1 ಆಶ್ರಮದ ಖರ್ಚು	463	15	10
2. ಶಾಲೆಗಳಿಗೆ ಗ್ರಾಂಟು	230	0	0
3 [illegible] ಶಾಲೆಗೆ ಖರ್ಚು	127	8	0
4. [illegible] ಖರ್ಚು	25	0	0
5 [illegible] ಖರ್ಚು	24	0	0
6 [illegible]	16	0	0
7. ಹರಿಜನ ಬಾಲಕರಿಗೆ ಬಟ್ಟೆ ಮತ್ತು ಕೊಡೆ ಹಂಚಿದ್ದು	13	9	0
8 ಪ್ರಯಾಣದ ಖರ್ಚು	4	12	0
9. [illegible]	2	[illegible]	0
10 ಸ್ಟಾಂಪುಗಳು	2	12	0
11. ಪೋಸ್ಟೇಜು	1	0	0
ಜುಮ್ಲಾ.	910	8	10

ತಪಶೀಲ್.

ಒಟ್ಟು ಜಮಾ	1100	12	0	ಒಟ್ಟು ಖರ್ಚು	910	8	10
				ಕೈಯಲ್ಲಿರುವ ಹಣ	190	3	2
ಜುಮ್ಲಾ.	1100	12	0		1100	12	0

ಪಿ. ಐ. ಬೆಳ್ಳಪ್ಪ,
(ಕಾರ್ಯದರ್ಶಿ)

ಮನುಷ್ಯನ ವಶಾಯಿ.

ಲೇಖಕರು—ಪಂಡಿತ ತಾರಾನಾಥರು,

ಜನಗಳೂ ಜಗತ್ತುಗಳೂ ಈಗ ಬೇಕಾಗಿರುವುದು ವಿದ್ಯೆ. ವಿವೇಕವನ್ನು ಬೆಳೆಸುವ ವಿದ್ಯೆ. ಅಂಧ ಶ್ರದ್ಧೆಯು ಧರ್ಮದ [illegible] ಮೂಢರು. [illegible] ಮನಸಿನ ಗುಣ. ಅದು ಅಜ್ಞಾನದ ಚಿಹ್ನೆ. [illegible] ಚೈತನ್ಯವು ಮನಸಿನಲ್ಲಿಲ್ಲದೆ ಹೋದಾಗ ವಿಚಾರವು ನಡೆಯುವುದಿಲ್ಲ. ಅದಕ್ಕೆ ಶಕ್ತಿಯು ಬೇಕು. ಸ್ವಾತಂತ್ರ್ಯವು ಬೇಕು. [illegible]

[illegible]

(ಪ್ರೇಮ—[illegible])

ವಿವಿಧ ವಾರ್ತಾವಳಿ.

ಕ್ರಿಕೆಟ್ ಆಟಕ್ಕೆ ಬಹಿಷ್ಕಾರ.

[illegible]

—೦೦—

ಕನ್ನಡಿಯೊಂದಿಗೆ ಮೊಸಳೆ ಬಂದಿದೆ!

[illegible]

—೦೦—

ಶ್ರೀ ಸುಭಾಷ್ಚಂದ್ರ ಬೋಸರು ಇಂಗ್ಲೆಂಡಿಗೆ ಹೋಗಲಾರರು.

(ಶ್ರೀ ಸುಭಾಷ್ಚಂದ್ರ ಬೋಸರು)

[illegible]

—೦೦—

[illegible] ದೇಹಸ್ಥಿತಿ.

[illegible] ತಾ 13 ರಲ್ಲಿ [illegible]

—೦೦—

ಸರ್. ಎ. ರಹೀಮರಿಗೆ ಗುಂಡು ಹಾರಿಸಿದರು.

[illegible] ಸರ್ ಎ. ಅಬ್ದುಲ್ [illegible]

—೦೦—

[illegible]

[illegible] ತಾ. 17ರಲ್ಲಿ [illegible] 2 [illegible] 81 [illegible]

—೦೦—

ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆ.

ಹೊಸ ಮುಖ್ಯ ಮಂತ್ರಿಗಳಾದ ಮಿ ಸ್ಟಾನ್ಲೀ ಬಾಲ್ಡ್ವಿನ್.

[illegible]

[illegible] ತಾ 13 14 ಮತ್ತು 15 ರಲ್ಲಿ [illegible] 360 [illegible] 610 [illegible] 31,305,527 ([illegible] 29,952,361 [illegible]) [illegible]

ಸರಕಾರಿ ಪಕ್ಷ.

ಕನ್ಸರ್ವೇಟಿವ್ ಪಾರ್ಟಿ	383
ಲಿಬರಲ್ ನ್ಯಾಷನಲಿಸ್ಟ್ ಪಾರ್ಟಿ	32
ನ್ಯಾಷನಲ್ ಪಾರ್ಟಿ	2
ಇಂಡಿಪೆಂಡೆಂಟ್ ಪಾರ್ಟಿ	2
ನ್ಯಾಷನಲ್ ಲೇಬರ್ ಪಾರ್ಟಿ	8
ಜುಮ್ಲಾ	427

ವಿರೋಧ ಪಕ್ಷ.

ಲೇಬರ್ ಪಾರ್ಟಿ	154
ಇಂಡಿಪೆಂಡೆಂಟ್ ಲೇಬರ್ ಪಾರ್ಟಿ	4
ವಿರೋಧಪಕ್ಷದ ಲಿಬರಲ್ ಪಾರ್ಟಿ	17
ಇಂಡಿಪೆಂಡೆಂಟ್ ಲಿಬರಲ್	4
ಇಂಡಿಪೆಂಡೆಂಟ್ [illegible] ಪಾರ್ಟಿ	3
ಕಮ್ಯೂನಿಸ್ಟ್	1
ಜುಮ್ಲಾ	183

[illegible]



([illegible])

[illegible]

—೦೦—

[illegible]

[illegible] 15 [illegible]

—೦೦—

[illegible]

[illegible]

—೦೦—

[illegible]

([illegible])

[illegible]

—೦೦—

[illegible]

[illegible] ತಾ 13ರಲ್ಲಿ [illegible] 102 [illegible]

—೦೦—

ನೊಬೆಲ್ ಪಾರಿತೋಷಕ.

ಜರ್ಮನ್ ವೈದ್ಯ ವಿಜ್ಞಾನಿಗಳಿಗೆ.

[illegible] 1901 [illegible]

—೦೦—

ಇದೆಂಥ ಅನ್ಯಾಯ.

[illegible] 0-2-6 [illegible] 0-1-5 (1½ [illegible]) [illegible] 0-5-0 [illegible] 0-7-6 [illegible]

—೦೦—

KODAGU

ಕೊಡಗು

IF NOT *delivered* *please return to* "KODAGU" OFFICE, MERCARA.

ಅಭ್ಯುದಯಕ್ಕೆ ... "ಕೊಡಗು" ಪ್ರೆಸ್ಸ್, ಮಡಿಕೇರಿ. — ಪತ್ರಿಕೆಯ ವಿಷಯಕ್ಕೆ ಸಂಪಾದಕರಿಗೆ ಬರೆಯಿರಿ

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. | ಸಂಪಾದಕ—ಸಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ನವೆಂಬರ್ ತಾರೀಕು ೨೨ನೇ ಶುಕ್ರವಾರ. [ಸಂಚಿಕೆ ೩೭

By Appointment
To H. E. The Governor of Madras.

CUPS AND MEDALS.



Telephone:
3145

Telegrams
'PRECIOUS.'



V. SUBRAMANIA IYER.

Jeweller, & Diamond Merchant,

52–1 2 & 3 Kuppumuthu Street Triuvatteswarapet MADRAS. POST BOX 473 TRIPLICANE

Catalogue & special designs with quotations (free) on enquiry.

THE CANARA BANKING CORPORATION UDIPI, LTD.,

Established 1906.] [Incorporated in British India.

Head office,—UDIPI (S Kanara)

Branches.—

1. Udipi, 2 Coondapoor 3 Car Street Mangalore 4 Bunder Mangalore 5 Shimoga. 6. G. T. Madras, 7 Mercara and 8 Virarajendrapet,

DEPOSITS.

1922	1926	1930	1934
Rs 2.28 419/-	6.43.940/-	20.23 837/-	24 95.329/-

30–9–1935
Rs. 26.37.109.

SAVINGS BANK ACCOUNTS
Interest allowed at 3½ % p. a.

FACILITIES —

(1) Withdrawal by **cheques.** (2) Production of pass books unnecessary at the time of withdrawal. (3) Accounts transferred FREE of charge from one office to another.

FIXED DEPOSITS now accepted up to 5 per cent.

Udipi. M. Srinivasa Prabhu,
29–7–1935. 52–2 Manager.

"ಜನರಲ್ ಅಶ್ಯೂರೆನ್ಸ್" ಏಜೆನ್ಸೀ.

ಉದಾರವಾದ ಸ್ಕೀಂ ಛೂಕ್ [illegible]

(1) [illegible] ಜಾರಿಯಲ್ಲಿರುವ
(2) [illegible] ತೀರ್ಮಾನಗಳು ಮತ್ತು [illegible]
(3) [illegible] $4\frac{1}{2}$ % [illegible]
(4) [illegible]

ಜಾರಿಯಲ್ಲಿರುವ ವಿಮೆಪತ್ರಗಳು (ಸುಮಾರು)	265 ಲಕ್ಷ
[illegible]	70 ಲಕ್ಷ
ವಾರ್ಷಿಕ ಉತ್ಪನ್ನಗಳು (ಸುಮಾರು) ರೂ	16 ಲಕ್ಷ
ವಿಮಾ ಹಣಗಳ ಪಾವತಿ ರೂ	33 ಲಕ್ಷ

[illegible] ಅಧಿಕ

[illegible] 25%o | [illegible] 20 %o

[illegible]

ಸಿ. ಬಿ. [illegible], ಎಮ್. ಎಸ್. ಏಸ್. [illegible]
ಜನರಲ್ ಮೇನೇಜರ್, ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿ., [illegible]
ಎ. ಎಸ್. ಎಸ್. [illegible]
ಸುಪರಿಂಟೆಂಡೆಂಟ್, ಜನರಲ್ ಅಶ್ಯೂರೆನ್ಸ್ ಬಿಲ್ಡಿಂಗ್, [illegible] 3ನೇ [illegible]

52–25 ಬೆಂಗಳೂರು [illegible]

IF NOT delivered please return to "KODAGU" OFFICE, MERCARA.

KODAGU

ಕೊಡಗು

[illegible]

ಅಚ್ಚುಮೊಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.
—
ಬೆಲೆಯ ವಿಷಯಕ್ಕೆ ಕಾಗದ ಬರೆಯಿರಿ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ನವಂಬರ್ ತಾರೀಕು ೨೨ನೇ ಶುಕ್ರವಾರ. [ಸಂಚಿಕೆ ೨೭

By Appointment
To H. E. The Governor of Madras.

CUPS AND MEDALS.



Telephone: 3145

Telegrams 'PRECIOUS.'



V. SUBRAMANIA IYER.

Jeweller, & Diamond Merchant,

52–1 2 & 3 Kuppumuthu Street Tiruvateeswarapet. MADRAS. Post Box 443 Triplicane

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office;—UDIPI (S. Kanara)

Branches :—

1. Udipi, 2 Coondapoor, 3 Car Street Mangalore 4 Bunder, Mangalore 5 Shimoga. 6, G. T. Madras, 7 Mercara and 8 Virarajendrapet,

DEPOSITS.

1922	1926	1930	1934
Rs. 2.28.419/–	6.43.940/–	20.23.837/–	24.95.329/–

30–9–1935
Rs. 26.37.109.

SAVINGS BANK ACCOUNTS
Interest allowed at 3½ % p. a.

Facilities.—

(1) Withdrawal by cheques. (2) Production of pass books unnecessary at the time of withdrawal. (3) Accounts transferred FREE of charge from one office to another.

FIXED DEPOSITS now accepted up to 5 per cent.

Udipi. M. Srinivasa Prabhu,
29–7–1935. 52–2 Manager.

"ಜನರಲ್ ಅಶ್ಯೂರೆನ್ಸ್" ಅಜ್ಮೀರ್.
ಉದಾರವಾದ [illegible]

(1) [illegible]
(2) [illegible]
(3) [illegible] 4½% [illegible]
(4) [illegible]

[illegible] (ಸುಮಾರು) 265 ಲಕ್ಷ
[illegible] 70 ಲಕ್ಷ
ವಾರ್ಷಿಕ [illegible] (ಹೆಚ್ಚು) ರೂ 16 ಲಕ್ಷ
[illegible] ರೂ 33 ಲಕ್ಷ
[illegible]
[illegible] 25% [illegible] 20%

[illegible]

[illegible]

52—25 [illegible]

ಪ್ರಸಿದ್ಧಿ ಹೊಂದಿದ ತೀವ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ ಅಶೋಕಾರಿಷ್ಟ.

[illegible]

ದೊಡ್ಡ ಶೀಸೆ 2—8—0.
ಅರ್ಧ ಶೀಸೆ 1—6—0.

ನವರತ್ನ ದ್ರಾಕ್ಷಾರಿಷ್ಟ.

[illegible] ಶೀಸೆ 1—8—0. ಅರ್ಧ ಶೀಸೆ 1—13—0.

[illegible]

52—28 [illegible]

ನವರತ್ನ ಫಾರ್ಮಸಿ

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

[illegible] (Our arms and ammunition GUIDE 3) [illegible]

Goolamhusain Allibhoy & Sons, Ltd.,

26—8 210, Abdulrehman Street, BOMBAY 3

EMPIRE OF INDIA LIFE ASSURANCE CO., LTD.

INCREASE IN INTERIM BONUS RATES.

We are pleased to announce the following increase in the INTERIM RATES of BONUS payable on With Profit Policies becoming claims by death or maturity from 1st March, 1935 to 28th February, 1937 when the next valuation will be made —

Rs. 18 per annum per Rs. 1,000 Assured on WHOLE LIFE
Rs 16 per annum per Rs. 1,000 Assured on ENDOWMENT } **ASSURANCES.**

In Respect of each Year's Premium Due and Paid During the aboves Period

The premium rates charged by this company are very moderate and are prepared with the object of providing the **largest possible immediate assurances** consistent with safety. At most of the insuring ages the average premium at present charged by other offices for a policy of Rs 1,000 with Profits will secure in this Company a With Profit assurance **for much larger amount** Thus for the same premium an additional amount of assurance can be obtained in this Company which is equivalent to an **immediate and certain Bonus** as large as can be looked for in other Life Offices only after very many years This additional assurance **also** shares in the future profits of the Company.

The increase in the interim rates of Bonus coupled with the low rates of premiums charged by the Company has considerably enhanced the value of our Policies It is really a splendid record showing the results of economical management, sound investments and careful selection of lives

Ask for our leaflet **'Why is a Policy in the Empire of India Life Assurance Company, Limited of Special Interest?'** **and convince yourself that a policy in this Company is decidedly to your benefit.**

Active Agents wanted in all important places of Mysore State, Coorg etc., on attractive terms

Branch Secretary,
EMPIRE OF INDIA LIFE ASSURANCE CO., LTD.,

52—2 15 / [illegible]mercial Street, Bangalore

ಪತ್ರವ್ಯವಹಾರ.

[ಪತ್ರಿಕೆಯಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ]

[illegible]

ಶ್ರೀಮಂಗಲದಲ್ಲಿನ ಉದ್ಯೋಗಸ್ಥರ [illegible] ತಾ. 10ನೇ [illegible]

[illegible]

ಶ್ರೀ ರಾಮ ಭಾರತಿ ಸಂಘ

[illegible] ತಾ 4—10—35ರ [illegible]

[illegible]

"[illegible]"

[illegible]

'ಸ್ರ,

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ [illegible] ಹೊಟ್ಟೆ ನೋವು, ಸೊಂಟನೋವು, [illegible] ಮೂಳೆನೋವು, ಸೋಮರೋಗ, [illegible]

ದೊಡ್ಡ ಶೀಷೆ 2-8-0.
ಅರ್ಧ ಶೀಷೆ 1-6-0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ ಅರುಚಿ ನಿತ್ರಾಣ ವಗೈರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನು ಕೊಡುವ ಪ್ರಸಿದ್ಧ ಔಷಧವು. ಕ್ರಯ ದೊಡ್ಡ ಶೀಷೆ 1—8—0. ಅರ್ಧ ಶೀಷೆ 1—13—0.

ವಿ. ಸೂ:—ಔಷಧ ಕರೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ

ಸ್ಟಾಕಿಸ್ಟ್—ಎ. ಹೆಚ್. ಮಾಚಯ್ಯ, ಚಿಕ್ಕ ವ್ಯಾಪಾರಿ, [illegible] | ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—28

ನವರತ್ನ ಫಾರ್ಮಸಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಬೇಟೆಗಾರರಿಗೆ:— ನಮ್ಮ ಕೋವಿ ಮತ್ತು ತೋಟಾಗಳ ಪಟ್ಟಿ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ಸೂಕ್ತ ವಿಧಾನಗಳ ವಿಷಯ ಉಪಯುಕ್ತ ಸೂಚನೆಗಳಿವೆ



Goolamhusain Allibhoy & Sons, Ltd.,

26—8 210, Abdulrehman Street, BOMBAY 3.

EMPIRE OF INDIA LIFE ASSURANCE CO., LTD.

INCREASE IN INTERIM BONUS RATES.

We are pleased to announce the following increase in the INTERIM RATES of BONUS payable on With Profit Policies becoming claims by death or maturity from 1st March, 1935 to 28th February, 1937 when the next valuation will be made.

Rs. 18 per annum per Rs. 1,000 Assured on WHOLE LIFE
Rs 16 per annum per Rs. 1,000 Assured on ENDOWMENT } **ASSURANCES.**

In Respect of each Year's Premium Due and Paid During the above Period

The premium rates charged by this company are very moderate and are prepared with the object of providing the **largest possible immediate assurances** consistent with safety. At most of the insuring ages the average premium at present charged by other offices for a policy of Rs 1,000 with Profits will secure in this Company a With Profit assurance **for much larger amount.** Thus for the same premium an additional amount of assurance can be obtained in this Company which is equivalent to an **immediate and certain Bonus** as large as can be looked for in other Life Offices only after very many years. This additional assurance **also** shares in the future profits of the Company.

The increase in the interim rates of Bonus coupled with the low rates of premiums charged by the Company has considerably enhanced the value of our Policies. It is really a splendid record showing the results of economical management, sound investments and careful selection of lives.

Ask for our leaflet 'Why is a Policy in the Empire of India Life Assurance Company, Limited, of Special Interest?' **and convince yourself that a policy in this Company is decidedly to your benefit.**

Active Agents wanted in all important places of Mysore State, Coorg etc., on attractive terms.

Branch Secretary,
EMPIRE OF INDIA LIFE ASSURANCE CO. LTD.,
15 / [illegible] mercial Street, Bangalore.

ಪತ್ರವ್ಯವಹಾರ.

[ಬಾತ್ಮೀದಾರರು ತಮ್ಮ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಮೃತರ ಆತ್ಮಕ್ಕೆ ಶಾಂತಿ.

ಶ್ರೀಮಂಗಲದಲ್ಲಿನ ಉದ್ಯೋಗಸ್ಥರ ಕ್ಲಬ್ಬಿನವರ ಒಂದು ವಿಶೇಷ ಸಭೆಯು ಈ ತಾ. 13ರಲ್ಲಿ ಮಿ. ಮುಂಡೇರಂಡ ಬೋಪಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ, ಮೇಲ್ಕಂಡ ಕ್ಲಬ್ಬಿನ ಪ್ರೆಸಿಡೆಂಟರಾಗಿದ್ದ ದಿವಂಗತ ಮಿ. ನಡಿಕೇರಿಯಂಡ ಸುಬ್ಬಯ್ಯನವರ ಅಕಾಲ ಮರಣಕ್ಕೆ ಸಂತಾಪವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಅವರ ಕುಟುಂಬದವರ ವ್ಯಸನದಲ್ಲಿ ಸಹಾನುಭೂತಿಯನ್ನೂ ಸೂಚಿಸುವ ಠರಾವು ಒಮ್ಮತದಿಂದ ಪಾಸಾಯಿತು. ಸರ್ವರ ಹಿತಚಿಂತಕರಾದ ಮಿ. ಸುಬ್ಬಯ್ಯನವರ ಅಕಾಲ ಮೃತ್ಯುವಿನಿಂದ ಇಡೀ ನಾಡೇ ಶೋಕಸಾಗರದಲ್ಲಿ ಮುಳುಗಿದೆ.

'ನೊಂದ ನಾಡಿನವ'

ಶ್ರೀ ರಾಮ ಭಾರತಿ ಸಂಘ

ಮೊದಲೇ ನಾವು ಈ ಸ್ಥಳದ ಶ್ರೀ ರಾಮ ಭಾರತಿ ಸಂಘದ ಅಧ್ಯಕ್ಷರು ಮಿ. ಕೆ. ನಾಣಯ್ಯನವರಲ್ಲಿ ವಿನಂತಿ. ತಾ 4—10—35ರ 'ಕೊಡಗು' ಪತ್ರಿಕೆಯಲ್ಲಿ ಕೇಳಿಕೊಂಡ ಮೇರೆ ನಮ್ಮ ಜನಾಂಗದಲ್ಲಿ ನಡೆದು ಬಂದ ನಮ್ಮ ಮತದ ಸಂಘದ ಕಾರ್ಯಕಲಾಪಗಳನ್ನು ನಡೆಸದೆ ಇದು ವರೆಗೂ ಬಾಕಿ ಮಾಡಿಕೊಂಡಿರುವುದರ ಕಾರಣ ತಿಳಿಯುವುದಿಲ್ಲ. ಕೊಡಗಿನ ಇತರ ಮತದವರೆಲ್ಲರು ವಿದ್ಯೆಯಲ್ಲಿ ಮುಂದುವರಿದರು. ನಾವು ಹಿಂದುಳಿದೆವು, ಈ ಸಂಗತಿ ತಿಳಿಸಲು ನಮ್ಮ ಜನಾಂಗಕ್ಕೆ ನಾಚಿಕೆಗೇಡಾದದ್ದು ಎಂದು ಹೇಳಿದರೆ ತಪ್ಪಾಗಲಾರದು. ಇದಲ್ಲದೆ ಸಂಘವನ್ನು ಸ್ಥಾಪಿಸುವಾಗ ಪ್ರತಿಷ್ಠಿತರ ಮನಸ್ಸನ್ನು ಸಮಾಧಾನಪಡಿಸಿ ಸಹಾನುಭೂತಿಯನ್ನು ಸಂಪಾದಿಸಲು ಹೇಳಿದ ಮಾತುಗಳು ನಿಷ್ಫಲವಾಗಿ ತೋರಿ ಬರುತ್ತವೆ. ಈ ವಿಷಯಕ್ಕಾಗಿ ಶೇಖರಿಸಲ್ಪಟ್ಟ ದ್ರವ್ಯಗಳೇನಾದವು? ಅದರ ರಿಜಿಸ್ಟರ್ ಬುಕ್ಕುಗಳು ಯಾರ ಸ್ವಾಧೀನದಲ್ಲಿವೆ? ಪ್ರೋನೋಟು ಬರಸಿದರ ವಾಯಿದೆ ಗತಿಸಿ [illegible] ಎಷ್ಟೆಷ್ಟು ಸಲ್ಲಬೇಕು? ದ್ರವ್ಯಗಳು ತುಂಬಿದಾಗಲೆ ಬುಕ್ಕುಗಳು ಪರಾರಿಯಾದವು; ಮೀಟಿಂಗು [illegible]; ಮೆಂಬರುಗಳು [illegible] ರಾಜೀನಾಮೆ ಕೊಟ್ಟರು, ಕೇಳುವವರು ಯಾರೂ ಇಲ್ಲದಾದರು. ಇನ್ನು ಮೀಟಿಂಗು ಮಾಡಿದರೆ ಸಂಘದ ಹಣವನ್ನು ಕೇಳಿಯಾರು ಎಂಬ ಶಂಕೆಯು ನಿಮಗೆ ಇರಬಹುದೇ? ದೇವರ ಗಂಟೂ ಸಮಾಜದ ಗಂಟೂ ಒಂದೇ. ಈ ಸಂಗತಿ ಮೀಟಿಂಗು ಮಾಡಿ ಸಮಾಜದ ಮುಂದಿಡಬೇಕಾಗಿದೆ.

'ಆತ್ಮರಾಮ'

"ಶಿವಕೊಟ್ಟರೂ [illegible]"

ಅಯ್ಯಾ,

ಈ ವರುಷ ಇಂಡಿಯಾ ಸರ್ಕಾರವು ಮಹಾತ್ಮ ಗಾಂಧಿಯವರ ಮೇಲೆ [illegible] ಲಕ್ಷಾಂತರ ರೂಪಾಯಿಗಳನ್ನು ಗ್ರಾಮಾಭಿವೃದ್ಧಿಗೆ ಪ್ರಾಂತಿಕ ಸರ್ಕಾರಕ್ಕೆ ಕಳುಹಿಸಿದರ ಫಲವಾಗಿ ಕೊಡಗಿನ ಗ್ರಾಮಗಳಿಗೆ ಸಾವಿರಾರು ರೂಪಾಯಿ ಸಿಕ್ಕಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಆದರೆ ಅದನ್ನು ಗ್ರಾಮಕ್ಕೆ ವಿನಿಯೋಗಿಸಲು ನಿಯಮಿಸಿರುವ ಅಧಿಕಾರಿಗಳು ಎಲ್ಲರಿಗೂ ತಿಳಿಸಿಕ್ಕುವ ಹಾಗೆ ಮಾಡುತ್ತಾರೋ ಎಂಬುದು ನನ್ನ ಸಂಶಯ. ಅದನ್ನು ಯೋಚಿಸುತ್ತಾ, ಬಾಯಿ ತೆರೆದಿರುವುದೇ ನನಗೆ ದಕ್ಕಿದ್ದು. [illegible] ಗ್ರಾಮದಲ್ಲಿ [illegible] ಕೆಲಸ ಮಾಡುವವರು ಮುಂದು ಬಂದರೂ, ಬಂಧು ಪ್ರೇಮದಿಂದ ಲೋ ಯಾ ದಾಕ್ಷಿಣ್ಯದಿಂದಲೋ ಅವರಿಗೆ ಬೇಕಾದವರಿಗೇನೇ ಕೊಟ್ಟುಕೊಂಡಂತೆ ತೋರುತ್ತದೆ. [illegible] ಬಾಕಿ ಮೊಬಲಗು ವಿನಾಯಿತಿಂಬುದು ಆವರಿಗೇ ಗೊತ್ತು. ಈ ಪರಂಪರೆಯೋ ಇಂಡಿಯಾ ಸರ್ಕಾರದ ಹಣವು ವ್ಯಯವಾಗುವದೋ ಎಂಬುದು ಯಾರು ಜನರಿಗೆ ತಿಳಿಸಿಯಾರು? ಮತ್ತು, ಡಿ. ಸಿ. ಇನ್ನು ಮುಂದಾದರೂ ಗ್ರಾಮಕ್ಕೆ ವಿನಿಯೋಗಿಸುವ ಹಣವನ್ನು ತಿಂಗಳುಗಳನ್ನು ಕಳೆದು ಗ್ರಾಮದ ಕೆಲಸವೂ [illegible] ಎಲ್ಲರಿಗೂ ಪ್ರಯೋಜನವಾಗುವಂತೆ ವಿನಿಯೋಗಿಸಲು ಸೂಚನೆ ಕೊಟ್ಟು, ಆ ಹಣದಲ್ಲಿ ಗ್ರಾಮದ ಎಲ್ಲಾ [illegible] ಗೂ ಪಕ್ಷಪಾತ [illegible] ವಿತರಣೆಯಾಗಿ ನಾಯಕ್ ಕೇಳಿ.

'ಗ್ರಾಮವಾಸಿ.'

ಕೊಡಗಿಗೆ ಸಿಕ್ಕಿರುವುದು ಏನು?

([illegible])

[illegible] ಭಾರತೀಯ ದೇಶವು ಬೇಗನೆ ರಾಜಕೀಯ ಸ್ವತಂತ್ರ [illegible] ಹೆಚ್ಚೆಯನ್ನು [illegible] [illegible] ದೇಶವೂ [illegible] ಭಾರತದ ದೇಶದ ಬೇರೆ ಪ್ರಾಂತ್ಯಗ[illegible] ರಾಜಕೀಯ ಸ್ವತಂತ್ರ [illegible] [illegible] ಹೆಚ್ಚಿನ ಅಧಿಕಾರಗಳು ಸಿಕ್ಕಿರುವಾಗ [illegible] ಸಿಕ್ಕಿರುವುದೇನು? [illegible] ಫೆಡರಲ್ ಕೌನ್ಸಿಲ್ ಆಫ್ ಸ್ಟೇಟ್ಸ್ [illegible] ಪ್ರತಿನಿಧಿಯನ್ನು [illegible] [illegible] ಅಧಿಕಾರವು [illegible]!

[illegible] ದೇಶವು ಇಂಡಿಯಾ ದೇಶದ ಬೇರೆ [illegible]

[illegible] ಸಿಕ್ಕಿದೆಯೋ [illegible] ಕೃತಾರ್ಥರಾಗಿ [illegible].

[illegible] ನಮ್ಮ [illegible] ರಾಜಕೀಯ [illegible] ಹಿಂದೆ ದೇಶದ [illegible] ಎಲ್ಲವೂ ತನ್ನ [illegible] ಎಲ್ಲವೂ [illegible] ದೇಶದವರ [illegible]

ಈ ಸಂಘಟನೆಯಲ್ಲಿ ಮುಖ್ಯವಾಗಿ ಎರಡು ತರಹಗಳಿವೆ. ನೇರವಾದ ಚುನಾವಣೆ ಮತ್ತು ಪರೋಕ್ಷ ಚುನಾವಣೆ (Direct Election and Indirect Election) [illegible]

[illegible] ಕೌನ್ಸಿಲ್ ಆಫ್ ಸ್ಟೇಟಿಗೆ [illegible] 200 ಜನರು [illegible] ಅಧಿಕಾರವೆಂದು ಹೇಳಲಾಗುವದಿಲ್ಲ.

[illegible] ಕೌನ್ಸಿಲ್ ಆಫ್ ಸ್ಟೇಟಿ[illegible] ಚುನಾವಣೆಯೇ [illegible] (House of Lords) [illegible] ಚುನಾವಣೆಯು [illegible] ಕೌನ್ಸಿಲ್ ಆಫ್ ಸ್ಟೇಟಿಗೆ [illegible] ಫೆಡರಲ್ [illegible] ಚುನಾವಣೆ [illegible] ಫೆಡರಲ್ ಕೌನ್ಸಿಲ್ ಆಫ್ ಸ್ಟೇಟಿಗೆ [illegible] ಕೌನ್ಸಿಲ್ ಆಫ್ ಸ್ಟೇಟಿಗೆ [illegible]

ಓಟಿನ ಅಧಿಕಾರವು ಎಲ್ಲಿದೆ? ಓಟಿನ ಅಧಿಕಾರವು [illegible] ಓಟಿನ ನ್ಯಾಯವಾದ [illegible] ಅಧಿಕಾರವನ್ನು [illegible]

[illegible] ಕೊಡಗು ಎಂದರೆ [illegible] ಕೊಡಗಿಗೆ ಸಿಕ್ಕಿರುವುದು ಏನು?

[illegible]



ASHOO TOSH DAW & CO.,

GUN MAKERS.

"DAW BUILDING" 184, DHARMTALA ST., CALCUTTA

[illegible]

ಲಾಭಕರವಾದದ್ದು ಯಾವುದು?



501 ಸೋಪಿನ ಒಂದು ಇಡೀ ಸಾಬೂನೋ ಯಾ ಅರ್ಧ ನೀರು ಮತ್ತು ಅರ್ಧ ಸಾಬೂನಿರುವ ಮತ್ತಿತರ ಸಾಬೂನುಗಳೋ?

[illegible] 501 ಸಾಬೂನು [illegible] ಸಾಬೂನು [illegible]

501 Soap

[illegible]

Wanted.

Candidates for Telegraph and Station Master class Allowance Rs .8 Uniform passage and quarter free Service essential Rules and Entrance form on annas eight

Director

Royal Telegraph and Rly.

Duties College.

14—5 Bombay No. 20.

[illegible]

ಇಟಲಿ-ಅಬಿಸೀನಿಯಾ ಯುದ್ಧ.

ಬಾಂಬುಗಳ ಧಾಳಿಯ ಪರಿಣಾಮ.
ಮಕೇಲ್ ಮತ್ತು ಗೋರಹೈ ಇಟಲಿಯವರ ಕೈವಶವಾದವು.
ಇಟಲಿಯ ಸೈನಿಕರು ಚೆಲ್ಲಾಪಿಲ್ಲಿ ಓಡಿದರು.
ವಿಷಗಾಳಿಯ ಪ್ರಯೋಗ.

ನವಂಬರ್ ತಾರೀಖು ೬

ಇಟಲಿಯವರು ಹಿಂದಕ್ಕೋಡಿಸಲ್ಪಟ್ಟರು.

ಅಡಿಗ್ರಾಟಿನ ದಿಕ್ಕಿನಿಂದ ಬಂದು ಬಲವಾದ ಇಟಲಿಯ ಸೈನ್ಯವು ಕಳೆದ ರಾತ್ರಿ ಮಕೇಲ್ ಪಟ್ಟಣವನ್ನು ಹೊಕ್ಕಿದ್ದರು. ಆದರೆ ಇಥಿಯೋಪಿಯ ಸೈನ್ಯದವರು ರಾತ್ರಿ ಅವರ ಮೇಲೆ ಬಿದ್ದು ಅವರನ್ನು ಹಿಂದಕ್ಕೆ ಓಡಿಸಿದರು. ಎರಡು ಕಡೆಗೂ ಸ್ವಲ್ಪ ನಷ್ಟವಾಯಿತು. ಪೆಟ್ಟಿಕಿಡೆಲಿ ಎಂಬ ಪ್ರಾಂತ್ಯದಲ್ಲಿ ಇಥಿಯೋಪಿಯನರು ಎರಡು ಇಟಲಿಯ ವಿಮಾನಗಳನ್ನು ನೆಲಕ್ಕುರುಳಿಸಿದರು.

ಮಕೇಲನ್ನು ಇಟಲಿಯವರು ಹಿಡಿದರು

ರಾಸ್ ಗುಗ್ಸಾರವರ ಸೈನ್ಯವೂ, ಇನ್ನೂ ಕೆಲವು ಕಪ್ಪು ಸಿಪಾಯಿಗಳೂ ನಿನ್ನೆ ರಾತ್ರಿ 11 ಗಂಟೆಗೆ ಮಕೇಲ್ ಪಟ್ಟಣಕ್ಕೆ ಪ್ರವೇಶಮಾಡಿದರು. ಅಲ್ಲಿಯ ನಿವಾಸಿಗಳು ಅವರಿಗೆ ಸ್ವಾಗತ ಕೊಟ್ಟರೆಂದು ಇಟಲಿಯವರ ವಾರ್ತೆ.

ಇಥಿಯೋಪಿಯದಿಂದ ಹಿಂತಿರುಗಿ ಬಂದ ಹಿಂದೀಯರು

ಅಡಿಸ್ ಅಬಾಬಾದಲ್ಲಿರುವ ಬ್ರಿಟಿಷ್ ಕಾನ್ಸಲ್ಲರು ಹಿಂದೂ ವ್ಯಾಪಾರಿಗಳೆಲ್ಲರೂ ತಮ್ಮ ಹೆಂಗಸು ಮಕ್ಕಳನ್ನು ಸ್ವದೇಶಕ್ಕೆ ಕಳುಹಿಸಬೇಕೆಂದರು. ಆದರೆ ಗಂಡಸರನ್ನು ಅಲ್ಲಿಯೇ ಬಿಟ್ಟು ಹೆಂಗಸರು ಹೊರಡಲು ಒಪ್ಪದ್ದರಿಂದ ಹಲವು ಹಿಂದೀಯರು ತಮ್ಮ ಸಾಮಾನುಗಳನ್ನೆಲ್ಲಾ ಅರ್ಧ ಬೆಲೆಗೆ ಮಾರಿಯೋ, ಅಥವಾ ಅವುಗಳನ್ನೆಲ್ಲಾ ಬೇರೆ ವ್ಯಾಪಾರಿಗಳ ವಶಕ್ಕೆ ಕೊಟ್ಟೋ ತಮ್ಮ ಸಂಸಾರ ಸಮೇತ ಇಂಡಿಯಕ್ಕೆ ಹೊರಟರು. ಅವರಲ್ಲಿ ೮೦ ಗಂಡಸರನ್ನು ಕಾರಿನಲ್ಲಿ ಬೊಂಬಾಯಿಗೆ ಬಂದು ಕಳಿಸಿದರು. ತಾವು ಯುದ್ಧದ ಭಯದಿಂದ ತಮ್ಮ ವ್ಯಾಪಾರವನ್ನೆಲ್ಲಾ ಬಿಟ್ಟು, ಹುಟ್ಟಿದ ನೆಲ ಸೇರಲು ಹಿಂತಿರುಗಿದೆವೆಂದರು. ಅಬಿಸೀನಿಯರು ತುಂಬ ಕಷ್ಟಪಡುತ್ತಿದ್ದಾರೆಂದೂ, ಸಾವಿರಗಟ್ಟಲೆ ಸೈನಿಕರು ಮುಂಚೂಣಿಗೆ ಬರುತ್ತಿರುವರೆಂದೂ, ಅವರ ತವರೂರಿಗೆ ಹಲವು ನೌಕರಗಳು ಏರ್ಪಡಿಸಲ್ಪಟ್ಟಿವೆಯೆಂದೂ ಹೇಳಿದರು.

ಅಮೇರಿಕಾದವರಲ್ಲಿ ನೀಗ್ರೋಗಳ ವಿರೋಧ.

'ಇಟಲಿಯವರ ಮೇಲೆ ಶಸ್ತ್ರ ಎತ್ತಬೇಕೆಂದು ನಾನು ಯಾರಿಗೂ ಹೇಳುವುದಿಲ್ಲ. ಶಕ್ತಿಯ ಮತ್ತು ಶಕ್ತಿಯ ವಿಧಾನಗಳು ಪೂರ್ವದ ತಿಳಿಗೇಡಿತನದವುಗಳಾಗಿವೆ. ಅಮೇರಿಕಾದಲ್ಲಿರುವ ನೀಗ್ರೋ ಜನಾಂಗಗಳ ಕೂಟಕ್ಕೆ ಸೇರಿರುವುದಿಲ್ಲ. ಆದರೆ ನನ್ನ ಈ ಮಾನುಷ ವರ್ಗದ ಸಮಸ್ಯೆಯಾಗಿರುವುದರಿಂದ ನೀವು, ಅಮೇರಿಕಾದ ಜನಸಮುದಾಯವು, ರಾಜಿಯ ಪ್ರಯತ್ನದಲ್ಲಿ ಲೀಗಿನೊಂದಿಗೆ ಸಹಕರಿಸುವ ಸಂದರ್ಭ ಒದಗಿದೆ'ಯೆಂದು ಅಬಿಸೀನಿಯಾದ ಚಕ್ರವರ್ತಿಯವರು 'ಎಕ್ಸ್‌ಪ್ರೆಸ್' ಭಾಷಣದಲ್ಲಿ ಅಮೇರಿಕಾದವರಿಗೆ ವಿಜ್ಞಾಪಿಸಿಕೊಂಡಿರುವರು.

ಇಟಲಿಗೆ ಅಮೇರಿಕಾದ ಎಣ್ಣೆ.

ಯುದ್ಧ ಮಾಡುತ್ತಿರುವ ಜನಾಂಗಗಳಿಗೆ ಯುದ್ಧ ಸಹಾಯಕವಾದ ಸಾಮಾನುಗಳನ್ನು ಕಳುಹಿಸಕೂಡದೆಂದು ಅಮೇರಿಕಾದ ಪ್ರೆಸಿಡೆಂಟರಾದ ಮಿ ರೂಸ್‌ವೆಲ್ಟರು ಪ್ರಕಟಿಸಿದಾಗ್ಯೂ ಈ ವರ್ಷ ಸೆಪ್ಟೆಂಬರ್ ಮತ್ತು ಅಕ್ಟೋಬರು ತಿಂಗಳುಗಳಲ್ಲಿ ಕಳೆದ ವರ್ಷದ 2 ತಿಂಗಳುಗಳಿಗಿಂತ ೬ ರಷ್ಟು ಹೆಚ್ಚಾಗಿ ಎಣ್ಣೆಯನ್ನು ಅಮೇರಿಕಾದಿಂದ ಇಟಲಿಗೆ ಕಳುಹಿಸಿರುವರು.

ಜರ್ಮನಿಯ ಧೋರಣೆ.

ಜರ್ಮನಿಯು ಜನಾಂಗಗಳ ಕೂಟದಲ್ಲಿ ಇಲ್ಲದೆ ಹೋದರೂ, ಆ ಕೂಟದವರು ಇಟಲಿಯ ಮೇಲೆ ಹಾಕಿರುವ 'ಸ್ಯಾಂಕ್ಷನ್'ಗಳ ಸಂಬಂಧಿಸಿದ ಯುದ್ಧ ಸಾಮಗ್ರಿಗಳನ್ನು ಜರ್ಮನಿಯಿಂದ ಇಟಲಿಗೆ ಕಳುಹಿಸುವುದನ್ನು ನಿಲ್ಲಿಸುವುದಾಗಿ ತೀರ್ಮಾನಿಸಿದೆ. ಜರ್ಮನಿಯ ಈ ತೀರ್ಮಾನವು ಲೀಗಿನವರಿಗೆ ತೃಪ್ತಿಯನ್ನುಂಟುಮಾಡಿದೆ.

ನವಂಬರು ತಾ. 7.

ಇಥಿಯೋಪಿಯನರು ಮಕೇಲನ್ನು ಪುನಃ ಹಿಡಿದರು.

ಇಥಿಯೋಪಿಯನರು ಮಕೇಲ್ ಪಟ್ಟಣವನ್ನು ಪುನಃ ಪ್ರವೇಶ ಮಾಡಿರುವರೆಂದೂ, ಇದರಿಂದ ಅವರು ಆ ಪಟ್ಟಣವನ್ನು ಕಾಯುವವರಾಗಿ ಆಗುತ್ತದೆಂದೂ ಇಟಲಿ ವಿಮಾನಿಕರ ವಾರ್ತೆ. ಊರಿನ ಒಳ ಕೈ ಕೈ ಕದನವಾಗಿ ಇಟಲಿಯ ಅಧಿಕಾರಿಗಳೂ, ಹಲವು ಅಸ್ಕಾರಿಗಳೂ ಸತ್ತರು; ಮತ್ತು ಜನರು ಧಾಳಿಗೊಂಡರು: ಇಥಿಯೋಪಿಯನರು ಪಟ್ಟಣವನ್ನು ಬಿಟ್ಟು ಓಡಿ ಹೋದರು.

ಅಮೇರಿಕಾಕ್ಕೆ 'ವಯರ್‌ಲೆಸ್'

ಅಮೇರಿಕಾದ ನಾವಿಕ ಇಂಜಿನಿಯರುಗಳು ಅಡ್ಡಿಸ್ ಅಬಾಬಾದಿಂದ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಿಗೆ ನೇರ 'ವಯರ್‌ಲೆಸ್' ವಾರ್ತೆಗಳು ಕಳುಹಿಸುವ ಏರ್ಪಾಡನ್ನು ಮಾಡಿರುವರು.

ಮಕೇಲ್ ಒಳ ಕದನ.

ಮಕೇಲ್ ಪಟ್ಟಣದ ಒಳ ಬಲವಾದ 'ಗ್ವೆರಿಲ್ಲಾ' ಯುದ್ಧವು ನಡೆಯುತ್ತಿದೆ. ಆ ಪಟ್ಟಣದ 11 ಮೈಲು ಸಮೀಪದ ಬಿಡಾರದಲ್ಲಿದ್ದ ಇಟಲಿಯ ಸೈನ್ಯಗಳ ಮೇಲೆ ರಾಸ್ ಕಾಸ ಮತ್ತು ರಾಸ್ ಸಿಯೂಮ್ ಸೈನಿಕರು ರಾತ್ರಿ ಹೊತ್ತು ಬಿದ್ದು ಅವರನ್ನು ಪೀಡಿಸುತ್ತಿದ್ದಾರೆ. ಟೈಗ್ರರು ಈಟಿ, ಬಿಲ್ಲು, ಕತ್ತಿಗಳಿಂದ ಕೈ ಕೈ ಕದನ ನಡೆಸಲು ಇಚ್ಛಿಸುತ್ತಾರೆ. ಅನಂತರ ಅವರು ಇಟಲಿಯವರ ಒಳ ರಾತ್ರಿ ಕಾಣದೆ ಬಂದು ಅವರ ಮೇಲೆ ಗಟ್ಟಿಯಾಗಿ ಕಿರುಚುತ್ತ ಭಯಂಕರವಾಗಿ ಬೀಸುತ್ತಾರೆ. ಅನಂತರ ಬೆಳಗಾದ ಮೇಲೆ ಇಥಿಯೋಪಿಯನರು ಇಟಲಿಯವರ ಎದುರು ನಿಲ್ಲದೆ ಹಿಂದೆ ಹೋಗುತ್ತಾರೆ. ಪುನಃ ರಾತ್ರಿ ಅವರ ಮೇಲೆ ಬಿದ್ದು ಹೋರಾಡುತ್ತಾರೆ.

ಇಟಲಿಯವರ ಮುಂದುವರಿಕೆ.

ಇಟಲಿಯವರು ಮಕೇಲ್ ಪಟ್ಟಣದ ಒಳ ಇರುವ ಒಂದು ಮುಖ್ಯ ಬೆಟ್ಟವನ್ನು ಕೈವಶ ಮಾಡಿಕೊಂಡಿರುವರು. ಇದರಿಂದ ಟೆಂಬೇನ್ ಮತ್ತು ಘೇರಾ ನದಿಗಳ ಉತ್ತರದಲ್ಲಿರುವ ಇಥಿಯೋಪಿಯಾ ಪ್ರಾಂತ್ಯವೆಲ್ಲ ಇಟಲಿಯವರ ಸ್ವಾಧೀನವಾದಂತಾಯಿತು. ಆ ದಿನ ಇಟಲಿಯ ಸೈನಿಕರು ಮಕೇಲ್ ಪಟ್ಟಣದ ಹೊರಗೆ ನಿಂತಿರುವರು. ನಾಳೆ ದಿನ ಪಟ್ಟಣವನ್ನು ಪ್ರವೇಶಿಸುವರು.

ಇಥಿಯೋಪಿಯ ಸೈನ್ಯಗಳ ಚಟುವಟಿಕೆ.

ದಕ್ಷಿಣ ಭಾಗದಲ್ಲಿ ಮೂರು ಕಡೆ ಇಥಿಯೋಪಿಯ ಸೈನ್ಯಗಳ ಸಂಗ್ರಹವು ಅಲ್ಲಿಯ ಮುಂದಿನ ಕದನವನ್ನು ಸೂಚಿಸುತ್ತದೆ. ಕೆನಿಯಾ ಸರಹದ್ದಿನ ಒಳ ಡೋಲೋ ಎಂಬಲ್ಲಿಗೆ 40,000 ಥಾನೀ ಎಂಬ ಕಾಡು ಬೇಟೆಗಾರರು ಹೋಗುತ್ತಿದ್ದಾರೆ. ಇನ್ನೊಂದು ಸೈನ್ಯವು ಒಗಾಡೆನ್ನಿನ ಕಡೆ ಮುಂದುವರಿಯುತ್ತಿದೆ. 30,000 ಪ್ರಸಿದ್ಧ 'ಹುಂಬ' ಗೋತ್ರದವರು ಡೈರ್ ದಾವಾದಲ್ಲಿ ಒಟ್ಟುಗೂಡಿರುವರು. ಉತ್ತರದಲ್ಲಿ ಇಟಲಿಯವರ ಧಾಳಿಯ ಶಕ್ತಿಯನ್ನು ಕಡಿಮೆ ಮಾಡಲು ದಕ್ಷಿಣದಲ್ಲಿ ಇಥಿಯೋಪಿಯನರು ಮುತ್ತಿಗೆಯ ಏರ್ಪಾಡು ಮಾಡುತ್ತಿರುವ ಹಾಗಿದೆ.

ಆಟೋಟಗಳ ಸ್ಪರ್ಧೆಯ ಬಹಿಷ್ಕಾರ.

ಇಟಲಿಯ ಮೇಲೆ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತರಲು ತೀರ್ಮಾನಿಸಿರುವ ಜನಾಂಗಗಳೊಂದಿಗೆ ಇಟಲಿಯು ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲವೆಂದು ತೀರ್ಮಾನಿಸಿದೆ.

ನವಂಬರು ತಾರೀಖು 8.

ಮಕೇಲ್ ಇಟಲಿಯವರ ಸ್ವಾಧೀನ.

ಇಟಲಿಯ ಸೈನ್ಯವು ರಾಸ್ ಗುಗ್ಸಾರವರ ಸಿಪಾಯಿಗಳೊಂದಿಗೆ ಮಕೇಲ್ ಪಟ್ಟಣವನ್ನು ಪ್ರವೇಶಿಸಿತು. ಏನೊಂದೂ ತಡೆ ಇಲ್ಲದೆ ಇಟಲಿಯ ಮೂರು ರಂಗಿನ ಬಾವುಟವು ಅರಮನೆಯ ಮೇಲೆ ಏರಿಸಲ್ಪಟ್ಟಿತು. ಇಟಲಿಯ ಅರಸರ ಹೆಸರಲ್ಲಿ ರಾಸ್ ಗುಗ್ಸಾರವರು ಮಕೇಲಿನ ಗವರ್ನರೆಂದು ಸಾರಿದಾಗ್ಯೂ ಇನ್ನೂ ಯುದ್ಧ ವಿಮಾನಗಳು ಇಥಿಯೋಪಿಯನರಿಂದ ಹಾಳು ಬಿಡಲ್ಪಟ್ಟ ಪಟ್ಟದ ಮೇಲೆ ಹಾರಾಡುತ್ತಿದ್ದವು. ಪಟ್ಟಣಕ್ಕೆ ಬಂದಾಗ್ಗೆ ವಾದ್ಯಗಳು ಮತ್ತು ಪಾದ್ರಿಗಳು ಸೇನಾಧಿಪತಿಗಳಿಗೆ ಸ್ವಾಗತವನ್ನಿತ್ತು ಅವರಿಗೆ ಅನ್ನ, ಕೋಳಿ ಮತ್ತು ಮೊಟ್ಟೆಗಳ ಕಾಣಿಕೆಗಳನ್ನು ಕೊಟ್ಟರು. ಅದೇ ಸಮಯದಲ್ಲಿ ಜನರಲ್ ಸಾಂಟಿನಿಯವರ ಸೈನಿಕರು ಹೊಸತೊ ಪಟ್ಟಣವನ್ನು ಹಿಡಿದರು.

ಸೆಟಿಟ್ ನದಿಯನ್ನು ದಾಟಿದರು.

ಇಟಲಿಯ ಸೈನಿಕರು ಸೆಟಿಟ್ ನದಿಯನ್ನು ದಾಟಿದರು. ಜನರಲ್ ಮರಾವಿಗ್ಲಿಯವರ ಸಿಪಾಯಿಗಳು ಅಕ್ಸುಂ ಮತ್ತು ಸೆಟಿಟ್ ನದಿ ಮಧ್ಯದ ಅಡ್ಯಾಬೋ ಪ್ರಾಂತ್ಯವನ್ನು ಸಂಪೂರ್ಣ ಸ್ವಾಧೀನಪಡಿಸಿಕೊಂಡಿರುವರು. ಇವರು ಸೈನ್ಯಗಳು ಹಿಂದೆ ರಾಸ್ ಸಿಯೂಮರ ಸೈನ್ಯಗಳ ವಶದಲ್ಲಿರುವ ಟೆಂಬೇನ್ ಮತ್ತು ಸಿಮಿಯನ್ ಮಾಸಿಫ್ ಪ್ರದೇಶಗಳನ್ನು ಹಿಡಿಯುವ ಯತ್ನ ಮಾಡುತ್ತಿರುವರು. ಇದು ಸಫಲವಾದರೆ ಇಟಲಿಯವರು ಟಾನಾ ಸರೋವರದ ಒಳ ಬಂದು ತಲುಪುವರು.

ದನಕಿಲರು ಅಡ್ವೆಯನ್ನು ಹಿಡಿದರು.

ಇಟಲಿಯವರ ಮುಂದುವರಿಕೆಯ ಎಡ ಪಾರ್ಶ್ವಕ್ಕೆ ಇರುವ ಅಡ್ವೆಯನ್ನು ದನಕಿಲರ 'ಗುಲ್ಬಿನ' ಸೈನ್ಯವು ಕೈವಶ ಮಾಡಿಕೊಂಡಿದೆ.

ಗೋರಹೈ ಇಟಲಿಯವರ ವಶವಾಯಿತು.

ಒಗಾಡೆನ್ನಿನ ಪ್ರಾಮುಖ್ಯ ಸ್ಥಳವಾದ ಗೋರಹೈಯನ್ನು ಇಟಲಿಯ ಸೈನಿಕರು ಹಿಡಿದಿರುವರು. ಇದರಿಂದ ಹರಾರಿಗೆ ಹೋಗಲು ಇಟಲಿಯವರಿಗೆ ಸುಲಭವಾಗುವುದು. ವಿಮಾನಗಳ ಧಾಳಿಯಿಂದ ಇಥಿಯೋಪಿಯನರು ಧೈರ್ಯಗೆಟ್ಟ ಮೇಲೆ ಕರ್ನಲ್ ಮಾಲೆಟ್ಟಿಯವರ ಸೈನ್ಯವು ಪಟ್ಟಣಕ್ಕೆ ನುಗ್ಗಿತು. ಇಥಿಯೋಪಿಯ ಸೈನ್ಯವು ಹಲವು ಶವಗಳನ್ನು ಬಿಟ್ಟು ಓಡಿ ಹೋಯಿತಂತೆ.

ದಗ್ಗಾಬೂರಿನ ಮೇಲೆ ಬಾಂಬಿನ ಸುರಿಮಳೆ.

ಇಟಲಿಯ ವಿಮಾನಗಳು ದಗ್ಗಾಬೂರಿನ ಮೇಲೆ 1000 ಬಾಂಬುಗಳನ್ನು ಹಾಕಿದರು. ಅಲ್ಲಿಯ ಕಾವಲು ಸೈನ್ಯದ ಅಧಿಪತಿಯೂ ಬಾಂಬಿನ ಘಾಯಗಳಿಗೆ ತುತ್ತಾದ.

ಇಥಿಯೋಪಿಯಾಕ್ಕೆ ಯುದ್ಧ ಸಾಮಾನು.

ಇಥಿಯೋಪಿಯಾದ ಗತಿಸಿದ ಚಕ್ರವರ್ತಿ ಮೆನೆಲಿಕ್‌ರವರ ಮುದ್ರೆ ಇರುವ ಹಣ ಇಥಿಯೋಪಿಯನರು ಉಪಯೋಗಾರ್ಥ ಕೊಟ್ಟಿರುವ 5000 ನಾಣ್ಯಗಳು ಮತ್ತು ಲಂಡನಿನಲ್ಲಿ ವಸೂಲಾದ 7,500 ಪೌಂಡುಗಳಿಂದ ಇಥಿಯೋಪಿಯನ್ ಸರ್ಕಾರವು ಯುದ್ಧ ಸಾಮಾನುಗಳಿಗಾಗಿ ಬ್ರಿಟಿಷ್ ಕಂಪೆನಿಗೆ ದೊಡ್ಡ ಆರ್ಡರು ಕೊಟ್ಟಿದೆ. ಇಷ್ಟೇ ದೊಡ್ಡ ಆರ್ಡರೊಂದು ಬೆಲ್ಜಿಯಮ್ ಮತ್ತು ಜೆಕೊಸ್ಲೋವಾಕಿಯಕ್ಕೆ ಕೊಡಲ್ಪಟ್ಟಿದೆ. ಬೆಲ್ಜಿಯಮಿನಿಂದ ಕೆಲವು ಸಾಮಾನುಗಳು ಜಿಬೂಟಿಗೆ ತಲುಪಿವೆ.

'ಲೀಗ್ ಯುದ್ಧ ನಿಲ್ಲಿಸಬಲ್ಲುದು.'

ತಾ. 1 ರಲ್ಲಿ ಲಂಡನಿನಲ್ಲಿ ಲೀಗ್ ಆಫ್ ನೇಷನ್ಸ್ ಯೂನಿಯನ್ನಿನ ಆಶ್ರಯದಲ್ಲಿ ನಡೆದ ದೊಡ್ಡ ಸಭೆಯಲ್ಲಿ ಲಾರ್ಡ್ ಸೆಸಿಲ್‌ರವರು ಭಾಷಣ ಮಾಡುತ್ತಾ—ಇಟಲಿಯಿಂದ ಆಫ್ರಿಕಕ್ಕೆ ಹೋಗುವ ದಾರಿಗಳನ್ನು ಅಡ್ಡಗಟ್ಟಿದರೆ ಆಫ್ರಿಕದಲ್ಲಿ ಯುದ್ಧವನ್ನು ನಿಲ್ಲಿಸಬಹುದು ಮತ್ತು ಹೀಗೆ ಮಾಡಲು ಲೀಗಿನವರಿಗೆ ಶಕ್ತಿ ಇದೆ ಎಂದು ಹೇಳಿದರು. ಇಥಿಯೋಪಿಯದಲ್ಲಿ ಆಂಬ್ಯುಲೆನ್ಸ್ ಸರ್ವಿಸು ಮಾಡಲು ವಸೂಲಿ ಮಾಡಿದ 30,000 ಪೌಂಡುಗಳ ಪೈಕಿ ಈಗಾಗಲೇ 20,000 ಪೌಂಡುಗಳು ಖರ್ಚಾಗಿಹೋಗಿದೆಯೆಂದು ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪರು ಹೇಳಿದರು.

ಇಂಡಿಯಾ ಸರ್ಕಾರದ ಏರ್ಪಾಡು.

ಜನಾಂಗಗಳ ಕೂಟದವರು ನಿಶ್ಚಯಿಸಿರುವಂತೆ ಇಟಲಿಯ ಮೇಲೆ ತಾ. 18 ರಿಂದ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತರಲು ಇಂಡಿಯಾ ಸರ್ಕಾರವು ತಯಾರಾಗಿದೆಯೆಂದೂ, ಜಿನೀವಾದಿಂದ ಇನ್ನೇನು ತೀರ್ಮಾನಕ್ಕೆ ಕಾಯುತ್ತಿದೆಯೆಂದೂ ಪ್ರಕಟವಾಗಿದೆ.

ನವಂಬರ್ ತಾ. 9.

ಅಡ್ಡಿಸ್ ಅಬಾಬಾದ ಮೇಲೆ ವಿಮಾನ.

ಅಬಿಸೀನಿಯಾದ ಮುಖ್ಯ ಪಟ್ಟಣವಾದ ಅಡ್ಡಿಸ್‌ಅಬಾಬದ ಮೇಲೆ ಬಹು ಎತ್ತರದಲ್ಲಿ ಒಂದು ವಿಮಾನವು ಹಾರಿಹೋಯಿತೆಂದೂ, ಇದು ಇಟಲಿಯ ವಿಮಾನವಾಗಿರಬೇಕೆಂದೂ ವರ್ತಮಾನ.

ನವಂಬರ್ ತಾ. 10.

ಗಾನಬಾನೆಯ ಬಿತ್ತು.

ಹರಾರ್ ಪ್ರಾಂತದಲ್ಲಿ ಇಥಿಯೋಪಿಯನರ ರಕ್ಷಣೆಯ ಒಂದು ಮುಖ್ಯ ಸ್ಥಳವಾದ ಗಾನಬಾನೆಯನ್ನು ಇಟಲಿಯವರು ಹಿಡಿದಿರುವರು. ಮಕೇಲದಲ್ಲಿ ವಿಮಾನಗಳ ಸ್ಟೇಶನೊಂದು ಸ್ಥಾಪಿಸಲ್ಪಡುತ್ತದೆ. ಇಟಲಿಯ ಮೂರು ಸೇನಾಧಿಪತಿಗಳು ತಮ್ಮ ಸೈನ್ಯಗಳನ್ನು ಸೇರಿಸಿ ಘೇರಾ ನದಿಯ ದಡಕ್ಕಾಗಿ ಬಲವಾದ ಯುದ್ಧದ ಲೈನನ್ನು ಏರ್ಪಡಿಸುತ್ತಿರುವರು.

ಮಳೆಯ ಅಡಚಣೆ.

ಇಟಲಿಯವರ ಸೈನ್ಯವು ಅಡ್ಡಿಸ್ ಅಬಾಬಕ್ಕೆ ಹೋಗುವ ಮುಖ್ಯ ದಾರಿಯಲ್ಲಿರುವ ಸೆಲಿಕೋಟ್ ಎಂಬಲ್ಲಿಗೆ ತಲುಪಿದೆ; ಅಲ್ಲಿಂದ ಈಗ ಮುಂದುವರಿಯುವಂತಿಲ್ಲ. ಈಗ ಸೆಟಿಟ್ ನದಿಯ ಕಡೆ ಹೆಚ್ಚಿನ ಗಮನ ಕೊಡಲಾಗುತ್ತಿದೆ. ಟೆಂಬೇನ್ ಪ್ರದೇಶವು ಇನ್ನೂ ರಾಸ್ ಸಿಯೂಮರ ಅಧೀನದಲ್ಲಿದೆ. ಅವರು ಅದನ್ನು ಕೈ ಬಿಡರೆಂದು ಊಹಿಸಲಾಗಿದೆ. ಆದರೆ ಜೋರಾದ ಮಳೆಯು ಇಟಲಿಯವರ ಚಟುವಟಿಕೆಗಳಿಗೆ ಅಡ್ಡವಾಗಿದೆ.

ವಾಯುಧಾಳಿಯ ಪರಿಣಾಮ.

ವಿಮಾನಗಳಿಂದ ಬಾಂಬು ಹಾಕಿ ಇಥಿಯೋಪಿಯನರ ಧೈರ್ಯ ಕೆಡಿಸಿದ್ದರಿಂದಲೇ ಗೋರಹೈ ಮತ್ತು ಮಕೇಲ್ ಪಟ್ಟಣಗಳು ಇಟಲಿಯವರ ಕೈವಶವಾದವು. ಇಥಿಯೋಪಿಯನರು ಯುದ್ಧ ಸಾಧನಗಳನ್ನೂ, ಆಹಾರ ಸಾಮಗ್ರಿಗಳನ್ನೂ ಬಿಟ್ಟು ಓಡಿ ಹೋದರು.

ನವಂಬರು ತಾರೀಕು 11.

ಇಟಲಿಯವರ ವಿಷಗಾಳಿ ಪ್ರಯೋಗ.

ಗೋರಾಹೈಯ ಬಳಿ ಇಟಲಿಯವರು ವಿಷಗಾಳಿ ಪ್ರಯೋಗ ಮಾಡಿರುವರು. ಅಬಿಸೀನಿಯಾ ಸೈನಿಕರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತೆ. ಟೈಗರ್ ಪ್ರಾಂತದ ಅಬಿಸೀನಿಯರು ದೇಶದ್ರೋಹಿಯಾದ ರಾಸ್ ಗುಗ್ಸನ ಅಧಿಕಾರವನ್ನು ಎಂದಿಗೂ ಸ್ವೀಕರಿಸುವದಿಲ್ಲವೆಂದು ಘೋಷಿಸಿರುವರು.

ಇಥಿಯೋಪಿಯನರ ಚಾತುರ್ಯ.

ಇಥಿಯೋಪಿಯನರು ಯಾವಾಗ ಮತ್ತು ಎಲ್ಲಿ ಎದುರಿಸುವರೆಂದು ಇಟಲಿಯವರಿಗೆ ತಿಳಿಯದಾಗಿದೆ. ಅವರು ಹೋದೆಡೆಗಳಲ್ಲೆಲ್ಲ ಯುದ್ಧ ಮಾಡದೆ ಹಿಂದಕ್ಕೆ ಸರಿಯುತ್ತಿರುವುದು ಇಟಲಿಯವರಿಗೆ ಸಂಶಯಕ್ಕೆ ಕಾರಣವಾಗಿದೆ. ಇದರಿಂದ ಶತ್ರುಗಳನ್ನು ಸಾಧ್ಯವಾದಷ್ಟು ಒಳಪ್ರದೇಶಕ್ಕೆ ಸೆಳೆದು ಅನಂತರ ಅವರನ್ನು ಸುತ್ತು ಬಳಸಿ ನಿರ್ಮೂಲ ಮಾಡುವ ಉದ್ದೇಶವೇ ಇಥಿಯೋಪಿಯನರದೆಂದು ಇಟಲಿಯವರು ಈಗ ಮುಂದುವರಿಯಲು ಕೊಂಚ ಹಿಂಜರಿಯುತ್ತಿರುವರು.

ದೇಶದ್ರೋಹಿ ರಾಸ್ ಗುಗ್ಸ.

ರಾಸ್ ಗುಗ್ಸನವರನ್ನು ಇಟಲಿಯವರು ಮಕೇಲೆ ಪ್ರಾಂತದ ಗವರ್ನರಾಗಿ ಮಾಡಿರುವರು. ಇಟಲಿಯ ಅರಸನ ಜನ್ಮದಿನೋತ್ಸವದ ಆಚರಣೆಯಲ್ಲಿ ಇವರು ಬಿಳೀ ಕುದುರೆಯ ಮೇಲೆ ಕುಳಿತು ಇಟಲಿ ಸೈನ್ಯಾಧಿಕಾರಿಯಾದ ಜನರಲ್ ಡಿಬೊನೋರವರಿಗೆ ಸ್ವಾಗತವನ್ನೀಯಿದರು. ಅಲ್ಲದೆ ಇಟಲಿ ಅರಸನಿಗೆ ರಾಜ ಭಕ್ತಿಯ ಪ್ರಮಾಣವನ್ನೂ ಸಹ ಮಾಡಿದರು.

ಮುಸಲೋನಿಯವರು ತೃಪ್ತರಾದರು.

ಅಬಿಸೀನಿಯಾ ಯುದ್ಧದಲ್ಲಿ ಇಟಲಿಯ ಸೈನ್ಯದವರು ತೋರಿದ ಸಾಹಸ ಕಾರ್ಯಗಳನ್ನು ಮತ್ತು ಚತುರತೆಯನ್ನು ನೋಡಿ ಮುಸಲೋನಿಯವರು ತೃಪ್ತರಾಗಿರುವರು. ಈ ಪ್ರಕಾರದಲ್ಲೇ ಇಟಲಿ ಸೈನ್ಯವು ತನ್ನ ಕಾರ್ಯವನ್ನು ನಿರ್ವಹಿಸಿದ್ದಾದರೆ ಅಬಿಸೀನಿಯಾದಲ್ಲಿ ಬಹುಬೇಗ ವಿಜಯಲಕ್ಷ್ಮಿಯು ಇಟಲಿಗೇನೇ ಲಭಿಸುವದೆಂದು ಅವರಿಗೆ ನಿಶ್ಚಯವಾಗಿದೆ.

ನವಂಬರ್ ತಾರೀಕು 12.

ಅಬಿಸೀನಿಯರ ಜಯ.

ದಕ್ಷಿಣದ ದಗ್ಗಬುರ್ ಎಂಬಲ್ಲಿ ಅಬಿಸೀನಿಯಾ ಸೈನಿಕರು ಎಡೆಬಿಡದೆ ಎಲ್ಲಾ ದಿಕ್ಕುಗಳಿಗೂ ಗುಂಡು ಹಾರಿಸುತ್ತಿದ್ದು ಇಟಲಿಯವರ ಟ್ಯಾಂಕುಗಳು ಎಸೆಯಾಗಿ ಬಿಟ್ಟ ಎರಡು ಟ್ಯಾಂಕುಗಳನ್ನು ಕೈವಶ ಮಾಡಿಕೊಂಡಿರುವರು. ಅಬಿಸೀನಿಯಾ ಸೈನಿಕರು ಬರೇ ಕೈಬಾಂಬುಗಳಿಂದ ಅಪ್ರತಿಮವಾದ ಧೈರ್ಯವನ್ನು ಪ್ರಕಟಿಸಿ ಇಟಲಿಯವರನ್ನು ಹಿಮ್ಮೆಟ್ಟಿಸಿರುವರು. ಅನೇಕ ಇಟಲಿಯ ನಾಯಕರು ಕೊಲ್ಲಲ್ಪಟ್ಟಿರುವರಲ್ಲದೆ ಅನೇಕ ಸಿಪಾಯಿಗಳೂ ಸೆರೆಹಿಡಿಯಲ್ಪಟ್ಟಿರುವರು. ಅಲ್ಲಿನ ವಾರ್ತೆಯ ಮೇರೆ ಇಟಲಿಯವರು ವಿಫಲರಾಗಿ ಓಡುತ್ತಿರುವರೆಂದು ತಿಳಿಯಬಂದಿದೆ.

ಇಟಲಿಯವರ ಪ್ರಕಟಣೆ.

ಇಟಲಿ ಸರಕಾರದ ಪ್ರಕಟಣೆ ಮೇರೆ ಇಟಲಿ ಸೈನ್ಯವು ಮಕೇಲೆ ಪ್ರಾಂತ್ಯದಲ್ಲಿ ಅಬಿಸಲ್ಲಿದ್ ಎಂಬ ಪಟ್ಟಣವನ್ನು ಸ್ವಾಧೀನಪಡಿಸಿರುವರಲ್ಲದೆ ಟಕಾಜೆ ನದಿಯ ಕಡೆ ಸಾಗುತ್ತಲಿರುವರೆಂದೂ, ದನಕಿಲ್ ಪ್ರಾಂತ್ಯದಲ್ಲಿನ ಸೈನ್ಯವು ಮಿಗಿಲಾ ಪ್ರಾಂತ್ಯವನ್ನು ದಾಟಿ ಅಜ್ಬಿನ್ ಎಂಬಲ್ಲಿಗೆ ತಲುಪಿರುವದೆಂದೂ ಮತ್ತು ಸೋಮಾಲಿ ಲೇಂಡಿನ ಕಡೆಯಿಂದ ಗೋರಹೈಯ ಸುತ್ತು ಮುತ್ತಲು ಇಟಲಿ ಸೈನ್ಯದವರು ಮುಂದೆ ಸಾಗುತ್ತಿರುವರೆಂದೂ ತಿಳಿಯ ಬಂದಿದೆ.

ಆಸ್ಟ್ರೀಯದ ತೀರ್ಮಾನ.

ಜನಾಂಗಗಳ ಸಂಘದವರ ತೀರ್ಮಾನದಂತೆ ಆಸ್ಟ್ರೀಯಾ ದೇಶವು ಇಟಲಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವುದನ್ನು ನಿಲ್ಲಿಸುವಂತೆ ತೀರ್ಮಾನಿಸಿರುವರು.

ಒಳದೇಶ.

ನಾಪೋಕ್ಲುನಾಡು ಸಹಕಾರಿ ಸಂಘದ ಆಶ್ರಯದಲ್ಲಿ ನಡೆಸುವ ಬಿಲ್ಲವಾವಳಿ ಸಂತೆಯು ಇದೇ ತಿಂಗಳು 17ರಿಂದ ಪ್ರಾರಂಭವಾಗುವದೆಂದು ವರ್ತಮಾನ.

ಶ್ರೀಮಂಗಲನಾಡಿನ ಜಮಾಬಂದಿಗಾಗಿ ಈ ತಾ. 12 ರಲ್ಲಿ ಶ್ರೀಮಂಗಲಕ್ಕೆ ಹೋಗಿದ್ದ ಕಮಿಶನರವರು ತಾ. 15 ರಲ್ಲಿ ಮಡಿಕೇರಿಗೆ ವಾಪಸು ಬಂದಿರುವರಾಗಿ ತಿಳಿಯುತ್ತೇವೆ.

ಮಡಿಕೇರಿ ಸರಕಾರಿ ಸ್ಟೋರಿನವರು ಈಗ ಎರಡು ವಾರಗಳಿಂದ ಕಾರ್ಗುಂದದಲ್ಲಿ ಗುರುವಾರ ಅಂಗಡಿ ಇಡುತ್ತಿದ್ದಾರೆಂದೂ, ಇನ್ನು ಮುಂದೆ ಅಲ್ಲಿ ಮಂಗಳವಾರ ಅಂಗಡಿ ಇಡುವರೆಂದೂ ತಿಳಿಯಬರುತ್ತದೆ.

ಈ ತಾ. 5 ರಲ್ಲಿ ಮಡಿಕೇರಿ—ಸಿದ್ದಾಪುರ ರಸ್ತೆಯ 8ನೇ ಮೈಲಿನ ಬಳಿ ಇದ್ದ ಕೃಷ್ಣನನ್ನು ಖೂನಿಮಾಡಿದ ಅಪರಾಧಿಯನ್ನು ಪತ್ತೆಮಾಡಿ ಕೊಟ್ಟವರಿಗೆ ಸರಕಾರದವರು ನೂರು ರೂಪಾಯಿ ಇನಾಮು ಕೊಡುವರಾಗಿ ಪ್ರಕಟವಾಗಿದೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ [illegible] ರೂಪಾಯಿ ಮೂ.ಆ. ಮಡಿಕೇರಿಯಲ್ಲಿ ಅಕ್ಕಿ ಮೂಟೆಗೆ 140 ರೂಪಾಯಿಯೂ, ಪೊಲಿಶ್ಡ್ ಮೂಟೆಗೆ 23 ರಿಂದ 25ರ ರೂಪಾಯಿಯೂ ಕ್ರಯವಿರುವದೆಂದು ತಿಳಿಯಬರುತ್ತದೆ.

ಈಚೆಗೆ ಸುಂಟಿಕೊಪ್ಪದ ಸುತ್ತುಮುತ್ತ ಆಳುಗಳಿಗೆ ಪ್ಲೇಗು ಅಂಟಿಕೊಂಡಿತ್ತೆ, ಆಸ್ಪತ್ರೆಯಲ್ಲಿ ಪ್ಲೇಗಿನಿಂದ ಮೃತರಾದರೆಂದೂ, ತಾಳ್ಮೆಯ ಹರಿಜನ ಕೇರಿಯಲ್ಲಿ ನಾಲ್ಕು ಜನರಿಗೆ ಪ್ಲೇಗು ತಗಲಿ ಮೂವರು ಮೃತರಾದರೆಂದೂ ತಿಳಿಯಬರುತ್ತದೆ.

ಹೊದವಾಡ ಗ್ರಾಮದ ಮುಕ್ಕಾಟಿರ ಮನೆಯಲ್ಲಿ ದನ ಕಾಯುತ್ತಿದ್ದ ಹೊಂಗಪ್ಪನೆಂಬ ಹುಡುಗನು ಈ ತಾ. 8ನೇ ರಾತ್ರಿ ಕೊಟ್ಟಮುಡಿ ದೋಣಿಕಡುವಿನ ಹತ್ತಿರ ಕಾವೇರಿ ನದಿಯಲ್ಲಿ ಈಜಲು ಇಳಿದಾಗ ನೀರಿನಲ್ಲಿ ಮುಳುಗಿ ಸತ್ತನೆಂದು ತಿಳಿಯಬರುತ್ತದೆ.

ಬರುವ ಡಿಸೆಂಬರ್ ತಾ. 22ರಲ್ಲಿ ಮಡಿಕೇರಿಯಲ್ಲಿ ನಡೆಯುವ ಕೊಡಗು ಪ್ರಾಂತೀಯ ಸಹಕಾರ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಮೈಸೂರು ಸಂಸ್ಥಾನದ ಸಹಕಾರ ಸಂಘಗಳ ರಿಜಿಸ್ಟ್ರಾರಾದ ಮೆ. ಯಂ. ವಿ. [illegible]ಯವರು ಸಮ್ಮತಿಸಿರುವರಾಗಿ ತಿಳಿಯುತ್ತೇವೆ.

ನಿರ್ಲಕ್ಷ್ಯತನದಿಂದ ಮಾಡಿದರೆಂದು ಪಿನಲ್ ಕೋಡಿನ 409ನೇ ಸೆಕ್ಷನ್ ಮೇರೆ ದಕ್ಷಿಣ ಕೊಡಗಿನ ರೋಡು ಸುಪರ್ವೈಜರಾಗಿದ್ದ ಮೆ. ನಾರಾಯಣ ಚೆಂಗಪ್ಪನವರ ಮೇಲೆ ವೀರಾಜಪೇಟೆ ಮುನ್ಸೀಫ್ ಕೋರ್ಟಿನಲ್ಲಿ ನಡೆಯುತ್ತಿದ್ದ ಮೊಕದ್ದಮೆಯಲ್ಲಿ ಚೆಂಗಪ್ಪನವರು ತಪ್ಪಿತಸ್ಥರಲ್ಲವೆಂದು ಬಿಡುಗಡೆ ಮಾಡಲ್ಪಟ್ಟಿರುವರು.

ಅನ್ರಿಡೀಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಬೋನಸು ಕೊಡುವದನ್ನು ಕುರಿತ ಕರಡು ನಿಬಂಧನೆಗಳು ಕನ್ನಡದಲ್ಲಿ ಈ ತಾ. 11 ರ ವಿಶೇಷ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುವದಲ್ಲದೆ, ಅವುಗಳ ಮೇಲೆ ಬರುವ ಆಕ್ಷೇಪಣೆಗಳನ್ನಾಗಲೀ, ಸಲಹೆಗಳನ್ನಾಗಲೀ ಯೋಚಿಸಲು ವಾಯಿದೆಯನ್ನು 1936ನೇ ಮಾರ್ಚಿ 31 ರ ವರೆಗೆ ಮುಂದುವರಿಸಿದೆಯೆಂದೂ ಬಹಿರಂಗಪಡಿಸಲಾಗಿದೆ.

ಮಿ. ರಾ. ತೀರ್ಥಮಂಡ ಕಾಳಪ್ಪನವರು ಮಡಿಕೇರಿಯ ಸ್ಪೆಶಲ್ ಮೇಜಿಸ್ಟ್ರೇಟ್ ಮತ್ತು ಎಡಿಶನಲ್ ಸಬ್ ಜಡ್ಜರ ಹುದ್ದೆಗಳಿಂದ ಬರುವ ಡಿಸೆಂಬರು ತಾ. 15 ರಲ್ಲಿ ರಜೆಯ ಮೇಲೆ ಹೋಗುವುದರಿಂದ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಶನರಾಗಿರುವ ಮಿ. ರಾ. ಕೊಡಂದೆರ ಸುಬ್ಬಯ್ಯನವರು ಅಂದಿನಿಂದ ಮಡಿಕೇರಿ ಸ್ಪೆಶಲ್ ಮೇಜಿಸ್ಟ್ರೇಟರಾಗಿಯೂ, ವೀರಾಜಪೇಟೆ ಸ್ಪೆಶಲ್ ಮೇಜಿಸ್ಟ್ರೇಟರಾಗಿರುವ ಮಿ. ರಾ. ಪಾಲೇಕಂಡ ಪೂಣಚ್ಚನವರು ಎಕ್ಸ್ಟ್ರಾ ಅಸಿಸ್ಟೆಂಟರಾಗಿಯೂ ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಹಿಂದೂದೇಶ.

ಮಿ. ಅಬ್ದುಲ್ ಹಮೀದ್ ಖಾನ್ರವರು ಮದ್ರಾಸ್ ಕಾರ್ಪೊರೇಶನಿನ ಮೇಯರಾಗಿ ಆರಿಸಲ್ಪಟ್ಟಿದ್ದಾರೆ. ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು.

ಡಾ. ಅಂಬೇಡ್ಕರವರನ್ನು ಬರುವ ಹಿಂದೂ ಮಹಾ ಸಭೆಯ ಅಧ್ಯಕ್ಷರಾಗಿ ಆರಿಸಬೇಕೆಂದು ಡಾ. ಮುಂಜೆಯವರು ಸೂಚನೆಕೊಟ್ಟಿರುವರು. ಈ ಸೂಚನೆಯು ಮಹತ್ವಪೂರ್ಣವಾದದ್ದೇ.

ಕೀರ್ತಿಶೇಷರಾದ ಮಿ. ಜಾನ್ ಮೆಕ್ಗ್ರಿಗರ್ರವರು ರಂಗೂನಿನ ಬಡಜನರ ಕಷ್ಟ ಪರಿಹಾರಾರ್ಥವಾಗಿ ಒಂದು ಲಕ್ಷ ಹಣವನ್ನು ಮುನ್ಸಿಪಾಲಿಟಿಯವರಿಗೆ ಉಚಿತವಾಗಿ ಕೊಟ್ಟಿದ್ದರು. ಅವರ ಜ್ಞಾಪಕಾರ್ಥವಾಗಿ ರಂಗೂನಿನಲ್ಲಿ ಹೊಸದಾಗಿ ಕಟ್ಟಿಸಿರುವ ಟೌನ್ ಹಾಲ್ನಲ್ಲಿ ಮಿ. ಮೆಕ್ಗ್ರಿಗರ್ರವರ ಕಂಚಿನ ಪ್ರತಿಮೆಯೊಂದನ್ನು ಇಡಬೇಕೆಂದು ಮುನ್ಸಿಪಲ್ ಸಭೆಯವರು ತೀರ್ಮಾನಿಸಿರುತ್ತಾರೆ.

ಲಂಡನ್ ಪಟ್ಟಣಕ್ಕೆ ಸೇರಿದ ಫಿನ್ಸ್ಬರಿ ಎಂಬ ಉಪನಗರದ ಮುನ್ಸಿಪಲ್ ಸಭೆಗೆ ಡೆಪ್ಯುಟಿ ಮೇಯರಾಗಿ (ಉಪಾಧ್ಯಕ್ಷ) ಡಾ. ಸಿ. ಎಲ್. ಕಾಟಿಯಲ್ ಎಂಬ ಭಾರತೀಯನನ್ನು ಚುನಾವಣೆ ಮಾಡಿರುತ್ತಾರೆ. ಡಾ. ಕಾಟಿಯಲ್ರವರು 1927ನೇ ಇಸವಿಯಿಂದಲೂ ಲಂಡನ್ ಪಟ್ಟಣದಲ್ಲಿಯೇ ನೆಲಸಿ ಆ ಪಟ್ಟಣದ ಪೂರ್ವಭಾಗದಲ್ಲಿ (ಈಸ್ಟ್ ಎಂಡ್) ಬಹಳ ಹೆಸರುವಾಸಿ ಪಡೆದವರಾಗಿರುತ್ತಾರೆ. ಲಂಡನಿನಲ್ಲಿ ಕಾರ್ಪೊರೇಟರ ಪದವಿಗೆ ಏರಿದ [illegible] ಭಾರತೀಯರಲ್ಲಿ ಡಾ. ಕಾಟಿಯಾಲ್ರವರೇ ಮೊದಲನೆಯವರು.

ಬರುವ ಮಾರ್ಚಿ ತಿಂಗಳಲ್ಲಿ ನಡೆಯುವ ಲಕ್ನೋವಿನ ಕಾಂಗ್ರೆಸಿಗಾಗಿ, ಬೆಜವಾಡದಿಂದ 9 ಜನರ ಒಂದು ಗುಂಪು ಕಳೆದ ತಾ. 6ನೇ ಪ್ರಾತಃಕಾಲ ಕಾಲ್ನಡಿಗೆಯಿಂದ ಹೊರಟಿರುವರು. ಈ ತಂಡದ ಮುಖಂಡರು ಶ್ರೀ. ಪಿ. ಸತ್ಯನಾರಾಯಣ್. ಇವರೊಂದಿಗೆ ಶ್ರೀ. ಹು. ರಾಮರಾವ್, ಅವರ ಪತ್ನಿಯವರೂ ಇರುವರು. ಈ ತಂಡದವರು ತಾವು ಹಾದು ಹೋಗುವ ಹಳ್ಳಿಗಳಲ್ಲಿ 'ಆರೋಗ್ಯ' ಮತ್ತು 'ಗ್ರಾಮೋದ್ಧಾರ'ದ ಸಂಬಂಧವಾದ ಪ್ರಚಾರಕಾರ್ಯವನ್ನು ನಡೆಸುವರು.

ಮದರಾಸಿನ ಸುಪ್ರಸಿದ್ಧ ವೈದ್ಯರಾಗಿದ್ದ ಗತಿಸಿದ ಎನ್. ರಂಗಾಚಾರಿಯವರ ಪತ್ನಿ ಶ್ರೀಮತಿ ಕಮಲಾ ರಂಗಾಚಾರಿಯವರು ತಮ್ಮ ಪತಿಯ ಹೆಸರನ್ನು ಶಾಶ್ವತಗೊಳಿಸುವದಕ್ಕಾಗಿ ಅನೇಕ ಪರಹಿತ ಕಾರ್ಯಗಳಿಗಾಗಿ ಹಣವನ್ನು ದಾನ ಮಾಡಿರುತ್ತಾರೆ. ಕೇವಲ 3½ ಲಕ್ಷ ಬೆಲೆ ಬರುವ 5½ ಸಾವಿರ ರೂ. ನ ಸರ್ಕಾರ ಬಾಂಡುಗಳನ್ನು ಅದರ ಉತ್ಪನ್ನದ ಮೂಲಕ ಮೆಡಿಕಲ್ ಕಾಲೇಜಿನ 5 ಜನ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ವೇತನ ಕೊಡತಕ್ಕದ್ದೆಂದೂ, ಹೀಗೆ ಯೂನಿವರ್ಸಿಟಿಯವರಿಗೆ ವಹಿಸಿಕೊಟ್ಟಿರುತ್ತಾರೆ. ಇದಲ್ಲದೆ ಇತರ ಕಾಲೇಜುಗಳಿಗೂ, ಸಂಸ್ಥೆಗಳಿಗೂ ವಿದ್ಯಾರ್ಥಿಗಳ ಏಳಿಗೆಗಾಗಿ ಒಟ್ಟು 39,200 ರೂ. ಉಚಿತವಾಗಿ ಕೊಟ್ಟಿರುತ್ತಾರೆ.

ಹಿಂದೂ ಮತವನ್ನು ತಾವು ತ್ಯಜಿಸುವೆವೆಂಬುದನ್ನು ನಿದರ್ಶಿಸುವದಕ್ಕಾಗಿ ಈ [illegible] ನಾಸಿಕ್ ಡಿಸ್ಟ್ರಿಕ್ಟಿಗೆ ಸೇರಿದ ನಾನಾ ಹಳ್ಳಿಯ ಸುಮಾರು 800 ಮಂದಿ ಹರಿಜನ ಯುವಕರು ನಾಸಿಕ ರೋಡಿನಲ್ಲಿ ಸಭೆ ಸೇರಿ ಮನುಸ್ಮೃತಿಯನ್ನೂ ಇತರ ಧರ್ಮ ಶಾಸ್ತ್ರದ ಪುಸ್ತಕಗಳನ್ನೂ ಬೆಂಕಿಗೆ ಹಾಕಿ ಸುಟ್ಟರು. ಉನ್ನತ ವರ್ಣದವರು ತಮ್ಮವರಿಗೆ ಕೊಡುತ್ತಿರುವ ಕಷ್ಟ ಪರಂಪರೆಗಳನ್ನು ವಿವರಿಸಿ ಅನೇಕ ಭಾಷಣ ಮಾಡಿದರು. ಈ ಕಾರ್ಯಕಲಾಪಗಳನ್ನು ನೋಡಲು ಅನೇಕ ಮಂದಿ ಮಹಮ್ಮದೀಯರೂ ಹೋಗಿ ಸೇರಿದ್ದರು. ಹರಿಜನರು ಹಿಂದೂಗಳ ಜಾತ್ರೆಗಳಲ್ಲಿ ಭಾಗವಹಿಸಕೂಡದೆಂದೂ, ಹಿಂದೂ ಯಾತ್ರಾ ಸ್ಥಳಗಳಿಗೆ ಹೋಗಬಾರದೆಂದೂ, ಹಿಂದೂ ಪುರೋಹಿತರಿಗೆ ದಕ್ಷಿಣೆ ಕೊಡಬಾರದೆಂದೂ, ಹಿಂದೂಗಳ ಹಬ್ಬ ದಿನಗಳನ್ನು ಆಚರಿಸಬಾರದೆಂದೂ ಠರಾವು ಪಾಸು ಮಾಡಿದರು.

ವಿದೇಶ.

ತಾ. 12 ರಲ್ಲಿ ಟರ್ಕಿಯ ಒಂದು ಹಡಗು ಮುಳುಗಿ 90 ಜನರು ನೀರು ಪಾಲಾದರು. 100 ಜನರು ಜೀವ ಸಹಿತ ಕಾಪಾಡಲ್ಪಟ್ಟರು.

ಪಂಡಿತ ಜವಾಹರಲಾಲರು ತಮ್ಮ ಪುತ್ರಿಯೊಂದಿಗೆ ತಾ. 12 ರಲ್ಲಿ ಲಂಡನಿನಿಂದ ಜರ್ಮನಿಗೆ ತನ್ನ ಪತ್ನಿ ಇರುವಲ್ಲಿಗೆ ಹಿಂತಿರುಗಿ ಹೊರಟರು. ಅವರು ತನ್ನ ಪುತ್ರಿಯನ್ನು ಆಕ್ಸ್ಫರ್ಡಿಗೆ ಕಳುಹಿಸುವ ಮುಂಚೆ ಒಂದು ವರ್ಷ ಸ್ವಿಟ್ಜರ್ಲೇಂಡಿನಲ್ಲಿ ಬಿಡುವರೆಂದು ಸುದ್ದಿ.

ಜರ್ಮನಿ ದೇಶದವರು ಕೆಲವು ತಿಂಗಳುಗಳಿಂದಲೂ ಬೇರೆ ದೇಶದವರಿಂದ ನಾನಾ ಜಾತಿಯ [illegible]ಗಳನ್ನು ವಿಶೇಷವಾಗಿ ಕೊಳ್ಳುತ್ತಿದ್ದಾರೆ. ಇವುಗಳಿಂದ ಒಂದು ವಿಧವಾದ ವಿಷ ವಾಯುವನ್ನು ತಯಾರುಮಾಡಬಹುದೆಂದು ಒಬ್ಬ ಯೂನಿವರ್ಸಿಟಿ ಪ್ರೊಫೆಸರು ಅಭಿಪ್ರಾಯ ಪಟ್ಟಿರುತ್ತಾರೆ.

ಜಪಾನ್ ದೇಶದ ಹಡಗಿನ ನಾವಿಕನನ್ನು ಶಾಂಗಾಯ್ ಎಂಬಲ್ಲಿ ಯಾರೋ ಕಳೆದ ಶುಕ್ರವಾರ ಗುಂಡಿನಿಂದ ಹೊಡೆದು ಕೊಂದರು. ಇದರ ಪರಿಣಾಮವಾಗಿ ಅಲ್ಲಿನ ಪರಿಸ್ಥಿತಿಯು ಬಹಳ ಕಠಿಣವಾಗಿದೆ. ಜಪಾನಿನವರು ಇನ್ನೂ ಮೂರು ಹಡಗಿನ ನಾವಿಕರನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅಂತರ ರಾಷ್ಟ್ರೀಯ ಸ್ವಾತಂತ್ರ್ಯದಲ್ಲಿ ಜಪಾನಿನವರಿಗೆ ಸೇರುವ ಭಾಗದಲ್ಲಿ ಪ್ರತಿಯೊಬ್ಬ ಪಾದಚಾರಿಯನ್ನೂ ತಡೆದು ಶೋಧಿಸಿ ಕಳಿಸುತ್ತಿದ್ದಾರೆ.

ವಿಜ್ಞಾಪನೆ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ಜರುಗಿದ ಆಟ ಓಟಗಳಲ್ಲಿ ಭಾಗವಹಿಸಿ ಬೆಳ್ಳಿಯ ಬಟ್ಟಲುಗಳನ್ನು ಗೆದ್ದವರೂ ಅವುಗಳನ್ನು ಕಾಯಂ ಆಗಿ ಪಡೆಯದಂಥ ಮನುಷ್ಯರು ತಮ್ಮ ಸ್ವಾಧೀನದಲ್ಲಿರುವ ಆ ಬಟ್ಟಲುಗಳನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಇದೇ ತಿಂಗಳು 17 ನೇ ತಾರೀಕಿಗೆ ಮುಂಚಿತವಾಗಿ ಕಳುಹಿಸಿಕೊಡಬೇಕಾಗಿ ಕೋರಿಕೆ.

ಡಿ. ಕೆ. ಅಪ್ಪಯ್ಯ,
ಅಧ್ಯಕ್ಷರು,
ಅಖಿಲ ಕೊಡಗು ಉಪಾಧ್ಯಾಯರ ಸಂಘ,
ವೀರಾಜಪೇಟೆ.

ನೋಟೀಸು.

1935ನೇ ಇಸವಿ ನವಂಬರು ತಾರೀಕು 23ನೇ ಶನಿವಾರ ದಿನ ಬೆಳಗ್ಗೆ 11 ಗಂಟೆಗೆ ವೀರಾಜಪೇಟೆಯಲ್ಲಿ ಬಾಗಿಲ ಬೀದಿಯಲ್ಲಿರುವ ಅಂಜುಮನ್ ಹಾಲ್ನಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗ್) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು [illegible]ತ್ತವೆ.

1. 1933—35ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರರ ಸರ್ಟಿಫಿಕೇಟನ್ನೂ ಸದರಿ ಸಭೆಯ ಮುಂದೆ ಇಡುವುದು.

2. 1929—1930, 1930—1931 ಮತ್ತು 1931—1932 ಈ ಮೂರು ವರ್ಷಗಳಲ್ಲಿ ವಸೂಲಾಗದೆ ಬಾಕಿ ಇರುವ ಬಾಬ್ತು ವಸೂಲಿನ ವಿಷಯ.

3. ಆಡಿಟರನ್ನು ನೇಮಿಸುವುದು.

5. ಕಂಪನಿಯ ನಿಯಮಾವಳಿಯ ತಿದ್ದುಪಡಿಗಳ ಬಗ್ಗೆ ಯೋಚಿಸುವ ವಿಚಾರಣೆ.

4 1934—35ನೇ ವರ್ಷಕ್ಕೆ ಡಾಯರೆಕ್ಟರಾಗಿ ಕೊಡಬೇಕಾದ ಫೀಜು ನಿಶ್ಚಯ ಮಾಡುವಿಕೆ.

'ಕೊಡಗು' ಆಫೀಸ್, ಮಡಿಕೇರಿ, 4—11—35. } ಕೆ. ಎಂ. [illegible] (ಅಧ್ಯಕ್ಷರು.)

ಕೊ ಡ ಗು

ಡಿಸೆಂಬರ್ ೬ ನೇ ಶುಕ್ರವಾರ ೧೯೩೫.

ಮುಜರಾಯಿ ಇಲಾಖೆಯ ಆಡಳಿತ.

ಕೊಡಗಿನ ಮುಜರಾಯಿ ದೇವಸ್ಥಾನಗಳ ಆಡಳಿತವನ್ನು ನಡೆಸಲು ಒಂದು ಕಮಿಟಿ ಇದೆಯೆಂದೂ, ಆ ಕಮಿಟಿಯ ಮೆಂಬರುಗಳೆಲ್ಲಾ ಜನಸಮುದಾಯದವರಿಂದ ಆರಿಸಲ್ಪಟ್ಟು ಬಂದವರಾಗಿರದೆ ಸರಕಾರದಿಂದ ನೇಮಿಸಲ್ಪಟ್ಟವರೆಂದೂ ದೇಶದ ಜನರಿಗೆ ಗೊತ್ತಿದ್ದರೂ ಆ ಮುಜರಾಯಿ ಇಲಾಖೆಯ ವಾರ್ಷಿಕ ಉತ್ಪನ್ನ ಎಷ್ಟು, ಅದಕ್ಕೆ ಸರಕಾರದವರು ಎಷ್ಟು ವಂತಿಗೆ ಕೊಡುತ್ತಾರೆ, ಅದರ ವ್ಯಯವು ಹೇಗಾಗುತ್ತಿದೆ, ಎಂಬೀ ವಿಷಯಗಳ ಅರಿವು ಬಹು ಸ್ವಲ್ಪ ಜನರಿಗೆ ಮಾತ್ರ ಇರಬಹುದೆಂದು ನಮ್ಮ ಊಹೆ. ... ಸರಕಾರದ ಉದ್ದೇಶಗಳನ್ನೂ ಜನಾಭಿಪ್ರಾಯವನ್ನೂ ... ಅಧ್ಯಕ್ಷರು ಕಮಿಟಿಯವರಿಂದ ... ಕಳೆದ ವರ್ಷದ ... ಈ ಕಮಿಟಿಗೆ ... ಒಬ್ಬರು ... ಅಧ್ಯಕ್ಷರಾಗಿದ್ದಾರೆ.

ಈ ಇಲಾಖೆಯ ಲೆಕ್ಕಗಳನ್ನು ... ಕಳೆದ ಅಧಿವೇಶನದಲ್ಲಿ ಕೆಲವು ಪ್ರಶ್ನೆಗಳು ಕೇಳಲ್ಪಟ್ಟವು. ಅವುಗಳಿಗೆ ಸರಕಾರದವರು ಕೊಟ್ಟ ಉತ್ತರಗಳನ್ನು ಇನ್ನೊಂದು ಕಡೆ ಕೊಡಲಾಗಿದೆ.

ಸರಕಾರದವರು ಕೌನ್ಸಿಲಿನ ಮುಂದಿಟ್ಟ ಉತ್ತರದಿಂದ ಈ ಇಲಾಖೆಗೆ ಸರಕಾರದಿಂದ ತಿಂಗಳೊಂದಕ್ಕೆ ರೂ 1095-0-8 ವಂತಿಗೆ ಕೊಡಲ್ಪಡುತ್ತಿದೆಯೆಂದೂ, ಇದರ ಲೆಕ್ಕಗಳು ... (ಪಬ್ಲಿಕೇಷನ್) ಮಾಡಲ್ಪಡುತ್ತಿದೆಯೆಂದೂ ... ಕೌನ್ಸಿಲಿನ ... 15 ಪ್ರಶ್ನೆಗಳ ... ವಿಷಯ ... ಇಲ್ಲವೆಂದು ...

ಮುಜರಾಯಿ ಇಲಾಖೆಯಲ್ಲಿ ರಿಸರ್ವ್ ಫಂಡ ಇದೆಯೇ, ಇದ್ದರೆ ಅದು ಎಷ್ಟು ... ಆ ಇಲಾಖೆಯು ... ಕಮಿಟಿಯ ವರದಿಗೆ ... ಅಧ್ಯಕ್ಷರೂ ... ಕಮಿಟಿ ಮೆಂಬರುಗಳನ್ನು ಆಕ್ಷೇಪಿಸಿದ್ದು ... ಪ್ರಶ್ನೆಗಳಿಗೆ ಸರಕಾರದವರು 'ತಮಗೆ ಮಾಹಿತಿ ಇಲ್ಲ'ವೆಂದು ಉತ್ತರ ಕೊಟ್ಟಿರುವರು. ಮುಜರಾಯಿ ಇಲಾಖೆಯ ಆಡಳಿತದಲ್ಲಿ ಈ ಪ್ರಶ್ನೆಗಳ ... ಅಧಿಕಾರಿಗಳು ... ಉತ್ತರ ಕೊಡದೆ ... ಸಂದೇಹವಿಲ್ಲ.

ಸರಕಾರದವರು ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡದೆ ಇರಲು ಕಾರಣವೇನೆಂದು ತಿಳಿಯುವುದಿಲ್ಲ. ಈ ವಿಷಯದಲ್ಲಿ ಅವರಿಗೆ ಮಾಹಿತಿ ಇಲ್ಲವೆಂದು ಹೇಳಿರುವರು. ಆದರೆ ... ಲೆಕ್ಕಗಳನ್ನು ... ಈ ವಿಷಯಗಳೆಲ್ಲಾ ಸರಕಾರದ ಅಧಿಕಾರಿಗಳ ... ಇರುವುದು ಹೇಗೆ? ... ಅವುಗಳನ್ನು ... ನು? ಅವುಗಳಲ್ಲಿ ... ಅಥವಾ ಆ ವುಗಳಲ್ಲಿ ... ಯಾ ಇರುವುದೋ? ... ಸರಕಾರದವರು ಈ ವಿಷಯಗಳನ್ನು ಮುಜರಾಯಿ ಇಲಾಖೆಯವರಿಂದ ಕೇಳಿ ಉತ್ತರ ಕೊಡಲು ಸಾಧ್ಯವಿಲ್ಲವೇ? ಒಂದು ವೇಳೆ ಮುಜರಾಯಿ ಇಲಾಖೆ ... ಸ್ವಾತಂತ್ರ್ಯ ... ಸರಕಾರದ ಅಧಿಕಾರಿಗಳಿಗೆ ... ಇರುವುದೇ? ಇದು ... ಲೆಕ್ಕಗಳನ್ನು ... ಈ ಸಂಬಂಧ ಸರಕಾರದ ... ಈ ಸಂದೇಹಗಳಿಗೆ ಎಡೆಕೊಟ್ಟಿದೆ.

... ಮುಜರಾಯಿ ಇಲಾಖೆಯ ... ಜನಸಮುದಾಯಕ್ಕೆ ತಿಳಿಯುವ ಹಕ್ಕಿದೆ. ... ಸರಕಾರದವರು ಈ ... ಕೌನ್ಸಿಲಿನ ... ಈ ಇರುವುದು ... ಒಂದು ವೇಳೆ ... ವರು ಈ ವಿಷಯ ಆ ಕಮಿಟಿಯವರಿಗೇ ಬಿಟ್ಟಿರುವದಾದರೆ ಆ ಕಮಿಟಿಯವರು ತಮ್ಮ ಲೆಕ್ಕಗಳಲ್ಲಿ ಪಬ್ಲಿಕಿನವರಿಗೆ ಉಂಟಾಗಿರುವ ಸಂಶಯಗಳನ್ನು ಬಗೆಹರಿಸುವ ... ತಿಳಿಸುವುದು ಅವರ ಕರ್ತವ್ಯವಾಗಿದೆ. ಇಲ್ಲವಾದರೆ, ದೇಶದವರು ಆ ಕಮಿಟಿಯವರ ತಮ್ಮ ಪ್ರತಿನಿಧಿಗಳನ್ನು ... ದೇಶಕ್ಕಾಗಿ ... ವುದು.

ಮುಜರಾಯಿ ಇಲಾಖೆಯನ್ನು ಸಂಬಂಧಿಸಿ ಕೌನ್ಸಿಲಿನಲ್ಲಿ ಪ್ರಶ್ನೋತ್ತರಗಳು.

27. ಪ್ರಶ್ನೆ—(... ... ಕೇಳಿದ್ದು) (1) ಮುಜರಾಯಿ ಇಲಾಖೆ ಸರಕಾರದ ವಂತಿಗೆ ... ರಿಸರ್ವ್ ಫಂಡು ಇದೆಯೋ?

(2) ಪ್ರ—ಹಾಗಿದ್ದರೆ ಅದು ಎಲ್ಲಿ ಇಡಲ್ಪಟ್ಟಿದೆ?

(3) ಪ್ರ—ಹಾಗಿದ್ದಲ್ಲಿ ... ಬಡ್ಡಿ ಎಷ್ಟು ಸಿಗುತ್ತದೆ?

ಉತ್ತರ—(1) (2) & (3) ಸರಕಾರಕ್ಕೆ ಇದರ ವಿಚಾರ ಗೊತ್ತಿಲ್ಲ.

(4) ಪ್ರ—ಸರಕಾರದಿಂದ ಆ ಇಲಾಖೆಗೆ ಎಷ್ಟು ಹಣ ವಂತಿಗೆ ಕೊಡಲ್ಪಡುತ್ತಿದೆ?

ಉ—ವರ್ಷಕ್ಕೆ ರೂ 13,140—8—0.

(5) ಪ್ರ—ಅದು ವರ್ಷವಾರಿಯೋ ಯಾ ತಿಂಗಳುವಾರಿಯೋ?

ಉ—ಅದು ತಿಂಗಳಿಗೆ ರೂ 1,095—0—8 ಯಂತೆ ಕೊಡಲ್ಪಡುವುದು.

(6) ಪ್ರ—ಈ ಹಣವು ಖರ್ಚಿಗೆ ಬೇಕಾದಾಗೆಲ್ಲಾ ... ಕೊಡಲ್ಪಡುವುದೋ ಯಾ ಅಡ್ವಾನ್ಸಾಗಿ ಕೊಡಲ್ಪಡುವುದೋ?

ಉ—... ಆ ತಿಂಗಳ ಮತ್ತು ಆ ತಿಂಗಳ ಪ್ರಾರಂಭದಲ್ಲಿ ಈ ಹಣವು ಕೊಡಲ್ಪಡುವುದು.

(7) ಪ್ರ—ಈ ಹಣವು ಎಲ್ಲಿ ಇಡಲ್ಪಡುತ್ತಿದೆ?

(8) ಪ್ರ—ಈ ಇಲಾಖೆಗೆ ಬೇಕಾಗುವ ಸಾಮಾನು ... ಕೊಂಡುಕೊಳ್ಳಲ್ಪಡುತ್ತದೋ ಯಾ ... ಕೊಂಡ ... ?

(9) ಪ್ರ—... ತಿಂಗಳು ... ?

ಉ—(7), (8) & (9) ಸರಕಾರಕ್ಕೆ ಗೊತ್ತಿಲ್ಲ.

ಉ—ಸರಕಾರಕ್ಕೆ ಗೊತ್ತಿಲ್ಲ.

(10) ಪ್ರ—ಲೆಕ್ಕ ... ಲೆಕ್ಕ ... ಕೊಡುವ ... ?

(11) ಪ್ರ—ಒಂದು ತಿಂಗಳಲ್ಲಿ ಯಾ ವರ್ಷದಲ್ಲಿ ... ತಿಂಗಳ ಯಾ ವರ್ಷದಲ್ಲಿ ... ಲೆಕ್ಕಿಯಾಗುತ್ತಿರುವುದು ... ತಿಳಿಸಲಾಗುವುದೇ?

(12) ಪ್ರ—ಕಮಿಟಿಯವರ ... ಅಧ್ಯಕ್ಷರೇನೇ ... ದೊಡ್ಡ ... ಹಣಗಳನ್ನು ತಮ್ಮ ಸ್ವಾರ್ಥ ... ?

(13) ಪ್ರ—ಕಮಿಟಿ ... ದೊಡ್ಡ ... ಹಣವನ್ನು ... ಘ ... ಬಡ್ಡಿ ... ದ ... ?

ಉ—(10), (11) (12) & (13) ಇಲ್ಲ.

(14) ಪ್ರ—ಮುಜರಾಯಿ ಇಲಾಖೆಯ ಲೆಕ್ಕ ಬರಹಗಳ ... (ಆಡಿಟ್ ಮಾಡುವರು) ... ಅದು ತಿಂಗಳು ... ?

ಉ—ಲೆಕ್ಕಗಳನ್ನು ... ಸರಕಾರ ... ತಿಂಗಳು ... ಸರಕಾರದ ...

(15) ಪ್ರ—ಈ ಇಲಾಖೆಯ ಲೆಕ್ಕಗಳನ್ನು ... ಆಡಿಟ್ ... ಸರಕಾರವು ... ?

ಉ—ಸರಕಾರವು ಈ ಸಂಬಂಧವನ್ನು ಆಲೋಚಿಸುವರು.

ಕೊಡಗು ಕಾಂಗ್ರೆಸು ಕಮಿಟಿ ಮೀಟಿಂಗು.

ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿ ಮೀಟಿಂಗು ತಾ. 3—11—35 ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಮಿ. ... ಅಧ್ಯಕ್ಷತೆಯಲ್ಲಿ ನಡೆದು ಈ ವಿಷಯಗಳು ತೀರ್ಮಾನವಾದವು.

(1) ಕಳೆದ ಮೀಟಿಂಗಿನ ವರದಿಯನ್ನು ಓದಿ ಒಪ್ಪಲಾಯಿತು.

(2) ಆಕ್ಟೋಬರ್ ತಿಂಗಳ ವರೆಗಿನ ಲೆಕ್ಕಗಳನ್ನು ಓದಿ ... ರೂ. 72—6—0 ... ಯಾಗಿ ಒಪ್ಪಲಾಯಿತು.

(3) ಇದೇ ನವಂಬರು ತಾ. 23ನೇ ... ಸ್ನ 2 ಘಂಟೆಗೆ ... ಕೊಡಗು ಕಾಂಗ್ರೆಸು ... ವಾರ್ಷಿಕ ಜನರಲ್ ಮೀಟಿಂಗು ... ನಡೆಸಲು ... ವಿಷಯ ...

(4) ... ತಾ. ... ಕಾಂಗ್ರೆಸ್ ... ಸುವರ್ಣ ಮಹೋತ್ಸವ ... ಕಾಂಗ್ರೆಸ್ ... ತುಂಬಿದಷ್ಟು ವಾರ್ಷಿಕ ಜನರಲ್ ಸಭೆಯಲ್ಲಿ ಕೊಂಡಾಡುವುದೆಂದು ತೀರ್ಮಾನಿಸಲಾಯಿತು.

ಶ್ರೀ ಸಿ. ಕರುಂಬಯ್ಯ.

(ಅಧ್ಯಕ್ಷರು.)

ಕಾಂಗ್ರೆಸ್ಸಿನಲ್ಲಿ ವಿಶ್ವಾಸ.

ಬಾಬು ರಾಜೇಂದ್ರ ಪ್ರಸಾದರ ಅನುಭವ.

ತಮಿಳುನಾಡಿನ ಪ್ರವಾಸವನ್ನು ಮುಗಿಸಿದ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರು ಈ ಪ್ರಕಟಣೆಯನ್ನು ಹೊರಡಿಸಿರುವರು:

'21 ದಿವಸಗಳ ಪ್ರವಾಸದಲ್ಲಿ ನಾನು ಕಾಂಗ್ರೆಸ್ಸಿನ ತಮಿಳುನಾಡು ಪ್ರಾಂತ್ಯದ 14 ಜಿಲ್ಲೆಗಳನ್ನು ಮದ್ರಾಸಿನಿಂದ ಕನ್ಯಾಕುಮಾರಿ ವರೆಗೆ ಮುಗಿಸಿರುವೆನು. 2000 ಮೈಲು ಮೋಟಾರು ಪ್ರಯಾಣವನ್ನು, 800 ಮೈಲು ರೈಲು ಪ್ರಯಾಣವನ್ನು ಒಳಗೊಂಡ ಈ ಪ್ರವಾಸವು ನನಗೆ ಬಹು ಕಷ್ಟಕರವೇ ಆಗಿತ್ತು. ನಾನು ಅನೇಕ ಸಭೆಗಳಲ್ಲಿ ಭಾಷಣ ಮಾಡಬೇಕಾಗಿ ಬಂತು; ಸರಾಸರಿ ನೋಡಿದರೆ ದಿನಕ್ಕೆ 6 ರಿಂದ 7 ಭಾಷಣಗಳನ್ನು ಮಾಡಿರುವೆನು. ನಾನು ಹೋದ ಕಡೆಗಳಲ್ಲೆಲ್ಲಾ ಜನರು ನನಗೆ ವಿಶೇಷವಾದ ಸ್ವಾಗತವನ್ನೀಯಿದರು, ಮತ್ತು ಜನಸಮುದಾಯಕ್ಕೆ ಕಾಂಗ್ರೆಸಿನ ಮೇಲೆ ತುಂಬಾ ವಿಶ್ವಾಸವೂ, ಅಪೂರ್ವವಾದ ಉತ್ಸಾಹವೂ ಇರುವುದು ನನಗೆ ಕಂಡು ಬಂತು. ಬಹಳ ಕಡೆಗಳಲ್ಲಿ ಸಭಿಕರ ಸಂಖ್ಯೆಯು 10 ಸಾವಿರವನ್ನು ಮೀರಿತ್ತು; ಹಳ್ಳಿಯ ಗ್ರಾಮಗಳಲ್ಲಿ ಕೂಡ ದೊಡ್ಡ ಸಭೆಗಳು ನೆರೆದಿದ್ದವು.

(ಶ್ರೀಯುತ ಬಾಬು ರಾಜೇಂದ್ರ ಪ್ರಸಾದರು)

ತಾ. 10 ರಲ್ಲಿ ... ರೂ. 1000 ... ಮತ್ತು ... ರೂ. 2000 ... ಯಾಗಿ ... ಕೊಡಲ್ಪಟ್ಟಿದೆ. ... ರೂ 501 ... ಕಾಂಗ್ರೆಸ್ ... ಈ ... ಪ್ರಭಾವವು ... ಕ್ಕೆ ...

ನನ್ನ ಪ್ರವಾಸದಿಂದ ಜನರಲ್ಲಿರುವ ಕಾಂಗ್ರೆಸು ಪ್ರೀತಿಗೆ ... ಜನರಲ್ಲಿರುವ ಅಪಾರವಾದ ಉತ್ಸಾಹವನ್ನು ದೇಶದ ಏಳಿಗೆಯ ಕಾರ್ಯಕ್ಕೆ ... ಕಾಂಗ್ರೆಸು ... ಇದು ಹಾಗೆ ... ಎಂದು ನನಗಿದೆ.

ನಾನು ಹೋದ ಕಡೆಗಳಲ್ಲೆಲ್ಲಾ ನನಗೆ ಸ್ವಾಗತಗಳನ್ನೀಯಿದವರಲ್ಲಿ ಬ್ರಾಹ್ಮಣೇತರರೇ ಹೆಚ್ಚು. ನನಗಾಗಿ ಸಭೆಗಳನ್ನು ... ನನಗೆ ಆತಿಥ್ಯವನ್ನು ನೀಡಿದವರೂ ಹೆಚ್ಚಾಗಿ ಬ್ರಾಹ್ಮಣೇತರರು. ಈ ಪ್ರವಾಸದ ... ಪ್ರಾಂತ್ಯದಲ್ಲಿ ಕಾಂಗ್ರೆಸು ಸಂಸ್ಥೆಯು ಬ್ರಾಹ್ಮಣರ ಅಧೀನದಲ್ಲಿರುವ ಸಂಸ್ಥೆಯೆಂಬುದನ್ನು ... ಬ್ರಾಹ್ಮಣೇತರ ... ಕಾಂಗ್ರೆಸು ... ನನ್ನ ಆಶೆ.

ಹರಿಜನ ... ಬಹಳ ... ವಾಗಿದೆ. ನನಗೆ ... ಪತ್ರಗಳು ... ಸಂತೋಷವನ್ನುಂಟುಮಾಡಿದ ... ಸಭೆಗಳಲ್ಲಿ ನಾನು ... ಬಂತು.

... ಗಳ ಪ್ರಸ್ಸಿಕರವಾಗಿ ... ಈ ಸಂಬಂಧ ... ಹರಿಜನ ಸೇವಾ ಸಂಘದ ... ಕಾರ್ಯಗಳಲ್ಲಿ ... ಸಂಘಕ್ಕೆ ... ಅದ ... ಸಹಾಯ ... ವಾಗಿದೆ.

... ಈ ಪ್ರವಾಸದ ... ನನಗೆ ... ತುಂಬಾ ... ನನಗಿದೆ.

IF NOT delivered please return to "KODAGU" OFFICE, MERCARA.

KODAGU

15—11—1935

ಕೊಡಗು

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೩] ಮಡಿಕೇರಿ, ಸನ್ ೧೯೩೫ನೇ ಇಸವಿ ನವಂಬರ್ ತಾರೀಖು ೧೫ನೇ ಶುಕ್ರವಾರ. [ಸಂಚಿಕೆ ೨೬

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು. ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕಾಗದ ಬರೆಯಿರಿ.

By Appointment
To H. E. The Governor of Madras.

CUPS AND MEDALS.

Telephone; 3145

Telegrams 'PRECIOUS.'



V. SUBRAMANIA IYER.

Jeweller, & Diamond Merchant,

52—52 2 & 3 Kuppumuthu Street Triuvateswaranpet. MADRAS. POST BOX 423 TRIPLICANE

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office,—UDIPI (S. Kanara.)

Branches :—

1. Udipi. 2. Coondapoor. 3 Car Street, Mangalore, 4. Bunder, Mangalore, 5. Shimoga, 6. G. T. Madras, 7 Mercara and 8. Virajendrapet,

DEPOSITS.

1922	1926	1930	1934
Rs. 2,28,419/-	6,43,940/-	20,23 837/-	24,95 329/-

30—9—1935
Rs. 26,37,109.

SAVINGS BANK ACCOUNTS
Interest allowed at $3\frac{1}{2}$ % p. a.

FACILITIES.—

(1) Withdrawal by cheques. (2) Production of pass books unnecessary at the time of withdrawal, (3) Accounts transferred FREE of charge from one office to another,

FIXED DEPOSITS now accepted up to 5 per cent.

Udipi.
29—7—1935. 52—1 M. Srinivasa Prabhu, Manager.

“ಜನರಲ್ ಅಶ್ಯೂರೆನ್ಸ್” ಅಜ್ಮೀರ್.

ಉದಾರವಾದ [illegible] ಸೌಲಭ್ಯಗಳು.

(1) [illegible]

(2) [illegible]

(3) [illegible] $4\frac{1}{2}$% [illegible]

(4) [illegible]

[illegible] (ಹೆಚ್ಚು) 265 ಲಕ್ಷ

[illegible] ಸುಮಾರು 70 ಲಕ್ಷ.

ವಾರ್ಷಿಕ ಉತ್ಪನ್ನಗಳು (ಹೆಚ್ಚು) ರೂ 16 ಲಕ್ಷ

ವಿಮಾ ಪತ್ರಗಳ ಮಾರಾಟ ರೂ 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

[illegible] 25%o } { [illegible] 20%o

[illegible]

[illegible]

ಟಿ. ಡಿ. [illegible], ಎಮ್. ಎ. [illegible] ಜನರಲ್ ಮೇನೇಜರ್, ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ—

ಎ. ಎಸ್ ಎಸ್ ಅಯ್ಯಂಗಾರ್, ಸುಪರಿಂಟೆಂಡೆಂಟ್, ಜನರಲ್ ಅಶ್ಯೂರೆನ್ಸ್ ಬಿಲ್ಡಿಂಗ್, [illegible], 3ನೇ ರೋಡು, ಬೆಂಗಳೂರು ಸಿಟಿ.

52—24

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	30,090— 0—0
ಜನರಿಂದ ಠೇವಣಿ	—	2,54,429—11—6
ವಸೂಲಾದ ಕ್ಷೇಮನಿಧಿ	—	1,03,114—12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ಮಾಯಿದೆ ಅಥವ ಹೆಚ್ಚಿನ ಮಾಯಿದೆಯ ಠೇವಣಿಗಳಿಗೆ ಶೇಕಡ ವಾರ್ಷಿಕ ರೂ 4-8-0ರ ವರೆಗೆ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ಗವರ್ನಮೆಂಟಿನ ಕೋ ಆಪರೇಟಿವ್ ರಿಜಿಸ್ಟ್ರಾರರ ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಕಂಡ್ರಂಡ ಪಿ ಬೆಳ್ಯಪ್ಪನವರು.	ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ

ಮನೆಯಪ್ಪಂಡ ಬೆಳ್ಯಪ್ಪನವರು.

ಮಡಿಕೇರಿ 1—11—1935.

ಭಾರತದ [illegible]

ಡೋಂಗರೆ ಬಾಲಾಮೃತವನ್ನು

ಕೊಡಿರಿ. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ತಯಾರಕರ್ಸ್—

ಕೆ. ಟಿ. ಡೋಂಗರೆ ಕಂಪೆನಿ,

(52—38) ಗಿರ್ಗಾಂವ್, ಮುಂಬಾಯಿ.

EMPIRE OF INDIA LIFE ASSURANCE CO., LTD.

WANTED.

Influential and active persons who can guarantee business are required to work as Organisers of the Company in the areas detailed below Applicants should be well known in the locality and must have considerable influence Previous experience in the line will be preferred.

BANGALORE	**MYSORE**
COORG	**HASSAN**
KADUR	**SHIMOGA.**

Also applications for agencies are solicited from important centres where the Company is not well represented The Company is very well known for its low Premiums economical management, sound investments and prompt settlement of claims. In the past 38 years it has built up an excellent position of financial strength and great popularity It will be easy to organise and secure business for the Company and earn a very decent and steady income.

For further particulars please apply to—

Branch Secretary,

EMPIRE OF INDIA LIFE ASSURANCE CO., LTD.,

52—53

151/3 Commercial Street Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಆರಂಭವಾದದ್ದು ಸ್ಥಾಪಿತವಾದದ್ದು) (ಹೆಡ್ ಆಫೀಸು— ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ …. ….	ರೂ.	7,62,42,761
ವಾರ್ಷಿಕ ಉತ್ಪತ್ತಿ …. …. ….	ರೂ.	3 14,01,970
ಜಾರಿಯಲ್ಲಿರುವ ಒಟ್ಟು ಪಾಲಿಸಿಗಳು ….	ರೂ.	54,20,38,518
ಕ್ಲೇಮುದಾರ್ರುಗಳಿಗೆ ಕೊಟ್ಟ ಒಟ್ಟು ಹಣ ….	ರೂ.	16,20 88 814
ಫಂಡ್ಸು ಹೆಚ್ಚಿದ್ದು …. …. ….	ರೂ	15 53,88 843

ಈ ಮೇಲಿನ ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ ಸುಸಂಘಟನೆಯನ್ನು ಮತ್ತು ಪ್ರಸಿದ್ಧಿಯನ್ನು ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ವಿಸ್ತಾರ ಸಮಾಚಾರಕ್ಕೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮ್ಯಾನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಬ್ರಾಂಚ್ ಆಫೀಸುಗಳಿಂದಲೂ ಬರೆದು ಕೇಳಬಹುದು.

ಆಗ್ರ,	[illegible]	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತ,	[illegible]ಪೂರು	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪೂರ
ಅಲಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚನಾಪಳ್ಳಿ
ಬೆಳ್ಗಾಂ	ಗೌಹತಿ	ಮಂಡಲೆ	ರಾವಳಪಿಂಡಿ	ತಿರುವೆಂದ್ರಮ್
ಬರೇಲಿ	ಜಲಗಾಂವ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬತ್ತೂರು	ಗುಂಟೂರು	ಜಬ್ಬಲ್ಪೂರು	ಸಿಟ್ಲಪುರ	ಮಧುರೆ & ವೈಸೂರು.

ಓರಿಯಂಟಲ್ ಬಿಲ್ಡಿಂಗ್ಸ್, ಕಾಶಿ ಚೆಟ್ಟಿ ಸ್ಟ್ರೀಟ್, ಬೆಂಗಳೂರು, 52—44

ಎಂ. ವಿ. ವೆಂಕಟ್ರಮಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

ಷಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ಕಾಟ್ರಿಜುಗಳು, ಕೇಡಿಯಂತಹ ಮತ್ತು ಷಿಕಾರಿ ಕಲಿಯುವ ಅವಶ್ಯಕವಾದ ಎಲ್ಲಾ ಸಲ ಕರಣೆಗಳ ವಿಕ್ರೇತ ಅತಿ ಧನವೃದ್ಧರು.



[ಕೆಟಲಾಗು ಉಚಿತ.] [CURRENT CATALOGUE FREE

The Bombay Armoury,

329—331, Abdul Rehman Street,

BOMBAY, 3.

26—11

Printed & published by P I Belliappa, at "Kodagu" Press Mercara for "Kodagu" Ltd.

ಪ್ರಕಟಣೆ.

ಪರಿಸರಕರ್ತವ್ಯ. [26—20]

25—5—'35.

ಕರ್ಕಕಂಪನಿ

ಇರಪ ಗುಳಿಗೆಗಳು.

ದಾಕ್ಟರ್ ಮೋಹನ್ಸ್ ಎಪ್ಪಿಸಾಪರ್.

ದಂತ ವೈದ್ಯರು.

ಗಿಡ್ಡಾಂಜನಿ ಬಂಗ್ಲೆ.

(ಕೋಟ್ಯಾಲ್ ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವ ದಲ್ಲದೆ, ಕೃತ್ರಿಮ ಹಲ್ಲುಗಳನ್ನು ... [52—6]

ಧಾತುಪುಷ್ಟಿ ಲೇಹ

ಎಂ. ಗಣಪಯ್ಯ ಎಂಡ್ ಸನ್ಸ್, ... ಮಂಗಳೂರು.

(52—18)

FRASER'S

FOOTWEAR

have

the HALLMARK of

distinctive finish,

upto-date style,

fine workmanship

best materials.

AMAZING VALUE FOR LOW PRICE

HARDWEAR BOOTS & SHOES,

for estate and monsoon a speciality

G. W. FRASER & CO., CALICUT.

12—8

ಬಾಡಿಗೆಗೆ ಸಿದ್ಧವಾಗಿದೆ.

ಮೇನೇಜರ್

ಕೊಡಗು ಲಿಮಿಟೆಡ್,

ಮಡಿಕೇರಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ

ಯಾವ ಗುಣಗಳು ಅವಶ್ಯಕವೆಂದು ನೀವು

ತಿಳಿದಿರುತ್ತೀರೋ ಆ ಗುಣಗಳೆಲ್ಲ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ತಿಳುಗೆ ಧರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

52—37

ಸೂಚನೆ.

ಸಬ್ ಏಜೆಂಟರುಗಳು.

(ಸೋಮವಾರಪೇಟೆ ...)

ಮೇನೇಜರ್,

"ಕೊಡಗು" ಲಿಮಿಟೆಡ್.

ಮಡಿಕೇರಿ.

ಅವಶ್ಯ ಉಳಿಸುವ ಅವಶ್ಯಕತೆ ವಿಷಯ ವೆಂಕಟರಾವ ವಿಷ ಯಗಳನ್ನು ಕುರಿತು ನಡೆಯುವ ಕಾಲವೆಳೆ ಬಗ್ಗೆ ವಿವರಿಸಿ ದರು.

ಕಾರ್ಯಕ್ರಮ ಪಟ್ಟಿ ವೇಳೆ ಮಿ. ಚೌರಿದ ಮಂದಪ್ಪನ ವರು 1904ನೇ ಇಸವಿ ಯಿಂದ ಈಚೆಗೆ [illegible] ಸಹಕಾರದಿಂದ ಉಂಟಾದ ಕಲ್ಯಾಣ ಬಟ್ಟೆ ಜನರ ಆರ್ಥಿಕ, ಸಾಮಾಜಿಕ, ನೈತಿಕ ಅಭಿವೃದ್ಧಿಯನ್ನು ಕುರಿತು ಅಂಕೆ ಅಂಶಗಳನ್ನು ಕೊಟ್ಟು ವಿವರಿಸಿದರು.

ಎರಡನೇ ಮಿ. ಆರ್. ನೊರೆಣ್ಣನ ಬಿ. ಎ ಯವರು 'ಪ್ರ ಬುದ್ಧ ಜನರ ವಿದ್ಯಾಭ್ಯಾಸ' (Adult Education) ವಿಷ ಯವಾಗಿ ಇಂಗ್ಲೆಂಡು, ಅಮೇರಿಕ, ಇಂಡಿಯಾದ ಇತರ ಕಡೆ ಗಳಲ್ಲಿ ನಡೆಯುವ ರೀತಿಯನ್ನೂ, ಇವುಗಳ ಸಹಕಾರಿಗಳ ಪ್ರೋ ತ್ಸಾಹವನ್ನು ಕುರಿತು ವಿವರಿಸಿದ ಮೇಲೆ ಕೊಡಗು ದೇಶ ದಲ್ಲಿ ಈ ರೀತಿಯಾದ ವಿದ್ಯಾಭ್ಯಾಸವನ್ನು ಸಹಕಾರಿಗಳು ತ ಮ್ಮ ತಮ್ಮ ಕ್ಷೇತ್ರಗಳಲ್ಲಿ ಹೇಗೆ ಅಭಿವೃದ್ಧಿಗೊಳಿಸಬಹುದು. ಇದರಿಂದ ಜನರ ಆರ್ಥಿಕ, ಸಾಮಾಜಿಕ, ನೈತಿಕ ಅಭಿವೃದ್ಧಿಯ ನ್ನು ಹೇಗೆ ಉಂಟು ಮಾಡಿಕೊಳ್ಳಬಹುದು ಎಂಬ ಮೊದಲಾದ ವಿಷ ಯಗಳನ್ನು ಕುರಿತು ಅರ್ಧ ಗಂಟೆ ಯವರೆಗೆ ಭಾಷಣವನ್ನಿತ್ತರು.

ಮಿ. ಬಿಳ್ಳಿಯಂಡ ಕೆ. ಸುಬ್ಬಯ್ಯನವರು ಗ್ರಾಮಾಭಿವೃದ್ಧಿ ಯ ವಿಷಯ ಮಾತಾಡುತ್ತಾ, ಜನರು ತಮ್ಮ ತಮ್ಮ ಮನೆಯ ಕಟ್ಟು ಮುತ್ತು, ಶುಚಿಯಾಗಿಟ್ಟುಕೊಳ್ಳುವುದರಿಂದಲೂ ಮಹಿಳೆ ಯರೂ ಕಾರ್ಯದರ್ಶಿ ಸಂಘವನ್ನು ಸ್ಥಾಪಿಸಿಕೊಳ್ಳುವುದರಿಂದಲೂ, 'ಲಂಕಾದ ಮಹಿಳಾ ಸಹಕಾರಿ ಸಂಘ'ವನ್ನು ಸ್ಥಾಪಿಸುವುದರಿಂ ದಲೂ ಹೇಗೆ ಅಭಿವೃದ್ಧಿಯನ್ನು ಮಾಡಿಕೊಳ್ಳಬಹುದು ಎಂ ಬ ವಿಷಯವಾಗಿ ಕುರಿತು ಭಾಷಣ ಮಾಡಿದರು.

ಆ ವೇಳೆ ಕೋಆಪರೇಟಿವ್ ಸಂಘಗಳ ಸುಪರ್‌ವೈಜರ್ ಮಿ. ಪಿ. ಬಿ ಅಪ್ಪಯ್ಯನವರು ಸಾಧಾರಣ ಒಂದು ಗಂಟೆ ಗಿಂತಲೂ ಹೆಚ್ಚಾಗಿ 'ಸ್ಟೋರ್' ಸಂಘಗಳಿಂದ ಆಗುವ ಪ್ರ ಯೋಜನಗಳನ್ನು ಕುರಿತು ಅಂಕೆ ಅಂಶಗಳನ್ನು ಕೊಟ್ಟು ಇಂ ಗ್ಲೆಂಡಿನ 'ರಾಚಿಡೇಲ್ ಪಯನೀರ್ ಸ್ಟೋರ್', ಮದ್ರಾಸಿನ 'ಟ್ರಿಪ್ಲಿಕೇನ್ ಸ್ಟೋರ್' ಮತ್ತು ಕೊಡಗಿನ ಲೋಕಲ್ ಸ್ಟೋ ರ್‌ಗಳ ಉದಾಹರಣೆ ಕೊಡುತ್ತಾ, ಅವುಗಳು ಸ್ಥಾಪಿತವಾಗುವಾ ಗ ಜನರಿಗೆ ಅದರ ಮೇಲಿದ್ದ ಅನಾದರ ಬರಬರುತ್ತ ಈ ನಂಬಿ ಜನರಿಗೆ ಉಂಟಾದ ಅವರ ಮೆದುಳಾದುದನ್ನು ಕುರಿತು ವಿವರಿಸಿ ಮಾತಾಡುತ್ತಾ ಇಂಥ ಸ್ಟೋರುಗಳಿಗೆ ಸರ್ವರೂ ಪ್ರೋತ್ಸಾಹಕರಾಗಿ ಕೇಳ ತಮ್ಮ ಭಾಷಣವನ್ನು ಮುಗಿಸಿ ದರು.

ಮಿ. ಕೋಳೇರ ದೇವಯ್ಯನವರು ಸಹಕಾರದ ಕತ್ತಲಲ್ಲಿ ಬೆ ಳಗುತ್ತಿ ಮುಖ್ಯವಾದ ವಿಷಯವನ್ನು ವಿವರಿಸಿ ಮಾತಾಡಿದರು.

'ಮಡಿಕೇರಿಯಲ್ಲಿ ಒಂದು ಭತ್ತದ ಸ್ಟೋರ್' ಇದು ಅವ ಗ ಅತ್ಯಾವಶ್ಯ, ಇದನ್ನು ಒಡನೆ ಜಾರಿಗೆ ತರಲು ಮಡಿಕೇರಿ ಯ ಮಹಾ ಜನರು ತಕ್ಕ ವಿಚಾರವನ್ನು ಮಾಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ' ಎಂಬ ಠರಾವನ್ನು ಮಿ. ಸಿ. ಕೆ. ನಂಜಪ್ಪನವರು ತಂದರು. ಇದಕ್ಕೆ ಮಿ. ಚೌರಿದ ಪೊನ್ನಪ್ಪನವರು ಅನುಮೋದಿಸಿದರು. ಇದಕ್ಕೆ ಉತ್ತರವಾಗಿ ಮಿ. ಎಚ್. ಎಸ್. ವೆಂಕಪ್ಪಯ್ಯನವರು ಕೃಷಿಯಲ್ಲಿ ಬೆಳೆಸಿದ ಭತ್ತವನ್ನು ಬೀದಿಪಾಲಾಗದೆ ಮುಂಗಡವಾಗಿ ಕೊಟ್ಟು ಅವರ ಬೆಳೆಯುವ ಪೂರ್ತಿಯಾಗಿ ಒಂದೇ ಗಂಟಿನಲ್ಲಿ ಸಿಕ್ಕದೆ ಉಂ ಟಾಗುವ ಕಷ್ಟ ನಷ್ಟಗಳನ್ನು ವಿವರಿಸಿ, ಭತ್ತದ ಸ್ಟೋರ್ ತೆರೆದ ರೆ ಜನರಿಗೆ ಹೇಗೆ ಅನುಕೂಲವಾಗುತ್ತದೆಂಬ ಸಂಗತಿಯನ್ನು ಕುರಿತು ಮಾತಾಡಿದ ಮೇಲೆ ವಿರೋಧವಿಲ್ಲದೆ ಠರಾವು ಅಂಗೀ ಕರಿಸಲ್ಪಟ್ಟಿತು.

ಮಿ. ಚೇನಂಡ ಮಾಚಯ್ಯನವರು ಸಹಕಾರದ ವಿಷಯ ಕುರಿತು ಮಾತಾಡಿದರು.

ಅಧ್ಯಕ್ಷರು ಮಿತವ್ಯಯ, ಸ್ವಾವಲಂಬನ, ಪರಸ್ಪರ ಸಹಾ ಯ, ಮಿತವ್ಯಯ ಅನುಸರಿಸುವ ಮಂತ್ರಗಳನ್ನು ಕುರಿ ತು ಮಾತಾಡಿದರು.

ಅಧ್ಯಕ್ಷರಿಗೆ ವಂದಿಸಿದ ಮೇಲೆ ಫಲಹಾರ ಕೊಟ್ಟಗಳ ನಡೆಯಿತು 5 ಗಂಟೆಗೆ ಮುಕ್ತಾಯವಾಯಿತು

ಪಿ. ನೊಂದಪ್ಪ,
(ಅಧ್ಯಕ್ಷರು)

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವೀನ
ಅತೊಂಕಾರಿಷ್ಟ.

[illegible]

ದೊಡ್ಡ ಸೀಸೆ 2—8—0
ಅರ್ಧ ಸೀಸೆ 1—6—0

ನವೀನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ [illegible]

ದೊಡ್ಡ ಸೀಸೆ 1—8—0, ಅರ್ಧ ಸೀಸೆ 1—13—0.

[illegible]

ಎಂ.ಟಿ—ವಿ. ಬಿ. ಕಾವ ತ್,
ಮಹಾದೇವಪೇಟೆ, ಮಡಿಕೇರಿ.

ಚೀನೀ ದೇಶದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಪ್ರತಿನಿಧಿಗಳು ರಾಜಿ ಸಂಧಾನಕ್ಕಾಗಿ ಮಾಡುತ್ತಿರುವ ಪ್ರಯತ್ನಗಳಿಗೆ ಲೀಗಿನ ಪರಿ ಸಹಾನುಭೂತಿಯನ್ನು ತೋರಿಸಿರುವರು.

ನವಂಬರು ತಾ. 4.

ಇಟೆಲಿಯನರು ಹಾಜೀಸನ್ನು ಹಿಡಿದರು

ಅಬಿಸೀನಿಯರ ಸೈನ್ಯವೊಂದು ಹಾಜೀಸಿನಿಂದಲೂ. 30,000 ಸೈನ್ಯವು ದಕ್ಷಿಣದಿಂದಲೂ ಮಕೇಲ್ ಕಡೆ ಹೋಗು ವುದನ್ನು ಇಟಲಿ ವಿಮಾನಿಕರು ಕಂಡು ಹಿಡಿದರು. ಜನರಲ್ ಡಿಬೋನಿಯ. ಇಟಲಿ ಸೈನಿಕರು ಮಕೇಲ್ ಪಟ್ಟದ ದಾರಿಯಲ್ಲಿ ರುವ ಹಾಜೀಸ್ ಪಟ್ಟಣವನ್ನು ಹಿಡಿದಿರುವರು. ಮಕೇಲಿನ ಸುತ್ತು ಮುತ್ತಲು ಜೋರಾದ ಮಳೆ ಬಿದ್ದು ಇಟಲಿಯನರಿಗೆ ಕಷ್ಟವಾಯಿತು.

ಮಕೇಲ್ ಪಟ್ಟಣದ ರಕ್ಷಣೆ.

ಅಡಿಸ್‌ಅಬಾಬಾ—ಅಡೆಲಿವಾ—ಅಕ್ಸುಂ ಲೈನಿನಿಂದ ಮೂರು ಇಟಾಲಿಯನ್ ಸೈನ್ಯಗಳು ಮಕೇಲ್ ಕಡೆ ಮುಂದುವರಿಯು ತ್ತಿವೆ. ಮಕೇಲ್ ಪಟ್ಟಣವನ್ನು ಅಂತ್ಯದ ವರೆಗೆ ಕಾಪಾಡ ಲು ಅಬಿಸೀನಿಯನರು ನಿಶ್ಚಯಿಸಿರುವರು. ಹಾಜೀಸಿನ ದ ಕ್ಷಿಣದಲ್ಲಿ ರಾಸ್ ಸಿಯೂಮನ ಸೈನ್ಯವು ಇಟಲಿಯನರನ್ನು ಬ ಲವಾಗಿ ಎದುರುಗೊಳ್ಳುತ್ತಿದೆ. ಟೆಂಬೆನಲ್ಲಿ ರಾಸ್ ಕಾಸ್ಸರ ಸೈನ್ಯಕ್ಕೂ ಇಟಲಿಯವರಿಗೂ ಬಲವಾದ ಕದನ ನಡೆ ಯುತ್ತಿದೆ.

ನವಂಬರು ತಾರೀಖು 5.

ಗೋರಹೈಯ ರಕ್ಷಣೆ

ಇಟಲಿಯವರು ಗೋರಹೈ ಪಟ್ಟಣದ ಮೇಲೆ ಬಲವಾ ದ ಧಾಳಿ ನಡೆಸುತ್ತಿದ್ದರೂ ಅಬಿಸೀನಿಯನರು ಅದನ್ನು ಕಾ ಪಾಡುತ್ತಿರುವರು.

ಇಟಲಿಯನರು ಅಗುಲದಲ್ಲಿ.

ಮಕೇಲ್ ಪಟ್ಟಣದಿಂದ 16 ಮೈಲು ಉತ್ತರದಲ್ಲಿರುವ ಅಗುಲಕ್ಕೆ ಇಟಲಿಯನರ ಸೈನ್ಯ ತಲಪಿದೆ. ಸೈನಿಕರು ಮಳೆ ಯಲ್ಲಿ ಪೂರಾ ಒದ್ದೆಯಾಗಿಯೂ ನಡೆದರು. ಅಲ್ಲಿಯೇ ಇಟಲಿ ಸೈನ್ಯಗಳೆಲ್ಲ ಜೊತೆಗೂಡುವವು.

ಇಟಲಿಯನರಿಗೆ ಸ್ವಾಗತ.

ಟೆಂಗೋಲೋದಲ್ಲಿ ಗ್ರಾಮವಾಸಿಗಳು ಇಟಲಿ ಸೈನಿಕರಿ ಗೆ ಸ್ವಾಗತವನ್ನೀಯುದರಿಂದ, ಅಲ್ಲಿನ ಸುಲ್ತಾನರು ನೇಗಸ ರ ಹುಕುಮನ್ನು ಉಲ್ಲಂಘಿಸಿದುದರಿಂದ, ಆ ಕಡೆಯ ಪಾದ್ರಿ ಗಳು ಅವರು ಇಟಲಿಯ ಸೈನ್ಯಕ್ಕೆ ಸೇರಿರುವರೆಂದೂ ಇಟಲಿ ಯವರ ವರ್ತಮಾನ.

ಮುಂದೆ ಮಳೆ ನಿಂತಿತು

ರೋಮ್:—ಇಥಿಯೋಪಿಯದಲ್ಲಿ ಮಳೆ ನಿಂತುದರಿಂದ ಇಟ ಲಿಯವರಿಗೆ ಜಯವಾದುದರಿಂದ [illegible] ರಕ್ಷಣೆ [illegible] ಇಟಲಿ ಸ ರ್ಕಾರದ ಪ್ರಕಟಣೆ

ರಾಸ್ ಗುಗ್ಸಾರವರ ಕಡೆ ಯವರ ಕೊಲೆಯಾಗಲಿಲ್ಲ.

'ದೇಶದ್ರೋಹಿಯಾದ' ರಾಸ್ ಗುಗ್ಸಾರವರ ಸಂಸಾರದ ಮತ್ತು ಹಿಂಬಾಲಕರ ಕೊಲೆಯಾಯಿತೆಂಬ ವಾರ್ತೆ ನಿಜವಲ್ಲ ವೆಂತಲೂ, ಇಟಲಿ ಸೈನ್ಯವು ಮಕೇಲನ್ನು ಮುಟ್ಟುವವರ ಹಿಡಿಯು ವರೆಂತಲೂ ಇಟಲಿಯವರ ವರ್ತಮಾನ.

ನೇಗಸರ ಕೊಲೆ ಯತ್ನವೇ?

ಜಿಬುಟಿಸ್ ಅಬಾಬದಲ್ಲಿ ನೇಗಸರ ಅರಮನೆಯಲ್ಲಿ ಒಂದು ಬಾಂಬು ಸಿಕ್ಕಿತ್ತು, ನೇಗಸರನ್ನು ಕೊಲ್ಲಲು ಮಾಡಿದ ಯತ್ನ ಸ ಫಲವಾಗಲಿಲ್ಲವೆಂತಲೂ, ಇದರ ಸಂಬಂಧ ಒಬ್ಬ ಅಮೇರಿಕನ್ ನೀಗ್ರೋನನ್ನು ದಸ್ತಗಿರಿ ಮಾಡಲು ತೀರ್ಮಾನಿಸಿದೆಯೆಂದೂ ಇಟಲಿಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಇದು ಪೂ ರಾ ಸುಳ್ಳು ವರ್ತಮಾನವೆಂದು ಲಂಡನ್ನಿನಲ್ಲಿರುವ ಅಬಿಸೀನಿ ಯ ರ್ ಅಂಬಾಸಿಡರ್‌ರು ಹೇಳಿದೆ.

[illegible]

[illegible]hoy & Sons Ltd.,
[illegible]rehman Street, BOMBAY 3.

[illegible] ಬೆಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ
ಯುನ್ ವ ರ್ನ್ನ ಪ ದೆ ದ,

ಹಿಂದೂಸ್ಥಾನದ ಸಾವಿರಾರು ಜನರಿಂದ [illegible]
ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿ ಫಿಕೇಟುಗಳಲ್ಲಿ ಧಾರಾಳವಾಗಿ ಬರೆಯಲ್ಪಡುವ

ಡಾ. ಶರಗರ [illegible]

ಮೃತ.

[illegible]

ಕೊಡಗುಜಿಲ್ಲೆಗೆ ಏಜಂಟರು [illegible]

ದೆಂಗಳೂರಿನಲ್ಲಿ [illegible] ಬಾಟ್ಲಿಗೆ ರೂ. 17—0—0.

ಇಂಗ್ಲೆಂಡಿನ [illegible] (ಬೆಳಗಾವ್)

ಈ ತಾ. 18 [illegible], ಮಡಿಕೇರಿ.

[illegible]

SHIROMANI NARAYANACHARY
Choukhamba Benares City.

ಶಾಸ್ತ್ರಿಗಳೇ, ಭೂಗ [illegible] ಆರೋಗ್ಯದ [illegible] ಬುದ್ಧಿಶಕ್ತಿ, ವಿದ್ಯಾ [illegible] ಅಭಿವೃದ್ಧಿ [illegible] ಮುದ್ರಿಕೆ [illegible]

[illegible]

[illegible] 1 [illegible] 10 [illegible] 3—4—5—6—7—8 [illegible] 10 [illegible] 9—10—11 [illegible] 12—13—14 [illegible] 1 [illegible] 3 [illegible])

ಶಿರೋಮಣಿ ನಾರಾಯಣಾಚಾರ್ಯ,
5—13 ಚೌಖಂಬಾ, ಬೆನಾರಸ್ (ಯು.ಪಿ.)

ಪ್ರಕಟಣೆ.

ಅಡಿಯಲ್ಲಿ ಸಹಿ ಮಾಡಿರುವ ನಾನು ತಿಳಿಯಪಡಿಸುವುದೇನೆಂದರೆ:—

"P. V. S" ಬೀಡಿ ತಯಾರಿಸುವ ಮಂಗಳೂರು ಶ್ರೀ ... ಹಿಯರ್ ಸ್ಟ್ರೀಟಿನಲ್ಲಿರುವ ಪುತ್ತು ವೈಕುಂಟ ಶೆಟ್ಟರ ಹೆಸರಿನ 1427/1933ರ ಪ್ರಕಾರ ರಿಜಿಸ್ಟರಾದ ಟ್ರೇಡ್ ಮಾರ್ಕನ್ನು ... [illegible] ... ಪುತ್ತು ವೈಕುಂಟ ಶೆಟ್ಟರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ... ಕೊಡಗಿನ ಕೆಲವು ಭಾಗಗಳಲ್ಲಿ ಕೆಲವು ವರ್ತಕರು ... ಪುತ್ತು ವೈಕುಂಟ ಶೆಟ್ಟರಿಗೆ ... "P. V. S" ಬೀಡಿಗಳನ್ನು ... ಪುತ್ತು ವೈಕುಂಟ ಶೆಟ್ಟರ "P. V. S" ಬೀಡಿಗಳನ್ನು ... [illegible]

ಐ. ಕೆ. ಸುಬ್ಬಯ್ಯ

ಪುತ್ತು ವೈಕುಂಟ ಶೆಟ್ಟರ ಏಜೆಂಟ್.

2—2 25—10—1935

ಪ್ರಕಟಣೆ.

ನನ್ನ ತಂದೆ, ಬೆಳ್ಳುಮಾಡು ಗ್ರಾಮದಲ್ಲಿರುವ ... [illegible] ... 940 ... 200 ... 4—12—'34—ರಲ್ಲಿ ... 200 ... [illegible]

ಬೆಳ್ಳುಮಾಡು ಗ್ರಾಮ, ... 7—1 ... [illegible]

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟಿಯುಳ್ಳ ಜೋಡಿ ನಳಿಗೆಗಳು.

ಖರೀದಿಸುವ ಹಿವಾರಿ ಸಮಯ ಸ್ಯಾಗಿ.

ASHOO TOSH DAW & CO.,

GUN MAKERS.

"DAW BUILDING" 184, DHARMTALA ST., CALCUTTA.

ಒಮ್ಮೆ ಪರೀಕ್ಷಿಸಿ ನೋಡಿ.] [... [illegible]

... [illegible]

COORG FOREST DEPARTMENT. SOUTH DIVISION.

TIMBER SALE NOTICE.

Mercara, dated 1st November 1935.

For sale by Public auction on 21—11—'35 at Hunsur Depot commencing at 10 A. M approximately 19,400 C ft of Teak, 3,000 C ft of Bili and 2 600 C ft of Honne lying at Hunsur.

The Timber is open for inspection. For further particulars apply to the Divisional Forest Officer, South Coorg Mercara.

1—1

... [illegible]

ಬಿ. ಯಸ್. ... ,

(ಕಮಿಷನರು.)

Best materials

AMAZING VALUE FOR LOW PRICE

HARDWEAR BOOTS & SHOES,

for estate and monsoon a speciality

G. W. FRASER & CO., CALICUT.

12—8

ಪ್ರಶ್ನೋತ್ತರ.

[ಪತ್ರಿಕೆಯಲ್ಲಿ ... [illegible] ... ಸಂ.]

... ತಾ 35—10—'35ನೇ 'ಕೊಡಗು' ಪತ್ರಿಕೆಯಲ್ಲಿ ... 5 ... 58 ... [illegible]

... ಪ್ರಕಟಣೆ.

[illegible]

ಮ್ಯಾನೇಜರ್

"ಕೊಡಗು" ಲಿಮಿಟೆಡ್,

ಮಡಿಕೇರಿ.

ಸೂಚನೆ.

ಈ ಕಳೆದ ಮಹಾಸಭೆಯೂ "ಕೊಡಗು" ಪತ್ರಿಕೆಯ ... [illegible]

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ... ಸೋಮಯ್ಯನವರು.

... —ಮೆ. ... ನವರು.

ಪೊನ್ನಂಪೇಟೆ ... —ಮೆ. ... ಮುತ್ತಣ್ಣಯ್ಯನವರು.

... & ... —ಮೆ. ... ಮಾಚಯ್ಯನವರು.

... —ಮೆ. ... ಪೂಣಚ್ಚಯ್ಯನವರು.

ಸೋಮವಾರಪೇಟೆ—ಮೆ. ... ನವರು.

ನಾಪೋಕ್ಲು—ಮೆ. ... ನವರು.

(ನಾಪೋಕ್ಲು ಸ್ಟೋರ್ಸ್)

ಸೂಚನೆ:— ... [illegible]

ಮ್ಯಾನೇಜರ್,

"ಕೊಡಗು" ಲಿಮಿಟೆಡ್,

ಮಡಿಕೇರಿ.

ನನ್ನ ವಸ್ತ್ರಗಳನ್ನು ಒಗೆಯುವುದು ಈಗ 501 ಸಾಬೂನಿನಿಂದ ಬಹಳ ಬೇಗನೆ ಆಗುತ್ತದೆ.

ಹೌದು, ಅಲ್ಲದೆ ವಸ್ತ್ರಗಳು ... ತುಂಬಾ ... ಬಂದಿದೆ.

ಬೆಳ್ಳ ... , ... ಬಾಳಿ ...

ಜಾಹೀರ್ ... ನ ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 S

ತಯಾರಿಸುವವರು—ಟಾಟಾ ಆಯಿಲ್ ಮಿಲ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

52—17. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ... , ...

ನವೆಂಬರ್ ತಾರೀಕು 3

ಧಾಳಿಯ ಭೂಸಾ ಪ್ರಾರಂಭವಾಯಿತು.

ಮಕೇಲ್ ಕಡೆ ಇಟೆಲಿಯ ಸೈನ್ಯದ ಮುಂದುವರಿಕೆಯು ತಾ. 3ರ ಪ್ರಾತಃಕಾಲ ಪ್ರಾರಂಭವಾಯಿತು. 100,000 ಸೈನಿಕರು ಭಾಗವಹಿಸುತ್ತಾರೆ. ಇವರು ರಾಸ್ ಕಾಸ್ಸನ ಮತ್ತು ರಾಸ್ ಸೆಯೂಮರ ಸೈನ್ಯಗಳನ್ನು ಎದುರುಗೊಳ್ಳುವ ನಿರೀಕ್ಷಣೆಯಲ್ಲಿರುವರು. ಈ ಧಾಳಿಗಾಗಿ 3500 ಲಾರಿಗಳಲ್ಲಿ 10 ಸಾವಿರ ಟನ್ನಿನಷ್ಟು ಯುದ್ಧ ಸಾಮಗ್ರಿಗಳು ಸಾಗಿಸಲ್ಪಟ್ಟಿವೆ. ಇಟಾಲಿಯನರು ಮುಂದುವರಿದಂತೆ ಗ್ರಾಮಗಳು ಅವರಿಗೆ ಸ್ವಾಗತವನ್ನೀಯುತ್ತಿರುವವಂತೆ.

"ಸ್ಯಾಂಕ್ಷನ್" ಗಳ ಜಾರಿ

ಲೀಗ್ ಸಮಿತಿಯವರು ಇಟಲಿಯ ಮೇಲೆ 'ಸ್ಯಾಂಕ್ಷನ್' ಗಳನ್ನು ಜಾರಿಗೆ ತರಲು ನವೆಂಬರ್ ತಾರೀಕು 18ನ್ನು ನಿಶ್ಚಯಿಸಿದರು.

ಇತಿಯೋಪಿಯಕ್ಕೆ ದ್ರವ್ಯ ಸಹಾಯ

ಲೀಗಿನಾ ರಕ್ಷಣೆಯ ಧೋರಣೆಯಿಂದ ತಾವು ಯುದ್ಧ ವಿಚಾರಗಳನ್ನು ಮಾಡಿಲ್ಲವಾದವರಾಗಿ ಈಗ ಇಟಲಿಯ ಧೋರಣೆಯನ್ನು ಎದುರುಗೊಳ್ಳಲು ಯುದ್ಧ ಸಾಮಗ್ರಿಗಳಿಗಾಗಿ ದ್ರವ್ಯ ಸಹಾಯ ಬೇಕಾಗಿದೆಯೆಂದು ಇತಿಯೋಪಿಯ ಸರಕಾರದವರು ಲೀಗಿನವರನ್ನು ಕೇಳಿಕೊಂಡಿರುವರು.

ರಾಜಿಯ ಪ್ರಸಕ್ತಿ.

ಜಿನೀವಾದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಪ್ರತಿನಿಧಿಗಳು ರಾಜಿ ಸಂಧಾನಕ್ಕಾಗಿ ಮಾಡುತ್ತಿರುವ ಪ್ರಯತ್ನಗಳಿಗೆ ಲೀಗಿನವರು ಸಹಾನುಭೂತಿಯನ್ನು ತೋರಿಸಿರುವರು.

ನವಂಬರು ತಾ. 4.

ಇಟೆಲಿಯನರು ಹಾಜೇನನ್ನು ಹಿಡಿದರು

ಇತಿಯೋಪಿಯನರ ಸೈನ್ಯವೊಂದು ಹಾಜೇನಿನಿಂದಲೂ 10 000 ಸೈನ್ಯವು ದಕ್ಷಿಣದಿಂದಲೂ ಮಕೇಲ್ ಕಡೆ ಹೋಗುವುದನ್ನು ಇಟಲಿ ವಿಮಾನಿಕರು ಕಂಡು ಹಿಡಿದರು. ಜನರಲ್ ಬದೋಗ್ಲಿಯೋ ಇಟಲಿ ಸೈನಿಕರು ಮಕೇಲ್ ಪಟ್ಟಣದ ದಾರಿಯಲ್ಲಿರುವ ಹಾಜೇನ್ ಪಟ್ಟಣವನ್ನು ಹಿಡಿದಿರುವರು. ಮಕೇಲಿನ ಸುತ್ತು ಮುತ್ತಲು ಜೋರಾದ ಮಳೆ ಬಿದ್ದು ಇಟಲಿಯನರಿಗೆ ಕಷ್ಟವಾಯಿತು.

ಮಕೇಲ್ ಪಟ್ಟಣದ ರಕ್ಷಣೆ.

ಅಡಿಗ್ರಾಟ್—ಅಡೋವ—ಅಕ್ಸುಂ ಲೈನಿನಿಂದ ಮೂರು ಇಟಾಲಿಯನ್ ಸೈನ್ಯಗಳು ಮಕೇಲ್ ಕಡೆ ಮುಂದುವರಿಯುತ್ತಿವೆ. ಮಕೇಲ್ ಪಟ್ಟಣವನ್ನು ಅಂತ್ಯದ ವರೆಗೆ ಕಾಪಾಡಲು ಇತಿಯೋಪಿಯನರು ನಿಶ್ಚಯಿಸಿರುವರು. ಹಾಜೇನಿನ ದಕ್ಷಿಣದಲ್ಲಿ ರಾಸ್ ಸಿಯೂಮರ ಸೈನ್ಯವು ಇಟಲಿಯನರನ್ನು ಪ್ರಬಲವಾಗಿ ಎದುರುಗೊಳ್ಳುತ್ತಿದೆ. ಟೆಂಬಿಯೆನಲ್ಲಿ ರಾಸ್ ಕಾಸ್ಸರ ಸೈನ್ಯಕ್ಕೂ ಇಟಲಿಯನರಿಗೂ ಬಲವಾದ ಕದನ ನಡೆಯುತ್ತಿದೆ.

ನವಂಬರು ತಾರೀಕು 5.

ಗೋರಹೈಯ ರಕ್ಷಣೆ

ಇಟಲಿಯನರು ಗೋರಹೈ ಪಟ್ಟಣದ ಮೇಲೆ ಬಲವಾದ ಧಾಳಿ ನಡೆಸುತ್ತಿದ್ದರೂ ಇತಿಯೋಪಿಯನರು ಅದನ್ನು ಕಾಪಾಡುತ್ತಿರುವರು.

ಇಟಲಿಯನರು ಆಗುಲದಲ್ಲಿ.

ಮಕೇಲ್ ಪಟ್ಟಣದಿಂದ 15 ಮೈಲು ಉತ್ತರದಲ್ಲಿರುವ ಆಗುಲಕ್ಕೆ ಇಟಲಿಯನರ ಸೈನ್ಯ ತಲುಪಿದೆ. ಸೈನಿಕರು ಮಳೆಯಲ್ಲಿ ಪೂರಾ ಒದ್ದೆಯಾಗಿಯೂ ನಡೆದರು. ಇಲ್ಲಿಯೇ ಇಟಲಿ ಸೈನ್ಯಗಳೆಲ್ಲ ಜೊತೆಗೂಡುವವು.

ಇಟಲಿಯ ವರಿಗೆ ಸ್ವಾಗತ

ದೊಂಗೋಲೋದಲ್ಲಿ ಗ್ರಾಮ ವಾಸಿಗಳು ಇಟಲಿ ಸೈನಿಕರಿಗೆ ಸ್ವಾಗತವನ್ನೀಯುತ್ತಿದ್ದು, ಅಲ್ಲಿನ ಸುಲ್ತಾನರು ನೀಗಸ್ ರ ಹುಕುಮನ್ನು ಉಲ್ಲಂಘಿಸಿ ಮುಂದೆ, ಆ ಕಡೆಯ ಎಲ್ಲಾ ದಾರಿ ಜನರು ಇಟಲಿಯ ಸೈನ್ಯಕ್ಕೆ ಸೇರುತ್ತಿರುವರೆಂದೂ ಇಟಲಿಯವರ ವರ್ತಮಾನ

ಮುಂದಿನ ವರ್ಷ ಬಹಿಷ್ಕಾರ

ಓಟೀವಾ—ಇತಿಯೋಪ್ಯದ ... ... ಲ್ಲಿ ಇಟಲಿಯವರಿಗೆ ಅಯವಾಗುವುದರಿಂದ ಈಗ ... ಮಾಡುವುದನ್ನು ನಿಲ್ಲಿಸಿ, ದಸ್ತು ಕೆಲಸ ಪ್ರಾರಂಭ ... ಇಟಲಿ ಸರಕಾರದ ಪ್ರಕಟಣೆ

ರಾಸ್ ಗುಗ್ಸಾರವರ ಕತೆ ಮುಗಿದ ಕೊಲೆಯಾಗಲಿಲ್ಲ.

'ಹೇರ ವಿಕ್ಟೋರಿಯೂಡ' ರಾಸ್ ಗುಗ್ಸಾರವರ ಸೇನಾನಿಂದ ಮತ್ತು ಅವರ ಕೊಲೆಯಾಯಿತೆಂಬ ವಾರ್ತೆ ನಿಜವಲ್ಲವೆಂತಲೂ, ಇಟಲಿ ಸೈನ್ಯವು ಮಕೇಲನ್ನು ಶೀಘ್ರವಾಗಿ ಹಿಡಿಯಲಿದೆಯೆಂತಲೂ ಇಟಲಿಯವರ ವರ್ತಮಾನ.

ನೀಗಸರ ಕೊಲೆ ಯತ್ನವೇ?

ಅಡ್ಡಿಸ್ ಅಬಾಬದಲ್ಲಿ ನೀಗಸರ ಅರಮನೆಯಲ್ಲಿ ಒಂದು ಬಾಂಬು ಇಟ್ಟು, ನೀಗಸರನ್ನು ಕೊಲ್ಲಲು ಮಾಡಿದ ಯತ್ನ ಸಫಲವಾಗಲಿಲ್ಲವೆಂದೂ, ಇದರ ಸಂಬಂಧ ಒಬ್ಬ ಅಮೇರಿಕನ್ ನೀಗ್ರೊನನ್ನು ದಸ್ತಗಿರಿ ಮಾಡಲು ಹುಕುಂ ಆಗಿದೆಯೆಂದೂ ಇಟಲಿಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಇದು ಪೂರಾ ಸುಳ್ಳು ವರ್ತಮಾನವೆಂದು ಲಂಡನ್ನಿನಲ್ಲಿರುವ ಇತಿಯೋಪಿಯನ್ ರಾಯಭಾರಿಯು ಹೇಳಿದರು.

ಒಳದೇಶ.

ಅಖಿಲ ಭಾರತ ಎಕ್ಸ್ ಸರ್ವಿಸ್ ಮೆನ್ ಲೀಗಿನ ಕಮಿಟಿಯ ಮೀಟಿಂಗೊಂದು ಈ ತಾ 4ರಲ್ಲಿ ಮಡಿಕೇರಿಯಲ್ಲಿ ನಡೆಯಿತು.

ಈ ವಾರ ಮಡಿಕೇರಿ ಗ್ಯಾರಿಸನ್ ನಲ್ಲಿ ಒಬ್ಬನಿಗೆ ಹೊಸದಾಗಿ ಪ್ಲೇಗು ತಾಗಿದೆಯೆಂದು ತಿಳಿಯುತ್ತದೆ.

ಮ. ಸಿ. ವಿ. ನಾರಾಯಣನವರು ಬಿ ಎ., ಪರೀಕ್ಷೆಯಲ್ಲಿ ತೇರ್ಗಡೆಯಾದುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಕಳೆದ ಸೆಪ್ಟಂಬರು ತಿಂಗಳಲ್ಲಿ ಕೊಡಗಿನಲ್ಲಿ 343 ಜನನಗಳೂ, 365 ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

1935ನೇ ಆಗಸ್ಟ್ ತಿಂಗಳ ಅಂತ್ಯದಲ್ಲಿ ಕೊಡಗು ಸರಕಾರದ ಖರ್ಚು ಆದಾಯಕ್ಕಿಂತ 1 ಲಕ್ಷ 58 ಸಾವಿರ ರೂಪಾಯಿ ಹೆಚ್ಚಾಗಿತ್ತು.

ಪೊನ್ನಂಪೇಟೆಯ ಸಿಗ್ನಾಗುರ್ ಸೇವಾಲಯದ ದರ್ಶನೋತ್ಸವವು ಈ ತಾ 12 ರಿಂದ 17ರ ವರೆಗೂ, ದನಗಳ ಪ್ರದರ್ಶನವು ಈ ತಾ. 14 ರಿಂದ 16 ರ ವರೆಗೂ ನಡೆಯುವವು.

ಕಡಗದಾಳು ಗ್ರಾಮದ ... ಶ್ರೀ ... ದ ... ರವರು ಈ ತಾ 5ರಲ್ಲಿ ತೀರಿಹೋದರೆಂದು ತಿಳಿಸಲು ವ್ಯಸನಪಡುತ್ತೇವೆ.

ಮಡಿಕೇರಿಯ ... ಕೋರ್ಟ್ ಹಾಲ್ ... ಒಂದು ಟೀಪಾರ್ಟಿ ... ಈ ತಾ 3ರಲ್ಲಿ ... ಹಾಲಿನಲ್ಲಿ ನಡೆಸಿದರೆಂದು ತಿಳಿಯುತ್ತೇವೆ.

ಕೊಡಗು ಕಾಂಗ್ರೆಸ್ಸು ಕಮಿಟಿಯ ... ಜನರಲ್ ಮೀಟಿಂಗು ಈ ತಾ 23ರಲ್ಲಿ ಮಧ್ಯಾಹ್ನ 2 ಗಂಟೆಗೆ ವಿರಾಜಪೇಟೆಯಲ್ಲಿ ನಡೆಯಲಿಕ್ಕಿದೆ.

'ಕೊಡಗು' ಲಿಮಿಟೆಡ್ ಕಂಪೆನಿ ಯ ಶೇರುದಾರರ ವಾರ್ಷಿಕ ಜನರಲ್ ಮೀಟಿಂಗು ಈ ತಾ 23 ನೇ ಶನಿವಾರ ಬೆಳಗ್ಗೆ 11 ಗಂಟೆಗೆ ವಿರಾಜಪೇಟೆಯಲ್ಲಿ ನಡೆಯುವುದು. ಇದರ ನೋಟೀಸು ಇದರಲ್ಲೊಂದು ಕಡೆ ಕೊಡಲಾಗಿದೆ.

ವಿಶ್ವವಿದ್ಯಾಲಯದ ... ಪರೀಕ್ಷೆಯಲ್ಲಿ 18 ಜನರಿಗೆ ಪ್ಲೇಗು ತಗಲಿದರಲ್ಲಿ 8 ಮರಣಗಳುಂಟಾದವೆಂದೂ, ಪೊಂಟಿಕೊಪ್ಪದ ಸುತ್ತುಮುತ್ತಲು 18 ಜನರಿಗೆ ತಾಗಿದರಲ್ಲಿ 3 ಮರಣಗಳುಂಟಾದವೆಂದೂ ವರ್ತಮಾನ.

ಮ ರಾ. ಪನೇಟ್ಟಿರ ... ನಾಣಯ್ಯನವರು ಕಳೆದ ಬಿ. ಎ. ಪರೀಕ್ಷೆಯಲ್ಲಿ ಸಂಪೂರ್ಣವಾಗಿ ಪಾಸಾಗಿರುವರೆಂದು ತಿಳಿಯುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಸಾಲ ನಿವಾರಣೆ ಬೋರ್ಡಿನ ಮೀಟಿಂಗುಗಳು ಈ ತಾ. 12ರಲ್ಲಿ ಮೂರ್ನಾಡಿನಲ್ಲಿಯೂ, ತಾ. 18ರಲ್ಲಿ ಕಂಬಳಿಗೆರೆಯಲ್ಲಿಯೂ ನಡೆಯುವವು.

ಕೊಡಗು ಹರಿಜನ ಸೇವಾ ಸಂಘದ ಆಶ್ರಯದಲ್ಲಿ ಹರಿಜನ ಹುಡುಗರಿಗೆ ಹೊಲಿಗೆ ಕೆಲಸ ಕಲಿಸಲು ಮ ರಾ ಪೊನ್ನಿಮಾಡ ಮಾಚಯ್ಯನವರು ಗೋಣಿಕೊಪ್ಪಲಲ್ಲಿ ದರ್ಜಿ ತರಬೇತು ಶಾಲೆಯನ್ನು ಪ್ರಾರಂಭಿಸಿರುವರು.

ಮಡಿಕೇರಿಯಲ್ಲಿ ಬಹು ವರ್ಷಗಳಿಂದ ವ್ಯಾಪಾರ ಮಾಡಿಕೊಂಡಿದ್ದ ಮ. ಗಿರ್ಧಾರಿಲಾಲ್ ರವರು ಈ ತಾ. 6 ರಲ್ಲಿ ಅವರ ಹುಟ್ಟು ಊರಾದ ಕಟ್ಯಾವಾಡಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಬರುತ್ತದೆ.

ಕೊಡಗಿನಲ್ಲಿ ಕ್ರೈಸ್ತರ ಮದುವೆಗಳನ್ನು ರಜಿಸ್ಟರ್ ಮಾಡಲು ಚೀಫ್ ಕಮಿಶನರವರು ಕೊಡಗಿನ ಎಸಿಸ್ಟೆಂಟ್ ಸರ್ಜನರಾದ ಕ್ಯಾಪ್ಟನ್ ಆರ್ ಡಿ. ಮೆಕ್ಕೆಯವರನ್ನು ರಜಿಸ್ಟ್ರಾರಾಗಿ ನೇಮಿಸಿರುವರು.

ಪೊನ್ನಂಪೇಟೆ ನಾಡಾಫೀಸಿನ ಮ ಪಿ ಎಸ್ ಈರಪ್ಪನವರು, ಕಮಿಶನರ್ ಆಫೀಸಿನ ಮ ಕೆ ಪಿ ಸೋಮಪ್ಪನವರು ಮತ್ತು ಮ. ಕೆ. ಎಂ ಅಪ್ಪಣ್ಣಯ್ಯನವರು ಕೊಡಗು ರಜಿಸ್ಟ್ರೇಶನ್ ಟೆಸ್ಟ್ ಪರೀಕ್ಷೆಯಲ್ಲಿ ಪಾಸಾಗಿರುವರು.

ಈ ತಾ 1ರಲ್ಲಿ ಶ್ರೀಮಂಗಲದ ಆಫೀಶ್ಯಲ್ ಕ್ಲಬ್ಬಿನವರು ಸಭೆ ಸೇರಿ, ಅಲ್ಲಿಯ ಸಬ್ ಅಸಿಸ್ಟೆಂಟ್ ಸರ್ಜನ್ ಮೆಯನ್ ಬಿ ಸುಬ್ಬರಾಯನವರ ಅಕಾಲ ಮರಣಕ್ಕೆ ಸಂತಾಪ ಸೂಚಕವಾದ ಠರಾವನ್ನು ಮಾಡಿದರು.

ಎಸ್. ಹೆಚ್. ಆರ್. ಯೂನಿಯನಿನ ಆಶ್ರಯದಲ್ಲಿ 'ಕೊಡಗು ಅಭಿವೃದ್ಧಿಗೊಳ್ಳುತ್ತಿದೆಯೇ' ಎಂಬುದನ್ನು ಕುರಿತು ಈ ತಾ 10ರಲ್ಲಿ ಮಧ್ಯಾಹ್ನ 2 ಗಂಟೆಗೆ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ಒಂದು ಚಿಕ್ಕ 'ಡಿಬೇಟ್' ನಡೆಯುವುದು.

ಜನ್ಮ ವಾಗ್ಯರಿ ರಯತುಗಳು ಭೂಮಿಗಳನ್ನು ಕಮಿಶನರವರ ಅನುಮತಿಯಿಂದ ಇಷ್ಟರವರೆಗೆ ಇದ್ದಂತೆ 7 ವರ್ಷಗಳ ಬದಲು 15 ವರ್ಷಗಳ ವರೆಗೆ ಭೋಗ್ಯಕ್ಕೆ ಕೊಡಬಹುದೆಂದು ರೆವಿನ್ಯೂ ಮ್ಯಾನ್ಯುವಲಿನ ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗಿದೆ.

ಲೋಕಲ್ ಬೋರ್ಡಿನ ಗಳ ಪೈಕಿ ಅಧ್ಯಕ್ಷರಾದ ಇನ್ಸೂರೆನ್ಸು ಕೆಲಸ ಮಾಡುವುದಕ್ಕಾಗಿ ದಕ್ಷಿಣ ಇಂಡಿಯಾ ಕೋಆಪರೇಟಿವ್ ಇನ್ಸೂರೆನ್ಸು ಕಂಪೆನಿ ಏಜಂಟ ಕೊಡಗ ಲೋಕಲ್ ಬೋರ್ಡಿನವರಿಗೆ ಒಂದು 'ಶೀಲ್ಡ್' ನ್ನು ಬಹುಮಾನವಾಗಿ ಕೊಡಲು ನಿಶ್ಚಯಿಸಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ.

ಕೊಡಗಿನ ಚೀಫ್ ಕಮಿಶನರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಸಿ ಟಿ ಸಿ. ಪ್ಲೌಡನ್ ರವರು ಈ ತಾ 6 ರಲ್ಲಿ ಹೊಸ ಚೀಫ್ ಕಮಿಶನರಾದ ಮ. ಎಲ್ ಜಿ ಎಲ್ ಇವಾನ್ಸರವರಿಗೆ ಬೆಂಗಳೂರಿನಲ್ಲಿ ಚಾರ್ಜು ಕೊಟ್ಟು ಆರು ತಿಂಗಳು ರಜೆಯಲ್ಲಿ ಇಂಗ್ಲೆಂಡಿಗೆ ಹೊರಟು ಹೋದರೆಂದು ತಿಳಿಯುತ್ತದೆ.

ಈ ತಾ. 18 ರಲ್ಲಿ ವಿರಾಜಪೇಟೆಯಲ್ಲಿ ನಡೆಯುವ ಅಖಿಲ ಕೊಡಗು ಕಾಂಗ್ರೆಸ್ ಸಮಿತಿಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಮೈಸೂರಿನ ಮಹಾತ್ಮ ... ಬೆಂಗಳೂರಿನ ಪ್ರಿನ್ಸಿಪಾಲರಾದ ಮ. ಟಿ. ಸಿ. ಕೋಲೆತಿರವರು ಒಪ್ಪಿರುವರೆಂದಾಗಿ ತಿಳಿಯಬರುತ್ತದೆ.

ಮಡಿಕೇರಿ—ಸಿದ್ದಾಪುರ ರಸ್ತೆಯ 8ನೇ ಮೈಲು ಬಳಿ ಅಂಗಡಿ ಇಟ್ಟುಕೊಂಡಿದ್ದ ಒಬ್ಬ ಸ್ತ್ರೀಯನ್ನು ಈ ತಾ 5ನೇ ಮಂಗಳವಾರ ಸಾಯಂಕಾಲ ರಸ್ತೆಯಲ್ಲಿ ಯಾರೋ ಕಲ್ಲು ಕಾಲ ಕತ್ತಿಯಿಂದ ಕಡಿದರೆಂದೂ ಅವಳು ತನ್ನ ಮನೆಗೆ ಓಡಿ ಬಂದ ಕೂಡಲೇ ಮೃತಪಟ್ಟಳೆಂದೂ, ಪೋಲೀಸಿನವರು ಕೊಲೆಗಾರನಿಗೆ ಹುಡುಕುತ್ತಿರುವರೆಂದೂ ವರ್ತಮಾನ.

ಈ ತಾ. 3 ರಲ್ಲಿ ಮದ್ರಾಸಿನಲ್ಲಿ ನಡೆದ ದಕ್ಷಿಣ ಇಂಡಿಯಾ ಕೋಆಪರೇಟಿವ್ ಇನ್ಸೂರೆನ್ಸ್ ಕಂಪೆನಿಯ ವಾರ್ಷಿಕ ಜನರಲ್ ಮೀಟಿಂಗಿಗೆ ಆ ಕಂಪೆನಿಯ ಕೊಡಗು ಲೋಕಲ್ ಬೋರ್ಡಿನ ಪರ ಹೋಗಿದ್ದ ಮ ರಾ ಮನೆಯಪಂಡ ಬೆಳ್ಯಪ್ಪನವರು ಆ ಕಂಪೆನಿಯ ಒಬ್ಬ ಡೈರೆಕ್ಟರಾಗಿ ಆರಿಸಲ್ಪಟ್ಟಿರುವರು.

ಎಮಿಸ್ಟಿಕ್ ಆರ್ಮಿಸ್ಟಿಸ್ ದಿನವನ್ನು ಈ ತಾ 11ರಲ್ಲಿ ಕೊಡಗಿನ ಎಲ್ಲಾ ಕಡೆಗಳಲ್ಲಿ ಆಚರಿಸಲಾಗುವದೆಂತಲೂ, ಪೊಲೀಸ್ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರು ಆ ದಿನ 11 ಗಂಟೆಗೆ 2 ಮಿನಿಟುಗಳ ವರೆಗೆ ಪೇಟೆಯಲ್ಲಿ ವ್ಯಾಪಾರಗಳನ್ನೆಲ್ಲಾ ನಿಲ್ಲಿಸಬೇಕೆಂದೂ, ಪಬ್ಲಿಕ್ ಆಫೀಸುಗಳೆಲ್ಲಾ 12—30 ಗಂಟೆಯ ವರೆಗೆ ಮುಚ್ಚಲ್ಪಡುವವೆಂದೂ ತಿಳಿಸಿರುವರು.

'ಸಹಕಾರಿ ದಿನ.'

ಹಿಂದೂ ದೇಶದ ಬೇರೆ ಕಡೆಗಳಲ್ಲಿ ಆಚರಿಸಿದಂತೆಯೇ ಕೊಡಗಿನಲ್ಲಿಯೂ 'ಸಹಕಾರಿ ದಿನ'ವು ಈ ತಾ 2ರಲ್ಲಿ ಆಚರಿಸಲ್ಪಟ್ಟಿತು. ಅವುಗಳ ವಿವರವನ್ನೆಲ್ಲಾ ಕೊಡಲು ಸ್ಥಳ ಸಾಲದ್ದರಿಂದ ಅವುಗಳ ಸಾರಾಂಶ ಮಾತ್ರ ಇಲ್ಲಿ ಪ್ರಕಟಿಸುತ್ತೇವೆ

ನಾಪೋಕ್ಲು

ನಾಪೋಕ್ಲು ಯೂನಿಯನ್ನಿನ ಕೆಲವರು ಈ ತಾ. 2ರಲ್ಲಿ ಅಖಿಲ ಭಾರತ ಸಹಕಾರ ದಿನವನ್ನು ಮ ರಾ ಚೇಂದ್ರಿಮಾಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆಸಿದರು. ಸುಮಾರು 120 ಜನರು ಸೇರಿದ್ದರು. ಅಲ್ಲಿಯ ಶಾಲಾ ವಿದ್ಯಾರ್ಥಿಗಳಿಗೆ ಆಟೋಟಗಳೂ, ತಿಂಡಿ ತೀರ್ಥಗಳೂ ನಡೆದುವು.

ಪೊನ್ನಂಪೇಟೆ.

ಪೊನ್ನಂಪೇಟೆ ಯೂನಿಯನ್ನಿನವರು ತಾ 2ರಲ್ಲಿ ಸಹಕಾರಿ ದಿನಾಚರಣೆಗೆ ಪೊನ್ನಂಪೇಟೆಯಲ್ಲಿ ಮ. ರಾ. ಕೇಳಪಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಸುಮಾರು 80ಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಕೆಲವರು ಭಾಷಣಗಳನ್ನು ಮಾಡಿದನಂತರ ತಿಂಡಿ ತೀರ್ಥ ಹಂಚಲ್ಪಟ್ಟಿತು

ಅಮ್ಮತ್ತಿ.

ಅಮ್ಮತ್ತಿ ನಾಡು ಯೂನಿಯನ್ನಿನವರು ತಾ 2ರಲ್ಲಿ ಸಹಕಾರಿ ದಿನವನ್ನು ಅಮ್ಮತ್ತಿಯಲ್ಲಿ ಆಚರಿಸಿದರು ಮ ರಾ. ಕೊಕಂಡ ಪೂವಯ್ಯನವರು ಅಧ್ಯಕ್ಷರಾಗಿದ್ದರು

ಮೂರ್ನಾಡು

ಸಹಕಾರಿ ದಿನಾಚರಣೆಗಾಗಿ ತಾ. 2ರಲ್ಲಿ ಮೂರ್ನಾಡು ಯೂನಿಯನ್ನಿನ ಆಶ್ರಯದಲ್ಲಿ ಮೂರ್ನಾಡಿನಲ್ಲಿ ಮ ರಾ. ಪಾಂಡಂಡ ಬೋಪಣ್ಣನವರ ಅಧ್ಯಕ್ಷತೆಯಲ್ಲಿ ಪಬ್ಲಿಕ್ ಸಭೆ ಸೇರಿತು. ಭಾಷಣಗಳೂ, ಠರಾವುಗಳೂ ಆದ ಮೇಲೆ ತಿಂಡಿ ತೀರ್ಥದಿಂದ ಮೀಟಿಂಗು ಅಂತ್ಯವಾಯಿತು.

ವಿರಾಜಪೇಟೆ.

ವಿರಾಜಪೇಟೆನಾಡು ಯೂನಿಯನ್ನಿನವರು ಅಖಿಲ ಭಾರತ ಸಹಕಾರಿ ದಿನವನ್ನು ತಾ 2ರಲ್ಲಿ ವಿರಾಜಪೇಟೆಯಲ್ಲಿ ಆಚರಿಸಿದರು. ಈ ಬಗ್ಗೆ ಅಲ್ಲಿಯ ಮುನ್ಸಿಪಲ್ ಹಾಲ್ ನಲ್ಲಿ ಮ. ರಾ. ಸಿ. ಪಿ. ಕನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಲವರ ಭಾಷಣಗಳಾದ ಮೇಲೆ ಕೆಲವು ಠರಾವುಗಳು ಮಂಜೂರು ಮಾಡಲ್ಪಟ್ಟವು.

ನೋಟೀಸು.

1935ನೇ ಇಸವಿ ನವಂಬರು ತಾರೀಕು 23ನೇ ಶನಿವಾರ ದಿನ ಬೆಳಗ್ಗೆ 11 ಗಂಟೆಗೆ ವಿರಾಜಪೇಟೆಯಲ್ಲಿ ಬಂಗಾಳ ಬೀದಿಯಲ್ಲಿರುವ ಅಂಜುಮನ್ ಹಾಲ್ ನಲ್ಲಿ ಶೇರುದಾರರ ಮಹಾ ಸಭೆಯು (ಜನರಲ್ ಮೀಟಿಂಗ್) ಸೇರುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಕಾರ್ಯಗಳು ನಡೆಯುತ್ತವೆ

1. 1934—35ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಮತ್ತು ಆಡಿಟರರ ರಿಪೋರ್ಟನ್ನೂ ಸಭೆಯ ಮುಂದೆ ಇಡುವುದು

2 1929—1930, 1930—1931 ಮತ್ತು 1931—1932 ಈ ಮೂರು ವರ್ಷಗಳಲ್ಲಿ ನಷ್ಟವಾಗಿದೆ ಎಂಬ ... ಬಾಬ ದಾರಿ ಮಾಡುವ ವಿಷಯ.

3 ಆಡಿಟರನ್ನು ನೇಮಿಸುವಿಕೆ.

4 1934—35ನೇ ವರ್ಷಕ್ಕೆ ಆಡಿಟರರಿಗೆ ಕೊಡತಕ್ಕದ ಫೀಸು ನಿಶ್ಚಯ ಮಾಡುವಿಕೆ.

5 ಕೆಲಸದಿಂದ ನಿವೃತ್ತರಾಗುವ ಡೈರೆಕ್ಟರುಗಳ ಬದಲಿಗೆ ಬೇರೆಯವರ ಚುನಾವಣೆ.

'ಕೊಡಗು' ಲಿಮಿಟೆಡ್, ಮಡಿಕೇರಿ, 4—11—35 } ಸಿ. ಎಂ. ಪೂಣಚ್ಚಪ್ಪಯ್ಯ (ಕಾರ್ಯದರ್ಶಿಗಳು)

ಇಟಲಿ-ಅಬಿಸೀನಿಯಾ ಯುದ್ಧ.

ವಾಲ್ ವಾಲ್‌ನಲ್ಲಿ ಯುದ್ಧ—3500 ಮಂದಿ ಅಬಿಸೀನಿಯರು ಮಡಿದರು.

ವರ್ತಕರಿಂದ 6000 ಪೌಂಡು ಮೌಲ್ಯದ ದಾನ.

ರಾಸ್ ಕಾಸ್ಸರವರ ಚತುರೋಪಾಯ.

ಶಿಲ್ಲಾವೆ ಇಟಲಿಯವರ ಕೈವಶವಾಯಿತು—ಗೋರಾಹೈಯ ಮೇಲೆ ಕಣ್ಣಿಟ್ಟಿರುವರು.

ಮಹಾ ಕದನದ ಸಂಭವ.

ಕೌಂಟ್ ವಿನ್ಸಿಯವರ ಉಪಾಯವು ಹೊರಬಿತ್ತು.

ಇಟಲಿಯವರು ಮಕೇಲ ಕಡೆ ಮುಂದುವರಿದರು—ಗೋರಹೈಯ ರಕ್ಷಣೆ.

ರಾಸ್ ನಾಸಿಬುರವರ ಮುಂದಾಲೋಚನೆ.

ಹಾಜೀನು ಇಟಲಿಯವರ ಕೈವಶವಾಯಿತು.

ಮಕೇಲವನ್ನು ಇಥಿಯೋಪಿಯನರು ಕಾಪಾಡುತ್ತಿರುವರು.

ಇಟಲಿಯು ಮುಂದುವರಿಯುವುದನ್ನು ನಿಲ್ಲಿಸಿದೆ—ಕೈವಶವಾದ ಸ್ಥಳಗಳನ್ನು ಭದ್ರಪಡಿಸುತ್ತಿರುವರು

ಗೋರಹೈಯ ಮೇಲೆ ಧಾಳಿ—ನೇಗಸರ ಕೊಲೆಯ ಪ್ರಯತ್ನ?

ಅಕ್ಟೋಬರ್ ತಾ. 30.

ಶಿಲ್ಲಾವೆಯು ಕೈವಶವಾಯಿತು

ಇಟಲಿಯ ಸೈನಿಕರು ಶಿಲ್ಲಾವೆಯೆಂಬ ಕೋಟೆಯನ್ನು ಕೈವಶಪಡಿಸಿಕೊಂಡಿರುವರು. ಅಬಿಸೀನಿಯನರು ಗೋರಾಹೈಗೆ ಓಡಿದರೆಂದು ತಿಳಿದುಬಂದಿದೆ.

ರಾಸ್ ಕಾಸ್ಸರವರ ಸಿದ್ಧತೆ

ರಾಸ್ ಕಾಸ್ಸರವರು ಇಟಲಿಯವರನ್ನು ಸುತ್ತು ಹಾಕಿ ಅವರ ಮೇಲೆ ಬೀಳುವ ಚತುರೋಪಾಯವನ್ನು ಮಾಡುತ್ತಲಿರುವರು. ಈ ಮುಖ್ಯಗಿರಿ ಬೇಕಾದ ಗುಂಡು ಸಾಮಾನುಗಳು, ಕಿಂಡಿಚೀಲಗಳು, ಮತ್ತು ನೀರು ಯಥೇಷ್ಟವಾಗಿ ಸಂಗ್ರಹಿಸಿ ಸಿದ್ಧಪಡಿಸಿರುವರು. ಇವರ ಸಹಾಯಕ್ಕಾಗಿ ಡೆಜ್ಜಮಾಚ್ ಬರು ಎಂಬುವರು ಅಗಲೇ 40,000 ಹೊಸ ಸೈನಿಕರನ್ನು ಸೇರಿಸಿರುವರು.

ವರ್ತಕರಿಂದ 6000 ಪವುಂಡು ಯುದ್ಧ ನಿಧಿಗಾಗಿ.

ಅಬಿಸೀನಿಯಾದ ನಾನಾ ಕಡೆಗಳ ಸುಮಾರು 100 ವರ್ತಕರು ಚಕ್ರವರ್ತಿಯವರನ್ನು ಭೇಟಿಯಾದರು. ಅವರ ಚಕ್ರವರ್ತಿಗಳಿಗೆ 6000 ಪವುಂಡುಗಳ ಮೌಲ್ಯದ ಧನ ಸಹಾಯ ಮಾಡಿ ಯುದ್ಧ ಸಾಮಗ್ರಿಗಳಿಗಾಗಿ ಈ ಅಲ್ಪ ಧನವನ್ನು ಸ್ವೀಕರಿಸಬೇಕೆಂದೂ, ಇನ್ನೂ ಹಣ ಸಂಗ್ರಹಿಸಿ ತರುವುದಾಗಿಯೂ ಬಿನ್ನೈಸಿದರು. ಚಕ್ರವರ್ತಿಗಳು ಅವರ ಉದಾರ ಚಿತ್ತಕ್ಕೆ ಸಂತೋಷಪಟ್ಟು 'ನಾವು ಎಂದೂ ಇಟಲಿಯವರ ಅಧೀನಕ್ಕೊಳಗಾಗುವುದಿಲ್ಲ'ವೆಂದು ಉತ್ಸಾಹಪೂರ್ವಕವಾಗಿ ನುಡಿದರು.

ಭಾರತೀಯರು ಹೊರಟರು.

ಅಬಿಸೀನಿಯಾದಲ್ಲಿದ್ದ 120 ಭಾರತೀಯರು ಹಿಂದೂದೇಶಕ್ಕೆ ಹೊರಟಿರುವರು.

ಅಬಿಸೀನಿಯಾಕ್ಕೆ ಬ್ರಿಟಿಷ್ ವೈಮಾನಿಕರು.

ಲೆಫ್ಟಿನೆಂಟ್ ಕೆಚ್. ಯಂ. ಡಿ. ವೆಟ್ ಎಂಬ ರಿಟೈರ್ಡ್ ಬ್ರಿಟಿಷ್ ವೈಮಾನಿಕರು, ಅಬಿಸೀನಿಯಾ ವಿಮಾನ ಪಡೆಯ ಓವರ್ ಮೈಮಾನಿಕರಾಗಿ ಸೇರಿಸಲ್ಪಟ್ಟಿರುವರೆಂದು ಅಡ್ಡಿಸ್ ಅಬಾಬದಲ್ಲಿ ಪ್ರಕಟವಾಗಿದೆ.

ಅಕ್ಟೋಬರು ತಾ. 31.

3500 ಮಂದಿ ಹತರಾದರು!

ಒಗಾಡೆನ್ ಪ್ರಾಂತ್ಯದ ವಾಲ್ ವಾಲ್‌ನ ಸುತ್ತಲೂ ಘೋರವಾದ ಯುದ್ಧವು ಸಂಭವಿಸಿತು. ಅಬಿಸೀನಿಯರು ಅಪೂರ್ವ ಸಾಹಸವನ್ನು ಪ್ರದರ್ಶಿಸಿದಾಗ್ಯೂ 3500 ಮಂದಿ ರಣರಂಗದಲ್ಲಿ ಮಡಿದರು. ಅವರ ನಾಯಕನಾದ ಡೆಜ್ಜಾಚ್ ಎಂಬುವನೂ ಹತನಾದನು.

ಚಕ್ರವರ್ತಿಯವರು ಡೆಸ್ಸಿಗೆ ಹೋಗುವರು.

ಚಕ್ರವರ್ತಿಯವರು ಶೀಘ್ರದಲ್ಲೇ ರಾಜಧಾನಿಯಾದ ಅಡ್ಡಿಸ್ ಅಬಾಬದಿಂದ ಡೆಸ್ಸಿ ಎಂಬಲ್ಲಿಗೆ ಹೋಗುವರೆಂದು ತಿಳಿದು ಸಹಸ್ರಾರು ಗ್ರಾಮವಾಸಿಗಳು ಅಲ್ಲಿಗೆ ರಾಜನನ್ನು ಹಿಂಬಾಲಿಸಿ ಹೊರಟಿರುವರು. ಅನೇಕ ಸರಕಾರಿ ಅಧಿಕಾರಿಗಳು ತಮ್ಮ ಸಾಮಾನುಗಳನ್ನು ಇತರ ಅಧಿಕಾರಿಗಳಿಗೊಪ್ಪಿಸಿ ರಣರಂಗಕ್ಕೆ ಹೊರಟಿರುವರು.

ಇಟಲಿಯವರಿಗೆ ಉಪದ್ರ.

ಮಕ್ಕಲಿ ಪ್ರದೇಶದ ದಕ್ಷಿಣದಲ್ಲಿ ಗ್ರಾಮವಾಸಿಗಳು ಇಟಲಿಯವರಿಗೆ ಆಗಾಗ್ಗೆ ಉಪದ್ರ ಕೊಡುತ್ತಲಿರುವರು. ಸ್ವಲ್ಪ ರಾತ್ರಿಯೂ ಅವರ ಮೇಲೆ ಬಿದ್ದು ಅವರಿಗೆ ಕಷ್ಟಕೊಡುತ್ತಿರುವರು. ಡಿಜ್ಜ ಎಂಬಲ್ಲಿ ಇಟಲಿಯವರ ಆಹಾರ ಸಾಮಗ್ರಿಗಳನ್ನು ಸಾಗಿಸುವ ಒಂದು ದಳದ ಮೇಲೆ ಅಬಿಸೀನಿಯಾ ದೇಶದ ಜನರು ಬಿದ್ದು 15 ಮಂದಿಯನ್ನು ಕೊಂದು 25 ಒಂಟೆಗಳನ್ನು ಸ್ವಾಧೀನಪಡಿಸಿಕೊಂಡಿರುವರು.

ಇಟಲಿಯವರ ಸನ್ನಾಹ.

ಇಟಲಿಯವರು ಮಕೇಲ್ ಕಡೆ ತಮ್ಮ ಗುರಿಯನ್ನಿಟ್ಟು ಮುಂದೆ ಸಾಗುತ್ತಲಿರುವರು. ದಕ್ಷಿಣದಲ್ಲಿ ಶಿಲ್ಲಾವೆಯನ್ನು ಕೈವಶಮಾಡಿಕೊಂಡ ಇಟಲಿಯ ಸೈನಿಕರು ಗೋರಾಹೈಯ ಕಡೆ ಸಾಗುತ್ತಲಿರುವರು. ಒಂದು ದೊಡ್ಡ ಯುದ್ಧದ ವರ್ತಮಾನ ಎಂದ ಕಡೆಯಿಂದಲೂ ಬರುತ್ತಿದೆ.

ನವಂಬರು ತಾ. 1.

ಮೊಗಾದಿಷೋದಲ್ಲಿ ಗುಟ್ಟು.

ಇಟಾಲಿಯನ್ ಸೋಮಾಲಿಲ್ಯಾಂಡಿನ ಮೊಗಾದಿಷೋಕ್ಕೆ ಇಟಲಿಯ ಹಡಗುಗಳನ್ನು ಬಿಟ್ಟು ಪರದೇಶಗಳ ಹಡಗುಗಳನ್ನಾಗಲೀ ಪರದೇಶೀ ಪಿರನಿಗಳಿಗಾಗಲೀ ಹೋಗಗೊಡುವುದಿಲ್ಲ. ಅಲ್ಲಿಯ ವಿಶೇಷ ಗುಟ್ಟಾದ ವಿಷಯ ನಡೆಯುತ್ತಿರುವುದೇ ಕಾರಣ. ಇಲ್ಲಿಗೆ ಇಟಲಿಯಿಂದಲೂ, ಇರಿಟ್ರಿಯಾದಿಂದಲೂ ಯುದ್ಧ ಸಾಮಗ್ರಿಗಳೂ, ಸೈನ್ಯಗಳೂ ಬರುತ್ತಿವೆ.

ಇಟಲಿಯವರಿಗೆ ಮಳೆಯ ಆತಂಕ.

ಒಗಾಡೆನ್ ಪ್ರಾಂತ್ಯದಲ್ಲಿ ಮಳೆಯು ಧಾರಾಕಾರ ಹೊಡೆಯುತ್ತಿದೆ. ಇದರಿಂದ ಇಟಲಿಯವರ 'ಟ್ಯಾಂಕ್', ಧಾಳಿ ವಗೈರೆ ವೈವಾಟಕ್ಕೆ ತಡೆಯಾಗಿರುವುದರಿಂದ ಜನರಲ್ ಗ್ರಾಜಿಯಾನಿಯವರ ಸೈನ್ಯವು ನೆಟ್ಟ ಬೆಟ್ಟದಿಂದ ಬ್ರಿಟಿಷ್ ಸೋಮಾಲಿಲ್ಯಾಂಡಿನ ಕಡೆ ಹಿಂದಿರುಗುತ್ತಿದೆ. ಡಾಗಾಬೂರ್ ಕಡೆಗಾಗಿ ಬರುತ್ತಿದ್ದ ಇಟಲಿಯ ಸೈನ್ಯವನ್ನು ರಾಸ್ ಡೆಸ್ಟಾರವರ ಸೈನ್ಯವು ಹಿಂದಕ್ಕಟ್ಟಿದೆ.

ಪಠಾಣರಿಗೆ ಬಾಂಬು ಹಾಕಲಿಲ್ಲ.

ಪಠಾಣ್ ಪಟ್ಟಕ್ಕೆ ಇಟಲಿಯವರು ಬಾಂಬು ಹಾಕಿದರೆಂಬ ವರ್ತಮಾನವು ನಿಜವಲ್ಲ. ಅಲ್ಲಿಯ ವ್ಯಾಪಾರವು ಎಂದಿನಂತೆ ನಡೆಯುತ್ತಿದೆ.

ಕೌಂಟ್ ವಿನ್ಸಿಯವರ ಚಟುವಟಿಕೆ.

ಈ ಅಪ್ರೀಕಾದ ಶೀಘ್ರದಲ್ಲಿ ಬಹು ಜನ ಸ್ಥಿರವಾದ ಯೂರೋಪಿಯನರ ವಾಸಸ್ಥಳವು ಇಟಲಿಯ ಬಳಿ ಇರುವ ಇಟಾಲಿಯನ್ ಕೌನ್ಸ್ಯುಲೇಟ್ ಪ್ರದೇಶ. ಅಲ್ಲಿ ಇಥಿಯೋಪಿಯಾದಲ್ಲಿದ್ದ ಇಟಾಲಿಯನ್ ಆಫೀಸರುಗಳೆಲ್ಲಾ ಸೇರಿಕೊಂಡಿರುವರು. ಅಲ್ಲಿರುವ ಕವುಂಟ್ ವಿನ್ಸಿ ಎಂಬುವರು ಮುಂತಾದವರು ಮಕ್ಕಳನ್ನು ಕಾಯುತ್ತಿರುವರು. ಇವರು ಮೊದಲು ಮಿಲಿಟರಿಯಲ್ಲಿದ್ದವರು. ಇಥಿಯೋಪಿಯಾದ ಮಿಲಿಟರಿಯ ಗುಟ್ಟುಗಳು ತಿಳಿದಿರುವರಂತೆ. ಇವರು ಬೇಗನೆ ಮಿಲಿಟರಿ ಅಧಿಕಾರವನ್ನು ವಹಿಸಿಕೊಳ್ಳುವರೆಂದು ಊಹಿಸಲಾಗಿದೆ.

ರಾಸ್ ಗುಗ್ಸಾರ ಕುತಂತ್ರ.

ನೇಗಸರ ಕಡೆಯಿಂದ ಇಟಲಿಯವರ ಕಡೆ ತಿರುಗಿದ ರಾಸ್ ಗುಗ್ಸಾರವರ ಹಿಂಬಾಲಕರು ತಮ್ಮ ದಳವನ್ನು ಇಥಿಯೋಪಿಯನರು ಕೊಂದುಹಾಕಿದರಂತೆ. ಧಾಳಿಯಿಂದಲೂ ಗುಗ್ಸಾರವರ ಅನುಯಾಯಿಗಳನ್ನು ಸೆರೆಹಿಡಿದು, ಮಿಕ್ಕವರನ್ನು ಹಿಂಬಾಲಿಸಿ ಗುಗ್ಸಾರ ಹಿಂಬಾಲಕರು ಮಕೇಲ್ ಮೇಲೆ ಧಾಳಿ ನಡೆಸಿದರು. ಆಗ್ಯೆ ಗುಗ್ಸಾರ ತಲೆಗೆ 12,000 ಪವುಂಡುಗಳ ಬಹುಮಾನ ಕೊಡುವುದಾಗಿ ಇಥಿಯೋಪಿಯ ಸರ್ಕಾರದವರು ಪ್ರಕಟಿಸಿರುವರು. ರಾಸ್ ಗುಗ್ಸಾರವರ ಸೇನೆ ಹಿಂದಿರುಗಿ ಬೇಗನೆ ಪ್ರಯಾಣ ಮಾಡುತ್ತಿರುವುದರಿಂದ ಅವರು ಅವರಲ್ಲಿಗೆ ತಿರುಗಿ ಹೋಗಲು ಕಾತರಪಡುತ್ತಿರುವರು.

ಸೋಮಾಲಿ ಮುಖಂಡರ ಕೈವಶ.

ಕಳೆದ ವಾರಗಳಲ್ಲಿ ಚಕ್ರವರ್ತಿಯವರು ಬಹುಮಾನ ಕೊಟ್ಟ ಸೋಮಾಲಿ ಮುಖಂಡನಾದ ಅಕ್ಬೆರ್ ಹಾಸ್ಸಿಯವರು

ಗೋರಾಹೈಯಲ್ಲಿ ಇಟಲಿಯ ಕಡೆ ಗೂಢಚಾರರಾಗಿದ್ದರೆಂದು ಅವರು ಅವರ 12 ಹಿಂಬಾಲಕರೊಂದಿಗೆ ಸೆರೆ ಹಿಡಿಯಲ್ಪಟ್ಟಿರುವರು.

ಇಟಾಲಿಯನ್ ವಿಮಾನ ಕೆಳಕ್ಕುರುಳಿತು.

ದಕ್ಷಿಣ ರಣರಂಗದ ಹೊಲೇ ಎಂಬಲ್ಲಿ ಒಂದು ಇಟಾಲಿಯನ್ ವಿಮಾನವು ಗುಂಡು ತಗಲಿ ಕೆಳಕ್ಕುರುಳಿಸಲ್ಪಟ್ಟಿತು.

ಆಪಾನಿನ ಧೋರಣೆ.

ಜನಾಂಗಗಳ ಸಂಘದವರು ಇಟಲಿಯ ಮೇಲೆ ಹೇರಬೇಕೆನ್ನುವ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತರಲು ತಮಗಿಷ್ಟವಿಲ್ಲವೆಂದು ಜಪಾನಿನ ಸರ್ಕಾರವು ಪ್ರಕಟಿಸಿದೆ. ಜನಾಂಗಗಳ ಸಂಘಕ್ಕೆ ಸೇರದ ರಾಷ್ಟ್ರಗಳ ಪೈಕಿ 'ಸ್ಯಾಂಕ್ಷನ್'ಗಳನ್ನು ಅಂಗೀಕರಿಸಿದ್ದು ಆಪಾನೇ ಪ್ರಥಮ.

ಅಮೇರಿಕಾಕ್ಕೂ ಇಟಲಿಗೂ ನಡೆಯುತ್ತಿದ್ದ ವ್ಯಾಪಾರ ಸಂಧಾನಗಳು ನಿಲ್ಲಿಸಲ್ಪಟ್ಟಿವೆ.

'ಸ್ಯಾಂಕ್ಷನ್'ಗಳಿಗೆ ಇಟಲಿಯ ಸಿದ್ಧತೆ.

ಲೀಗಿನವರು ತೀರ್ಮಾನಿಸಿರುವ 'ಸ್ಯಾಂಕ್ಷನ್'ಗಳಿಗೆ ಬಗ್ಗದೆ ಇರಲು ಮುಸೊಲಿನಿಯವರು ಆಹಾರ ನೀತಿಯನ್ನು ಕೈಕೊಳ್ಳಲು ಇಟಲಿಯ ಪಾದ್ರಿಗಳ ಮತ್ತು ವರ್ತಮಾನ ಪತ್ರಿಕೆಗಳ ಒತ್ತಾಸೆಗೆ ಹುಕುಂ ಮಾಡಿರುವರು.

ರೋಮಿನಲ್ಲಿ ಬ್ರಿಟನ್ನಿನ ನಿಷೇಧ.

ರೋಮ್ ಪಟ್ಟಣದಲ್ಲಿ ಬ್ರಿಟಿಷ್ ಸಾಮಾನುಗಳನ್ನು ಕಂಡಲ್ಲಿ ಜನರು ಅಂಗಡಿಗಳ ಮೇಲೆ ಧಾಳಿ ಮಾಡುತ್ತಿರುವರು. ಬ್ರಿಟಿಷ್ ಸಾಮಾನು ವ್ಯಾಪಾರಿಗಳು ಸಾಮಾನುಗಳ ಮೇಲೆ ಬ್ರಿಟಿಷ್ ಹೆಸರುಗಳನ್ನು ಅಳಿಸಿ ಬಿಡುತ್ತಿದ್ದಾರೆ. ಹೋಟೇಲುಗಳೂ ಹೀಗೆ ಮಾಡುತ್ತಿವೆ. ಇಟಲಿಯ ಸರ್ಕಾರವು ಇಂಗ್ಲೆಂಡಿನ ನಾಲ್ಕು ವಾರ್ತಾ ಪತ್ರಿಕೆಗಳು ಇಟಲಿಗೆ ಬರಕೂಡದೆಂದು ಹುಕುಂ ಮಾಡಿರುವುದು.

'ನಾವು ಮೋಸಗೊಳಿಸಲ್ಪಟ್ಟೆವು.'

'ಲೀಗಿನ 'ಸ್ಯಾಂಕ್ಷನ್'ಗಳು ನಿಷ್ಪ್ರಯೋಜನವಾದವು. ಮುಸೊಲಿನಿ ಮತ್ತು ಲವಾಲರು ನಮ್ಮ ಮಂತ್ರಿಗಳನ್ನು ಮೋಸಗೊಳಿಸಿರುವರು' ಎಂದು ಇಂಗ್ಲೆಂಡಿನ ಲಿಬರಲ್ ಪಕ್ಷದ ಮುಖಂಡರಾದ ಲಾಯಿಡ್ ಜಾರ್ಜರು ಹೇಳಿದರು.

ನವಂಬರ್ ತಾರೀಖು 2.

ರಾಸ್ ನಾಸಿಬುರವರ ಮುಂದಾಲೋಚನೆ.

ಒಗಾಡೆನ್ನಿನಲ್ಲಿ ಇಟಲಿಯ ಸೈನ್ಯವು ಮುಂದುವರಿಯುತ್ತಿದೆ. ಹರಾರ್ ಬಳಿಯ ಸುತ್ತಿನ ಬೆಟ್ಟಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಬಲವಾದ ಇಥಿಯೋಪಿಯನ್ ಸೈನ್ಯವನ್ನು ಎದುರಿಸುವುದೇ ಇಟಲಿಯವರ ಉದ್ದೇಶ. ಇಲ್ಲಿ ದೊಡ್ಡ ಯುದ್ಧವಾಗಬಹುದೆಂದು ಊಹಿಸಲಾಗಿದೆ. ಇದನ್ನು ಮುಂದಾಲೋಚನೆಯಿಂದ ತಿಳಿದ ಇಥಿಯೋಪಿಯನ ಸೇನಾಧಿಪತಿ ರಾಸ್ ನಾಸಿಬುರವರು ಹತ್ತು ದಿವಸಗಳ ಮುಂಚೆ ಚಕ್ರವರ್ತಿಗೆ ಬರೆದು 3000 ಬಂದೂಕುಗಳನ್ನು, 100,000 ತೋಟಗಳನ್ನೂ ಶೀಘ್ರವಾಗಿ ತರಿಸಿಕೊಂಡರು. ಅವರ ಸೈನ್ಯದಲ್ಲಿ 14,000 ಸಿಪಾಯಿಗಳಿರುವರು, ಅವರಲ್ಲಿ 3300 ಯೂರೋಪಿಯನ್ ಸೋಲ್ಜರುಗಳಾಗಿರುವರು. ಜಿಜಿಗಾದಿಂದಲೂ ಅವರಿಗೆ ಸೈನ್ಯ ಸಹಾಯವು ಹೋಗುತ್ತಿದೆ.

ಗಾಲೋರ್‌ಗುಬಿ ಪುನಃ ಇಥಿಯೋಪಿಯನರ ವಶವಾಯಿತೇ?

ಒಗಾಡೆನ್ನಿನಲ್ಲಿ ಇಥಿಯೋಪಿಯನರ ಸೈನ್ಯವು ಬಲಪಡಿಸಲಾಗುತ್ತಿದೆ. ಅದು ನವನವೀನ ಸೈನ್ಯ ಸ್ಟ್ರೈಕಿಂಗ್ ಟ್ರೈನಿನಲ್ಲಿ ಬರುತ್ತಿದೆ. ಹರಾರಿನ ವರ್ತಮಾನದ ಮೇರೆ 2000 ಸೋಮಾಲಿ ಮತ್ತು 500 ಇಥಿಯೋಪಿಯನ ಸೈನಿಕರು ಗಾಲೋರ್‌ಗುಬಿಯಲ್ಲಿ ಸ್ಥಳ ವಹಿಸುತ್ತಿದ್ದ ಇಟಲಿ ಸೈನಿಕರನ್ನು ಓಡಿಸಿ ಪಟ್ಟಣವನ್ನು, 4 'ಟ್ಯಾಂಕ್' ಗಳನ್ನೂ ಕೈವಶ ಮಾಡಿಕೊಂಡರು.

ಒಗಾಡೆನ್ನಿನಲ್ಲಿ ಇಟಲಿಯವರ ಪ್ರಚಾರ.

ಒಗಾಡೆನ್ನಿನಲ್ಲಿ 1901ರಲ್ಲಿ ದಂಗೆ ಎದ್ದು ಬ್ರಿಟನ್ನಿಗೆ ಪೀಡೆಯಾಗಿದ್ದ 'ಹುಚ್ಚು ಮುಲ್ಲಾ'ರವರನ್ನು, ಅವರ ಪುತ್ರರನ್ನು ಸೋಮಾಲಿಗಳು ಬಹಳವಾಗಿ ಬಹುಮಾನಿಸುತ್ತಿರುವರು. ಅವರ ನಾಲ್ಕು ಮಕ್ಕಳನ್ನು ಇಟಲಿಯವರು ಮೊಗಾದಿಷೋದಲ್ಲಿ 'ಫಾಸಿಸ್ಟ' ತತ್ವಗಳಲ್ಲಿ ಗುಟ್ಟಿನಲ್ಲಿ ತರಬೇತು ಮಾಡುತ್ತಿರುವರು. ಒಗಾಡೆನ್ನನ್ನು ಸಂಪೂರ್ಣ ಗೆದ್ದ ಮೇಲೆ ಇವರು ನಾಲ್ವರನ್ನು ಧಾರ್ಮಿಕ ಮತ್ತು ರಾಜಕೀಯ ಮುಂದಾಳುಗಳನ್ನಾಗಿ ಒಳ ಪ್ರಾಂತ್ಯಗಳಲ್ಲಿ ಜನರಿಗೆ ಬೋಧನೆ ಮಾಡಲು ಬಿಡುವರು.

ನೇಗಸರು ಸೈನಿಕರನ್ನು ಪರೀಕ್ಷಿಸಿದರು.

ಡೆಜ್ಜಾಜ್ ಮೊಕನನ್‌ರವರು ತಮ್ಮ 12,000 ಸೈನಿಕರನ್ನು ವಿಳ ವಾರಗಳಿಂದ ಎಲ್ಲಿಯೂ ನಿಲ್ಲದೆ ಅಡ್ಡಿಸ್ ಅಬಾಬಕ್ಕೆ ನಡೆಸಿಕೊಂಡು ಬಂದರು. ಆ ಸೈನ್ಯವನ್ನು ಚಕ್ರವರ್ತಿಯವರು ಅರಮನೆ ಬಳಿಯಲ್ಲಿ ಪರೀಕ್ಷಿಸಿದರು. ನೇಗಸರು ತಾ. 10ರಲ್ಲಿ ಡೆಸ್ಸಿಗೆ ಹೋಗಲು ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿವೆ.

ಮಕೇಲ್ ಬೀಳಲಿಲ್ಲ.

ಮಕೇಲ್ ಪಟ್ಟಣವು ಇಟಲಿಯವರ ಸ್ವಾಧೀನವಾಗಲಿಲ್ಲವೆಂದು ಇಥಿಯೋಪಿಯನ್ ಸರ್ಕಾರದವರು ಪ್ರಕಟಿಸಿ

ಕೊಡಗು

ನವಂಬರ್ ತಾ. ೮ನೇ ಶುಕ್ರವಾರ ೧೯೩೫.

ಕೌನ್ಸಿಲು ತೀರ್ಮಾನಗಳಿಗೆ ಸರ್ಕಾರದ ತಿರಸ್ಕಾರ.

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಕೊಡಗು ನ್ಯಾಯ ವಿಧಾಯಕ ಸಭೆಯ ಒಂದು ಅಧಿವೇಶನದಲ್ಲಿ ಬಹುಮತದಿಂದ ಪಾಸಾದ ಮತ್ತು ಚರ್ಚಿಸಿ ಹಿಂತೆಗೆದುಕೊಳ್ಳಲ್ಪಟ್ಟ ಠರಾವುಗಳ ಮೇಲೆ ಸ್ಥಳೀಯ ಸರ್ಕಾರದವರು ಮಾಡಿದ ಹುಕುಮುಗಳ ವಿವರವು ಮೊನ್ನೆ ನಡೆದ ಕೌನ್ಸಿಲು ಸಭೆಯ ಮುಂದಿಡಲ್ಪಟ್ಟಿತು. ಅದನ್ನು ಇನ್ನೊಂದು ಕಡೆ ಪ್ರಕಟಿಸಲಾಗಿದೆ. ಸರ್ಕಾರದವರ ಈ ಹುಕುಮುಗಳನ್ನು ಸ್ವಲ್ಪ ಪರಿಶೀಲಿಸಿ ನೋಡಿದರೆ ಈಗಿನ ಕೌನ್ಸಿಲಿನ ಅಧಿಕಾರ ಶೂನ್ಯತೆಯು ಒಡೆದು ಕಾಣುವುದು.

ಮಾರ್ಚಿ ಅಧಿವೇಶನದಲ್ಲಿ ಕಾರ್ಯಕ್ರಮ ಪಟ್ಟಿಯ ಪ್ರಕಾರ ಒಟ್ಟು 16 ಠರಾವುಗಳು ಚರ್ಚೆಗಿದ್ದವು. ಅವುಗಳಲ್ಲಿ ಕೆಲವು ಗೊತ್ತುವಳಿಗಳು ಒಂದೇ ವಿಷಯವನ್ನು ಅಂದರೆ ಕಂದಾಯ ಮಾಫಿಯನ್ನು ಕುರಿತವಾದುದರಿಂದ ಅವುಗಳಲ್ಲಿ ಒಂದು ಪಾಸಾದ ಕಾರಣ ಉಳಿದ ಮೂರು ಸೂಚಕರಿಂದ ವಾಪಸು ತೆಗೆದುಕೊಳ್ಳಲ್ಪಟ್ಟವು. ಬಾಕಿ 13 ಠರಾವುಗಳಲ್ಲಿ ಅದನ್ನು ಚರ್ಚೆ ಮಾಡಿದ ನಂತರ, ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂಬ ಸರ್ಕಾರದ ಮೆಂಬರರ ಭರವಸೆಯ ಮೇಲೆ ಸೂಚಕರು ಹಿಂತೆಗೆದುಕೊಂಡರು. ಇನ್ನುಳಿದ ಏಳು ಠರಾವುಗಳ ಮೇಲೆ ದೀರ್ಘ ಚರ್ಚೆ ನಡೆದು ಬಹುಮತದಿಂದ ಪಾಸಾದವು.

ಕೌನ್ಸಿಲಿನ ಈ ತೀರ್ಮಾನಗಳ ಮೇಲೆ ಚೀಫ್ ಕಮಿಷನರು ಮಾಡಿರುವ ಹುಕುಂಗಳ ಪ್ರಕಾರ, ಸರಕಾರಿ ಸದಸ್ಯರ ಭರವಸೆಯಿಂದ ಹಿಂತೆಗೆಯಲ್ಪಟ್ಟ ಆರು ಗೊತ್ತುವಳಿಗಳಲ್ಲಿ ನಾಲ್ಕನ್ನು ಸರ್ಕಾರದವರು ಬಾಗಿಲಿಗೆ ಕಾದಿರುವರು. ಇನ್ನೆರಡರ ವಿಷಯ ಏನೊಂದೂ ಹೇಳಿರುವುದಿಲ್ಲ. ಅದರೆ ನ್ಯಾಯವಿಧಾಯಕ ಸಭೆಯವರು ಬಹುಮತದಿಂದ ಪಾಸುಮಾಡಿದ ಏಳು ಠರಾವುಗಳ ಗತಿ ಏನಾಯಿತೆಂದು ಸ್ವಲ್ಪ ನೋಡುವ. ಅವುಗಳಲ್ಲಿ ಕೊಡಗಿನ ಜನರ ಸಂಘಗಳನ್ನು ಸಿಂಧುವ ಠರಾವನ್ನು, ಅದನ್ನು ಕುರಿತ ಚರ್ಚೆಗಳನ್ನು ಇಂಡಿಯಾ ಸರಕಾರಕ್ಕೆ ಕಳುಹಿಸುವದಲ್ಲದೆ, ಈ ವಿಷಯವನ್ನು ಕುರಿತು ಸ್ಪಷ್ಟವಾದ ಒಂದು ತೀರ್ಮಾನಕ್ಕೆ ಬರುವಾಗ ಸ್ಥಳೀಯ ಸರ್ಕಾರವು ಮಾಡುವಂಥ ಸಲಹೆಗಳಿಗೆ ಒಳಪಡುವರು. ಉಳಿದವುಗಳಿಗೆ ಮೈಸೂರು ಮತ್ತು ಮದ್ರಾಸು ಸ್ಥಳೀಯ ಸರ್ಕಾರಗಳ ಅಭಿಪ್ರಾಯ ವಿಷಯ ಸರ್ಕಾರದವರು ಅಭಿಪ್ರಾಯಪಡುತ್ತಿರುವರು. ಇವಿಷ್ಟನ್ನು ಬಿಟ್ಟು ಬಾಕಿ ಐದು ಠರಾವುಗಳನ್ನು ಚೀಫ್ ಕಮಿಷನರಿಗೆ ಒಪ್ಪಿಕೊಳ್ಳಲಾಗುವುದಿಲ್ಲವಂತೆ! ಇದರಿಂದ ಕೌನ್ಸಿಲಿನ ತೀರ್ಮಾನಗಳಿಗೆ ಸ್ಥಳೀಯ ಸರ್ಕಾರದ ತಿರಸ್ಕಾರವು ಎಷ್ಟರ ಮಟ್ಟಿಗೆ ಇದೆಯೆಂದು ವಿಶದವಾಗುತ್ತದೆ.

ಜನ ಪ್ರತಿನಿಧಿಗಳೆಂದೆನ್ನಿಸಿಕೊಳ್ಳುವವರು ತಮಗೆ ಸರಿ ತೋರಿದುದನ್ನು ಸರ್ಕಾರದವರಿಗೆ ಒಪ್ಪಿಗೆಯಾದರೆ, ಅದನ್ನು ಸರ್ಕಾರದ ಸಹಾನುಭೂತಿ ಇದೆಯೆಂದು ಉದ್ಯೋಗಸ್ಥ ಮೆಂಬರುಗಳು ಕೌನ್ಸಿಲಿನಲ್ಲಿಯೇ ಸೂಚಿಸುವರು. ಅಂಥಾ ಠರಾವುಗಳಲ್ಲಿಯೂ ಕೂಡ 6ರಲ್ಲಿ ನಾಲ್ಕನ್ನು ಮಾತ್ರ ಬಾಗಿಲಿಗೆ ಕಾದಿರುವರು. ಇವುಗಳಲ್ಲಿ ಹೆಚ್ಚಿನ ಹಣ ಸ್ವಪದ ಸ್ವಸ್ಥಿ ಬೇಕಾಗಿ ಇರಲಿಲ್ಲ. ಇದರ ಸರಕಾರಿ ಮೆಂಬರುಗಳು ವಿರೋಧಿಸಿ, ಕೌನ್ಸಿಲು ಸಭೆಯವರು ಬಹುಮತದಿಂದ ತೀರ್ಮಾನಿಸಿದ ವಿಷಯಗಳಲ್ಲಿ ಒಂದನ್ನಾದರೂ ಸರ್ಕಾರದವರು ಸಂಪೂರ್ಣವಾಗಿ ಜಾರಿಗೆ ತರಲಿಲ್ಲವೆಂದಾದರೆ ಸರ್ಕಾರದವರು ದೇಶದವರ ಅಭಿಪ್ರಾಯಕ್ಕೆ ಎಷ್ಟು ನಿರ್ಲಕ್ಷ್ಯತೆಯನ್ನು ತೋರಿಸುತ್ತಿರುವರೆಂದು ಸ್ಪಷ್ಟವಾಗುತ್ತದೆ. ಪಾರ್ತಿಯಾಗಿ ಇಂಥಾ ಠರಾವುಗಳು ಚುನಾಯಿತ ಮೆಂಬರುಗಳ ಬಹುಮತದಿಂದ ಪಾಸಾಗುವದಾಗಿದೆ. ಇವುಗಳನ್ನು ತಿರಸ್ಕರಿಸುವುದರಿಂದ ದೇಶದ ಅಭಿಪ್ರಾಯವನ್ನೇ ಪಾದದಲಿಗೊತ್ತಿದಂತಾಯಿತು. ಸರ್ಕಾರದವರಿಗೆ ಒಪ್ಪಿಗೆಯಾಗುವ ವಿಷಯದಲ್ಲಿ ಮಾತ್ರ ಕೌನ್ಸಿಲಿನವರ ಬೆಂಬಲವಿದೆ, ದೇಶದವರಿಗೆ ಬೇಕಾದ ಸಂಗತಿಗಳಲ್ಲಿ ಕೌನ್ಸಿಲಿನ ತೀರ್ಮಾನಗಳನ್ನು ನಿರಾಕರಿಸುತ್ತಿರುವಲ್ಲಿ ಈ ಕೌನ್ಸಿಲಿನಿಂದ ಪ್ರಯೋಜನವಾದರೂ ಏನು? ಪ್ರಯೋಜನವಾಗುವುದರ ಬದಲು ಇರುವಂಥ ದೇಶಕ್ಕೆ ಒಂದು ತರದ ಹಾನಿಯೇ ಸಂಭವಿಸುವಂತಾಗಿದೆಯೆಂದರೆ ತಪ್ಪಾಗಲಾರದು.

ಇಂಥಾ ನಿಷ್ಪ್ರಯೋಜನವಾದ ಕೌನ್ಸಿಲಿನಲ್ಲಿ ಸ್ಥಳೀಯ ಕಾಲ ಕಳೆಯುವುದಕ್ಕಿಂತ ಚುನಾಯಿತ ಮೆಂಬರುಗಳು ಅದಕ್ಕೆ ರಾಜೀನಾಮೆ ಕೊಟ್ಟು, ನಿಜವಾದ ಅಧಿಕಾರವುಳ್ಳ ಕೌನ್ಸಿಲಿನ ಹೋರಾಟವನ್ನು ಬಲಪಡಿಸುವುದು ಯೋಗ್ಯವಾಗಿದೆ. ಅವರು ಹಾಗೆ ಮಾಡದಿದ್ದರೆ ದೇಶದವರು ಅವರನ್ನು ಎಚ್ಚರಿಸುವುದು ಅವಶ್ಯ. ಹಿಂದೂಸ್ಥಾನದ ಬೇರೆ ಭಾಗಗಳು ತೀವ್ರವಾಗಿ ಮುಂದುವರಿಯುತ್ತಿರುವಾಗ್ಯೂ ನಾವು ನಿದ್ರಿಸುತ್ತಿರುವುದು ಉಚಿತವಲ್ಲ.

ಕೌನ್ಸಿಲು ಠರಾವುಗಳ ಮೇಲೆ ಸರ್ಕಾರದ ಹುಕುಂ.

ಈ ಹಿಂದಿನ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಿದ ಮತ್ತು ಪಾಸು ಮಾಡಿದ ಠರಾವುಗಳನ್ನು ಕುರಿತು ಕೊಡಗು ಸರ್ಕಾರದವರು ಮಾಡಿದ ಈ ಕೆಳಗಿನ ಹುಕುಮುಗಳು ಕಳೆದ ಕೌನ್ಸಿಲು ಅಧಿವೇಶನದ ಮುಂದಿಡಲಾಯಿತು.

ತಾ. 13—3—'35ರಲ್ಲಿ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳು.

1. ಭೂಕಂದಾಯದಲ್ಲಿ ಶೇಕಡ 25ನ್ನು ಮಾಫಿ ಮಾಡಬೇಕು.

ಸರ್ಕಾರದ ಹುಕುಂ:—ಚೀಫ್ ಕಮಿಷನರಿಗೆ ಈ ಠರಾವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಈ ವಿಷಯಕ್ಕೆ ಸರ್ಕಾರದವರು ತುಂಬಾ ಸಹಾನುಭೂತಿಯ ಗಮನ ಕೊಟ್ಟಿರುವರು; ಮತ್ತು 1933—34ರ ಕಂದಾಯದಲ್ಲಿ ಪಡೆದ ಶೇಕಡ 12½ 'ರೆಮಿಷನ'ನ್ನು (ತಾತ್ಕಾಲಿಕ ಬಾಕಿ ವಸೂಲಿ) ಒಂದು ವರ್ಷ ಮುಂದ ವಸೂಲಿಸಲಿಕ್ಕೂ, 1934—35ರ ಕಂದಾಯದಲ್ಲಿ ಶೇಕಡ 12½ರಂತೆ ರೆಮಿಷನ್ ಮಾಡುವುದಕ್ಕೂ ಹುಕುಂ ಮಾಡಿರುವರು.

8 ಕೊಡಗಿಗೆ ಹೆಚ್ಚಿನ ರಾಜಕೀಯ ಸುಧಾರಣೆಗಳನ್ನೂ ಮತ್ತು ಇಂಡಿಯಾ ಸರ್ಕಾರದಿಂದ ಹಿಂದಿನ ನಿಲ್ಲು ಮತ್ತು ವಾರ್ಷಿಕ ಸಬ್‌ವೆನ್ಷನನ್ನೂ ಕೊಡಬೇಕು.

ಸ. ಹು.—ಈ ಠರಾವಿನ ಮತ್ತು ಅದರ ಚರ್ಚೆಯ ನಕಲನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಲಾಗಿದೆ.

ಕೊಡಗಿಗೆ ರಾಜ್ಯಾಡಳಿತಿಯ ಹೆಚ್ಚಿನ ಸುಧಾರಣೆಗಳನ್ನು ಕೊಡುವ ಪ್ರಶ್ನೆಯನ್ನು ಆಲೋಚಿಸಲು ನಿಪುಣರ ಒಂದು ವಿಚಾರಣೆಯನ್ನು ಕುರಿತು ಚೀಫ್ ಕಮಿಷನರು ಇಂಡಿಯಾ ಸರಕಾರಕ್ಕೆ ಬರೆದಿರುವರು.

ತಾ. 14—3—'35ರಲ್ಲಿ ಪಾಸಾದ ಠರಾವುಗಳು.

9 ಈಗಿನ ಬೆಂಗಳೂರು ಅಪ್ಪೀಲು ಕೋರ್ಟಿನ ಬದಲು ಮದ್ರಾಸು ಹೈಕೋರ್ಟನ್ನು ಕೊಡಗಿನ ಅಪ್ಪೀಲು ಕೋರ್ಟಾಗಿ ಮಾಡಬೇಕು.

ಸ. ಹು.—ಈ ವಿಷಯ ಸರ್ಕಾರದವರು ಆಲೋಚಿಸುತ್ತಿದ್ದಾರೆ.

10. ಕೊಡವರ ಪದ್ಧತಿಗಳನ್ನು ಸಂಪಾದಿಸಿ ಸಂಗ್ರಹಿಸಲು ಒಂದು ಕಮಿಟಿ ನೇಮಿಸಲ್ಪಡಬೇಕು.

ಸ. ಹು.—ಈ ಠರಾವನ್ನು ಅಂಗೀಕರಿಸಲು ಅಗತ್ಯಕ್ಕೆ ಚೀಫ್ ಕಮಿಷನರು ನ್ಯಾಸವನುತ್ತಾರೆ.

11 ಜಮ್ಮಾ ಹಿಡುವಳಿದಾರರ ನ್ಯಾಯವಾದ ಸಂತತಿಯವರಿಗೂ ನಡೆದುಕೊಳ್ಳುವ ಹಕ್ಕು ಹಿಂದಿನ ಅಧಿಕಾರವನ್ನು (ಅವರು ಜಮ್ಮಾ ಕಳಕೊಳ್ಳದಿದ್ದಲ್ಲಿ) ಹಿಂತಿರುಗಿ ಅವರಿಗೆ ಕೊಟ್ಟು ಜಮ್ಮಾ ಹಿಡುವಳಿದಾರರೆಂದು ಸನದನ್ನು ಹಿಂತಿರುಗಿ ಕೊಡಬೇಕು.

ಸ. ಹು.—1921 ನೇ ಇಂಡಿಯನ್ ಆರ್ಮ್ಸ್ ರೂಲುಗಳ 1ನೇ ಶೆಡ್ಯೂಲಿನ 5ನೇ ಕಲಮಿನಲ್ಲಿರುವ 'ಜಮ್ಮಾ ಹಿಡುವಳಿದಾರ' ಎಂಬ ಶಬ್ದಕ್ಕೆ ಜುಡಿಷ್ಯಲ್ ಕಮಿಷನರ ಕೋರ್ಟಿನವರು ಕೊಟ್ಟಿರುವ (ಜಮ್ಮಾ ಭೂಮಿಯ ಅನುಭವದಲ್ಲಿರುವವನ) ಅರ್ಥಕ್ಕೆ ತಾವು ಒಪ್ಪುವುದರಿಂದಲೂ, ಮತ್ತು ಠರಾವಿನ ಸೂಚಕರು ಕೊಟ್ಟಿರುವ ಅರ್ಥವು ಅದಕ್ಕೆ ಸರಿಯಾಗುವುದಿಲ್ಲವಾದುದರಿಂದಲೂ ಈ ಠರಾವಿಗೆ ಒಪ್ಪಲಾಗುವುದಿಲ್ಲವೆಂದು ಚೀಫ್ ಕಮಿಷನರು ವ್ಯಸನಪಡುತ್ತಾರೆ.

15 ಕೊಡಗಿನಲ್ಲಿ ಇನ್ಸ್‌ಪೆಕ್ಷನ್ ಬಂಗ್ಲೆಗಳನ್ನು ಕಕ್ಷಿಗಾರರಿಗೆ ಇತರ ಮುಸಾಫಿರರಿಗೂ ಉಪಯೋಗಕ್ಕೆ ಸಮಯೋಚಿತವಾಗಿ ಬಿಟ್ಟುಕೊಡಬೇಕು.

ಸ. ಹು.—ಚೀಫ್ ಕಮಿಷನರಿಗೆ ಈ ಠರಾವನ್ನು ಅಂಗೀಕರಿಸಲು ಸಾಧ್ಯವಿಲ್ಲ.

ಇನ್ಸ್‌ಪೆಕ್ಷನ್ ಬಂಗ್ಲೆಗಳು ಮುಖ್ಯವಾಗಿ ಸರ್ಕಾರಿ ಉದ್ಯೋಗಸ್ಥರ ಉಪಯೋಗಕ್ಕಾಗಿರುವವಾಗಿವೆ. ಅವುಗಳನ್ನು ಬೇರೆಯವರು ಉಪಯೋಗಿಸುವ ಮುಂಚೆ (ವಿಶೇಷ ಮತ್ತು ಮುಂಚೆ ಅರಿಯಲು ಅಸಾಧ್ಯವಾದ ಸಂದರ್ಭಗಳಲ್ಲಿ ವಿನಹ) ಕಮಿಷನರವರ ಅನುಮತಿ ಪಡೆಯಬೇಕೆಂಬ ನಿಬಂಧನೆಯು ಅಗತ್ಯವಾದದ್ದು; ಇದನ್ನು ಬದಲಾಯಿಸಲಿಕ್ಕಾಗುವುದಿಲ್ಲ.

16 ಕಾವೇರಿ ನದಿಗೆ ಬೇತರಿಯಲ್ಲಿ ಒಂದು ಖಾಯಂ ಚಿಕ್ಕ ಸೇತುವೆ (ಕಾಸ್ವೆ) ಯನ್ನು ಕಟ್ಟಿಸಬೇಕು.

ಸ. ಹು.—ಕಾವೇರಿ ನದಿಗೆ ಬೇತರಿಯಲ್ಲಿ ಖಾಯಂ 'ಕಾಸ್ವೆ' ಕಟ್ಟುವ ವಿಷಯ ಚೆನ್ನಾಗಿ ಆಲೋಚಿಸಲ್ಪಟ್ಟಿದೆ. ಬೇಕಾಗುವ ಖರ್ಚು ಪ್ರಯೋಜನಕ್ಕೆ ಮತ್ತು ಸಂಬಂಧಿಸುತ್ತದೆ ಮತ್ತು ಅಲ್ಲಿಗಾಗಿ ವ್ಯವಹಾರವೂ ಕಡಿಮೆ. ಇದಕ್ಕಿಂತ ಹೆಚ್ಚು ವ್ಯಾಪಾರ ನಡೆಯುವ ನಮ್ಮ ರಸ್ತೆಗಳಲ್ಲಿ ಮಾಡಬೇಕಾದ ಹೆಚ್ಚಿನ ಪ್ರಾಮುಖ್ಯತೆಯ ಕೆಲಸಗಳಿಗಿಂತ ಮುಂದಾಗಿ ಇದನ್ನು ಮಾಡುವಷ್ಟು ಪ್ರಾಮುಖ್ಯತೆ ಇದಕ್ಕಿಲ್ಲ. ಹೆಚ್ಚಿನ ಪ್ರಾಮುಖ್ಯತೆ ಕೆಲಸಗಳನ್ನು ಮುಗಿಸುವ ವರೆಗೂ ಮತ್ತು ಅರ್ಥಿಕ ಸ್ಥಿತಿಯು ಉತ್ತಮವಾಗುವ ವರೆಗೂ ಸ್ಥಳೀಯ ಸರ್ಕಾರದವರು ಬೇತರಿಯಲ್ಲಿ ಖಾಯಂ ಸೇತುವೆ ಮಾಡುವ ಸೂಚನೆಗೆ ಗಮನಕೊಡಲಾರರು.

ಮಾರ್ಚಿ ತಾ 13 & 14ರಲ್ಲಿ ಕೌನ್ಸಿಲಿನಲ್ಲಿ ಚರ್ಚಿಸಿ ಹಿಂತೆಗೆದುಕೊಂಡ ಠರಾವುಗಳು.

5. ಕಲುವಾರಿಗಳಿಗೆಲ್ಲಾ ನಂಬರ ಕೊಡಬೇಕು.

ಸ. ಹು.—ಉತ್ತರ ಕೊಡಗಿನ 38 ಕಲುವಾರಿಗಳಿಗೂ, ದಕ್ಷಿಣ ಕೊಡಗಿನ 6 ಕಲುವಾರಿಗಳಿಗೂ ವರ್ಷ ಒಂದರ ರೂ. 12 ನಂಬರ ಕೊಡಲಿಕ್ಕೂ ಮತ್ತು ಉತ್ತರ ಕೊಡಗಿನ 6 ಕಲುವಾರಿಗಳಿಗೆ ಈಗ ಇರುವ ವಾರ್ಷಿಕ 6 ರೂ. ನಂಬಳವನ್ನು 12 ರೂ ಗೆ ಏರಿಸಲಿಕ್ಕೂ ವರ್ಷಕ್ಕೆ 564 ರೂಪಾಯಿಯನ್ನು ಚೀಫ್ ಕಮಿಷನರು ಮಂಜೂರು ಮಾಡಿರುವರು. ಈ ನಂಬಳ ಹೊಂದಿಕೊಳ್ಳಲಿಕ್ಕಾಗಿ ಈ ಕಲುವಾರಿಗಳು ನಾಡು ಮನ್ನಾ ಭೂಮಿಯನ್ನು ಬಿಟ್ಟುಕೊಡುವುದನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳುವ ಮತ್ತು ಆ ಭೂಮಿಯನ್ನು ಇತ್ತೀಚೆಗೆ ವ್ಯವಸಾಯಕ್ಕೆ ಬಿಟ್ಟುಕೊಡುವ ಸೂಚನೆಯನ್ನು ಅವರು ಒಪ್ಪುತ್ತಾರೆ.

6 ಪಾರುಪತ್ಯಗಾರರ, ಶ್ಯಾನುಭೋಗರು ಮತ್ತು ನಾಡು ಕಾರ್ಯಕಾರರ ರಿವೆನ್ಯು ಉದ್ಯೋಗಸ್ಥರನ್ನು ಆಗಿಂದಾಗ್ಗೆ ವರ್ಗಾಯಿಸಬೇಕು.

ಸ. ಹು.—ಪಾರುಪತ್ಯಗಾರರು, ನಾಡುಕಾರ್ಯಕಾರರು ಮತ್ತು ಶ್ಯಾನುಭೋಗರುಗಳಂಥ ರಿವೆನ್ಯು ಉದ್ಯೋಗಸ್ಥರುಗಳ ಒಂದು ಜನರಲ್ ವರ್ಗಾವರ್ಗಿಯು ನಡೆಸಲ್ಪಟ್ಟಿದೆ.

7. ಸೇಂದಿ ಮತ್ತು ಸಾರಾಯಿ ಅಂಗಡಿಗಳ ಗುತ್ತಿಗೆ ಹರಾಜಾಗಿ ಜಮ್ಮಾದ ಭೂಮಿಗಳನ್ನು ಬಾಡಿಗೆಗಾಗಿ ತೆಗೆದುಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕು.

ಸ. ಹು.—ಸೇಂದಿ ಮತ್ತು ಸಾರಾಯಿ ಅಂಗಡಿಗಳ ಕಂಟ್ರಾಕ್ಟುಗಳಿಗೆ ಜಮ್ಮಾದ ಭೂಮಿಯನ್ನು ಬಾಡಿಗೆಗೆ ತೆಗೆದುಕೊಳ್ಳಬಾರದೆಂದು ಸುಭೇದಾರರು ಮತ್ತು ಪಾರುಪತ್ಯಗಾರರುಗಳಿಗೆ ತಿಳಿಸಲಾಗಿದೆ.

14. ಸ್ಕೂಲ್ ಫೈನಲ್ ಪರೀಕ್ಷೆ ಪಾಸಾದವರು 'ಇಂಡಿಯನ್ ಸ್ಕೂಲ್ ಆಫ್ ಮೆಡಿಸಿನ್' ವೈದ್ಯ ಕಾಲೇಜಿಗೆ ಸೇರಿದರೆ ಅವರಿಗೆ ಸರ್ಕಾರಿ ಸ್ಕಾಲರ್‌ಶಿಪ್ ಕೊಡತಕ್ಕದ್ದು.

ಸ. ಹು.—ಚೀಫ್ ಕಮಿಷನರವರ ತಾ 4—5—35 ರ ನಂ. 52ರ ನೋಟಿಫಿಕೇಶನಿನಲ್ಲಿ, ಕೊಡಗಿನಲ್ಲಿ ಸರ್ಕಾರಿ ಸ್ಕಾಲರ್‌ಶಿಪ್ ಕೊಡಲು ಇರುವ ನಿಬಂಧನೆಗಳಲ್ಲಿ ಬೇಕಾದ ಬದಲಾವಣೆಗಳು ಮಾಡಲ್ಪಟ್ಟಿವೆ.

1933 ನೇ ಅಕ್ಟೋಬರು 23 ಮತ್ತು 24 ರಲ್ಲಿ ಚರ್ಚಿಸಿ, ಹಿಂತೆಗೆದುಕೊಂಡ ಠರಾವುಗಳು.

41 ನೋಟಿಫೈಡ್ ಏರಿಯಾದ ಕಮಿಟಿ ಮೆಂಬರುಗಳನ್ನು ಅಲ್ಲಿಯ ಜನರೇ ಚುನಾಯಿಸತಕ್ಕದ್ದು.

ಸ. ಹು.—ಈ ಗೊತ್ತುವಳಿಯಲ್ಲಿರುವ ತತ್ವವು ಚೆನ್ನಾಗಿ ಆಲೋಚಿಸಲ್ಪಟ್ಟಿದೆ.

ಈ ಠರಾವು ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟ ಮೇಲೆ ಚುನಾವಣೆ ಪದ್ಧತಿಯನ್ನು ಜಾರಿಗೆ ತರಬೇಕೆಂದು ಪ್ರೇರಿಸಲ್ಪಟ್ಟ ನೋಟಿಫೈಡ್ ಏರಿಯಾ ಕಮಿಟಿಯವರಿಂದಲೂ, ಸೋಮವಾರಪೇಟೆ ನೋಟಿಫೈಡ್ ಏರಿಯಾದ ನಿವಾಸಿಗಳಿಂದಲೂ ಅರ್ಜಿಗಳು ಬಂದವು. ಈಗಿನ ಕಮಿಟಿಗಳ ಅವಧಿಯು ಮುಗಿದ ಮೇಲೆ ಚುನಾವಣೆ ಪದ್ಧತಿಯನ್ನು ನೋಟಿಫೈಡ್ ಏರಿಯಾಗಳಲ್ಲಿ ಜಾರಿಗೆ ತರುವ ವಿಷಯ ಹಿತಕರವಾಗಿ ಆಲೋಚಿಸಲು ಸರ್ಕಾರವು ತಯಾರಿದೆ.

58 ಕಂದಾಯದ ಬಾಕಿಗಾಗಿ ಹರಾಜು ಮಾಡಲ್ಪಟ್ಟ ಆ ಕುಟುಂಬದವರಿಂದಲೂ ಕೊಂಡುಕೊಂಡ ಜಮ್ಮಾದ ಭೂಮಿಯನ್ನು ಜಮ್ಮಾವಾಗಿಯೇ ಇಡಬೇಕು.

ಸ. ಹು.—ಈ ಠರಾವಿನಲ್ಲಿ ಸೂಚಿತವಾದ ಪ್ರಶ್ನೆಯು ಚೆನ್ನಾಗಿ ಪರಿಶೋಧಿಸಲ್ಪಟ್ಟಿದೆ. ರೂಲ್ಸ್ ರೆಗ್ಯುಲೇಶನಿನ 110ನೇ ಸೆಕ್ಷನ್ ಮೇರೆ, ಜಮ್ಮಾದ ಭೂಮಿಯು ಆದಾ ಕಂದಾಯದ ಬಾಕಿಗಾಗಲೀ, ಬೇರೆ ರೀತಿಯ ವಸೂಲಾತಿಗಾಗಲೀ ಹರಾಜು ಮಾಡಲ್ಪಟ್ಟರೆ ಜಮ್ಮಾದ ರಿಯಾಯಿತಿಗಳು ಹೋಗಲಾಡಿಸಲ್ಪಡುತ್ತವೆ. ಈ ಸೆಕ್ಷನು ಮತ್ತು 45ನೇ ಸೆಕ್ಷನ, ಇನ್ನು ಮುಂದಕ್ಕೆ ಜಮ್ಮಾ ಹಿಡುವಳಿಯಲ್ಲಿ ಭೂಮಿ ಕೊಡತಕ್ಕದಲ್ಲವೆಂದು 1883 ರಲ್ಲಿ ಸರ್ಕಾರದವರು ಮಾಡಿದ ತೀರ್ಮಾನದ ಆಧಾರದ ಮೇಲಿನವಾಗಿದೆ ಮತ್ತು ಆ ತೀರ್ಮಾನವನ್ನು ಜಾರಿಗೆ ತರಲಿಕ್ಕೇ ಈ ಸೆಕ್ಷನುಗಳು ಮಾಡಲ್ಪಟ್ಟಿವೆ. ಸರ್ಕಾರದ ಈ ತೀರ್ಮಾನಕ್ಕೆ 1883 ರಲ್ಲಿ ಇದ್ದ ಕಾರಣಗಳು ಈಗಲೂ ಇರುವುದರಿಂದ ಈ ಠರಾವನ್ನು ಈ ರೂಪದಲ್ಲಿ ಚೀಫ್ ಕಮಿಷನರಿಗೆ ಅಂಗೀಕರಿಸಲಾಗುವುದಿಲ್ಲ.

ಆದರೂ ಜಮ್ಮಾದ ಹಕ್ಕು ಬಾಧ್ಯತೆಗಳನ್ನು ಕಾಪಾಡುವುದು ಸರಕಾರದ ನಿರ್ದಿಷ್ಟವಾದ ಧೋರಣೆಯಾಗಿದೆ; ಮತ್ತು ಕಂದಾಯದ ಬಾಕಿಗಾಗಿ ಹರಾಜು ಮಾಡಲ್ಪಟ್ಟ ಜಮ್ಮಾದ ಭೂಮಿಯನ್ನು ಕುಟುಂಬದವರ್ಯಾರಾದರೂ ಹರಾಜಿನಲ್ಲಿ ಕೊಂಡುಕೊಂಡಲ್ಲಿ, ಆ ಭೂಮಿಯನ್ನು ಪಕ್ಕಾ ದಾಖಲೆಯಲ್ಲಿ ಪಟ್ಟೆದಾರನ ಹೆಸರಿನಲ್ಲಿಯೇ ಇಡಲು ಬದಲು ಹಾಗೆ ಕೊಂಡವನ ಹೆಸರಿನಲ್ಲಿ ಇಡುವದೇ, ಅಂಥಾ ಭೂಮಿಯನ್ನು ಜಮ್ಮಾ ಹಿಡುವಳಿಯಾಗಿಯೇ ಇಟ್ಟುಕೊಳ್ಳಲು ಅನುಮತಿ ಕೊಡಬೇಕನ್ನುವ ಸೂಚನೆಯೇನಾದರೂ ಬಂದರೆ ಅದನ್ನು ಸಹಾನುಭೂತಿಯಿಂದ ಆಲೋಚಿಸಲು ಚೀಫ್ ಕಮಿಷನರು ತಯಾರಿರುವರು.

ಉತ್ಪತ್ತಿಗಳನ್ನು ತೆಗೆಯಬೇಕೆಂದೂ, ವೆಟರಿನರಿ ಸರ್ಜನರ ಸಂಬಳ ಕ [illegible] ಹೆಚ್ಚಿಸಬೇಕೆಂದೂ ಮುಂತಾಗಿ ಮಾತಾಡಿದರು.

ಮೆ. ಪಿ. ಯಂ. ನಾಣಯ್ಯನವರು—'ಹಣದ ಅಭಾವದ ಸ್ಥಿತಿಯೇ ಈ ಠರಾವಿಗೆ ವಿರೋಧ. ದಿನದಿನದ ಅಡಚಣೆಯನ್ನು ಮುಂದೊತ್ತಲು ಇಂಡಿಯಾ ಸರ್ಕಾರದಿಂದ ಹಣ ಸಾಲ ಪಡೆ ವಂತೆ ಈ ಬಾಬಿನಲ್ಲಿಯೂ ಹಣ ಸಾಲ ಪಡೆದು ತಕ್ಕ ಅಭಿವೃದ್ಧಿಯನ್ನು ಮಾಡಬೇಕು' ಎಂದುತ್ತರ [illegible].

ಫೈನಾನ್ಸ್ ಮೆಂಬರರು—'ಅನೇಕ ಕಡೆಗಳಲ್ಲಿ ವೆಟರಿನರಿ ಆಸ್ಪತ್ರೆಗಳನ್ನು ತೆರೆಯದಿರುವುದು ಬರೀ ಹಣದ ಅಭಾವದಿಂದ. ಹಣದ ಸೌಕರ್ಯವಾದೊಡನೆ ಆ [illegible] ಗಳು ತೆರೆಯಲು ಏರ್ಪಾಡು ಮಾಡಲಾಗುವದು. ಅಲ್ಲದೆ [illegible] ಸದಸ್ಯರು ಸೂಚಿಸಿದಂತೆ ಮಡಿಕೇರಿಯಲ್ಲಿ ಒಂದು ದೊಡ್ಡ ವೆಟರಿನರಿ ಆಸ್ಪತ್ರೆಯನ್ನು ತೆರೆಯಲು ಏರ್ಪಾಡು ಮಾಡಲಾಗುವದು. ಪ್ರಾಂತೀಯ ವಿಚಾರಗಳಿಗಾಗಿ ಇಂಡಿಯಾ ಸರ್ಕಾರದವರು ಹಣ ಸಾಲ ಕೊಡುವದಿಲ್ಲ. ವೆಟರಿನರಿ [illegible] ಗಳಿಗೆ ಮದ್ರಾಸಿನ ದರದ ವೇತನ ಕೊಡಲಾಗುವದು' ಎಂದು ಹೇಳಿ ಚರ್ಚೆಯನ್ನು ಅಂತ್ಯಗೊಳಿಸಿದರು.

ಠರಾವು ಓಟಿಗೆ ಹಾಕಲ್ಪಟ್ಟು 16 ಮಂದಿ ವಿರೋಧವಾಗಿಯೂ, 3 ಮಂದಿ ಅನುಕೂಲವಾಗಿಯೂ [illegible] ಓಟು ಕೊಟ್ಟದ್ದರಿಂದ ಠರಾವು ಬಿದ್ದುಹೋಯಿತು.

ಕೃಷಿಕರ ಕಷ್ಟ ನಿವಾರಣೆ

(93) 'ಕೊಡಗಿನ ರೈತರುಗಳ ಆರ್ಥಿಕ ದುಸ್ಥಿತಿಯನ್ನು ನಿವಾರಿಸಲಿಕ್ಕಾಗಿ ಕೊಡಗಿನಲ್ಲಿ ಒಂದು ಲ್ಯಾಂಡ್ ಮಾರ್ಗೇಜ್ ಬ್ಯಾಂಕನ್ನು ತೆರೆಯಬೇಕು. ಸಾಲಪರಿಹಾರ ಬೋರ್ಡನ್ನು ಏರ್ಪಡಿಸಬೇಕು, ಬಡ್ಡಿಯ ದರ [illegible] ಬೇಕು. [illegible] ಕಂತಿನ ಸಾಲ ಕೊಡಬೇಕು ಮತ್ತು ಸರಕುಗಳ [illegible] ಅನುಕೂಲ ಮಾಡಬೇಕೆಂಬ' ಠರಾವನ್ನು ಮೆ. ಪಿ. [illegible] ನಾಣಯ್ಯನವರು ಸಭೆಯ ಮುಂದಿಟ್ಟು ಈ ಪ್ರಕಾರ ವಿವರಿಸಿದರು—'ಕೊಡಗಿನ ರೈತರುಗಳ ಒಟ್ಟು ಸಾಲವು ಒಂದು ಕೋಟಿಯ ಮೇಲಿರಬಹುದೆಂದು ತಿಳಿಯಲಾಗಿದೆ. ಇಕನಾಮಿಕ್ ಅನ್ವೇಷಣ ಕಮಿಟಿಯ ರಿಪೋರ್ಟ್ ಇನ್ನೂ ಹೊರಬಿದ್ದಿರುವದಿಲ್ಲ. ಮಳೆಗಾಲದ ಹೆಚ್ಚು ಕಡಿಮೆಗಳೂ, ವಸ್ತುಗಳ ಬೆಲೆ ಇಳಿತವೂ, [illegible] ಗಳನ್ನು ಸಾಗಿಸಲು ಒಳ್ಳೆ ರಸ್ತೆಗಳಿಲ್ಲದಿರುವ್ವದೂ [illegible]. ಉತ್ಪತ್ತಿಗಳಿಗೆ ಧಾರಣೆಯಿಲ್ಲದಿರುವ [illegible] ಈಗಿನ ಆರ್ಥಿಕ ಮುಗ್ಗಟ್ಟಿಗೆ ಕಾರಣವಾಗಿರುವದಾಗಿ [illegible] ಸಾಲದ ಹೊರೆಯನ್ನು ಇಳಿಸದಿದ್ದಲ್ಲಿ ನೋಡಲು ಇಲ್ಲ. ಆದ್ದರಿಂದ ಒಂದು [illegible] ಗಳ ಸಾಲವನ್ನು ದರ [illegible] ಸರ್ಕಾರದಿಂದ ಪಡೆದು ರೈತರ ಸಾಲಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಅಲ್ಲದೆ ರೈತರ [illegible] ಗಳಿಗೆ ತಕ್ಕ [illegible] ವಾಹನದ ಸಾಧನಗಳನ್ನು ಕಲ್ಪಿಸಿಕೊಡಬೇಕು. ಈ ವಿಚಾರದಲ್ಲಿ ಸರ್ಕಾರವು ಒಡನೆ ತಕ್ಕ ಏರ್ಪಾಡುಗಳನ್ನು ಮಾಡಬೇಕು.'

ಮೆ. ಕೊಂಗಂಡ ಗಣಪತಿಯವರು ಅನುಮೋದಿಸಿದರು.

ಫೈನಾನ್ಸ್ ಮೆಂಬರರು—'ಸರಕಾರಕ್ಕೆ ಈ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಇರಾದೆ ಇದೆ. ಸಭಾಸದರ ಅಭಿಪ್ರಾಯಗಳಿಗೆ ಸರಕಾರವು ತಕ್ಕ ಗಮನಕೊಡುವದು. ಇಕನಾಮಿಕ್ ಕಮಿಟಿಯ ವರದಿಯನ್ನು ಬೇಗನೆ ಪ್ರಕಟಿಸಲಾಗುವದು' ಎಂದು ಹೇಳಿದರು.

ಸರಕಾರಿ ಮೆಂಬರರ ಭರವಸೆ ಮೇರೆ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

ವ್ಯವಸಾಯ ಇಲಾಖೆಯ ಅಭಿವೃದ್ಧಿಗೆ ಹಣ

(94) 'ಕೊಡಗಿನ ರೈತರ ಮತ್ತು ಪ್ಲಾಂಟರುಗಳ ಕಷ್ಟವನ್ನು ನಿವಾರಿಸಲೂ ಮತ್ತು ವ್ಯವಸಾಯ ಇಲಾಖೆಯನ್ನು ಸುವ್ಯವಸ್ಥಿತವಾಗಿಸಲೂ ತಕ್ಕ ಧನಸಹಾಯವನ್ನು ಇಂಡಿಯಾ ಸರ್ಕಾರದಿಂದ ಕೇಳಬೇಕು ಎಂಬ ಠರಾವನ್ನು ಮೆ. ಪುಚ್ಚಿಮಾಡ ನಾಣಯ್ಯನವರು ಸೂಚಿಸಿ ಹೀಗೆ ವಿವರಿಸಿದರು—'ಕೊಡಗಿನಲ್ಲಿ ನಿಜವಾಗಿ ವ್ಯವಸಾಯ ಇಲಾಖೆಯೇ ಇಲ್ಲವೆಂದೆನ್ನಬಹುದು. ಭೂಕಂದಾಯದಿಂದಲೇ ಕೊಡಗಿಗೆ 3ರಿಂದ 4 ಲಕ್ಷ ರೂ. ಉತ್ಪತ್ತಿಯಿರುವದು. ಆದರೂ ಈ ಬಾಬಿನಲ್ಲಿ ಸಾಕಷ್ಟು ಖರ್ಚು ಮಾಡುವದಿಲ್ಲ. ಇಡೀ ಕೊಡಗಿಗೆ ಒಬ್ಬ ಅಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರನ್ನು ನೇಮಿಸಿ, ಅವರಿಗೆ ಬರೀ 600/ರೂ ಮಾತ್ರ ವ್ಯವಸಾಯ ಶೋಧನೆಗಾಗಿ ಖರ್ಚಿಗೆ ಕೊಟ್ಟಿರುವದರಿಂದ ಹೇಳುವಷ್ಟು ಪ್ರಯೋಜನವಿಲ್ಲ. ಶೋಧನಾ ಕೇಂದ್ರಗಳೇನೂ ನಡೆಯುವದಿಲ್ಲ. ಬೀಜದ ವ್ಯವಸಾಯ ಕ್ರಮಗಳಲ್ಲಿಯೂ ಸರಿಹೊಂದುವದಿಲ್ಲ. ರೈತರಿಗೆ ನೂತನ ವ್ಯವಸಾಯ ಕ್ರಮಗಳನ್ನು ಬೋಧಿಸುವ ಏರ್ಪಾಡು ಮಾಡಬೇಕು. ಇಂಡಿಯಾದ [illegible] ಬಂದಿದ್ದ ರಾಯಲ್ ಎಗ್ರಿಕಲ್ಚರಲ್ ಕಮಿಷನವರು 'ಚಿಕ್ಕ ಪ್ರಾಂತಗಳಿಗೆ ವ್ಯವಸಾಯ ಅಭಿವೃದ್ಧಿಯ ಕಾರ್ಯಕ್ಕೆ ಸಾಧ್ಯವಿಲ್ಲದಿದ್ದಲ್ಲಿ ಇಂಡಿಯಾ ಸರಕಾರವು ಸಹಾಯ ಮಾಡಬೇಕೆಂದು' ಬರೆದಿರುವರು. ಅಲ್ಲದೆ 'ಇಂಪೀರಿಯಲ್ ಅಗ್ರಿಕಲ್ಚರಲ್ ಇನ್ಸ್ಟಿಟ್ಯೂಟ್ ಆಫ್ ರೀಸರ್ಚ್' ಸಂಸ್ಥೆಯಿಂದಲೂ ಬೇಕಾದ ಸಹಾಯ ಪಡೆಯಬೇಕು. ಮೈಸೂರು ಸರಕಾರವು ಈ ಬಾಬಿನಲ್ಲಿ ಹೆಚ್ಚು ಶ್ರದ್ಧೆಯನ್ನಿಟ್ಟು ಕಾರ್ಯನಡೆಸುತ್ತಲಿದೆ. ಅದೇ ಪ್ರಕಾರ ಇಲ್ಲಿಯೂ ನಡೆಸಬೇಕು. ಸರಕಾರವು ರೈತರ ಕಷ್ಟದಲ್ಲಿ ಸಹಾಯ ಮಾಡಲೇ ಬೇಕು.'

ಮೆ. ವೀರಭದ್ರಯ್ಯನವರು ಅನುಮೋದಿಸಿದರು.

ಫೈನಾನ್ಸ್ ಮೆಂಬರರು—ದೇಶದ ಅಭ್ಯುದಯವು ರೈತರ ಕ್ಷೇಮಾಭಿವೃದ್ಧಿಯನ್ನವಲಂಬಿಸಿರುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಕೊಡಗು ಸರಕಾರವು ಠರಾವಿನ ಕೆಲವು ಅಂಶವನ್ನು ತತ್ಕಾಲ ನಡೆಸಲು ಶಕ್ತವಿರುವದು ಈ ಸ್ಥಿತಿಯಿಂದಲೇ. ಎಲ್ಲರ ದೃಷ್ಟಿಗೆ ಸಾಧ್ಯವಿರುವದನ್ನೇ ಅಷ್ಟು ಸರಕಾರ [illegible] ಮಾಡುವದು ಅಲ್ಲದೆ ಇಂಡಿಯಾ ಸರಕಾರವನ್ನು 'ವ್ಯವಸಾಯ ಅಭಿವೃದ್ಧಿಗಾಗಿ ಹಣ ಕೊಡಿ' ಎಂದು ಕೇಳಿದರೆ ಅವರು ಕೊಡುವದಿಲ್ಲ. ಸರಕಾರವು ಸಾಧ್ಯವಾದಷ್ಟು ಪ್ಲಾಂಟರುಗಳಿಗೂ ಸಹಾಯ ಮಾಡುವದು' ಎಂದು ಠರಾವನ್ನು ವಿರೋಧಿಸಿದರು.

ಮೆ. ಬಲ್ಲಚಂಡ ಬೆಳ್ಳಿಯಪ್ಪನವರು ಹೇಳಿದ್ದೇನೆಂದರೆ—'ದೇಶದ ಆರ್ಥಿಕ ಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ. ಈಗಿನ ವ್ಯವಸಾಯ ಇಲಾಖೆಯು ಬರೀ ನಾಮಕಾವಾಸ್ತೆ ಇರುವದು. ಕೊಡಗಿಗೆಲ್ಲ ಒಬ್ಬ ಡೆಮಾನ್ಸ್ಟ್ರೇಟರನ್ನು ನೇಮಿಸಿದ್ದರಲ್ಲಿ ಪ್ರಯೋಜನವೇನೂ ಇಲ್ಲ. ಇಂಡಿಯಾ ಸರಕಾರವು ಆಗಿಂದಾಗೆ ಎಕ್ಸ್‌ಪರ್ಟುಗಳನ್ನು ಕಳುಹಿಸುತ್ತಿದ್ದರೂ ಅವರ ರಿಪೋರ್ಟುಗಳೆಲ್ಲವೂ ಗಂಟುಕಟ್ಟಲ್ಪಟ್ಟಿವೆ. ಇಂಥ ಸಂದರ್ಭಗಳಲ್ಲಿ ಗಟ್ಟಿಸ ಆವಶ್ಯಕತೆ ಏನಿರುವದೋ ತಿಳಿಯದು. ದೇಶದ ಆದಾಯದಲ್ಲಿ ½ನೇ ಭಾಗವು ಭೂಕಂದಾಯವಿರುವದರಿಂದ ಈ ಬಾಬಿನಲ್ಲಿ ಸರಕಾರವು ನಿರ್ಲಕ್ಷ್ಯತಾಳಿರುವದು ಅತ್ಯಂತ ಶೋಚನೀಯ. ಇಂಡಿಯಾ ಸರಕಾರವು ವ್ಯವಸಾಯದ ಪ್ರತ್ಯೇಕವಾಗಿ ಸಾಲ ಕೊಡದಿದ್ದರೆ ಒಟ್ಟಿನಲ್ಲಿ ವ್ಯವಸಾಯಕ್ಕೆಂದು ಹೆಚ್ಚಿನ ಮೊಬಲಗನ್ನು ಆ ಪ್ರಕಾರ ಕಳಿಸುವ [illegible] ಇಂಡಿಯಾ ಸರಕಾರದಿಂದ ಪಡೆಯಬಹುದು.'

ಮೆ. [illegible] ಠರಾವಿಗೆ ಬೆಂಬಲವಾಗಿ ಮಾತನಾಡಿದ [illegible] ಫೈನಾನ್ಸ್ ಮೆಂಬರರು [illegible] ಚರ್ಚಿಸಿದ ಬಳಿಕ ಠರಾವು ಓಟಿಗೆ ಹಾಕಲ್ಪಟ್ಟು 14 [illegible] ವಿರೋಧವಾಗಿ ಓಟು ಕೊಟ್ಟದ್ದರಿಂದ ಠರಾವು ಬಿದ್ದುಹೋಯಿತು.

ಹಣ್ಣು ವ್ಯವಸಾಯ [illegible] ಧನ ಸಹಾಯ

(95) 'ಕೊಡಗಿನಲ್ಲಿ ಹಣ್ಣುಗಳ ವ್ಯವಸಾಯಕ್ಕೂ ಮತ್ತು ಪಶುಗಳ ಪೋಷಣೆಗೂ [illegible] ಧನ ಸಹಾಯವನ್ನು 'ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್' ಸಂಸ್ಥೆಯವರಿಂದ ಪಡೆಯಬೇಕೆಂದ' ಠರಾವನ್ನು ಮೆ. ಪುಚ್ಚಿಮಾಡ ನಾಣಯ್ಯನವರು ಸೂಚಿಸಿ [illegible] ಏನೆಂದರೆ—'ಕೊಡಗಿನ ರೈತರಿಗೆ ಒಂದೇ ಬೆಳೆಯ ಉತ್ಪತ್ತಿ [illegible] ದರಿಂದ ಹೆಚ್ಚಿನ [illegible] ಉತ್ಪತ್ತಿಗೆ ಆವಕಾಶ [illegible] ಈ ಠರಾವಿನ ಉದ್ದೇಶ. ಕೊಡಗಿನಲ್ಲಿ [illegible] ಫಲಗಳು ಬೆಳೆಯುತ್ತಿದ್ದರೂ [illegible] ಬೆಳೆಸಲ್ಪಡುವದಿಲ್ಲ. ಅದಕ್ಕೆ ಉತ್ತೇಜನವೂ [illegible] ಸಹಾಯವೂ ಸರಕಾರದಿಂದ ಸಲ್ಲಬೇಕು. ದಕ್ಷಿಣ ಕೊಡಗಿನಲ್ಲಿ ಕಿತ್ತಳೆ ವ್ಯವಸಾಯವು ಹೆಚ್ಚಾಗಿದೆ ಆದರೂ ಬೇರೆ [illegible] ಎಲ್ಲ ವಿಧದ ಕೀಟಗಳು ಬಂದು ರೈತರಿಗೆ ಅಪರಿಮಿತ ನಷ್ಟವಾಗಿದೆ. ಹವಗುಣವು ಕೊಡಗಿನಲ್ಲಿ ಹಣ್ಣು ಹಂಪಲುಗಳ ವ್ಯವಸಾಯಕ್ಕೆ ಅನುಕೂಲವಾಗಿದೆ. ಅಲ್ಲದೆ [illegible] ಜಾತಿಗಳನ್ನು ಸಾಕುವದೂ, ಹಸುಗಳನ್ನು ಸಾಕುವದೂ [illegible] ಇದಕ್ಕೆಲ್ಲ ಸಾಕಷ್ಟು ದ್ರವ್ಯ ಸಹಾಯ ಹೊರತು ಸರಕಾರವು ರೈತರಿಗೆ ಉತ್ತೇಜನ ಮತ್ತು ಸಹಾಯವನ್ನು ಕೊಡಬೇಕು. ಪಶುಸಂಪತ್ತಿ ಶೋಧನೆಯ ಕಾರ್ಯಕ್ಕಾಗಿ ಇಂಡಿಯಾ ಸರಕಾರದಿಂದ 'ಇಂಪೀರಿಯಲ್ ಅಗ್ರಿಕಲ್ಚರಲ್ ಇನ್ಸ್ಟಿಟ್ಯೂಟ್ ಆಫ್ ರೀಸರ್ಚ್' ಸಂಸ್ಥೆಯವರಿಗೆ ಒಂದು ಕೋಟಿ ರೂಪಾಯಿ ಮಂಜೂರಾಗುತ್ತಲಿದೆ. ಈ ಸಂಸ್ಥೆಯಿಂದ ಎಲ್ಲ ಪ್ರಾಂತ್ಯಕ್ಕೂ ಧನಸಹಾಯವಾಗುತ್ತಲಿದೆ. ಮೈಸೂರಿನ ಕಬ್ಬು ವ್ಯವಸಾಯಕ್ಕೂ ಧನ ಸಹಾಯ ದೊರೆತಿದೆ; ಅಂದ ಮೇಲೆ ನಮ್ಮ ಸರಕಾರವೇಕೆ ಅಂಥ ಸಹಾಯವನ್ನು ಪಡೆಯಬಾರದು? ಅದರ ಪ್ರಯೋಜನವನ್ನು ಹೊಂದ ಬೇಕು.'

ಮೆ. ಸಿ. ಯಸ್. ಪೂವಯ್ಯನವರು ಅನುಮೋದಿಸಿದರು.

ಫೈನಾನ್ಸ್ ಮೆಂಬರರು—'ಇಂಡಿಯಾದ ಮುಖ್ಯಮುಖ್ಯ ವಿಷಯಗಳಿಗಲ್ಲದೆ ಇತರ ಸಣ್ಣ ಪುಟ್ಟ ವಿಷಯಗಳ ಶೋಧನೆಗಾಗಿ ರೀಸರ್ಚ್ ಇನ್ಸ್ಟಿಟ್ಯೂಟಿನವರು ಹಣಸಹಾಯ ಕೊಡುವದಿಲ್ಲ. ಅವರು ನಮಗೆ ಬೇಕಾದ ತಿಳುವಳಿಕೆಯನ್ನು ಕೊಡುತ್ತಾರೆ. ಆರೋಗ್ಯ ವಿಚಾರದಲ್ಲಿ ಹಿಂದು ಸಹಾಯ ಕೊಡುವದಿಲ್ಲ. ಆದ್ದರಿಂದ ಈ ಠರಾವಿನ ಅವಶ್ಯಕತೆಯಿಲ್ಲ.'

ರಾ. ಬ. ಅಪ್ಪಾರಂಡ ಅಯ್ಯಪ್ಪನವರು—'ಸರಕಾರಿ ಮೆಂಬರರು ಹೇಳಿದ ಮಾತು ನಿಜ. ಆದರೆ ನಮ್ಮ ಪ್ರಾಂತದಲ್ಲಿ ಅಖಿಲ ಭಾರತ ಪ್ರಾಮುಖ್ಯವಾದ ವಿಚಾರಗಳನ್ನು ಕಲ್ಪಿಸಿ ಅವುಗಳಿಗೆ ಧನ ಸಹಾಯ ಪಡೆಯಬೇಕು. ಕೊಡಗಿನ ಕಿತ್ತಳೆಯು ಪ್ರಸಿದ್ಧಿ ಹೊಂದಿದೆ. ಅದರ ವ್ಯವಸಾಯವು ಇಂಡಿಯಾ ಪ್ರಾಮುಖ್ಯವಾದ ವಿಷಯವಾಗಿದೆ. ಅದ್ದರಿಂದ ಅಂಥ ವಿಚಾರಗಳನ್ನು ಸ್ಥಳೀಯ ಸರ್ಕಾರವು ಸೂಚಿಸಿ ಅವುಗಳಿಗೆ ಸಹಾಯ ಪಡೆಯಬೇಕು.'

ಮೆ. ಪುಚ್ಚಿಮಾಡ ನಾಣಯ್ಯನವರ ಜವಾಬೇನೆಂದರೆ—'ರಾಯಲ್ ಕಮಿಷನಿನ ರಿಪೋರ್ಟಿನಲ್ಲಿ ಈ ತರನಾದ ನಿರ್ಬಂಧನೆಗಳನ್ನು ನಾನು ನೋಡಿಲ್ಲ. ಹಾಗೂ ಇಂಡಿಯಾ ಪ್ರಾಮುಖ್ಯವಾದ ವಿಚಾರಗಳನ್ನು ನಾವು ಕಂಡುಹಿಡಿದು ಅದಕ್ಕೆ ಧನ ಕೇಳಬೇಕು. ಅವರು ತಿರಸ್ಕರಿಸುವರೆಂದು ನಾವು ಮೊದಲೇ ಏಕೆ ಊಹಿಸುವದು? ಇಂಡಿಯಾ ಸರ್ಕಾರದವರೇ ಚಿಕ್ಕ ಪ್ರಾಂತಗಳಿಗೆ ಸಹಾಯಗಳನ್ನೀಯಬೇಕೆಂದಿರುವಾಗ ಕೊಡಗಿಗೇಕೆ ಅಂಥಾ ಸಹಾಯವನ್ನು ಪಡೆಯಬಾರದು? ಸ್ಥಳೀಯ ಸರ್ಕಾರವು ಈ ವಿಚಾರದಲ್ಲಿ ತಮ್ಮ ಕರ್ತವ್ಯ ಮಾಡದಿರುವದು ವ್ಯಸನಕರ.'

ಠರಾವು ಓಟಿಗೆ ಹಾಕಲ್ಪಟ್ಟು 14 ಮಂದಿ ವಿರೋಧವಾಗಿ ಓಟು ಕೊಟ್ಟದ್ದರಿಂದ ಠರಾವು ಬಿದ್ದುಹೋಯಿತು.

ಮಲೇರಿಯಾ ನಿವಾರಣೆ.

(96) 'ಮಲೇರಿಯಾವನ್ನು ಕೊಡಗಿನಿಂದ ನಿವಾರಿಸುವದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಧನ ಸಹಾಯ ಕೊಡಬೇಕೆಂದೆನ್ನುವ ಠರಾವನ್ನು ಮೆ. ಪುಚ್ಚಿಮಾಡ ನಾಣಯ್ಯನವರು ಸೂಚಿಸಿ—'ಕೊಡಗಿನಲ್ಲಿ ಮಲೇರಿಯಾವನ್ನು ನಿವಾರಿಸಲು ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮವು ಸಾಕಷ್ಟು ಪರಿಣಾಮಕಾರಿಯಾಗಿರುವದಿಲ್ಲ. ಕ್ವಯಿನ ಹಂಚುವದರಿಂದ ಶೇಕಡ 10 ಮಂದಿಗೂ ಸಾಕಾಗುವಷ್ಟು ಕ್ವಯಿನ ದೊರೆಯುವದಿಲ್ಲ. ಅದೂ ತಕ್ಕ ಪ್ರಮಾಣದಲ್ಲಿಲ್ಲ. 'ಅಟೊಬ್ರಿನ', 'ಕ್ವಿನಿನ್ ಪ್ಲಾಸ್ಮ' ಮೊದಲಾದ ಮತ್ತು ಪರಿಣಾಮಕಾರಿಯಾದ ಕ್ವಯಿನ ಔಷಧಗಳನ್ನು ಪ್ರಯೋಗಿಸಬೇಕು' ಎಂದು ಹೇಳಿದರು.

ಮೆ. ಕೊಂಗಂಡ ಗಣಪತಿಯವರು ಅನುಮೋದಿಸಿದರು.

ಫೈನಾನ್ಸ್ ಮೆಂಬರರು—'16 ಕಡೆಗಳಲ್ಲಿ ಮಲೇರಿಯಾ ನಿವಾರಣಾ ಏರ್ಪಾಡುಗಳು ನಡೆಯಲ್ಪಟ್ಟಿವೆ. ಇದುವರೆಗೆ ಸರ್ಕಾರದವರು 790 ಪೌಂಡುಗಳ ಅಂದರೆ 11,000 ರೂ. ಬೆಲೆಯ ಕ್ವಯಿನ ಕೊಡುತ್ತಿದ್ದಾರೆ. ಅಲ್ಲದೆ ಬೇರೆ ಇನ್ನು ಅನೇಕ ಕೆಲಸಗಳು ಈ ಭಾಗದಲ್ಲಿ ಮಾಡಲ್ಪಡುತ್ತಿವೆ' ಎಂದು ಠರಾವನ್ನು ವಿರೋಧಿಸಿದರು. ಅನಂತರ ಸ್ವಲ್ಪ ಚರ್ಚೆ ನಡೆದು ಠರಾವು ಸರ್ವಸಮ್ಮತದಿಂದ ಪಾಸಾಯಿತು.

(ಮುಂದುವರಿಯುವುದು)

ಅಖಿಲ ಕೊಡಗು ಉಪಾಧ್ಯಾಯರ ವಾರ್ಷಿಕ ಸಮ್ಮೇಳನ.

ಬೆಜವಾಡದ ಪುರವಾಸಿಗಳು ಶ್ರೀ ಪಿ. ಅಂಜನೇಯಲುರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಬಿಸೀನಿಯಾದವರ ಮೇಲೆ ಸಹಾನುಭೂತಿಯನ್ನು ಸೂಚಿಸುವ ಠರಾವು ಪಾಸು ಮಾಡಿದರು.

ಅಕ್ಟೋಬರ್ ತಾ. 16.

ಅಡೋವದ ವರ್ತಮಾನ ಸರಿಯಲ್ಲ.

ಅಡೋವವನ್ನು ರಾಸ್ ಸೆಯೂಮರ ನಾಯಕತ್ವದಲ್ಲಿ ಅಬಿಸೀನಿಯಾ ಸೈನಿಕರು ಆಕ್ರಮಿಸಿಕೊಂಡರೆಂದೂ ಸುಮಾರು 2500 ಇಟಲಿಯನರನ್ನು ಕೊಂದರೆಂಬ ವರ್ತಮಾನವು ಸರಿಯಲ್ಲವೆಂದು ಪ್ರಕಟವಾಗಿದೆ.

ಒಗಡೆನ್ ಪ್ರಾಂತದಲ್ಲಿ ಬಾಂಬಿನ ಮಳೆ.

ಇಟಲಿಯವರ 10 ಸಾವಿರ ಸೈನಿಕರನ್ನು ಇಟಾಲಿಯನ್ ಸೋಮಾಲಿಲ್ಯಾಂಡಿನಿಂದ ಎರಡು ದಿಕ್ಕುಗಳಿಂದ ಒಯ್ದಿರುವರು. ಒಗಡೆನ್ ಪ್ರಾಂತದಲ್ಲಿ ಇಟಲಿಯನರ ವಿಮಾನಗಳು 300 ಬಾಂಬುಗಳಿಂದ [illegible] ಮತ್ತು ಮಾಟೆನು ಎಂಬ ಪಟ್ಟಣಗಳನ್ನು ನಾಶ ಮಾಡಿದವು. ಆಗ ಅಬಿಸೀನಿಯಾದವರು ಗುಂಡು ಹೊಡೆದು ಎರಡು ವಿಮಾನಗಳನ್ನು ಕೆಳಕ್ಕೆ ಕೆಡಹಿದರು. ಅವರಲ್ಲಿದ್ದ ಸೈನಿಕರನ್ನು ಸೆರೆ ಹಿಡಿದಿರುವರು.

[illegible] ಹಡಗುಗಳಿಂದ ಇಳಿಸಲ್ಪಟ್ಟ 100 ಟನ್ನಿನಷ್ಟು ಶಸ್ತ್ರಗಳು ರೈಲುಗಳಲ್ಲಿ ಅದೀಸಾಬಾಬಕ್ಕೆ ಕಳಿಸಲ್ಪಟ್ಟವು. ಬ್ರಿಟಿಷ್ ಸೋಮಾಲಿಲ್ಯಾಂಡ್ ಮೊದಲಾದ ನಿವಾಸಿಗಳಿಗೆ ಇಟಲಿಯವರ ಮೇಲೆ ದ್ವೇಷವೂ, ಅಬಿಸೀನಿಯಾದವರ ಮೇಲೆ ಸಹಾನುಭೂತಿಯೂ ಹೆಚ್ಚುತ್ತಿದೆ.

'ಜಯವು ನಮ್ಮದು'

ತಾರೀಕು 17ರಲ್ಲಿ ಅಬಿಸೀನಿಯಾದ ಚಕ್ರವರ್ತಿಯವರು ಅರಮನೆಯ ಮುಂದೆ 50,000 ಸೈನಿಕರು ಯುದ್ಧ ಸನ್ನದ್ಧರಾಗಿ ಬಂದು ನಿಂತಾಗ್ಗೆ ಹೀಗೆಂದರು—'ಪ್ರತಿಯೊಬ್ಬನೂ ತನ್ನ ದೇಶಕ್ಕಾಗಿ ತ್ಯಾಗ ಮಾಡಬೇಕು. ಇಟಲಿಯು ತನ್ನ ವಿಮಾನ, 'ಟ್ಯಾಂಕ್,' ಬಾಂಬುಗಳಿಂದ ಹೆಮ್ಮೆ ಪಡಬಹುದು; ಆದರೆ ಜಯವು ನಮಗಾಗುವುದು. ನಾವು ಶಾಂತಿಗೆ ಯತ್ನಿಸಿದೆವು. ಆದರೆ [illegible] ಜನಾಂಗಗಳ ಕೂಟದ ಗೌರವಕ್ಕಾಗಿ ಇಷ್ಟರ ವರೆಗೆ ಕಾದೆವು. ಇಟಲಿಯು ಬಲಾತ್ಕರಿಸಿದ್ದರಿಂದ ಈಗ ಧೈರ್ಯವಾಗಿ ಹೋರಾಡತೊಡಗಿದೆವು' ಎಂದು ಹೇಳಿ ಸೈನಿಕರಲ್ಲಿ ಹುರಿದುಂಬಿಸಿದರು.

ಕೆಲವು ದಿವಸಗಳಲ್ಲಿ ಅಬಿಸೀನಿಯಾದ ಚಕ್ರವರ್ತಿಯವರು ಉತ್ತರ ರಣರಂಗದಲ್ಲಿ ಮುಖ್ಯ ಸ್ಥಳವಾದ ದೆಸ್ಸಿ ಎಂಬಲ್ಲಿಗೆ ಹೋಗಬಹುದೆಂದು ಸುದ್ದಿ.

ಅಕ್ಸಮ್ ಅಬಾಜಕ್ಕೆ ಬಾಂಬು ಹಾಕಲ್ಪಡದಿಲ್ಲ.

ಅಬಿಸೀನಿಯಾದ ಮುಖ್ಯ ಪಟ್ಟಣವಾದ ಅಕ್ಸಮ್ ಅಬಾಜವನ್ನು ಪವಿತ್ರ ಸ್ಥಾನವಾಗಿಯಾಗಲೀ, ಯುದ್ಧ ಸಾಮಗ್ರಿಗಳ ಸ್ಥಾನವಾಗಿಯಾಗಲಿ ಮಾಡಿಕೊಳ್ಳದೆ ಹೋದರೆ ಅದಕ್ಕೆ ಬಾಂಬು ಎಸೆಯುವದಿಲ್ಲವೆಂದು ಇಟಲಿಯವರು ಹೇಳಿ.

ದೇಶದ್ರೋಹಿಗೆ ಇಟಲಿಯ ಬಹುಮಾನ.

ಚಕ್ರವರ್ತಿಯ ಪಕ್ಷ ಬಿಟ್ಟು, ಇಟಲಿಯ ಕಡೆ ಸೇರಿದ ರಾಸ್ ಗುಗ್ಸನನ್ನು ಇಟಲಿಯವರು ಟೈಗರ್ ಪ್ರಾಂತ್ಯದ 'ರಾಸ್' ಎಂದರೆ ಅಧಿಪತಿಯನ್ನಾಗಿ ಮಾಡಿರುವರು.

ಧಾಳಿ ನಡೆಸುವವರ ಕಷ್ಟ.

ಮಸಾವಾದ ಬಳಿ ಸಮುದ್ರವು ಹಡಗುಗಳಿಂದ ತುಂಬಿ ಹೋಗಿದೆ. ಸಾಮಾನು ಇಳಿಸದೆ 8 ದಿನಗಳಿಂದ ಕಾದುಕೊಂಡಿರುವ ಹಡಗುಗಳಿವೆ. ಯುದ್ಧ ಸಾಮಗ್ರಿಗಳು [illegible] ಇಳಿಸಲ್ಪಡುತ್ತಿವೆ. ಇಟಲಿಯ ಸೈನಿಕರು [illegible], ನೀರು ಸಾಲದೆಯೂ, ಬಿಸಿಯನ್ನು ಸಹಿಸಲಾರದೆ ಕಷ್ಟಪಡುತ್ತಿರುವರು. ಯುದ್ಧರಂಗಕ್ಕೆ ಹೋಗುವ 350 ವಿಮಾನಗಳು ಒಂದು ಹಡಗಿನಲ್ಲಿ ಮಸ್ಸಾವಕ್ಕೆ ಇಟಲಿಯಿಂದ ಬಂದು ತಲುಪಿದೆ. ಇಟಲಿಯವರು ಮಸ್ಸಾವ ಪಟ್ಟಣವನ್ನು ಮೆಶಿನ್ ಗನ್ ಮುಂತಾದವುಗಳಿಂದ ಭದ್ರಪಡಿಸುತ್ತಿರುವರು.

ಯುದ್ಧರಂಗದಲ್ಲಿ ಇಟಲಿಯವರ 500 ವಿಮಾನಗಳಿವೆ. [illegible]ಗಳಿಂದ ಅಬಿಸೀನಿಯಾದ ಮೇಲೆ ಬಾಂಬುಗಳ ಬದಲು ಗುಂಡಿನ ಮಳೆ ಸುರಿಸುವರು.

ಅಬಿಸೀನಿಯಾಕ್ಕೆ ಯುದ್ಧ ಸಾಮಾನುಗಳ ತಡೆಯಿಲ್ಲ.

ಇಂಗ್ಲೆಂಡು, ಪೋಲೆಂಡ್, ಗ್ರೀಸ್, ಫ್ರಾನ್ಸ್, [illegible], ಕೊಲಂಬಿಯ ಮತ್ತು ಆಸ್ಟ್ರಿಯಾ ದೇಶಗಳು ಅಬಿಸೀನಿಯಕ್ಕೆ ಯುದ್ಧ ಸಾಮಾನುಗಳನ್ನು ಕಳುಹಿಸಲು ತಡೆಯನ್ನು ತೆಗೆದು ಹಾಕಿವೆ. ಬ್ರಿಟನ್ನಿನಿಂದ ಎರಡನೆ ಯುದ್ಧ ಸಾಮಾನುಗಳು ಅಬಿಸೀನಿಯಕ್ಕೆ ಕಳುಹಿಸಲ್ಪಟ್ಟಿವೆ.

ಅಬಿಸೀನಿಯಕ್ಕೆ ದಾನಗಳು.

ಲಂಡನಿನಲ್ಲಿರುವ ಇಥಿಯೋಪಿಯಾದ ರಾಯಭಾರಿಗೆ ಇಂಗ್ಲೆಂಡಿನ ಗಂಡಸರು, ಹೆಂಗಸರು ಸಹಾನುಭೂತಿಯ ಹಲವು [illegible]ಗಳನ್ನು ಮಾಡುತ್ತಿರುವರು. ಸ್ಕಾಟ್ಲೆಂಡಿನಿಂದ ರಿವಾಲ್ವರ್ ದಾನಗಳು ಕಳುಹಿಸಲ್ಪಡುತ್ತಿವೆ. ಇಷ್ಟರ ವರೆಗೆ 180 [illegible]ಗಳು ದೊರಕಿವೆ. ಹಲವರು ಯುದ್ಧಕ್ಕೆ ಬರುವೆವೆಂದು [illegible]ರುವರು. ಆದರೆ ಈ ಸೇವೆಯು ವಂದನಾಪೂರ್ವಕ ನಿರಾಕರಿಸಲ್ಪಡುತ್ತಿದೆ.

ವಿಷದ ವಾಯುವನ್ನು ತಡೆಯುವ ಉಪಾಯ.

ಇಟಲಿಯವರು ಬಾಂಬುಗಳಿಂದ ವಿಷದ ಗಾಳಿಯನ್ನು ಬಿಟ್ಟ ಕೂಡಲೆ ಇಥಿಯೋಪಿಯನರು ಒಂದು ತುಂಡು ಬಟ್ಟೆಯನ್ನು ಮೂಗಿಗೆ ಕಟ್ಟಿಕೊಳ್ಳಬೇಕೆಂದು ಹರಾರಿನ ಗವರ್ನರ್‌ರ ಹುಕುಂ.

ಮಂತ್ರಿಯ ಮಕ್ಕಳು ಹೊರಟರು.

ಲಂಡನಿನಲ್ಲಿರುವ ಇಥಿಯೋಪಿಯಾ ಮಂತ್ರಿಯ ಇಬ್ಬರು ಮಕ್ಕಳು ವಿಮಾನದಲ್ಲಿ ಅಬಿಸೀನಿಯಾದ ಯುದ್ಧರಂಗಕ್ಕೆ ಹೊರಟರು. 'ವಾಯುಮಂಡಲದಲ್ಲಿ ಮುಸೊಲಿನಿಯವರ ಮಕ್ಕಳ ಕೂಡ ಕಾದಾಡಬಹುದು' ಎಂದು ಅವರು ಹೇಳಿದರು.

ಅಕ್ಟೋಬರ್ ತಾ. 18.

ಟೈಗರ್ ರಣಭೂಮಿಯಲ್ಲಿ ಸ್ಥಿತಿಯು ಇಥಿಯೋಪಿಯನರಿಗೆ ಅನುಕೂಲವಾಗಿ ಪರಿವರ್ತಿಸುತ್ತಿದೆ. ಇಟಲಿಯ ಸೈನ್ಯದವರು [illegible]ಗೆ 20 ಮೈಲು ದೂರದಲ್ಲಿರುವ [illegible]ಕ್ಕೆ ಹಿಂತೆ ತಲುಪಿರುವರು. ಮಕೆಲ್ ಪಟ್ಟಣವು ಬೆಟ್ಟದ ಮೇಲಿರುವದರಿಂದ ಅಡೋವವನ್ನು ಹಿಡಿದಷ್ಟು ಸುಲಭವಾಗಿ ಇದು ಸಿಕ್ಕಲಾರದು. ಬೆಟ್ಟ ಹತ್ತುವಾಗ್ಗೆ ಇಥಿಯೋಪಿಯನರು ಅಲ್ಲಲ್ಲಿ ಅಡಗಿಕೊಂಡು ಇಟಲಿಯನರಿಗೆ ತುಂಬಾ ನಷ್ಟವುಂಟುಮಾಡಬಹುದು.

ಮಕೆಲ್ ಪಟ್ಟಣದ ಮುತ್ತಿಗೆ.

ಮೆಶಿನ್ ಗನ್‌ಗಳಿಂದ ಇಟಲಿಯವರು ಮಕೆಲ್ ಪಟ್ಟಣದ ಮೇಲೆ ಧಾಳಿ ನಡೆಸಿದರೆಂದೂ, 60 ಜನರು ಮಡಿದರೆಂದೂ ವರ್ತಮಾನ.

ಇಥಿಯೋಪಿಯನರು ಹಿಂದೆ ಸರಿದರು.

20 ಟ್ಯಾಂಕ್‌ಗಳ ಸಮೇತ ಇಟಲಿಯ ಕಪ್ಪು ಸೈನಿಕರು ಗರ್ಲೋಗುಬಿಯನ್ನು ಮುತ್ತಿದರು. ಆಗ್ಗೆ ಇಥಿಯೋಪಿಯನ ಸೇನಾಪತಿಯು ಶಸ್ತ್ರಗಳು ಮುಗಿದ ಮೇಲೆ ಶತ್ರುವಿನ ಮೇಲೆ ಬೀಳಬಹುದೆಂದು ತನ್ನ ಸೈನಿಕರನ್ನು ಹಿಂದಕ್ಕೆ ಕಳುಹಿಸಿಬಿಟ್ಟನು.

ಮುಸೊಲಿನಿಯ ಹಿರೇ ಮಗನ ಪ್ರಾಣ ಬಚಾವು

ಮುಸೊಲಿನಿಯವರ ಹಿರೇ ಮಗ ವಿಟ್ಟೋರಿಯೋ ವಿಮಾನದಲ್ಲಿ ಅಬಿಸೀನಿಯಾದ ಮೇಲೆ ಹಾರಾಡುತ್ತಿರುವಾಗ್ಗೆ ಹಲವು ಗುಂಡುಗಳು ಅವರ ವಿಮಾನಕ್ಕೆ ತಗಲಿದರೂ ಅವರಿಗೆ ಪೆಟ್ಟಾಗಲಿಲ್ಲ.

ಇಟಲಿ ಸೈನ್ಯದ ಸೋಲು.

[illegible] ಕುಲಸ್ಥರ ಸಹಾಯ ದೊರೆಯುವದೆಂಬ ನಿರೀಕ್ಷಣೆಯಿಂದ ಇಟಲಿಯ ಒಂದು ದಳ [illegible]ದ ಕಡೆಗೆ ಬರಲು ಯತ್ನಿಸಿತು. ಆದರೆ ಕುಲಸ್ಥರ ಸಹಾಯ ದೊರೆಯದೆ ಇಥಿಯೋಪಿಯನರಿಂದ ಹಿಂದೋಡಿಸಲ್ಪಟ್ಟಿತು.

ಇಟಲಿಯವರ ಮುಂದಿನ ದೃಷ್ಟಿ.

ಇಟಲಿಯ ಸೇನಾಪತಿಗಳು ಮುಂದೆ ಮಕಲೆಯನ್ನು ಮುತ್ತುವ ಆಲೋಚನೆ ಮಾಡುತ್ತಿರುವರು. ರಸ್ತೆ ಕೆಲಸವು ಮತ್ತು ಬಾವಿ ತೋಡುವುದು ಬಹು ಆತುರದಲ್ಲಿ ನಡೆಯುತ್ತಿದೆ.

ರಾಜಿಯ ಪ್ರಯತ್ನ ನಿಂತಿಲ್ಲ.

ಇಥಿಯೋಪಿಯಾ—ಇಟಲಿ ಯುದ್ಧದ ಸಂಬಂಧ ರಾಜಿ ಸಂಧಾನ ನಡೆಸಲು ರೋಡ್ಸ್, [illegible] ಮತ್ತು [illegible]

ಕೊಡಗು

ಅಕ್ಟೋಬರ್ ೨೫ನೇ ಶುಕ್ರವಾರ ೧೯೩೫.

ಅಧಿಕಾರ ಸ್ವೀಕಾರ.

ಕಳೆದ ವಾರ ಮದ್ರಾಸು ಪಟ್ಟಣದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗುಗಳು ನಡೆದು ಕೆಲವು ಮುಖ್ಯವನ್ನು ತೀರ್ಮಾನಗಳಾದುವು. ಅದರ ವಿವರವು ಇನ್ನೊಂದು ಕಡೆ ಕಾಣಿಸಲ್ಪಟ್ಟಿದೆ.

ಶಾಸನಾಂತರಗಳಿಂದ ಶಾಸನ ಭಂಗ ಚಳವಳಿಯು ನಿಲ್ಲಿಸಲ್ಪಟ್ಟ ಮೇಲೆ ಕಾಂಗ್ರೆಸ್ ಪಕ್ಷದವರು ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶ ಮಾಡತಕ್ಕದೆಂದು ಕಾಂಗ್ರೆಸ್ ಸಭೆಯು ತೀರ್ಮಾನಿಸಿತ. ಹಾಗೆಯೇ ಕಾಂಗ್ರೆಸ್ ಸದಸ್ಯರುಗಳು ಎಸೆಂಬ್ಲಿಗೂ, ಕೆಲವು ಪ್ರಾಂತೀಯ ಕೌನ್ಸಿಲುಗಳಿಗೂ ಹೊಕ್ಕು ಅಲ್ಲಿಯ ವಾತಾವರಣವನ್ನು ಬದಲಾಯಿಸುತ್ತಿರುವರು. ಈ ಸನ್ನಿವೇಶವನ್ನು ನೋಡುತ್ತ, ಮುಂದಿನ ಸುಧಾರಿಸಿದ ಕೌನ್ಸಿಲುಗಳಲ್ಲಿ ಮಂತ್ರಿ ಪದವಿಗಳನ್ನು ಸ್ವೀಕರಿಸುವುದು ಉಚಿತವೆಂದು ಅನೇಕರಿಗೆ ತೋರಿದೆ. ಮುಖ್ಯವಾಗಿ ಮದ್ರಾಸು ಪ್ರಾಂತ್ಯದ ಹಲವು ಕಡೆಗಳಲ್ಲಿ ಈ ಪ್ರಶ್ನೆಯು ಹುರುಪಿನಿಂದ ಚರ್ಚಿಸಲ್ಪಡುತ್ತಿದೆ. ಕಳೆದ ಆಗಸ್ಟು ತಿಂಗಳಲ್ಲಿ ವಾರ್ಧಾದಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಈ ವಿಷಯವು ಚರ್ಚಿಸಲ್ಪಟ್ಟು, ಇದರ ತೀರ್ಮಾನವನ್ನು ಮುಂದಿನ ಕಾಂಗ್ರೆಸ್ ಮಹಾ ಸಭೆಗೆ ಬಿಡಲಾಯಿತು. ಆ ತೀರ್ಮಾನವು ಅನೇಕರಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ಆದುದರಿಂದ ಮದ್ರಾಸಿನಲ್ಲಿ ನಡೆದ ವರ್ಕಿಂಗ್ ಕಮಿಟಿ ಮತ್ತು ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗುಗಳಲ್ಲಿ ಈ ಪ್ರಶ್ನೆಯು ಪುನಃ ಚರ್ಚಿಸಲ್ಪಟ್ಟಿತು.

ವರ್ಕಿಂಗ್ ಕಮಿಟಿಯವರು ಈ ವಿಚಾರವನ್ನು ಕೂಲಂಕಷವಾಗಿ ಆಲೋಚಿಸಿ 'ಕಾಂಗ್ರೆಸಿನವರು ಅಧಿಕಾರ ಸ್ವೀಕಾರ ಮಾಡಬೇಕೋ, ಬೇಡವೋ ಎಂಬುದನ್ನು ತೀರ್ಮಾನಿಸುವ ಸಮಯ ಬಂದಿಲ್ಲ. ಈಗ ತೀರ್ಮಾನಿಸುವುದು ಯುಕ್ತವಾದುದಲ್ಲ' ಎಂದು ನಿಶ್ಚಯಿಸಿ ವಾರ್ಧಾ ನಿರ್ಣಯವನ್ನೇ ಪುನರ್ ಮಂಜೂರು ಮಾಡಿದರು. ಅವರ ಮುಂದಿನ ಸಭೆಯ ಅ. ಭಾ. ಕಾಂಗ್ರೆಸ್ ಕಮಿಟಿಯಲ್ಲಿ ಈ ನಿರ್ಣಯದ ಸಭೆಗೆ ಅವರ ತಂದು ಸೂಚಿಸಲ್ಪಟ್ಟಿತು. ಆ ಸಭೆಯಲ್ಲಿ ಈ ಪ್ರಶ್ನೆಯ ಮೇಲೆ ದೀರ್ಘ ಚರ್ಚೆ ನಡೆಯಿತು. 'ಕಾಂಗ್ರೆಸ್ ಸಂಸ್ಥೆಯು ಕೌನ್ಸಿಲ್ ಪ್ರವೇಶಕ್ಕೆ ಸಮ್ಮತಿಸಿರುವಾಗ್ಯೂ ಮಂತ್ರಿ ಪದವಿ ಸ್ವೀಕಾರಕ್ಕೆ ಒಪ್ಪಿಗೆ ಕೊಟ್ಟಿಯುವುದು ಉಚಿತವಾಗಿದೆ. ಹೊಸ ಸುಧಾರಣೆಗಳು ಎಂಥವೆಂದು ಗೊತ್ತಾಗಿದೆ. ಅವುಗಳಿಗಾಗಿ ನಡೆಸಬೇಕಾದ ಚುನಾವಣೆಗಳು ಪ್ರಾಂತ್ಯಗಳಲ್ಲಿ ಬೇಗನೆ ನಡೆಯುವುವು. ಅವುಗಳಿಗೆ ಕಾಂಗ್ರೆಸ್ ಪಕ್ಷದವರು ತಮ್ಮ ಧ್ಯೇಯ ಗಳನ್ನು ಪ್ರಚಾರ ಮಾಡತಕ್ಕದ್ದು. ಸಭ್ಯಗ್ರಹವನ್ನು ಹಿಂತೆಗೆದು, ಕೌನ್ಸಿಲು ಪ್ರವೇಶಕ್ಕೆ ಒಪ್ಪಿಗೆಯಿತ್ತ ಕಾಂಗ್ರೆಸ್ ಕಮಿಟಿಗೆ ಈ ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರವಿಲ್ಲವೆನ್ನುವುದು ಸರಿಯಲ್ಲ. ಕಾಂಗ್ರೆಸ್ ಮುಂದಾಳುಗಳು ದೇಶಕ್ಕೆ ದಾರಿ ತೋರಿಸಬೇಕಾದ ಕಾರಣ ಈಗಲೇ ಈ ಕಮಿಟಿಯಲ್ಲಿ ಇದರ ತೀರ್ಮಾನವಾಗಬೇಕು' ಎಂದು ಮುಂತಾದ ವಾದಗಳಿಂದ ಕೆಲವರು ವರ್ಕಿಂಗ್ ಕಮಿಟಿಯ ತೀರ್ಮಾನವನ್ನು ವಿರೋಧಿಸಿದರು.

ಆದರೂ ಅ. ಭಾ. ಕಾಂಗ್ರೆಸು ಕಮಿಟಿಯವರು ಬಹು ದೊಡ್ಡ ಬಹುಮತದಿಂದ ವರ್ಕಿಂಗ್ ಕಮಿಟಿಯ ತೀರ್ಮಾನಕ್ಕೇ ಸಮ್ಮತಿಯಿತ್ತರು. ಪ್ರಕೃತ ಸ್ಥಿತಿಯಲ್ಲಿ ಇದು ನ್ಯಾಯವಾದ ತೀರ್ಮಾನವೆಂದೇ ಹೇಳಬೇಕಾಗಿದೆ. ಇಂಥಾ ಮಹತ್ವದ ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರವನ್ನು ಕಾಂಗ್ರೆಸು ಮಹಾ ಸಭೆಗೇನೇ ಬಿಡುವುದು ನ್ಯಾಯವಾಗಿದೆ. ಮಹಾ ಸಭೆಯು 1936ನೇ ಮಾರ್ಚ್ ತಿಂಗಳಲ್ಲಿ ಜರಗುವುದು. ಅಷ್ಟರೊಳಗೆ ಪ್ರಾಂತೀಯ ನ್ಯಾಯವಿಧಾಯಕಸಭೆಗಳ ಚುನಾವಣೆಗಳು ನಡೆಯುವ ಸಂಭವವಿಲ್ಲ. ಆ ಚುನಾವಣೆಗಳು 1936ನೇ ವರ್ಷದ ಅಂತ್ಯದಲ್ಲೇ ಯಾ 1937 ರಲ್ಲೇ ಆಗಬಹುದಷ್ಟೆ. ಅಂದ ಮೇಲೆ ಕಾಂಗ್ರೆಸು ಕಮಿಟಿಯವರು ಇಷ್ಟು ಆತುರದಲ್ಲಿ ತೀರ್ಮಾನಿಸಬೇಕಾದ ಅವಶ್ಯವಿಲ್ಲ. ಪ್ರಪಂಚದ ರಾಜಕೀಯ ವಾತಾವರಣವು ಸ್ಥಿರವಾಗಿಲ್ಲ; ಅದು ದಿನೇ ದಿನೇ ಬದಲಾಗುತ್ತಿದೆ. ಅದುದರಿಂದ ಇಂದಿನಂಥ ಪರಿಸ್ಥಿತಿಯೂ ಆಗಿನವರೆಗೆಯೇ ಮುಂದಕ್ಕೂ ಇರುವದೆಂದು ಹೇಳಲಾಗುವುದಿಲ್ಲ. ಮಾತ್ರವಲ್ಲ, ಕಾಂಗ್ರೆಸ್ಸಿನ ವಿರೋಧ ಪಕ್ಷದವರಿಗೆ ಕಾಂಗ್ರೆಸು ಮುಂದೇನು ಮಾಡುವದೆಂಬುದನ್ನು ಈಗಲೇ ತಿಳಿಸುವುದು ಉಚಿತವೂ ಅಲ್ಲ.

ಆದರೆ ಈ ವಿಚಾರದಲ್ಲಿ ಕಾಂಗ್ರೆಸಿನವರು ದೇಶದಲ್ಲಿ ದೇಶದಂತೆ ಚರ್ಚೆ ನಡೆಸಬಹುದೆಂದು ತೀರ್ಮಾನಿಸಿದ್ದು, ಕೆಲವರ ಅಭಿಪ್ರಾಯಗಳನ್ನು ತಿಳಿಯಲು ಅವಕಾಶವಾಗಿದೆ. ಇನ್ನು ಮಾರ್ಚ್ ತಿಂಗಳವರೆಗೆ ದೇಶದಲ್ಲಿ ಈ ವಿಷಯವು ಚೆನ್ನಾಗಿ ಆಲೋಚಿಸಿ, ಚರ್ಚಿಸಿ, ಬಳಿಕ ಕಾಂಗ್ರೆಸಿನಲ್ಲಿ ತಮ್ಮ ತೀರ್ಮಾನವನ್ನು ಕೊಡಲು ಅನುಕೂಲವಾಗಿದೆ.

ಸಂಸ್ಥಾನ ಪ್ರಜೆಗಳಿಗೂ, ಕಾಂಗ್ರೆಸಿಗೂ ಇರುವ ಸಂಬಂಧವನ್ನು ಕುರಿತ ಠರಾವೇ ಅಲ್ಲಿ ತೀರ್ಮಾನವಾದ ಇನ್ನೊಂದು ಮುಖ್ಯ ವಿಷಯ. ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಸಭೆಗೆ ಪೂರ್ಣ ಸಹಾನುಭೂತಿ ಇದೆ. ಆದರೆ ಅದು ಸಾಲದು; ಅವರ ಹೋರಾಟವನ್ನು ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಬೇಕೆಂದು ಕೆಲವರ ವಾದವಾಗಿದೆ. ಹೀಗೆ ಮಾಡುವುದರಿಂದ ಸಂಸ್ಥಾನಿಕರ ಹಿತವನ್ನೇನೂ ಸಾಧಿಸಿದಂತಾಗುವುದಿಲ್ಲ. ಯಾಕೆ ಅಂದರೆ ಕಾಂಗ್ರೆಸಿನ ಕಾರ್ಯಕಾರಿ ಮಂಡಳಿಯು ಈಗ ಆ ಕಾರ್ಯವನ್ನು ಕೈಕೊಳ್ಳುವ ಸ್ಥಿತಿಯಲ್ಲಿಲ್ಲ. ಅದರಿಂದ ಪ್ರಯೋಜನವಾಗುವುದರ ಬದಲು ಈಗ ಇಲ್ಲದೆ ಇರುವಂಥ ತೊಂದರೆಗಳನ್ನು ಉಂಟುಮಾಡಿಕೊಂಡಂತಾಗಬಹುದು. ಅಲ್ಲದೆ ಇದೂ ಒಂದು ಸಾಧಾರಣವಾದ ವಿಷಯವಲ್ಲ. ಮಹಾ ಸಭೆಯವರೇ ತೀರ್ಮಾನಿಸುವಷ್ಟು ಮಹತ್ವವು ಇದಕ್ಕೆ ಇದೆ. ಆದುದರಿಂದ ಕಾಂಗ್ರೆಸ್ ಕಮಿಟಿಯವರು ಈ ವಿಚಾರದಲ್ಲಿ ಏನನ್ನೂ ಒಪ್ಪಿಕೊಳ್ಳದೆ, ಬಳಿಕ ಸಭೆಯು ಆಲೋಚನೆಗೆ ಬಿಟ್ಟದ್ದು ಯೋಗ್ಯವೂ, ಜನ ಸಮ್ಮತವೂ ಆಗಿದೆ.

ತಲಕಾವೇರಿ ಜಾತ್ರೆ.

ಈ ತಿಂಗಳ ನಾವೆಯು ಬಂತೆಂದು ಇನ್ನೊಂದು ಕಡೆ ಪ್ರಕಟವಾಗಿದೆ. ಅದರಲ್ಲಿ ಸೂಚಿಸಿರುವ ಎರಡು ಸಂಗತಿಗಳು ಮುಖ್ಯವಾದವಾಗಿವೆ. ಕೊಡಗಿನಲ್ಲಿ ಯಾತ್ರಿಕ ದಕ್ಷಿಣ ಹಿಂದೂಸ್ಥಾನದಲ್ಲೇ ಅತಿ ಪವಿತ್ರ ಸ್ಥಳವೆನ್ನಿಸಿಕೊಂಡಿರುವ ತಲಕಾವೇರಿಗೆ ಹೋಗುವ ದಾರಿಯನ್ನು ಒಡನೆ ದುರಸ್ತಿಯಲ್ಲಿಟ್ಟುಕೊಂಡಿರುವುದೂ, ಯಾತ್ರಿಕರಿಗೆ ಮಳೆ ಗಾಳಿಯಲ್ಲಿ ರಾತ್ರಿ ವೇಳೆ ತಂಗಿಕೊಳ್ಳಲು ಬೇಕಾದ ಅನುಕೂಲತೆಯನ್ನು ಮಾಡಿ ಕೊಡದೆ ಇರುವುದೂ ಕೊಡಗಿನ ಮುಜರಾಯಿ ಇಲಾಖೆ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಪ್ರಾಂತೀಯ ಸರ್ಕಾರದವರಿಗೆ ಭೂಷಣವಲ್ಲ. ಜಾತ್ರೆ ಕಾಲಗಳಲ್ಲಿ ಜನ ಸಂದಣಿಯು ಆಗುವ ಸ್ಥಳಗಳಿಗೆ ಪ್ರಯಾಣದ ಮತ್ತು ವಸತಿಯ ಅನುಕೂಲತೆಗಳು ಬೇಕಾಗಿ ಮಾಡುತ್ತಿರುವಾಗ್ಯೂ ನಮ್ಮ ಪ್ರಾಂತ್ಯದಲ್ಲಿ ಸಂಬಂಧಪಟ್ಟ ಇಲಾಖೆಯವರು ಪ್ರತ್ಯೇಕ ವಿಷಯದಲ್ಲಿ ಕಡೆಗಾಣಿಸಿಕೊಂಡು ಬರುತ್ತಿರುವುದು ಶೋಚನೀಯವಾಗಿದೆ. ಇನ್ನಾದರೂ ಅವರು ಈ ಕೊರತೆಗಳನ್ನು ಹೋಗಲಾಡಿಸುವರೇ?

ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗು.

ಅಧಿಕಾರ ಸ್ವೀಕಾರದ ತೀರ್ಮಾನ ಕಾಂಗ್ರೆಸ್ ಮಹಾ ಸಭೆಗೆ ಬಿಡಲಾಯಿತು.

ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಮೀಟಿಂಗು.

ಈ ತಾ. 15 ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ಮದ್ರಾಸಿನಲ್ಲಿ ಸೇರಿತು. ಶ್ರೀ ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಶ್ರೀಮತಿ ಸರೋಜಿನಿದೇವಿ, ಸರ್ದಾರ್ ಪಟೇಲ್, ಕೆ. ಎಫ್. ನರೀಮನ್ ಡಾ. ಪಟ್ಟಾಭಿ ಸೀತಾರಾಮಯ್ಯ, ಸೇಟ್ ಜಮ್ನಾಲಾಲ್ ಬಜಾಜ್, ಜಯರಾಮದಾಸ್ ದೌಲತರಾಮ (ಜನರಲ್ ಸೆಕ್ರೆಟರಿ) ಗಂಗಾಧರರಾವ್ ದೇಶಪಾಂಡೆ, ಸುರೇಂದ್ರ ಮೋಹನ್ ಮೊಯಿತ್ರ ಮತ್ತು ಆಚಾರ್ಯ ಕೃಪಾಲನಿ (ವರ್ಕಿಂಗ್ ಜನರಲ್ ಸೆಕ್ರೆಟರಿ) ಇವರು ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ಸಿ. ವಿಜಯ ರಾಘವಾಚಾರ್ಯರೂ, ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಶ್ರೀ ಭೂಲಾಭಾಯಿ ದೇಸಾಯಿಯವರೂ ಆಹ್ವಾನಿತರಾಗಿ ಬಂದಿದ್ದರು.

ಈ ಸಮಿತಿಯು ಮೂರು ದಿನಗಳ ಮೀಟಿಂಗಿನಲ್ಲಿ ತೀರ್ಮಾನಿಸಲ್ಪಟ್ಟ ಮುಖ್ಯ ಸಂಗತಿಗಳು ಯಾವುವೆಂದರೆ.—ಕಾಂಗ್ರೆಸ್ಸಿನ ಆದಾಯ ವೆಚ್ಚದ ಲೆಕ್ಕ, ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳ ಪದವಿಗಳ ಪರಿಶೀಲನೆ, ಕಾಂಗ್ರೆಸಿನ ಸ್ವರ್ಣಮಹೋತ್ಸವ ಆಚರಿಸುವ ಕ್ರಮ, ಆ ಕಾಲದಲ್ಲಿ ಕಾಂಗ್ರೆಸಿನ ಇತಿಹಾಸವನ್ನು ಪ್ರಕಟಿಸುವ ವಿಷಯ.

ಬರುವ ಸುಧಾರಣೆಯ ಕೌನ್ಸಿಲುಗಳಲ್ಲಿ ಮಂತ್ರಿಪದವಿಗಳನ್ನು ಸ್ವೀಕಾರ ಮಾಡಲು ಇನ್ನೂ ಕಾಲಬಂದಿಲ್ಲ; ಅದನ್ನು ಬಳಿಕ್ಕ ಕಾಂಗ್ರೆಸ್ಸಿನ ತೀರ್ಮಾನಕ್ಕೆ ಬಿಡತಕ್ಕದೆಂದೂ ನಿಶ್ಚಯಿಸಲಾಯಿತು.

ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸಿನವರು ಈ ಮೊದಲಿನಂತೆಯೇ ವರ್ತಿಸುವುದು ಉಚಿತವೆಂದು ತೀರ್ಮಾನಿಸಲಾಯಿತು.

ಆಂಧ್ರ—ಕರ್ನಾಟಕ ಗಡಿ ಪ್ರಶ್ನೆಯನ್ನು ತೀರ್ಮಾನಿಸಲು ಏರ್ಪಟ್ಟ ಸಮಿತಿಯವರ ಸಲಹೆಯಂತೆ, 'ಬಳ್ಳಾರಿ ಜಿಲ್ಲೆಯ ಆದೋನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳು ಈಗಿರುವಂತೆ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಕಮಿಟಿಗೆ ಸೇರತಕ್ಕದ್ದು; ಗಡಿ ವಿವಾದದ ತೀರ್ಮಾನವನ್ನು ಮುಂದಕ್ಕೆ ಹಾಕತಕ್ಕದ್ದು; ಬಳ್ಳಾರಿ ಜಿಲ್ಲೆಯಿಂದ ಕೌನ್ಸಿಲು ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಉಮೇದುವಾರರುಗಳನ್ನು ಆರಿಸಲು ಇಬ್ಬರು ಆಂಧ್ರ ಮತ್ತು ಮೂವರು ಕನ್ನಡಿಗ ಪ್ರತಿನಿಧಿಗಳುಳ್ಳ ಪಾರ್ಲಿಮೆಂಟರಿ ಬೋರ್ಡನ್ನು ಸ್ಥಾಪಿಸತಕ್ಕದ್ದು ಮತ್ತು ಬಳ್ಳಾರಿ ಆಂಧ್ರ ಡಿಸ್ಟ್ರಿಕ್ಟ್ ಕಮಿಟಿಯಾಗುವವರೆಗೆ ಬಳ್ಳಾರಿ ಜಿಲ್ಲೆಯ ಆಂಧ್ರ ಆಗರ್ನೈಸರು ಬಳ್ಳಾರಿಯಲ್ಲೇ ಆಫೀಸು ಮಾಡಬಹುದು' ಎಂದು ತೀರ್ಮಾನಿಸಲಾಯಿತು.

ಬಂಗಾಳ ಪ್ರಾಂತೀಯ ಕಾಂಗ್ರೆಸು ಕಮಿಟಿಯ ವಿವಾದವನ್ನು ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಬಂಗಾಳ ಪ್ರಾ. ಕಾ. ಕಮಿಟಿಯ ಎಗ್ಸಿಕ್ಯುಟಿವ್ ಕೌನ್ಸಿಲಿನವರು ಜಾರಿಗೆ ತಾರದ್ದಕ್ಕೆ ಸದರಿ ಕೌನ್ಸಿಲಿನ ವಿವರಣೆಯನ್ನು ಕೇಳುವಂತೆ ತೀರ್ಮಾನಿಸಲಾಯಿತು.

ಅ. ಭಾ. ಕಾಂಗ್ರೆಸ್ ಕಮಿಟಿ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಾ. 17 ಮತ್ತು 18 ರಲ್ಲಿ ಮದ್ರಾಸಿನಲ್ಲಿ ನಡೆಯಿತು. ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಕಮಿಟಿಯ 165 ಸದಸ್ಯರ ಪೈಕಿ 54 ಮಂದಿ ಹಾಜರಿದ್ದರು. ತಮಿಳುನಾಡು ಮತ್ತು ಆಂಧ್ರದ ಮೆಂಬರುಗಳೇ ಹೆಚ್ಚಾಗಿ ಬಂದಿದ್ದರು.

ಹಿಂದಿನ ಮೀಟಿಂಗಿನ ಪ್ರೊಸೀಡಿಂಗ್ಸು ಒಪ್ಪಿದ ಮೇಲೆ ಅ. ಭಾ. ಕಾಂಗ್ರೆಸ್ ಕಮಿಟಿಯ ಮೀಟಿಂಗುಗಳನ್ನು ನಡೆಸಲು ವರ್ಕಿಂಗ್ ಕಮಿಟಿಯವರು ತಯಾರಿಸಿದ ನಿಬಂಧನೆಗಳು ಸ್ವಲ್ಪ ಕಾಲದ ಚರ್ಚೆಯಿಂದ ಮಂಜೂರು ಮಾಡಲ್ಪಟ್ಟವು.

ಅಧಿಕಾರ ಸ್ವೀಕಾರದ ವಿಷಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪಾಸುಮಾಡಿದ್ದ ಈ ಕೆಳಗಿನ ಠರಾವನ್ನು ಆಚಾರ್ಯ ಕೃಪಾಲನಿಯವರು ಸಭೆಯ ಮುಂದಿಟ್ಟರು.

'ಮುಂದೆ ಪ್ರಾಂತ್ಯಗಳಲ್ಲಿ ಮಹಾ ಚುನಾವಣೆಗಳಾಗಬೇಕಾದರೆ ದೀರ್ಘಕಾಲಬೇಕು. ಈ ದೀರ್ಘಕಾಲದಲ್ಲಿ ರಾಜಕೀಯ ಸ್ಥಿತಿಗಳೇನಾಗುವವೋ ಹೇಳಲಾಗುವುದಿಲ್ಲ. ಎಲ್ಲವೂ ಅನಿಶ್ಚಿತವಾಗಿದೆ. ಆದುದರಿಂದ ವರ್ಕಿಂಗ್ ಕಮಿಟಿಯ ಅಭಿಪ್ರಾಯದಲ್ಲಿ ಸದ್ಯಕ್ಕೆ ಅಧಿಕಾರ ಸೂತ್ರಗಳನ್ನು ವಹಿಸಬೇಕೆ, ಬೇಡವೋ ಎಂಬ ಪ್ರಶ್ನೆಯನ್ನು ನಿರ್ಣಯ ಮಾಡುವದೇ ಯುಕ್ತವಲ್ಲ, ರಾಜನೀತಿಯಲ್ಲ. ಅದ ಕಾರಣ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಮಾಡಿದ ತೀರ್ಮಾನವನ್ನೇ ಪುನಃ ಮಂಜೂರು ಮಾಡುತ್ತದೆ. ಆದರೆ ಈ ವಿಷಯ ದೇಶದಲ್ಲಿ ಚರ್ಚೆ ನಡೆಸಲು ಅಡ್ಡಿಯಿಲ್ಲ.'

ಶ್ರೀ ಗೋಪಾಲ ಮೆನನ್ ರವರು ಅನುಮೋದಿಸಿದ ಈ ಗೊತ್ತುವಳಿಗೆ ಮುಂಚೆ ಎಸ್. ವಿ. ಸತ್ಯಮೂರ್ತಿಯವರು, ಮು. ಯೂಸುಫ್ ಶರೀಫ್‌ರವರು, ಸ್ವಾಮಿ ಗೋವಿಂದಾನಂದ ಮೊದಲಾದವರು ಮಾತಾಡಿದರು.

ಅಧಿಕಾರ ಸ್ವೀಕಾರದ ಪ್ರಶ್ನೆಯನ್ನು ಇಲ್ಲಿ ಚರ್ಚಿಸತಕ್ಕುದ ತೀರ್ಮಾನವನ್ನು ಕಾಂಗ್ರೆಸಿನ ಮುಂದಿನಬೇಕೆಂಬ ಉಪಠರಾವನ್ನು ಶ್ರೀ ಟಿ. ಪ್ರಕಾಶಂರವರು ಸೂಚಿಸಿ ಭಾಷಣ ಮಾಡಿದರು. ವಿ. ಕಾಳೇಶ್ವರರಾಯರು ಅನುಮೋದಿಸಿದ ಮೇಲೆ, ಇದಕ್ಕೆ ಪರವಾಗಿ ಮು. ಬಿ. ವಿಶ್ವನಾಥನರು, ಮಾತಾಡಿದರು. ಓಟಿಗೆ ಹಾಕಲಾಗಿ ಉಪ ಠರಾವು ಸೋಲಿಸಲ್ಪಟ್ಟಿತು. ವರ್ಕಿಂಗ್ ಕಮಿಟಿಯ ಠರಾವು ದೊಡ್ಡ ಬಹು ಮತದಿಂದ ಮಂಜೂರಾಯಿತು.

ನಂತರ ಸರ್ದಾರ ವಲ್ಲಭಭಾಯಿ ಪಟೇಲರು—ಸಂಸ್ಥಾನಗಳ ಪ್ರಜೆಗಳಿಗೂ ಕಾಂಗ್ರೆಸಿಗೂ ಇರುವ ಸಂಬಂಧವನ್ನು ಕುರಿತು ವರ್ಕಿಂಗ್ ಕಮಿಟಿಯವರು ಮಾಡಿದ ಈ ಕೆಳಗಿನ ಸಾರಾಂಶದ ಠರಾವನ್ನು ಸಭೆಯ ಮುಂದಿಟ್ಟರು.

'ಸಂಸ್ಥಾನ ಪ್ರಜೆಗಳ ಸ್ವಾತಂತ್ರ್ಯ ಹೋರಾಟಕ್ಕೆ ಕಾಂಗ್ರೆಸಿನ ಸಂಪೂರ್ಣ ಸಹಾನುಭೂತಿ ಇದ್ದರೂ, ಪ್ರಕೃತ ರಾಜಕೀಯ ಪರಿಸ್ಥಿತಿಯಲ್ಲಿ ಅದನ್ನು ಕಾಂಗ್ರೆಸ್ಸಿನ ಪ್ರತ್ಯಕ್ಷ ಕಾರ್ಯಕ್ರಮದಲ್ಲಿ ಸೇರಿಸುವುದರಿಂದ ಸಂಸ್ಥಾನ ಪ್ರಜೆಗಳ ಯಾವ ಹಿತವನ್ನೂ ಸಾಧಿಸಿದಂತಾಗುವುದಿಲ್ಲ ಮಾತ್ರವಲ್ಲ, ಇಲ್ಲದ ತೊಡಕನ್ನು ಉಂಟುಮಾಡಿಕೊಂಡಂತಾಗುತ್ತದೆ.'

ಈ ಗೊತ್ತುವಳಿಗೆ ವಿ. ವಿ. ಗಿರಿ ಅಲಿಯವರು ಕೆಲವು ಬದಲಾವಣೆಗಳನ್ನೊಳಗೊಂಡ ಉಪಸೂಚನೆಯನ್ನು ನೀಡಿದರು. ಇದರ ಮೇಲೆ ದೀರ್ಘ ಚರ್ಚೆ ನಡೆದು ಉಪಸೂಚನೆಯು ಸೋಲಿಸಲ್ಪಟ್ಟಿತು. ವರ್ಕಿಂಗ್ ಕಮಿಟಿಯ ತೀರ್ಮಾನದ ಠರಾವು ಬಹು ಮತದಿಂದ ಮಂಜೂರಾಯಿತು.

ಪರದೇಶಗಳಲ್ಲಿ ಭಾರತ ಪ್ರಚಾರವನ್ನು ಸಾಕಷ್ಟು ಹುರುಪಿನಿಂದ ನಡಿಸುವ ಏರ್ಪಾಡು ಮಾಡಬೇಕೆಂಬ ಠರಾವು ಪಾಸಾದ ಮೇಲೆ ಮೀಟಿಂಗು ಬರಖಾಸ್ತಾಯಿತು.

"ಗಾಂಧಿ ಯುಗ."

ಗೋಣಿಕೊಪ್ಪಲಲ್ಲಿ ಶ್ರೀ. ದಿವಾಕರರ ಭಾಷಣ.

ಈ ತಾ 13 ನೇ ಆದಿತ್ಯವಾರ ಧಾರವಾಡದ ಶ್ರೀ. ಆರ್. ಆರ್. ದಿವಾಕರರು ಗೋಣಿಕೊಪ್ಪಲಲ್ಲಿ 'ಗಾಂಧಿಯುಗ' ಎಂಬದನ್ನು ಕುರಿತು ಭಾಷಣ ಮಾಡಿದರು. ಸಭೆಯ ಅಧ್ಯಕ್ಷರಾಗಿ ಅಲ್ಲಿಯ ಶ್ರೀ. ಪಿ ಬಿ ಬೆಳ್ಯಪ್ಪನವರು—'ಎಂ ಎ ಎಲ್ ಎಲ್. ಬಿ. ಪದವೀಧರರಾದರೂ ಆ ಜ್ಞಾನವನ್ನು ತನ್ನ ಉದರ ಪೋಷಣೆಗಾಗಿ ಉಪಯೋಗಿಸದೆ, ದೇಶಸೇವೆಗಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆದ ಒಬ್ಬ ವಿದ್ಯಾಸಂಪನ್ನ ಕನ್ನಡಿಗ ಮುಂದಾಳು, ದೇಶದ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥತ್ಯಾಗದಿಂದ ಸುಮಾರು ಎಂಟು ವರ್ಷಗಳ ವರೆಗೆ ಜೈಲುವಾಸವನ್ನು ಅನುಭವಿಸಿದ ಧೀರನೂ ಆದ ಶ್ರೀ ದಿವಾಕರರು ಈಗ ನಿಮ್ಮ ಮುಂದೆ ಭಾಷಣ ಮಾಡುವರು' ಎಂದು ಭಾಷಣಕಾರರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.

ಶ್ರೀ. ಆರ್. ಆರ್. ದಿವಾಕರರು ಅಂದದ್ದೇನೆಂದರೆ—'ನಾನು ದೊಡ್ಡ ತ್ಯಾಗಿ, ದೇಶದ ಸೇವೆ ಮಾಡಿದವ, ಕಷ್ಟ ಪಟ್ಟವ, 5—6 ಸಾರೆ ಜೈಲಿಗೆ ಹೋಗಿ ಬಂದವ ಎಂದು ಹೇಳಿದರು. ಆದರೆ ಇದೆಲ್ಲ ನಾನು ದೇಶದ ಮೇಲೆ ಮಾಡಿದ ಉಪಕಾರವೋ, ನಿಮ್ಮ ಮೇಲೆ ಮಾಡಿದ ಉಪಕಾರವೋ? ನಾನು ಇದೇ ಭೂಮಿಯಲ್ಲಿ ಹುಟ್ಟಿ, ಬೆಳೆದು, ಇಲ್ಲಿಯೇ ಬಾಳುವವನು, ನಾನು ಈ ವರೆಗೆ ಸಂಪಾದಿಸಿದುದು, ಕಲಿತು, ದೊಡ್ಡವನಾದದ್ದು ಈ ಸಮಾಜದಲ್ಲಿ, ಈ ಕನ್ನಡ ನಾಡಿನಲ್ಲಿ, ನಿಮ್ಮಲ್ಲಿ, ಅಂದ ಬಳಿಕ ನಾನು ನಿಮ್ಮಿಂದ, ಈ ಭೂಮಿಯಿಂದ ಪಡೆದುದನ್ನು ಮರಳಿ ನಿಮ್ಮೆಲ್ಲರಿಗೂ ಸೇವಾರೂಪದಿಂದ ಕೊಟ್ಟು ಋಣದಿಂದ ಮುಕ್ತನಾಗಬೇಕಲ್ಲವೆ? ನನ್ನನ್ನು ಕಟ್ಟಿಕೊಂಡು ನಾನಲ್ಲಿ ಹೋಗಲಿ, ಇನ್ನಾರಿಗೆ ಕೊಡಲಿ, ಅದನ್ನೇನು ನನ್ನ ಬಳಿಕ ಇನ್ನಾರಿಗಾದರೂ ಕೊಡತಕ್ಕ ವಿಷಯವೇ? ಖಂಡಿತ ಅಲ್ಲ. ನಾನು ಗಳಿಸಿದುದೆಲ್ಲ, ನನ್ನ ಧನ, ನನ್ನ ವಿದ್ಯೆ, ನನ್ನ ಗುಣ ಮುಂತಾದವುಗಳೆಲ್ಲವೂ ನಿಮ್ಮೆಲ್ಲರಿಗೆ ಈ ಸಮಾಜಕ್ಕೆ ಅರ್ಪಿಸಿದುದೇ ನನ್ನ ಕರ್ತವ್ಯವು. ಹಾಗೆ ನಾನು ಮಾಡದಿದ್ದರೆ ನಾನು ಕಳ್ಳನು. ಇದು ನಾನು ಯಾರ ಮೇಲೂ ಮಾಡುವ ಉಪಕಾರವಲ್ಲ. ನೀವು ಈ ವರೆಗೆ ನನ್ನ ಸೇವೆಯನ್ನು ಸ್ವೀಕರಿಸಿಕೊಳ್ಳುವುದು, ನೀವೇ ನನ್ನ ಮೇಲೆ ಮಾಡುವ ಉಪಕಾರವೆಂದು ನಾನು ತಿಳಿಯುತ್ತೇನೆ.'

'ಇನ್ನೊಂದು ಸಂಗತಿ, ನಾವು ಇಷ್ಟರಿಂದು ಸಾರಿ ಜೈಲಿಗೆ ಹೋದರೆ ಇಲ್ಲವೆ ಕಷ್ಟ ಪಟ್ಟರೆ ನಾವು ಗೊಡ್ಡ ಕೆಲಸವನ್ನು ಮಾಡಿದೆವೆಂದು ತಿಳಿದುಕೊಳ್ಳುತ್ತೇವೆ. ಇದು ಸರಿಯೆ? ನಾವು ದೇಶಕ್ಕೆ ದೊಡ್ಡ ಸ್ವರಾಜ್ಯವನ್ನು ತಂದು ಕೊಟ್ಟೆವು, ನಾವು ಮಾಡಿದ ಅಲ್ಪ ಕಾರ್ಯವೆಷ್ಟು! ಈ ದೇಶವನ್ನೇ ಹೇಗೆ ಒಂದು ದೊಡ್ಡ ಆಕಳನ್ನು ಕೊಳ್ಳಲಿಕ್ಕೆ ಯಾರಾದರೂ ನಾಲ್ಕು ಕೂಡ ಹೋದರೆ ನಾವು ಅದನ್ನು ಹುಡುಕಿ ಪಡೆಯಲಿಕ್ಕಿಲ್ಲವೆ? ಅದರಿಂದ ಇಷ್ಟರಿಂದ ಪಡೆದ ಸ್ವರಾಜ್ಯವನ್ನು ಉಳಿಸುವ ಕಾರ್ಯವನ್ನು ಮಾಡಲು ನಾವು, ಒಕ್ಕಟ್ಟು, ಸಂಘಟನೆಯನ್ನು ಮಾಡುವ, ಸಾಮರ್ಥ್ಯವನ್ನು ಬೆಳೆಸುವ ಹಾಗೂ ಸ್ವರಾಜ್ಯವನ್ನು ಗಳಿಸುವ.'

'ಈ ಹೊತ್ತು ನಾನು ನಿಮಗೆ 'ಗಾಂಧಿ ಯುಗ'ದ ಬಗ್ಗೆ ಹೇಳತಕ್ಕವನಿದ್ದೇನೆ. ಈಗಿನದು, 20 ನೇ ಶತಮಾನ. ಇದು ಜಗತ್ತಿನ ಚರಿತ್ರೆಯ ಯುಗ. ಇದು ಯಂತ್ರಯುಗ, ಇದು ಸಂಪತ್ತುಳ್ಳವರ ಯುಗ. ಇದು ಹಿಂಸೆಯ ಯುಗ ಶಸ್ತ್ರಾಸ್ತ್ರಗಳ ಯುಗ. ಆದರೆ ಇವೆಲ್ಲವುಗಳಿಗೆ ವಿರುದ್ಧವಾಗಿ ಮಹಾತ್ಮ ಗಾಂಧಿಯವರು ತಮ್ಮ ಸುಂದರವಾದ ಉಪದೇಶವನ್ನು ಹೇಳಿ ತಮ್ಮ ದಿವ್ಯ ಸಂದೇಶವನ್ನು ಬೀರುತ್ತಲಿದ್ದಾರೆ. ಅವರನ್ನು ನೋಡಿ, ಕೇಳಿ ಇವೆಲ್ಲರೂ ಅವರ ದರ್ಶನವನ್ನು ಪಡೆಯಲು ಬರುವ ಈ ಕಾಲದ ಮನುಷ್ಯನೆಂದರೆ ಬೂಟು, ಪಾಟಲೂನು ಹಾಕಿ, ನೆಕ್ ಟೈ ಕಾಲರಗಳನ್ನು ಬಿಗಿದು ಕೋಟಿನಿಂದ ಸಾಗುವನು. ಆದರೆ ಗಾಂಧಿ ಮಹಾತ್ಮರು ಅತ್ಯಂತ ಸಾಧಾರಣರನ್ನೂ ಕಲಿಸುವರು. ಶುದ್ಧ ಖಾದಿ ಒಂದನ್ನು ಉಡಲು ಅವರು ಹೇಳುವರು. ಇಷ್ಟೇ ಅಲ್ಲ. ಅದನ್ನು ಕೂಡ ತೀರ ಕಡಿಮೆ ಉಪಯೋಗಿಸಬೇಕೆಂದು ಅವರು ಸಾರುವರು.'

'ಈಗಿನ ಕಾಲದಲ್ಲಿ ನಾನಾ ತರದಿಂದ, ಒಳ್ಳೇತನದಿಂದಲೊ, ದುಷ್ಟತನದಿಂದಲೊ, ಪ್ರಮಾಣಿಕತನದಿಂದಲೊ ಅಥವಾ, ಅಪ್ರಮಾಣಿಕತನದಿಂದಲೊ,ಸತ್ಯದಿಂದಲೊ ಅಸತ್ಯದಿಂದಲೊ ಅನ್ಯರನ್ನು ಶೋಷಿಸಿಕೊಳ್ಳುವುದರಿಂದ, ಅನ್ಯರನ್ನು ಶೋಷಿಸಿ (exploit) ತಾವು ಹಣವನ್ನು ಪಡೆಯಬೇಕು, ಎಂಬುದೇ ಸಾಧಾರಣ ಜನರ ಹವಣಿಕೆಯಾಗಿದೆ. ಇದಕ್ಕೆ ಪೂರಾ ವಿರುದ್ಧವಾಗಿ ಮಹಾತ್ಮರು ತಮ್ಮ ಕಡೆಗೆ ಇದ್ದ ಲಕ್ಷಾಂತರ ಐಶ್ವರ್ಯಗಳನ್ನು ಕೂಡ ಒಂದು ಆಶ್ರಮಕ್ಕೆ ಕೊಟ್ಟು ತಾವು ನಿರ್ವಾಹಕರಾಗಿ ಸಮಾಜದ ಸೇವೆಗೆಂದು ನಿಂತರು. ತಮ್ಮ ಕಡೆಗೆ ಹಣವಿಟ್ಟುಕೊಳ್ಳುವುದೆಂದರೆ ಅದೊಂದು ಕಳ್ಳತನವೆಂದು ಅವರು ಸಾರಿದರು!

'ಸತ್ಯಲೂ ಯಾವ ದೇಶದಲ್ಲಿಯೂ ಪ್ರತಿಯೊಂದು ಕೆಲಸಕ್ಕೂ ಪ್ರಚಂಡವಾದ ಯಂತ್ರಗಳು ಉಪಯೋಗಿಸಲ್ಪಡುತ್ತಿರುವಾಗ ಮಹಾತ್ಮ ಗಾಂಧಿಯವರು ಅದನ್ನೆಲ್ಲ ಅಲ್ಲಗಳೆದು ಎಲ್ಲ ವಸ್ತುಗಳನ್ನು ಕೈಯಿಂದಲೇ ತಯಾರಿಸಬೇಕು, ಅದೇ ಉದ್ಯಮ, ಎಂದು ರಾಟೆಯಿಂದ ನೂಲುವ ಹಾಗೂ ಕೈಮಗ್ಗದಿಂದ ನೇಯುವ ಕಾರ್ಯವನ್ನು ಪ್ರಾರಂಭಿಸಿದರು.'

'ಎಲ್ಲ ರಾಷ್ಟ್ರದವರೂ ಹಗಲಿರುಳು ದುಡಿದು ಶಸ್ತ್ರಾಸ್ತ್ರಗಳನ್ನು ಸಿದ್ಧಗೊಳಿಸಿ ಯುದ್ಧಕ್ಕೆ ಸನ್ನದ್ಧರಾಗುತ್ತಿರುವ ಈ ಕಾಲದಲ್ಲಿ, ಬ್ರಿಟಿಷರಂಥ ಬಲಾಢ್ಯರು, ಜಗತ್ತಿನಲ್ಲಿ ಎಲ್ಲ ಕಡೆ ತಮ್ಮ ಹುಡುಗು ಪಡೆಯನ್ನಿಟ್ಟುಕೊಂಡವರು, ಕೇವಲ ಶಕ್ತಿಯಿಂದ ಯುಕ್ತರಾಗಿ ನಮ್ಮ ಮೇಲೆ ಆಳುತ್ತಿರುವಾಗ ಮಹಾತ್ಮ ಗಾಂಧಿಯವರು ಶುದ್ಧ ಅಹಿಂಸಾಪ್ರವೃತ್ತಿಯಿಂದ ನಾವು ಹೋರಾಡಲಿಕ್ಕೆ ಬೇಕು, ಶತ್ರುಗಳನ್ನು ಕೂಡ ಪ್ರೇಮದಿಂದ ನಾವು ಗೆಲ್ಲಬೇಕು, ಎಂಬ ತತ್ವದಿಂದ ನಡೆಯುತ್ತಿರುವರು.'

'ಹೀಗೆ ಒಂದಲ್ಲ, ಎರಡಲ್ಲ ಅನೇಕ ವಿಷಯಗಳಲ್ಲಿ ಗಾಂಧಿಯವರು ಹೊಸ ಯುಗವನ್ನು ಪ್ರಾರಂಭಿಸಿರುವರು. ಆದುದರಿಂದಲೆ ಇದಕ್ಕೆ ನಾನು 'ಗಾಂಧಿ ಯುಗ'ವೆಂದು ಹೆಸರನ್ನಿಟ್ಟಿದ್ದು. ಅವರು ಹೀಗೇಕೆ ಮಾಡುತ್ತಿರುವರು? ಈ ಪ್ರಶ್ನೆಯು ಮಹತ್ವದ್ದಾಗಿದೆ. ಈ ಪ್ರಶ್ನೆಗೆ ನಾವು ಉತ್ತರಕೊಟ್ಟರೆ ಮಹಾತ್ಮರ ಜೀವನದ ರಹಸ್ಯವು ನಮಗೆ ತಿಳಿಯುವದು. ಮಹಾತ್ಮ ಗಾಂಧಿಯವರು ಈ ತಮ್ಮ ವಿಚಾರಗಳಿಂದ ಇಡೀ ಹಿಂದುಸ್ಥಾನದಲ್ಲಿ ಪ್ರಚಂಡ ಜಾಗೃತಿಯನ್ನು ಮಾಡಿರುವರೆಂಬುದನ್ನು ಎಲ್ಲರೂ ಬಲ್ಲರು. ಅವನ್ನು ಅವರ ಶತ್ರುಗಳು ಕೂಡ ಅಲ್ಲಗಳೆಯರು.'

'ಮಹಾತ್ಮರು ಇದನ್ನೆಲ್ಲ ಮಾಡುವದು ಅತ್ಯಂತ ಬಡವರಿಗಾಗಿ, ಹೀನ ದೀನರಿಗಾಗಿ, ಅಜ್ಞರಿಗಾಗಿ ಹಿಂದುಸ್ಥಾನದಲ್ಲಿ ಪತಿತರೆನಿಸಿಕೊಳ್ಳುವವರಿಗಾಗಿ ಮಹಾತ್ಮರು ಈ ರೀತಿ ಪ್ರಾರಂಭ ಮಾಡಿದ್ದರೆ ಯಾರ ಹಿತಸ್ಸೂ ... ಆಗುತ್ತಿರಲಿಲ್ಲ ... ಅವರ ... ಸಕಲವು ... ಅವರ ... ಸ್ವಿ ... ನಡೆಯುತ್ತಿರುವದು ... ಅವರ ... ದರಿದ್ರನಾರಾಯಣನ ಉಪಾಸಕರು. ದೀನರ ಕೈವಾರಿಗಳು. ಈಗ ಪ್ರತ್ಯಕ್ಷ ... ಹಿಂದೀಯರಿಗೂ ಹೊಟ್ಟೆ ತುಂಬ ಊಟವು ದೊರೆಯಬಲ್ಲದು, ಈ ಬಗ್ಗೆ ವಿಚಾರವನ್ನು ... ಖಾದಿಯನ್ನು ಹುಟ್ಟಿಸುವ ಪ್ರತಿಯೊಬ್ಬನಿಗೆ ಹೊಟ್ಟೆ ತುಂಬ ಊಟವನ್ನು ದೊರಕಿಸಿ ಕೊಡುವದು, ನಮ್ಮೆಲ್ಲರ ಕರ್ತವ್ಯವೆಂದು ಅವರು ಬೋಧಿಸು ಸಾರಿರುವರು. ... ಮಹಾತ್ಮರಿಗೆ—ಅವರು ಪ್ರಸಂಗಾನುಸಾರ ರೀತಿಯಿಂದ 8 ತಾಸು ದುಡಿದರೆ—ಕೋಟಿ ... ಊಟವನ್ನು ... ದೇಶ ... ಅವ ... ಇದೆ ಎಂದು ಅವರು ... ಕೋಟಿಯಲ್ಲಿ, ಯಾವದೇ ಒಬ್ಬನು ... ಹೊಟ್ಟೆ ತುಂಬ ಅನ್ನವೆಂಬುದು ... ಸಿಕ್ಕದೇ ಹೋದರೆ ... ತಪ್ಪು ಇದೆ, ಅದನ್ನು ... ಎಂದು ಅವರು ಹೇಳುತ್ತಿರುವರು.'

'ಅದರಿಂದ ಈ ಮಹತ್ವದ ಕಡೆಗೆ ಎಲ್ಲರೂ ಲಕ್ಷ ಗೊಡಬೇಕು. ಪ್ರತಿಯೊಬ್ಬ ರೈತನು, ಕೂಲಿಕಾರನು, ಬೇಸಾಯಗಾರನು, ತನ್ನ ಕಸಬಿನಿಂದ ತನಗೆ ಹೊಟ್ಟೆ ತುಂಬ ಸಿಕ್ಕುತ್ತದೆಯೊ ಇಲ್ಲವೊ ಎಂಬುದನ್ನು ಪರೀಕ್ಷಿಸಬೇಕು. ಸಮಾಜದ ಸೇವೆ ಮಾಡುವವರು ಇತ್ತ ಲಕ್ಷಗೊಡದಿದ್ದರೆ ಸಮಾಜದಲ್ಲಿ ಕ್ರಾಂತಿಯಾಗುವದು. ಬಡವರು ರೇಗುವರು, ಹಾಗೆ ನನ್ನಾಯವೆಲ್ಲ ಹಾಳಾಗಿ ಹೋಗುವದು. ಅದುದರಿಂದ ಈಗಲೇ ಎಚ್ಚರಗೊಂಡು ನಾವು ಸಮಾಜದಲ್ಲಿ ಸುಧಾರಣೆ ಮಾಡಿಕೊಳ್ಳಲಿಕ್ಕೆ ಬೇಕು. ಶೋಷಣವೃತ್ತಿಯನ್ನು (exploitation) ಬಿಟ್ಟು ಬಿಡಲಿಕ್ಕೆ ಬೇಕು. ಅಂದರೆ ಮಾತ್ರ ಸಮಾಜವು ಸುಸಂಘಟಿತವೂ ಸಮರ್ಥವೂ ಆಗಬಲ್ಲದು.'

'ಇದೇ ಗಾಂಧಿ ಯುಗದ ರಹಸ್ಯವಿರುವದು. ಇದನ್ನು ನಾವೆಲ್ಲರೂ ಸಾಧಿಸಲು ಯತ್ನಿಸುವ.

ನಮ್ಮಲ್ಲಿ ಬೇಕಾದಷ್ಟು ಹಣವಿದ್ದರೂ ನಾವು ಬಡವರಂತೆ ಇದ್ದು ಬಡವರಿಗೆ ಹಿತವಾಗುವಂತೆ ನಿಶಕ್ತವೂ ನಮ್ಮ ಹಣದ ಉಪಯೋಗವನ್ನು ನಾವು ಮಾಡತಕ್ಕದ್ದು.

ನಮ್ಮಲ್ಲಿ ಬೇಕಾದಷ್ಟು ವಿದ್ಯೆ ಇದ್ದರೂ ನಾವು ಅದನ್ನು ಎಲ್ಲರಿಗೂ ಕಲಿಸಲು ಒಂದೇ ಸಮನೆ ಯತ್ನಿಸುತ್ತಿರಬೇಕು.

ನಾವು ಅನ್ಯರನ್ನು ಹಿಂಸೆ ಪಡಿಸದೆ ಜೀವಿಸಲು ಯತ್ನಿಸಲಿಕ್ಕೆ ಬೇಕು.

ತೀರ ಬಡವರಲ್ಲಿ ಬಡವನಾದವನಿಗೆ ಕೂಡ ಹೊಟ್ಟೆ ತುಂಬ ಊಟವು ಕೆಲಸ ಮಾಡಿದರೆ ದೊರೆಯುವಂತೆ ಸಮಾಜದ ರಚನೆಯನ್ನು ನಾವು ಮಾಡಲಿಕ್ಕೆ ಬೇಕು.'

ಮುಂದೇನು?

(ಲೇಖಕರು:—ಶಾಂತಿ ನಾರಾಯಣರು, ಕುಂಗಳಿಕ್ಕ)

ಸಕಲ ಜೀವರಾಶಿಗಳಲ್ಲಿಯೂ ಅರಿತಿಗಳೇ, ಆ ಶುದ್ಧವಾಗಿ ನಡೆಯುತ್ತಿರುವ ಪ್ರಶ್ನೆ ... ಇದೇ ಹೀಗೆ ಕಡ ಮುಂದುವರಿದ್ದು. ಇದೇ ಜೀವಿಕ್ಕೆ ... ಇದೇ ... ದಶ ... ಯೋನಿಗಳಲ್ಲಿ ಜೀವಿಯನ್ನು ಸಂಚಾರಕ್ಕೆ ಹಚ್ಚುವ ಹುರುಪು. ಇದರಿಂದಲೇ ಗತಿ. ಇದರಿಂದಲೇ ಪ್ರಗತಿ ಸೋಕ್ಷ್ಮ ದೃಷ್ಟಿಗೆ ಕಾಣದು ಬರುವ ಆಹಾರ, ನಿದ್ರಾ, ಭಯ, ಮೈಥುನಗಳು ಮಾತ್ರ ಉಳ್ಳ ದೇಹವಿದ್ದ ಏಕಾಣು ಜೀವಿಯು (Ameoba) ಹುಟ್ಟುವುದಕ್ಕೆ ಕಾರಣವೂ ಇದೇ. ಇವೆಲ್ಲವುಗಳ ನಾನಾ ಸಾಧನ ರಚಿಸುವಂತೆ ಮಾಡಿ ಆ ಜ್ಞಾನದಿಂದಲೇ ಸಕಲ ಭೋಗ ಭಾಗ್ಯಗಳನ್ನು ಎಷ್ಟುತ್ತಿಕೊಂಡು ಸಕಲವನ್ನು ಧಿಕ್ಕರಿಸಿ ಕರ್ಮಾದಿ ಬಂಧನದಿಂದ ಬಿಡುಗಡೆ ಮಾಡುವ ಶಕ್ತಿಯೂ ಇದೇ. ಕ್ರಿಮಿ ಕೀಟಗಳಲ್ಲಿ ಸುಖ ಮಾತ್ರಕ್ಕಾಗಿ ಜೀವನ ಸುಖವನ್ನು ಬಲಿಸುವ ಶಕ್ತಿಯೂ ಇದೇ. ಮಾನವನಿಗೆ ಹಿತ ಮಾರ್ಗವನ್ನು ತೋರಿಸಿ ಸ್ವ (Self) ವನ್ನು ಸತ್ಯ (Truth) ದೊಡನೆ ಪೂರ್ತಿಯಾಗಿ ಸೇರಿಸುವ ಮುಕ್ತಿಯೂ ಇದೇ. ಅನಾದಿ ಕಾಲದಿಂದ ಬಂದ ಬಂಧನವನ್ನು ಮುಚ್ಚಿ ಜೀವಿಯನ್ನಾಗಿ ಮಾಡುವದೂ ಇದೇ. ಅನಂತರ ಜ್ಞಾನಾನುಭವಗಳಿಂದ ಬಂಧನವನ್ನು ಬಿಚ್ಚಿ ಬಿಡುಗಡೆಯನ್ನು ಕೊಡುವುದೂ ಇದೆ. ದ್ವಂದ್ವ ಸಮೂಹದ ಮೂಲ ಸ್ಫೂರ್ತಿ ಸಮಸ್ಯೆಗಳೆಲ್ಲವೂ ಇದರಲ್ಲಿವೆ.

ಹುಟ್ಟಿದ ಜೀವಿಗೆ ಮರಣವು ಬಂದೇ ಬರುತ್ತದೆ ಪ್ರತಿಯೊಬ್ಬ ಮಾನವನಿಗೂ ಇದು ಗೊತ್ತೇ ಇದೆ. ಆದರೆ ಎಂದಾದರೂ ಒಂದು ದಿನ ಸಾಯಲೇ ಬೇಕಲ್ಲವೇ? ಎಂದುಕೊಂಡು ಕೈಕಟ್ಟಿ ಕೂತುಕೊಳ್ಳುವ ಪ್ರಾಣಿಯಾದರೂ ಇದೆಯೇ? ಇಲ್ಲ. ನಿರ್ಮಾಣವು ಕರ್ಮವನ್ನು ಮಾಡಿಸೀಯೇ ತೀರುತ್ತದೆ. ಇನ್ನು ಪ್ರಾಪ್ತಿಯಾದರೂ ಈ ಕರ್ಮಕ್ಕೆ ಇಲ್ಲಿ ಸವೂಪ್ತಿ ಇಲ್ಲ. ಕರ್ಮವು ನಡೆಯುತ್ತಲೇ ಇರಬೇಕು. ಅದಕ್ಕಾಗಿ ಏನು ಹೋದರೂ ಕೊರತೆಯು ನೀಗುವುದೇ ಇಲ್ಲ. ಅನ್ವೇಷಕ್ಕೆ ವಿಶ್ರಾಂತಿಯೇ ಇಲ್ಲ. ಅದು ಮುಂದೇನು, ಮುಂದೇನು ಎಂಬ ಕ್ರೋಧ ಸಂಚಾರಗಳ ಕಡೆಗೆ ಮನಸನ್ನು ನಡೆಸುತ್ತಲಿದೆ. ಅಲ್ಲಿ ಯೋನಿಯು ಕ್ರಿಮಿ ಕೀಟಗಳು, ಮಹಾ ಯೋನಿಯೆಂದು ವಿಸ್ತಾರಿಗೆ ಹೆಸರು; ಇಲ್ಲಿಂದಲ್ಲಿಯ ವರೆಗೆ ಜೀವವನ್ನು ಎಳೆದುಕೊಂಡು ಹೋಗಿ ವಿಕಾಸಗೊಳಿಸುವ ಶಕ್ತಿಯು ಈ ಮುಂದೇನು ಎಂಬುದರ ಹುರುಪೊಂದೇ.

ಆದರೆ ಮನುಷ್ಯನಿಗೆ ಈ ಸಂಚಾರದ ಪ್ರಜ್ಞೆ ಇದೆ. ಅದರ ವ್ಯಾಪಾರಗಳ ತಿಳುವಳಿಕೆ ಇದೆ. ಅದರ ರೀತಿಗಳ ಜ್ಞಾನವಿದೆ. ಅದನ್ನು ಕ್ರಮಪಡಿಸಿ ವಿಕಾಸಗೊಳಿಸುವ ಶಕ್ತಿ ಇದೆ. ಈ ಎಲ್ಲಾ ಗುಣಗಳೂ ಅವನಲ್ಲಿರೋಣದರಿಂದ ಅತನಿಗೆ ಸ್ವಪ್ರಜ್ಞೆ (Self consiousness) ಇದೆಯೆಂದು ಜ್ಞಾನಿಗಳು ಹೇಳುತ್ತಾರೆ. ಇತರ ಜೀವರಾಶಿಗಳಿಗೆ ಪ್ರಜ್ಞೆ ಮಾತ್ರ ಇದೆ ಹೊರತು ಅದು ತಪ್ಪು ಒಪ್ಪುಗಳನ್ನು ತಿಳಿದುಕೊಂಡು ಅದನ್ನು ಶಾಶ್ವತವಾದ ತತ್ವದೊಡನೆ ಹೋಲಿಸಿನೋಡುವ ಶಕ್ತಿಯು ಇಲ್ಲ. ಆದುದರಿಂದ ಮನುಷ್ಯನಲ್ಲಿ ಇತರ ಜೀವರಾಶಿಗಳಲ್ಲಿ ಕಾಣುವಂತೆಯೇ ಮುಂದೇನು ಎಂಬುವುದು ಇದ್ದರೂ ಅದನು ಅದನ್ನು ಜ್ಞಾನದಿಂದ ನಿಶ್ಚಿತ ತತ್ವದೆಡೆಗೆ ... ಸುವ ದೃಷ್ಟಿಯಿಂದ ನಡೆಯಿಸತಕ್ಕದ್ದು. ಇತರ ಪ್ರಾಣಿಗಳ ಹಾಗೆ ಮುಂದೇನು ಎಂಬ ಹುರುಪು ಹುಟ್ಟಿ ಹುಟ್ಟಿ ನಡೆಸುತ್ತಿದೆ ಮಾನವನೋ ತನ್ನಲ್ಲಿರುವ ಆ ಹುರುಪನ್ನು ತನಗೆ ಬೇಕಾದ ಮಾರ್ಗಗಳನ್ನು ತೆರೆಯುವುದಕ್ಕಾಗಿಯೂ, ನಡೆಸುವುದಕ್ಕಾಗಿಯೂ ಉಪಯೋಗಿಸತಕ್ಕದ್ದು. ಆತನಿಗೆ ಜ್ಞಾನವು ವಿಶೇಷವಾಗಿದೆ ಮತ್ತು ಜ್ಞಾನದ ಧರ್ಮವು ಇದೆ.

ಜನರು ನಾನಾ ಪ್ರಕಾರದವರೂ, ಅಂಗದವರೂ ಆಗಿದ್ದರೂ ಅವರೆಲ್ಲರ ಜ್ಞಾನವು ಒಂದೇ ಮಾರ್ಗವನ್ನೂ ಒಂದೇ ತತ್ವವನ್ನೂ ಅನಾದಿಯಿಂದ ಸಾರುತ್ತಿದೆ ಅದೇನು? ಸುಖವು ಬೇರೆ, ಹಿತವು ಬೇರೆ. ಸುಖದ ಪರಿಣಾಮವು ದುಃಖವಾಗಬಹುದು. ಹಿತದ ಪರಿಣಾಮವು ಪ್ರಗತಿಯೊಂದೇ. ಸುಖವು ಅದನ್ನು ಹುಡುಕಿದವನಿಗೆ ಮಾತ್ರ ಸಿಗಬಹುದು; ಹಿತದಿಂದ ಬಹು ಜನರಿಗೆ ನಿಜವಾಗಿ ಪ್ರಗತಿ ಮೂಲವಾದ ಸುಖವು ದೊರೆಯುತ್ತದೆ. ಸುಖದ ಶೋಧವು ಸಕಲ ಜೀವರಾಶಿಗಳಿಗೂ ಇದೆ ಹಿತದ ಬೋಧವು ಮಾನವ ಜೀವಿಗೆ ಮಾತ್ರವೇ ಇದೆ ಸುಖವು ಸ್ವಾರ್ಥಪರವು. ಹಿತವು ಪರಾರ್ಥಕ್ಕೂ ಒಳ್ಳೆಯದು. ಸುಖವು ಬರೀ ಭೋಗದಿಂದ ಬರುತ್ತದೆ. ಹಿತಕ್ಕೆ ಯೋಗ ತ್ಯಾಗಗಳೂ ಬೇಕು, ಜ್ಞಾನವೂ ಬೇಕು. ಹಿತದೃಷ್ಟಿಯು ಒಂದೇ ವಿಷಯವನ್ನು ಹೇಳುತ್ತದೆ. ಸುಖಶೋಧನೆಯೇ ನರಳಿಸುತ್ತದೆ ದುಃಖವೂ ಇರೋಣದರಿಂದ ಶಾಶ್ವತವಾದ ಸುಖವೆಂದರೆ ಹಿತವೇ, ಪರಾರ್ಥ ಬುದ್ಧಿಯೇ. ಪರಾರ್ಥ ಜೀವನದಲ್ಲಿ ಮಾತ್ರವೇ ನಿಜವಾದ ಶಾಂತಿ ಇಲ್ಲದ ಸ್ವಾರ್ಥವೂ ಇದೆ ಎಂಬುವುದೇ ಇದರ ಸಾರಾಂಶ. ನಮ್ಮ ಯಾವ ಭಾವ ವಿಚಾರ ಕರ್ಮಗಳಿಂದ ಜನತೆಗೆ ಕಷ್ಟ ನಷ್ಟಗಳು ಬರುತ್ತವೋ ಅವುಗಳಿಂದ ನಮಗೂ ಕ್ರಮೇಣವಾಗಿ ಹಾನಿಯುಂಟೇಯುಂಟು. ಎಲ್ಲಿ ಅದರ ಇಷ್ಟ ಪ್ರಾಪ್ತಿಯು ಕಡೆಗೆ ವೃತ್ತಿ ಇದೆಯೋ ಅಲ್ಲಿ ತಮಗೂ—ತಕ್ಕಾಲಕ್ಕೆ ಕಷ್ಟವು ತೋರಿ ಬಂದರೂ—ನಿಜವಾಗಿಯೂ ಶಾಶ್ವತವಾದ ಸುಖವಾಗಿಯೇ ತೀರಬೇಕು. ಇದನ್ನು ವಿವೇಚಿಸಿ ನಡೆಯುವ ಯೋಗ್ಯತೆಯು ಮನುಷ್ಯನಿಗಿದೆ. ಮತ್ತು ಆ ನಿರ್ದೇಶನದಲ್ಲಿಯೇ ಆತನ ಕರ್ತವ್ಯದ ಉಪದೇಶವೂ ಇದೆ. ಇದನ್ನರಿತು ಆಚರಿಸುವ ಜನತೆಗೆ ಉನ್ನತಿ ಈ ಜನ್ಮಸಿದ್ಧವಾದ ಹಕ್ಕನ್ನು ಧಿಕ್ಕರಿಸುವ ಜನತೆಗೆ ಅವನತಿಯು ಬಿಟ್ಟಿದ್ದಲ್ಲ. ... ಈ ದಿನ ಮಹಾತ್ಮ ಗಾಂಧಿಯವರು ಸಾರುತ್ತಿರುವ ... ಉಪದೇಶವೂ ಇದೇ.

ಓಂ ತತ್ ಸತ್.

ವಿ ವಿ ಧ ವಾ ರ್ತಾ ವ ಳಿ .

ಎಲ್ಲಿಗೋ ಹೋಗಿ ತಿಳಿಯದು!

ಹಿಂದೂಸ್ಥಾನದಿಂದ ಮುಂದಿನ ತಿಂಗಳಲ್ಲಿ ಸುಡಾನಿಗೆ ಹೋಗತಕ್ಕ ಎಸೆಕ್ಸ್ ರೆಜಿಮೆಂಟು ತಾ 25 ರಲ್ಲಿ ಬೊಂಬಾಯಿಂದ 'ನೇವಾಸಾ' ಎಂಬ ಸ್ಟೀಮರ್ ಹಡಗದಿಂದ ಎಲ್ಲಿಗೋ ಹೊರಟು ಹೋಯಿತು

—೦೦—

'ಬೊಂಬಾಯಿ ಸ್ಪೆಷಲ್ ಪವರ್ಸ್ ಬಿಲ್' ಪಾಸಾಯಿತು.

ಬೊಂಬಾಯಿ ಕೌನ್ಸಿಲಿನಲ್ಲಿ 'ಬೊಂಬೆ ಸ್ಪೆಷಲ್ ಪವರ್ಸ್ ಎಕ್ಟ್ 1932' ಪಾಸಾಯಿತು. ಓಟಿನ ಸಮಯದಲ್ಲಿ 22 ಮಂದಿ ಸದಸ್ಯರು ಎದ್ದು ಹೊರಗೆ ಹೋಗಿಬಿಟ್ಟರು. ಉಳಿದವರಲ್ಲಿ 49 ಮಂದಿ ಪರವಾಗಿಯೂ 4 ಮಂದಿ ವಿರೋಧವಾಗಿಯೂ ಮತಕೊಟ್ಟದ್ದರಿಂದ 'ಬಿಲ್' ಪಾಸಾಯಿತು.

—೦೦—

ಸಿಪಾಯಿಗಳ ಅತ್ಯಾಚಾರಕ್ಕೆ ಶಿಕ್ಷೆ

ಬೆಂಚು ಕೇಸಿನ ತೀರ್ಪು.

ಜಬಲ್ಪುರದಲ್ಲಿ ಕಿಂಗ್ಸ್ ರೆಜಿಮೆಂಟಿನ ಬಿಳಿ ಸಿಪಾಯಿಗಳು, ಕೆಲ ದಿನ ಹಿಂದೆ ಗ್ರಾಮವಾಸಿಗಳ ಮೇಲೆ ಧಾಳಿ ಕೈಕೊಂಡ ಪರಿಣಾಮವಾಗಿ ಒಬ್ಬನು ಮೃತಪಟ್ಟು, 13 ಮಂದಿ ಗಾಯಗೊಂಡರು. ಮೇಲೆ 10 ಮಂದಿಯ ಮೇಲೆ ಕಟ್ಲೆ ನಡೆಸಿ ತಾ 19ರಲ್ಲಿ ಅವರೆಲ್ಲರಿಗೂ 20 ವರ್ಷದಿಂದ 1½ ವರ್ಷಗಳವರೆಗೆ ಕಠಿಣ ಸಜೆ ವಿಧಿಸಲಾಯಿತು

—೦೦—

ಬ್ರಿಟಿಷ ಪಾರ್ಲಿಮೆಂಟು ಚುನಾವಣೆ.

ಈ ತಿಂಗಳು 22ನೇ ತಾರೀಕಿನಲ್ಲಿ ಈಗಿನ ಬ್ರಿಟಿಷ್ ಪಾರ್ಲಿಮೆಂಟ್ 4 ದಿನಗಳ ವರೆಗೆ ಸೇರುವದು. ಈ ಅಧಿವೇಶನವಾದ ನಂತರ ಈಗಿನ ಪಾರ್ಲಿಮೆಂಟ್ ರದ್ದಾಗಿ ಮುಂದಿನ ಹೊಸ ಚುನಾವಣೆಯು ನವಂಬರು ತಾ 14ರಲ್ಲಿ ನಡೆಯುವುದು ಎಲ್ಲ ಪಕ್ಷದವರೂ ತಮ್ಮ ತಮ್ಮ ಸದಸ್ಯರನ್ನು ಚುನಾವಣೆಗೆ ನಿಲ್ಲಿಸುವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ನವಂಬರು 4ರಲ್ಲಿ ನಾಮಿನೇಶನ್ ಪತ್ರಗಳು ಕೊಡಲ್ಪಟ್ಟು, ತಾ 14ರಲ್ಲಿ ಓಟುಗಳು ತೆಗೆಯಲ್ಪಡುವವು

—೦೦—

ವೇಲ್ಸಿನಲ್ಲಿ ಸತ್ಯಾಗ್ರಹ.

ಸೌತ್ ವೇಲ್ಸಿನ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಸತ್ಯಾಗ್ರಹವು ಶುರುವಾಗಿದೆ. ಸುಮಾರು 150 ಜನ ಕೂಲಿಕಾರರು ಗಣಿಯಲ್ಲಿಯೇ ಇದ್ದುಕೊಂಡು ಅನ್ನ ಬಿಟ್ಟು ಉಪವಾಸ ಮಾಡಿ ಸತ್ಯಾಗ್ರಹ ನಡಿಸಿರುವರು ಗಣಿಯ ಮಾಲೀಕರು 88 ಮಂದಿ ಹೊರಗಿನ ಕೂಲಿಕಾರರನ್ನು ಕೆಲಸಕ್ಕೆ ಹಚ್ಚಿದ್ದೇ ಇದಕ್ಕೆ ಕಾರಣವಾಗಿದೆ ಅವರನ್ನು ಕಡಿಮೆ ಮಾಡುವ ವರೆಗೆ ಈ ಸತ್ಯಾಗ್ರಹವು ನಡೆಯುವದು. ಅವರ ಆಪ್ತೇಷ್ಟರು ಅವರ ಹತ್ತಿರವೇ ಇದ್ದುಕೊಂಡು ಅವರನ್ನು ಪ್ರೋತ್ಸಾಹಿಸುತ್ತಿರುವರು

—೦೦—

ಮೆಮಲ್ ಚುನಾವಣೆಯಲ್ಲಿ ಜರ್ಮನಿಗೆ ಜಯ.

ಮೆಮಲ್ ಪ್ರಾಂತವು ಮೊದಲು ಜರ್ಮನಿಗೆ ಸೇರಿದ್ದು ಮಹಾ ಯುದ್ಧದನಂತರ 1918ರಲ್ಲಿನ ಒಪ್ಪಂದದ ಪ್ರಕಾರ ಲಿಥೇನಿಯಕ್ಕೆ ಬಿಡಲಾಯಿತು. ಅಲ್ಲಿ ಈಗ ಒಂದು ಮಿಲ್ಲಿಯಕ್ಕಿಂತ ಅಧಿಕ ಜರ್ಮನಿಯವರಿರುವರು ಅಲ್ಲಿನ 26 ಪ್ರತಿನಿಧಿಗಳ ಸ್ಥಾನಗಳಲ್ಲಿ 24 ಸ್ಥಾನಗಳು ಜರ್ಮನಿಯವರ ಕೈವಶವಾಗಿದೆಯಂತೆ ಕಳೆದ ಸಾರಿ 'ಸ್ಯಾರ' ಪ್ರಾಂತ್ಯವು ಜರ್ಮನಿಗೆ ಸೇರಿತು. ಈಗ ಮೆಮಲ್ ಪ್ರಾಂತ್ಯವೂ ಸಹ ಜರ್ಮನಿಗೆ ಸೇರುವಂತೆ ಕಾಣುತ್ತೆ.

—೦೦—

ಹೋಟೆಯಲ್ಲಿ ಧಾತ್ರಿದತ್ತಿಕೆ.

ಮಿ. ಆಸ್ಕರ್ ಸ್ಪೈಕರವರ ಅಪ್ರತಿಮ ಸಾಹಸ.

ಜರ್ಮನಿಯಿಂದ ಒಂದು ಪಕ್ಷ ಮತ್ತು ರಬ್ಬರಿನಿಂದ ಮಾಡಿದ ದೋಣಿಯಲ್ಲಿ ಕುಳಿತುಕೊಂಡು ಇಂಗ್ಲೆಂಡಿನ (ಜರ್ಮನ್) ಮಿ. ಆಸ್ಕರ್ ಸ್ಪೈಕ್ ಎಂಬವರು 1932ರಲ್ಲಿ ಹೊರಟು ಹಿಂದೂಸ್ಥಾನಕ್ಕೆ ಬಂದಿರುವರು. ಇವರು ಸಿಲೋನ ವರೆಗೆ ಸಹ ಬಂದಿದ್ದರು. ಈಚೆಗೆ ಮದರಾಸಿನ ಬಂದರಿಗೆ ಬಂದಾಗ ಸಾವಿರಾರು ಮಂದಿ ಇವರ ಸಾಹಸವನ್ನು ನೋಡುವುದಕ್ಕೆ ನೆರೆದಿದ್ದರು. ಮಿ. ಸ್ಪೈಕರವರನ್ನು ಮದ್ರಾಸಿನ ಊರ ಜನರು ಅನೇಕ ವಿಧದಿಂದ ಸತ್ಕರಿಸಿದರು.

—೦೦—

ಫ್ರೀಪ್ರೆಸ್ಸಿನ ಅಪೀಲನ್ನು ಕಿತ್ತು ಹಾಕಿದರು

ಕ್ವೆಟ್ಟಾ ಭೂಕಂಪ ಸಂಬಂಧದಲ್ಲಿ ಆಕ್ಷೇಪಕರ ಲೇಖನಗಳನ್ನು ಬರೆದ ಬಗ್ಗೆ ಬೊಂಬಾಯಿ ಸರಕಾರದವರು ಮುದ್ರಣ ಕಾಯಿದೆಯ ವಿಶೇಷ ಅಧಿಕಾರದಿಂದ ಫ್ರೀಪ್ರೆಸ್ ಪತ್ರಿಕೆಯ 20 ಸಾವಿರ ರೂಪಾಯಿಗಳನ್ನು ಜಪ್ತಿ ಮಾಡಿದ್ದರಷ್ಟೆ ಸರಕಾರದ ಈ ಆಜ್ಞೆಯ ವಿರುದ್ಧ ಫ್ರೀಪ್ರೆಸ್ಸಿನವರು ಹೈಕೋರ್ಟಿಗೆ ಅಪೀಲ್ ಮಾಡಿದ್ದರು. ಅಪೀಲಿನ ವಿಚಾರಣೆಯು ತಾ 16 ರಲ್ಲಿ ಚೀಫ್ ಜಸ್ಟಿಸ್, ಜಸ್ಟಿಸ್ ಬ್ಲಾಕ್‌ವೆಲ್, ಜಸ್ಟಿಸ್ ವಾಡಿಯಾ ಇವರ ಫುಲ್ ಬೆಂಚಿನ ಮುಂದೆ ನಡೆದು ಅಪೀಲು ಕಿತ್ತು ಹಾಕಲ್ಪಟ್ಟಿತು.

—೦೦—

ಸ್ತ್ರೀ ರಾಜ್ಯ.

ಆಫ್ರಿಕಾ ಖಂಡದ ಬಡಿಮ ಎಂಬ ಪ್ರದೇಶವನ್ನು ಸ್ತ್ರೀಯರೇ ಆಳುತ್ತಾರೆ ಅಲ್ಲಿಯ ಗಂಡಸರು ಮನೆಗೆಲಸದೊಡನೆ ಹೆಂಗಸರ ಊಟವಾದ ಮೇಲೆ ಉಣ್ಣುತ್ತಾರೆ ಹೆಂಗಸರು ಅವರಿಗಿನ ಕೆಲಸಗಳನ್ನೆಲ್ಲಾ ಮಾಡುತ್ತಾರೆ ಮಕ್ಕಳ ಜೋಪಾನವು ಗಂಡಸರ ಕೆಲಸ. ಯುದ್ಧಮಾಡುವದು ಸ್ತ್ರೀಯರ ಕರ್ತವ್ಯ. ಇಲ್ಲಿಯ ಹೆಂಗಸರು ಕುದುರೆಯ ಮೇಲೆ ಕುಳಿತು ಶೌರ್ಯದಿಂದ ಯುದ್ಧಮಾಡಿ ತಮ್ಮ ದೇಶವನ್ನು ರಕ್ಷಿಸುತ್ತಾರೆ

—೦೦—

ಲಂಡನಿನಲ್ಲಿ ಗಾಂಧಿ ಜಯಂತಿ.

ಈ ವರ್ಷದ ಗಾಂಧಿ ಜಯಂತಿಯನ್ನು ಲಂಡನಿನ ಅನೇಕ ಕಡೆಗಳಲ್ಲಿ ಆಚರಿಸಿದರು ಅವರಲ್ಲಿ 'ಫ್ರೆಂಡ್ಸ್ ಆಫ್ ಇಂಡಿಯಾ' ಸಂಸ್ಥೆಯವರು ಲಾಂಕಾಸ್ಟರ್ ಗೇಟ್ ಎಂಬಲ್ಲಿ ಅತೀ ವಿಜೃಂಭಣೆಯಿಂದ ಆಚರಿಸಿದರು ಅಗ್ಗೆ ದೀನ ಬಂಧು ಆಂಡ್ರೂಸರವರು ಮಹಾತ್ಮರ ವಿಷಯವಾಗಿಯೂ ಮತ್ತು ಭಾರತದ ಈಗಿನ ವಿಷಯವಾಗಿಯೂ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನೇಕ ಭಾರತೀಯರು ಮತ್ತು ಆಂಗ್ಲೇಯರು ಸೇರಿದ್ದರು

—೦೦—

ವಿಚಿತ್ರ ರೂಪದ ಮಕ್ಕಳು

ಉತ್ತರ ಹಿಂದುಸ್ಥಾನದ ಶಹಜಹಾನಪುರ ಜಿಲ್ಲೆಯ ಸಾಯಿದ್‌ಪುರ ಎಂಬಲ್ಲಿ ಒಂದು ವಿಶೇಷತರದ ಮಗುವು ಜನಿಸಿತು. ಇದಕ್ಕೆ ವೈಕುಂಠ ಕೋತಿಗಳೋಪಾದಿಯಲ್ಲಿ ರೋಮವಿದ್ದು, ಕೋತಿಯ ಮುಖದಂತೆ ಮುಖವಿತ್ತು. ಇದಕ್ಕೆ ಬಾಲ ಮಾತ್ರ ಇರಲಿಲ್ಲ. ಇದು ಜನಿಸಿದ ಸ್ವಲ್ಪ ಸಮಯದ ನಂತರ ಮೃತವಾಯಿತು.

ಹೀಗೆಯೇ ಅದೇ ಜಿಲ್ಲೆಯ ಇನ್ನೊಂದು ಹಳ್ಳಿಯಲ್ಲಿ ಇನ್ನೊಂದು ಆಶ್ಚರ್ಯಕರ ಮಗುವು ಜನಿಸಿದೆ ಇದಕ್ಕೆ ಕಿವಿ, ಮೂಗುಗಳಿಲ್ಲ. ಇದರ ಬಾಯಿಯು ಯಾವಾಗಲೂ ತೆರೆದುಕೊಂಡೇ ಇರುವುದು. ತಾಯಿಯು ಹಾಲನ್ನು ಎಳೆಯಲು ಇದಕ್ಕೆ ಸಾಧ್ಯವಾಗುವುದಿಲ್ಲ ಆದರೆ ಈ ಮಗುವು ಆರೋಗ್ಯಕರವಾಗಿದೆ. ಇದು ಒಂದು ವಿಚಿತ್ರ ರೀತಿಯಲ್ಲಿ ಅಳುತ್ತದೆ.

—೦೦—

ಕೃತಜ್ಞತಾಪೂರ್ವಕವಲ್ಲದ ಮಾನಪತ್ರ.

ಮದ್ರಾಸ್ ಕಾರ್ಪೋರೇಶನ್ನಿನ ಮಾನಪತ್ರವನ್ನು ಶ್ರೀ ನರೀಮಾನರು ತಿರಸ್ಕರಿಸಿದರು.

ಬೊಂಬಾಯಿಯ ಮೇಯರಾದ ಶ್ರೀ ಕೆ ಎಫ್ ನರೀಮಾನರು ಮದ್ರಾಸಿಗೆ ಬಂದಾಗ ಅವರಿಗೆ ಕಾರ್ಪೋರೇಶನಿನ ಪರವಾಗಿ ಮಾನಪತ್ರ ಕೊಡಬೇಕೆಂಬ ಠರಾವು ಪಾಸಾಗಿತ್ತು. ಆದರೆ ಮದ್ರಾಸ್ ಕಾರ್ಪೋರೇಶನ್ನಿನವರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರಿಗೆ ಮಾನಪತ್ರವನ್ನು ಕೊಡಲು ಒಪ್ಪದೆ ಅವರನ್ನು ಅವಮಾನಗೊಳಿಸಿದ್ದರಿಂದ ಅಂಥ ಕಾರ್ಪೋರೇಶನ್ನಿನ ಮಾನಪತ್ರವನ್ನು ತಾವು ಸ್ವೀಕರಿಸುವದಿಲ್ಲವೆಂದು ಶ್ರೀ ನರೀಮಾನರು ತಿಳಿಸಿದರು.

—೦೦—

ವರ್ಣ ದ್ವೇಷ ಇನ್ನೂ ಇದೆ.

ಇಂಗ್ಲೆಂಡಿನಲ್ಲಿ ಈಗ ವರ್ಣ ದ್ವೇಷದ ಪ್ರಶ್ನೆಯೇ ಇಲ್ಲವೆಂಬುದು ಸರಿಯಾಗಿರದ ವಿಷಯ. ಆಗಿಂದಾಗ್ಗೆ ಅಲ್ಲಿ ಕಪ್ಪು ಜನರ ಮೇಲೆ ಅದರಲ್ಲೂ ಭಾರತೀಯರ ಮೇಲೆ ನಾನಾ ತರದ ವರ್ಣ ದ್ವೇಷಗಳು ಪ್ರತ್ಯಕ್ಷಗೊಳ್ಳುತ್ತಲಿವೆ. ಮೊನ್ನೆಯಾಗಿ ಭಾರತದ ಓರ್ವ ರಾಜ ಕುಮಾರಿಯವರಿಗೆ ಉಳುಕೊಳ್ಳಲಿಕ್ಕೆ ಬಾಡಿಗೆಗೆ ಒಂದು ಕೋಣೆಯನ್ನೇ ಕೊಡಲಿಲ್ಲವಂತೆ ರಾಜ ಮನೆತನದವರಾದರೇನು, ಸಾವಿರಾರು ಜನ ಮಾನವರೇನು ಬ್ರಿಟಿಷರ ದೃಷ್ಟಿಯಲ್ಲಿ ಎಲ್ಲರೂ ನಿಕೃಷ್ಟ ಜೀವಿಗಳೇ!

NOTICE.

The Civil Surgeon and his Assistants will give lectures (Clinical) on anti-natal care, mother and child welfare and venereal diseases on the following days —

		Monday	Friday
(1)	Anti-natal, Mother & Child welfare	2 to 4 p m	12 to 1 p m

(2) Venereal diseases —Wednesday 3 to 4 p. m.

The lectures will begin from 1st November 1935 in the Civil Hospital, Mercara

There are various dangers which beset the pregnant woman; she has therefore to be cared for in a special way In these lectures it will be explained what precautions and methods woman should adopt in preparation for their babies.

The Infant mortality is unduly high, because of the many difficulties in the way of rearing families in India It will be explained in these lectures how to bring up a healthy baby in a simple and cheap manner.

Venereal diseases are a menace to this country At the weekly clinics help will be given in the prevention and treatment of these also

There will be occasional lectures on birth control

Civil Hospital,
Mercara,
23rd October, 1935

R. D. MacRae,
Captain I M S,
Civil Surgeon, Coorg.

ಪ್ರ ಕ ಟ ಣೆ.

ಸಿವಿಲ್ ಸರ್ಜನ್‌ರವರೂ, ಅವರ ಕೈಕೆಳಗಿನ ಅಧಿಕಾರಿಗಳೂ ಈ ಕೆಳಗೆ ಹೇಳಿರುವ ದಿವಸಗಳಲ್ಲಿ ಗರ್ಭಿಣಿ ಸ್ತ್ರೀಯರ ಎಚ್ಚರ, ಮಗು ಬಾಣಂತಿಯರ ಆರೋಗ್ಯ ಮತ್ತು ಮೇಹ ಜಾಡ್ಯಗಳೂ ಇವುಗಳನ್ನು ಕುರಿತು ಭಾಷಣ ಮಾಡುವರು

1 ಗರ್ಭಿಣಿ ಸ್ತ್ರೀಯರ ಎಚ್ಚರಿಕೆ ಮಗು ಬಾಣಂತಿಯರ ಆರೋಗ್ಯ	ಸೋಮವಾರ ಸಾಯಂಕಾಲ 2 ರಿಂದ 4 ರ ವರೆಗೆ	ಶುಕ್ರವಾರ ಮಧ್ಯಾಹ್ನ 12—1 ವರೆಗೆ
2 ಮೇಹ ಜಾಡ್ಯಗಳು	ಬುಧವಾರ ಸಾಯಂಕಾಲ 3 ರಿಂದ 4ರ ವರೆಗೆ	

ಈ ಭಾಷಣಗಳು 1935 ನೇ ಇಸವಿ ನವಂಬರ್ 1 ರಿಂದ ಸಿವಿಲ್ ಆಸ್ಪತ್ರೆಯಲ್ಲಿ ಪ್ರಾರಂಭವಾಗುವವು

ಗರ್ಭಿಣಿ ಸ್ತ್ರೀಯರಿಗೆ ಒದಗಬಹುದಾದ ಅಪಾಯಗಳು ಅನೇಕವಾಗಿವೆ. ಆದುದರಿಂದ ಆ ವಿಷಯದಲ್ಲಿ ವಿಶೇಷವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಹೆಂಗಸರು ಪ್ರಸವಕ್ಕೆ ಮೊದಲು ಯಾವ ರೀತಿ ಜಾಗ್ರತೆಯಿಂದಿರಬೇಕೆಂದು ಈ ಭಾಷಣಗಳು ತಿಳಿಸುತ್ತವೆ

ಹಿಂದೂ ದೇಶದಲ್ಲಿ ಮಕ್ಕಳನ್ನು ಸಾಕಲು ಇರುವ ತೊಂದರೆಗಳಿಂದ ಮಕ್ಕಳ ಸಾವಿನ ಸಂಖ್ಯೆಯು ಬಹಳವಾಗಿದೆ ಈ ಭಾಷಣಗಳಲ್ಲಿ ಹೆಚ್ಚು ಕಷ್ಟವೂ ವೆಚ್ಚವೂ ಇಲ್ಲದೆ ಮಗುವನ್ನು ಆರೋಗ್ಯವಾಗಿ ಸಾಕುವುದನ್ನು ವಿವರಿಸುವರು

ಮೇಹ ಜಾಡ್ಯಗಳ ಮತ್ತು ಚರ್ಮರೋಗಗಳ ಕಾಟವು ಇಲ್ಲಿ ಹೆಚ್ಚಾಗಿದೆ ಪ್ರತಿವಾರ ಭಾಷಣಗಳು ನಡೆಯುವ ಸಮಯದಲ್ಲಿ ಈ ರೋಗಗಳೂ ಬರದಂತೆ ಮಾಡಲೂ, ಬಂದರೆ ನಿವಾರಣೆ ಮಾಡಲೂ ಸಹಾಯವು ದೊರೆಯುವುದು.

ಸಂತಾನ ನಿರೋಧದ ವಿಚಾರವಾಗಿಯೂ ಆಗಾಗ ಭಾಷಣಗಳು ನಡೆಯುವವು.

ಸಿವಿಲ್ ಆಸ್ಪತ್ರೆ,
ಮಡಿಕೇರಿ,
23-10-35.

ಆರ್. ಡಿ. ಮೆಕ್ರೆ,
ಕ್ಯಾಪ್ಟನ್ ಐ. ಎಂ. ಎಸ್.
ಸಿವಿಲ್ ಸರ್ಜನ್, ಕೊಡಗು.

Reg. No. M. 1550

KODAGU

25—10—1935

IF NOT delivered please return to "KODAGU" OFFICE, MERCARA.

ಕೊಡಗು

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚು ಮೊಳೆಗೆ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್. ಮಡಿಕೇರಿ.

—०—

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೨೫ ನೇ ಶುಕ್ರವಾರ. [ಸಂಚಿಕೆ ೨೩

By Appointment
To H. E. The Governor of Madras.

CUPS AND MEDALS.



Telephone;
3145

Telegrams
'PRECIOUS.'



V. SUBRAMANIA IYER.

Jeweller, & Diamond Merchant,

52—49 2 & 3 Kuppumuthu Street Tiruvateswarampet. MADRAS. POST BOX 423 TRIPLICANE.

Catalogue & special designs with quotations (free) on enquiry

1906 ನೇ ಇಸವಿಯಲ್ಲಿ ಸ್ಥಾಪಿತವಾದ

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಉಡುಪಿ ಲಿಮಿಟೆಡ್.

ನೋಟೀಸು.

ನಮ್ಮ ಅಸಂಖ್ಯಾತ ಗಿರಾಕಿಗಳಿಗೆ ಈಗಿನ ಸ್ಥಿತಿಗಿಂತಲೂ ಹೆಚ್ಚಿನ ಅನುಕೂಲತೆಗಳನ್ನು ಕೊಡುವ ಉದ್ದೇಶ್ಯ, ನಮ್ಮ ವೀರರಾಜೇಂದ್ರಪೇಟೆ ಆಫೀಸನ್ನು ಈಗಿರುವ ಕಟ್ಟಡದಿಂದ ಇದೇ ಅಕ್ಟೋಬರ ತಾ॥ 25 ನೇ ಶುಕ್ರವಾರ ದಿನ ಕಾಡಾಚರ ಮೋಟರ್ ಸರ್ವಿಸ್ ಏಜಂಟರಾದ ಮೆಸರ್ಸ್ ಕೋಲಿ ಮೊಹಿದಿನ್ ಸಾಹೇಬ ಎಂಡ್ ಸನ್ಸ್‌ರವರ ದೊಡ್ಡ ಮತ್ತು ಊರಿನ ಮಧ್ಯಸ್ಥಳವಾಗಿರುವ ಮಳಿಗೆಯ ಕಟ್ಟಡಕ್ಕೆ ಸಾಗಿಸುತ್ತೇವೆ. ಹೊಸ ಆಫೀಸಿನಲ್ಲಿ ತಾ. 28 ರಿಂದ ದೈನಿಕ ಕೆಲಸಗಳನ್ನು ಪ್ರಾರಂಭಿಸುತ್ತೇವೆ.

NOTICE.

We beg to announce that our **Virarajendrapet** office will be shifted from the present premises to the building of Messrs. Koli Moidin Saheb & Sons, Agents Kadachar Motor Service, Virajpet, on Friday the 25th instant, where regular bussiness will be transacted with effect from 28—10—1935.

Udipi, 29—7—1935. 52—50 M. Srinivasa Prabhu, Manager.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಉದಾರವಾದ ಕೃಷಿ ಭೂಕಂಪ ಸೌಲಭ್ಯಗಳು

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಿಸಿಗಳು ಜಾರಿಯಲ್ಲಿರುವವು.
(2) ಕ್ಲೇಮುಗಳು ಮತ್ತು ಸಾಲವೂ ಅತೀ ವಿನಯ ನುಕ್ತ ಕ್ಷಿಪ್ರದಲ್ಲಾಗುವುದು.
(3) ಸಾಲಗಳಮೇಲಿನ ಬಡ್ಡಿಯ ದರವು $4\frac{1}{2}\%$ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವ ಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿಮಾ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾಲಿಯಾನರೂ. 25%o } { ಎಂಡೋಮೆಂಟ್ ಪಾಲಿಸಿಗಳಿಗೆ ಸಾಲಿಯಾನ ರೂ. 20%o

ಏಜೆನ್ಸಿಯ ನಿಯಮಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್), ಜನರಲ್ ಮ್ಯಾನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ವಿ. ಎಸ್. ಅಯ್ಯಂಗಾರ್ ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, ೨ನೇ ರೋಡ ಬೆಂಗಳೂರು ಸಿಟಿ

52—21

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಷೇರ್ ಬಂಡವಾಳ	—	50,000— 0—0
ವಸೂಲಾದ ಷೇರ್ ಮೊಬಲಗು	—	36,650— 0—0
ಜಮೆಯಾದ ಠೇವಣಾತಿ	—	2,51,667—13—8
ವಸೂಲಾದ ಕ್ಷೇಮನಿಧಿ	—	1,02,525—10—0

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೆ ಬೇಕಾಗುವ ಸಾಲಕೊಡಲಾಗುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕವಾಗಿ ರೂ 4—8—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕವಾಗಿ 4ರ ಬಡ್ಡಿ ದೊರೆಯುತ್ತೆ.

ವರ್ತಕರುಗಳಿಂದಲೂ ಕೊಡಲ ಪರ್ಶಿಪ್ ಡಿಪಾಜಿಟ್ ತೆಗೆದುಕೊಳ್ಳುತ್ತಾರೆ.

ಪ್ರೆಸಿಡೆಂಟು,	ಸೆಕ್ರೆಟರಿ
ಕಂಡ್ಯಂಡ ಎ. ಬೆಳ್ಯಪ್ಪನವರು.	ರಾ. ಸಾ. ಕಾಂಡಂಡ ಚಂಗಪ್ಪನವರು.

ಮನೇಜರು

ಮನೆಯಪ್ಪಂಡ ಬೆಳ್ಯಪ್ಪನವರು.

ಮಡಿಕೇರಿ 1—10—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯು ಯಾವ ವಿಷಯವನ್ನು ಹೆಚ್ಚು ಸಫಲತೆಯಿಂದ ಪೂರೈಸುತ್ತದೆ? ಅನೇಕರು ಭಾರತದ ಮಕ್ಕಳಿಗೆ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವುದು ಮಗುವು ಹುಟ್ಟಿ ದಿವಸದಿಂದ ಹಿಡಿದು ಕಾಲವರೆಗೂ ಸರ್ವ ರೋಗಗಳಿಂದ ರಕ್ಷಿಸುವ, ಭಾರತದ ಎಲ್ಲ ಕಡೆಯಲ್ಲೂ ಪ್ರಸಿದ್ಧಿ ಹೊಂದಿರುವ

ಡೋಂಗರ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್—

ಕೆ. ಟಿ. ಡೋಂಗರೆ ಕಂಪನಿ,

(52—35) ಗಿರಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

WANTED.

Influential and active persons who can guarantee business are required to work as Organisers of the Company in the areas detailed below. Applicants should be well known in the locality and must have considerable influence. Previous experience in the line will be preferred.

BANGALORE	**MYSORE**
COORG	**HASSAN**
KADUR	**SHIMOGA.**

Also applications for agencies are solicited from important centres where the Company is not well represented. The Company is very well known for its low Premiums, economical management, sound investments and prompt settlement of claims. In the past 38 years it has built up an excellent position of financial strength and great popularity. It will be easy to organise and secure business for the Company and earn a very decent and steady income.

For further particulars please apply to—

Branch Secretary,

EMPIRE OF INDIA LIFE ASSURANCE CO., LTD.,

52—50 15⁹/3 Commercial Street, Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಸ್ಥಾಪಿತವಾದದ್ದು ೧೮೭೪ನೇ ಇಸವಿಯಲ್ಲಿ) (ಹೆಡ್ ಆಫೀಸು— ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	ರೂ	15 29 88 814
ಫಂಡ್ಸ್ ಹೆಚ್ಚಿದ್ದು	....	ರೂ	15 53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪೂರ
ಅಲ್ಲಾಹಾಬಾದು	ಢಕ್ಕಾ	ಲಕ್ನೌ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಬೆಳಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಮುತ್ತೂರು	ಗುಂಟೂರು	ಜಲ್‌ಪೈಗುರಿ	ಬೆಲ್ಲಾರಿಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು. 52—41

ಯಂ. ವಿ. ಸುಬ್ರಹ್ಮಣ್ಯ ನಾಯುಡು,
(ಬ್ರ್ಯಾಂಚ್ ಸೆಕ್ರೆಟರಿ.)

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಚೇಟೆಯಾಡಲು ಮತ್ತು ವಿನೋದ ಹೊಡೆಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಬೆಲೆ ಕಳಿಸುವರು.

ಕೆಟಲಾಗ್ ಉಚಿತ.]



[CURRENT CATALOGUE FREE

The Bombay Armoury,

129—131, Abdul Rehman Street,
BOMBAY. 3.

26—8

Printed & published by P. I. Belliappa at "Kodagu" Press, Mercara for "Kodagu" Ltd.

ಅತ್ಯಂತ ಸ್ವಂತವಾಗಿ ಹಣವನ್ನು ಸಂಪಾದಿಸುವುದಕ್ಕೆ ಸುಲಭವಾಗಿ ಕಲಿಸುವ

ಶೃಂಗಾರಿಕೆಯ ಮರ್ಮಶಾಸ್ತ್ರ.

ಈ ಪುಸ್ತಕದಲ್ಲಿ ಪೇಟೆಂಟ್ ಮಾಡುವ ವಿಧ, ವಿಧವಾದ ಸೆಂಟ್‌ಗಳು, ಸಾಬೂನು, ಬಣ್ಣಗಳು, ಔಷಧಿಗಳು, ಪಾಲಿಷ್ ಇಂಕ್ ಗುಳಿಗೆಗಳು, ಬಿಸ್ಕತ್ ಇನ್ನೂ ಅನೇಕ ವಿಧವಾದ 72 ಪದಾರ್ಥಗಳು ತಯಾರಿಸುವ ವಿಧ ವಿವರವಾಗಿ ಕನ್ನಡ ಭಾಷೆಯಲ್ಲಿ 240 ಪೇಜುಗಳಿಗೆ ಅಂದವಾಗಿ ಪ್ರಿಂಟಾಗಿದೆ. ಈ ಪುಸ್ತಕದಲ್ಲಿ ಹೇಳಿದ ಪ್ರಕಾರ ತಯಾರು ಮಾಡಿದರೆ ತಿಂಗಳಿಗೆ ರೂ. 50 ಮೊದಲು ರೂ. 500 ವರೆಗೆ ಸಂಪಾದನೆ ಮಾಡಬಹುದು. ಇದನ್ನು ಓದಿ ನೋಡದಿದ್ದರೆ ಸಂಕೋಚಪಡಬೇಡಿ. ಪುಸ್ತಕ ಒಂದಕ್ಕೆ ಬೆಲೆ ರೂ. 1—0—0.

ವೆಡ್‌ಲಾಕ್ ಅಂಡ್ ಕಂ.,

52—4 ಪಾರ್ಕ್ ಟೌನ್, ಮದರಾಸ

Wedlock & Co., Parktown, Madras.

---

೪೦ ವರ್ಷಗಳಿಂದ ಅನುಭವಸಿದ್ಧ ಪ್ರಖ್ಯಾತ ಹೊಂದಿದ

ಕರ್ಕ ಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಆಲಾಡುವ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ೭ ಆಣೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ.

(52—4) ಮತ್ತು ಕಂಪನಿ,

ಗಿರಗಾಂವ, ಮುಂಬಯಿ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸದಾದ ವಜ್ರದ ಕಲ್ಲುಗಳನ್ನು ಕಟ್ಟಿ ಅಪರಂಜಿ ಭಂಗಾರಕ್ಕೆ ಸಮಾನವಾದ ಗಿನಿಯ ಭಂಗಾರದಿಂದ ಕಟ್ಟಿದ ಕಟ್ಟಿರುವುದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ

ಸರಿಯಾಗಿರುವುದು. ಇದರ ಬಂಗಾರವು ಕ ನಡಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರು ಈ ವಿಮಾನ್ಡರಸ ಬಹಳವಾಗಿ ಉಪಯೋಗಿಸುತ್ತಿರುವರು. ಇದನ್ನು ಅನೇಕರು ಮದರಾಸಿನಲ್ಲಿಯೇ ಬಹಳ ಪ್ರಿಯವಾಗಿ ಕೊಂಡುಕೊಳ್ಳುವುದರಿಂದ ನಾವು ಇದನ್ನು ಹೊರ ಊರಿನ ಮಹನೀಯರುಗಳಿಗೆ ಉಪಯೋಗವಾಗುವುದಕ್ಕೆ ಇಲ್ಲಿ ಪ್ರಚುರಿಸುತ್ತೇವೆ. 7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ ರೂ. 1—8—0. 7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ ರೂ. 1—12—0.

ಎಲ್ಲಿಕ್ ಟ್ರೇಡಿಂಗ್ ಕಂಪನಿ

52—4 19. ಬೀಟು ಮದರಾಸು.

FRASER'S

F O O T W E A R

have

the HALLMARK of

distinctive finish,

upto-date style,

fine workmanship

best materials.

AMAZING VALUE FOR LOW PRICE

HARDWEAR BOOTS & SHOES,

for estate and monsoon a speciality.

G. W. FRASER & CO., CALICUT.

12—6

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾರಾಂಶದಿಂದ ಮಿಶ್ರಿತ.

ಇದು ಬಲಹೀನರಿಗೆ ಅತ್ಯಾವಶ್ಯಕ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಇರುವ ಉಷ್ಣತೆ, ಧಾತು ಮೂತ್ರದೊಡನೆ ಹೋಗುವ ರೋಗಗಳು, ಸೊಂಟ ನೋವು, ಕೈಕಾಲು ಉರಿ, ಮಲಬದ್ಧತೆ, ಬಳಲಿಕೆ, ಆಲಸ್ಯತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗಡ್ಡೆ ಬರುವ ಜ್ವರ, ಪುರಾಣ ಜ್ವರ, ವಾಯುವಿನ ಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಜ್ವರ, ಕಫ ಟೈಫಾಯ್ಡ್ ಜ್ವರ ಇವುಗಳೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ. 1—8—0 ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಸ್ವಪ್ನಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬರುವುದು, ನಪುಂಸಕತ್ವ ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಚವನ ಪ್ರಾಶ—ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—5—0.

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬರು 1, ಮಂಗಳೂರು.

(1) ಎ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ (ಕೊಡಗು).

ಸಮ್ಮ ಔಷಧಿ (2) ಎ ಎಸ್. ವರದಯ್ಯ, ಒಟ್ಟೆ ವ್ಯಾಪಾರಿ, ಪುತ್ತೂರು.

ಸಿಕ್ಕುವ ಸ್ಥಳ. (3) ಮೋರ್ಸ್ ಕಾಮತ ಎಂಡ್ ಕೊ, ತಾಂಬ ಹೌಸ್ ಗಿರಗಾಂವ್ ಬ್ಯಾಕ್‌ರೋಡ್, ಬೊಂಬಾಯಿ ನಂ. 4.

52—15 (4) ಮೆಸರ್ಸ್ ಮುಲ್ಲರ್ ಪೆಟೆನ್ ಟ್ರೇಡರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ

ಯಾವ ಗುಣಗಳು ಅವಶ್ಯಕವೆಂದು ನೀವು

ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ಹಿಡಾಗಿ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—34 ಬೆಂಗಳೂರು.

ಖಾತ್ರಿಯಾದ ಔಷಧಗಳು.

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ಮಾತ್ರೆಗಳು

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ

ಗಟ್ಟಿಯಾಗುವುದು. ಔಷಧವನ್ನು ತಿಂದು ಗಂಟೆ ಕಾಲ ಕಳೆದು ಸ್ತ್ರೀ ಸುಖ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನೂ, ಆನಂದವನ್ನೂ ಕೊಡುವುದು. ಈ ಮಾತ್ರೆಗಳಿಗೆ ಬೆಳ್ಳಿ, ಭಂಗಾರ, ತಾಮ್ರ ಭಸ್ಮವು ಎಷ್ಟೋ ಪಾತ್ರವೂ ಸಮಾನವಾಗಲಾರವು. ಅದು ಅಲ್ಲದೆ ಧಾತುವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂರು ದಿವಸದಲ್ಲಿ ನಿಲ್ಲಿಸುವುದು. ಎಲ್ಲರೂ ಸೇವಿಸಬಹುದು. ಡಬ್ಬಿ 1ಕ್ಕೆ ಕ್ರಯ ರೂ. 1—8—0.

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರಿ ಕ್ರೀಮು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯನ ದೇಹದ ವೀರ್ಯವು ಗರ್ಭಕೋಶವಾಗಲಾರದು ಅತ್ಯಂತ ಮೈಥುನದಿಂದಲೂ, ವ್ಯಾಯಾಮ ಕಸರತ್ತಿನಿಂದಲೂ, ಯೌವನಗಲ್ಲ ಕೊಡುಕೊಂಡೇ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಗಲಿರುವ ವ್ಯಾಧಿಯನ್ನು ಹೇಳ್ಳು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿ ಸುಖಕ್ಕೆ ಶಕ್ತಿ ಇಲ್ಲದೆ ಲಜ್ಜಾಸ್ಪದರಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲಿಷ್ ಶಾಸ್ತ್ರಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ. ಈ ಎಣ್ಣೆಯನ್ನು ಪುರುಷರ ಮೇಲೆ ೩ ದಿವಸಗಳವರೆಗೆ ಸವರುವದರಿಂದ ಗುಣವಾಗುವುದು. ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವುದು. ಉಪಯೋಗಿಸುವ ವಿಧ ಬಾಟ್ಲಿ ಜೊತೆಯಲ್ಲಿದೆ

ಕ್ರಯ. ಸೀಸೆ 1ಕ್ಕೆ ರೂ. 1—4—0.

ಟಿ. ಆರ್. ರಾಯಲ್ ಕಂಪನಿ,

3 ಕೃಷ್ಣಪ್ಪ ನಾಯಕ ಟ್ಯಾಂಕ್ ಬೀದಿ,

52—4 ಜಿ. ಟಿ. ಮದ್ರಾಸು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಅನಾಥ ಮಗುವಿನ ರಕ್ಷಣೆ.

ಅಯ್ಯಾ,

ತಮ್ಮ ಪತ್ರಿಕೆಯ ಮೂಲಕ ಹರಿಜನ ಸೇವಕಾ ಸಂಘ ಕೊಡಗು, ಇವರಲ್ಲಿ ಅರಿಕೆ ಏನೆಂದರೆ—

ಅನಾಥರಾಗಿ ದಿಕ್ಕಿಲ್ಲದ ಹರಿಜನರ ರಕ್ಷಣೆಗೆ ತಾವು ಕೊಂಕಣಕ್ಕೆ ನಿಂತಿರುವ ವೇಳೆಗೆ ನಾವೂ ಸಹಾಯ ಮಾಡುವುದು ಅಗತ್ಯ. ಹೆಚ್ಚಿನ ಸಹಾಯವಿಲ್ಲದಿದ್ದರೂ ಅವರುಗಳ ಕಷ್ಟಗಳನ್ನು ತಮ್ಮ ಮುಂದಿಟ್ಟು ಅವರ ಕಷ್ಟವನ್ನು ತಾವು ಪರಿಹರಿಸುವುದು ಒಂದು ಕೆಲಸವಾಗಿರುವುದೆಂದು ನನ್ನ ಗ್ರಹಿಕೆಯಾಗಿದೆ. ಅನ್ನ, ಹಾಲು, ಬಟ್ಟೆ ಮೊದಲಾದ ಸೌಕರ್ಯಗಳಿಲ್ಲದ ಎಳೆ ಗೂಸಿಗೊಂದಕ್ಕೆ ಆಶ್ರಯ ಬೇಕಾಗಿದೆ. ಘನ ಸರ್ಕಾರದವರಾಗಲೀ, ರೆಡ್ ಕ್ರಾಸ್ ಸಂಘದವರಾಗಲೀ, ಇಲ್ಲವೇ ಹರಿಜನ ಸೇವಾ ಸಂಘದವರಾಗಲೀ ಈ ಮಗುವನ್ನು ರಕ್ಷಿಸಿ, ಅನ್ನಾಹಾರವನ್ನು ಕೊಟ್ಟು ಜೀವ ಕೊಡುವರೋ? ಯಾರು ನೋಡುವವರಿಲ್ಲದಿದ್ದರೆ ಮಗುವಿಗೆ ಆಹಾರವಿಲ್ಲದೆ ಸಾಯಬೇಕಾಗುವುದು. ಮಗುವಿನ ಪೋಷಣೆಯನ್ನು ಯಾರು ಮಾಡುವರೆಂದು ಈ ಪತ್ರಿಕೆಯ ಮೂಲಕ ತಿಳಿಸಿದರೆ ಹೆಚ್ಚಿನ ವಿವರವನ್ನು ಅವರಿಗೇನೇ ಬರೆಯುವೆನು. ಕಾಂಡವ

ಸಂಪಾಜೆ ಬಾತ್ಮಿ—ಕಾಡಾನೆಗಳ ಉಪದ್ರ

ಸಂಪಾಜೆಯಲ್ಲಿ ಕಾಡಾನೆಗಳ ಹಾವಳಿ ಸದಾ ಒಂದಲ್ಲ ಒಂದು ಕಡೆ ಇದ್ದೇ ಇದೆ. ತಾ 5—10—35 ರಲ್ಲಿ ಮೇ॥ ಶ್ರೀಧರ ದಾಮೋದರ ... ಎಂಬವರ ತೋಟಕ್ಕೆ ಹಿಂಡಾನೆಗಳು ನುಗ್ಗಿ ಸುಮಾರು 15 ಅಡಿಕೆ ಸಸಿಗಳನ್ನು, ಹಲವು ಬಾಳೆಯನ್ನೂ, ಸುಮಾರು 50 ಬಟ್ಟಿ ಭೂಮಿಯ ಬೆಳೆಯನ್ನೂ ನಾಶಪಡಿಸಿರುತ್ತವೆ. ತಾ 8—10—35 ನೇ ರಾತ್ರಿ ಸಂಪಾಜೆ 'ಟೋಗ' ಒಂಟಿ ಆನೆಯು ಮೇ॥ ಯಸ್ ... ವರ ಅಡಿಕೆ ತೋಟದ ಸುತ್ತ ಕಟ್ಟಿದ 9 ಅಡಿ ಎತ್ತರದ ಕಲ್ಲು ಕಟ್ಟಡದ ಮೇಲಕ್ಕೆ ಹತ್ತಿ ಒಳ ನುಗ್ಗಲು ಪ್ರಯತ್ನಿಸಿ ಸಾಧ್ಯವಾಗದೆ ಹೋಗಿದ್ದರಿಂದಲೇ ಕರೆಯಲ್ಲಿದ್ದ ಹತ್ತಿಪ್ಪತ್ತು ಬಾಳೆಗಿಡಗಳನ್ನೂ, ಒಂದು ಅಡಿಕೆ ಮರವನ್ನೂ, ಎಳೆದು ಮುರಿದು ತಿಂದು ಹೋಗಿರುತ್ತದೆ.

ಇಲ್ಲಿ ಒಂದೆಡೆ ಹಿಂಡಾನೆಗಳ ಧಾಳಿ, ಒಂದೆಡೆ 'ಟೋಗ' ಆನೆಯ ಉಪದ್ರವಾದ್ದರಿಂದ ರಾತ್ರಿ ಪ್ರಯಾಣ ಮಾಡುವುದೂ ಮತ್ತು ಬೆಳೆ ಪೈರು ಕಾಪಾಡುವುದೂ ಪೂರಾ ಕಷ್ಟವಾಗಿರುತ್ತದೆ. ಮಾತ್ರವಲ್ಲ, ಹೀಗೆ ಎಷ್ಟು ಸಮಯ ಇಲ್ಲಿಯ ಬಡ ರೈತರು ಈ ಕಷ್ಟ ನಷ್ಟಗಳನ್ನು ಸ್ವೀಕರಿಸಿಕೊಂಡಿರಬಹುದೆಂಬುದನ್ನು ವಾಚಕರು ಊಹಿಸಬಹುದಾಗಿದೆ.

ಆದುದರಿಂದ ನಮ್ಮ ಘನ ಸರ್ಕಾರದವರು ಈ ಪ್ರಾಂತ್ಯದಲ್ಲಿ 'ಖೆಡ್ಡ'ಗಳನ್ನು ತೋಡಿಸಿ ಹಿಂಡಾನೆಗಳನ್ನು ಹಿಡಿಸುವಂತೆಯೂ, 'ಟೋಗ' ಆನೆಯನ್ನು ಕೂಡಲೇ ಗುಂಡಿಕ್ಕಿ ಕೊಲ್ಲಿಸುವ ವಾಕೆಯೂ ಏರ್ಪಾಡು ಮಾಡಿಸಬೇಕಾಗಿ, ಈ ಬಗ್ಗೆ ಮಾನ್ಯ ಕೌನ್ಸಿಲರ್ ಮೆಂಬರರು ತಕ್ಕ ಸಲಹೆಗಳನ್ನು ಕೊಟ್ಟು ರೈತರ ಕಷ್ಟವನ್ನು ನಿವಾರಿಸಲು ಪ್ರಯತ್ನಿಸುವರಾಗಿ ಕೋರುವ

'ಬಡ ಗ್ರಾಮವಾಸಿ'

ಸಂಪಾಜೆ ಸ್ಕೂಲ್

ಈ ಸ್ಕೂಲಿನಲ್ಲಿ ತಾ. 4—10—35 ರಲ್ಲಿ ಶಾರದಾ ಪೂಜೆ ಮತ್ತು ಒಂದು ಸಾರ್ವಜನಿಕ ಸಭೆ ಕೂಡಿ ಸುಮಾರು 100 ಕ್ಕಿಂತ ಮಿಕ್ಕಿ ಗ್ರಾಮಸ್ಥರು ಕೂಡಿದ್ದರು. ವಿದ್ಯೆಯ ಮೇಲ್ಮೆ ಮತ್ತು ಆರೋಗ್ಯದ ವಿಷಯವಾಗಿ ಕಡಪ ಅನೇಕ ತರದಿಂದ ನೆರೆದವರಿಗೆ ಮನದಟ್ಟಾಗುವ ಭಾಷಣಗಳೂ, ಮಕ್ಕಳಿಂದ ... ವಾದವಾಗುವ ಕೆಲ ಯುಕ್ತಿವಾದಗಳೂ ಇದ್ದು ... ಸಭೆ ಕಮಿಟಿಯವರ ಪ್ರಯತ್ನಗಳ ಮುಖಾಂತರ ಉಪನ್ಯಾಸಗಳಿಂದ ಸಫಲವಾಯಿತು.

ಬೋರ್ಡು ಸ್ಕೂಲ್—ದಿನದಿಂದ ದಿನ ಬೆಳಗುವ ... ಅಲ್ಲಿನ ಮುಖ್ಯ ಉಪಾಧ್ಯಾಯರ ಪ್ರಯತ್ನದಿಂದ 7—10—35 ರಲ್ಲಿ ಸ್ಕೂಲ್ ಸೂಪರ್‌ವೈಜರು ಮೇ॥ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಹಳ್ಳಿಯೂರಿನಲ್ಲಿರತಕ್ಕ ಈ ಸ್ಕೂಲಿಗೆ ವಿದ್ಯಾರ್ಥಿಗಳನ್ನು ಕಳುಹಿಸದ ಪಕ್ಷದಲ್ಲಿ ಉನ್ನತಿಯು ಒಬ್ಬರಿಗೆ ಅಪಹಾಸ್ಯವಾಗುವದೆಂತಲೂ ಸಿಕ್ಕಿದ ಸ್ಕೂಲ್ ಹೋದರೆ ಮುಂದೆ ನಮ್ಮ ಜನ್ಮವೇ ವ್ಯರ್ಥವಾಗುವದೆಂತಲೂ, ಈ ನವಯುಗದಲ್ಲಿ ಎಲ್ಲರೂ ನಾವೂ ಜಾಸು' ಎಂದು ಮುಂದೆ ಬಂದು ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದ ... ಹಿಂದಿರುವುದು ಸರಿಯಲ್ಲ. ನಮ್ಮ ಸುಖ ಸಂಪತ್ತುಗಳನ್ನೆಲ್ಲಾ ಕಾಪಾಡಿಕೊಳ್ಳಬೇಕು; ಈ ಸ್ಕೂಲ್ ಅಭಿವೃದ್ಧಿಗೊಳ್ಳಬೇಕು' ಎಂಬ ಸೂಚನೆಗಳನ್ನು ಕೊಟ್ಟು 'ಶಾರದಾ ಪೂಜೆ' ಮಾಡಿ ಪ್ರಸಾದ ಹಂಚಿ ಸಭೆ ಅಂತ್ಯವಾಯಿತು.

'ಪ್ರತ್ಯಕ್ಷದರ್ಶಿ.'

ಏಟ್ಸ್ ದೊರೆಗಳಿಗೆ ಪೀಠ ಶಕ್ತಿ!

ಏಟ್ಸ್ ದೊರೆಗಳು ಕೆಲಸದಿಂದ ನಿವೃತ್ತರಾಗಿ ಹೋಗುವಾಗ ಅವರಿಗೊಂದು ಮಾನಪತ್ರವನ್ನು ಬೆಳ್ಳಿಯ ಆ ಕೇಟ್ಟಿನಲ್ಲಿ ಕೊಡಬೇಕೆಂದು ತೀರ್ಮಾನಿಸಿ ಅದಕ್ಕಾಗಿ 100 ರೂಪಾಯಿಗಳನ್ನು ಮಂಜೂರು ಮಾಡಿದರು. ಒಂದೆರಡು ವರ್ಷಗಳಲ್ಲಿ ಈ ವಿಷಯ ಚರ್ಚೆಗೆ ಬಂದು ಕೆಲವರು ಕೊಡಬೇಕೆಂದೂ ಕೆಲವರು ಕೊಡಬಾರದೆಂದೂ ಚರ್ಚಿಸಿ ಕೊನೆಗೆ ಅಖಿಲ ಕೊಡಗು ಉಪಾಧ್ಯಾಯರ ಸಂಘದ ಅಧ್ಯಕ್ಷರು ಅದನ್ನು ಕೊಡಲೇ ಬೇಕೆಂದು ಒಂದು ಮಹಾ ಸಭೆಯಲ್ಲಿ ತೀರ್ಮಾನಿಸಲಾಯಿತು. ಎರಡು ವರ್ಷಗಳ ವರೆಗೆ ಇದ್ದರು. ಪ್ರೆಸಿಡೆಂಟರು ಆ ವಿಷಯದಲ್ಲಿ ಏನೂ ಕೋಪದಿಂದ ತೆಗೆದುಕೊಳ್ಳದೆ ಇದ್ದು ಬಿಟ್ಟರು.

ಕಳೆದ ಮಹಾ ಸಭೆಯಲ್ಲಿ ಈ ವಿಷಯ ಏನೋ ಕಾರಣದಿಂದ ಘನತೆ ... ಗೆ ಒಂದು ಕಾಸ್ಕೆಟ್ಟು (ಪೆಟ್ಟಿಗೆ) ಕಳಿಸಿಕೊಡಬೇಕೆಂದು ತೀರ್ಮಾನವಾಯಿತು. ಆದರೆ ಇತ್ತೀಚೆಗೆ ಕಾಸ್ಕೆಟ್ ಬದಲಿಗೆ ಒಂದು ಪೀಠ ಶಕ್ತಿಯನ್ನು ಕಳುಹಿಸುವರೆಂದು ವರ್ತಮಾನ. ಇದು ನಿಜವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ನಮ್ಮ ಪತ್ರಿಕೆಯ ಮೂಲಕ ಕೊಡಬೇಕಾಗಿ ಕೇಳಿಕೊಳ್ಳಲಾಗಿದೆ.

(1) ಕಾಸ್ಕೆಟ್ ಕೊಡಬೇಕೆಂದಿದ್ದದನ್ನು ಪೀಠ ಶಕ್ತಿ ... ದು ಕಿವಿ, ಕೊಡತಕ್ಕದೆಂದು ನಿರ್ಣಯಿಸಿದ ಮಹಾ ಸಭೆಯ ನಿರ್ಣಯವನ್ನು ಅಲ್ಲಗಳೆಸಿ, ಕೊಡಲು ಕಮಿಟಿಗೆ ಅಧಿಕಾರವಿದೆಯೋ? ಇಲ್ಲವಾದರೆ ಮುಂದಿನ ಮಹಾ ಸಭೆಯ ವರೆಗೆ ತಡೆಯದೆ ಕಳುಹಿಸಬೇಕಾದ ಅತ ರಕ್ಕೆ ಕಾರಣವೇನು?

(2) ಎಸೋಸಿಯೇಶನ್ ಪ್ರೆಸಿಡೆಂಟರು ಕಳುಹಿಸದೇ ಇದ್ದ ಮಹಾ ಸಭೆಯ ಹಿಂದಿನೊಂದು ಠರಾವಿಗೆ ವಿರೋಧವಾಗಿ ಡೆಪ್ಯುಟಿ ಇನ್ಸ್‌ಪೆಕ್ಟರವರು ಪೀಠ ಶಕ್ತಿಯನ್ನು ಕಳುಹಿಸಲು ಕಾರಣವೇನು? ಅವರು ಕಳುಹಿಸಬೇಕೆಂದು ಕಮಿಟಿಯವರು ನಿರ್ಣಯ ಮಾಡಿದ್ದಾರೋ? ಇದಕ್ಕೆ ಹಣ ಯಾರು ಕೊಟ್ಟರು? ಎಲ್ಲಿಂದ ಕೊಟ್ಟರು? ಇದಕ್ಕೆ ಪ್ರೆಸಿಡೆಂಟರು ಸ್ವೀಕರಿಸಲು ಕಾರಣವೇನು?

(3) ಕಾಸ್ಕೆಟ್ಟು ಕಳುಹಿಸುವದೆಂದು ಮಾನ ಪತ್ರವನ್ನು ಹಸ್ತಪ್ರತಿ ... (ಪ್ರಿಂಟ್) ಅಚ್ಚು ಮಾಡಿದ್ದನ್ನು ಏನು ಮಾಡಿದರು? ಅದನ್ನು ಸಾಹೇಬರಿಗೆ ಕಳುಹಿಸಿದರೇ? ಇಲ್ಲವಾದರೆ ಅದನ್ನು ಏನು ಮಾಡುವ ಆಲೋಚನೆ?

(4) ಈ ಮಾನಪತ್ರಕ್ಕೂ ಪೀಠಶಕ್ತಿಗೂ ಒಟ್ಟಿಗೆ ಖರ್ಚು ಮಾಡಿದ ಹಣವೆಷ್ಟು? ಇದು ಒಮ್ಮೆ ಮಹಾ ಸಭೆಯವರು ಮಂಜೂರು ಮಾಡಿದ 100 ರೂಪಾಯಿ ಮತ್ತು ಇದಕ್ಕಿಂತ ಮೀರುವುದಿಲ್ಲವೇ? ಹೀಗೆ ಮೀರಲಿಕ್ಕೆ ಕಮಿಟಿಯವರಿಗೆ ಅಧಿಕಾರವಿದೆಯೋ?

ಇದೂ ಅಲ್ಲದೆ ಬಟ್ಟವೆಂಬರು ಸಂಘಕ್ಕೆ ಕೊಡಲಿಕ್ಕಿರತಕ್ಕದ ಬಾಬ್ತು ಹಣವನ್ನು ಲೆಕ್ಕದಿಂದ ಬಿಟ್ಟು ಮಾಡಲಿಕ್ಕೆ ಮಹಾ ಸಭೆಗಲ್ಲದೆ ಕಮಿಟಿಗೆ ಅಧಿಕಾರವಿದೆಯೇ? ಇಲ್ಲವಾದರೆ ಅದನ್ನು ಮಹಾ ಸಭೆಗೆ ಮುಂದಿಡುವುದೆಂದು ಮಾತ್ರ ಬಿಟ್ಟು ನೋಟೀಸಿನ ಪಟ್ಟಿಯಲ್ಲಿ ಬರೆಯದೆ ಬಿಟ್ಟು ಮಾಡಲು ಬರೆಯಲು ಕಮಿಟಿಗೆ ಯಾರು ಅಧಿಕಾರ ಕೊಟ್ಟರು?

ಇದನ್ನೆಲ್ಲಾ ನೋಡುವಾಗ್ಯೆ ಬೈಲಾದಲ್ಲಿ ಮಹಾ ಸಭೆಗೆ ಮಹತ್ವವಾದ ಅಧಿಕಾರ ಇದೆ ಎಂಬುದನ್ನು ಹೊಡೆದು ಆ ಅಧಿಕಾರವನ್ನು ಉಲ್ಲಂಘಿಸುವ ಅಧಿಕಾರ ಕಮಿಟಿಗೆ ಇದೆ ಎಂದು ಬರೆಯುವುದು ಉತ್ತಮವೆಂದು ತೋರುತ್ತೆ. ಅಲ್ಲದೆ ಕಮಿಟಿಯವರು ಮಾಡಿದ್ದನ್ನು ಪ್ರೆಸಿಡೆಂಟರೂ ಅಲ್ಲಗಳೆಯದುಂಟು. ಉದಾಹರಣೆಗೆ ಕಳೆದ ಮಹಾಸಭೆಗೆ ಯಾರು ಅಧ್ಯಕ್ಷರಾಗಬೇಕು, ಯಾರ ... ಕೊಡಬೇಕು ಎಂದು ಕೆಲವು ಹೆಸರುಗಳನ್ನು ಕಮಿಟಿಯವರು ಸೂಚಿಸಿದರೂ ಅಧ್ಯಕ್ಷರಾದವರೂ, ... ಹೇರಿಯುವದಂತೆ ಇದು ... ರ ಅಧಿಕಾರ?

ಸೂಕ್ಷ್ಮ ಟೀಕೆ.—

ಒಂದನೇ ಎರಡನೇ ಮೂರನೇ ಫಾರ್ಮುಗಳಲ್ಲಿದ್ದ ... ಸ್ಕೂಲ್ ಫೈನಲ್ ... ವರ್ಷದಿಂದಲೇ ಅವರು ... ಹೆಸರು ... ಪಟ್ಟಿಯನ್ನು ಹಿಂಬಾಲಿಸಿ ... ಸ್ಕೂಲುಗಳಿಗೆ ಅಷ್ಟೇ ಅದರ ಕೂಡಿಗಿನ ಮಧ್ಯ ... ಹಳೇ ಪದ್ಧತಿಯನ್ನೇ ಅನುಸರಿಸುತ್ತಿರುವರಂತೆ ಹೀಗೆ ಮಾಡಿದರೆ ಒಂದೊಂದು ಶಾಲೆಗೆ ಒಂದೊಂದು ... ಮುಂದೆ ಒಂದನೆ ಫಾರ್ಮ್ ಪರೀಕ್ಷೆಗೆ ಪ್ಯಾಸ್ ಮಾಡಲು ... ಮಾಡುವ ಬಗೆ ಹೇಗೆ? ಅಲ್ಲದೆ ಹಯರ್ ಎಲಿಮೆಂಟರಿ ಶಾಲೆಯ ಹುಡುಗರು ... ನಾಲ್ಕನೇ ಫಾರ್ಮ್ ಸ್ಕೂಲಿಗೆ ಬಂದರೆ ಅವರಿಗೆ ... ವೆ

ಆದಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ... ಡೆಪ್ಯುಟಿ ಇನ್ಸ್‌ಪೆಕ್ಟರವರು ಈ ಸಂಗತಿಗೆ ... ಬೇಕಾಗಿ ಕೋರಿಕೆ.

'ಅಭಿಮಾನಿ.'

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.
ಸ್ತ್ರೀಯರು ಕ್ರಮವಾಗಿ ಮಟ್ಟಾಗದಿರುವಿಕೆ ... ಹಿಂದುಂಟಾಗುವ ಹೊಟ್ಟೆ ನೋವು, ಸೊಂಟನೋವು, ... ಬಿಳಿಸೆರಗು, ... ರಕ್ತಸ್ರಾವ, ... ಶರೀರದ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಣಾಯು.
ದೊಡ್ಡ ಕುಪ್ಪಿ 2—8—0
ಅರ್ಧ ಕುಪ್ಪಿ 1—6—0.

ನವರತ್ನ
ದ್ರಾಕ್ಷಾರಿಷ್ಟ.
ಅಜೀರ್ಣ, ಅಗ್ನಿಮಾಂದ್ಯ, ... ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉತ್ಸಾಹವನ್ನೂ ಕೊಡುವ ಪ್ರಸಿದ್ಧವಾದ ಔಷಧವು ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 1—13—0

ಸೂ—ಔಷಧ ಪಡೆಯುವಾಗ ನವರತ್ನ ಮಾರ್ಕಿನ ... ನೋಡಿ ಪಡೆಯಿರಿ

ಸ್ಟಾಕಿಸ್ಟ್—ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರ, ಸುಂಟಿಕೊಪ್ಪ } ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—24

ನವರತ್ನ ಫಾರ್ಮಸಿ, ಕೊಚ್ಚಿನ್.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳ ಪಟ್ಟಿ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

210, Aboolrehman Street, BOMBAY 3.

20—4

ದು. ಅಲ್ಲಿ ಶೀಘ್ರದಲ್ಲೇ ಜಂಗಿಯೇಳಲೂ ಬಹುದು. ಅಲ್ಲಿ ನ ಇಟಾಲಿಯನ್ ಗವರ್ನರರು ಈ ವಿಷಯದಲ್ಲಿ ಹೆಚ್ಚು ಜಾಗ ರೂಕರಾಗಿರುವರು.

ಅಡೋವಾದ ವಿಜಯ ರೋಮ್‌ನಲ್ಲಿ ವರ್ಣನೆಯಿಲ್ಲ.

ಅಡೋವವು ಅಬಿಸೀನಿಯದ ಕೈವಶವಾದ ವರ್ತಮಾನವು ರೋಮ್ ನಗರಕ್ಕೆ ಸಿಕ್ಕಿರುವದಿಲ್ಲವಾಗಿಯೂ, ಅಡೋವಾವು ಅಬಿಸೀನಿಯದವರ ಕೈವಶವಾಗಿರುವದಿಲ್ಲವಾಗಿಯೂ ರೋಮ್‌ನಿಂದ ವಾರ್ತೆ.

ಅಬಿಸೀನಿಯದ ಪಾಳ್ಯಗಾರರು ಇಟಲಿಯ ಪಕ್ಷ ಸೇರಿದರು

ಅಬಿಸೀನಿಯ ಚಕ್ರವರ್ತಿಯವರ ಪಕ್ಷದಲ್ಲಿದ್ದ ಗಾಲ್ಲಾ ಮತ್ತು ಮಳಾಲೆ ಪಾಳ್ಯಗಾರರು ತಮ್ಮ 12000 ಸೈನಿಕರೊಡನೆ ಇಟಲಿಯವರ ಪಕ್ಷವನ್ನು ಸೇರಿರುವರೆಂದು ತಿಳಿದು ಬಂದಿದೆ. ಈ ವಾರ್ತೆಯಿಂದ ಇಟಲಿಯಲ್ಲಿ ಸಂತೋಷವೇ ಸಂತೋಷ 'ಶತ್ರುಪಕ್ಷದವರನ್ನು ತಮ್ಮ ವಶಪಡಿಸಿಕೊಂಡು ಮುಂದುವರೆಯುವದೇ ಇಟಲಿಯವರ ಉದ್ದೇಶ. ಇನ್ನು ಸ್ವಲ್ಪ ಮುಂದುವರಿಯುತ್ತಲೇ ಇನ್ನು ಅನೇಕರು ಈ ಪ್ರಕಾರ ಇಟಲಿಯವರ ಪಕ್ಷವಹಿಸುವರೆಂದು ಇಟಲಿಯವರ ಊಹನೆ

ಅಬಿಸೀನಿಯಕ್ಕೆ ಆಯುಧ ನಿರ್ಬಂಧ ಇಲ್ಲ.

ಒನಾಂಗಗಳ ಕೂಟದವರು ಇಟಲಿಯ ಮೇಲೆ ಆಯುಧ ನಿರ್ಬಂಧವನ್ನು ಹಾಕಿ, ಅಬಿಸೀನಿಯದ ಮೇಲೆ ನಿರ್ಬಂಧವನ್ನು ತೆಗೆದು ಅಬಿಸೀನಿಯದೊಡನೆ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಈ ತೀರ್ಮಾನದಿಂದ ಇಟಲಿಯವರು ವಿಸ್ಮಿತರಾಗಿರುವದಿಲ್ಲ. 'ಅಬಿಸೀನಿಯಕ್ಕೆ ಸದ್ಯದಲ್ಲಿ ಯುದ್ಧೋಪಕರಣಗಳನ್ನು ಕೊಂಡುಕೊಳ್ಳಲು ಹಣವಿಲ್ಲ. ಯಾವ ರಾಷ್ಟ್ರವಾಗಲೀ ಅದಕ್ಕೆ ಸಾಲಕೊಡಬೇಕು. ಇಂದಿನ ಪರಿಸ್ಥಿತಿಯಲ್ಲಿ ಅಬಿಸೀನಿಯಕ್ಕೆ ಸಾಲದ ರೂಪದಲ್ಲಿ ಯಾವ ರಾಷ್ಟ್ರವೂ ಆಯುಧಗಳನ್ನು ಸರಬರಾಜು ಮಾಡುವದಿಲ್ಲ. ಅದ್ದರಿಂದ ಈ ತೀರ್ಮಾನದಿಂದ ಇಟಲಿಗೆ ಹೆಚ್ಚಿನ ಬಾಧಕವಿಲ್ಲ' ವೆಂದು ಇಟಲಿಯವರ ಭಾವನೆ.

ಡ್ಜಿಬೌಟಿ—ಅಡಿಸ್ ಅಬಾಬ ರೈಲ್ವೆ.

ಇಟಲಿಯವರ ದೃಷ್ಟಿಯು ಈಗ ಡ್ಜಿಬೌಟಿ—ಅಡಿಸ್ ಅಬಾಬ ರೈಲ್ವೆಯ ಮೇಲಿದೆ. ಇಟಲಿಯ ವಿಮಾನ ಸೈನ್ಯಗಳು ಬೇರೆ ಬೇರೆ ಹಾದಿಗಳಿಗಾಗಿ ರೈಲ್ವೆ ಕಡೆಗೆ ಸಾಗುತ್ತಿವೆ. ಇಟಲಿಯ ಸೈನ್ಯವು ಈ ರೈಲ್ವೆಯ ಸಮೀಪದಲ್ಲಿರುವ ಹರಾರ್ ಪಟ್ಟಣದಿಂದ 50 ಮೈಲು ದೂರದಲ್ಲಿದೆ

ಸೆರೆ ಹಿಡಿಯಲ್ಪಟ್ಟವರಿಗೆ ಪ್ರತ್ಯೇಕ ವ್ಯವಸ್ಥೆ

ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲ್ಪಟ್ಟಿರುವವರನ್ನು ಇಡಲಿಕ್ಕಾಗಿ ಇಟಲಿಯವರು ಮಸ್ಸೋವಾ ಎಂಬಲ್ಲಿ ಒಂದು ಪ್ರತ್ಯೇಕ ಜೈಲನ್ನು ನಿರ್ಮಿಸಿರುವರು. ಇದುವರೆಗೆ ಸುಮಾರು 200 ಮಂದಿಗಳನ್ನು ಇಲ್ಲಿಗೆ ಸಾಗಿಸಿರುವರು.

ಅಡೋವದಲ್ಲಿ 50 ಸಾವಿರ ಕೋಟೆಗಳೂ ಅನೇಕ ಪುರಾತನ ಕಾಲದ ಕೋವಿಗಳೂ ಇಟಲಿಯವರ ಸ್ವಾಧೀನವಾಗಿವೆ.

ಇಟಲಿಯ ರಾಯಭಾರಿಗೆ ಭೇಟಿ ಕೊಡಲಿಲ್ಲ.

ಇಟಲಿಯ ರಾಯಭಾರಿಗಳಾದ ಕೌಂಟ್ ವಿನ್ಸಿಯವರು ಅಪೇಕ್ಷಿಸಿದ ಭೇಟಿಗೆ ಅಬಿಸೀನಿಯ ಚಕ್ರವರ್ತಿಯವರು ನಿರಾಕರಿಸಿರುವರು

ಅಕ್ಟೋಬರ್ ತಾ. 12.

ರಾಯಭಾರಿಗಳನ್ನು ಬಂಧಿಸಿದರು.

ಅಡಿಸ್ ಅಬಾಬದಲ್ಲಿರುವ ಇಟಲಿಯ ರಾಯಭಾರಿಗಳನ್ನು ಒಡನೆ ಅಬಿಸೀನಿಯದಿಂದ ಹೊರಟು ಹೋಗುವಂತೆ ಅಬಿಸೀನಿಯ ಚಕ್ರವರ್ತಿಗಳು ಅಪ್ಪಣೆ ಮಾಡಿದ್ದರು. ಆದರೆ ಕೌಂಟ್ ವಿನ್ಸಿಯವರು ಪ್ರತಿಯೊಬ್ಬ ಇಟಲಿಯ ರಾಯಭಾರಿಯೂ ಸುರಕ್ಷಿತವಾಗಿ ಹೋಗುವ ವರೆಗೆ ತಾವು ಕದಲುವುದಿಲ್ಲವಾಗಿ ತಮ್ಮ ಕಚೇರಿಯಲ್ಲೇ ಬಾಗಿಲು ಮುಚ್ಚಿಕೊಂಡು ಕೂತುಬಿಟ್ಟರು. ಈಗ ಅವರನ್ನೂ ಕರ್ನಲ್ ಕಾಲ್ಲಿ ಎಂಬವರನ್ನು ರಾಜಾಧಿಕಾರಿಗಳಾಗಿ ಅಡಿಸ್ ಅಬಾಬದಿಂದ ... ಮೈಲು ದೂರದಲ್ಲಿರುವ ಡಾಸ್ ಡೇವ್ರ್ ಎಂಬಲ್ಲಿ ಬಂಧಿಸಿರುವರು

ಆರ್ಥಿಕ ಬಹಿಷ್ಕಾರದಿಂದ ಇಟಲಿಯು ಎದೆಗುಂದಲಿಲ್ಲ.

ಒನಾಂಗಗಳ ಕೂಟವು ಆರ್ಥಿಕ ಬಹಿಷ್ಕಾರವನ್ನು ಹಾಕಿ ತಲುಪುವೆಂಬುದನ್ನು ಮೊದಲೇ ಇಟಲಿಯವರು ತಿಳಿದು ಅದಕ್ಕೆ ಬೇಕಾದ ಸಿದ್ಧತೆಗಳನ್ನು ಏರ್ಪಡಿಸಿರುವರಂತೆ. ಅದ್ದರಿಂದ ಈ ಬಹಿಷ್ಕಾರದಿಂದ ಅವರೇನೂ ಎದೆಗುಂದಿರುವುದಿಲ್ಲ.

ಅಕ್ಟೋಬರ್ ತಾ. 13.

ಅಬಿಸೀನಿಯ ಚಕ್ರವರ್ತಿಗಳಿಗೆ ದಿಗಿಲು.

ಸೋಮಾಲಿ ನಾಯಕರಾದ ಸಮಟಾರ ಪಾಳ್ಯಗಾರರಿಗೂ ಸ್ವಲ್ಪ ಅಬಿಸೀನಿಯ ಚಕ್ರವರ್ತಿಗಳ ದಿಗಿಲುಕ್ಕಾಗಿ 2000 ಸೈನಿಕರ ಸಹಾಯವನ್ನು ಕಳುಹಿಸಿರುವರು. ಹರಾರ್ ಪಟ್ಟಣ 60 ಮೈಲು ದೂರದಲ್ಲಿ ಇಟಲಿಯ ಸೈನ್ಯವು ಬಂದಿದೆಯೆಂಬ ವಾರ್ತೆಯು ಸುಳ್ಳೆಂದು ಪ್ರಕಟವಾಗಿದೆ.

ಇಟಲಿಯವರ ಮುಂದಿನ ಗುರಿ.

ಉತ್ತರ ಪಾರ್ಶ್ವದಲ್ಲಿ ಅಡಿಗ್ರಾಟ್, ಅಡೋವ ಮತ್ತು ಅಕ್ಸೂಂ ಎಂಬ ಸ್ಥಳಗಳನ್ನು ಆಕ್ರಮಿಸಿ ಒಂದು ವಾರದ ವರೆಗೆ ಸ್ವಲ್ಪ ವಿರಾಮವ ಪಡೆದು ಮುಂದಿನ ಹಜ್ಜೆಯನ್ನು ಇಟಲಿಯವರು ಮಕೆಲ್ ಪಟ್ಟಣದಲ್ಲಿ ಇಡುವರು. ಇದರ ಮುತ್ತಿಗೆಯು ಶೀಘ್ರದಲ್ಲೇ ಸಂಭವಿಸುವುದು. ಎರಿಟ್ರಿಯದ ಅಸ್ಮಾರ ನಗರದಿಂದ ಅಡೋವಕ್ಕೆ ಬಗಲೇ ಮೋಟಾರು ರಸ್ತೆಯನ್ನು ಪೂರೈಸಿರುವರು.

ಬಾಂಬುಗಳನ್ನು ಧ್ವನಿ ಎಸೆದರು.

ಇಟಲಿಯ 31 ವಿಮಾನಗಳು ಅಬಿಸೀನಿಯದವರು ವಶದ ಲ್ಲಿಟ್ಟುಕೊಂಡಿರುವ ಮಕೆಲ್ ಮಕೆಲ್ ಪಟ್ಟದ ಸಮೀಪದಲ್ಲಿರುವ ಗಲೀರ್ಗಾಬಿ ಎಂಬ ಪಟ್ಟಕ್ಕೆ ಬಾಂಬುಗಳನ್ನು ಎಸೆದವು ಪ್ರಾಣ ಹಾನಿಯು ಇನ್ನೂ ತಿಳಿದು ಬಂದಿರುವುದಿಲ್ಲ. ಬೇರೆ ಕಡೆಗಳಲ್ಲಿ ಆಕ್ರಮಿಸಿ, ಹೊಂದುತ್ತಿದ್ದ ಅಬಿಸೀನಿಯ ಸೈನಿಕರು ಅಲ್ಲಿ 35 ಮಂದಿ ನ್ಯಾಶರಾದರು. ಉತ್ತರದ ಡನಕಿಲ್ ಪ್ರಾಂತ್ಯದ ಹಳ್ಳಿಗಳ ಮೇಲೂ ಇಟಲಿಯ ವಿಮಾನಗಳು ಬಾಂಬಿನ ಸುರಿಮಳೆಗರೆದುದರಿಂದ ವಿಶೇಷ ಪ್ರಾಣ ಹಾನಿಯಾಗಿದೆಯಂತೆ.

ಅಕ್ಟೋಬರ್ 14.

ಒಗಾಡೆನಿನಲ್ಲಿ ಸೈನ್ಯ ಯುದ್ಧ ಪ್ರಬಂಧ

ಅಡಿಸ್ ಅಬಾಬ ಡ್ಜಿಬೌಟಿ ರೈಲ್ವೆಯನ್ನು ಕಡಿದುಹಾಕುವ ಉದ್ದೇಶದಿಂದ ಇಟಲಿ ಸೈನ್ಯವು ಧಂದಿಂದ ಮುಂದೊತ್ತುತ್ತಿರುವುದು. ದಕ್ಷಿಣದಲ್ಲಿ ಜನರಲ್ ಗ್ರಾಜ್ಜಿಯಾನಿಯವರ ನಾಯಕತ್ವದಲ್ಲಿ ಒಗಾಡೆನ್ನಿನ ಹರಾರ್ ಪಟ್ಟವನ್ನು ಆಕ್ರಮಿಸಲು ಒಂದು ದೊಡ್ಡ ಸೇನೆಯು ಒಟ್ಟಾಗಿದೆ. ಇವರನ್ನೆದುರಿಸಲು 1,60,000 ಅಬಿಸೀನಿಯ ದಂಡು ಮುಂದುವರಿಯುತ್ತಲಿದೆ. ಇಟಲಿಯವರು ಹರಾರಿನ 36 ಮೈಲಿ ಮುಂದುವರಿದಿರುವರು. ಇವರ ಸೈನ್ಯವು ಹೋದ ಹಾಗೆಲ್ಲಾ 30 ವಿಮಾನಗಳು ಮುಂದೆ ಬಾಂಬುಗಳನ್ನೆಸೆಯುತ್ತ ವಿಷಗಾಳಿಯನ್ನು ಪ್ರಯೋಗಿಸುತ್ತ ಎಲ್ಲ ಅಡಚಣೆಗಳನ್ನು ನಿವಾರಿಸುತ್ತಲಿರುವವು. ಈ ಸಂದರ್ಭದಲ್ಲಿ 350 ಬಾಂಬುಗಳು ಎಸೆಯಲ್ಪಟ್ಟವು. ಅಲ್ಲದೆ ವಿಷದ ಗಾಳಿ ಪ್ರಯೋಗವು ಮಾಡಲ್ಪಟ್ಟಿತು. ಪ್ರಾಣ ಹಾನಿ ಇನ್ನೂ ತಿಳಿಯ ಬಂದಿಲ್ಲ

ಇಟಲಿ ಪಕ್ಷಕ್ಕೆ ಸೇರಿದರು

ಅಡಿಗ್ರಾಟಿನಲ್ಲಿದ್ದ 1000 ಅಬಿಸೀನಿಯ ಸೈನಿಕರು ತಮ್ಮ 1000 ಕೋವಿಗಳನ್ನು ಇಟಲಿಯವರಿಗೊಪ್ಪಿಸಿ ಅವರ ಪಕ್ಷಕ್ಕೆ ಸೇರಿದರು

ಪ್ರಕಟಣೆ.

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು.

ಜಾರಿ ನಂಬರು 550/1934 ರಲ್ಲಿ ವಾದಿ ಅಪ್ಪರಂಡ ಸಿ. ಪೆಮ್ಮಯ್ಯ ವಗೈರರು ಪ್ರತಿವಾದಿ ಕೈಕಂಡ ಭೀಮು ಭಟ್ಟರ ಮೇಲೆ ಪಡೆದಿರುವ ಡಿಕ್ರಿ ಮೊಬಲಗು ರೂ. 27,165—5—7 ಮತ್ತು ಮುಂದಿನ ಖರ್ಚು, ಮತ್ತು ಬಡ್ಡಿ ವಸೂಲಾತಿಗಾಗಿ ಪ್ರತಿವಾದಿ ಭೀಮು ಭಟ್ಟರವರ ಬಾಬ್ತು ಸಿದ್ದಾಪುರ ಗ್ರಾಮದಲ್ಲಿರುವ ಕಾಫಿ ತೋಟಗಳನ್ನು ತಾರೀಕು 27—10—1935ನೇ ಆದಿತ್ಯವಾರ ದಿವಸ ಹಗಲು 12 ಗಂಟೆ ಸಮಯದಲ್ಲಿ ಸಂಟಿಕೊಪ್ಪ ನಾಡು ಕಚೇರಿಯಲ್ಲಿ ಪಾರುಪತ್ಯಗಾರರ ರೂಬರೂ ಹರಾಜಾಗುತ್ತೆ. ಖರೀದಿದಾರರು ಹರಾಜು ಮೂಲಕ ಷರತ್ತುಗಳನ್ನು ತಿಳಕೊಳ್ಳಬಹುದಾದ ಸಂಗತಿ ಈ ಮೂಲಕ ಪ್ರಕಟಿಸಿದೆ.

ಪಿ. ಯಂ. ನಾಣಯ್ಯ,
(ಲಿಕ್ವಿಡೇಟರ್)

ಮಾರಾಟಕ್ಕಿದೆ.

ಪೊನ್ನಂಪೇಟೆಯಿಂದ ತಿತಿಮತಿಗೆ ಹೋಗುವ ಪಬ್ಲಿಕ್ ರಸ್ತೆಯ 9 ನೇ ಮೈಲು ಕಲ್ಲಿನ ಬಳಿ ಇರುವ 45 ಎಕರೆ ಪೈಸಾರಿ ಭೂಮಿ, (ಈ ಭೂಮಿಗೆ ಮೂರು ಭಾಗದಲ್ಲಿ ತಂತಿ ಬೇಲಿಯ ಬೇಲಿ ಹಾಕಲ್ಪಟ್ಟಿದೆ) 40 ಎಕರೆ ಕಿತ್ತಳೆ ತೋಟ, ವಾಸಕ್ಕೆ ಯೋಗ್ಯವಾದ ಹೆಂಚು ಹಾಕಿದ ಮನೆ, ಹಂಚು ಹಾಕಿದ ಕೊಟ್ಟಿಗೆ, ಕಲ್ಲು ಕಟ್ಟಿದ ನೀರು ಬಾವಿ ಮತ್ತು 50 ರಾಸು ದನಗಳು ಮಾರಾಟಕ್ಕಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

ಸಾವರಂಗಳ ಅಣ್ಣಯ್ಯ,
ಬಸವನ ಪುರ,
ತಿತಿಮತಿ.

4—2

FOR SALE.

CUBBON COTTAY ESTATE, SIDAPUR.

Mainly Robusta Coffee. Open to offers.

Reply:—MANAGER,
Sidapur Estate,
SIDAPUR.

ಊರ ದೇಶ.

ಈ ತಾ. 11 ರಿಂದ 17 ರ ವರೆಗೆ ಮಡಿಕೇರಿಯಲ್ಲಿ 1.47 ಇಂಚು ಮಳೆಯಾಗಿದೆ. ದೇಶದ ಹಲವು ಕಡೆಗಳಲ್ಲೂ ಈ ವಾರ ಮಳೆ ಬಿದ್ದಿದೆ.

ಇತ್ತೀಚಿನ ವರೆಗೆ ಹೆಬ್ಬಾಲೆಯಲ್ಲಿ 14 ಜನರಿಗೆ ಪ್ಲೇಗು ತಗಲಿ, 7 ಜನರು ಮೃತಪಟ್ಟಿರುವರೆಂದೂ, ಮಕದ ನಾಡು ಕಾಫಿತೋಟದಲ್ಲಿ ಈ ವಾರ ಇಬ್ಬರಿಗೆ ಪ್ಲೇಗು ಅಂಟಿದೆಯೆಂದೂ ವರ್ತಮಾನ

ವಿರಾಜಪೇಟೆ ಕಡಂಗಮರೂರು ಗ್ರಾಮದ ಪಳಂಗಂಡ ಮನೆಯ ಪಟ್ಟೆದಾರ ಮ. ರಾ. ಐಯ್ಯಪ್ಪನವರು ಈ ತಾ. 10ರಲ್ಲಿ, ತಮ್ಮ 92 ನೇ ವಯಸ್ಸಿನಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ

ಮಡಿಕೇರಿ—ವೀರಾಜಪೇಟೆಗೆ ನಡೆಯುತ್ತಿರುವ 'ದಿ ಕೂರ್ಗ್ ಮೋಟರ್ ಬಸ್ ಸರ್ವೀಸ'ನ್ನು ಈಗ ಶ್ರೀ ಕಾವೇರಿ ಬಸ್ ಸರ್ವೀಸಿನವರು ಕೊಂಡುಕೊಂಡಿರುವರೆಂದು ತಿಳಿಯಬರುತ್ತದೆ.

ಲಂಡನಿನ ಡಾಕ್ಟರ್ ಸಿ. ಆರ್ ಫೇಯವರು ಈ ತಾ. 12 ರ ಸಾಯಂಕಾಲ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ 'ಸಹಕಾರ ಚಳವಳಿ'ಯನ್ನು ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ಕಮೀಷನರವರು ಅಧ್ಯಕ್ಷರಾಗಿದ್ದರು.

ಈ ತಾ. 10 ರಲ್ಲಿ ನಡೆದ ಚುನಾವಣೆಯಲ್ಲಿ ವೀರಾಜಪೇಟೆ ಮುನಿಸಿಪಲ್ ಕಮಿಟಿಯವರು ಮ. ರಾ. ಟಿ ಆರ್. ತಿರುವೆಂಗಡಂ ಪಿಳ್ಳೆಯವರನ್ನು ಅಧ್ಯಕ್ಷರಾಗಿಯೂ, ಮ. ರಾ. ನಾಲ್ಕೇರಂಡ ತಮ್ಮಯ್ಯನವರನ್ನು ಉಪಾಧ್ಯಕ್ಷರಾಗಿಯೂ ಆರಿಸಿರುವರು

ಈ ತಾ 13 ರಲ್ಲಿ ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡೆದ ಸಾರ್ವಜನಿಕ ಚರ್ಚೆಯಲ್ಲಿ 'ಕರ್ಣನು ದುರ್ಯೋಧನನ ಪಕ್ಷವನ್ನು ವಹಿಸಿದುದು ಯೋಗ್ಯವಲ್ಲ'ವೆಂದು ತೀರ್ಮಾನವಾಯಿತು.

ಕೊಡಗು ಸೆಂಟ್ರಲ್ ಬ್ಯಾಂಕಿನ ಡೆಲಿಗೇಟ್ಸ್ ಮತ್ತು ಬೋರ್ಡಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 25—10—35ನೇ ಶುಕ್ರವಾರ ಸಾಯಂಕಾಲ 4 ಗಂಟೆಗೂ ಮತ್ತು ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 26—10—35ನೇ ಶನಿವಾರ ದಿನ ಬೆಳಗ್ಗೆ 11 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆ

ಈ ವಾರ ಮಡಿಕೇರಿಯಲ್ಲಿ ಹೊಸಬರಿಗ್ಯಾರಿಗೂ ಪ್ಲೇಗು ಅಂಟದಿದ್ದರೂ ಇಲಿಗಳು ಸಾಯುತ್ತಿವೆಯೆಂದೂ, ಇನಾಕ್ಯುಲೇಶನ್ ಕೆಲಸವು ಬಿರುಸಾಗಿ ನಡೆಯುತ್ತಿದೆಯೆಂದೂ, ತಾ. 16 ರಿಂದ ಇಲ್ಲಿಂದ ಕಾವೇರಿ ಜಾತ್ರೆಗೆ ಹೋಗುವವರಿಗೆಲ್ಲಾ ಕಡ್ಡಾಯವಾಗಿ ಇನಾಕ್ಯುಲೇಶನ್ ಮಾಡಲ್ಪಟ್ಟಿತೆಂದೂ ತಿಳಿಯಬರುತ್ತದೆ.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ, ಧಾರವಾಡದ ಮ. ರಾ. ರಂಗನಾಥ ರಾಮಚಂದ್ರ ದಿವಾಕರ್ ಎಂ. ಎ ಎಲ್ ಎಲ್ ಬಿ ಯವರು 'ಜೀವನದ ರಹಸ್ಯ'ವನ್ನು ಕುರಿತು ತಾ. 12 ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲಿನಲ್ಲಿ ಅರ್ಥಗರ್ಭಿತವಾದ ಉಪನ್ಯಾಸ ಮಾಡಿದರು. ಮ. ರಾ ಬಿ. ಪದ್ಮನಾಭ ಶಾಸ್ತ್ರಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಧಾರವಾಡದ ದೇಶಭಕ್ತ ಶ್ರೀಯುತ ಆರ್. ಆರ್. ದಿವಾಕರರು ಈ ತಾ. 13 ರಲ್ಲಿ ಗೋಣಿಕೊಪ್ಪಲಲ್ಲಿ ಮ. ರಾ. ಸಿ. ಎ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನೆರೆದ್ದ ಸಾರ್ವಜನಿಕ ಸಭೆಯಲ್ಲಿ 'ಗಾಂಧಿ ಯುಗ'ವನ್ನು ಕುರಿತು ಜನತೆಯಲ್ಲಿ ಹುರಿದುಂಬಿಸುವಂಥ ಭಾಷಣವನ್ನು ಮಾಡಿದರು. ಅಲ್ಲಿಂದ ಅವರು ಮೈಸೂರಿಗಾಗಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿಗೆ ಮದ್ರಾಸಿಗೆ ಹೋದರು.

ಮಡಿಕೇರಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಮ. ರಾ. ನೆರವಂಡ ಅಪ್ಪಚ್ಚನವರು ಈ ತಾ. 16 ನೇ ಬುಧವಾರ ಸಾಯಂಕಾಲ ಮೈಸೂರು ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶವವು ಅದೇ ರಾತ್ರಿ ಮಡಿಕೇರಿಗೆ ತರಲ್ಪಟ್ಟು, ಇಲ್ಲಿ ಮರುದಿನ ದಹನ ಮಾಡಲ್ಪಟ್ಟಿತು. ವ್ಯಾಪಾರದಲ್ಲಿ ಜಯಹೊಂದಿ ಬಹು ಅಲ್ಪ ಸಂಸ್ಥೆ ಕೊಡವರಲ್ಲಿ ಇವರೊಬ್ಬರಾಗಿದ್ದರು. ಉದಾರಭಾವದಿಂದ ವರ್ತಿಸುತ್ತಿದ್ದ ಇವರ ಅಕಾಲ ಮರಣದಿಂದ ಮಡಿಕೇರಿ ಮತ್ತು ಸುತ್ತುಮುತ್ತಲಿನ ಹಲವರಿಗೆ ದೊಡ್ಡ ನಷ್ಟ ಉಂಟಾಗಿದೆ.

ಮದ್ರಾಸಿನಲ್ಲಿ ರಾಷ್ಟ್ರನಾಯಕರು.

ರಾಷ್ಟ್ರಪತಿ ಶ್ರೀ ಬಾಬುರಾಜೇಂದ್ರ ಪ್ರಸಾದರು ಈ ತಾ. 14 ರಲ್ಲಿ ಮದ್ರಾಸಿಗೆ ಬಂದು ತಲಪಿದರು. ಮದ್ರಾಸು ಪಟ್ಟಣದ ನಿವಾಸಿಗಳು ಅವರಿಗೆ ಯಥೋಚಿತವಾದ ಸ್ವಾಗತವನ್ನಿತ್ತರು. ಅವರೊಡನೆ ಶ್ರೀ. ಭೂಲಾಭಾಯಿ ದೇಸಾಯಿ, ಜಮನಾಲಾಲ್ ಬಜಾಜ, ಜೆ. ಬಿ. ಕೃಪಾಲಿನಿ, ಖಲೀಕುಜ್ಜಮಾನ್ ... ಶ್ರೀಮತಿ ಸರೋಜಿನಿ ದೇವಿಯರು ಮೊದಲಾದವರು ಮದ್ರಾಸಿನಲ್ಲಿ ಜರುಗುವ ಅಖಿಲ ಭಾ. ರಾ. ಕ. ಸಭೆಗಾಗಿ ಬಂದಿರುವರು.

ಕೊಡಗು

ಅಕ್ಟೋಬರ್ ತಾ. ೧೧ನೇ ಶುಕ್ರವಾರ ೧೯೩೫.

ಪಾಶ್ಚಾತ್ಯ ನಾಗರೀಕತೆಯ ಪರಿಣಾಮ.

ಧರ್ಮ ನೀತಿಯ ಪ್ರಕಾರ 'ನ್ಯಾಯವು ಬಲವಾಗಿರತಕ್ಕದು. ಆದರೆ ಈಗಿನ ಪಾಶ್ಚಾತ್ಯ ನಾಗರೀಕತೆಯ ಮೇರೆ 'ಬಲವೇ ನ್ಯಾಯವಾಗಿದೆ' ಪಾಶ್ಚಾತ್ಯ ನವನಾಗರೀಕತೆಯ ತುಟ್ಟತುದಿಗೇರಿರುವ ಯೂರೋಪಿನ ಇಟಲಿಯು ಬಲಾಢ್ಯ ಜನಾಂಗ; ಆಧುನಿಕ ಯುದ್ಧ ಸಾಮಗ್ರಿಗಳಿಂದಲೂ, ಆಧುನಿಕ ಯುದ್ಧ ರೀತಿಗಳಲ್ಲಿಯೂ ಸುಸಜ್ಜಿತವಾಗಿರುವ ದೇಶ. ಆಫ್ರಿಕಾದಲ್ಲಿರುವ ಅಬಿಸೀನಿಯವು ಅಬಲ ದೇಶ. ಅಲ್ಲಿ ಆಧುನಿಕ ಯುದ್ಧ ಸಾಮಗ್ರಿಗಳು ಬಹು ಕಡಿಮೆ; ಹಳೇ ಯುದ್ಧ ವಿಧಾನಗಳಲ್ಲಿಯೇ ತಮವರಾಗಿರುವ ಜನ. ಸೀಮೆ ಆದರೆ ಪುರಾತನ ಕಾಲದಿಂದಲೇ ಸ್ವತಂತ್ರವಾಗಿದ್ದ ಜನಾಂಗ. ಇದೆಂತೂ, ಯುದ್ಧಕ್ಕೆ ಅವಕಾಶ ಕೊಡದೆ ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ನಿರ್ಮಾಣವಾದ ಜನಾಂಗಗಳ ಕೂಟಕ್ಕೆ ಸೇರಿದ ರಾಷ್ಟ್ರಗಳು. ಆದರೂ ಇಟಲಿಯು ಅಬಿಸೀನಿಯಾದ ಮೇಲೆ ಕಾಲಿಟ್ಟು ಯುದ್ಧವನ್ನು ಹೂಡಿದೆ. ಕಾರಣವಾದರೂ ಏನು? ಇಟಲಿಯ ನಿವಾಸಿಗಳಿಗೆ ತಮ್ಮ ದೇಶದಲ್ಲಿ ಜಾಗವು ಸಾಲದಂತೆ. ಅಲ್ಲದೆ 'ಕ್ರೂರ ಕಾಡು ಜನರಾದ ಅಬಿಸೀನಿಯರನ್ನು' ನಾಗರೀಕರನ್ನಾಗಿ ಮಾಡುವ ಪ್ರಬಲವಾದ ಆಸೆ ಇಟಲಿಯವರಿಗಿದೆಯಂತೆ!

ಬಲಹೀನರಾದ ದೇಶದವರ ಮೇಲೆ ಎಂಥಾ ಕಾರಣಗಳು! ಇಟಲಿಯವರಿಗೆ ಜಾಗ ಸಾಲದಿದ್ದರೆ ಅಬಿಸೀನಿಯದವರು ಸಾಯಬೇಕೇ? ಅಬಿಸೀನಿಯದವರು ನಾಗರೀಕರಾಗಿದ್ದರೆ ಇಟಲಿಯವರಿಗೆ ಬಂದ ಲಾಭವೇನು? ನಾಗರೀಕತೆಯ ಹೆಸರಿನಿಂದ ಇಟಲಿಯವರು ಮಾಡುತ್ತಿರುವುದಾದರೂ ಏನು? ತಮ್ಮ ಸ್ವಾರ್ಥಕ್ಕಾಗಿ, ನ್ಯಾಯವಾದ ಕಾರಣಗಳೇನೂ ಇಲ್ಲದೆ, ಶಾಂತಿ ಪ್ರಿಯರೂ, ದೇವಭಕ್ತರೂ ಆದ ಅಬಿಸೀನಿಯರನ್ನು ಬಾಂಬು, ವಿಷದ ಗಾಳಿ, 'ಟ್ಯಾಂಕ್', ಫಿರಂಗಿ ಮುಂತಾದವುಗಳಿಂದ ಕ್ರೂರವಾಗಿ ಸಂಹರಿಸುತ್ತಿರುವರು. ವಿಜ್ಞಾನ ಶಾಸ್ತ್ರದ ಸಂಶೋಧನೆಗಳನ್ನು ಮಾನವ ವರ್ಗದ ಕ್ಷೇಮಕ್ಕೆ ಉಪಯೋಗಿಸುತ್ತಿರುವರು. ಇದೀಗ ಪಾಶ್ಚಾತ್ಯ ನವನಾಗರೀಕತೆಯ ಪರಿಣಾಮ!

ಹೀಗೆ ಇಟಲಿಯವರು ಅಬಿಸೀನಿಯಾದಲ್ಲಿ ಅನ್ಯಾಯವಾಗಿ ರಕ್ತಪ್ರವಾಹವನ್ನು ಮಾಡುತ್ತಿರುವಾಗ್ಗೆ ಯುದ್ಧ ನಿಲ್ಲಿಸಲು ಸ್ಥಾಪಿತವಾದ ಜನಾಂಗಗಳ ಕೂಟವಾದರೂ ಮಾಡುತ್ತಿರುವದೇನು? ಇಟಲಿಯ ಸರ್ವಾಧಿಕಾರಿಯಾದ ಮುಸ್ಸೊಲಿನಿಯವರು ಜನಾಂಗಗಳ ಕೂಟದವರ ರಾಜಿ ತೀರ್ಮಾನಗಳನ್ನು ತಿರಸ್ಕರಿಸಿದರು, ರಾಜಿ ಸಂಧಾನಗಳಿಗೆ ಬೆನ್ನು ತಿರುಗಿಸಿದರು. ಆ ಸಂತರ ರಾಷ್ಟ್ರೀಯ ಧರ್ಮಕ್ಕೆ ದ್ರೋಹವನ್ನು ಮಾಡಿದರು. ಒಟ್ಟಿನಲ್ಲಿ ಜನಾಂಗಗಳ ಕೂಟವನ್ನು ತಿರಸ್ಕಾರ ಭಾವದಿಂದ ಕಂಡು ಅದರೊಂದಿಗೆ ಯುದ್ಧ ಹೂಡಲೂ ಕೂಡ ಸಿದ್ಧರಾಗಿರುವರು. ಇದಕ್ಕೆ ಅಂತರ ರಾಷ್ಟ್ರೀಯ ಸಂಘದ ಜವಾಬೇನು? ಇಟಲಿಯೊಂದಿಗೆ ಈ ಸಂಘಕ್ಕೆ ಸೇರಿದ ರಾಷ್ಟ್ರಗಳೆಲ್ಲಾ ಆರ್ಥಿಕ ವ್ಯವಹಾರ, ಮತ್ತು ಹಣ ಕಾಸಿನ ಸಂಬಂಧವನ್ನು ಕಡಿದು ಹಾಕುವ ತೀರ್ಮಾನ ಮಾಡಿ ಎವರು. ರಾಷ್ಟ್ರಗಳ ಕೂಟದ ತೀರ್ಮಾನವನ್ನು ಸಂಪೂರ್ಣ ಒಪ್ಪಿದ ಅಬಿಸೀನಿಯಾದಲ್ಲಿ ಸರಹದ್ದು ಕಾದಿರುವ ಪ್ರಬಲವಾಗಿ ನಡೆಯುತ್ತಿರುವಾಗ್ಗೆ ಈ ಕೂಟದವರು ಇನ್ನೂ ಆರ್ಥಿಕ 'ಸ್ಯಾಂಕ್ಷನ್'ಗಳನ್ನು ಉಪಯೋಗಿಸುವ ಆಲೋಚನೆಯಲ್ಲಿರುವರು. ಈ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತಂದುದರಿಂದ ಫಲವೇನು? ಜಾರಿಗೆ ತಂದರೂ ಅದರಿಂದ ಇಟಲಿಯನ್ನು ಬಗ್ಗಿಸಲು ಸಾಧ್ಯವೇ? ಸಾಧ್ಯವಿಲ್ಲವಾದರೆ ಇಟಲಿಯ ಮೇಲೆ ಯುದ್ಧವನ್ನು ಹೂಡುವರೇ? ಇವೆಲ್ಲಾ ಪ್ರಬಲವಾದ ಸಂಶಯಗಳು. ರಾಷ್ಟ್ರಗಳ ಕೂಟದ ಒಡಂಬಡಿಕೆಯನ್ನು ಕಾಪಾಡಲು ಯತ್ನಿಸುತ್ತಿರುವ ಬಲವಾದ ಜನಾಂಗಗಳಾದ ಬ್ರಿಟನ್, ಫ್ರಾನ್ಸ್ ಮುಂತಾದವುಗಳು ಈ ಮೊದಲೇ ಶೀಘ್ರವಾಗಿ ನಿರ್ಧರಿಸಿ ಇಟಲಿಗೆ ಆಕ್ಷೇಪಣವಾಗಿ ಯುದ್ಧಕ್ಕೆ ಮುಂಚೆ ತಡೆಯಲು ಸಾಧ್ಯವಾಗುತ್ತಿತ್ತಲ್ಲ. ಅಬಿಸೀನಿಯವು ಬಿಳೀ ಜನಾಂಗವಾಗಿದ್ದರೆ ಜನಾಂಗಗಳ ಕೂಟವು ಇಷ್ಟು ಮಂದವಾಗಿ ವರ್ತಿಸುತ್ತಿತ್ತೇ? ಇನ್ನೂ, ಈ ಯುದ್ಧವು ಯೂರೋಪಿಗೆ ಹರಡುವಂತೆ ಮಾಡಲು ಯೂರೋಪಿನ ಜನಾಂಗಗಳೆಲ್ಲವೂ ಯತ್ನಿಸುತ್ತಿವೆ. ಅಂತರ ಕಪ್ಪು ಜನಾಂಗವಾದ ಅಬಿಸೀನಿಯವು ನಾಶವಾದರೂ ಬಿಳೀ ಜನಾಂಗಗಳಿಗೆ ಅದೇನಂಥ ಚಿಂತೆ ಇಲ್ಲವೆಂದೇ?

ಜನಾಂಗಗಳ ಕೂಟದವರು ಇನ್ನು ಸಾವಕಾಶವಾಗಿ ವರ್ತಿಸಿದರೆ, ಇದು ಅಬಿಸೀನಿಯಾದವರ ಅನುಭವಿಸುತ್ತಿರುವ

ಇಟಲಿ-ಅಬಿಸೀನಿಯಾ ಯುದ್ಧ.

ವರ್ತಮಾನಗಳ ಶೋಧನೆ ಮತ್ತು ತಡೆ.

ಒಗಾಡನ್ ಪ್ರಾಂತ್ಯದಲ್ಲಿ ಧಾಳಿ.

ರಾಸ್ ಸಯೂಮರ ಪ್ರಚಂಡ ವಿಜಯ. ದಕ್ಷಿಣ ಪಾರ್ಶ್ವದಲ್ಲಿ ಇಟಲಿಯವರ ಸೋಲು.

ಅದೋವದಲ್ಲಿ 2500 ಮಂದಿ ಇಟಲಿಯವರು ಹತರಾದರು, 1000 ರೈಫಲುಗಳೂ ಮಷಿನ್ಗನ್ ಕೋಟೆಗಳೂ ಅಬಿಸೀನಿಯಾದವರ ಕೈವಶವಾದುವು.

ಜನಾಂಗಗಳ ಕೂಟದವರು ಅಬಿಸೀನಿಯಾಕ್ಕೆ ಆಯುಧ ನಿರ್ಬಂಧ ತೆಗೆದು ಹಾಕಿದರು.

ಇಟಲಿಯ ರಾಯಭಾರಿಗಳ ಬಂಧನೆ.

ಇಟಲಿಯವರು ಗೆಲೋಗುಬಿಗೆ ಮತ್ತು ಡಗಬೂರ್ ಪ್ರಾಂತಕ್ಕೆ ಬಾಂಬು ಎಸೆದರು.

ಇಟಲಿಯವರ ವಿಷಗಾಳಿ ಪ್ರಯೋಗದ ಅನರ್ಥ.

ಅಕ್ಟೋಬರು ತಾ 9

ವರ್ತಮಾನಗಳ ತಡೆ.

ಅಡ್ಡಿಸ್ ಅಬಾಬ—ಯುದ್ಧ ವಾರ್ತೆಗಳನ್ನು ಶೋಧಿಸಲು ಬೆಲ್ಜಿಯನ್ ಅಧಿಕಾರಿಗಳು ನೇಮಿಸಲ್ಪಟ್ಟಿರುವರು. ಎಲ್ಲಾ ವರ್ತಮಾನಗಳು ತಡೆಯಲ್ಪಡುತ್ತಿವೆ. ಮೂರು ಅಡಿಯ ಯುದ್ಧರಂಗದ ವರ್ತಮಾನವನ್ನು ಈ ದಿನ ಸರ್ಕಾರದವರು ಪ್ರಕಟಿಸಿರುವುದಿಲ್ಲ. ಇದು 'ನ್ಯೂಸ್ ಕ್ರಾನಿಕಲ್' ಸಂದಾತನಿಗೆ ಟೆಲಿಫೋನ್ ಕಳ್ಳಿಸಲ್ಪಟ್ಟಿರುವುದು.

ಅದೋವ ಮತ್ತು ಅದಿಗ್ರಾಟ್ ಮೇಲೆ ಹಿಡಿಯಲ್ಪಟ್ಟದ್ದು ನಿಜವಲ್ಲ. ಆದರೆ ಇವೆರಡು ಪಟ್ಟಣಗಳ ಸಮೀಪ ಅಗಾಧ ಕದನಗಳು ನಡೆಯುತ್ತಿವೆ. ಹರಾರಿನ ಮೇಲೆ ಧಾಳಿ ಮಾಡಿದ ವಾರ್ತೆ ಆಧಾರ ಪೂರ್ವಕವಾದದ್ದಲ್ಲ.

ಅಮೇರಿಕಾದ ದಾನ.

ಅನಾಮಧೇಯ ಅಮೇರಿಕನು ಇಥಿಯೋಪಿಯದ ಚಕ್ರವರ್ತಿಗೆ ಎರಡು ವಿಮಾನಗಳ ದಾನ ಮಾಡಿರುವರು. ನ್ಯೂಯಾರ್ಕಿನಿಂದ ಈ ವಿಮಾನಗಳನ್ನು ಇಥಿಯೋಪಿಯಕ್ಕೆ ಕಳುಹಿಸುವ ಖರ್ಚನ್ನೂ ಅವರೇ ಕೊಟ್ಟಿರುವರು.

ಅಡ್ಡಿಸ್ ಅಬಾಬ ಪಟ್ಟದಲ್ಲಿರುವ ರಾಯಭಾರಿಗಳ ವಸತಿಗಳಿಗೆ ಬಾಂಬುಗಳು ಹಾಕಲ್ಪಡುವವೆಂಬ ಸುದ್ದಿ ನಿಜವಲ್ಲ. ಅವುಗಳನ್ನು ಮಾತ್ರ ಬಿಡಲಾಗುವುದು.

ಸ್ವಲ್ಪ ಕಾಲದ ವಿಶ್ರಾಂತಿ.

ರೋಮ್—ಇಥಿಯೋಪಿಯದಲ್ಲಿ ಯುದ್ಧವು ಸ್ವಲ್ಪ ಸಮಾಧಾನವಾಗಿದೆ. ಇದರಿಂದ ಯುದ್ಧ ನಿಂತು ಹೋಯಿತೆಂದಲ್ಲ; ವಶಪಡಿಸಿದ ಸ್ಥಳಗಳನ್ನು ಭದ್ರಗೊಳಿಸಿದ ನಂತರ ಇಟಲಿಯ ಸೈನಿಕರು ಮುಂದೊತ್ತುವರು.

ಇಟಲಿಯವರ ಆಕ್ಷೇಪ.

ಜಿನೇವಾ—ಅಡ್ಡಿಸ್ ಅಬಾಬದಲ್ಲಿರುವ ಇಟಲಿಯ ರಾಯಭಾರಿಯು ಇಥಿಯೋಪಿಯದಿಂದ ಬಿಟ್ಟು ಹೋಗಬೇಕೆಂದು ಇಥಿಯೋಪಿಯಾದ ಸರ್ಕಾರದವರ ಮಾಡಿದ ಹುಕುಮನ್ನು ಆಕ್ಷೇಪಿಸಿ ಇಟಲಿಯ ಸರ್ಕಾರದವರು ಜನಾಂಗಗಳ ಕೂಟಕ್ಕೆ ಬರದಿರುವರು.

ಅಬಿಸೀನಿಯಾದ ಸೋಲೆಂದರೆ ಸತ್ಯದ ಸೋಲೇ.

ಅಡ್ಡಿಸ್ ಅಬಾಬ ನಗರದಲ್ಲಿ ನಾರ್ಟ್ರೇ ಜೀವನದಾಸ್ ಎಂಬ ಒಬ್ಬ ಮುಖ್ಯ ವ್ಯಾಪಾರಸ್ಥರು ಕಲ್ಕತ್ತೆಯಲ್ಲಿರುವ ಅವರ ಮಿತ್ರರೊಬ್ಬರಿಗೆ ಈ ಪ್ರಕಾರ ಪತ್ರ ಬರೆದಿರುವರು.—ಪತ್ರವು ಆಗಸ್ಟು ತಾ 2 ರಲ್ಲಿ ಬರೆದದ್ದಾಗಿತ್ತು. 'ಅಬಿಸೀನಿಯಾದ ಚಕ್ರವರ್ತಿಗಳು ಸ್ವಭಾವಿಕ ಚಿಂತಕರು. ಯಾವ ಸಮಯದಲ್ಲಾಗಲಿ ಅವರ ಭೇಟಿಯು ಎಲ್ಲರಿಗೂ ದೊರಕುವದು. ಭಾರತದಲ್ಲಿನ ಪೂರ್ವಕಾಲದ ಚಕ್ರವರ್ತಿಗಳಿಗೆ ಸಮಾನರಾಗಿರುವರಿದ್ದರೆ ಅವರು ಇವರೇ. ಪ್ರಜೆಗಳ ಸಂಕಷ್ಟಗಳನ್ನು ತಾವೇ ಆಲಿಸಿ ಅದಕ್ಕೆ ತಕ್ಕ ಪರಿಹಾರಗಳನ್ನು ಮಾಡುವರು. 1932 ರಲ್ಲಿ ಅಡ್ಡಿಸ್ ಅಬಾಬ ಮುನ್ಸಿಪಾಲಿಟಿಯ ಕೆಲವು ನಿಯಮಗಳು ಹಿಂದೂ ವರ್ತಕರಿಗೆ ಬಾಧಕವಾಗಿರಲು ಹಿಂದೂಗಳು ಸ್ವತಃ ಚಕ್ರವರ್ತಿಗಳಲ್ಲಿ ಅರಿಕೆ ಮಾಡಿದಾಗ್ಗೆ ಒಡನೆ ಆ ನಿಯಮಗಳನ್ನು ರದ್ದು ಪಡಿಸಿದರು. ಇವರು ಸತ್ಯವ್ರತರಾಗಿರುವದರಿಂದ ಜಯವು ಖಂಡಿತ ಇವರಿಗೆ ಲಭಿಸಬೇಕಾಗಿದೆ. ಇವರ ಸೋಲು ಎಂದರೆ ಸತ್ಯದ ಸೋಲೇ ಎಂದು ತಿಳಿಯಬೇಕಾಗುವದು. ನನ್ನ ಪಟ್ಟಿಗೆ ಇವರು ಅಪಜಯ ಹೊಂದಿದಲ್ಲಿ, ದೇವರಲ್ಲಿನ ನನ್ನ ವಿಶ್ವಾಸವೇ ಕೂಸಿಗೊಳ್ಳುವದು. ಯಾಕೆಂದರೆ, ಸತ್ಯಕ್ಕೆ ಸೋಲುಂಟಾದ ಮೇಲೆ ದೇವರಲ್ಲಿ ವಿಶ್ವಾಸವೆಂತು? ಇಲ್ಲದೆ ಇವರ ಸೋಲೆಂದರೆ ಕಪ್ಪು ಜನಾಂಗಗಳೆಂದು ಎಣಿಸಲ್ಪಟ್ಟಿರುವ ಇಂಡಿಯಾ, ಚೈನಾ, ಜಪಾನ್ ಮೊದಲಾದವರ ಸೋಲೆಂದೇ ಹೇಳಬೇಕಾಗುವದು.'

ಆಧುನಿಕ ರೀತಿಯ ಯುದ್ಧದ ಅನರ್ಥ ಪರಿಣಾಮಗಳನ್ನು ಮನಗಂಡ ಪ್ರಪಂಚದ ಬೇರೆ ಜನಾಂಗಗಳು ಅನುಭವಿಸಬೇಕಾಗುವುದು, ಅಲ್ಲದೆ ಜನಾಂಗಗಳ ಕೂಟವನ್ನು ಸಂಬದ, ತಪ್ಪಿತಸ್ಥರಲ್ಲದ ಅಬಿಸೀನಿಯಾದವರನ್ನು ಕಾಪಾಡದೆ ಕೈಬಿಟ್ಟ ಪಾಪವು ರಾಷ್ಟ್ರಗಳ ಸಂಘದ ತಲೆಯ ಮೇಲೆ ಬೀಳುವುದು. ಆದುದರಿಂದ ಪರಿಸ್ಥಿತಿಯು ಕೈ ಮೀರಿ ಹೋಗುವುದಕ್ಕೆ ಮುಂಚಿತವಾಗಿ ರಾಷ್ಟ್ರಗಳ ಕೂಟವು ಇಟಲಿಯನ್ನು ತಡೆಯುವುದು ಅತ್ಯವಶ್ಯವಾಗಿದೆ.

ಅಕ್ಟೋಬರು ತಾ 10.

ಇಟಲಿಯ ಪ್ರಕಟನೆ.

ಉತ್ತರದಲ್ಲಿ ಕಾದಾಟ ಇಲ್ಲ. ಉತ್ತರದ ಗಡಿಯಲ್ಲಿನ ಮುಖ್ಯವಾದ ಸ್ಥಳಗಳನ್ನೆಲ್ಲ ಇಟಲಿಯವರು ಸ್ವಾಧೀನ ಪಡಿಸಿಕೊಂಡಿರುವರು. ಯುದ್ಧಾರಂಭವಾಗಿ ಇಷ್ಟರವರೆಗೆ 2500 ಇಥಿಯೋಪಿಯನರು ಮಡಿದರೆಂತಲೂ, 600 ಮಂದಿ ಸಾಹುಕಾರರು ಪಟ್ಟಿರುವರೆಂದೂ ಇಟಲಿಯವರ ಪಕ್ಷದಲ್ಲಿ ಐದೇ ಇಬ್ಬರು ವ್ಯಕ್ತರಾಗಿರುವರೆಂದೂ, 100 ಮಂದಿ ಘಾಯಗೊಂಡಿರುವರೆಂದೂ ಇಟಲಿಯ ಪ್ರಕಟನೆ.

ಕೌಂಟ್ ವಿನ್ಸಿಯವರ ಆಶೆ.

ಅಡ್ಡಿಸ್ ಅಬಾಬದಲ್ಲಿ ಇಟಲಿಯ ರಾಯಭಾರಿಯಾದ ಕೌಂಟ್ ವಿನ್ಸಿಯವರು ತಾವು ಹೊರಡುವ ಮೊದಲು ಚಕ್ರವರ್ತಿಯವರನ್ನೂ, ಅಬಿಸೀನಿಯಾದ ಪರರಾಷ್ಟ್ರ ಮಂತ್ರಿಯವರನ್ನೂ ಭೇಟಿಯಾಗಲು ಅನುಮತಿ ಕೊಡಬೇಕೆಂದು ವಿನಂತಿ ಮಾಡಿರುವರು.

ಅದೋವದಲ್ಲಿ ಇಟಲಿಯ ಧ್ವಜ.

ಜನರಲ್ ಡಿ ಬೊನೋ ಎಂಬವರ ನಾಯಕತ್ವದಲ್ಲಿ ಸ್ವಾಧೀನವಾದ ಅದೋವ ಪಟ್ಟಣವನ್ನು ಅವರು ವಶಪಡಿಸಿ ಅಲ್ಲಿ ಇಟಲಿಯ ಧ್ವಜವನ್ನು ಸ್ವಹಸ್ತದಿಂದ ಏರಿಸಿದರು. ಅಲ್ಲಿನ ನಿವಾಸಿಗಳಿಗೆ 'ಇಟಲಿಯು ಪಕ್ಷವಾದವರಿಗಾಗಿ ಆಕ್ರಮಿಸಿರುವದಿಲ್ಲ' ಎಂದು ಅಭಯವನ್ನಿತ್ತರು.

ರಾಷ್ಟ್ರಗಳ ಸಂಘದಲ್ಲಿ ಇಟಲಿ—ಅಬಿಸೀನಿಯ.

ರಾಷ್ಟ್ರಗಳ ಕೂಟದಲ್ಲಿ ಇಟಲಿ ಪ್ರತಿನಿಧಿಯವರು ಅಬಿಸೀನಿಯಾದವರನ್ನು ನಿಂದಿಸಿ ಭಾಷಣ ಮಾಡಿದರು. ಅಬಿಸೀನಿಯಾ ಪ್ರತಿನಿಧಿಯು ಇಟಲಿಯ ಆಕ್ರಮಣವನ್ನು ಖಂಡಿಸಿ ಭಾಷಣ ಮಾಡಿದರು. ಕಟ್ಟಕಡೆಗೆ ರಾಷ್ಟ್ರಗಳ ಸಂಘದವರು ರಾಷ್ಟ್ರ ಸಂಘದ 16 ನೇ ಪ್ರಕರಣದ ನಿಯಮಕ್ಕನುಸಾರವಾಗಿ ಇಟಲಿ ಮೇಲೆ ಆರ್ಥಿಕ ಬಹಿಷ್ಕಾರವನ್ನು ಹಾಗೆ ವಿಧಿಸಬೇಕೆಂದು ನಿರ್ಣಯಿಸಲು ಒಂದು ಕಮಿಟಿಯನ್ನೇರ್ಪಡಿಸಿರುವರು. ಇದಕ್ಕೆ ಇಟಲಿಯು ವಿರೋಧಿಸಿತು. ಆಸ್ಟ್ರಿಯಾ, ಹಂಗೇರಿ ಪ್ರತಿನಿಧಿಗಳು ಯಾವ ವಿಧವೂ ಮತ ಕೊಡಲಿಲ್ಲ.

ಅಕ್ಟೋಬರು ತಾ 11.

ಇಥಿಯೋಪಿಯನರ ಜಯ.

ರಾತ್ರೆಯೆಲ್ಲ ಭಯಂಕರವಾದ ಮುಷ್ಟಿ ಯುದ್ಧ.

ಒಗಾಡನ್ ಪ್ರಾಂತ್ಯದಲ್ಲಿರುವ 'ವಾಲ್ ವಾಲ್' ಮತ್ತು ಗೋರಾ ಹೈ ಎಂಬ ಸ್ಥಳಗಳು ಇಥಿಯೋಪಿಯನರ ಕೈವಶವಾಯಿತೆಂದು ತಿಳಿಯುತ್ತದೆ. ಇತ್ತಲಾಗಿ ಉತ್ತರ ಭಾಗದಲ್ಲಿ ರಾಸ್ ಸಯೂಮ್ ಎಂಬವರ ನಾಯಕತ್ವದಲ್ಲಿ ಅಬಿಸೀನಿಯಾ ಸೈನಿಕರು ಅದೋವ ಪಟ್ಟಣವನ್ನು ಮರಳಿ ಗ್ರಹಿಸಿ ಮುತ್ತಿ ಅಲ್ಲಿದ್ದ 2500 ಮಂದಿಯನ್ನ ಸಂಹಾರ ಮಾಡಿ 1000 ರೈಫಲುಗಳನ್ನೂ ಅನೇಕ ಮೆಷಿನ್ಗನ್ ಮತ್ತು ಅಪಾರವಾದ ಕೋವಿಗಳನ್ನು ವಶಪಡಿಸಿಕೊಂಡು ಇನ್ನು ಮುಂದುವರಿದು ಇಟಲಿಯವರ ಸೈನ್ಯಗಳನ್ನು ಎದುರಿಸುತ್ತಲಿರುವರು.

ಎರಿತ್ರಿಯಾದಲ್ಲಿ ಅಶಾಂತಿ.

ಇಟಲಿಯ ವಸಾಹತಾಗಿರುವ ಎರಿತ್ರಿಯಾದಲ್ಲಿರುವ ಅಬಿಸೀನಿಯಾ ಜಾತಿಯವರು ಬಹಳ ಅಸಮಾಧಾನಗೊಂಡಿರುವ

ಅಧಿಕಾರ ಮುಖಂಡರುಗಳನ್ನು ತೊಲಗಿಸುವುದಕ್ಕೆ ನಾವು ಸಮಾಜವನ್ನು ಭದ್ರಪಡಿಸದೆ ಹೋದರೆ ಸಮಾಜವು ನಷ್ಟವಾಗಿ ಹೋಗುವಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದುದರಿಂದ ನಮ್ಮ ಶಕ್ತಿ ಸರ್ವಸ್ವಗಳನ್ನೆಲ್ಲ ವಿನಿಯೋಗಿಸೋಣ. ಅವುಗಳನ್ನು ಸಮಾಜಸೇವೆಯ ಕಾರ್ಯದಲ್ಲಿ ನಿರಂತರ ತೊಡಗಿ ಆ ಸೇವೆಯಲ್ಲಿ ನಿತ್ಯ ನಿರಂತರವಾಗಿ ಆನಂದಪಡುತ್ತಿರುವುದೆ ನಿಜವಾದ ಜೀವನ ರಹಸ್ಯವೆನಿಸುವುದು.'

ಈ ಪ್ರಕಾರವಾಗಿ ಹಲವು ಮಾತುಗಳನ್ನು ಹೇಳಿ ಅವರು ತಾವು ಜೈಲುಮನೆಯಲ್ಲಿರುವಾಗ ಬರೆದು ಇತ್ತೀಚೆಗೆ ಪ್ರಕಟಿಸಿದ 'ಅಂತರಾತ್ಮನಿಗೆ ಎಂಬ ಪುಸ್ತಕದ' [illegible] ಭಾಗಗಳನ್ನು ಓದಿ ಹೇಳಿದರು. ಅವುಗಳಲ್ಲಿ ಈ ವಿಷಯ [illegible] ಗೂ ಇನ್ನಿತರ ತಾತ್ವಿಕ ವಿಷಯಗಳೂ ಚೆನ್ನಾಗಿ ಪ್ರತಿಪಾದಿತವಾಗಿವೆ.

ಸಹಕಾರ ತತ್ವ.

ಲಂಡನಿನ ಡಾ. ಫೇಯವರ ಭಾಷಣ.

ಲಂಡನಿನ 'ಹೊರೇಸ್ ಪ್ಲಂಕೆಟ್ ಫೌಂಡೇಷನ್'ನ ಅಧ್ಯಕ್ಷರಾದ ಡಾ. ಸಿ. ಆರ್. ಫೇಯವರು ಈ ತಾ. 12ನೇ ಶನಿವಾರ ಸಾಯಂಕಾಲ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ 'ಪ್ರಪಂಚದ ವ್ಯವಸಾಯಗಾರರ ಸಂಸ್ಥೆ, ಧಾನ್ಯ ಉಪಯೋಗಿಸುವವರ ಸಹಕಾರ'ವನ್ನು ಕುರಿತು ಎಲ್ಲರಿಗೂ ಮನದಟ್ಟಾಗುವಂತೆ ಭಾಷಣ ಮಾಡಿದರು. [illegible] ಜೆ. ಯಸ್. [illegible] ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಡಾ. ಫೇಯವರ ಭಾಷಣದ ಸಾರಾಂಶ ಈ ಕೆಳಗೆ ಕೊಡಲಾಗಿದೆ.

'ಜೀವನ ವಿಷಯವನ್ನೇ ಆಗಲಿ ನಿಮ್ಮ ಮಾತೃ ಭಾಷೆಯ ಮೂಲಕ ತಿಳಿಯಬೇಕಾದ್ದನ್ನು ಚೆನ್ನಾಗಿ ಇಂಗ್ಲಿಷ್ ಭಾಷೆಯ ಮೂಲಕ ತಿಳಿಯಬೇಕಾಗಿರುವುದು [illegible] ನಿಮ್ಮ ಭಾಷೆಯಲ್ಲಿ ನನಗೆ ಮಾತಾಡಲು ಸಾಧ್ಯವಿಲ್ಲದ್ದಕ್ಕೆ ವ್ಯಸನಪಡುತ್ತೇನೆ. ಅವಶ್ಯ ವಿದ್ಯಾರ್ಥಿ ಜನರು ತಿಳಿಯಬೇಕಾದ ಕೆಲಸ ಮಾತುಗಳ ಪೈಕಿ 'ಸಹಕಾರ'ವೆನ್ನುವುದು. ಸಹಕಾರ ಸಂಘ [illegible] ಎಲ್ಲರ ಪ್ರಯೋಜನಕ್ಕಾಗಿ [illegible] ಪೂರ್ವಕಾಲದಲ್ಲಿ ಸರಳ ಜೀವನವಿತ್ತು. ಹಣಕ್ಕೆ ಬೆಲೆಯ [illegible] ಈಗ ಹಣವೇ ಯಜಮಾನ. [illegible] ಸುಖ ಸಂತೋಷವಿಲ್ಲ. [illegible] ಸಹಕಾರ ಸಂಘದ ಉದ್ದೇಶವಲ್ಲ. ಹಣವನ್ನು [illegible] ಮಾಡಿಕೊಳ್ಳಬೇಕು.

[illegible] ಸಂಘವೇ ಆಗಲಿ, ಕೊಟ್ಟ ಸಾಲವನ್ನು ಯಾವ ಉದ್ದೇಶಕ್ಕೆ ಉಪಯೋಗಿಸುವರು ನೋಡಿಕೊಳ್ಳಬೇಕು. [illegible] ಸಾಲ [illegible] ಮಾಡುವವರಿಗೆ ಉತ್ತೇಜನ ಕೊಡಬೇಕು [illegible] ನಿಜವಾದ [illegible] ಡಾ. ಅಮೇರಿಕಾ [illegible] ಇಲ್ಲಿ ಲಂಡನಿನ [illegible] ನಿಮ್ಮನ್ನೆಂದು ಭಾವಿಸಿ, ಅದರಿಂದಲೇ [illegible] ಮಾಡಿಕೊಳ್ಳಬೇಕು. ಸ್ತ್ರೀಯರುಗಳಲ್ಲಿ [illegible] ಸಂಘಗಳನ್ನು ನ್ಯಾಯವಾದ [illegible] ರದವರು ಇದಕ್ಕೆ [illegible] ಬೇಕು. ಸಹಕಾರ ಸಂಘದ [illegible] ರು ಇದರಲ್ಲಿ ಹೆಚ್ಚಿನ ಭಾಗ ವಹಿಸಬೇಕು.

ಇದರಲ್ಲಿ ಮೂರು ವಿಷಯಗಳು ಮುಖ್ಯ--1ನೇದು, [illegible] ಸಹಕಾರ [illegible] ಗೆ ಸಹಾಯ ಮಾಡಬೇಕು. 2ನೇದು, [illegible] ರ ಸಂಘ. [illegible] ನ್ಯಾಯವಾದ [illegible] ಸಹಕಾರ [illegible] ನಗದು ಕ್ರಯಕ್ಕೆ [illegible] ಕೊಳ್ಳಬೇಕು 3ನೇದು, ಅವು ದೇಶದಲ್ಲಿ ಬೆಳೆಯುವ [illegible] ಕ್ಕಾಗಿ [illegible] ಸಹಕಾರ ಪಡೆಯುವುದು. [illegible] ಮಾದ [illegible] ಆರ್ಥಿಕ ಸ್ವಾತಂತ್ರ್ಯವಿಲ್ಲದೆ [illegible] ಸ್ವಾತಂತ್ರ್ಯದೊರೆಯಲಾರದು. ಆರ್ಥಿಕ ಸ್ವಾತಂತ್ರ್ಯ [illegible] ನಿಮ್ಮ ಕೈಯಲ್ಲೇ ಇದೆ. [illegible] ಸ್ವಾತಂತ್ರ್ಯದಿಂದ ನೀವು [illegible] ಸಹಕಾರದ [illegible] ನೀವೇ ಸಾಹಾಯ್ಯ [illegible] ಯವರಿಂದೇನೂ [illegible] ಸತ್ಯವನ್ನು ಹೇಳುತ್ತೇನೆ.'

ಗಾಂಧಿ ಜಯಂತಿ.

ಸೋಮವಾರಪೇಟೆ, ವಿರಾಜಪೇಟೆ.

ಹಿಂದೂ ದೇಶದ ಎಲ್ಲಾ ಭಾಗಗಳಲ್ಲಿ ಆಚರಿಸಲ್ಪಟ್ಟಂತೆಯೇ ಕೊಡಗಿನ ಕಲವು ಭಾಗಗಳಲ್ಲಿಯೂ ಮಹಾತ್ಮ ಗಾಂಧಿಯವರ 67 ನೇ ಜನ್ಮದಿನೋತ್ಸವವು ಆಚರಿಸಲ್ಪಟ್ಟಿತು. ಈ ಸಮ್ಬಂಧ ಕೊಡಗು ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ಈ ತಾ 6 ನೇ ಆದಿತ್ಯವಾರ ಸೋಮವಾರಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆಯು ನೆರೆಯಿತು. ಮ. ರಾ. [illegible] ಯ್ಯನವರು ಅಧ್ಯಕ್ಷರಾಗಿದ್ದರು. ಮ. ರಾ. ಪಿ. ಐ. ಬೆಳ್ಯಪ್ಪನವರು—ಮಹಾತ್ಮರ ಜೀವನ ಚರಿತ್ರೆಯನ್ನೂ, ತ್ಯಾಗವನ್ನೂ ಕುರಿತು ಭಾಷಣ ಮಾಡಿದರು. ನಂತರ ಎಲ್ಲರೂ ಎದ್ದು ನಿಂತುಕೊಂಡು ಮೌನವಾಗಿ ಪ್ರಾರ್ಥನೆ ಮಾಡಿ, ಈ ಕೆಳಗಿನ ಠರಾವನ್ನು ಸರ್ವಸಮ್ಮತದಿಂದ ಪಾಸು ಮಾಡಿದರು.

'ಭಾರತ ಭೂಮಿಯ ಸ್ವಾತಂತ್ರ್ಯವನ್ನು, ಉದ್ಧಾರವನ್ನು ಸಾಧಿಸಲಿಕ್ಕಾಗಿ ಮಹಾತ್ಮ ಗಾಂಧಿಯವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದು ಈ ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ.'

ಮಡಿಕೇರಿ ಸಭೆ.

ಗಾಂಧಿ ಜಯಂತ್ಯುತ್ಸವವನ್ನು ಮಡಿಕೇರಿಯವರು ಈ ತಾ 7 ನೇ ಸೋಮವಾರ ನಡೆಸಿದರು. ಆ ದಿನ ಮಧ್ಯಾಹ್ನದಲ್ಲಿ ಸೇರಿದ್ದ ಪಬ್ಲಿಕ್ ಮೀಟಿಂಗಿಗೆ ಮ. ರಾ. [illegible] ಅಧ್ಯಕ್ಷರಾಗಿದ್ದರು. ಸುಮಾರು 100 ಜನರು ಸೇರಿದ್ದರು. ಅಧ್ಯಕ್ಷರ ಸೂಚನೆ ಮೇರೆಗೆ ಮ. ರಾ. [illegible] ಪ್ಪನವರು ಗಾಂಧಿಜಿಯವರ ಗುಣಕಥನ ಮಹತ್ವ, [illegible] ಮಾಡಿರುವ ಅದ್ವಿತೀಯ ತ್ಯಾಗ ಬುದ್ಧಿಯ [illegible] ವಿವರಿಸಿ, ಅವರು ಜನ್ಮವೆತ್ತಿದ ಉದ್ದೇಶವನ್ನು ಕುರಿತು ಒಂದು ಗಂಟೆ ಕಾಲ ಉಪನ್ಯಾಸ ಮಾಡಿದರು. ಶ್ರೀ ಕೊಳ್ಳಿಮಾಡ ಕರುಂಬಯ್ಯನವರು—ಮಹಾತ್ಮರು ಭಾರತ ಭೂಮಿಗೆ ಮಾಡಿರುವ ವಿಶೇಷ ಸೇವೆಯನ್ನು ಕುರಿತು ಕೆಲವು ಮಾತುಗಳನ್ನಾಡಿದ ತರುವಾಯ ಮೇಲೆ ಕಾಣಿಸಿದ ಠರಾವನ್ನೇ ಇಲ್ಲಿಯೂ ಪಾಸು ಮಾಡಿದಂಥ ಗೊತ್ತುವಳಿಯನ್ನೇ ಮಂಜೂರು ಮಾಡಲಾಯಿತು. ಸ್ವಲ್ಪ ಹೊತ್ತು ಎಲ್ಲರೂ ಮೌನವಾಗಿ ಪ್ರಾರ್ಥನೆ ಮಾಡಿದ ಮೇಲೆ ಸಭೆಯು ಬರ್ಖಾಸ್ತಾಯಿತು.

ಶೃಂಗಾರವಾದ ಪುಸ್ತಕ! ಮುದ್ದಾದ ಮುದ್ರಣ!!

ಸ್ತ್ರೀ ಪುರುಷರು ಪ್ರೀತಿಸುವ 32 ಫೋಟೋಗಳು ಕೂಡಿದ

ಮದನ ರತಿ ಕಾಮಶಾಸ್ತ್ರ

ಎಂಬ ಶೃಂಗಾರ ರಹಸ್ಯಗಳು ರೂ. 1–0–0.

ಈ ಪುಸ್ತಕವು ಫ್ರೆಂಚ್, ಪರ್ಷಿಯನ್ ಭಾಷೆಗಳಲ್ಲಿ ಗುಪ್ತವಾಗಿತ್ತು. ಅದನ್ನು ಕನ್ನಡ ಭಾಷೆಯಲ್ಲಿ ಲೇಡಿ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ಪ್ರೇಕ್ಷ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಗೆಯೇ ಸುಖವಿಲಾಸಗಳು, ಸ್ತ್ರೀ ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಇಂಗ್ಲಿಷ್, ಫ್ರೆಂಚ್, ಅಮೇರಿಕನ್, [illegible] ಜಾಪಾನ್, ಮಲಯ, ಸಯಾಂ, [illegible] ಬರ್ಮ, ಇಂಡಿಯನ್ ಮೊದಲಾದ ದೇಶದ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ದೇಹ ಸೌಂದರ್ಯದ ಮರ್ಮಗಳು ಇನ್ನೂ ಅನೇಕ ಪ್ರೀತಿಯು ಮುತ್ತಿಡುವ ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಇದು ವರೆಗೂ ಕನ್ನಡ ಭಾಷೆಯಲ್ಲಿ ಇಷ್ಟು ಬಹಿರಂಗವಾಗಿ ಪ್ರಕಟಿಸಿಲ್ಲ. ಓದಿ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸು ಬಾರದು. ಕ್ರಯ 32 ಫೋಟೋಗಳ ಸಹಿತ ಇರುವ ಪುಸ್ತಕ ರೂ 1–0–0 ವಿ. ಪಿ. ಪೋಸ್ಟು ಖರ್ಚು 5 ಆಣೆ ಪ್ರತ್ಯೇಕ ಮುಂಗಡ ರೂ 1 ಕಳುಹಿಸುವವರಿಗೆ ಪೋಸ್ಟು ಖರ್ಚು ಇಲ್ಲದೆ (ಫ್ರೀ) ಕಳುಹಿಸಲಾಗುವುದು.

ದೇವಕರ್ ಅಂಡ್ ಕಂಪೆನಿ,

52—4] ನಂ. [illegible] ಬೀದಿ, ಜಿ. ಟಿ. ಮದ್ರಾಸು.

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

[illegible] ಹಿಂದುಸ್ಥಾನದ ಸಾವಿರಾರು ಜನರಿಂದ [illegible] ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು [illegible] ಮಾರ್ಕೆಟಿನಲ್ಲಿ ದಾರಾಳವಾಗಿ ಖರ್ಚಾಗುವ

ರಕ್ತವೃದ್ಧಿಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ದ್ರವ್ಯಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಾದ [illegible] ದೌರ್ಬಲ್ಯ [illegible] ಕ್ಷಯ [illegible] ನಿವಾರಿಸುವುದು. [illegible] ದೊಡ್ಡವರಿಗೆ 1 ಟೀ ಸ್ಪೂನ್ [illegible] ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗೆ ರೂ 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ ಪೋಸ್ಟ್ [illegible] (ಬೆಳಗಾಂವ)

ಕೊಡಗಿನ ಏಜಂಟರು:—ಕೆ. ಶಿವಪ್ಪ [illegible], ಮಡಿಕೇರಿ

ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ

52—7 ಎ. ಎನ್. ಸುಬ್ಬಯ್ಯ, ಮರ್ಚೆಂಟು, ಗೋಣಿಕೊಪ್ಪಲು



"ಅಹ! ನಿನಗೆ ಎಂಥ ಜಾಣನಾದ ಅಗಸನು ಬಟ್ಟೆ ಒಗೆಯುತ್ತಿರುವನು! ನಿನ್ನ ವಸ್ತ್ರಗಳೆಲ್ಲವು ಮನಮೆಚ್ಚುವಷ್ಟು ಶುಭ್ರವಾಗಿವೆ."

"ಅಗಸನೇ? ಏನು, ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಮಾರ್ಕಿನ ಸಾಬೂನಿನಿಂದ ಒಗೆದೆನು."

ಹೆಚ್ಚು ಕಡಿಮೆ, ವಸ್ತ್ರ ಬಿಳಿಚು, ಶ್ರಮ ಅತೀ ಕಡಿಮೆ!

501 Soap

ಟಾಟಾ [illegible] ಮಳಿಗೆ, [illegible] ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ಟಾಟಾ ಆಯಿಲ್ ಮಿಲ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ ಮತ್ತು [illegible]

52—24 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಚ್. [illegible], ಸಂತೆಪೇಟೆ, ಮೈಸೂರು.

ವಿವಿಧ ವಾರ್ತಾವಳಿ.

ಪ್ರಪಂಚದ ಶಾಂತಿ ಸ್ಥಾಪಕರು

ಮಹಾತ್ಮ ಗಾಂಧಿಯವರಿಗೆ ಅವರ ಶಾಂತಿ ಸ್ಥಾಪನೆಯ ಕಾರ್ಯಕ್ಕಾಗಿ ನೋಬೆಲ್ ಪಾರಿತೋಷಕವನ್ನು ಕೊಡಿಸಬೇಕೆಂದು ವಿಶ್ವವಿಖ್ಯಾತರಾದ ಫ್ರಾನ್ಸಿನ ಶ್ರೀ ರೋಮನ್ ರೋಲಾಂಡ್, ರಷ್ಯದ ಶ್ರೀ. ಮಾಕ್ಸಿಂಗಾರ್ಕಿ ಮತ್ತು ಬ್ರಿಟನಿನ ಸರ್ ನಾರ್ಮನ್ ಏಂಜಲ್ ಮತ್ತು ಶ್ರೀ ಲಾನ್ಸ್‌ಬರಿ ಇವರು ಪ್ರಯತ್ನ ಪಡುತ್ತಿರುವರೆಂದು ವದಂತಿ

—೦೦೦—

ಇಂಡಿಯಾ ಸೆಕ್ರೆಟರಿಗಳ ಮೇಲೆ ದಾವೆ.

1932ರಲ್ಲಿ ಕಾಂಗ್ರೆಸ್ ಖಾದಿ ಭಂಡಾರವನ್ನು ಅಕ್ರಮ ಕೂಟವೆಂದು ಸಾರಿ, ಅದನ್ನು ವಶಪಡಿಸಿಕೊಂಡ ಕಾಲದಲ್ಲಿ ಹಲವು ವಸ್ತುಗಳನ್ನು ಸರಿಯಾಗಿ ನೋಡಿಕೊಳ್ಳದೆ ನಷ್ಟ ಮಾಡಿರುವರೆಂದು ಜಲಗಾವ್ ಕಾಂಗ್ರೆಸ್ ಭಂಡಾರದವರು ಭಾರತ ಕಾರ್ಯದರ್ಶಿಗಳ ಮೇಲೆ 1000 ರೂ. ಗಳ ನಷ್ಟಕ್ಕೆ ವ್ಯವಹಾರ ಹೂಡಿದ್ದಾರೆ.

—೦೦೦—

ಹೊನ್ನಿನ ಹೊಳೆ.

ಒಂದೇ ವಾರದಲ್ಲಿ 15 ಲಕ್ಷ!

ಕಳೆದ ವಾರ ಬೊಂಬಾಯಿಯಿಂದ ಯೂರೋಪು ಮತ್ತು ಅಮೇರಿಕಾ ದೇಶಗಳಿಗೆ ರೂ. 15,28,449 ಮೌಲ್ಯದ ಚಿನ್ನವು ರಫ್ತಾಯಿತು. ಇಂಗ್ಲೆಂಡು ಚಿನ್ನದ ಪರಿಮಾಣವನ್ನು ಬಿಡಲಾಯಿಸಿದಂದಿನಿಂದ ಇಂದಿನ ವರೆಗೆ 2,47,51,38,644 ರೂ. ಗಳ ಮೌಲ್ಯದ ಚಿನ್ನವು ಪರದೇಶಗಳಿಗೆ ಹರಿದು ಹೋಯಿತು. ಕೊಡಗಿನ ರಾಜಾದಾಯವು 13 ಲಕ್ಷವೆಂದು ತೆಗೆದುಕೊಂಡರೆ 2 ಸಾವಿರ ವರ್ಷಗಳ ಉತ್ಪತ್ತಿಯಷ್ಟು ಈ ಅಲ್ಪ ಅವಧಿಯಲ್ಲಿ ಚಿನ್ನದ ರೂಪದಲ್ಲಿ ಭಾರತದಿಂದ ಹರಿದು ಹೋಯಿತೆನ್ನಬಹುದು.

—೦೦೦—

'ಬಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬಂತೆ

ಬಡ ಹರಿಜನರ ಮೇಲೆ ಇಲ್ಲಸಲ್ಲದ ಆರೋಪಣೆ.

ಬರೋಡದಲ್ಲಿ ದನಗಳಿಗೆ ಕಾಯಿಲೆಯು ಜೋರಾಗಿ ಹಬ್ಬಿರುವದರಿಂದ ಅಲ್ಲಿಯ ಸುವರ್ಣ ಹಿಂದುಗಳು 'ಹರಿಜನರು ಚರ್ಮವನ್ನು ಹೊಂದಲಿಕ್ಕಾಗಿ ಏನೋ ಮಾಟ ಮಾಡಿ ದನಗಳಿಗೆ ಕಾಯಿಲೆ ಹಿಡಿಸಿರುವರು, ಇದೆಲ್ಲ ಹರಿಜನರೇ ಕಾರಣ' ಎಂದು ಹರಿಜನರನೇಕರನ್ನು ಕಂಡ ಕಂಡಲ್ಲಿ ಹೊಡೆಯುತ್ತಾರಂತೆ' ಹರಿಜನರು ಉತ್ಸಾಹಗೊಂಡು ಮುಂದುವರಿಯುತ್ತಿರುವದನ್ನು ಕಂಡು ಕಣ್ಣು ಕೆಂಪೇರಿಸಿಕೊಂಡು ಇಲ್ಲದ ಸಲ್ಲದ ನೆವಗಳನ್ನು ಹುಡುಕುತ್ತ ಅವರನ್ನು ದಂಡಿಸುತ್ತಿರುವರು.

—೦೦೦—

ಗ್ರೀಸಿನ ರಾಜಕೀಯ ಬದಲಾವಣೆ,

ಪ್ರಜಾ ಸತ್ತೆ ನಾಶವಾಗಿದೆ, ರಾಜಸತ್ತೆ ಬೇಕಾಗಿದೆ.

ಗ್ರೀಸಿನಲ್ಲಿ ಮಹಾ ಅಶಾಂತಿಯ ಪರಿಣಾಮವಾಗಿ ಅಲ್ಲಿಯ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿದೆ. ಅದರ ಬದಲು ನೇಷನಲಿಸ್ಟ ಎನಿಸಿದ್ದಿಯವರು ಈಗ ಸೇರಿ ಪ್ರಜಾಸತ್ತೆಯನ್ನು ತೆಗೆದು ಹಾಕಬೇಕೆಂದೂ, ರಾಜಸತ್ತೆಯನ್ನು ಸ್ಥಾಪಿಸುವಂತೆಯೂ ಬರುವ ನವಂಬರು 3ಕ್ಕೆ ಒಂದು ಸಾರ್ವತ್ರಿಕ ಜನಮತವನ್ನು ತೆಗೆಯುವಂತೆಯೂ, ರಾಜಸತ್ತೆಯು ಸ್ಥಾಪಿಸಲ್ಪಡುವ ವರೆಗೆ ಜನರಲ್ ಕಾಂಡಿಲಿಸ್ ಎಂಬವರು ರಿಜೆಂಟ್ ರಾಗಿ ಅಧಿಕಾರ ವಹಿಸತಕ್ಕದೆಂತಲೂ ನಿರ್ಣಯಿಸಿರುವರು.

—೦೦೦—

ಕುರುಡಿಯು ಕಳ್ಳ ಅಪರಾಧಿತನಿಗೆ ಸೆರೆ ವಿಧಿಸಿದಳು.

ಆಗಸ್ಟ್ ತಾ. 6ನೇ ರಾತ್ರಿ 10 ಗಂಟೆಗೆ ತಿನ್ನವೆಲ್ಲಿಯ ಗೇಮಾ ಅರ್ವ್ಯಾಳ್ ಎಂಬ ಕುರುಡಿಯು ತನ್ನ ಕಣ್ಣ ಮನೆಯಲ್ಲಿ ಕುಳಿತಿದ್ದಾಗ ಅವಳ ಬಾಜಿಯ ಒಳ ಒಂದು ಕೈಯು ಬಂತು. ಅವಳು ಒಡನೆ ಬೊಬ್ಬಿಟ್ಟಳು. ಕೈಯು ಅವಳನ್ನು ಹಿಡಿಯಿತು. ಅಷ್ಟರಲ್ಲಿ ಅವಳು ಆ ಕೈಯ ಎರಡು ಬೆರಳುಗಳನ್ನು ಕಚ್ಚಿ ಗಾಯಗೊಳಿಸಿದಳು. ಆ ಕೈಯು ಕಂದಸ್ವಾಮಿ ಪಿಳ್ಳೆ ಎಂಬವನದಾಗಿತ್ತು. ಪಿಳ್ಳೆಯು ಮುದುಕಿಯ ಎದೆಗಿರಿಯನ್ನು ಕತ್ತರಿಸಿ, ಅದರಲ್ಲಿದ್ದ ಆಭರಣವನ್ನು ಒಯ್ದನು. ಪೋಲೀಸರು ಪತ್ತೆ ನಡಿಸಿ ಪಿಳ್ಳೆಯನ್ನು ಹಿಡಿದು ವಿಚಾರಿಸಿದರು. ಅವನ ವಶದಲ್ಲಿದ್ದ ಭಾಗಗಳು ಸಿಕ್ಕಿತು. ಆದರೆ ತಾನು ತಪ್ಪಿತಸ್ಥನಲ್ಲವೆಂದನು. ಅವನ ಎರಡು ಬೆರಳುಗಳನ್ನು ತಾನು ಕಚ್ಚಿರುವೆನೆಂದು ಮುದುಕಿಯು ಹೇಳಿದ ಆಧಾರದ ಮೇಲೆ ಅವನ ಪಿಳ್ಳೆಯ ಬೆರಳುಗಳನ್ನು ಪರೀಕ್ಷಿಸಲಾಗಿ ಅವುಗಳು ಮನುಷ್ಯನ ಹಲ್ಲುಗಳಿಂದ ಕಚ್ಚಲ್ಪಟ್ಟಿರುವುದು ನಿಜವೆಂದು ತಿಳಿದು ಬಂತು. ಪಿಳ್ಳೆಗೆ 7 ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

—೦೦೦—

2,00,000 ರೂಪಾಯಿಗಳ ನಷ್ಟ

ಬೊಂಬಾಯಿ ಡಾಕ್ಕಿನಲ್ಲಿ ಬೆಂಕಿಯೆದ್ದು ಸುಮಾರು 2,00,000 ರೂಪಾಯಿಗಳಷ್ಟು ಕ್ರಯ ಬಾಳುವ ಹತ್ತಿಯು ಸುಟ್ಟು ಹೋಯಿತು. ಫಯರ್ ಬ್ರಿಗೇಡುಗಳು ಕ್ಷಣ ಕಾಲಕ್ಕೆ ಹೋಗಿ ಸಾಹಸಪಟ್ಟರೂ ಹೆಚ್ಚಿನ ನಷ್ಟವನ್ನು ತಡೆಯಲಾಗಲಿಲ್ಲ. ದಾಸ್ತಾನು ಇಟ್ಟಿದ್ದ 2700 ಬೇಲು ಹತ್ತಿಯನ್ನು ಬೆಂಕಿಯಿಂದ ತಪ್ಪಿಸಲಾಯಿತು. ಇದೂ ಸುಟ್ಟಿದ್ದರೆ ಒಟ್ಟು 5 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು.

—೦೦೦—

ಚೈನಾ ಉಪದೇಶಕರ ಅದ್ಭುತ ಕಾರ್ಯ.

ಪ್ರಾರ್ಥನೆಯಿಂದ ರೋಗಚಿಕಿತ್ಸೆ!

ಡಾ. ಜಾನ್‌ಸಂಗ್ ಎಂಬ ಓರ್ವ ಚೈನಾ ಉಪದೇಶಕರು ರೋಗಚಿಕಿತ್ಸೆಯ ಕೆಲವು ಅದ್ಭುತ ಕಾರ್ಯಗಳನ್ನು ತೋರಿಸಿರುವರು. ಸಿಂಗಾಪುರದಲ್ಲಿ ಕಳೆದ ಸೆಪ್ಟಂಬರ್ ತಾ. 28 ರಲ್ಲಿ ಇವರು ಸುಮಾರು 70 ಮಂದಿ ರೋಗಗ್ರಸ್ತರಾದ ವೃದ್ಧರು, ಸ್ತ್ರೀಯರು, ಬಾಲಕರು ಮುಂತಾದವರಿಗೆ ಪುಣ್ಯತೀರ್ಥದಿಂದ ಅಭಿಷೇಕ ಮಾಡಿ ಪ್ರಾರ್ಥನೆಯನ್ನು ಪ್ರಾರಂಭಿಸಿದರು. ಪ್ರಾರ್ಥನೆಯು ಮುಗಿದಾಗ್ಯೂ ಅನೇಕರ ವ್ಯಾಧಿಗಳು ಸಂಪೂರ್ಣ ಗುಣವಾಗಿದ್ದವು. ಅನೇಕ ಕುರುಡರಿಗೆ ದೃಷ್ಟಿಯನ್ನೂ, ಮೂಕರಿಗೆ ಮಾತನ್ನಾಡುವ ಶಕ್ತಿಯನ್ನೂ ಮತ್ತು ಇನ್ನನೇಕರಿಗೆ ಹೃದ್ರೋಗ, ಕ್ಷಯ ಮುಂತಾದ ರೋಗದಿಂದ ಗುಣವನ್ನೂ ಇವರು ದೊರಕಿಸಿರುವರು. ಇವರ ಪ್ರಾರ್ಥನೆಯ ಪ್ರಭಾವವು ಅವರ್ಣನೀಯವಾದುದು.

—೦೦೦—

ಭಾರತಕ್ಕೆ ಉತ್ತಮವಾದ ಪೆಟ್ರೋಲ್.

ಭಾರತೀಯ ಹೊಸ ಎಣ್ಣೆ ವ್ಯಾಪಾರ ಸಂಸ್ಥೆಯ ವಿಷಯವಾಗಿ ಸಂತೋಷಕರವಾದ ವಿಶೇಷ ಸಂಗತಿಯನ್ನು ಕೇಳುತ್ತಿದ್ದೇವೆ. ಆ ಕಂಪೆನಿಯು ಅಮೇರಿಕ ಮತ್ತು ಯೂರೋಪಿನ ಉತ್ತಮ ಎಣ್ಣೆ ವ್ಯಾಪಾರಿಗಳೊಂದಿಗೆ ಭಾರತಕ್ಕೆ ಏಕಸಮವಾಗಿ ಪೆಟ್ರೋಲ್, ಸೀಮೆಎಣ್ಣೆ ಇತ್ಯಾದಿ ಎಣ್ಣೆಗಳು ಸರಬರಾಯಿ ಆಗುವಂತೆ ಒಪ್ಪಂದ ಮಾಡಿಕೊಂಡಿದೆ. ಯೂರೋಪಿನಲ್ಲಿ ಉತ್ತಮ ಮತ್ತು ಸಾದಾ ಪೆಟ್ರೋಲನ್ನು ಮಾರುತ್ತಾರೆ. ಮೋಟಾರು ಮಾಲೀಕರು ತಮ್ಮ ಇಷ್ಟ ಬಂದದ್ದನ್ನು ಕೊಳ್ಳಬಹುದು. ಆದರೆ ಇಂದಿನ ವರೆಗೂ ಉತ್ತಮ ದರ್ಜೆಯ ಪೆಟ್ರೋಲ್ ಭಾರತಕ್ಕೆ ಬಂದಿರಾಗಿಯೇ ಇಲ್ಲ. ಆದರೆ ಈ ಹೊಸ ಭಾರತೀಯ ಕಂಪೆನಿಯು 'ಎಕ್ಸ್‌ಟ್ರಾ ಲೈಟ್' ಪೆಟ್ರೋಲೆಂಬ ಉತ್ತಮ ದರ್ಜೆಯ ಪೆಟ್ರೋಲನ್ನು ಆಮದು ಮಾಡಿಕೊಳ್ಳುತ್ತದೆ. ಆದುದರಿಂದ ಬಹುದಿನಗಳಿಂದ ಮೋಟಾರು ಮಾಲೀಕರು ಬಯಸುತ್ತಿದ್ದ ಆಸೆಯು ಈಡೇರುವ ಕಾಲ ಬರುತ್ತಿದೆ.

—೦೦೦—

ಇಸಾಯಿ ಧರ್ಮ ಪ್ರಚಾರಕರಿಗೆ ಮಹಾತ್ಮರ ಸೂಚನೆಗಳು.

ಸೇಲಂ ಜಿಲ್ಲೆಯಲ್ಲಿ ಇತ್ತೀಚೆಗೆ ಕ್ರೈಸ್ತ ಧರ್ಮ ಪ್ರಚಾರಕರು ಹಳ್ಳಿಗಳಲ್ಲಿ ಮಾಡಿದ ಮತಪ್ರಚಾರಕ್ಕಾಗಿ ಆಂದೋಲನವೆದ್ದಾಗ್ಯೆ ಕೆಲವು ಪಾದ್ರಿಗಳು ತಮ್ಮ ಕಾರ್ಯದ ಕೆಲವು ಸಮಸ್ಯೆಗಳನ್ನು ಗಾಂಧೀಜೀಯವರ ಮುಂದಿಡಲು ಮಹಾತ್ಮರು ಈ ಪ್ರಕಾರ ಅವರಿಗೆ ಉತ್ತರ ಕೊಟ್ಟಿರುವರು:—

'ಹಿಂದೂ ಧರ್ಮವು ಅತೀ ಪ್ರಾಚೀನವಾದದ್ದಲ್ಲದೆ ಚಿರಸ್ಥಾಯಿಯೂದದ್ದೂ ಆಗಿಯತ್ತೆ. ಹಿಂದೂ ಧರ್ಮದಲ್ಲಿನ ಸತ್ಯಾಂಶಗಳು ಸರ್ವಕಾಲಕ್ಕೂ ಯೋಗ್ಯವಿರುವವು. ಈ ವಿಚಾರದಲ್ಲಿ ಧರ್ಮ ರೀತಿಯಲ್ಲಿ ಕ್ರೈಸ್ತ ಪಾದ್ರಿಗಳು ವರ್ತಿಸಬೇಕು. ಅಜ್ಞಾನಿಗಳಾಗಿರುವ ಹಳ್ಳಿಗರಲ್ಲಿ ತಪ್ಪು ಅಭಿಪ್ರಾಯವನ್ನು ಉಂಟುಮಾಡದೆಯೂ, ಮಾನವ ಧರ್ಮವನ್ನೂ, ಸತ್ಯಪ್ರಚಾರ ಕಾರ್ಯಗಳನ್ನೂ ಮಾಡುವದು ಉತ್ತಮ. ಒಂದು ಧರ್ಮವನ್ನು ಬಿಡುವುದೂ ಮತ್ತೊಂದನ್ನು ಸ್ವೀಕರಿಸುವದೂ ವೈಯಕ್ತಿಕವಾದ್ದರಿಂದ ಮತಪರಿವರ್ತನೆಯನ್ನು ಮಾಡಬೇಕೆಂಬ ಈ ಪರ್ಯಟನೆ ಸರಿಯಲ್ಲ. ಸತ್ಯವೂ ಎಲ್ಲದರಲ್ಲೂ ಇರುವದರಿಂದ ಸತ್ಯ ಪ್ರಚಾರವನ್ನು ಮಾಡಿದರೆ ಮಾತ್ರ ಧ್ಯೇಯಗಳನ್ನು ಪೂರ್ಣಗೊಳಿಸಿದಂತಾಗುವುದು. ಆದ್ದರಿಂದ ಈ ರೀತಿಯಾದ ಮತ ಬದಲಾವಣೆಯ ಕಾರ್ಯಗಳು ಕ್ರೈಸ್ತ ಧರ್ಮಕ್ಕೆ ಒಪ್ಪುವದಲ್ಲ.

'ಜೀವನದ ರಹಸ್ಯ.'

ಶ್ರೀ. ದಿವಾಕರರ ಉಪನ್ಯಾಸ.

ಈ ತಾ. 12ರ ಸಾಯಂಕಾಲ ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ಧಾರವಾಡದ ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ್ ಎಂ. ಎ., ಎಲ್‌ಎಲ್. ಬಿ. ಯವರು ಸೆಂಟ್ರಲ್ ಸ್ಕೂಲ್ ಹಾಲ್‌ನಲ್ಲಿ 'ಜೀವನದ ರಹಸ್ಯ' ಎಂಬ ಸ್ವಾರಸ್ಯವಾದ ಭಾಷಣ ಮಾಡಿದರು. ಶ್ರೀ. ಬಿದ್ದಮನೆ ಬ[illegible]ಯವರು ಅಧ್ಯಕ್ಷರಾಗಿದ್ದರು. ಭಾಷಣದ ಸಾರಾಂಶ ಕೆಳಗೆ ಕೊಡಲಾಗಿದೆ.

ಪ್ರಾಸ್ತಾವಿಕವಾದ ನಾಲ್ಕು ಮಾತುಗಳನ್ನು ಹೇಳಿದ ಬಳಿಕ ಅವರು ಅಂದದ್ದೇನೆಂದರೆ—'ವೇದಾಂತ ಇಲ್ಲವೆ ತತ್ವಜ್ಞಾನವೆಂದರೆ ಮುಪ್ಪಿನವರು, ಮುದುಕರು, ಪೆನ್ಶನ್ ಪಡೆದವರು, ಕೈಲಾಗದವರು ಮಾತ್ರ ಅಭ್ಯಾಸಿಸತಕ್ಕದ್ದು ಎಂದೆನ್ನುವ ರೂಢಿಯು ಹಲವು ವರ್ಷಗಳಿಂದ ಇತ್ತು. ಆದರೆ ಸದ್ಯದಿಂದ ಸ್ವಾಮಿ ವಿವೇಕಾನಂದರು, ರಾಮತೀರ್ಥರು, ಅರವಿಂದಘೋಷರು ಮುಂತಾದವರು ಈಗ ವೇದಾಂತವನ್ನು ವ್ಯವಹಾರದಲ್ಲಿ ತರತಕ್ಕದ್ದು ಎಂದು ಕಂಠೋಕ್ತವಾಗಿ ಹೇಳುತ್ತ ಒಂದು ಮೂದಲಿನ ರೂಢಿಯನ್ನು ಅಲ್ಲಗಳೆದಿದ್ದಾರೆ. ನಿಜವಾದ ವೇದಾಂತವು ನಮ್ಮ ಜೀವನದಿಂದಲೆ ಹುಟ್ಟಿ, ಆ ಜೀವನವನ್ನು ಹೆಚ್ಚು ತೇಜಸ್ವಿಯನ್ನಾಗಿ ಮಾಡತಕ್ಕದ್ದು. ಜೀವನಕ್ಕೆ ಸಂಬಂಧಪಡದ, ಕೇವಲ ತಾರ್ಕಿಕ ಇಲ್ಲವೆ ಕಾಲ್ಪನಿಕ ವೇದಾಂತದಿಂದ ನಮಗೇನು? ಅದು ಶುಷ್ಕ ವೇದಾಂತವೆನಬಹುದು. ಅದರಿಂದ ಏನೂ ಪ್ರಯೋಜನವಿಲ್ಲ. ನಮಗೆ ಬೇಕಾದುದು ಜೀವನದ ವೇದಾಂತವು. ಅದು ನಮಗೆ ಗೊತ್ತಾದರೆ ನಮ್ಮ ಜೀವನವು ವೇದಾಂತಿಕವಾಗುವದು. ಅದು ಹೆಚ್ಚು ಆನಂದಮಯವೂ, ಸುಂದರವೂ, ತ್ಯಾಗಪೂರ್ಣವೂ, ತೇಜಸ್ವಿಯೂ, ಬಲಪೂರ್ಣವೂ ಆಗುವದು.'

ಜೀವನದ ವೇದಾಂತವೆಂಬುದು ಎಲ್ಲರಿಗೂ ಬೇಕಾದ ವಿಷಯವು. ಎಲ್ಲರೂ ಒಂದಿಲ್ಲೊಂದು ಬಗೆಯಿಂದ ಜೀವನದ ರಹಸ್ಯವನ್ನು ಹುಡುಕುತ್ತಲೇ ಇರುವರು. ಪ್ರತಿಯೊಬ್ಬನೂ ಬೇರೆ ಬೇರೆ ವಸ್ತುಗಳನ್ನು ಹುಡುಕುತ್ತಿರುವಂತೆ ಕಂಡರೂ ನಿಜವಾಗಿ ಎಲ್ಲರೂ ಒಂದು ಬಗೆಯ ಆನಂದವನ್ನೂ, ಸಮಾಧಾನವನ್ನೂ, ಸ್ಥಿರ ಬುದ್ಧಿಯನ್ನೂ, ಸಮತ್ವವನ್ನು ಶೋಧಿಸುತ್ತಿರುವರು. ಹಾಗೆ ಶೋಧಿಸುವವರಲ್ಲಿ ನಾನೊಬ್ಬನು. ಹೊರಗಿನ ವಿತ್ತ ಯಾವ ವಸ್ತುಗಳು ಎಷ್ಟು ಬೇಕಾದಷ್ಟು ದೊರೆತರೂ ಅವು ಮನುಷ್ಯನಿಗೆ ನಿಜವಾದ ಸಮಾಧಾನವನ್ನು ಕೊಡಲಾರವು. ಆ ಸಮಾಧಾನವನ್ನು ನಾನು ಯಾವಾಗಲೂ ತ್ಯಾಗವೃತ್ತಿ, ಸೇವಾಬುದ್ಧಿ, ನಾಡುನುಡಿಗಳಿಗಾಗಿ ದುಡಿಯುತ್ತಿರುವದು, ಇವುಗಳಲ್ಲಿಯೇ ಶೋಧಿಸುತ್ತಿರುವೆನು ಹಾಗೂ ಅಲ್ಪ ಮಟ್ಟಿಗಾದರೂ ಪಡೆಯುತ್ತಿರುವೆನು.

'ಈ ಪ್ರಕಾರವಾಗಿ ಜೀವನ ರಹಸ್ಯವನ್ನು ಹುಡುಕುತ್ತಿರುವಾಗ ಹಲವು ವೇದಾಂತ ಗ್ರಂಥಗಳನ್ನು ಓದುವ ಹಾಗೂ ಬರೆಯುವ ವ್ಯವಸಾಯವನ್ನಾದರೂ ನಾನು ಮಾಡುತ್ತ ಬಂದಿರುವೆನು. ಮುಕ್ತಿ ಇಲ್ಲವೆ ಮೋಕ್ಷ, ಇದೇ ವೇದಾಂತದ ಮುಖ್ಯ ಉದ್ದೇಶವು ಎಂದು ಹೇಳುವದುಂಟು. ಆ ಮುಕ್ತಿ ಎಂಥಾದ್ದು, ಏನು ಎಂದು ವಿಚಾರಿಸುತ್ತ ಹೋದಂತೆ ಅದರ ಅರ್ಥವು ವಿಶಾಲವಾಗುತ್ತ ಹಾಗೂ ಸ್ಪಷ್ಟವಾಗುತ್ತ ಹೋಗುವದು. ನನ್ನ ಮಟ್ಟಿಗೆ, ನನ್ನ ಒಬ್ಬನ ಜೀವವು ಪೂರ್ಣ ಸುಖಮಯವಾಗಿ ಜನನ ಮರಣ ರಹಿತವಾಯಿತೆಂದರೆ ನಾನು ಮುಕ್ತನು, ಎಂದು ಎನಿಸಿಕೊಳ್ಳಬಹುದು. ಅಂಥ ಮುಕ್ತಿ ನನಗೆ ಬೇಕೇ? ವಿಚಾರಿಸಿ ನೋಡಲಾಗಿ, ಅಂಥ ಮುಕ್ತಿ ಅಂಥ ವೈಯಕ್ತಿಕ ಮುಕ್ತಿ ಬೇಡ, ಎಂದು ನನ್ನ ಮನಸು ನನಗೆ ಹೇಳುವದು. ಯಾಕೆಂದರೆ ಇದೊಂದು ದೊಡ್ಡ ಸ್ವಾರ್ಥವೇ ಆಯಿತು! ಈ ಬಗೆಯ ವೈಯಕ್ತಿಕ ಸುಖದ ಕಲ್ಪನೆಗಳು ಅಳಿದುಹೋಗತಕ್ಕ ಕಾಲವಿದು. ಆದಿಭೌತಿಕ ವಿಷಯಗಳಲ್ಲಿ ಕೂಡ ವೈಯಕ್ತಿಕ ವಿಚಾರಗಳಿಗೆ ಎಡೆಕೊಡಕೂಡದು ಎಂದು ಈಗ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸುತ್ತಿರುವಾಗ ಆಧ್ಯಾತ್ಮಿಕ ವಿಷಯಗಳಲ್ಲಿ ವೈಯಕ್ತಿಕ ಜೀವದ ಮುಕ್ತಿಗೆ ಅಷ್ಟೊಂದು ಮಹತ್ವವನ್ನು ಕೊಡುವದು ಯೋಗ್ಯವಾಗಲಾರದು. ಈ ವಿಷಯದಲ್ಲಿ ಬುದ್ಧ ಭಗವಾನನು ಆಡಿದ ಮಾತೇ ನಮ್ಮೆಲ್ಲರ ಆದರ್ಶವಾಗಿರಬೇಕು. ಅದೇನೆಂದರೆ, 'ಈಗ ನನಗೆ ಸಂಬೋಧಿಯಾಗಿದೆ. ನಾನು ಈಗ ಮುಕ್ತನು. ಆದರೆ ನನಗೆ ಇಂಥ ಜನನ ಮರಣ ರಹಿತ ಮುಕ್ತಿ ಬೇಡ. ನನಗೆ ಬಹು ಜನ್ಮಾಂತರಗಳು ಬಂದರೂ ಚಿಂತೆ ಇಲ್ಲ. ಜಗತ್ತಿನಲ್ಲಿಯ ಪ್ರತಿಯೊಂದು ಜೀವದ ದುಃಖವು ಪೂರ್ಣ ನಷ್ಟವಾಗುವ ತನಕ ನನಗೆ ಮುಕ್ತಿಯ ಅಪೇಕ್ಷೆ ಇಲ್ಲ.'

'ಆಹಾ ಎಂತಹ ಉದಾತ್ತ ಕಲ್ಪನೆ ಇದು! ಇದೇ ಬಗೆಯ ಉದಾತ್ತ ಭಾವನೆಯಿಂದ ಪ್ರೇರಿತರಾಗಿ ಮಹಾತ್ಮ ಗಾಂಧಿಯವರು ಈಗ ಕಾರ್ಯವನ್ನು ಮಾಡುತ್ತಿರುವರು. ಅವರು ಜೀವನ ರಹಸ್ಯವನ್ನು ತಿಳಿದವರಾಗಿದ್ದಾರೆ. ಅವರ ಮನಸಿನಲ್ಲಿ ಒಂದು ಬಗೆಯ ದಿವ್ಯ ಶಾಂತಿಯು ವಾಸವಿದೆ. ಆದರೆ ಅವರು ಹಗಲಿರುಳು ದರಿದ್ರ ನಾರಾಯಣರ ಸೇವೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಬುದ್ಧ ಭಗವಾನನ ಮಾರ್ಗವೇ ಅವರಲ್ಲಿದೆ ಎಂದು ಹೇಳಬಹುದು. ವ್ಯಕ್ತಿ ಮತ್ತು ಸಮಾಜ ಇವು ಬೇರೆಯಲ್ಲ. ಅವು ನಿಜವಾಗಿ ಒಂದೇ ಶರೀರದ ಭಾಗಗಳಿದ್ದಂತೆ; ಅವು ಬೇರೆ ಇರುವವೆಂದು ತಿಳಿಯುವದರಿಂದಲೇ ನಮ್ಮ ಘಾತವಾಗಿದೆ. ನಮ್ಮ ದೇಶದಲ್ಲಿ ಅನೇಕಾನೇಕ ಸನ್ಯಾಸಿಗಳ ತಂಡಗಳು ತಿರುಗಾಡುತ್ತಲಿವೆ. ಅನೇಕ ಧಾರ್ಮಿಕ ಹಾಗೂ ವೇದಾಂತಿಕ ಪುಸ್ತಕಗಳೂ ನಮ್ಮಲ್ಲಿರುವವು. ಆದರೆ ಇಡೀ ಸಮಾಜದ ಸೇವೆಯೇ ನಮ್ಮ ಆದರ್ಶವು, ಎಂಬ ಗುರಿಯನ್ನಿಟ್ಟು ಕಾರ್ಯಮಾಡುವಂಥವರು, ಮಹಾತ್ಮ ಗಾಂಧಿಯಂಥವರು ಬಹಳ ಕಡಿಮೆ.'

'ಈಗ ತಾವು ಈ ವಿಚಾರಗಳನ್ನು ಹೆಚ್ಚಾಗಿ ಮಾಡುವದು ಅವಶ್ಯ. ಸಾಮಾಜಿಕ ದೋಷಗಳನ್ನು ಕಂಡು ಹಿಡಿದು,

Reg. No. M. 1550

18-10-1935

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸ್. ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಸಂಧ್ಯಂಡ ಬಿ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೧೮ ನೇ ಶುಕ್ರವಾರ. [ಸಂಚಿಕೆ ೨೨

By Appointment
To H. E. The Governor of Madras.

CUPS AND MEDALS.



Telephone: 3145

Telegrams: 'PRECIOUS.'



V. SUBRAMANIA IYER.

Jeweller, & Diamond Merchant,

52-48 2 & 3 Kuppumuthu Street Tiruvateswarpet. MADRAS. POST BOX 423 TRIPLICANE.

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office,—UDIPI (S. Kanara)

It will pay you if you call at our offices at:
MERCARA or VIRARAJENDRAPET

(1) Fixed Deposits are now accepted up to 5%
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques
(2) Production of pass book is unnecessary at each withdrawal
(3) Accounts transferred from one place to another free of any charges.
(4) Cumulative Deposits—a speciality

Advances granted on approved securities on easy terms.

All kinds of banking business transacted. For further particulars please apply to any of our offices.

Udipi. 29-7-1935. 52-49 M. Srinivasa Prabhu, Manager,

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

[illegible]

(1) [illegible]
(2) [illegible]
(3) [illegible]
(4) [illegible]

[illegible] 265 [illegible]
[illegible] 70 [illegible]
[illegible] ರೂ. 16 [illegible]
[illegible] ರೂ. 33 [illegible]

[illegible] ಕಂಪೆನಿಗಳಿಗಿಂತ ಅಧಿಕ

[illegible] 25% } { [illegible] 20%

[illegible]

[illegible]

[illegible]

52-20

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	36,650— 0—0
ಜಮೂಬಂದ ಠೇವಣಾತಿ	...	2,51 667—13—8
ವಸೂಲಾದ ಕ್ಷೇಮನಿಧಿ	—	1 02,525—10—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 4—8—0ರ ವರೆಗೆ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್
ಪಂದ್ಯಂಡ ಐ. ಬೆಳ್ಳಪ್ಪನವರು	ರಾ ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—10—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಹಲರಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕಾಯಿಲೆಯನ್ನು ಸಹ ಬೇಗ ಗುಣಪಡಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಜ್ವರ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್—
ಕೆ. ಟಿ. ಡೋಂಗರೆ ಕಂಪನಿ,
(52—34) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE

WANTED

Influential and active persons who can guarantee business as Organisers of the Company in the areas noted below. Agents known in the locality and must have considerable influence in the line will be preferred.

BANGALORE	MYSORE
COORG	HASSAN
KADUR	SHIMOGA

Also applications for agencies are solicited from important places where the Company is not well represented. The Company is very well known for prompt settlement, Premiums economical management, sound investments and of financial strength. In the past 38 years it has built up an excellent position of business for great popularity. It will be easy to organise and secure business and earn a very decent and steady income.

For further particulars please apply to—

Branch Secretary,
EMPIRE OF INDIA LIFE ASSURANCE CO., LTD.
152/3, Commercial Street, Bangalore.

52—49

ಪತ್ರವ್ಯವಹಾರ.

(ಈ ಕಾಲಮಿನ ಅಭಿಪ್ರಾಯಗಳಿಗೆ ಪತ್ರಿಕಾ ... ರರು ... ಅಲ್ಲ.)

... ಸೆಕ್ಕೆ ಅಕ್ಕಿ ಎಲ್ಲಿಂದ?

... ಮಂಗಳೂರಿನಿಂದ ... 20—9—35ರ ಪತ್ರಿಕೆಯಲ್ಲಿ ... ಪ್ರಕಟಿಸಬೇಕಾಗಿ ... ಮತ್ತು ... ತರ ಶಾಲೆಗಳಲ್ಲಿ ... ಕೊಡಗು ...

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪಿತವಾದದ್ದು) (ಹೆಡ್ ಆಫೀಸು— ಬೊಂಬಾಯಿ)

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	...	ರೂ.	7,62,42,761
ವಾರ್ಷಿಕ ಉತ್ಪತ್ತಿ	....	ರೂ.	3 14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ.	54,20 38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	..	ರೂ.	16 29,88 814
ಫಂಡ್ಸ್ ಹೆಚ್ಚಿದ್ದು	....	ರೂ.	15 53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ನೋಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನ್
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲ್ಹಾಬಾದು	ಢಕ್ಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬತ್ತೂರು	ಗುಂಟೂರು	ಜಲ್ಪೇಗುರಿ	ಜಬ್ಬಲ್ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು. 52—40

ಯಂ. ವಿ. ಸುಬ್ರಹ್ಮಣ್ಯ ನಾಯುಡು (ಬ್ರಾಂಚ್ ಸೆಕ್ರೆಟರಿ)

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ಕಾಟ್ರಿಜುಗಳು, ಹೆಟೆಯೊಡಲು ಮತ್ತು ವಿಶೇಷ ಶಿಕಾರಿಯಲ್ಲಿ ಅವಶ್ಯಕವಾದ ಎಲ್ಲಾ ಸಲಕರಣೆಗಳ ವಿಶೇಷ ಅಂಗಡಿ ಛೇಷ್ಟತರು.



ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329—331, Abdul Rehman Street,

27—7

IF NOT Delivered please return to "KODAGU" OFFICE, MERCARA.

ವಾರ್ಷಿಕ ಚಂದಾ

ಸಂಪುಟ ೧೫]

'ವಿಶಾಲದೃ...

...ಶೈವ ವಿದ್ಯಾನಿಧಿ.

...ಶೈವ ವಿದ್ಯಾನಿಧಿ ಸಂಘದ ಸೈನಿಕ... ಗಾಡಲ್ಲಿ ವಿನಂತಿ.—

...ರ 'ಕೊಡಗು' ಪತ್ರಿಕೆಯಲ್ಲಿ ಕೋಂ... ನಾದನಂತೆ ಹೋಟಲಿನಲ್ಲಿ ನಡೆದ ವಿದ್ಯಾ ಸಂಘದ ಕಾರ್ಯ ಕಲಾಪಗಳನ್ನು ... ಬರೆದು ಮಾಡಿಕೊಂಡಿರುವುದರ ಕಾರಣ ... ಂಗತಿ ಕೂಡಲೆ ತಿಳಿಸಬೇಕಾಗಿದೆ. ಈ ... ಹಿಂದೆ ಗುರುಗಳದೆ ಬಗ್ಗೆ ... ಮಾಡಿದವರು ... ನಲ್ಲಿ ಕೊಡ... ಮಿಗಳ ಅಧ್ಯಕ್ಷ ... ಇತರ ಮುಖಂಡ ... ರುವವರಿದರು; ನಾವು ಹಿಂದಿನ ... ಕೃಷ್ಣಯ್ಯನವರು ಹೇಳಿದಾಗ ಒ... ಸುರು 'ನಿಮ್ಮನ್ನು ಯಾವರೂ ತಡೆವಿ...ಲ್ಲ, ...ವರಿದರೆ ಯಾರೂ ತಡೆಯುವುದಿಲ್ಲ' ವೆಂದು ... ಹೇಳಿದ ಮಾತು ವೀರಶೈವ ಮತದವರಿಗೆ ನಾ... ಡಾದದ್ದು ಎಂದು ಹೇಳಿದರೆ ತಪ್ಪಾಗಲಾರದು. ಇ... ...ದೆ ನೀವು ಈ ಸಂಘವನ್ನು ಸ್ಥಾಪಿಸುವಾಗ ಎಲ್ಲಾ ಹ... ...ಗಳಲ್ಲು, ಪೇಟೆಗಳಲ್ಲು ತಿರುಗಿ ಜನರನ್ನು ಸಮಾಧಾನಪಡಿಸಿ ಅವರ ಸಹಾನುಭೂತಿಯನ್ನು ಸಂಪಾದಿಸಲು ಹೇಳಿದ ಮಾತುಗಳು ನಿರರ್ಥಕವಾಗಿರುವುದಾಗಿ ತೋರಬರುತ್ತದೆ. ಇದು ಯಾರಿಗೂ ತಿಳಿಯದ ವಿಚಾರಗಳಲ್ಲ. ಈ ವಿಷಯ ಕೇಬರಿ ನಲ್ಪಟ್ಟ ದೃಷ್ಯಗಳೇನಾದವು? ಇಂಥಾದ್ದನ್ನು ನಾನು ಕಳೆದ ತಾ. 31—5—35ರ ಶುಕ್ರವಾರ ದಿನ ಶನಿವಾರದಂತೆ ಹೋಬಳಿ ಕಚೇರಿಯ ಉದ್ಯೋಗಸ್ಥರು ಬದಲಾವಣೆ ಆದಾಗ ಒಂದು ಟೀ ಪಾರ್ಟಿ ನಡೆದ ಕಾಲದಲ್ಲು ನೋಡಿದಾಗ್ಗ್ಯೆ ಆಗಲೇ ನಮ್ಮ ಸಮಾಜದ ಮುಂದುವರಿಕೆಯು ಕಟಿದ್ದವಾಯಿತಲ್ಲ ಎಂಬದಾಗಿ ನಮ್ಮ ಮನಸಿಗೆ ತೋರಿತು. ನಮ್ಮ ಸಮಾಜದ ಕೂಟವನ್ನು ತಡೋ ರೀತಿ ನಡೆಸಬೇಕೆಂಬದಾಗಿ ಅಲ್ಲಿ ಸೇರಿದ ವೀರಶೈವ ಸಂಘದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಗಳಿಗೂ ಸಹ ಸಮಾಜದ ಪರವಾಗಿ ಹೇಳಿಕೊಂಡದ್ದು ಸರಿ. ಅದಕ್ಕೆ ವೈಸ್ ಪ್ರೆಸಿಡೆಂಟರಾದ ಹುಂಡಿ ಹೆಚ್. ಬಿ. ಚನ್ನಮಲ್ಲಪ್ಪನವರು ಸಂಘದ ಮೆಂಬರುಗಳಿಗೆ ನೋಟೀಸ್ ಕೊಟ್ಟು ಮೀಟಿಂಗು ನಡಿಸುವ ಹಾಗೆ ಸೆಕ್ರೆಟರಿಯವರಿಗೆ ಸೂಚಿಸಿದರು. ಟೀ ಪಾರ್ಟಿಯ ಸಂತೋಷ ಕೂಟವು ಬರಖಾಸ್ತಾಯಿತು. ನಮ್ಮ ದಾರಿ ಹಿಡಿದು ಹೋದೆವು. ಈಚೆಗೆ ಇದರ ಸುದ್ದಿಯೇ ಇಲ್ಲ. ಮೀಟಿಂಗು ಮಾಡಿದರೆ ಸಂಘದ ಹಣವನ್ನು ಕೇಳಿಯಾರು ಎಂಬ ಶಂಕೆಯು ನಿಮಗೆ ಇರಬಹುದೇ? ಬಡ ವಿದ್ಯಾರ್ಥಿಗಳಿಗೆ ನೀವು ಸಂಘದಿಂದ ವೇತನ ಎಷ್ಟು ಕೊಡಿಸುವಿರಿ? ದೇವರ ಗಂಟೂ, ಸಮಾಜದ ಗಂಟೂ ಒಂದೇ. ಈ ಸಂಗತಿ ವಡನೆ ಮೀಟಿಂಗ್ ಮಾಡಿ ಸಮಾಜದ ಮುಂದಿಡಬೇಕಾಗಿದೆ.

ಜಿ ಸಂಣಯ್ಯ.

ಈ ದೇಶದ ಕೋರ್ಟುಗಳ ದುರ್ದೆಶೆ.

ಅಯ್ಯಾ ಮಿತ್ರರೇ,

ಎಲ್ಲಾ ದೇಶದಲ್ಲು ವಿದ್ಯಾವಂತರು ಹೆಚ್ಚುತ್ತಾ ಬಂದ ಹಾಗೆ ವಿದ್ಯಾಪ್ರವೀಣರಾದವರನ್ನು ನ್ಯಾಯಾಧೀಶರನ್ನಾಗಿ ನಿಯಮಿಸಿ ನ್ಯಾಯ ಅನ್ಯಾಯಗಳ ತೀರ್ಪುಗಳನ್ನು ವಿಮರ್ಶಿಸುವ ಸುವ್ಯವಸ್ಥೆ ಮಾಡುತ್ತಾ ಬರುತ್ತಲಿರುವದಕ್ಕೆ ವ್ಯತಿರಿಕ್ತವಾದ ನಡವಳಿಕೆಯು ನಮ್ಮ ದೇಶದಲ್ಲು ಜಾರಿಗೆ ಬಂದು ಹೋಗಿರುವದರಿಂದ ಮೊಕದ್ದಮೆಗಳಲ್ಲಿ ನಾಕಷ್ಟು ನ್ಯಾಯಗಳು ಧರ್ಮದಲ್ಲಿ ಇತ್ಯರ್ಥವಾಗುತ್ತೆಂದು ಹೇಳಲಿಕ್ಕಾಗುವದಿಲ್ಲ. ಇದಕ್ಕೆ ಕಾರಣವೇನೆಂಬವನ್ನು ಪ್ರತಿ ಒಬ್ಬರು ತಿಳಿದುಕೊಳ್ಳಬೇಕಾದ ಮುಖ್ಯ ವಿಷಯವಾಗಿದೆ.

ಹಿಂದಿನ ಕಾಲದಲ್ಲಿ ಆದರೆ ಲಾಯರುಗಳು ಮತ್ತು ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರುಗಳು ಏರ್ಪಡುವದಕ್ಕಿಂತ ಮುಂಚೆ ವಾಗಿ ಕಕ್ಷಿದಾರರೇ ತಮ್ಮ ತಮ್ಮ ವ್ಯವಹಾರಗಳನ್ನು ನಡೆಸಿಕೊಳ್ಳುತಿದ್ದರು. ಆಗ ನ್ಯಾಯಾಧೀಶರಿಗೆ ಕಕ್ಷಿದಾರರಿಗೂ ಸಂಭಾಷಣೆಗಳೆಲ್ಲ ನಡೆಯುತ್ತಿದ್ದದರಿಂದ ನ್ಯಾಯ ಅನ್ಯಾಯಗಳು ಸುಲಭವಾಗಿ ಗೋಚರಕ್ಕೆ ಬಂದು ವಿಮರ್ಶಿಸಲ್ಪಡುತಿತ್ತು. ಈಗಲಾದರೋ ವ್ಯವಹಾರ ನಡೆಸಲು ಸಕ್ಷಿಗಳಂತೆ ಲಾಯರುಗಳೂ, ಪೋಲೀಸ್ ಮೊಕದ್ದಮೆಗಳಲ್ಲಿ ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರುಗಳೂ ಏರ್ಪಟ್ಟಿರುವದರಿಂದ ಕಕ್ಷಿದಾರರಿಗೂ, ನ್ಯಾಯಾಧೀಶರಿಗೂ ಸಂಭಾಷಣೆಗಳೇ ... ಯಾಗಿರುವದರಿಂದ ಗಟ್ಟಿಗರಾದ ಲಾಯರುಗಳ ಅಥವಾ ಪ್ರಾಸಿಕ್ಯೂಟರುಗಳ ಅಭಿಪ್ರಾಯಗಳಿಗೆ ಒಳಪಟ್ಟು ತೀರ್ಪುಗಳು ಆಗುವದಿಲ್ಲವೆಂತ ಹೇಳಲಿಕ್ಕಾಗುವದಿಲ್ಲ.

ಇಂಥಾ ಈ ಕಾಲದಲ್ಲು, ಆದರೆ ಬಿ. ಎ ಬಿ ಎಲ್, ಬ್ಯಾರಿಸ್ಟರ್ ಪಾಸಾದ ಲಾಯರುಗಳು ತುಂಬಿ ತುಳುಕುವಂತಾಲದಿಲ್ಲ, ಇಂಟರ್ ವಿಡಿಯಟ್ ಆಗ ಯಾ ಆಗದೆ ಟೀಚ್ರ ವಾದನವನ್ನು ನ್ಯಾಯಾಧೀಶರನ್ನಾಗಿಯೂ, ಮತ್ತು ಪ್ರಾಸಿಕ್ಯೂಟರುಗಳನ್ನಾಗಿಯೂ ಏರ್ಪಡಿಸಿರುವ ನಮ್ಮ ದೇಶದ ನ್ಯಾಯಸ್ಥಾನಗಳಲ್ಲು ಮೊಕದ್ದಮೆಗಳ ಫಲಿತಾಂಶಗಳು ಗಟ್ಟಿಗರಾದ ಲಾಯರುಗಳನ್ನು ಅವಲಂಬಿಸಿಕೊಂಡಿದೆಯೆಂದು ಯಾರು ಕಾಣೆ ನಾಲಾರರು. ಈಗಿನ ಸಬ್ ಇನ್ಸ್ಪೆಕ್ಟರುಗಳೆಲ್ಲ ವಿದ್ಯಾವಂತರಾಗಿಯೂ, ತರಬೇತು ಹೊಂದಿದವರಾಗಿಯೂ ಇರುವಾಗ 'ಚ' ಶೀಟ್ ಆದ ಮೊಕದ್ದಮೆಗಳು ಮಜಾವಾಗಲಿಕ್ಕೆ, ಕೆಳಗಿನ ಕೋರ್ಟಿನಲ್ಲಿ ಆದ ತೀರ್ಪು ಮೇಲಿನ ಕೋರ್ಟಿನಲ್ಲು ಬದಲಾವಣೆ ಹೊಂದಲಿಕ್ಕೆ ಲಾಯರುಗಳ ಗಟ್ಟಿಗತನವೂ, ನ್ಯಾಯಾಧಿಪತಿ ಮತ್ತು ಪ್ರಾಸಿಕ್ಯೂಟರುಗಳ ಅಬಲವೂ ಕಾರಣಗಳಲ್ಲದೆ ಬೇರೆ ವಿಶೇಷವಾದ ಕಾರಣ ಯಾವಾಗಾದರು ತಿಳಿಯುವುದೇ? ಮೊಕದ್ದಮೆಗಳಲ್ಲಿ ಹೆಚ್ಚಿನ ಸಂಖ್ಯೆಯವು ಮಜಾವಾಗುತಿರ್ರುವುದನ್ನು ನೋಡಿದರೆ ಸಾಧುಸಜ್ಜನರ ನೆಮ್ಮದಿಗೆ ತುಂಬಾ ಭಂಗವಾಗದಿರದೆಂಬುದು ಖಂಡಿತ

ಪೋಲೀಸ್ ಮೊಕದ್ದಮೆಗಳು ಮಜಾವಾಗಲಿಕ್ಕೆ ಮುಖ್ಯ ಕಾರಣಗಳಾವುವೆಂದರೆ (1) ಲಾಯರುಗಳಿಗಿಂತ ವಿದ್ಯಾಪ್ರವೀಣರಲ್ಲದ ನ್ಯಾಯಾಧೀಶರನ್ನು ಮತ್ತು ಪ್ರಾಸಿಕ್ಯೂಟರನ್ನು ನೇಮಿಸುವಿಕೆ. (2) ಕೆಳಗಿನ ಕೋರ್ಟಿನ ತೀರ್ಪಿನ ಮೇಲೆ ಅಪರಾಧಿಗೆ ಮೇಲಿನ ಕೋರ್ಟಿಗೆ ಅಪೀಲು ಮಾಡಲು ಅವಕಾಶವಿರುವಂತೆ ಮೇಲಿನ ಕೋರ್ಟಿನಲ್ಲಿ ಬದಲಾವಣೆ ಮಾಡಿದ ಕೆಳಗಿನ ಕೋರ್ಟಿನ ತೀರ್ಪಿನ ಮೇಲೆ ಫಿರ್ಯಾದಿ ನಡೆಸಿದ ಪೋಲೀಸ್ (ಸರಕಾರವು) ಅದರ ಮೇಲಿನ ಕೋರ್ಟಿಗೆ ಅಪೀಲು ಮಾಡಿ ತನ್ನ ಕೆಲಸವನ್ನು ಕೊನೆಗಾಣಿಸದಿರುವದರಿಂದ. ಒಬ್ಬರು ಕೊಡಿಸಿದ ತೀರ್ಪನ್ನ ನ್ಯಾಯ ಯಾ ಅನ್ಯಾಯವಾದವೆಂತ ಇನ್ನೊಬ್ಬರು ಮಾಡುವದು ಸಹಜವಾದದ್ದಾಗಿರುತ್ತೆ. ಆ ಮಾತ್ರಕ್ಕೆ ನಾವು ಹೇಳುವಂತೆ ನ್ಯಾಯವಾಗಲಿ, ಅನ್ಯಾಯದಂತೆ ಅನ್ಯಾಯವಾಗಲಿ ... ಎಂಥಾ ಗಟ್ಟಿಗರಿಂದಲೂ ಹೇಳಲಿಕ್ಕಾಗುವದಿಲ್ಲ. ಅಪೀಲು ಕೋರ್ಟುಗಳು ಸಂಣ ಹೆಸರನವೇ ಆಗಿರಲಿ, ದೊಡ್ಡ ಹೆಸರನವೇ ಆಗಿರಲಿ, ಮೂವರು ನ್ಯಾಯಾಧೀಶರುಗಳು ಒಂದೇ ತೀರ್ಪು ಕೊಡುವಂತೆ ಮಾಡದೆ ಹೋದರೆ, ಖಂಡಿತವಾಗಿಯೂ ನ್ಯಾಯ ಸಿಗುವಂತೆ ನಂಬುವದು ದೊರೆಯುವದಿಲ್ಲವೆಂಬುದು ನಮ್ಮ ... ಇದಕ್ಕಾಗಿ ಮದ್ರಾಸ್ ಹೈಕೋರ್ಟು ಬೇಕು, ಬೆಂಗಳೂರು ಹೈಕೋರ್ಟು ಬೇಕು ಎಂಬುದೆಲ್ಲ ಮುಖ್ಯವಲ್ಲ. ... ಹೈಕೋರ್ಟು ಅಥವ ಚೀಫ್ ಕಮಿಷನರು ... ಹೊರತು ... ಪದ್ಧತಿಗಿಂತ ... ಇರಲಾರದು.

ನಮ್ಮ ಈ ಪುಟ್ಟ ದೇಶದಲ್ಲು ಕಡಿಮೆ ತರದ ಮತ್ತು ಹೆಚ್ಚಿನ ನಂಬ್ರಿಯ ಅಪೀಲು ಕೇಸುಗಳು ಇಂಬಲಾದರೆ ... ಇ... ವುಗಳನ್ನು ಇಲ್ಲಿ ಈಗ ಇರುವ ಜಡ್ಜಿಗಳೇ ಕೂತು ತೀರ್ಮಾನಿಸಬಹುದೆಂತಲೂ ಒಂದು ಭಾವನೆ ತೋರಿಬರುತ್ತೆ. 2 ನೇ ಕ್ಲಾಸು ಮ್ಯಾಜಿಸ್ಟ್ರೇಟುಗಳ ತೀರ್ಪಿನ ಮೇಲೆ ಅಪೀಲುಗಳಿಗೆ ಕಮಿಷನರ್, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮತ್ತು ಸಬಾರ್ಡಿನೇಟ್ ಜಡ್ಜಿಯವರು ಅಪೀಲು ಜಡ್ಜಿಗಳಾಗಿಯೂ, ಒಂದನೇ ಕ್ಲಾಸಿನ ಜಡ್ಜಿಗಳ ತೀರ್ಪಿನ ಮೇಲೆ ಆಗುವ ಅಪೀಲುಗಳಿಗೆ ಕಮಿಷನರ್, ಜುಡಿಷಿಯಲ್ ಆಫೀಸರ್ ... ಜಡ್ಜಿ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಥವ ಸಬಾರ್ಡಿನೇಟ್ ಜಡ್ಜಿ ಈ ಮೂವರು ಜಡ್ಜಿಗಳಿಂದ ಕೂಡಿ ಅಪೀಲು ಮೊಕದ್ದಮೆಗಳನ್ನು ಇತ್ಯರ್ಥಮಾಡುವಂತೆ ಏರ್ಪಾಡು ಮಾಡದೆ ಹೋದಲ್ಲಿ ಖಂಡಿತವಾಗಿಯೂ ಜನಸಾಮಾನ್ಯರಿಗೆ ತುಂಬಾ ಅನ್ಯಾಯವಾಗದಿರಲಾರದು.

ಸಿ. ಕೆ.

ಚೀಫ್ ಕಮಿಷನರವರಿಗೆ ಗಂಧದ ಕರಡು ರೂಲ್ಸುಗಳ ವಿಷಯ ಪತ್ರ

ಅಯ್ಯ,

ಕೊಡಗು ಚೀಫ್ ಕಮಿಷನರ್ ಸಾಹೇಬರವರು ರೈತರ ಹಿಡುವಳಿಯಾದ ಅಸೆಸ್ಮೆಂಟ್ ಜಾಗದ ಮಾಲೀಕರಿಗೆ ಗಂಧದ ಮರಗಳಿಗೋಸ್ಕರ ಬೋನಸ್ ಕೊಡುವ ಒಂದು ಹೊಸ ಉದ್ದೇಶವನ್ನು ಕಲ್ಪಿಸಿ ತತ್ಸಂಬಂಧವಾಗಿ ಒಂದು ಕರಡು ರೂಲ್ಸನ್ನು ನಿರ್ಮಾಣ ಮಾಡಿ ಬೇಕಾದ ಇತರಾದಿಯನ್ನು ಜತೆಯಲ್ಲೋಸುಗ ಕೊಡಗು ಗಜೆಟಿನಲ್ಲಿ ಪ್ರಕಟಿಸಿರುವುದೂ ಅವರ ವಿಷಯವಾಗಿ ಬೇಕಾದರೆ ಅಲ್ಲಲ್ಲಿ ಸಾರ್ವಜನಿಕ ಮೀಟಿಂಗುಗಳು ನಡೆಸಿ ಬೇಕಾದ ಅಭಿಪ್ರಾಯವನ್ನು ದೇಶ ಭಾಷಾ ಪತ್ರಿಕೆಗಳ ಮೂಲಕ ಪ್ರಚಾರ ನಡೆಸುತ್ತಿರುವುದು ಸರಿಯಷ್ಟೆ. ಸದರಿ ಕರಡು ರೂಲ್ಸಿನಲ್ಲಿ ನಮೂದಿಸಿರುವಂತೆ ನನ್ನ ಸ್ವಂತ ಅಭಿಪ್ರಾಯವನ್ನು ಸಹ ಮರ್ಕರ ಚೀಫ್ ಕಮಿಷನರ್ ಸಾಹೇಬರ ... ಗಮನಕ್ಕೆ ತರುವುದು ನನಗೆ ಅವಶ್ಯ ... ಆ ಕಳಗೆ ಸಮೂದಿಸಲ್ಪಡುವ ಒಂದು ಪತ್ರವನ್ನು ... ಕೊಡಗು ಚೀಫ್ ಕಮಿಷನರ ... ಬರೆದದ್ದು ಸರಿ ... ಬರೆದದ್ದನ್ನು ದೇಶ ... 'ಕೊಡಗು' ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಲು ... ಒಳ ಕೇಳಿಕೊಂಡಿದ್ದೇನೆ. ದೇಶ ಹಿತೈಷಿಗಳು ... ಯರು ಇದನ್ನು ಅವಲೋಕಿಸಿ, ನಾನು ಪತ್ರದಲ್ಲಿ ಬರೆದಿರುವ ಕಾರಣಗಳು, ಆಕ್ಷೇಪಣೆ ಮತ್ತು ಸಲಹೆಗಳು ಸರಿಯಾಗಿದ್ದರೆ ಸರಿಯೆಂದಾಗಲಿ, ನ್ಯೂನಾತಿರೇಕಗಳಿದ್ದರೆ ಅವನ್ನು ತಿದ್ದಿಕೊಳ್ಳತಕ್ಕ ಬಗ್ಗೆ ವಿವರವಾದ ಮನಗಾಣಿಸಿ ಕೊಡಬೇಕಾಗಿ ಈ ಮೂಲಕ ನಿವೇದನವನ್ನು ಕೇಳಿಕೊಂಡಿದ್ದೇನೆ.

ಹುಜೂರ್ ಕೊಡಗು ಚೀಫ್ ಕಮಿಷನರವರ ಸನ್ನಿಧಿಗೆ:— ವಿಷಯ 28—6—35 ರ ಕೊ. ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಚೀಫ್ ಕಮಿಷನರವರ ನೋಟಿಫಿಕೇಶನ್ ನಂ 67 ರ ಗಂಧದ ಮರದ ಬೋನಸ್ಸು ಸಂಬಂಧವಾದ ಕರಡು ರೂಲ್ಸುಗಳು:— ಸ್ವಾಮಿ,

ತಮ್ಮ ನೋಟಿಫಿಕೇಶನ್ ಸೂಚನೆ ಮೇರೆ ಸದರಿ ನೋಟಿಫಿಕೇಷನ್ನಿನ ರೂಲ್ಸುಗಳ ವಿಷಯದಲ್ಲಿ ನಾನು ಹೇಳಬೇಕಾಗಿರುವ ಅನೇಕ ಆಕ್ಷೇಪಣೆಗಳು ಮತ್ತು ಸಲಹೆಗಳ ಪೈಕಿ ಸದ್ಯಕ್ಕೆ ಕೆಲವನ್ನು ತಮ್ಮ ಪರ್ಯಾಲೋಚನೆ ಬಗ್ಗೆ ತಿಳಿಸುತಿದ್ದೇನೆ.

ಆಕ್ಷೇಪಣೆಗಳು.

1 ಸದರಿ ರೂಲ್ಸುಗಳು 1935 ನೇ ಜುಲೈ ತಿಂಗಳ ಕೊ. ಗೆಜೆಟ್ಟಿನಲ್ಲಿ ಇಂಗ್ಲಿಷಿನಲ್ಲಿ ಮಾತ್ರ ಪ್ರಕಟವಾಗಿವೆ ಇ. ಕೊಡಗು ತಾಲೋಕಿನ ಜನರು ವಿಶ್ವೇಷವಾಗಿ ಬಹಳ ಹಿಂದುಳಿದಿರುವರಲ್ಲದೆ ಇಂಗ್ಲಿಷು ತಿಳಿದವರು ಬಹಳ ಕಡಿಮೆ. ಅದ್ದರಿಂದ ಈ ಇಂಗ್ಲಿಷು ಪ್ರಕಟನೆಯು ಈ ವಿಷಯದಲ್ಲಿ ಸಂಬಂಧಪಡುವ ಸಾರ್ವಜನಿಕರೆಲ್ಲರಿಗೂ ತಿಳಿದಂತಿಲ್ಲ.

2. ಈ ರೂಲ್ಸುಗಳ ವಿಷಯದಲ್ಲಿ ಜನರ ಅಭಿಪ್ರಾಯ ತಿಳಿದುಕೊಳ್ಳಲು ಕೊಟ್ಟಿರುವ 90 ದಿವಸದ ಅವಧಿಯು ಇಂಥಾ ಪ್ರಾಮುಖ್ಯವಾದ ವಿಷಯದಲ್ಲಿ ಸಾಲದು.

3 ಸದರಿ ರೂಲ್ಸುಗಳು ಅತಿ ಕಠಿಣವಾಗಿರುವುದಲ್ಲದೆ ಬೋನಸ್ಸು ಹೊಂದಲಪೇಕ್ಷೆ ಇರುವವನು ಅಧಿಕಾರಿಗಳಿಗೆ ತೃಪ್ತಿಕರವಾಗಿ ಈ ರೂಲ್ಸುಗಳನ್ನನುಸರಿಸಲು ಸಾಧ್ಯವೇ ಇಲ್ಲದಂತೆ ಹೆಚ್ಚು ಜವಾಬ್ದಾರಿ ಹೊರಿಸುವುದಾಗಿದೆ.

4. ಬೋನಸ್ಸು ದೊರಕಿಸಿಕೊಡಬೇಕೆಂದು ಮಾಡಿರುವ ರೂಲ್ಸುಗಳ ಉದ್ದೇಶವೇನೋ ಹಿತಕರವಾದದ್ದೇ. ಆದರೂ ಆ ರೂಲ್ಸುಗಳು ಹೊರಿಸುವ ಜವಾಬ್ದಾರಿಯು, ರೈತನಿಗೆ ಉತ್ತೇಜನ ಕೊಡುವುದಾಗಿಯೂ, ಆಕರ್ಷಕವಾಗಿಯೂ ಇರುವುದರ ಬದಲು ಉತ್ಸಾಹ ರಹಿತವಾಗಿಯೂ, ನಿರಾಶಾ ಜನಕವಾಗಿಯೂ ಇವೆ.

5. ಜನರು ಅಭಿಪ್ರಾಯ ತಿಳಿಸಲು ಕೊಟ್ಟಿರುವ 90 ದಿನಗಳ ಅವಧಿಯೊಳಗೇನೇ ಸ್ಥಳೀಯ ಅಧಿಕಾರಿಗಳು ತಮ್ಮ ತಮ್ಮ ಅಸೆಸ್ಮೆಂಟ್ ಜಾಗಗಳ ಹದ್ದು ಬಸ್ತು ಹೊಕ್ಕುವರಿ ಬಾಪ್ತು ನೆಟ್ಟ ಗಂಧದ ಎಣಿಕೆ ಮಾಡಲು ಅನುಕೂಲಪಡಿಸಿಕೊಡಬೇಕೆಂತ ನೋಟೀಸುಗಳ ಮೂಲಕ ಒತ್ತಾಯಿಸುತ್ತಿರುವರು. ಈಗಲೇ ಈ ರೀತಿ ನಿರ್ಬಂಧಪಡಿಸುವುದು ನೀತಿಯಾಗಿಲ್ಲ. ಅದ್ದರಿಂದ ಈ ವಿಷಯದಲ್ಲಿ ನಾನು ಕೆಳಗೆ ಹೇಳುವಂತೆ ರೂಲ್ಸುಗಳು ಯಾರಿಗೆ ಅನ್ವಯಿಸುವುದೋ ಅಂಥಾ ಜನಗಳ ಒಪ್ಪಿಗೆ ಪಡೆದು ರೂಲ್ಸುಗಳನ್ನು ಮಾಡಿ ಜಾರಿಗೆ ತರುವ ವರೆಗೂ ಇಂಥಾ ನಿರ್ಬಂಧವನ್ನು ಮಾಡದಂತೆ ಸ್ಥಳೀಯ ಅಧಿಕಾರಿಗಳಿಗೆ ತಿಳಿವಳಿಕೆ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಸಲಹೆಗಳು.

1 ಈ ರೂಲ್ಸುಗಳನ್ನು ಕನ್ನಡದಲ್ಲಿ ಪ್ರಕಟಿಸಿ ಸಂಬಂಧಪಡುವ ಸಾಮಾನ್ಯ ಜನಗಳ ತಿಳುವಳಿಕೆಗೂ ಬರುವಂತೆ ಏರ್ಪಾಡು ಮಾಡಬೇಕು.

2 5—5—32 ರ ನಂ. 60 ಮತ್ತು 28—6—35 ರ ನಂ. 67 ನೇ ನೋಟಿಫಿಕೇಶನ್‌ಗಳಂತೆ ಬೋನಸ್ಸು ಕೊಡಬೇಕೆಂದಿರುವುದು 1937 ನೇ ಇಸವಿಯಿಂದಾದ್ದರಿಂದ ಈ ಕರಡು ರೂಲ್ಸುಗಳನ್ನು ಕನ್ನಡದಲ್ಲಿ ಪ್ರಕಟಿಸಿದ ನಂತರ ಕೊನೇ ಪಕ್ಷ 6 ತಿಂಗಳು ಅವಧಿಯನ್ನಾದರೂ ಕೊಡಬೇಕು

3. ಗಂಧವನ್ನು ರೈತರು ತಮ್ಮ ಹಿಡುವಳಿಯಲ್ಲಿ ಬೆಳೆಯಲು ಮತ್ತು ಸಾಕಲು ಅವರಿಗೆ ತಕ್ಕ ರೀತಿಯಿಂದ ಅಂದರೆ ತಕ್ಕ ಸಲಹೆಗಳನ್ನು ಕೊಟ್ಟು ಮಾಡಬೇಕಾದ ರೀತಿಗಳನ್ನು ತೋರಿಸಿಕೊಡುವುದರ ಮೂಲಕ ಪ್ರೋತ್ಸಾಹಕೊಡಬೇಕೇ ಹೊರ್ತು ಅಂದಾಜ ಕಠಿಣವಾದ ಮತ್ತು ಜವಾಬ್ದಾರಿ ಹೊರಿಸುವ ಕಾನೂನುಗಳನ್ನು ಮಾಡಿದರೆ ಪ್ರೋತ್ಸಾಹ ಕೊಟ್ಟ ಹಾಗಾಗುವುದಿಲ್ಲ.

4 ಕರಡು ರೂಲ್ಸುಗಳಲ್ಲಿ ಹೇಳಿರುವಂತೆ ಸ್ವತ್ತಳತೆ ಮೇಲೆ ಬೋನಸ್ಸು ಕೊಡುವ ವಿಧಾನವು ಅನೇಕ ತರದ ತೊಂದರೆಗಳನ್ನುಂಟುಮಾಡುವುದಾಗಿರುವುದರಿಂದ ರೀತಿಯನ್ನು ಜಾಗದ ಗುಪ್ತಕ್ಕೆ ಕೊಡುವಂತೆಯೇ ಖರ್ಚು ಮತ್ತು ರಾಯಿಲ್ಟಿಯನ್ನು ಕಳೆದುಕೊಂಡು ಶೇಕಡ 75% ಭಾಗವನ್ನು ರೈತನಿಗೆ ಕೊಡುವುದು ಒಳ್ಳೆಯದು.

5. ಈ ಸಲಹೆಗಳು ಒಪ್ಪುವ ದಾರಿ ಕಾಣುವುದಿಲ್ಲವಾದರೆ ಗಂಧದ ಮರ ಹೆಚ್ಚಾಗಿ ಬೆಳೆಯುವ ಪ್ರದೇಶದ ಜನರಿಂದ ಚುನಾಯಿಸಲ್ಪಟ್ಟ ಹೆಚ್ಚಾಗಿ ಖಾಸಗೀ ಸದಸ್ಯರನ್ನೊಳಗೊಂಡ ಒಂದು ಕಮಿಟಿಯನ್ನು ಸ್ಥಾಪಿಸಬೇಕು ಮತ್ತು ಆ ಕಮಿಟಿಯು ಗಂಧದ ಮರ ಬೆಳೆಯುವ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ರೈತರ ಅನುಕೂಲ ಅನಾನುಕೂಲಗಳ ಪ್ರತ್ಯಕ್ಷ ಅನುಭವ ಪಡೆದುಕೊಂಡು ನಂತರ ಈ ವಿಷಯದಲ್ಲಿ ಒಂದು ರಿಪೋರ್ಟು ಮಾಡುವುದೊಳ್ಳೆಯದು.

ನನ್ನ ಇನ್ನೂ ಅನೇಕ ಆಕ್ಷೇಪಣೆಗಳನ್ನೂ, ಸಲಹೆಗಳನ್ನೂ ವಿಚಾರಣೆಗಬೇಕಾಗಿರುವ ಕಮಿಟಿಯ ಮುಂದೆ ಹೇಳಲು ಕಾದಿದ್ದೇನೆ.

ಎನ್ ಆರ್. ಸುಬ್ಬಣ್ಣಯ್ಯ.

ಸೆಲ್ಫ್ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲಿಕ್ಕೆ ತಿಳಿದವನು ಬೇರೆ ಸಹಾಯವಿಲ್ಲದೆ

ಇಂಗ್ಲಿಷ್ ಓದುವುದನ್ನೂ, ಬರೆಯುವುದನ್ನೂ, ಮಾತಾಡುವುದನ್ನೂ, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 2 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ಪ್ರಕಟಿಸಲಿಲ್ಲ. 884 ಪೇಜುಗಳ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವುವು. ಬೇಗನೇ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ. 2.

METHA & Co,
11 Peryanayakaran Street,
12—10 G. T. Madras

ರೋಲ್ಡ್ ಗೋಲ್ಡ್ ರಿಸ್ಟ್ ವಾಚ್.



ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲಿವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್ ಮೇಡ್) ತಯಾರಾಗಿವೆ ಸರಿಯಾದ ಗಂಟೆಯನ್ನು ತೋರಿಸುವುವು. ಬಹಳ ಗಟ್ಟಿ ಕಂಪೆನಿಯಿಂದ ಮಾಡಲ್ಪಟ್ಟಿರುವುದು. ಇದರ ಕೇಸು ಬಂಗಾರದ್ದೆ ಹೊಳೆಯುತ್ತದೆ. ಈ ಗಡಿಯಾರಗಳಿಗೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 5—8—0.

METHA & CO.
11 Peryanayakaran Street.
12—10 G. T. Madras.

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾಲಾಮಿಸ್ರಿ ಮಿಶ್ರಿತ.

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಕರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಉರಿ, ಮೈ ಬಿಳುಪು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹುಷಾರನ್ನೂ ಬೇಕಾದ ಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ವಾತಜ್ವರ, ಮಲೇರಿಯಾ, ವಿಷಮ ಜ್ವರ, ಕಫ ಜ್ವರ, ಪಳೆಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವುದು.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಮೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ರ ರೂ. 2—8—0 3ಕ್ಕೆ ರೂ. 7—0—0

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಚವನ ಪ್ರಾಶ—ಡಬ್ಬಿ 1ರ 3—8—0 ಅರ್ಧಕ್ಕೆ ರೂ. 1—5—0.

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

(ಕೆಟಲಾಗ್ ಧರ್ಮಾರ್ಥ.)

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ನಂಬರು 1, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ.
(1) ಎ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ (ಕೊಡಗು).
(2) ಎ ಎಸ್. ವೆಂಕಪ್ಪಯ್ಯ, ಒಟ್ಟಿ ವ್ಯಾಪಾರಿ, ಸೋಮವಾರಪೇಟೆ.
(3) ಮೆಸರ್ಸ್ ಕಾಮತ್ ಎಂಡ್ ಕೊ. ತಾರಾ ಹೌಸ್, ಗಿರಗಾಂವ್ ಬ್ಯಾಕ್‌ರೋಡ್, ಬೊಂಬಾಯಿ ನಂ 4.
52—14 (4) ಮೆಸರ್ಸ್ ಮುಲ್ಲರ್ ವೆಬ್ಸ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಅಂಗಡಿಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—33 ಬೆಂಗಳೂರು.

ಪತ್ರವ್ಯವಹಾರ.

[ವಾತ್ತಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಭಾಗಮಂಡಲ ದೇವಸ್ಥಾನಕ್ಕೆ ಅಕ್ಕಿ ಎಲ್ಲಿಂದ?

ಅಯ್ಯಾ,

ಭಾಗಮಂಡಲ ದೇವಸ್ಥಾನಕ್ಕೆ ಮಂಗಳೂರಿನಿಂದ ಎರಡು ಲಾರಿ ತುಂಬಾ ಅಕ್ಕಿ ಬಂದಿದೆ ಎಂದು ವರ್ತಮಾನವಿದೆ. ಇದು ಬರುವ ತುಲಾ ಸಂಕ್ರಮಣದ ಜಾತ್ರೆಯಲ್ಲಿ ಯಾತ್ರಿಕರಿಗೆ ಹಂಚಿಕೊಡಲಿಕ್ಕಿರುವ ಅಕ್ಕಿಯಾಗಿರಬಹುದೇ? ಇದಕ್ಕೆ ಸ್ಥಳೀಯ ಅಕ್ಕಿ ದೊರೆಯುವುದಿಲ್ಲವೇ? ಈ ಮೊದಲು ಎಲ್ಲಿಂದ ಅಕ್ಕಿ ತೆಗೆದುಕೊಳ್ಳುತ್ತಿದ್ದರು? ಮೊದಲಾದ ವಿಷಯಗಳನ್ನು ತಿಳಿದವರ್‍ಯಾರಾದರೂ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರಿಕೆ. 'ದೇಶೀಯ'.

ಫ್ರೀಶಿಪ್.

ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟ್ ಮತ್ತು ಮೆಂಬರುಗಳಲ್ಲಿ ವಿನಂತಿ

ನಮ್ಮ ದೇಶದ ಡಿಸ್ಟ್ರಿಕ್ಟ್‌ಬೋರ್ಡ್ ಶಾಲೆಗಳಲ್ಲಿ ಬಡವರಾದ ತಂದೆತಾಯಿಗಳ ಮಕ್ಕಳಿಗೆ ವಿದ್ಯೆಯನ್ನು ಕೊಡಲು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂಬ ಯೋಚನೆಯಿಂದ ಫ್ರೀಶಿಪ್ಪುಗಳನ್ನು ಕೊಡುವ ಏರ್ಪಾಡುಗಳು ಕಲ್ಪಿಸಲ್ಪಟ್ಟಿರುತ್ತವೆಂಬುದು ಯಾರಿಗೂ ತಿಳಿಯದ್ದಲ್ಲ.

ಈ ತೆರನಾದ ಫ್ರೀಶಿಪ್ಪುಗಳನ್ನು ಕೊಡಬೇಕಾದರೆ ತಂದೆ ತಾಯಿಗಳ ಉತ್ಪತ್ತಿಯನ್ನು ಅನುಸರಿಸಿ ಕೊಡಬೇಕೆಂಬ ನಿಬಂಧನೆಗಳು ಇರುವುದಲ್ಲದೆ ಇದಕ್ಕೆ ತಕ್ಕ ಅಧಿಕಾರವುಳ್ಳ ಉದ್ಯೋಗಸ್ಥರು ಕೂಡ ಸರ್ಟಿಫೈ ಮಾಡಬೇಕೆಂಬ ನಿಬಂಧನೆಗಳು ಸಹ ಇವೆ. ಈ ರೀತಿಯಾದ ಏರ್ಪಾಡುಗಳು ಇದ್ದರೂ ಈಗ ಕೊಟ್ಟಿರುವಂಥಾ ಫ್ರೀಶಿಪ್‌ಗಳೆಲ್ಲಾ ನ್ಯಾಯವನ್ನೂ, ಧರ್ಮವನ್ನೂ ಅನುಸರಿಸಿ ಕೊಡಲ್ಪಟ್ಟಿರುತ್ತವೆಯೆಂತ ಹೇಳಲಿಕ್ಕಾಗುವುದಿಲ್ಲ.

ಉದಾಹರಣೆಗಾಗಿ ಹೇಳುವುದಾದರೆ, ಪೊನ್ನಂಪೇಟೆ ಶಾಲೆಗೆ ಬರುವ ವಿದ್ಯಾರ್ಥಿಗಳ ಪೈಕಿ ಹಲಕೆಲವು ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ಸಾಕಷ್ಟು ಉತ್ಪತ್ತಿ ಇಲ್ಲದೆ, ತಮ್ಮ ಮಕ್ಕಳು ನೆಂಟರಿಷ್ಟರ ಮನೆಗಳಲ್ಲಿ ಇದ್ದುಕೊಂಡು ಊಟದ ಏರ್ಪಾಡುಗಳನ್ನು ಮಾಡಿ, ಶಾಲೆಗೆ ಕಳುಹಿಸುತ್ತಿದ್ದು ಅಂಥಾ ಮಕ್ಕಳಿಗೆ ಫ್ರೀಶಿಪ್‌ಗಳನ್ನು ಕೊಡಬೇಕಾಗಿದೆಯೆಂದು ಅರ್ಜಿ ಬರೆದುಕೊಂಡರೂ ಕೊಡುವವರೇ ಗತಿ ಇಲ್ಲ. ಉಪಾಧ್ಯಾಯರು ಮತ್ತು ಜಮೀನ್ದಾರರುಗಳಿಗೆ ಒಂದು ನೂರು ರೂಪಾಯಿ ವೇತನ ಮತ್ತು ಭೂಮಿ ಕಾಗದಗಳುಳ್ಳ ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ಹೆಚ್ಚು ಉತ್ಪತ್ತಿ ಇರುವ ಉಪಾಧ್ಯಾಯರ ಮಕ್ಕಳಿಗೆ ಫ್ರೀಶಿಪ್‌ಗಳು ಕೊಡಲ್ಪಟ್ಟಿರುತ್ತವೆ ಎಂದು ಕೇಳಬರುತ್ತದೆ. ವಿದ್ಯಾ ಇಲಾಖೆಯಲ್ಲಿಯೇ ಇಂಥಾ ಪಕ್ಷಪಾತದ ನಡವಳಿಕೆಗಳು ಇರುವಾಗ ಬೇರೆ ಇಲಾಖೆಗಳ ವಿಷಯ ಹೇಳುವುದೇ ಬೇಡವೆಂದು ತೋರುತ್ತದೆ.

'ಪೋಷಕ.'

"ಅಸಂಬದ್ಧ ಪ್ರಲಾಪ"

ಅಯ್ಯಾ,

ತಾ. 1—10—35ರ 'ಉದಯ'ದಲ್ಲಿ 'ಇನ್ನಾ ಸಂಕುಚಿತ ಬುದ್ಧಿಯೇ' ಎಂಬ ಶಿರೋನಾಮದ 'ಕೊಡಗು' ಪತ್ರಿಕೆಯ ಹಿಂದಿನ ಬಾತ್ಮಿಯನ್ನು ಕುರಿತು ಟೀಕಿಸಿದ್ದಾರೆ. ಕೊಡವ ಡೆಪ್ಯುಟೇಷನಿನವರು ಕೊಡಗೇತರರು ಪೊಲೀಸ್ ಸರ್ವಿಸಿಗೆ ಅನರ್ಹರೆಂಬ ಅರೋಪಣೆಯನ್ನು ಕಮಿಶನರ ಮುಂದೆ ಮಾಡಿದ್ದು ಖಂಡನೀಯವಾದದ್ದೆಂದು ಸೂಚಿಸುವುದೇ ಹಿಂದಿನ ಬಾತ್ಮಿಯ ಉದ್ದೇಶವಾಗಿದೆ. ಇತರರ ಡೆಪ್ಯುಟೇಷನುಗಳು ಹೋಗಿರಬಹುದು. ಆದರೆ ಕೊಡವ ಡೆಪ್ಯುಟೇಷನಿನವರಂತೆ ಅವರು ಇತರ ಕೋಮಿನವರು ಪೊಲೀಸ್ ಸರ್ವಿಸಿಗೆ ಅಯೋಗ್ಯರೆಂದು ಹೇಳಿದ ವಿಷಯ ನನ್ನ ಅವಗಾಹನೆಗೆ ಬಂದಿರುವುದಿಲ್ಲ.

ಅದ್ದರಿಂದ ಆ ವಿಷಯ ಹಿಂದಿನ ಬಾತ್ಮಿಯಲ್ಲಿ ಬರೆಯಲು ಕಾರಣವಾಗಲೀ, ಸಂದರ್ಭವಾಗಲೀ, ಸಂಬಂಧವಾಗಲೀ ಇರಲಿಲ್ಲ. ಪ್ರತಿಯೊಂದು ಕೋಮಿನವರು ತಮ್ಮ ಪಂಗಡದವರಿಗೆ ಹುದ್ದೆಯನ್ನು ಒದಗಿಸಿಕೊಳ್ಳಲು ಯತ್ನಿಸುವುದು ಸ್ವಾಭಾವಿಕ. ಆದರೆ ತಮ್ಮ ಏಳಿಗೆಗಾಗಿ ಇನ್ನೊಬ್ಬರನ್ನು ಒಳಿಕೆ ತಳ್ಳುವುದು ನ್ಯಾಯವೆಂದು ಯಾರೂ ಒಪ್ಪಲಾರರು. 'ಉದಯ'ದ ಟಿಪ್ಪಣಿಕಾರರು 'ಕೊಡಗು' ಪತ್ರಿಕೆಯ ಹಿಂದಿನ ಬಾತ್ಮಿಯನ್ನು ಓದಿ ಸರಿಯಾಗಿ ತಿಳಿದುಕೊಂಡಿದ್ದರೆ ಅವರ ಆ ತರದ ಟೀಕೆಗೆ ಎಡೆಯೇ ಇರುತ್ತಿರಲಿಲ್ಲ.

ಆ ಟಿಪ್ಪಣೀಕಾರರ—ವಿಶಾಲದೃಷ್ಟಿಯು 'ಬೇರೆ ಪಂಗಡದವರ ಕೆಲಸವನ್ನು ಮುಟ್ಟದೆ ಈ 'ಕೂಪ ಮಂಡೂಕ ನ್ಯಾಯ' ಕ್ಕಿಂತಲೂ ಕಡೆಯಾದ 'ಉಷ್ಟ್ರ ಪಕ್ಷಿಯ ಉಪಾಯ'ವನ್ನು ಹಿಡಿದಿದ್ದು ವ್ಯಸನಕರ'ವೆಂದು ಬರೆದಿರುವುದಕ್ಕೆ ಏನೂ ಅರ್ಥವಿಲ್ಲ.

'ವಿಶಾಲದೃಷ್ಟಿಯ' ಬಾತ್ಮಿಯಲ್ಲಿ ಕೊಡವ ಸಂಗಡದವರ ಅಥವಾ ಯಾವ ಪಂಗಡದವರ ಕೆಲಸವನ್ನು ಕುರಿತು ಬರೆದಿರುವುದಿಲ್ಲ. ಅದರಲ್ಲಿ ಬರೆದದ್ದು ಕೊಡವ ಡೆಪ್ಯುಟೇಷನಿನವ

ಮಾತ್ರೆಯಾದ ಔಷಧಗಳು.

ಅಂತ್ರಿಯಾ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ಮಾತ್ರೆಗಳು.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧವನ್ನು ತಿಂದು

ಗಂಟೆ ಕಾಲ ಕಳೆದು ಸ್ತ್ರೀ ಸುಖ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನೂ, ಆನಂದವನ್ನೂ ಕೊಡುವುದು. ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ, ಕಸ್ತೂರಿ ಭಸ್ಮವು ಎಷ್ಟೋ ಮಾತ್ರವೂ ಸಮಾನವಾಗಲಾರದು. ಅದು ಅಲ್ಲದೆ ಧಾತುವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂರು ದಿವಸದಲ್ಲಿ ನಿಲ್ಲಿಸುವುದು. ಎಲ್ಲರೂ ಸೇವಿಸಬಹುದು. ಡಬ್ಬಿ 1ಕ್ಕೆ ಕ್ರಯ ರೂ. 1–8–0.

ಲಿನಿಮೆಂಟ್ ಅಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರಿ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯನ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ, ವ್ಯಾಯಾಮ ಕಸರತ್ತಿನಿಂದಲೂ, ಯೋಗಿಗಳು ಕೂಡುತ್ತಿರುವಂತೆ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ವಿದ್ಯಾಭ್ಯಾಸ ಆಪದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ದುರ್ಬಲವಾಗುವುದರಿಂದ ಪುರುಷತ್ವವು ದುರ್ಬಲವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ)ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ಶರೀರಕ್ಕೆ ತಗಲಿರುವ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಸ್ತ್ರೀಯ ಸಮರ್ಥರಾದಾಗ ರತಿ ಪುರುಷ ಶಕ್ತಿ ಇಲ್ಲದೆ ಬಿದ್ದದ್ದರಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲಿಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ. ಈ ಎಣ್ಣೆಯನ್ನು ಪುರುಷತ್ವದ ಮೇಲೆ 4 ದಿನಗಳವರೆಗೆ ಹಚ್ಚುವದರಿಂದ ಗುಣವಾಗುವುದು. ಮತ್ತು ಲಿಂಗವು ದುರ್ಬಲವಾಗಿದ್ದರೂ ದೃಢವಾಗುವುದು. ಉಪಯೋಗಿಸುವ ವಿಧ ಬಾಟ್ಲಿ ಜೊತೆಯಲ್ಲಿದೆ.

ಕ್ರಯ ಸೀಸೆ 1ಕ್ಕೆ ರೂ. 1–4–0

ಟಿ. ಆರ್. ರಾಯಲ್ ಕಂಪನಿ,

3 ಕೃಷ್ಣಪ್ಪ ನಾಯಕ ಅಗ್ರಹಾರ ಬೀದಿ,

52–3 ಜಿ. ಟಿ. ಮದ್ರಾಸು

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ

ಹೊಂದಿದ

ಕರ್ಕಕಂಪನಿ ಯವರ

ಜ್ವರದ ಗುಳಿಗೆಗಳು.

ಚಳಿಜ್ವರ, ಕಾಲಾಂತರ ಜ್ವರ, ಬಿಸಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ, ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,

(52–3) ಮತ್ತು ಕಂಪನಿ,

ಗಿರಗಾಂವ, ಮುಂಬಯಿ,

ಕೊಡಗಿನಲ್ಲಿ ಪ್ಲೇಗು.

ಕೊಡಗಿನ ಅನೇಕ ಭಾಗಗಳಲ್ಲಿ ಪ್ಲೇಗು ರೋಗವು ಆಗಾಗ್ಗೆ ಹರಡುತ್ತಿರುವುದರಿಂದ ಈ ಮಹಾ ಮಾರಿಯನ್ನು ನಿರ್ಮೂಲ ಮಾಡಲು ತಕ್ಕ ವ್ಯವಸ್ಥೆಯನ್ನು ಮಾಡಬೇಕಾಗಿದೆ ಯೆಂಬುದು ನಿಷಿದವಾಗಿರುವುದು.

ಜನ ನಿಬಿಡವಾಗಿದ್ದು ಅಶುಚಿಯಾಗಿರುವ ಪೇಟೆಗಳಲ್ಲಿ ಈ ಅಂಟು ರೋಗವು ಹರಡುವುದಲ್ಲದೆ ಚಿಕ್ಕಾಡುಗಳನ್ನು ಸಾಗಿಸುವಂಥ ಬಿಸಾಡುಗಳ ರಾಶಿಗಳೂ, ಇಲಿಗಳ ನಾಶಕ್ಕೆ ಮಾಡುವ ಬಗೆ ಪ್ರಯತ್ನ ವಿರಳ ಇರುವುದೂ ಈ ರೋಗವು ಹರಡುವುದಕ್ಕೆ ಸಹಾಯಕಗಳಾಗಿವೆ. ಪಟ್ಟಣಗಳ ಬೀದಿಗಳಲ್ಲಿ ಪ್ಲೇಗು ರೋಗವು ಹರಡುವುದು, ಒಂದಿಗಳ ಮೂಲಕವೂ, ಇತರ ಸರಕುಗಳ ಮೂಲಕವೂ, ಮನುಷ್ಯರಿಂದಲೂ, ಇಲಿಗಳಿಂದಲೂ ಪ್ರಸಾರವಾಗುವುದು. ಇದು ಶರೀರದ ಸಂಧಿ ಗ್ರಂಥಿಗಳು ಊದಿಕೊಳ್ಳುವುದರಿಂದಲೂ, ಶರೀರದ ಎಲ್ಲಾ ಅಂಗಗಳನ್ನಾ ವರಿಸುವ ವಿಷಮ ಜ್ವರದಿಂದ ಮರಣ ಸಂಭವಿಸುವ ಭಯಂಕರ ಅಪಾಯವನ್ನೊದಗಿಸುವ ವಿಷದ ಹರಡುವಿಕೆಯುಂಟಾಗಲೂ ಕೂಡಿದ ಜ್ವರವಾಗಿದೆ. ರೋಗ ಗ್ರಸ್ತವಾದ ಇಲಿಗಳ ಮೈಮೇಲಿರುವ ಒಂದು ಬಗೆಯ ಚಿಕ್ಕಾಡುಗಳಿಂದ ಈ ರೋಗವು ಪ್ರಸಾರವಾಗುವುದು. ಪ್ಲೇಗು ರೋಗಿಯನ್ನು ಕಚ್ಚಿದ ಒಂದು ಚಿಕ್ಕಾಡು ಆ ರೋಗವನ್ನು ಇನ್ನೊಬ್ಬನಲ್ಲಿಗೂ ಒಯ್ಯುವುದು. ಇದುವರೆಗೆ ಕೊಡಗಿನಲ್ಲಿ ಆಯುರ್ವೇದ, ವೈದ್ಯ ಶಾಸ್ತ್ರ ಪ್ರಪಂಚದಲ್ಲಿ ಪ್ರತ್ಯಕ್ಷ ಸ್ವರೂಪಿಯಾದ, 'ಕೋವೆ ಪ್ಲೇಗು' ಎಂಬ ಇನ್ನೊಂದು ಬಗೆಯ ಪ್ಲೇಗು ರೋಗವು ಇರುವುದು. ಈ ರೋಗವನ್ನು ಹರಡುವುದಕ್ಕೆ ಬಿಟ್ಟಲ್ಲಿ ಅನಂತರ ಒದಗಬಹುದಾದ ಭಯಂಕರ ವಿಪತ್ತನ್ನು ಚಿಂತಿಸುವುದೂ ಕೂಡ ಅಸಾಧ್ಯವಾಗುವುದು.

ಆದುದರಿಂದ ಈಗ ಹರಡಿರುವ ಈ ರೋಗವನ್ನು ನಿರ್ಮೂಲ ಮಾಡುವುದರ ಸಲುವಾಗಿ ಕೊಡಗಿನ ಎಲ್ಲಾ ನಿವಾಸಿಗಳ ಸಹಕಾರವೂ ಅತ್ಯಗತ್ಯವಾಗಿರುವುದೆಂಬುದು ವಿದಿತವಾಗಿರುವುದು. ಕೊಡಗು ಪ್ಲೇಗ್ ರೆಗ್ಯುಲೇಶನಿನಲ್ಲಿ ಇಂಥಾ ಪರಿಸ್ಥಿತಿಯನ್ನು ಕೊನೆಗಾಣಿಸಲು ಕಮಿಶನರವರಿಗೆ ವಿಶಾಲವಾದ ಅಧಿಕಾರವು ಕೊಡಲ್ಪಟ್ಟಿರುವುದು ಮತ್ತು ಅಂಥಾ ಅಧಿಕಾರವನ್ನು ಅವಶ್ಯ ಬಿದ್ದಲ್ಲಿ ಕೊನೆಯ ವರೆಗೂ ಸಾಧಿಸಲು ಅವರು ಇಚ್ಛಿಸುವರು. ಈ ಪ್ಲೇಗು ರೆಗ್ಯುಲೇಶನ್ ಮೇರೆ ಹೊರಡಿಸಿದ ಹುಕುಮುಗಳ ಉಲ್ಲಂಘನೆಯಾಗಲೀ ಅಥವಾ ರೆಗ್ಯುಲೇಶನ್‌ಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದಾಗಲೀ ಇಂಡಿಯನ್ ಪಿನಲ್ ಕೋಡಿನ 188ನೇ ಸೆಕ್ಷನಿನ ಪ್ರಕಾರ ಅಪರಾಧವೆನಿಸುವುದು. ಕೊಡಗಿನ ಜನರೆಲ್ಲರ ಸ್ನೇಹ ಪೈಶಾಚ್ಯವೂ, ವಿವೇಕವೂ ಆ ಕಾಲ ಪ್ರಕಾರ ವ್ಯವಹಾರ ನಡೆಸುವ ಅವಕಾಶವನ್ನುಂಟು ಮಾಡಲಾರರೆಂದು ಕಮಿಶನರ್‌ರವರು ನಂಬಿರುವರು. ಸರ್ವರ ಮನಃಪೂರ್ವಕ ಸಹಕಾರವೂ ಮತ್ತು ತಾತ್ಕಾಲಿಕ ಅನಾನುಕೂಲಗಳ ಉಪೇಕ್ಷೆಯೂ ಇದರ ಜಯ ಚಿಹ್ನೆಗಳಾಗಿರುವುದು.

ಈ ಕೆಳಗೆ ಕೊಟ್ಟಿರುವ ಸೂಚನೆಗಳು ಅತ್ಯಂತ ಪ್ರಾಮುಖ್ಯವಾದುವುಗಳಲ್ಲದೆ ಸ್ವಭಾವತಃ ಮತ್ತು ಅಕ್ಷರಶಃ ಅವುಗಳನ್ನು ಪಾಲಿಸಬೇಕು.

I ಇಲಿಗಳು—ನೀವು ಕಾಣುವ ಪ್ರತಿಯೊಂದು ಇಲಿಯನ್ನೂ ಕೊಲ್ಲಬೇಕು. ಸತ್ತ ಇಲಿಯನ್ನು ಕಂಡ ಕೂಡಲೆ ಸರಕಾರಕ್ಕೆ ತಿಳಿಸಬೇಕು.

II ರೋಗದ ಸೋಂಕು—ಪ್ಲೇಗು ರೋಗವು ಅಂಟಿದ ವಿಷಯವನ್ನು ರಿಪೋರ್ಟ್ ಮಾಡುವುದು. ತಪ್ಪಿ ಮಾಡಿದಲ್ಲಿ ಅದು ಅಪರಾಧವೆನಿಸುವುದಲ್ಲದೆ ಇನ್ನಿತರರ ಮರಣಕ್ಕೂ ಕಾರಣವಾಗಬಹುದು.

III. ಪ್ರತ್ಯೇಕವಾಗಿಡುವುದು—ತಕ್ಷಣವೇ ಪ್ಲೇಗುರೋಗಿಯನ್ನು ಪ್ರತ್ಯೇಕವಾಗಿರಿಸಬೇಕು. ಇಲ್ಲವೇ ಪ್ರತ್ಯೇಕವಾಗಿರಲು ಅವಕಾಶ ಕೊಡಬೇಕು. ಇದಕ್ಕೆ ತಪ್ಪಿದರೆ ಅಥವಾ ತಡ ಮಾಡಿದರೆ ರೋಗಿಯು ಸಾಯುವುದಲ್ಲದೆ ಇನ್ನಿತರರ ಮರಣಕ್ಕೂ ಕಾರಣವಾಗಬಹುದು.

IV ಇನಾಕ್ಯುಲೇಶನ್—ಶೀಘ್ರದಲ್ಲಿಯೇ ಇನಾಕ್ಯುಲೇಶನ್ ಮಾಡಿಸಿಕೊಂಡು ನಿಮ್ಮ ಪರಿಚಯವುಳ್ಳ ಪ್ರತಿಯೊಬ್ಬರೂ ಹಾಗೆಯೇ ಮಾಡುವಂತೆ ಪ್ರೋತ್ಸಾಹಿಸಬೇಕು.

V ಅಂಟು ರೋಗ ನಿವಾರಣೆ—ಸೂರ್ಯ ತಾಪದಿಂದ ಚಿಕ್ಕಾಡುಗಳು ನಾಶವಾಗುವುದರಿಂದ ನಿಮ್ಮ ಮನೆಯ ಮಾಡುಗಳನ್ನು ತೆರೆದಿರಿಸಬೇಕು. ಎಲ್ಲಾ ಧಾನ್ಯ, ಬಟ್ಟೆ ಮತ್ತು ಚಿಕ್ಕಾಡುಗಳು ನೆಲಸುವ ಇತರ ಜಿನಸು ಸಾಮಾನುಗಳು, ಇವುಗಳನ್ನೆಲ್ಲಾ ಕಡಿಮೆ ಪಕ್ಷ ಆರು ಗಂಟೆಗಳ ಕಾಲವಾದರೂ ಬಿಸಿಲಿನಲ್ಲಿರಿಸಬೇಕು. ಮನೆಯನ್ನು ಬಿಟ್ಟು ಅಲ್ಲಿಗೆ ಪುನಃ ಹೋಗಲು ಅದು ಸುರಕ್ಷಿತವಾಗಿರುವುದೆಂದು ಅಧಿಕಾರಿಗಳು ಹೇಳುವ ವರೆಗೂ ಆ ಮನೆಗೆ ಹಿಂದಿರುಗಬಾರದು

VI. ವ್ಯಾಪಾರ—ಪ್ಲೇಗಿನ ಅಪ್ಪಣೆ ಚೀಟು ಇಲ್ಲದ ಯಾವ ಅಂಗಡಿ, ಮಂಡಿ ಅಥವಾ ಬಜಾರುಗಳಲ್ಲಿ ವ್ಯಾಪಾರ ಮಾಡಬಾರದು.

ಅಧಿಕಾರಿಗಳು ಮಾಡತಕ್ಕ ಕಾರ್ಯಗಳು ಎಷ್ಟೋ ಅನಾನುಕೂಲಗಳನ್ನುಂಟುಮಾಡಿದರೂ ಅದು ನಿಮ್ಮ ಜೀವ ರಕ್ಷಣಾರ್ಥವಾಗಿರುವದೆಂಬುದನ್ನು ಗಮನದಲ್ಲಿರಿಸಬೇಕು. ಅವರಿಗೆ ನೀವು ಸಹಾಯವನ್ನು ನೀಡಿ, ಅವರು ನಿಮಗೂ ಸಹಾಯ ಮಾಡುವರು. ತಾತ್ಕಾಲಿಕವಾಗಿ ಮನೆ ಇತ್ಯಾದಿಗಳನ್ನು ಕಟ್ಟಿಕೊಳ್ಳಲು ಸಾಮಾನುಗಳನ್ನೊದಗಿಸುವಂತೆ ಹುಕುಮುಗಳನ್ನು ಕೊಡಲಾಗಿದೆ ಮತ್ತು ಸರ್ವ ವಿಧದಲ್ಲಿಯೂ ಉತ್ತಾಸೆ ಕೊಡುವುದು ಉದ್ಯೋಗಸ್ಥರ ಕರ್ತವ್ಯವಾಗಿರುವುದು. ಅನಾವಶ್ಯಕವಾದ ಯಾವ ಬಗೆಯ ತೊಂದರೆಯನ್ನು ಉಂಟುಮಾಡುವುದಿಲ್ಲವಾದರೂ ಸ್ವಂತ ಸುಖದ ಅಥವಾ ಅನುಕೂಲದ ಸ್ಮೃತಿ ಪ್ರಯತ್ನವನ್ನು ಪ್ಲೇಗು ನಿವಾರಣೆಯು ಒಂದೇ ಒಂದು ಕರ್ತವ್ಯಕ್ಕೆ ಗೌಣವಾಗಿರಿಸಬೇಕು. ಕಮಿಶನರ್‌ರವರು ಸಿವಿಲ್‌ಸರ್ಜನ್‌ರವರು ಮತ್ತು ಇತರ ಉದ್ಯೋಗಸ್ಥರು ಕೊಡುವ ಹುಕುಮುಗಳನ್ನು ಯಾವ ಬಗೆಯಿಂದಲೂ ಎದುರಿಸದೆ ಆಲೋಚನೆ ಮಾಡದೆ ನಡೆಯತಕ್ಕದ್ದು. ಉತ್ಸಾಹಭರಿತವಾದ ಸಹಕಾರವು ಒದಗಿದಪಕ್ಷ ಶೀಘ್ರದಲ್ಲಿಯೇ ಈ ರೋಗವೂ ನಾಶವಾಗುವುದು.

ಮಡಿಕೇರಿ, ಜೆ. ಎಸ್. ಬೋಸ್‌ಮನ್,

30–9–193 ನೇ (ಕಮಿಶನರ್)

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಬಂಗಾರಕ್ಕೆ ಸಮಾನವಾದ ನೀಲಿಯ ಬಂಗಾರದಿಂದ ಕಟ್ಟಿದ ಕಟ್ಟಿರುವುದು. ಇದು

ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸಮನಾಗಿರುವುದು. ಇದರ ಬಣ್ಣವು ಕಡೆಯತನಕ ಬಂಗಾರದ ಗೀಲೀಟು ಕೊಟ್ಟಿರುವುದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರು ಬಹಳ ಉತ್ಸಾಹದಿಂದ ಉಪಯೋಗಿಸುತ್ತಿರುವರು. ಇದನ್ನು ಅನೇಕರು ಮದ್ರಾಸಿನಲ್ಲಿಯೇ ಬಹಳ ಪ್ರಿಯವಾಗಿ ಹಾಕಿಕೊಳ್ಳುವುದರಿಂದ ನಾವು ಇದನ್ನು ಹೊಸ ಊರಿನ ಮಹನೀಯರುಗಳಿಗೆ ಉಪಯೋಗವಾಗ ಬೇಕು ಇಲ್ಲಿ ಪ್ರಚುರಿಸುತ್ತೇವೆ. 7 ಕಲ್ಲಿನ ಒಳಪು ಓಲೆ ಜೊತೆ 1ಕ್ಕೆ ರೂ. 1–8–0 7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ ರೂ. 1—12—0.

ಎಕ್ಸ್‌ಪ್ರೆಸ್ ಟ್ರೇಡಿಂಗ್ ಕಂಪೆನಿ

52—3 19, ಬೀಟ ಮದರಾಸು.

FRASER'S

FOOTWEAR

have

the HALLMARK of

distinctive finish,

upto-date style,

fine workmanship

best materials.

AMAZING VALUE FOR LOW PRICE

HARDWEAR BOOTS & SHOES,

for estate and monsoon a speciality.

G. W. FRASER & CO., CALICUT.

12–5

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳ ಲಿಸ್ಟ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26–3 210, Abdulrehman Street, BOMBAY 3.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣಗಳನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಬಸಂಡ ಪೂವಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಮಾದಾಪುರ & ಶನಿವಾರಸಂತೆ—ಮೆ. ಕೆ ಪೂವಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೂವಯ್ಯನವರು,
ಸೋಮವಾರಪೇಟೆ—ಮೆ. ಕೆ. ಪೊಗಪ್ಪನವರು
ನಾಪೋಕ್ಲು—ಮೆ. ಬೆಳ್ಯಪಂಡ ಎ.ಬಿ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾವ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಶೃಂಗಾರಮಯ ಪ್ರಕಟ! ಮುದ್ದಾದ ಮುದ್ರಣ!!

ಸ್ತ್ರೀ ಪುರುಷರು ಪ್ರೀತಿಸುವ 32 ಫೋಟೋಗಳು ಕೂಡಿದ

ಮದನ ರತಿ ಕಾಮಶಾಸ್ತ್ರ

ಎಂಬ ಶೃಂಗಾರ ರಹಸ್ಯಗಳು ರೂ. 1—0—0.

ಈ ಪುಸ್ತಕವು ಫ್ರೆಂಚ್, ಪರ್ಷಿಯನ್ ಭಾಷೆಗಳಲ್ಲಿ ಗುಪ್ತವಾಗಿತ್ತು. ಅದನ್ನು ಕನ್ನಡ ಭಾಷೆಯಲ್ಲಿ ಬರೆದು ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ

ವಿಲಾಸಗಳು, ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಇಂಗ್ಲಿಷ್, ಫ್ರೆಂಚ್, ಅಮೇರಿಕನ್, ಜರ್ಮನ್, ಜಾವಾ, ಮಲಯ, ಸಯಾಂ, ಜಪಾನ್, ಬರ್ಮಾ, ಇಂಡಿಯನ್ ಮೊದಲಾದ ದೇಶದ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ದೇಹ ಸೌಂದರ್ಯದ ಮರ್ಮಗಳು ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ ಮುಂತಾದ ಎಲ್ಲಾ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಇದು ವರೆಗೂ ಕನ್ನಡ ಭಾಷೆಯಲ್ಲಿ ಇಷ್ಟು ಬಹಿರಂಗವಾಗಿ ಪ್ರಕಟಿಸಲಿಲ್ಲ. ಓದಿ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸು ಬಾರದು. ಕ್ರಮ 32 ಫೋಟೋಗಳ ಸಹಿತವಿರುವ ಪುಸ್ತಕ ರೂ. 1—0—0. ವಿ. ಪಿ. ಪೋಸ್ಟು ಖರ್ಚು 5 ಆಣೆ. ಪ್ರತ್ಯೇಕ ಮುಂಗಡ ರೂ 1 ಕಳುಹಿಸುವವರಿಗೆ ಪೋಸ್ಟು ಖರ್ಚು ಇಲ್ಲದೆ (ಫ್ರೀ) ಕಳುಹಿಸುವೆವು.

ದೇವಕರ್ ಅಂಡ್ ಕಂಪೆನಿ,

52—3] ನಂಬುಲಿಯರ್ ಬೀದಿ, ಪಿ. ಟಿ. ಮದ್ರಾಸು,

SHIROMANI NARAYANACHARYA
Choukhamba Benares City.

ಶಾಸ್ತ್ರಗಳೇ, ಪುರಾಣಗಳು ಆರೋಗ್ಯವೇ ಜೀವದ ಉನ್ನತಿ ಎಂದು ಸಾರುತ್ತಿವೆ. ಈ ಶರೀರದ ಆರೋಗ್ಯವೇ ಜೀವದ ಆರೋಗ್ಯ. ಅದಕ್ಕೆ ನಾವು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡತಕ್ಕದ್ದು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಶೀಘ್ರವೃದ್ಧಿ ಸಂಪತ್ತು, ಶರೀರ ಇವುಗಳೆಲ್ಲಾ ಆಗುತ್ತವೆ. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುತ್ತದೆ? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅದ್ದೆ ಪ್ರಮಾಣದ ಕಂಠಸರ 1ಕ್ಕೆ ಆಣೆ 10ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 30ರಿಂದ ರೂ. 50ರ ವರೆಗೆ ಮತ್ತು 2—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಪಟ್ಟಿಗೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪಿಕ್ಚರು ಕೆಟಲಾಗಿನ ಒಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ,

52—10 ಚೌಖಂಬಾ, ಬೆನಾರಸ್ (ಕಾಶೀ.)

ವಜ್ರದ ಉಂಗುರಗಳು ಒಕ್ಕೆ ೧೨ ಆಣೆ.

ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಲ್ಪಟ್ಟಿವೆ. ಇದರ ಒಳ್ಳಾಪು ಯಾವಾಗಲೂ ಕೆಡದಂತೆ ಎಲೆಕ್ಟ್ರೋ ಪ್ಲೇಟ್ ಮಾಡಿ ಒಪ್ಪ ಕೊಟ್ಟಿದೆ. 1ಕ್ಕೆ 12 ಆಣೆ

3 ಉಂಗುರಗಳಿಗೆ 1 ಟೈಂಪೀಸನ್ನೂ 6 ಉಂಗುರಗಳಿಗೆ 1 ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು. ಉಂಗುರಗಳಲ್ಲಿ ಬೇಕಾದ ಹೆಸರನ್ನ ಕೆತ್ತಿ ಕೊಡುತ್ತೇವೆ.

ವಿಳಾಸ—

Mehta & Co.
Periyanayakaran Street,
G. T. Madras.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ

ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ, ಶಾಸ್ತ್ರ ಮತ್ತು ಪಾಶ್ಚಿಮಾತ್ಯ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಮೆಡಲುಗಳನ್ನು ಪಡೆದು ಸ್ವದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ಪದಾರ್ಥಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣುಗಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ. ಪೋಸ್ಟ್ ವಿದ್ಯಾಗಿರಿ ಜಿಲ್ಲಾ (ಬೆಳಗಾವ್.)
ಕೊಡಗಿನ ಏಜಂಟರು—ಕೆ ಶಿವಾಜಿರಾವ್ & ಬ್ರದರ್ಸ್, ಮಡಿಕೇರಿ.
ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
52—6 ಎ. ಎಸ್. ಹುಚ್ಚಯ್ಯ, ಮರ್ಚಂಟ್, ಗೋಣಿಕೊಪ್ಪಲು.



"ಖಾದಿ ವಸ್ತ್ರಗಳನ್ನು ಒಗೆಯಲಿಕ್ಕಾಗಿ 501 ಮಾರ್ಕಿನ ಸಾಬೂನನ್ನು ಉಪಯೋಗಿಸಿರುವೆಯೊ?"

"ಅದು ಖಾದಿ ವಸ್ತ್ರವನ್ನು ಅತೀ ಸ್ವಚ್ಛ ಮತ್ತು ಹೊಸತಾಗಿ ಮಾಡುವದಾಗಿ ಕಂಡು ಬಂದಿದೆ."

ಹೆಚ್ಚು ಅದಿಮೆ, ವಸ್ತ್ರ ಬಾಳಿಕೆ,
ಕ್ರಯ ಅತೀ ಕಡಮೆ!

501 Soap

ಟಾಟಾ ಕೋ!
ಮೊದಲನೇ ಮನೆಗೆ,

ಗ. ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ಕಂಡು.

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ಟಾಟಾಪುರಂ

52—23. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಪಟಗಳ ಸಹಿತ,
ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯ

ಎಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನೀ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ 300 ಪೇಜುಗಳು ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು ಪುರುಷರು

ಸ್ತ್ರೀಯರೊಡನೆ ನಡೆದುಕೊಳ್ಳಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳ ಸಂಘರ್ಷಣದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ ದುಷ್ಟ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ, ವಿಧ ಗುಪ್ತ ವ್ಯಾಧಿಗಳ ಚಿಕಿತ್ಸೆ ಶಯನಗೃಹದ ರಹಸ್ಯ ನಿಯಮಗಳು ಮಾನವ ಶರೀರದ ಮರ್ಮಗಳ ವಿವರ ನಪುಂಸಕತ್ವಕ್ಕೆ ಚಿಕಿತ್ಸೆ ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಚಿತ್ರಗಳ ಸಹಿತ ಪ್ರಿಂಟಾಗಿದೆ. ಬೆಲೆ ಪುಸ್ತಕ ಒಂದಕ್ಕೆ ರೂ. 1—0—0.

ವಿಳಾಸ—Mehta & Co.,
Periyanayakaran Street,
12—10 G. T. Madras

ಅಬಿಸೀನಿಯನರು ಕೈಬಿಟ್ಟ ಅದುವಾ.

ಇಟಾಲಿ ಪಟ್ಟಣವು ಬಿದ್ದ ಮೇಲೆ—ಅಡಿಸ್ ಅಬಾಬ ರೈಲ್ವೆ ಆಕ್ರಮಿಸಲ್ಪಡುವುದರಿಂದ ಆ ಪಟ್ಟಣವನ್ನು 50,000 ಅಬಿಸೀನಿಯನರು ಕಾಯುತ್ತಿರುವರು. ಅದೋವ ಮತ್ತು ಅದಿಗ್ರಾಟಿನ ಜನರು ಮುಂದಾಗಿ ಪಟ್ಟಣ ಬಿಟ್ಟು ಹೊರಗೆ ಹೋಗಿದ್ದುದರಿಂದ ಬಾಂಬುಗಳಿಂದ ಹೆಚ್ಚಿನ ಪ್ರಾಣ ನಷ್ಟವಾಗಲಿಲ್ಲ.

ಇಟಲಿಯನರು ಧಾಳಿ ಮಾಡಿದ್ದನ್ನು ಒಪ್ಪಿಕೊಂಡರು.

ಇಟಲಿಯವರು ಅಬಿಸೀನಿಯದ ಮೇಲೆ ಧಾಳಿ ನಡೆಸಿದರೆಂದೂ, ಅವನ್ನು ನೋಡೋಣವೆಂದಿನಿಂದ ಪ್ರಾರಂಭಿಸಿದರೆಂದೂ ಒಪ್ಪಿಕೊಂಡರು.

ಅಬಿಸೀನಿಯಕ್ಕೆ ಜಪಾನ್ ಅಧಿಕಾರಿಗಳು

ಐದು ನೂರು ಜಪಾನ್ ಮಿಲಿಟರಿ ಅಧಿಕಾರಿಗಳು ಅಬಿಸೀನಿಯಕ್ಕೆ ಬರುತ್ತಿದ್ದಾರೆಂಬ ವಾರ್ತೆಯು ನಿಜವಲ್ಲವೆಂದು ಹೇಳಲಾಗಿದೆ.

ಐರ್ಲೆಂಡಿನ ಧೋರಣೆ

ಇಟಲಿ—ಅಬಿಸೀನಿಯ ಯುದ್ಧದ ಸಂಬಂಧದ ಐರ್ಲೆಂಡಿನ ಸರ್ಕಾರವು ಜನಾಂಗಗಳ ಕೂಟದ ತೀರ್ಮಾನವನ್ನು ನಡೆಸಲು ತಯಾರಾಗಿದೆಯೆಂದೂ. ಯುದ್ಧದಲ್ಲಿ ಭಾಗ ತೆಗೆದುಕೊಳ್ಳದೇ ಇದ್ದರೂ ಅಲ್ಲಿಯ ವಾಲಂಟಿಯರ್ ನಷ್ಟಕ್ಕೆ ಇದಿರೇ ಅಲ್ಲದೆ ಅಲ್ಲಿಯ ಮುಖ್ಯಾಧಿಕಾರಿಯಾದ ಮಿ. ಡಿ ವೇಲರಾರವರು ಹೇಳಿದ.

ಲೀಗ್ ಕಮಿಟಿಯ ವರದಿ.

ಯುದ್ಧವನ್ನು ಯಾರು ಪ್ರಾರಂಭಿಸಿದ್ದು ಎಂಬುದನ್ನು ಕಂಡುಹಿಡಿಯಲಿಕ್ಕಾಗಿ ಲೀಗ್ ಕೌನ್ಸಿಲಿನವರು ಆರು ಮೆಂಬರುಗಳ ಒಂದು ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯ ವರದಿಯಲ್ಲಿ ಇಟಲಿಯವರು ಲೀಗಿನ ನಿಬಂಧನೆ ಮುರಿದ ತಪ್ಪಿತಸ್ಥರೆಂದು ಹೇಳಲಾಗಿದೆ.

ಅಕ್ಟೋಬರು ತಾ. ೬.

ಅದೋವ ಮತ್ತು ಅದಿಗ್ರಾಟುಗಳ ಸ್ವಾಧೀನ

ಅದೋವಾವನ್ನು ಸ್ವಾಧೀನಪಡಿಸಿಕೊಳ್ಳುವ ಇಟಾಲಿಯನ್ ಸೈನ್ಯಗಳು ಇಟಲಿಯದಂಡ ವಿಮಾನ, ಫಿರಂಗಿ, 'ಟ್ಯಾಂಕ್' ಮುಂತಾದವುಗಳ ಸಹಾಯದಿಂದ ಮುಂದೆ ಹೋದರು. ಇಟಲಿಯನರು ಅದೋವನ್ನು ಸ್ವಾಧೀನಪಡಿಸಿಕೊಂಡರು. ಅದಿಗ್ರಾಟ್ ಪಟ್ಟಣವನ್ನು ಇಟಲಿ ಸೈನಿಕರು ಗೆದ್ದಿರುವರು. ಈ ವಾರ್ತೆಗಳು ರೋಮ್ ಪಟ್ಟಣದಲ್ಲಿ ಇಟಲಿಯವರನ್ನು ಸಂತೋಷ ಸಾಗರದಲ್ಲಿ ಮುಳುಗಿಸಿದವು.

ಇಟಲಿಯವರ ಮುಂದಿನ ವಿಚಾರ.

ಇಟಲಿಯವರ ಒಂದು ಸೈನ್ಯವು ಅದೋವಾ, ಅದಿಗ್ರಾಟ್, ಅಕೂಸ ಪಟ್ಟಣಗಳ ಲೈನಿನಲ್ಲಿ ಸಜ್ಜಿತವಾಗುತ್ತಿದೆ. ಇಟಲಿಯೊಡನೆ ಇನ್ನೊಂದು ಸೈನ್ಯವು ಜಿಬೂಟಿ—ಅಡಿಸ್ ಅಬಾಬ ರೈಲ್ವೆಯನ್ನು ಹಿಡಿಯಲು ಮುಂದುವರಿಯುತ್ತಿದೆ. ಇದಕ್ಕೆ ಒಟ್ಟು ಉದ್ದವಾದ 109 ಮೈಲಿ ಮರುಭೂಮಿಯನ್ನು ದಾಟಬೇಕಾಗಿದೆ. ಮೂರನೇ ದಳವು ಸೋಮಾಲಿಲ್ಯಾಂಡಿನಿಂದ ಈಶಾನ್ಯ ದಿಕ್ಕಿಗೆ ಮುಂದುವರಿಯುತ್ತಾ, ನೀರಿನ ಬಾವಿಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾ ಇದೆ

ಅಮೇರಿಕಾದ ಅಧ್ಯಕ್ಷನ ಪ್ರಕಟಣೆ.

'ನ್ಯೂಟ್ರಾಲಿಟಿ' ಆಕ್ಟಿನ ಮೇರೆ ಯುದ್ಧ ಮಾಡುತ್ತಿರುವ ಇಟಲಿ ಮತ್ತು ಅಬಿಸೀನಿಯ ದೇಶಗಳಿಗೆ ಯುದ್ಧದ ಸಾಮಗ್ರಿಗಳನ್ನು ಕಳುಹಿಸಲಾಗುವುದಿಲ್ಲವೆಂದು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾದ ಮಿ. ರೂಸ್‌ವೆಲ್ಟರು ಪ್ರಕಟಿಸಿರುವರು. ಈ ತೀರ್ಮಾನವು ಬ್ರಿಟಿಷರಿಗೂ, ಲೀಗಿನವರಿಗೂ ತೃಪ್ತಿಯನ್ನುಂಟುಮಾಡಿದೆ.

ಅಕ್ಟೋಬರ್ ತಾರೀಕು 7.

ಅದೋವಾ ಮತ್ತು ಅದಿಗ್ರಾಟ್ ಇಟಲಿಯವರ ಸ್ವಾಧೀನವಾಗಿವೆಯೆಂದೂ, ಆದರೆ ಅದೋವಾವನ್ನು ಅಬಿಸೀನಿಯನರು ಆ ಮೊದಲು ಬಿಟ್ಟಿದ್ದುದರಿಂದ ಇಟಲಿಯವರಿಗೆ ತಡೆಯೇನೂ ಇಂಲಿಲ್ಲವೆಂದೂ ಅಡಿಸ್ ಅಬಾಬಾದಲ್ಲಿ ಪ್ರಕಟವಾಗಿದೆ.

ಅದೋವಾ ಲೈನಿನಲ್ಲಿ ತಾತ್ಕಾಲ ಯುದ್ಧ ನಿಂತಿದೆ. ಎರಡು ಕಡೆಯವರೂ ಸೈನ್ಯ ಶೇಖರಿಸುತ್ತಿರುವರು, ಸಾವಿರಾರು ಸಾವಿರ ಅಬಿಸೀನಿಯನರು ಈಗ ಯುದ್ಧರಂಗಕ್ಕೆ ಹೋಗುತ್ತಿರುವರು. ಅದೋವಾದಲ್ಲಿ 40 ಹೆಂಗಸರು 3? ಮಕ್ಕಳು ಬಾಂಬುಗಳಿಗೆ ತುತ್ತಾದರು.

ಅಬಿಸೀನಿಯನರು ವಾಲ್‌ವಾಲನ್ನು ಹಿಡಿದರು.

ಒಗಡೇನ್ ಪ್ರದೇಶದಲ್ಲಿ 'ಗೈರಿಲ್ಲಾ' ಯುದ್ಧ ನಡೆಯುತ್ತಿದೆ. ಎರಡು ಕಡೆಗಳ ಸೋಲು ಗೆಲ್ಲುಗಳ ಸುದ್ದಿ ಇದೆ. ವಾಲ್‌ವಾಲನ್ನು ಅಬಿಸೀನಿಯನರು [illegible] ರುವರೆಂಬ ವರ್ತಮಾನ.

ಅಬಿಸೀನಿಯನರ ಉಪಾಯ.

ಇಟಲಿ ಸೈನ್ಯವು ಅದೋವಾಕ್ಕೆ ಬರುತ್ತಿದ್ದಾಗ್ಯೆ ಅಬಿಸೀನಿಯನರು ದಾರಿಯಲ್ಲಿ ಆಳವಾದ ಗುಂಡಿಗಳ್ನು ತೋಡಿ ಮರ, ಸೊಪ್ಪು ಮುಂತಾದುವನ್ನು ಮುಚ್ಚಿ, ಇಟಲಿಯವರ ನಾಲ್ಕು ಟ್ಯಾಂಕ್ (ಫಿರಂಗಿ ಕಾರ್) ಗಳನ್ನು ಗುಂಡಿಗೆ ಬೀಳಿಸಿದರು. ಅದರಲ್ಲಿದ್ದವರು ಸತ್ತರು.

ಅಬಿಸೀನಿಯದಲ್ಲಿ ಇಟಲಿಯ ಸೈನ್ಯ.

ಅಬಿಸೀನಿಯದಲ್ಲಿ ಇಟಲಿಯ 200 ಸಾವಿರ ಸೈನಿಕರೂ, 30 ಸಾವಿರ ಕೆಲಸಗಾರರೂ (ಮುಖ್ಯವಾಗಿ ರಸ್ತೆ ಕೆಲಸದವರು), 350 ವಿಮಾನಗಳೂ ಮತ್ತು 250 ಟ್ಯಾಂಕ್‌ಗಳೂ ಇವೆ. ಮೂಕಸ್ಥಾಲು ಪಾಲು ಸೈನ್ಯವು ಇಂನ್ನೂ ಇಟಲಿಯಲ್ಲಿದೆ. ವರ್ಷದ ಆಖ್ಯದಲ್ಲಿ ವಿಮಾನಗಳ ಸಂಖ್ಯೆ 800ಕ್ಕೆ ಏರುವುದಂತೆ.

ಮುಸೊಲಿನಿಯವರು ಅದೋವಾಕ್ಕೆ?

ಮುಸೊಲಿನಿ ಯವರು—ಇಟಲಿಯವರು ಗೆದ್ದಿರುವ ಅದೋವಾಕ್ಕೆ ವಿಮಾನದಲ್ಲಿ ಹೋಗುವರೆಂದು ಸುದ್ದಿ ಹುಟ್ಟಿತ್ತು. ಆದರೆ ಅವರು ಈಗ ಹೋಗುವುದಿಲ್ಲವೆಂದೂ, ಅದಕ್ಕೆ ಸಂಬಂಧಿಸಿ ಕಾಲ ಕಾಯುತ್ತಿರುವರೆಂದೂ ರೋಮಿನ ಪ್ರಕಟನೆ.

ಸಿಗರೇಟು ಹಂಚಿನ ಕ್ರಯ ಏರುವುದು.

ಯುದ್ಧದ ಪರಿಣಾಮವಾಗಿ ರೋಮಿನ ಮಾರ್ಕೆಟಿನಲ್ಲಿ ಸಾಮಾನುಗಳಿಗೆ ಬೆಲೆ ಏರುತ್ತಿದೆ. ವರ್ತಮಾನ ಪತ್ರಿಕೆಗಳ ಮತ್ತು ಸಿಗರೇಟುಗಳ ಕ್ರಯವನ್ನು ಹೆಚ್ಚಿಸಿದೆ. ವ್ಯಾಪಾರಿಗಳು ಸಿಗರೇಟು ಮೊದಲಾದವುಗಳನ್ನು ಅಡಗಿಸಿಡುತ್ತಿರುವರು. ಅದರ ಕ್ರಯ 100 ಪಟ್ಟು ಏರಿದೆಯೆಂದು ಅಂದಾಜು. ರಂಗೂನಿನಲ್ಲಿಯೂ, ಕೊಲೊಂಬೊದಲ್ಲಿಯೂ ಆಹಾರ ಸಾಮಗ್ರಿಗಳ ಮತ್ತು ಅಕ್ಕಿಯ ಕ್ರಯ ಏರಿದೆ.

ಇಟಲಿ ತಪ್ಪಿತಸ್ಥ.

ಜನಾಂಗಗಳ ಕೂಟದ ಕೌನ್ಸಿಲಿನವರು—ಇಟಲಿಯವರು [illegible] ಲೀಗಿನ ಧ್ಯೇಯಕ್ಕೆ ವಿರುದ್ಧವಾಗಿ ಪ್ರತಿಜ್ಞೆಗಳನ್ನು ಮುರಿದು ಯುದ್ಧ ಪ್ರಾರಂಭಿಸಿ ತಪ್ಪು ಮಾಡಿದರೆಂದು ಸರ್ವಾನುಮತದಿಂದ ತೀರ್ಮಾನಿಸಿದರು. 6 ಜನ ಕಮಿಟಿಯ ವರದಿಯನ್ನು ಒಪ್ಪಿಕೊಂಡರು. ಆ ದುರ್ದಿನದ ಲೀಗಿನ ಮೆಂಬರುಗಳಲ್ಲಿ ಇಟಲಿಯೊಂದಿಗೆ ವ್ಯಾಪಾರ ವ್ಯವಹಾರ, ಮತ್ತು ಲೇವಾದೇವಿ ಮಾಡಕೂಡದೆಂದಿ ದೆ ಈ [illegible] ಧಿಕ್ಕರಿಸಿದೆ.

ಅಕ್ಟೋಬರ್ ತಾ 8.

ಪುನಃ ಸಂಧಾನವೇ?

ಜನಾಂಗಗಳ ಇಟಲಿಯ ಮೇಲೆ ಆರ್ಥಿಕ ಬಹಿಷ್ಕಾರ ಹಾಕಿದ ನಂತರ [illegible] ಲೀಗನ್ನು ಬಿಡುವುದು ನಿಜವಾದರೂ ಮುಸ್ಸೊಲಿನಿಯವರು ಬ್ರಿಟನ್ ಮತ್ತು ಫ್ರಾನ್ಸಿನೊಂದಿಗೆ ಅಬಿಸೀನಿಯದ ವಿಷಯ ಸಂಧಾನ ನಡೆಸಲು ತಯಾರಾಗಿರುವರೆಂದು ಒಬ್ಬ ಇಟಲಿ ಮುಖಂಡರು ಹೇಳಿದ.

ಫ್ರೆಂಚ್ ಮಧ್ಯಗಾಮಿಗಳ ನಿರಾಶೆ.

ಅದೋವಾವನ್ನು ಗೆದ್ದ ಮೇಲೆ ಇಟಲಿಯವರು ಸಂಧಾನಕ್ಕೆ ಒಪ್ಪುವರೆಂದು ನಂಬಿದ್ದ ಫ್ರೆಂಚ್ ಮಧ್ಯಗಾಮಿಗಳು, ಇಟಲಿಯವರು ಅದನ್ನು ಮುತ್ತುತ್ತಿರುವುದರಿಂದ ನಿರಾಶರಾಗಿರುವರು.

ಜರ್ಮನಿಯ ನಿಲುವು.

ಲೀಗಿನ ಮೆಂಬರುಗಳು ಮಾತ್ರವಲ್ಲ ಮೆಂಬರುಗಳಲ್ಲದವರೂ ಧಾಳಿ ಮಾಡಿದವರ ಲೀಗಿನವರಲ್ಲವೂ ಅವರಿಗೆ ಎದುರು ನಿಲ್ಲಬೇಕೆಂದು ಫ್ರೆಂಚರು ಇಂಗ್ಲೆಂಡಿಗೆ ಒಡೆದ ಕರೆತು ಜರ್ಮನಿಯನ್ನು ನಿಲ್ಲಿಸಿಪ್ಪಿಸಿದೆ. ಇದು ಲೀಗಿನ ನಿಬಂಧನೆಗನುಸಾರವಲ್ಲವೆಂದು ಅವರ ಅಭಿಪ್ರಾಯ.

ಜಪಾನೂ, ಆರ್ಥಿಕ ಬಹಿಷ್ಕಾರವೂ.

ಇಟಲಿಯ ಮೇಲೆ ಹೊರಿಸುವ ಆರ್ಥಿಕ ಬಹಿಷ್ಕಾರದಲ್ಲಿ ಜಪಾನು ಭಾಗ ವಹಿಸದಿದ್ದರೂ, ಇಟಲಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವುದಿಲ್ಲವೆಂಬ ವರ್ತಮಾನ ಬಂದಿದೆ

ಅಡಿಸ್ ಅಬಾಬಾ ತಾ 8—ನಿನ್ನೆ ಅದೋವಾದ ಬಳಿ ಇಟಾಲಿಯನರು ವಿಷದ ಗಾಳಿ ಉಪಯೋಗಿಸಿದರೆಂದು ಸುದ್ದಿ ಅಬಿಸೀನಿಯದ ಸೇನಾಪತಿ ಸೆಯ್ಯೂಮ್ ಅವರು ತಮ್ಮ ಸೈನ್ಯದೊಂದಿಗೆ ಹಿಂದೆಗೆಯುತ್ತ, ಸೇನಾಪತಿ ರಾಸ್ ಕಾಸ್ಸಾರವರು 80,000 ಸೈನಿಕರೊಂದಿಗೆ ಟೆಕೆಜ್ ನದಿಯ ಬಳಿಗೂ ಇಟಲಿ ಸೈನ್ಯದ ಇಪ್ಪದಿಗಳಲ್ಲಿ ಮುಂದುವರಿಯುತ್ತಿರುವರು

ಇಟಲಿಯವರ ಇನ್ನೊಂದು ಜಯ.

ಪವಿತ್ರ ಪಟ್ಟಣವಾದ ಅಕ್ಸುಂ ಇಟಲಿಯವರ ಸ್ವಾಧೀನವಾಯಿತು.

ರಾಜಧಾನಿಯಲ್ಲಿ ಬೆಳಕು ಆರಿಸಿದರು.

ವಿಮಾನಗಳ ಬಾಂಬಿನ ಧಾಳಿಯನ್ನು ತಪ್ಪಿಸಲು ಅಬಿಸೀನಿಯದ ರಾಜಧಾನಿಯಾದ ಅಡಿಸ್ ಅಬಾಬಾದಲ್ಲಿ ರಾತ್ರಿ [illegible] ದೀಪಗಳನ್ನು, ಬೀದಿ ದೀಪಗಳನ್ನೂ ಮುಚ್ಚಬೇಕೆಂದು ಹುಕುಂ ಆಗಿದೆ.

ರಾಯಭಾರಿಗಳ ಪ್ರಯಾಣ.

ಅಡಿಸ್ ಅಬಾಬದಿಂದ ಇಟಲಿಯ ರಾಯಭಾರಿಗಳೂ, ರೋಮಿನಿಂದ ಅಬಿಸೀನಿಯದ ರಾಯಭಾರಿಗಳೂ ತಮ್ಮ ತಮ್ಮ ಊರಿಗೆ ಹೊರಟಿರುವರು.

ವರ್ತಮಾನ ಸಂಗ್ರಹ.

ಒಳದೇಶ.

ಕಾವೇರಿ ಸಂಕ್ರಮಣದ ಹಬ್ಬಕ್ಕಾಗಿ ಈ ತಾ. 16 ರಿಂದ ಮೂರು ದಿವಸಗಳ ವರೆಗೆ ಕೋರ್ಟು ಕಛೇರಿಗಳಿಗೆ ರಜೆ ಇದೆ.

ಕೈಲು ಪೊಳುದು ಔತಣವನ್ನು ಮಡಿಕೇರಿ ಕೊಡವರು ಈ ತಾ. 6 ನೇ ಆದಿತ್ಯವಾರ ಮಡಿಕೇರಿ ಪೊಲೀಸು ಟ್ರೈನಿಂಗ್ ಶಾಲೆಯಲ್ಲಿ ನಡಸಿದರು.

ಕಾವೇರಿ ಜಾತ್ರೆಗಾಗಿ ಈ ತಾ. 14 ರಿಂದ ಮಡಿಕೇರಿಯಿಂದ ಭಾಗಮಂಡಲಕ್ಕೆ ಸ್ಪೆಶ್ಯಲ್ ಬಸ್ಸುಗಳು ನಡೆಸಲ್ಪಡುವವೆಂದು ತಿಳಿಯುತ್ತೇವೆ.

ಮಹಾತ್ಮರ ಜನ್ಮದಿನೋತ್ಸವ ಸಂಬಂಧ ಈ ತಾ. 6 ರಲ್ಲಿ ಗೋಣಿಕೊಪ್ಪಲಲ್ಲೂ, ತಾ. 7 ರಲ್ಲಿ ಹುದಿಕೇರಿಯಲ್ಲೂ ಪಬ್ಲಿಕ್ ಸಭೆಗಳು ಸೇರಿದ್ದವೆಂದು ತಿಳಿಯುತ್ತೇವೆ.

ಈ ವಾರ ವೀರರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 48 ಕ್ರಯವಿತ್ತೆಂದೂ, ಮಡಿಕೇರಿಯಲ್ಲಿ ಏಲಕ್ಕಿ ಮಣಕ್ಕೆ ರೂ. 18 ರಿಂದ 20 ಬೆಲೆ ಇತ್ತೆಂದೂ ತಿಳಿದು ಬರುತ್ತದೆ.

ಈ ತಾ. 4 ರಿಂದ 8 ರ ವರೆಗೆ ಮಡಿಕೇರಿಯಲ್ಲಿ 2.02 ಇಂಚು ಮಳೆಯಾಗಿದೆ. ಕಳೆದ ವಾರ ನಾಡು ಕಡೆಗಳಿಗೆ ಬಿದ್ದ ಮಳೆಯು ಭತ್ತದ ಬೆಳೆಗೆ ತುಂಬಾ ಪ್ರಯೋಜನವಾಗಿದೆ.

ಅಮ್ಮತ್ತಿನಾಡು ಸಣ್ಣಪುಲಿಕೋಟು ಗ್ರಾಮದ ಮ. ರಾ. ಮಂಡೆಯಂಡ ದೇವಯ್ಯನವರು ಅಮೃದಾಬಾದಿನಲ್ಲಿ ಟಾಟಾ ಏವಿಯೇಶನ್ (ವಿಮಾನ) ಇಲಾಖೆಯಲ್ಲಿ ಗ್ರೌಂಡ್ ಇಂಜಿನಿಯರಾಗಿ ನೇಮಿಸಲ್ಪಟ್ಟಿರುವರಾಗಿ ತಿಳಿಯುತ್ತೇವೆ.

ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ 'ಕರ್ಣನು ದುರ್ಯೋಧನನ ಪಕ್ಷವನ್ನು ವಹಿಸಿದುದೇ ಯೋಗ್ಯವು' ಎಂಬ ಚರ್ಚೆಯು ಈ ತಾ. 13 ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಸಲ್ಪಡುವದೆಂದು ತಿಳಿದುಬರುತ್ತದೆ.

ಕಳೆದ ತಾ. 19 ರಲ್ಲಿ ಪೊನ್ನಂಪೇಟೆಯ ಸುತ್ತುಮುತ್ತಲಿನ ರೈತರು ಮಿ ಬಿ ಸಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧಿ ಜೋಪಾಸ್ಸಿನ [illegible] ನಿಬಂಧನೆಗಳನ್ನು ಖಂಡಿಸಿ ಗೊತ್ತುವಳಿಗಳನ್ನು ಪಾಸುಮಾಡಿದರೆಂದು ತಿಳಿಯುತ್ತೇವೆ.

ಈ ತಾ. 8 ರಲ್ಲಿ ನಡೆದ ದರ್ಬಾರಿನಲ್ಲಿ ಮೈಸೂರು ಮಹಾರಾಜರವರು, ಮೈಸೂರು ಸಂಸ್ಥಾನದ ಚೀಫ್ ಇಲೆಕ್ಟ್ರಿಕ್ ಇಂಜಿನಿಯರಾದ ಮ. ರಾ. ಕೋದಂಡ ಯಂ. ಕಾರ್ಯಪ್ಪನವರಿಗೆ 'ರಾಜ ಸೇವಾಸಕ್ತ' ಬಿರುದನ್ನು ದಯಪಾಲಿಸಿದರು.

ಬೆಂಗಳೂರಿನ ಯೋಹಿತ್‌ಮಾನ್ ಜಿಲ್ಲೆಯ ಕಿನ್‌ವಾಹ್ ಡಿವಿಜನಿನಲ್ಲಿ 1934–35 ನೇ ವರ್ಷದಲ್ಲಿ ಉತ್ತಮವಾದ ಕೆಲಸ ಮಾಡಿದಕ್ಕೆ ಅಲ್ಲಿಯ ರೇಂಜ್ ಆಫೀಸರಾದ ಮ. ರಾ. ಮೊಸಂಗಡ ಚಿಣ್ಣಪ್ಪನವರಿಗೆ 75 ರೂಪಾಯಿಯ ಬಹುಮಾನ ದೊರೆತಿದೆಯಾಗಿ ತಿಳಿದುಬರುತ್ತದೆ.

ಕಳೆದ ವಾರ ಪೆಬ್ಬಾಲೆಯಲ್ಲಿ 3 ಜನರಿಗೆ ಪ್ಲೇಗು ಅಂಟಿದೆಯೆಂದೂ, ಸುಂಟಿಕೊಪ್ಪದಲ್ಲಿ ಇಬ್ಬರಿಗೆ ಪ್ಲೇಗು ಅಂಟಿ ಎರಡು ಮರಣಗಳುಂಟಾದವೆಂದೂ, ಮಡಿಕೇರಿಯಲ್ಲಿ ಕಳೆದ ವಾರ ಒಬ್ಬರಿಗೂ, ಈ ವಾರ ಒಬ್ಬರಿಗೂ ಪ್ಲೇಗು ತಗಲಿದೆಯೆಂದೂ ವರ್ತಮಾನ

ತಾ. 8 ರಲ್ಲು ಸಾಪೋರ್ಟಿನಲ್ಲಿರುವ ಉದ್ಯೋಗಸ್ಥರೂ, ವರ್ತಕರವರೂ ಸೇರಿ 'ಬುಬ್ಬು ಕ್ಲಬ್' ಎಂಬ ಹೆಸರಿನಿಂದ ಒಂದು ರೀಡಿಂಗ್ ರೂಮನ್ನು ತೆರೆದಿರುವರು. ಇಂಥಾ ಕ್ಲಬ್ ಸಾಪೋರ್ಟಿಗೆ ಇಲ್ಲದೆ ಬಹಳ ದಿವಸಗಳಾಗಿದ್ದುವು ಈಗ ಕ್ಲಬ್ ಸಾಪೋರ್ಟ್ ನಾಡು ಸಹಕಾರ ಸ್ಟೋರಿನ ಮಹಡಿಯ ಮೇಲೆ ಇಡಲಾಗಿದೆ.

ಕಳೆದ ವಾರ ಮೈಸೂರು ಸಹಕಾರ ಪರಿಷತ್ತನ್ನು ತೆರೆದ, ಲಂಡನಿನ 'ಹೊರೇಸ್ ಪ್ಲಂಕೆಟ್ ಫೌಂಡೇಶನಿನ' ಅಧ್ಯಕ್ಷರಾದ ಸಾಕ್ಸ್‌ಟ್ ಸಿ. ಆರ್. ಫೇ ಯಂ. ಎ ಡಿ. ಎಸ್ ಸಿ. ಯವರು ಈ ತಾ. 11 ರಲ್ಲಿ ಮಡಿಕೇರಿಗೆ ಬಂದು, ತಾ 12 ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲಿನಲ್ಲಿ 'ಧಾನ್ಯಗಳನ್ನು ಬೆಳೆಸುವವರ ಮತ್ತು ಉಪಯೋಗಿಸುವವರ ಸಹಕಾರ'ವನ್ನು ಕುರಿತು, ಕಮಿಷನರವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಲಿರುವರು.

ಹಿಂದೂದೇಶ.

ಮದುರಾ ಮುನ್ಸಿಪಲ್ ಚುನಾವಣೆಯಲ್ಲಿ 21 ಕಾಂಗ್ರೆಸು ಉಮೇದುವಾರರು ಜಯಶೀಲರಾಗಿರುವರು. ಕಮಿಟಿಯಲ್ಲಿ ಒಟ್ಟು 36 ಮೆಂಬರುಗಳಿದ್ದಾರೆ.

ರವೀಂದ್ರನಾಥ್ ಟಾಗೋರರ ಶಾಂತಿ ನಿಕೇತನ ಶಾಲೆಯಲ್ಲಿ ಬಟ್ಟೆ ನೇಯುವುದನ್ನು ಕಲಿಸುವ ಉಪಾಧ್ಯಾಯಿನಿಯ ಕೆಲಸವನ್ನು ಕೈಕೊಳ್ಳಲು ಮಿಸ್ ಅನಾ ಕಾಡರ್‌ಬ್ಲೋಮ್ ಎಂಬ ಸ್ವೀಡನಿನ ಕನ್ನೆಯು ಕಲ್ಕತ್ತೆಕ್ಕೆ ಬಂದಿರುವರು.

1933 ನೇ ವರ್ಷದ ಇಂಡಿಯಾದ ಪಬ್ಲಿಕ್ ಆರೋಗ್ಯದ ವರದಿಯ ಮೇರೆ ಆ ವರ್ಷ ಇಂಡಿಯಾದಲ್ಲಿ 1? ಮಿಲ್ಲಿಯ ಮೇಲು ಮರಣಗಳುಂಟಾಗಿವೆ; ಆ ವರ್ಷ 12 ಮಿಲ್ಲಿಯಕ್ಕಿಂತ ಹೆಚ್ಚು ಜನರು ಮಲೇರಿಯಾಕ್ಕಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದಿದರು ಮತ್ತು ದೇಶದಲ್ಲುಂಟಾದ ಮರಣಗಳಲ್ಲಿ ಶೇಕಡ 2? ರಷ್ಟು ಮಲೇರಿಯಾದಿಂದುಂಟಾಗಿದೆ.

ಇಟಲಿ—ಅಬಿಸೀನಿಯಾ ಯುದ್ಧ.

ಇಟಲಿಯವರು ಅಬಿಸೀನಿಯಾದಲ್ಲಿ ಬಾಂಬುಗಳನ್ನು ಹಾಕುತ್ತಾ ಯುದ್ಧ ಪ್ರಾರಂಭಿಸಿದರು.
ಇಟಲಿಯವರ ಬಾಂಬುಗಳಿಂದ ಹೆಂಗಸರು ಮಕ್ಕಳ ವಿಪರೀತ ಪ್ರಾಣ ಹಾನಿ.
ಇಟಲಿಯ 20 ಸಾವಿರ ಸೈನ್ಯ ಅಬಿಸೀನಿಯಾದ ಗಡಿಯೊಳಗೆ ನುಗ್ಗಿತು.
ಎಡೋವಾ ಮತ್ತು ಎಡಿಗ್ರಾಟ್ ಪಟ್ಟಣಗಳು ಇಟಲಿಯವರ ಸ್ವಾಧೀನವಾದವು.
ಇಟಲಿಗೆ ಸೇರಿದ ಇರಿಟ್ರಿಯಾದಲ್ಲಿ ಅಬಿಸೀನಿಯರ ಜಯ.
ವಾಲ್‌ವಾಲ್ ಪಟ್ಟಣವನ್ನು ಅಬಿಸೀನಿಯಾದವರು ಕೈವಶ ಮಾಡಿಕೊಂಡರು.
ಮುಸ್ಸೋಲಿನಿಯವರ ಆರ್ಭಟ ಘರ್ಜನೆ.
ಇಟಲಿಯವರು ತಪ್ಪಿತಸ್ಥರೆಂದು ಜನಾಂಗಗಳ ಕೂಟದ ಕೌನ್ಸಿಲಿನ ತೀರ್ಮಾನ.
ಇಟಲಿಯ ಮೇಲೆ ಆರ್ಥಿಕ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತರುವಂತೆ 'ಲೀಗ್'ನವರ ನಿರ್ಧಾರ.

(ಸ್ವಾತಂತ್ರ್ಯವಾಗಿ ಅಬಿಸೀನಿಯಾದ ಮೇಲೆ ಧಾಳಿ ನಡಿಸಿದ ಇಟಲಿಯ ಸರ್ವಾಧಿಕಾರಿ ಮುಸ್ಸೋಲಿನಿಯವರು.)

ಅಕ್ಟೋಬರು ತಾ. 3.

ಜಿನೀವ ಪ್ರಾರಂಭ—ಇಟಲಿಯವರು ಅಬಿಸೀನಿಯಾದ ಎಡೋವಾ ಪಟ್ಟಣದ ಮೇಲೆ ಬಾಂಬುಗಳನ್ನು ಹಾಕಿದರೆಂದು ಅಬಿಸೀನಿಯಾದ ಚಕ್ರವರ್ತಿಯವರು ಜನಾಂಗಗಳ ಕೂಟಕ್ಕೆ ತಂತಿ ಮೂಲಕ ವರದಿ ಮಾಡಿ, ಜನಾಂಗಗಳ ಕೂಟವು ತನ್ನ ಕಡೆ ಪ್ರತಿನಿಧಿಗಳನ್ನು ಕಳುಹಿಸಿ ಇಟಲಿಯವರ ಕೃತ್ಯವನ್ನು ದೃಢೀಕರಿಸಿಕೊಳ್ಳಬೇಕೆಂದು ಕೇಳಿಕೊಂಡರು.

ಈ ದಿನ 11 ಗಂಟೆಗೆ ಅಬಿಸೀನಿಯಾದ ಸೈನಿಕರೆಲ್ಲರೂ ಯುದ್ಧಕ್ಕೆ ಸಿದ್ಧರಾಗಬೇಕೆಂದು ಅಲ್ಲಿಯ ಚಕ್ರವರ್ತಿಯವರ ಹುಕುಂ ಆಯಿತು.

ಇಟಲಿಯ ಜನರಲ್ ದಿಬೋನೊರವರ 20,000 ಸೈನಿಕರು ಮುಪ್ಪತ್ತಾಲ್ಕು ಎಡೆಯಲ್ಲಿ ಅಬಿಸೀನಿಯಾದ ಗಡಿಯೊಳಗೆ ನುಗ್ಗಿದರೆಂದು ಪ್ಯಾರಿಸ್ಸಿನ ಫ್ರೆಂಚ್ ಪತ್ರಿಕೆಯ ವರ್ತಮಾನ.

ಎಡೋವಾದ ಮೇಲೆ ಬಿದ್ದ ಬಾಂಬುಗಳಿಂದ ಹಲವು ಹೆಂಗಸರು ಮಕ್ಕಳು ಮೃತರಾದರು. ಅದು ನೋಡಲು ಬಹು ದುಃಖಕರವಾದ ದೃಶ್ಯವಾಗಿತ್ತು.

ಮುಸ್ಸೋಲಿನಿಯವರ ಭಾಷಣ.

ಅಕ್ಟೋಬರು ತಾ. 2 ರಲ್ಲಿ 20 ಮಿಲ್ಲಿಯ ಇಟಲಿಯವರು ಯುದ್ಧ ಸಿದ್ಧತೆಯ ಪ್ರದರ್ಶನವನ್ನು ಮಾಡಿದರು. ಆ ವೇಳೆಯಲ್ಲಿ ಅಲ್ಲಿಯ ಸರ್ವಾಧಿಕಾರಿಯಾದ ಸಿ. ಮುಸ್ಸೋಲಿನಿಯವರು ಭಾಷಣ ಮಾಡುತ್ತಾ—'ಕಳೆದ ಘೋರ ಯುದ್ಧದಲ್ಲಿ ಇಟಲಿಯ 600,000 ಸೈನಿಕರು ಪ್ರಾಣಕೊಟ್ಟು, 1,000,000 ಜನರಿಗೆ ಗಾಯ ಆದರೂ ಅಂತ್ಯದಲ್ಲಿ ಇಟಲಿಗೆ ದೊಟ್ಟಿಯ ಚೂರುಗಳು ಮಾತ್ರ ದೊರಕಿವೆಯೆಂದೂ, ನ್ಯಾಯವಾದ ಕ್ಲೇಶದಾಗಲೀ ಬ್ರಿಟಿಷರಾಗಲೀ ಅನಾಗರೀಕ ಅಬಿಸೀನಿಯಾವನ್ನು ರಕ್ಷಿಸಲು ಇಟಲಿಯ ಮೇಲೆ ಆರ್ಥಿಕ ಸ್ಯಾಂಕ್ಷನ್‌ಗಳಿಗೆ ಒಪ್ಪಲಾರರೆಂದೂ, ಹಾಗೆ ಮಾಡಿದರೆ ತಾವೂ ಅದೇ ಸಲಕರಣೆಗಳಿಂದ ಜವಾಬು ಕೊಡುವೆವೆಂದೂ, ಯುದ್ಧ ಕೃತಿಗಳಿಗೆ ಯುದ್ಧ ಕೃತಿಗಳಿಂದ ಉತ್ತರ ಕೊಡುವೆವೆಂದೂ, ತಮ್ಮನ್ನು ಇಂದಿನವರೆಗೆ ಯಾರೂ ಬಗ್ಗಿಸಿಲ್ಲವೆಂದೂ, ಇನ್ನು ಮುಂದೂ ಯಾರೂ ಬಗ್ಗಿಸುವುದಿಲ್ಲವೆಂದೂ, ಆದರೂ ಆಫ್ರಿಕಾ ಯುದ್ಧವು ಯೂರೋಪಿಗೆ ಹರಡದಂತೆ ನೋಡಿಕೊಳ್ಳುವೆವೆಂದೂ' ಜೋರಾಗಿ ಸೈನಿಕರಲ್ಲಿ ಹುರಿದುಂಬಿಸಿದರು.

ಜರ್ಮನಿಯ ಧೋರಣೆ

ಬರ್ಲಿನ್ ತಾ. 2.—ಇಂದಿನ ವರೆಗೆ ಜರ್ಮನಿ ಸರಕಾರದವರು ಅಬಿಸೀನಿಯಾ ಸಮಸ್ಯೆಯ ಬಗ್ಗೆ ಯಾವ ಅಭಿಪ್ರಾಯವನ್ನೂ ಪ್ರಕಟಿಸಿಲ್ಲ. ಆದರೆ ಸರ್ವಾಧಿಕಾರಿ ಹಿಟ್ಲರವರು ನ್ಯೂರೆಂಬರ್ಗಿನಲ್ಲಿ ಮಾಡಿದ ಭಾಷಣದ ಮೇರೆ ತಮಗೆ ಸಂಬಂಧವಿಲ್ಲದ ಈ ಸಮಸ್ಯೆಯಲ್ಲಿ ಪ್ರವೇಶ ಮಾಡುವುದಿಲ್ಲವೆಂದು ಅಭಿಪ್ರಾಯ ತೋರಿದೆ.

ಇಟಲಿಯ ಮೊದಲನೇ ಅಪಜಯ.

ಇಟಲಿ ಸೈನ್ಯವು ಅಗಮಿ ಪ್ರದೇಶಕ್ಕೆ ಹೋಗಲು ಪ್ರಯತ್ನಿಸಿದಾಗ್ಯೂ ಅಬಿಸೀನಿಯಾದವರಿಂದ ಹಿಂದಕ್ಕೆ ಓಡಿಸಲ್ಪಟ್ಟರು.

3ನೇ ಸಾರಿ ವೈಮಾನಿಕ ಮುತ್ತಿಗೆ

ಅಬಿಸೀನಿಯಾದ ಚಕ್ರವರ್ತಿಯವರ ತಂತಿಯ ಮೇರೆ ಆಡೋವದಲ್ಲಿ ಇಟಲಿಯವರು 3ನೇ ಸಾರಿ 8 ವಿಮಾನಗಳಿಂದ 78 ಬಾಂಬುಗಳನ್ನು ಎಸೆದರು. ಅಗ್ನಿ ಬಾಂಬು ರೆಡ್ ಕ್ರಾಸ್ ಆಸ್ಪತ್ರೆಯ ಮೇಲೆ ಬಿದ್ದು ನರ್ಸುಗಳು ಮೃತರಾದರು. ಅಡಿಗ್ರಾಟ್ ಪಟ್ಟಣಕ್ಕೂ ಬಾಂಬುಗಳು ಹಾಕಲ್ಪಟ್ಟವು. ಒಗಾಡನ್ನಿನಲ್ಲಿ ಯುದ್ಧ ಶುರುವಾಗಿದೆ. 7 ಸಾವಿರ ಅಬಿಸೀನಿಯಾ ಕೈದಿಗಳು ಬಿಡುಗಡೆ ಮಾಡಲ್ಪಟ್ಟು ಯುದ್ಧ ರಂಗಕ್ಕೆ ಹೋಗುತ್ತಿರುವರು. 5 ಸಾವಿರ ಸವಾರರ ಮತ್ತು ಕಾಲುದಳದ ಪೋಲೀಸು ಅಡಿಸ್ ಅಬಾಬವನ್ನು ಕಾಯುತ್ತಿರುವರು. ಇಟಲಿಯ 40 ವಿಮಾನಗಳು ಅಡೋವಾ ಮತ್ತು ಅಡಿಗ್ರಾಟಿಗೆ ಬಾಂಬುಗಳನ್ನು ಹಾಕಿದವು.

ಅಕ್ಟೋಬರ್ ತಾ 4.

ರೋಮ್—ಮುಸ್ಸೋಲಿನಿಯವರ ಅಳಿಯನು ವಿಮಾನದಲ್ಲಿ ಕೂತು ಅಬಿಸೀನಿಯಾದ ಯುದ್ಧ ವರ್ತಮಾನಗಳನ್ನು ನೋಡಲು ಗಡಿ ದಾಟಿದಾಗ್ಯೂ ಅಬಿಸೀನಿಯಾ ಸಿಪಾಯಿಗಳು ಗುಂಡು ಹಾರಿಸಿದ್ದರಿಂದ ಇಟಲಿಯವರು ಬಾಂಬು ಹಾಕಲು ಆರಂಭಿಸಿದರೆಂದೂ, ಆಸ್ಪತ್ರೆಗೆ ಬಾಂಬು ಹಾಕಿದ್ದು ನಿಜವಲ್ಲವೆಂದೂ ಇಟಲಿಯವರ ಹೇಳಿಕೆ.

ಜಪಾನರ ಘೋಷಣೆ.

ಟೋಕಿಯೋ ತಾ 3—ಇಟಲಿ-ಅಬಿಸೀನಿಯಾ ಯುದ್ಧದಲ್ಲಿ ಜಪಾನಿನವರು ಯಾವ ಭಾಗವನ್ನೂ ವಹಿಸುವುದಿಲ್ಲವೆಂದು ವರ್ತಮಾನ. ಜಪಾನು ಜನಾಂಗಗಳ ಕೂಟದ ಮೆಂಬರಲ್ಲದ್ದರಿಂದ ಸದರಿ ಕೂಟವು ಇಟಲಿಯ ಮೇಲೆ ಆರ್ಥಿಕ ಬಹಿಷ್ಕಾರ ಹಾಕಿದರೆ ಅದು ಜಪಾನಿಗೆ ಸಂಬಂಧಿಸುವುದಿಲ್ಲವೆಂದೂ ಜಪಾನರ ಅಭಿಪ್ರಾಯ.

ಅಡಿಸ್ ಅಬಾಬ ತಾ 4.—ಉತ್ತರ ಮತ್ತು ದಕ್ಷಿಣ ಅಬಿಸೀನಿಯಾದಲ್ಲಿ ಜೋರಾದ ಯುದ್ಧವು ನಡೆಯುತ್ತಿದೆ. ಒಗಾಡನ್ನಿನಲ್ಲಿ ನಡೆದ ಬಲವಾದ ಕದನದಲ್ಲಿ 2000 ಅಬಿಸೀನಿಯರು ಮಡಿದರು, ಹಲವರಿಗೆ ಗಾಯಗಳಾಗಿವೆ.

ಇಟಲಿಯವರ ಜಯ.

ರೋಮ್.—ಇಟಲಿಯವರು ಅಡಿಗ್ರಾಟ್ ಪಟ್ಟಣವನ್ನು ಹಿಡಿದಿರುವರು. ಅಡೋವಾ ಪಟ್ಟಣವೂ ಕೈವಶವಾಗುವಂತಿದೆ. ಎರಡು ಕಡೆಯವರಿಗೂ ತುಂಬಾ ನಷ್ಟವಾಗಿದೆ, ಆದರೆ ಅಬಿಸೀನಿಯಾದವರ ನಷ್ಟ ಹೆಚ್ಚು.

ಜಿಬೂಟಿ—ಆಡಿಸ್ ರೈಲ್ವೆಯ ಸೇತುವೆಯನ್ನು ಕಾಪಾಡಲು ಬೆಲ್ಜಿಯನ್ ಆಫೀಸರ 10,000 ಅಬಿಸೀನಿಯಾ ಸೈನ್ಯವನ್ನು ಕಳುಹಿಸಿರುವರು.

ಪ್ರಾಣ ನಷ್ಟದ ನಿಜವಾದ ಸಂಖ್ಯೆಗಳು ದೊರಕಿಲ್ಲವೆಂದೂ 17000 ಅಬಿಸೀನಿಯರು ಮೃತರಾದರೆಂಬುದು ಅತಿಶಯೋಕ್ತಿಯೆಂದೂ ಅಡಿಸ್ ಅಬಾಬಾದ ಸುದ್ದಿ.

ಇರಿಟ್ರಿಯಾದಲ್ಲಿ ಅಬಿಸೀನಿಯಾ ಸೈನ್ಯ.

ಅಡಿಸ್ ಅಬಾಬ—ರಾಸ್ ಸೆಯೂಮರ ಸೈನ್ಯ ಅಡೋವದಲ್ಲಿ ಇಟಲಿ ಸೈನ್ಯವನ್ನು ತಡೆಯುತ್ತಿದ್ದಾಗ್ಯೂ ರಾಸ್ ಸೆಯೂಮರವರ 12000 ಸಿಪಾಯಿಗಳು ಇರಿಟ್ರಿಯಾಕ್ಕೆ ದಾಟಿ ಇಟಲಿಯವರ ಕೆಲವು ಔಟ್ ಪೋಸ್ಟ್‌ಗಳನ್ನು ಕೈವಶ ಮಾಡಿಕೊಂಡರು. ಇರಿಟ್ರಿಯಾದ ಕೆಲವು ಕಪ್ಪು ಸೈನಿಕರೂ, ಕೆಲವು ಸೋಮಾಲಿ ಸಿಪಾಯಿಗಳೂ ಇಟಲಿಯ ಪಕ್ಷ ಬಿಟ್ಟು, ಅಬಿಸೀನಿಯಾದ ಕಡೆ ಸೇರಿರುವರು. ಅಡೋವಾದ ಬಳಿ ಒಂದು ಇಟಲಿ ವಿಮಾನವೂ ನೆಲಕ್ಕುರುಳಿಸಲ್ಪಟ್ಟಿತು.

(ಇಟಲಿಯವರ ಧಾಳಿಯಿಂದ ತನ್ನ ದೇಶದ ಸ್ವಾತಂತ್ರ್ಯವನ್ನು ಕಾಪಾಡಲು ನಿರ್ಧರಿಸಿರುವ ಅಬಿಸೀನಿಯಾದ ಚಕ್ರವರ್ತಿ ರಾಸ್ ಟಫಾರಿಯಾವರು)

ಏಜಿಯನ್ ದ್ವೀಪಗಳಲ್ಲಿ ಯುದ್ಧ ಸಿದ್ಧತೆ.

ಡೊಡೆಕೇನ್ಸ್, ಕಲಿಮ್ನೊ, ಲಿರೋಸ್ ಮುಂತಾದ ದ್ವೀಪಗಳಲ್ಲಿ ಇಟಲಿಯವರು ಎಲ್ಲಾ ತರದ ಯುದ್ಧದ ತಯಾರಿಯನ್ನು ನಡೆಸುತ್ತಿದ್ದಾರೆ.

ಬೊಂಬಾಯಿ ಮಾರ್ಕೆಟಿನ ಮೇಲೆ ಯುದ್ಧದ ಪರಿಣಾಮ

ಯುದ್ಧದ ಪರಿಣಾಮವಾಗಿ ಬೊಂಬಾಯಿ ಮಾರ್ಕೆಟ್ಟಿನಲ್ಲಿ ಹತ್ತಿ, ಧಾನ್ಯ, ಹರಳು, ನೆಲಗಡಲೆ, ಗೋಧಿ ಮುಂತಾದ ಸಾಮಾನುಗಳ ಕ್ರಯ ಸ್ವಲ್ಪ ಮಟ್ಟಿಗೆ ಏರಿದೆ. ಇನ್ನೂ ಏರುವದೆಂಬ ಅಂದಾಜು ಇದೆ.

ಸ್ಪೈನ್—ಇಟಲಿ ಒಪ್ಪಂದ.

ವ್ಯಾಪಾರ ಸಂಬಂಧವಾಗಿ ಸ್ಪೈನಿಗೂ ಇಟಲಿಗೂ ಒಂದು ಒಪ್ಪಂದವಾಗಿದೆ. ಆದುದರಿಂದ ಲೀಗಿನವರು ಇಟಲಿಯ ಮೇಲೆ ಹಾಕುವ ಆರ್ಥಿಕ ಬಹಿಷ್ಕಾರದಲ್ಲಿ ಸ್ಪೈನು ಭಾಗಿಯಾಗಲಾರದು.

ಅಕ್ಟೋಬರು ತಾ. 5.

ತಾ 4ರ ಬೆಳಗಿನ ರಾತ್ರಿ, ಡನಾಕಿಲ್ ಪ್ರದೇಶದಲ್ಲಿ ಬಲವಾದ ಕದನ ನಡೆಯಿತು. ಉಭಯ ಕಡೆಗೂ ತುಂಬಾ ನಷ್ಟ ಸಂಭವಿಸಿದೆ. 1300 ಇಥಿಯೋಪಿಯನರೂ, 700 ಇಟಲಿಯವರೂ ಮೃತಪಟ್ಟರೆಂದು ಸುದ್ದಿ. ತಾ 5ರ ಬೆಳಗ್ಗೆ ಇಟಲಿಯ ವಿಮಾನಗಳು ಡೆಸ್ಸಿ ಪಟ್ಟಣಕ್ಕೆ ಬಾಂಬು ಹಾಕಿದವು.

ಅಡೋವ ಇಟಲಿಯವರ ಸ್ವಾಧೀನವಾಗಲಿಲ್ಲ.

ಇಥಿಯೋಪಿಯನರು ಅಡೋವಾದ ಬಳಿ ಇಟಲಿಯವರನ್ನು ಬಲವಾಗಿ ತಡೆಯುತ್ತಿದ್ದಾರೆ. ನಷ್ಟ ವಿಪರೀತವಾಗಿದೆ. ಡೋಲೋವಾಗಲೀ, ಅಡಿಗ್ರಾಟಾಗಲೀ ಇಟಲಿಯವರ ಸ್ವಾಧೀನವಾಗಿಲ್ಲ. ಇಥಿಯೋಪಿಯನರು 'ಗೆರಿಲ್ಲಾ' ಯುದ್ಧದ ರೀತಿಯನ್ನು ಅನುಸರಿಸುತ್ತಿರುವರು.

ಅಡೋವಾದಲ್ಲಿ ಬಾಂಬು ಹಾಕಿದರ ಫಲಿತಾಂಶವಾಗಿ 63 ಮರಣಗಳುಂಟಾದುವು. ರಾಸ್ ಸೆಯೂಮರ ಪೂರ್ಣ ಸೈನ್ಯ ಅಡೋವಕ್ಕೆ ತಲುಪಿಲ್ಲ. ಒಂದು ಭಾಗ ಮಾತ್ರ ಬಂದು ಯುದ್ಧವನ್ನು ಎದುರಿಸುತ್ತಾ ಬಲವಾಗಿ ಕಾದಾಡುತ್ತಿದೆ. ಇಟಲಿಯವರು ಹಲವು 'ಟ್ಯಾಂಕ್'ಗಳನ್ನೂ ಫಿರಂಗಿ ಕಾರುಗಳನ್ನೂ ಉಪಯೋಗಿಸುತ್ತಿದ್ದಾರೆ. ಇಥಿಯೋಪಿಯನರು ಧೈರ್ಯದಿಂದ ಕಾದಿದರೂ ತುಂಬಾ ನಷ್ಟಗೊಂಡರು.

ಆ ರೆಂಟ್ ಕೆಯೂಸೊಂದವರ ಬಹುಮಾನ.

ಲಂಡನ—ಇಟಲಿಯವರು ಡೋಲೆ ಪಟ್ಟಣವನ್ನು ಗೆದ್ದರು. ಮುಸ್ಸೋಲಿನಿಯವರ ಅಳಿಯ 'ಕ ರೆಂಟ್' ಸೆಯಾನವರು ವಿಮಾನದಲ್ಲಿ ಇಥಿಯೋಪಿಯದ ಮೇಲೆ ಹಾರಿದಾಗ್ಯೂ ಅವರ ವಿಮಾನಕ್ಕೆ ಹಲವು ಗುಂಡುಗಳು ತಗಲಿ ಅದಕ್ಕೆ ಬಹಳ ಕ್ಷತಿಯಾಯಿತು. ಆದರೆ ಕೆಯೂಸೊಂದವರಿಗೆ ಪೆಟ್ಟೇನೂ ಆಗಲಿಲ್ಲ.

ಮಡಿಕೇರಿ ಮುನಿಸಿಪಲ್ ಮೀಟಿಂಗು.

ಕಳೆದ ಸೆಪ್ಟೆಂಬರ್ ತಾ. 19ರಲ್ಲಿ ಮಿ. ಎ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮಡಿಕೇರಿ ಮುನಿಸಿಪಲ್ ಕಮಿಟಿ ಮೀಟಿಂಗಿನ ನಡವಳಿಕೆಗಳು.

ಹಾಜರಿದ್ದವರು—(1) ಮಿ. ಎನ್. ಬಸಪ್ಪನವರು (2) ಸೀನಿಯರ್ ಸಬ್-ಅಸಿಸ್ಟೆಂಟ್ ಸರ್ಜನರು (3) ಎಗ್ಸಿಕ್ಯುಟಿವ್ ಪರ್ಸನಲ್ ಅಸಿಸ್ಟೆಂಟರು, (4) ಮಿ. ಗಳಂದ ಎ. ಎ. ಮಾದಯ್ಯನವರು, (5) ಎನ್. ಸೋಮಣ್ಣನವರು, (6) ಪಿ. ಪಿ. ಬೆಳ್ಯಪ್ಪನವರು, (7) ಕೆ. ವೆಂಕಟಗಿರಿ ರಾವ್‌ರವರು, (8) ಪಿ. ಎನ್. ನಂಜಪ್ಪಶೆಟ್ಟಿಯವರು, (9) ಎ. ಅಬ್ದುಲ್ ರಹಮಾನ್ ಖಾನ್‌ರವರು.

ಗೈರುಹಾಜರಾಗಿದ್ದವರು—(1) ಡಾಕ್ಟರ್ ಕೊಡಗು ಸುಪರಿಂಟೆಂಡೆಂಟರು, (2) ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರು, (3) ಮಿ. ಗಳಂದ (4) ಎಂ. ಎಂ. ಬೆಳ್ಯಪ್ಪನವರು, (5) ಕೆ. ಮಲ್ಲಪ್ಪನವರು, (6) ಕೆ. ಯಂ. ಮಹಮ್ಮದ್ ಗೌಸ್‌ರವರು, (7) ಆರ್. ಫಾತ್ಲಿಮ್ಮಯವರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಓವರ್ಸಿಯರರ ಕೆಲಸದ ರಿಪೋರ್ಟು ಮತ್ತು ಪ್ಲಾನ್ ಮತ್ತು ಎಸ್ಟಿಮೇಟ್ ಮೊದಲಾದವುಗಳನ್ನು ಓದಿ ಒಪ್ಪಲಾಯಿತು.

3. ಮೀಟಿಂಗಿನ ನೋಟೀಸುಗಳನ್ನು ಕಮಿಟಿ ಸದಸ್ಯರುಗಳಲ್ಲಿ ಹಂಚ ಬೇಕೆಂಬ ಮಿ. ಪಿ. ಪಿ. ಬೆಳ್ಯಪ್ಪನವರು ತಂದ ಠರಾವನ್ನು ಅನುಸರಿಸಿ ಮೀಟಿಂಗಿನ ನೋಟೀಸುಗಳನ್ನು ಬಂದು ಬೀಳುವ ಪ್ರತ್ಯೇಕ ಪೆಟ್ಟಿಗೆಯಲ್ಲಿ ಕಮಿಟಿ ಮೆಂಬರುಗಳಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

4. ಎಗ್ಸಿಕ್ಯುಟಿವ್ ಇಂಜಿನಿಯರು—ಕೋರ್ಟ್ ಬಿಲ್ಡಿಂಗಿನ ಕಛೇರಿಗಳಿಗೆ ನಲ್ಲಿಗಳ ಬಾಬ್ತು ಚಾರ್ಜು ಕೊಡಲಾಗುವುದಿಲ್ಲವೆಂದು ಬರೆದ ತಾ. 17—8—35ರ ನಂಬ್ರ 1306ನೇ ಪತ್ರವನ್ನು ಓದಲಾಗಿ ಮುನಿಸಿಪಲ್ ರೂಲ್ಸುಗಳಿಗನುಸರಿಸಿ ಅದನ್ನು ವಸೂಲು ಕೊಡತಕ್ಕದ್ದೆಂದು ನಿರ್ಣಯಿಸಲಾಯಿತು.

5. ಎಗ್ಸಿಕ್ಯುಟಿವ್ ಇಂಜಿನಿಯರವರು—ಕಮಿಷನರವರ, ಎಗ್ಸಿಕ್ಯುಟಿವ್ ಇಂಜಿನಿಯರವರ ಬಂಗಲೆಗಳನ್ನು ಮತ್ತು ಆ ಕಟ್ಟಡಗಳ ಕ್ವಾರ್ಟರ್ಸುಗಳನ್ನು ಘಟಕ ಬೇರೆ ಕಲ್ಪಿಸಬೇಕೆಂದು ಬರೆದ ತಾ. 17—8—35ರ ನಂಬ್ರ 1305ನೇ ಪತ್ರವನ್ನೋದಲಾಗಿ ಆ ಕಟ್ಟಡಗಳ ಹೊಸ ಬೆಲೆ ಪ್ರಕಾರ ಮುನಿಸಿಪಲ್ ತೆರಿಗೆ ನಿರ್ಣಯಿಸಬೇಕಾಗಿ ತೀರ್ಮಾನವಾಯಿತು.

6. ಈ ಡಿಸ್ಪೆನ್ಸರಿಯಲ್ಲಿ ಕಂಪೌಂಡರುಗಳು ಆಹಾರ ಮತ್ತು ಕೆಲಸಗಳನ್ನು ಮೊದಲು ಪರೀಕ್ಷೆ ಮಾಡಬೇಕಾದ ಕಾರಣ ಅಸಿಸ್ಟೆಂಟ್ ಸರ್ಜನರಿಗೆ ಚಾರ್ಜು ಕೊಡಬೇಕೆಂದು ಡೈರೆಕ್ಟರವರು ಬರೆದ ತಾ. 28—8—35ರ ನಂಬ್ರ 1178ನೇ ಪತ್ರವನ್ನು ಓದಲಾಗಿ ಅವರ ಕೋರಿಕೆಯಂತೆ ಚಾರ್ಜು ಕೊಡಲಿಕ್ಕಾಗುವದಿಲ್ಲವೆಂದು ತೀರ್ಮಾನವಾಯಿತು.

7. ಡ್ರಾಯರ್ ಸಿ. ಯಸ್. ವೀರಪ್ಪನವರು ಸೇವಿಂಗ್ಸ್ ಬ್ಯಾಂಕಿನಲ್ಲಿರುವ ರೂ 100 ಸೆಕ್ಯೂರಿಟಿಯನ್ನು ತೆಗೆದುಕೊಳ್ಳಲು ಅನುಮತಿ ಕೊಡಬೇಕೆಂದು ಬರೆದ ಅರ್ಜಿಯನ್ನು ಓದಲಾಗಿ, ಅವರು ಜಾಮೀನುದಾರರೊಂದು ಸ್ಥಿರಾಸ್ತಿಯನ್ನು ಗಿರವಿ ಕೊಟ್ಟು ಈ ಸೆಕ್ಯೂರಿಟಿಯನ್ನು ಸೇವಿಂಗ್ಸ್ ಬ್ಯಾಂಕಿನಿಂದ ತೆಗೆದುಕೊಳ್ಳಬಹುದೆಂದೂ, ಪ್ರತಿ ತಿಂಗಳೂ ಅವರ ಸಂಬಳದ ರೂ. 5 ಗಳಲ್ಲದೆ 3 ರೂಪಾಯಿ ಹೆಚ್ಚಾಗಿ ಠಾವತಿ ಮಾಡುತ್ತಾ ಸೆಕ್ಯೂರಿಟಿ ಭರ್ತಿ ಮಾಡಬೇಕಾಗಿಯೂ ತೀರ್ಮಾನಿಸಲಾಯಿತು.

8. ಕೆಳಗಿನ ಬಾವಿಯಿಂದ ಬರುವ ಅವರ ನಲ್ಲಿಗಳ ಬದಲು ದೊಡ್ಡ ಪಂಪು ಕೆರೆಯಿಂದ ನಲ್ಲಿ ಜೋಡಿಸಿ ಕೊಡಬೇಕೆಂದು ಮಿ. ಗಳಂದ ಅಯ್ಯಪಂಡ ದೇವಯ್ಯ, ಕೆ. ಯಂ. ಮಹಮದ್ ಗೌಸ್, ಸಿ. ಯಸ್. ವೀರಪ್ಪ, ಪಿ. ಎ. ಕಾರ್ಯಪ್ಪ, ಬಿ. ಎಸ್. ವೀರಭದ್ರಶೆಟ್ಟಿ, ಪಿ. ನಾಗಪ್ಪ ಆಚಾರಿ ಮತ್ತು ಶ್ರೀಮತಿ ಶಾಂತಮ್ಮನವರುಗಳು ಬರೆಕೊಂಡ ಅರ್ಜಿಗಳನ್ನು ಓದಿ, ಹಾಗೆ ಮಾಡಿದಲ್ಲಿ ಪಬ್ಲಿಕ್ ನಲ್ಲಿಗಳಿಗೆ ಬಾಧಕವಾಗುವದೆಂದು ಅವುಗಳನ್ನು ತಿರಸ್ಕರಿಸಲಾಯಿತು.

9. ಮಿ. ಕೆ. ವೆಂಕಟಗಿರಿರಾವ್‌ರವರು ಜಾಗಕ್ಕಾಗಿ ಮಾಡಿದ್ದ ಅವರ ಅರ್ಜಿಯನ್ನು ಹಿಂತೆಗೆದುಕೊಂಡರು.

10. ಬ್ಲಾಕ್ ನಂ. 13ರಲ್ಲಿ ಮನೆಗಳಿಗಾಗಿ ಮಿ. ಗಳಂದ ಕೆ. ಪಿ. ಕುಟ್ಟಪ್ಪ, ಸಿ. ಬಿ. ನಾಣಯ್ಯ, ಯಂ. ಕೃಷ್ಣಯ್ಯ ಮತ್ತು ಮಿಸೆಸ್. ಬಿ. ಬಿ. ಅಪ್ಪಯ್ಯನವರುಗಳ ಬರೆದ ಅರ್ಜಿಗಳನ್ನು ಓದಲಾಯಿತು.

ಮಿಸೆಸ್ ಬಿ. ಬಿ. ಅಪ್ಪಯ್ಯನವರ ಅರ್ಜಿಯನ್ನು ಮುಂದಿನ ಮೀಟಿಂಗಿನಲ್ಲಿ ಆಲೋಚಿಸುವದಾಗಿಯೂ, ಇತರ ಅರ್ಜಿಗಳನ್ನು ತಿರಸ್ಕರಿಸುವದಾಗಿಯೂ ತೀರ್ಮಾನವಾಯಿತು.

11. ಮುನಿಸಿಪಾಲಿಟಿಯ ಕೋವಿಯು ಬಹಳ ಹಳೆದಾಗಿರುವದರಿಂದ ಒಂದು ಹೊಸ ಕೋವಿಯನ್ನು ಕೊಂಡುಕೊಳ್ಳಬೇಕೆಂಬ ಓವರ್ಸಿಯರ ರಿಪೋರ್ಟಿನ ಪ್ರಕಾರ, ಈಗಿನ ಕೋವಿಯನ್ನು ಹರಾಜು ಮಾಡಿ ರೂ. 60 ಗಳಿಗೆ ಮೀರದೆ ಒಂದು ಕೋವಿಯನ್ನು ಕೊಂಡುಕೊಳ್ಳುವಂತೆ ನಿರ್ಣಯಿಸಲಾಯಿತು.

12. ಪೆಕ್ರಾಬಿನ್ ಎಂಬವನ ಪತ್ನಿಯು, ತನ್ನ ಗಂಡನು ಮೃತನಾಗಿರುವದರಿಂದಲೂ ತಾನು ಬಹಳ ಬಡ ಸ್ಥಿತಿಯಲ್ಲಿರುವದರಿಂದಲೂ ಅದಾಯ ತೆರಿಗೆಯನ್ನು ಮಾಪಿ ಮಾಡಬೇಕೆಂದು ಬರೆಕೊಂಡ ಅರ್ಜಿ ಮೇರೆ ಅವಳ ಸ್ಥಿತಿಯನ್ನು ಪರಿಶೀಲಿಸಿ ಆದಾಯ ತೆರಿಗೆಯನ್ನು ಮಾಫ ಮಾಡುವಂತೆ ತೀರ್ಮಾನವಾಯಿತು.

13. ಎರಡನೇ ಅಪ್ಲಿಕೇಶನು, ಮುನಿಸಿಪಲ್ ತೆರಿಗೆಯ ಬಾಕಿದಾರರ ಸ್ಥಿರಾಸ್ತಿಗಳನ್ನು ಹರಾಜು ಮಾಡಿ ಅದರಿಂದ ಸಲ್ಲಬೇಕಾದ ಬಾಕಿಯನ್ನು ಭರ್ತಿಮಾಡಿಕೊಳ್ಳಬೇಕೆಂದು ಮಾಡಿದ ರಿಪೋರ್ಟಿಗನುಸಾರವಾಗಿ, ಅಂಥಾ ಬಾಕಿದಾರರ ಸ್ಥಿರಾಸ್ತಿಗಳ ಒಂದು ಪಟ್ಟಿಯನ್ನು ತಯಾರಿಸಿ ಕಮಿಷನರಿಗೆ ಕಳುಹಿಸುವಂತೆ ನಿರ್ಣಯಿಸಲಾಯಿತು.

14. ಆಡಿಟ್ ರಿಪೋರ್ಟಿನಲ್ಲಿ ಕಾಣಿಸಿದಂತೆ ಟೋಲ್‌ಗೇಟ್ ಕಂಟ್ರಾಕ್ಟುದಾರರಾದ ಮಿ. ಶಿವನಪ್ಪಶೆಟ್ಟಿ ಮತ್ತು ಮಿ. ಯಂ. ಕರುಂಬಯ್ಯನವರಿಂದ ಟೋಲ್‌ಗೇಟ್ ಬಾಕ್ಸು ಬರತಕ್ಕದ್ದು ಬಾಕಿಗಳು ಇನ್ನು ವಸೂಲಿಯಾಗಿರುವದಿಲ್ಲವೆಂಬ ಸಂಗತಿಗಳನ್ನು ಓದಲಾಯಿತು.

ಈ ಪ್ರಕಾರದ ವಸೂಲಾತಿಯಿಂದ ಮುಂದಿನ ಕಾಲಕ್ಕೆ ಕಂಟ್ರಾಕ್ಟರುಗಳು ಹಿಂಜರಿಯುವ ಕಾರಣದಿಂದ ಆ ಬಾಕಿಗಳನ್ನು ಮಾಫ ಮಾಡುವಂತೆ ನಿರ್ಣಯವಾಯಿತು.

ಎ. ಸಿ. ಸುಬ್ಬಯ್ಯ,
(ಅಧ್ಯಕ್ಷ)

ಮೈಸೂರಿನಲ್ಲಿ ದಸರಾ.

ಯಥಾ ಪ್ರಕಾರ ಈ ವರ್ಷವೂ ಮೈಸೂರಿನಲ್ಲಿ ನವರಾತ್ರಿ ಮಹೋತ್ಸವಗಳು ವೈಭವದಿಂದ ಜರುಗಿದವು. ಆಶ್ವೀಜ ಶುದ್ಧ ಹತ್ತು ದಿನ ದಸರಾ ಮೆರವಣಿಗೆಯನ್ನು ನೋಡುವುದಕ್ಕಾಗಿ ಜನರು ಅನೇಕ ದೇಶಗಳಿಂದ ಬಂದು ಮೈಸೂರು ನಗರ ಮತ್ತು ಕೃಷ್ಣರಾಜ ಸಾಗರವನ್ನು ನೋಡಲು ಕಾತರರಾಗಿ ಅನೇಕ ಸಾವಿರ ಜನರು ಸೇರಿದ್ದರು. ಮೈಸೂರಿನ ಈ ವರ್ಷದ ದರ್ಬಾರಿಗೆ ನೆರೆದಿದ್ದ ಜನಸಂದಣಿಯು ಈ ವರೆಗೆಂದಿಗೂ ನೆರೆದಿದ್ದಿಲ್ಲವಂತೆ. ಮೈಸೂರಿಂದದರೂ ಇತರ ವರ್ಷಗಳಿಗಿಂತ ಭವ್ಯವಾಗಿಯೇ ಶೋಭಿಸುತ್ತಿತ್ತು. ಕೃಷ್ಣರಾಜ ಸಾಗರದ ಕಡೆ ಜನರ ಸಾಗುವಿಕೆಯು ಪ್ರತಿ ದಿನವೂ ನಿಬಿಡವಾಗಿಯೇ ಇತ್ತು. ಅಲ್ಲಿ ಬೃಂದಾವನದ ಸೊಬಗೂ ನೀರಿನ ನಲ್ಲಿಗಳ ಕಾರಂಜಿಗಳೂ ಜನರನ್ನು ಮುಗ್ಧಗೊಳಿಸುತ್ತಿದ್ದವು.

ವಸ್ತು ಪ್ರದರ್ಶನವೂ ಕೂಡ ಇನ್ನಿತರ ವರ್ಷಗಳಿಗಿಂತ ಹೆಚ್ಚಿನ ರಾಚನೆಗಳಿಂದ ಕೂಡಿದ್ದಾಗಿತ್ತು. ಭಾರತ ಸರಕಾರದ ಆಬ್ಕಾರಿಯ ಶಾಖೆಯವರು ತಮ್ಮ ಒಂದು ಪ್ರತ್ಯೇಕ ಶಾಖೆಯನ್ನು ಈ ಪ್ರದರ್ಶನಕ್ಕಾಗಿ ತೆರೆದಿದ್ದರು. ಟಾಟಾ ಕಂಪೆನಿಯ ವಿಜ್ಞಾನ ಮಂದಿರದವರ 'ರಾಮನ್ ಎಫೆಕ್ಟ್' ಎಂಬ ನೂತನ ಬೆಳಕಿನ ಪ್ರದರ್ಶನವು ಅದ್ಭುತವಾದದ್ದಾಗಿತ್ತು. ಜಪಾನ್‌ನವರ ವಸ್ತುಗಳಂತೂ ನೋಡುವವರ ಕಣ್ಣು ಕೋರೈಸುವಂತಿದ್ದವು. ಇವೇ ಅಲ್ಲದೆ ಇನ್ನೆಷ್ಟೋ ಆಶ್ಚರ್ಯಕರವಾದ ಪ್ರದರ್ಶನಗಳಿದ್ದವು. ಒಟ್ಟಿನಲ್ಲಿ ಪ್ರದರ್ಶನವು ಈ ವರ್ಷ ಹೆಚ್ಚು ಜಯಪ್ರದವಾಗಿತ್ತೆಂಬುದರಲ್ಲಿ ಸಂಶಯವೇ ಇಲ್ಲ.

ಮಡಿಕೇರಿ ಕೋಟೆ ಮಾರಿಯಮ್ಮನ ಗುಡಿಯ ನವರಾತ್ರಿ ಮಹೋತ್ಸವದ ಜಮಾ ಖರ್ಚಿನ ವಿವರ.

ಒಟ್ಟು ಚಂದಾ ವಸೂಲು	36—8—0
ಒಟ್ಟು ಖರ್ಚು	43—9—0
ಹೆಚ್ಚಿನ ಖರ್ಚು.	7—1—0

ಈ ಹೆಚ್ಚಿನ ಖರ್ಚು ನಾನೇ ಕೈಯಿಂದ ಸಲ್ಲಿಸಿರುವದಾಗಿದೆ.

ದೇವಸ್ಥಾನದ ಪಕ್ಕದಲ್ಲಿರುವ ಬಾವಿಯು ಅತೀ ಶೋಚನೀಯಾವಸ್ಥೆಯಲ್ಲಿರುವ ಕಾರಣ ಭಕ್ತರೂ ಮಹಿಳೆಯರೂ ಮಹನೀಯರೂ ಸ್ವಲ್ಪ ಕೃಪೆತೋರಿ ಬಾವಿಯ ಪುನರುಜ್ಜೀವನಕ್ಕೆ ಯಥಾಶಕ್ತಿ ಸಹಾಯವನ್ನೀಯಬೇಕಾಗಿ ವಿನಯ ಪ್ರಾರ್ಥನೆ.

ಟಿ. ಚಿನ್ನಸ್ವಾಮಿ ಪಿಳ್ಳೆ.

Wanted.

Candidates for Telegraph and Station Master class Allowance Rs 28. Uniform passage and quarter free. Service essential. Rules and Entrance form on annas eight.

Director,
Royal Telegraph and Rly.
Duties College.
1—4 · Bombay No 20.

ಮಾರಾಟಕ್ಕಿದೆ.

ಪೊನ್ನಂಪೇಟೆಯಿಂದ ತಿತಿಮತಿಗೆ ಹೋಗುವ ಪಬ್ಲಿಕ್ ರಸ್ತೆಯ 9 ನೇ ಮೈಲು ಕಲ್ಲಿನ ಬಳಿ ಇರುವ 45 ಎಕರೆ ನೀರಾವರಿ ಭೂಮಿ, (ಈ ಭೂಮಿಗೆ ಮೂರು ಭಾಗದಲ್ಲಿ ತಂತಿ ಬೇಲಿಯ ಬೇಲಿ ಹಾಕಲ್ಪಟ್ಟಿದೆ) 40 ಎಕರೆ ಕಿತ್ತಳೆ ತೋಟ, ವಾಸಕ್ಕೆ ಯೋಗ್ಯವಾದ ಹಂಚು ಹಾಕಿದ ಮನೆ, ಹಂಚು ಹಾಕಿದ ಕೊಟ್ಟಿಗೆ, ಕಲ್ಲು ಕಟ್ಟಿದ ನೀರು ಬಾವಿ ಮತ್ತು 50 ರಾಸು ದನಗಳು ಮಾರಾಟಕ್ಕಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

ಪಾವರ್ಗಂಗಳ ಅಚ್ಚಯ್ಯ,
ಬಸವನ ಪುರ,
4—1 ತಿತಿಮತಿ.

ಪ್ರಕಟಣೆ.

ಕಣಿವೆಸಂತೆ ಪೇಟೆಯ ಸಮೀಪ ಗುಡುಗಳಲೆ ಜಯದೇವ ಬಾಣೆಯಲ್ಲಿ ಹೊಸ ಜಾತ್ರೆ.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಪೇಟೆಯ ಬಳಿ ಗುಡುಗಳಲೆ ಜಯದೇವ ಬಾಣೆಯಲ್ಲಿ 1935ನೇ ಇಸವಿ ನವಂಬರ್ ತಾರೀಕು 3—4—5—6—7—8ರ ಭಾನುವಾರ, ಸೋಮವಾರ, ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ ಈ ಆರು ದಿವಸಗಳಲ್ಲಿ ಜಾನುವಾರುಗಳ ಒಂದು ಮಹಾ ಜಾತ್ರೆಯು ನಡೆಸಲ್ಪಡುತ್ತೆ. ಜಾತ್ರೆಯಲ್ಲಿ ದನಗಳಿಗೆ ಹುಲ್ಲು ಮತ್ತು ನೀರಿನ ಸೌಲಭ್ಯ ಚೆನ್ನಾಗಿರುತ್ತೆ. ವ್ಯಾಪಾರಿಗಳಿಗೆ ಬೇಕಾದ ಅನುಕೂಲತೆ ಚೆನ್ನಾಗಿರುತ್ತೆ. ಉತ್ತಮವೆಂದು ಆರಿಸಲ್ಪಟ್ಟ ರಾಸುಗಳಿಗೂ ಮತ್ತು ಕಟ್ಟುಗಳಿಗೂ ಬಹುಮಾನ ಕೊಡಲಾಗುತ್ತೆ. ಸರ್ವ ಜನರೂ ಈ ಜಾತ್ರೆಗೆ ದಯಮಾಡಿ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಸಿ. ಹೆಚ್. ಕಾಳೇಗೌಡ,
ಶನಿವಾರಸಂತೆ, (ಪ್ರೆಸಿಡೆಂಟ್)

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪಡಿನಾಲ್ಕನಾಡು ಮುದಪ್ಪರ ದೇವಸ್ಥಾನದ ಹೆಸರಿನಲ್ಲಿ ಭಕ್ತಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿದುಬಂದಿದೆ. ಅನ್ಯರಿಂದ ಮೂಲದೇವಸ್ಥಾನದಲ್ಲಿರುವ ಪಡಿನಾಲ್ಕನಾಡು ಮುದಪ್ಪರ ದೇವಸ್ಥಾನದ ಯಾವ ಕಾಣಿಕೆಯೂ ಹರಕೆಗಳನ್ನು ಆ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪಡಿನಾಲ್ಕನಾಡು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದ್ದರಿಂದ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದಾರರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಓ. ಯಂ. ಕುಂಞರಾಮನ್,
ಪಡಿನಾಲ್ಕನಾಡು, [26—17] ಮೇನೇಜರ್,
25—5—'35. ಪಡಿನಾಲ್ಕನಾಡು ಮುದಪ್ಪರ ದೇವಸ್ಥಾನ

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ಮೆಂಬರ ಫಾರಮುಗಳೂ, ಖಜಾನೆ ಫಾರಮುಗಳೂ, ಒಪ್ಪಿ ಮಂಜೂರಾತಿ ಫಾರಮುಗಳೂ, ಕುಟುಂಬದ ಒಪ್ಪಿಗೆ ಫಾರಮುಗಳೂ, ಜಾಮೀನು ಕರಾರು ಫಾರಮುಗಳೂ, ಶೇರ್ ಕೀಸರ್ ಕರಾರು ಫಾರಮುಗಳೂ ಮಿನಿಟ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ಲೆಡ್ಜರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಬುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಕೊಡಗು

ಅಕ್ಟೋಬರ್ ತಾ. ೧೧ನೇ ಶುಕ್ರವಾರ ೧೯೩೫.

ಓಟಿನ ಹಕ್ಕು.

ಇಂಡಿಯಾದ ಮುಂದಿನ ರಾಜ್ಯಾಂಗ ರಚನೆಯಲ್ಲಿ ಫೆಡರಲ್ ಕೌನ್ಸಿಲ್ ಆಫ್ ಸ್ಟೇಟ್, ಎಸೆಂಬ್ಲಿ ಮತ್ತು ಪ್ರಾಂತೀಕ ಕೌನ್ಸಿಲುಗಳ ಚುನಾವಣೆಯಲ್ಲಿ ಓಟು ಕೊಡಲು ಇರಬೇಕಾದ ಅರ್ಹತೆಗಳನ್ನು ಕುರಿತು ಇಂಡಿಯಾ ಸರ್ಕಾರದವರು ಬ್ರಿಟಿಷ್ ಪಾರ್ಲಿಮೆಂಟಿಗೆ ಕಳುಹಬೇಕೆಂದಿರುವ ಸೂಚನೆಗಳನ್ನು ಒಂದು ಶ್ವೇತ ಪತ್ರವಾಗಿ ಪ್ರಕಟಿಸಿರುವರು. ಅದರಲ್ಲಿ ಕೊಡಗಿಗೆ ಸಂಬಂಧಪಡುವ ನಿಬಂಧನೆಗಳು ಇನ್ನೊಂದು ಕಡೆ ಪ್ರಕಟಿಸಲ್ಪಟ್ಟಿವೆ.

ಪ್ರಾಯಕ್ಕೆ ಬಂದ ಪ್ರತಿಯೊಬ್ಬ ಗಂಡಸಿಗೂ, ಹೆಂಗಸಿಗೂ ಓಟಿನ ಹಕ್ಕಿರಬೇಕೆಂಬುವುದೇ ಹಿಂದೂ ದೇಶದ ರಾಷ್ಟ್ರೀಯ ಪಕ್ಷದವರ ಹಾಗೂ ದೊಡ್ಡ ಬಹುಮತದವರ ಅಭಿಪ್ರಾಯವಾಗಿರುವಾಗ್ಯೂ ಇಂಡಿಯಾ ಸರ್ಕಾರದವರು ಸೂಚಿಸಿರುವ ಓಟಿನ ಅರ್ಹತೆಗಳು ಸಂಪೂರ್ಣ ಅತೃಪ್ತಿಕರವೆಂದು ಹೇಳುವುದರಲ್ಲಿ ಸಂದೇಹವೇನೂ ಇಲ್ಲ. ರಾಷ್ಟ್ರೀಯ ಪಕ್ಷದವರ ಈ ನ್ಯಾಯವಾದ ಕೋರಿಕೆಯನ್ನು ಅಲ್ಲಗಳೆಯಲು, ಸರ್ಕಾರದವರು, ಪ್ರಾಯ ಬಂದವರಿಗೆಲ್ಲಾ ಓಟಿನ ಹಕ್ಕು ಕೊಟ್ಟರೆ ಓಟರುಗಳ ಸಂಖ್ಯೆಯು ವಿಪರೀತ ದೊಡ್ಡದಾಗಿ ಚುನಾವಣೆಯನ್ನು ಸರಿಯಾದ ರೀತಿಯಲ್ಲಿ ನಡಿಸಲು ಅಸಾಧ್ಯವಾದೀತು, ಓಟಿನ ಹಕ್ಕನ್ನು ನ್ಯಾಯವಾಗಿ ಉಪಯೋಗಿಸುವಷ್ಟು ತಿಳುವಳಿಕೆ ಜನ ಸಾಮಾನ್ಯಕ್ಕೆ ಇನ್ನೂ ಉಂಟಾಗಿರುವುದಿಲ್ಲವೆಂಬ ಮೊದಲಾದ ಕಾರಣಗಳನ್ನು ಕೊಟ್ಟಿರುವರು. ಈ ಕಾರಣಗಳು ಕೊಡಗಿಗೆ ಎಷ್ಟರ ಮಟ್ಟಿಗೆ ಅನ್ವಯಿಸುತ್ತವೆಯೆಂಬುದನ್ನು ವಿಚಾರಿಸುವುದು ಉಚಿತವಾಗಿದೆ.

ಹಿಂದೂ ದೇಶದ ಬಹು ದೊಡ್ಡ ಭಾಗದವರಿಗೆ ಒಪ್ಪಿಗೆಯಾಗದಿದ್ದರೂ ಕೂಡ ಬ್ರಿಟಿಷ್ ಸರ್ಕಾರದವರು ತಮ್ಮ ತೀರ್ಮಾನಗಳನ್ನು ಹಿಂದೀಯರ ಮೇಲೆ ಹೊರಿಸುವರೆಂಬುವುದು ಖಂಡಿತ. ಆದ ಮೇಲೆ, ಇಂಡಿಯಾದ ಅತೀ ಚಿಕ್ಕ ಪ್ರಾಂತ್ಯವಾದ ಕೊಡಗಿನ ವಿಶೇಷ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಇಲ್ಲಿಯ ಓಟರುಗಳ ಅರ್ಹತೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡುವುದರಲ್ಲಿ ಸರ್ಕಾರದವರಿಗೆ ಕಷ್ಟನಷ್ಟಗಳೇನೂ ಉಂಟಾಗಲಾರದು. ಬಹು ವಿರಳವಾದ ಜನಸಂಖ್ಯೆಯುಳ್ಳ ಈ ಸಣ್ಣ ಪ್ರಾಂತ್ಯದಲ್ಲಿ ಚುನಾವಣೆಯನ್ನು ನ್ಯಾಯವಾಗಿ ನಡೆಸಲಾರದಷ್ಟು ಓಟರುಗಳ ಸಂಖ್ಯೆಯು ಹೆಚ್ಚುವಂತಿಲ್ಲ. ಬೇರೆ ಪ್ರಾಂತ್ಯಗಳೊಂದಿಗೆ ಹೋಲಿಸಿ ನೋಡಿದರೆ ಇಲ್ಲಿ ಒಬ್ಬ ಪ್ರತಿನಿಧಿಯನ್ನು ಆರಿಸುವ ಕಾನ್‌ಸ್ಟಿಟ್ಯುವೆನ್ಸಿಯು ಬಹಳ ಚಿಕ್ಕದಾಗಿಯೂ, ಓಟರುಗಳ ಸಂಖ್ಯೆಯು ಬಹು ಕಡಿಮೆಯಾಗಿಯೂ ಇರುವುದು ನಿಜ. ಇಲ್ಲಿಯ ಜನಸಾಮಾನ್ಯರ ತಿಳುವಳಿಕೆಯು ಹೊರಗಿನ ಜನಸಮುದಾಯದವರದಕ್ಕಿಂತ ಹೆಚ್ಚಾಗಿದೆಯೆಂಬುವುದು, ಇಲ್ಲಿಯ ಕೌನ್ಸಿಲ್ ಚುನಾವಣೆಗಳಲ್ಲಿ ಓಟಿನ ಬೆಲೆಯನ್ನರಿತು ದೊಡ್ಡ ಸಂಖ್ಯೆಯವರು ತಮ್ಮ ಈ ಹಕ್ಕನ್ನು ಉಪಯೋಗಿಸಿದ್ದರಿಂದ ವಿಷದವಾಗಿದೆ. ಆದುದರಿಂದ ಇಲ್ಲಿ ಪ್ರಾಯಕ್ಕೆ ಬಂದವರಿಗೆಲ್ಲಾ ಓಟಿನ ಹಕ್ಕು ಕೊಟ್ಟು ಅದರ ಪರಿಣಾಮವನ್ನು ಕಂಡು ಹಿಡಿಯಲು ಅನುಕೂಲವಿದೆ. ಹಾಗೆ ಮಾಡಲು ಸರ್ಕಾರದವರಿಗೆ ಮನಸ್ಸಿಲ್ಲದಿದ್ದರೆ ಒಂದು ರೂಪಾಯಿ ಯಾ ಹೆಚ್ಚು ಕಂದಾಯ ಕೊಡುವವರಿಗೆಲ್ಲಾ ಓಟಿನ ಹಕ್ಕು ಕೊಡಬಹುದು. ಇದರಿಂದ ಸರ್ಕಾರದವರಿಗೆ ಯಾವದೊಂದು ತೊಂದರೆಯೂ ಸಂಭವಿಸಲಾರದು. ವಿದ್ಯಾಭ್ಯಾಸದ ಅರ್ಹತೆಯಲ್ಲಿ ಗಂಡಸರಿಗೆ ಸ್ಕೂಲ್ ಫೈನಲ್ ಪರೀಕ್ಷೆಯಿಂದಲೂ, ಸ್ತ್ರೀಯರಿಗೆ ಲೋವರ್ ಸೆಕೆಂಡರಿ ಪರೀಕ್ಷೆಯಿಂದಲೂ ಇಳಿದದ್ದು ಬಹಳ ಒಳ್ಳೆಯದು. ಗಂಡಸರಿಗೆ ಪ್ರೈಮರಿ ಪರೀಕ್ಷೆಯೂ, ಸ್ತ್ರೀಯರಿಗೆ ಓದು ಬರಹ ಗೊತ್ತಿರುವಿಕೆಯೂ ಸಾಕಾಗಿದೆ. ಈಗಿನ ಬದಲಾವಣೆಯಲ್ಲಿ ಕಂದಾಯದ ಅರ್ಹತೆಯನ್ನು ಅರ್ಧಕ್ಕೆ ಇಳಿಸಿದಂತೆ ಕಾಣುತ್ತದೆ. ನಾಗಿನ ಕಂದಾಯ 10 ರೂಪಾಯಿಯಿದ್ದದನ್ನು ಈಗ 5 ರೂಪಾಯಿಗೂ, ಮಿಶ್ರ ಕಂದಾಯವನ್ನು ಜಮ್ಮಾದರದಲ್ಲಿ 5 ರೂಪಾಯಿಯಿಂದ 2½ ರೂಪಾಯಿಗೂ ಇಳಿಸಿರುವಾಗ್ಯೂ ಜಮ್ಮಾ ಕಂದಾಯವನ್ನು 5 ರೂಪಾಯಿಯಿಂದ 2½ ರೂಪಾಯಿಗೆ ಇಳಿಸಬೇಕಾಗಿತ್ತು. ಅದರ ಬದಲು 3½ ರೂಪಾಯಿಗೆ ಮಾತ್ರ ಇಳಿಸುವುದರಲ್ಲಿ ನ್ಯಾಯ ಕಾಣುವುದಿಲ್ಲ; ಇದಕ್ಕೆ ಕಾರಣವೇನೆಂದು ಗೊತ್ತಾಗುವುದೂ ಇಲ್ಲ. ಇದು ಅಚ್ಚಿನ ತಪ್ಪಾಗಿರಬಹುದೇ?

ಎಸೆಂಬ್ಲಿಗೆ ಜನರು ತಮ್ಮ ನ್ಯಾಯವಾದ ಪ್ರತಿನಿಧಿಗಳನ್ನು ಆರಿಸಬೇಕಾದರೆ ನೇರಾ ಚುನಾವಣೆ ಇರಬೇಕಲ್ಲದೆ ಪರೋಕ್ಷ ಚುನಾವಣೆ ಇರಕೂಡದೆಂದು ಇಡೀ ಹಿಂದೂ ದೇಶದ ಜನರ ಮತವಲ್ಲ, ಇಂಡಿಯಾ ಸರ್ಕಾರದವರೂ, ಬ್ರಿಟಿಷ ಲಿಬರಲ್ ಮತ್ತು ಲೇಬರ್ ಪಾರ್ಟಿಗಳವರೂ ಒತ್ತಿ ಹೇಳಿದರೂ ಕೂಡ ಕನ್ಸರ್ವೇಟಿವ್ ಪಕ್ಷದ ಬಹುಮತದಿಂದ ಕೂಡಿರುವ ಬ್ರಿಟಿಷ್ ಪಾರ್ಲಿಮೆಂಟಿನವರು ಪರೋಕ್ಷ ಚುನಾವಣೆ ಪದ್ಧತಿಯನ್ನೇ ಮಂಜೂರು ಮಾಡಿರುವುದು ತುಂಬಾ ಶೋಚನೀಯವಾಗಿದೆ. ಓಟರುಗಳ ಸಂಖ್ಯೆಯು ಬಹು ದೊಡ್ಡದಾಗಿರುವಂಥ ಹಿಂದೂ ದೇಶದ ಬೇರೆ ಪ್ರದೇಶಗಳಲ್ಲಿ ನೇರಾ ಚುನಾವಣೆಯನ್ನು ನಡಿಸುವುದು ಕಷ್ಟವೆಂದಾದರೆ, ಓಟರುಗಳ ಸಂಖ್ಯೆ ಬಹು ಕಡಿಮೆಯಾದ ಈ ಪ್ರಾಂತ್ಯದಲ್ಲಾದರೂ ನೇರಾ ಚುನಾವಣೆಯ ಪದ್ಧತಿಯು ಜಾರಿಗೆ ತರಬಹುದಾಗಿದೆ.

ಕೊಡಗಿನ ಮಟ್ಟಿಗೆ ಇನ್ನೊಂದು ಹೆಚ್ಚಿನ ಕಾರಣವಿದೆ. ಬೇರೆ ಪ್ರಾಂತ್ಯಗಳಿಗೆ ಮಂಜೂರಾಗಿರುವ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರದ ಸೂಚನೆಗಳೇನೂ ಈ ಪ್ರಾಂತ್ಯದ ಪುರಾದೃಷ್ಟದಿಂದ ಇಲ್ಲಿಗೆ ಇನ್ನು ಮಾಡಲ್ಪಟ್ಟಿರುವುದಿಲ್ಲ. ಇಲ್ಲಿಯ ಕೌನ್ಸಿಲಿನ ರಚನೆಯು ಬದಲಾಯಿಸಲ್ಪಡುವುದಿಲ್ಲವೆಂದು ಈ ಮೊದಲು ಪ್ರಕಟವಾದ ಶ್ವೇತ ಪತ್ರದಲ್ಲಿ ನಮೂದಿಸಲ್ಪಟ್ಟಿತ್ತು. ಹಾಗಾದರೆ ಈಗ ಇರುವಂಥ ಕೌನ್ಸಿಲಿನಿಂದಲೇ ಎಸೆಂಬ್ಲಿಯ ಮೆಂಬರು ಆರಿಸಲ್ಪಡುವದಾದರೆ ಕೊಡಗಿಗೆ ಇದೊಂದು ದೊಡ್ಡ ಅನ್ಯಾಯವಾಗುವುದು. ಇಂಡಿಯಾದ ಬೇರೆ ಪ್ರಾಂತ್ಯಗಳ ಹೊಸ (ಕೆಳಗಿನ) ಕೌನ್ಸಿಲಿನಲ್ಲಿ ಉದ್ಯೋಗಸ್ಥ ಯಾ ನೇಮಿತ ಮೆಂಬರುಗಳಿರುವುದಿಲ್ಲ; ಬರೇ ಚುನಾಯಿತ ಮೆಂಬರುಗಳು ಇರುವರು. ಆದುದರಿಂದ ಅಂಥಾ ಕೌನ್ಸಿಲಿನವರು ಆರಿಸುವ ಎಸೆಂಬ್ಲಿ ಮೆಂಬರು ಸ್ವಲ್ಪ ಮಟ್ಟಿಗಾದರೂ ಜನರ ಪ್ರತಿನಿಧಿಯಾಗುವ ಸಂಭವವಿದೆ. ಆದರೆ ಈ ಪ್ರಾಂತ್ಯದ ಕೌನ್ಸಿಲಿನ 20 ಮೆಂಬರುಗಳ ಪೈಕಿ 4 ಜನರು ಉದ್ಯೋಗಸ್ಥರೂ ಒಬ್ಬರು ನೇಮಿತ ಮೆಂಬರರೂ ಆಗಿರುವರು. ಎಸೆಂಬ್ಲಿ ಮೆಂಬರ ಚುನಾವಣೆಯಲ್ಲಿ ಈ 5 ಮೆಂಬರರೂ ಓಟು ಕೊಡುವದಾದರೆ ಅದು ಜನರ ಪ್ರತಿನಿಧಿಯಾಗುವ ಸಂಭವವೇ ಇಲ್ಲವಾಗುವುದು. ಅಲ್ಲದೆ ಇಬ್ಬರು ಚುನಾಯಿತ ಯೂರೋಪಿಯನ್ ಪ್ಲಾಂಟರು ಮೆಂಬರುಗಳಿರುವರು. ಇವರು, ಎಸೆಂಬ್ಲಿಗೆ ಬ್ರಿಟಿಷ್ ಇಂಡಿಯಾದ ಯೂರೋಪಿಯನ್ ಪ್ರತಿನಿಧಿಗಳನ್ನು ಆರಿಸಲು ಏರ್ಪಡಿಸಲಾಗುವ 'ಎಲೆಕ್ಟೊರಲ್ ಕಾಲೇಜ'ಗೆ ಸೇರದೆ ಇರರು. ಆದುದರಿಂದ ಇವರು ಸ್ಥಳೀಯ ಕೌನ್ಸಿಲಿನಲ್ಲಾಗುವ ಎಸೆಂಬ್ಲಿ ಮೆಂಬರ ಚುನಾವಣೆಯಲ್ಲಿ ಭಾಗ ವಹಿಸಬಾರದೆಂದು ಹೇಳಬೇಕಾಗಿದೆ. ಆದಕಾರಣ ಕೊಡಗಿನಲ್ಲಿ ಎಸೆಂಬ್ಲಿಗೆ ನೇರಾ ಚುನಾವಣೆ ಪದ್ಧತಿಯನ್ನಿಡುವುದೇ ಉತ್ತಮ. ಇದು ಸಾಧ್ಯವಿಲ್ಲವೆಂದಾದರೆ ಸ್ಥಳೀಯ ಕೌನ್ಸಿಲಿನ ಚುನಾಯಿತ ಇಂಡಿಯನ್ ಮೆಂಬರುಗಳೇ ಮಾತ್ರ ಎಸೆಂಬ್ಲಿಯ ಪ್ರತಿನಿಧಿಯನ್ನು ಆರಿಸುವಂತೆ ಮಾಡುವುದು ನ್ಯಾಯವಾಗಿದೆ.

ಫೆಡರಲ್ ಕೌನ್ಸಿಲ್ ಆಫ್ ಸ್ಟೇಟಿಗೆ ನೇರಾ ಚುನಾವಣೆಯನ್ನು ಇಟ್ಟಿರುವದಾದರೂ ಅದರಿಂದ ಅಂಥಾ ಚುನಾವಣೆಯ ಉದ್ದೇಶವಾದ ಪ್ರಜಾಪಕ್ಷದ ಪ್ರತಿನಿಧಿಗಳನ್ನು ಆರಿಸುವಿಕೆಯು ಕೈಗೂಡುವಂತಿಲ್ಲ. ಯಾಕೆಂದರೆ, ಓಟರರ ಅರ್ಹತೆ ಬಹು ದೊಡ್ಡದಾಗಿರಿಸಲ್ಪಟ್ಟಿದ್ದು, ಬಹು ಸ್ವಲ್ಪ ಜನರಿಗೆ ಅಂದರೆ ಐಶ್ವರ್ಯವಂತರಿಗೆ ಮಾತ್ರ ಓಟಿನ ಹಕ್ಕು ದೊರೆತು ಜನಸಮುದಾಯದವರಿಗೆ ತಮ್ಮ ನಿಜವಾದ ಪ್ರತಿನಿಧಿಯನ್ನು ಆರಿಸಲು ಅವಕಾಶವಿಲ್ಲದಾಗುವುದು. ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸಿನಲ್ಲಿ ಓಟರರ ಅರ್ಹತೆಯು 300 ರೂಪಾಯಿಯ ಕಂದಾಯವೆಂದು ಇಡಲ್ಪಟ್ಟಿದ್ದರೂ ಅಲ್ಲಿ ದೊಡ್ಡ ದೊಡ್ಡ ಜಮೀನ್ದಾರರೂ, ವ್ಯಾಪಾರಿಗಳೂ, ಐಶ್ವರ್ಯವಂತರೂ ಹೆಚ್ಚಾಗಿರುವುದರಿಂದ ಅಲ್ಲಿ ಸುಮಾರು 13 ಸಾವಿರ ಜನರಿಗೆ ಓಟಿನ ಹಕ್ಕು ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಅವರು 20 ಜನ ಪ್ರತಿನಿಧಿಗಳನ್ನು ಆರಿಸಬೇಕಾಗಿದೆ, ಅಂದರೆ 650 ಓಟರರು ಒಬ್ಬ ಪ್ರತಿನಿಧಿಯನ್ನು ಆರಿಸುವರೆಂದಾಯಿತು. ಕೊಡಗಿನಲ್ಲಿ ಓಟರರ ಅರ್ಹತೆಯನ್ನು 200 ರೂಪಾಯಿ ಕಂದಾಯವೆಂದು ಇಟ್ಟರೆ ಒಟ್ಟಾಗಿ ಇನ್ನೆಷ್ಟು ಜನರಿಗೆ ಓಟಿನ ಹಕ್ಕು ದೊರೆಯುವುದೋ ಏನೋ? ಇದು ಬಹು ಕಡಿಮೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಬೇರೆ ಕಡೆಗಳಲ್ಲಿರುವಂತೆ ಇಲ್ಲಿ ದೊಡ್ಡ ಜಮೀನ್ದಾರರೂ, ವ್ಯಾಪಾರಿಗಳೂ, ಹಣವಂತರೂ ಇರುವದು ಬಹು ಕಡಿಮೆಯಾಗಿ, ಹೆಚ್ಚಿನವರೆಲ್ಲರೂ ಚಿಕ್ಕ ಚಿಕ್ಕ ಹಿಡುವಳಿದಾರರಾಗಿರುವುದೇ ಓಟರರ ಸಂಖ್ಯೆ ಕಡಿಮೆಯಾಗಲು ಕಾರಣ. ಆರ್ಥಿಕ ಶಾಸ್ತ್ರದ ದೃಷ್ಟಿಯಿಂದ ಇದು ಉತ್ತಮವಾದ ಸ್ಥಿತಿಯಾಗಿದೆ. ಇದಕ್ಕೆ ಉತ್ತೇಜನ ಕೊಡಬೇಕಾಗಿಯೂ ಇರಲಿ, ದವರಿಗೆ ಕೌನ್ಸಿಲ್ ಆಫ್ ಸ್ಟೇಟಿನ ಪ್ರತಿನಿಧಿತ್ವದಿಂದ ಏನಾದರೂ ಪ್ರಯೋಜನವಾಗಬೇಕಾದರೂ ಈ ಓಟರರ ಅರ್ಹತೆಯನ್ನು 50 ರೂಪಾಯಿ ಕಂದಾಯಕ್ಕಾದರೂ ಇಳಿಸುವುದು ಆವಶ್ಯಕವೆಂದು ಹೇಳಬೇಕಾಗಿದೆ. ಕೊಡಗಿನ ವಿಶೇಷ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಮೇಲಿನ ಸೂಚನೆಗಳ ಮೇರೆ ಬದಲಾವಣೆಗಳನ್ನು ಮಾಡಲು ಹಿಂಜರಿಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಓಟರುಗಳ ಅರ್ಹತೆಗಳು.

ಇಂಡಿಯಾದ ಫೆಡರಲ್ ಕೌನ್ಸಿಲ್ ಆಫ್ ಸ್ಟೇಟಿಗೂ, ಎಸೆಂಬ್ಲಿಗೂ, ಪ್ರಾಂತೀಕ ಕೌನ್ಸಿಲುಗಳಿಗೂ ಮುಂದಿನ ಚುನಾವಣೆಯಲ್ಲಿ ಓಟರುಗಳಿಗೆ ಇರಬೇಕಾದ ಅರ್ಹತೆಗಳನ್ನು ಕುರಿತು ಇಂಡಿಯಾ ಸರ್ಕಾರದವರು ಒಂದು ಶ್ವೇತ ಪತ್ರವನ್ನು ಕಳೆದ ತಾ 30 ರಲ್ಲಿ ಪ್ರಕಟಿಸಿರುವರು. ಈ ಶ್ವೇತ ಪತ್ರದಲ್ಲಿ ರುವ ಸೂಚನೆಗಳನ್ನು ಇಂಡಿಯಾ ಸರ್ಕಾರದವರು ಬ್ರಿಟಿಷ್ ಪಾರ್ಲಿಮೆಂಟಿಗೆ ಕಳುಹಿಸಲಿರುವರು. ಇದರಲ್ಲಿ ಕೊಡಗಿಗೆ ಸಂಬಂಧಪಡುವ ನಿಬಂಧನೆಗಳನ್ನು ಈ ಕೆಳಗೆ ಕೊಡಲಾಗಿದೆ.

ಫೆಡರಲ್ ಎಸೆಂಬ್ಲಿ.

ಫೆಡರಲ್ ಎಸೆಂಬ್ಲಿಯಲ್ಲಿ ಕೊಡಗಿಗೆ ಕೊಡಲ್ಪಟ್ಟಿರುವ ಒಬ್ಬ ಪ್ರತಿನಿಧಿಯನ್ನು ಕೊಡಗಿನ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರುಗಳು ಆರಿಸತಕ್ಕದು.

ಫೆಡರಲ್ ಕೌನ್ಸಿಲ್ ಆಫ್ ಸ್ಟೇಟ್.

ಕೊಡಗಿಗೆ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಕೊಡಲ್ಪಟ್ಟಿರುವ ಒಬ್ಬ ಪ್ರತಿನಿಧಿಯ ಚುನಾವಣೆಯಲ್ಲಿ ಓಟು ಕೊಡಲು ಈ ಕೆಳಗಿನ ಅರ್ಹತೆಗಳಿರಬೇಕು.

1 ಚುನಾವಣೆಯ ಪ್ರದೇಶದಲ್ಲಿ (ಕೊಡಗಿನಲ್ಲಿ) ವಾಸವಿರಬೇಕು; ಮತ್ತು

2 (ಎ) ಜಮ್ಮಾ ಕಂದಾಯವನ್ನು ನಾಗಿನ ದರದಲ್ಲಿ ಕೂಡಿಸಿ ಒಟ್ಟು ರೂ. 200 ಯಾ ಹೆಚ್ಚು ಕಂದಾಯ ಕೊಡುವವನಾಗಬೇಕು; ಅಥವಾ

(ಬಿ) ವರ್ಷಕ್ಕೆ ರೂ. 5000 ಕ್ಕಿಂತ ಕಮ್ಮಿ ಇಲ್ಲದ ಆದಾಯದ ಮೇಲೆ ಆದಾಯ ತೆರಿಗೆ ಕೊಡುವವನಾಗಬೇಕು, ಅಥವಾ

(ಸಿ) (1) ಬ್ರಿಟಿಷ್ ಇಂಡಿಯಾದ ಕೌನ್ಸಿಲಿನ ಉದ್ಯೋಗಸ್ಥನಲ್ಲದ ಮೆಂಬರು, ಯಾ (2) ಬ್ರಿಟಿಷ್ ಇಂಡಿಯಾದಲ್ಲಿ ಯಾವದಾದರೂ ಎಗ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರು ಯಾ ಒಬ್ಬ ಮಂತ್ರಿ, ಯಾ (3) ಬ್ರಿಟಿಷ್ ಇಂಡಿಯಾದಲ್ಲಿ ಶಾಸನದ ಮೇರೆ ಸ್ಥಾಪಿಸಲ್ಪಟ್ಟಿರುವ ಯಾವದಾದರೂ ಯುನಿವರ್ಸಿಟಿಯ ಸೆನೇಟಿನ ಯಾ ಕೋರ್ಟಿನ ಪ್ರೊ ಚಾನ್ಸಲರ, ವೈಸ್ ಚಾನ್ಸಲರ್, ಫೆಲೊ, ಆನರರಿ ಫೆಲೊ ಯಾ ಮೆಂಬರು, ಯಾ (4) ಬ್ರಿಟಿಷ್ ಇಂಡಿಯಾದ ಹೈಕೋರ್ಟಿನ, ಚೀಫ್ ಕೋರ್ಟಿನ, ಯಾ ಜುಡಿಷ್ಯಲ್ ಕಮಿಷನರ ಕೋರ್ಟಿನ ಜಡ್ಜಿ, ಅಥವಾ (5) ಬ್ರಿಟಿಷ್ ಇಂಡಿಯಾದ ಯಾವದಾದರೂ ಮುನ್ಸಿಪಲ್ ಕಾರ್ಪೊರೇಶನಿನ ಮೇಯರ್ ಯಾ ಮೇಯರು, ಅಥವಾ (6) ಕೆಲವು ಸ್ಥಳೀಯ ಸಂಸ್ಥೆಗಳ ಮತ್ತು ಸೆಂಟ್ರಲ್ ಸಹಕಾರಿ ಬ್ಯಾಂಕುಗಳ (ಸರ್ಕಾರಿ ಉದ್ಯೋಗಸ್ಥನಲ್ಲದ) ಮುಖ್ಯ ಅಧಿಕಾರಿ, ಆಗಿದ್ದವ ಯಾ ಈಗ ಆಗಿರುವವನಾಗಬೇಕು; ಅಥವಾ

(ಡಿ) ಸಾರ್ವಭೌಮ ಚಕ್ರವರ್ತಿಯವರು ದಯಪಾಲಿಸಿದ ಬಿರುದು ಯಾ ಬಹುಮಾನ, ಅಥವಾ ವೈಸರಾಯರು ಕೊಟ್ಟ ರಾಯ ಬಹದ್ದೂರ್, ರಾವ್ ಬಹದ್ದೂರ್, ಸರ್ದಾರ್ ಬಹದ್ದೂರ್ ಯಾ ಖಾನ್ ಬಹದ್ದೂರ್‌ಗಿಂತ ಕಡಿಮೆಯಲ್ಲದ ಬಿರುದು, ಅಥವಾ ಕೈಸರ್-ಇ-ಹಿಂದ್ ಮೆಡಲು ಪಡೆದವನಾಗಬೇಕು; ಅಥವಾ

(ಇ) ತಿಂಗಳಿಗೆ ರೂ. 150 ಕ್ಕೆ ಕಡಿಮೆಯಿಲ್ಲದ ಸಿವಿಲ್, ಮಿಲಿಟರಿ ಯಾ ಪೊಲಿಟಿಕಲ್ ಸರ್ಕಾರಿ ಪೆನ್ಶನ್ ಪಡೆಯುವವನಾಗಬೇಕು.

ಸ್ತ್ರೀಯರಿಗಿರುವ ಪ್ರತ್ಯೇಕ ಅರ್ಹತೆ

3. (1) 2 ನೇ ಪ್ಯಾರಾದಲ್ಲಿ ಹೇಳಿರುವ ಕಮ್ಮಿ ಪಕ್ಷದ ಆಸ್ತಿಯ ಯಾ ಆದಾಯ ತೆರಿಗೆಯ ಎರಡಷ್ಟು ಅರ್ಹತೆಯುಳ್ಳವನ, ಅಥವಾ (11) ಮೇಲೆ ಸೂಚಿಸಿದ 2 (ಡಿ) ಮತ್ತು 2 (ಇ) ಯ ಅರ್ಹತೆಯುಳ್ಳವನ ಪತ್ನಿಯಾಗಿರಬೇಕು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು.

ಕೊಡಗು ನ್ಯಾಯವಿಧಾಯಕ ಸಭೆಯ ಚುನಾವಣೆಯ ನಿಬಂಧನೆಗಳಲ್ಲಿ ಈ ಕೆಳಗಿನ ಬದಲಾವಣೆಗಳು ಸೂಚಿಸಲ್ಪಟ್ಟಿವೆ.

1 ಕಾನ್‌ಸ್ಟಿಟ್ಯುವೆನ್ಸಿಯಲ್ಲಿ ವಾಸವಿರಬೇಕು; ಮತ್ತು

2 (ಎ) ರೂ. 3—8—0 ಕಮ್ಮಿಯಿಲ್ಲದ ಜಮ್ಮಾ ಕಂದಾಯ ಯಾ ರೂ 5 ಕಮ್ಮಿ ಇಲ್ಲದ ನಾಗಿನ ಕಂದಾಯ ಯಾ ಜಮ್ಮಾದ ದರದಲ್ಲಿ ಲೆಕ್ಕ ಹಾಕಿದಲ್ಲಿ ರೂ. 2—8—0 ಕಮ್ಮಿಯಿಲ್ಲದ ಮಿಶ್ರ ಕಂದಾಯ ಕೊಡುವವನಾಗಬೇಕು, ಅಥವಾ

(ಬಿ) ರೂ. 5 ಕಮ್ಮಿ ಇಲ್ಲದ ಮನೆ ಯಾ ಮುನಿಸಿಪಲ್ ಕಂದಾಯ ಕೊಡುವವನಾಗಬೇಕು; ಅಥವಾ

3. ಖಾಯಂ ಮಿಲಿಟರಿಯ ಅಥವಾ ಇಂಡಿಯನ್ ಟೆರ್ರಿಟೋರಿಯಲ್ ಪಟಾಲಮಿನ ಪೆನ್ಶನಿನಿಂದ ಬಿಡುಗಡೆಯಾದ ಯಾ ಡಿಸ್ಚಾರ್ಜಾದ ಆಫೀಸರು, ನಾನ್ ಕಮಿಷನ್ಡ್ ಆಫೀಸರು ಯಾ ಸಿಪಾಯಿ ಅಥವಾ ಇಂಡಿಯನ್ ಪೊಲೀಸು ಪಟಾಲಮಿನ ಪೆನ್ಶನ್ ಸಮೇತ ರಿಟಾಯರಾದ ಯಾ ಡಿಸ್ಚಾರ್ಜಾದ ಆಫೀಸರು ಯಾ ಮನುಷ್ಯನು ಆಗಿರಬೇಕು; ಅಥವಾ

4. ಯಸ್. ಯಸ್. ಎಲ್. ಸಿ ಪರೀಕ್ಷೆ ಪಾಸಾಗಿರಬೇಕು; ಸ್ತ್ರೀಯರು ಲೋವರ್ ಸೆಕೆಂಡರಿ ಪಾಸಾಗಿರಬೇಕು.

ಒಳ್ಳೇ ವ್ಯಾಪಾರ.

(ಲೇಖಕರು—ಮಾಡಿಕ ಶಾರದಾನಾಥಯ್ಯ ತುಂಗಭದ್ರ)

ನಮ್ಮ ಹಿಂದೂ ಜನರಲ್ಲಿ ಯಾವಾಗ ಕೇಳಿದರೂ ದಾನ ಧರ್ಮದ ಮಾತುಗಳೇ! ಪುರಾಣವೇನು, ಹರಿಕಥೆಯೇನು, ಉಪನ್ಯಾಸಗಳೇನು—ಎಲ್ಲವೂ ಕೊನೆಗೆ ಒಂದೇ ಒಂದು! ಎಲ್ಲಿ ಕೇಳಿದರೂ ದಾನ ಧರ್ಮದ ಪ್ರಸಕ್ತಿ. ಇದರಿಂದ ಮಾತು ಇಂದ್ರಿಯಗಳು ಆರೋಗ್ಯವಾಗಿರುವಾಗ ಅವುಗಳ ವ್ಯಾಪಾರಗಳು ನಿಲ್ಲದೇ ನಡೆಯುತ್ತಿರುವಾಗ ಯಾವ ಜನರಿಗೆ ಅವುಗಳ ಸುದ್ದಿಯೇ ಇರುವದಿಲ್ಲವಂತೆ. ಇದೆಲ್ಲದರ ಅನುಭವವು ನಾವು ಮುಂಜಾನೆಯಿಂದ ಸಂಜೆಯ ವರೆಗೆ ಸಾವಿರಾರು ಕೆಲಸಗಳನ್ನು ಮಾಡುತ್ತೇವೆ, ಕಣ್ಣಿನಿಂದ ನೋಡುತ್ತೇವೆ, ಕಿವಿಗಳಿಂದ ಕೇಳುತ್ತೇವೆ, ಬಾಯಿಯಿಂದ ತಿನ್ನುತ್ತೇವೆ ... ಯಿಂದ ನಗುತ್ತೇವೆ. ಇನ್ನು ಏನೋ ಎಷ್ಟೋ ಕರಣಾದಿಗಳಂತೂ ಸದಾ ತಮ್ಮ ವ್ಯಾಪಾರಗಳನ್ನು ಮಾಡುತ್ತಲೇ ಇರುತ್ತವೆ. ಹಾಗಾದರೂ ಇವು ಯಾವ ... ಕಡೆಯಾಗಲೀ, ಕಣ್ಣಿನ ಕಡೆಯಾಗಲೀ ನಮ್ಮ ಮನಸ್ಸು ತಿರುಗುತ್ತದೋ? ಅವುಗಳ ಸುದ್ದಿಯು ಇರುತ್ತದೋ? ಇಲ್ಲ. ಇದೇ ಸ್ವಲ್ಪ ಕಣ್ಣು ಇರಲಿ, ಕಿವಿಯಲ್ಲಿ ಬಾಧೆ ತಲೆ— ನೋಡಿ, ಮತ್ತೆ ಮನಸ್ಸಿಗೆ ಅವುಗಳ ಧ್ಯಾನವೇ ... ಬರುವದೇನು? ನಡೆಯತಕ್ಕ ವ್ಯಾಪಾರವು ಸರಿಯಾಗಿ ಆರೋಗ್ಯವಾಗಿ ನಡೆಯುತ್ತಿರುವಲ್ಲಿ ಅದರ ಕಡೆ ಮನಸ್ಸು ... ರೋಗ ಹುಟ್ಟಿದಾಗಲೇ ಅದು ... ನಮ್ಮಲ್ಲಿ ದಾನ ಧರ್ಮಗಳ ಚರ್ಚೆ ... ವಾಗಲೂ ಯಾಕೆ?!!

ನಮ್ಮಲ್ಲಿ ಧರ್ಮದ ವ್ಯಾಪಾರವು ಹಾಳಾಗಿ ... ಗಳು ಹುಟ್ಟಿಕೊಂಡಿರಬೇಕಾಯಿತು! ಈ ನಮ್ಮ ದುರವಸ್ಥೆಯ ದೃಷ್ಟಾಂತಗಳನ್ನು ಎಲ್ಲೆಲ್ಲಿಯೂ ಕಾಣಬಹುದು. ಕಸದಲ್ಲಿ ... ದೇಶದ ರೋಗಿ ಕೃಪಾದೃಷ್ಟಿಯನ್ನಿಡುವದು ... ಧರ್ಮ ... ಹೇಗಿದೆ ನೋಡೋಣ ... ಬಂಗಾರದ ಸಾಮಾನುಗಳನ್ನು ... ಕೊಳ್ಳುವಾಗ ಬೆಲೆಗಿಂತ ಹೆಚ್ಚು ಕಾಣಿಸುವದಿಲ್ಲ. ... ಒಂದು ... ಸುಲಭ ದರದಲ್ಲಿ ... ಒಳ್ಳೆಗಾರಿ ... ಎಂದು ಹೇಳುವದೇ ಬಂತು ಎಂದು ಬಿಟ್ಟಿಗೆ ಹಾಕುವುದೇ? 'ಇಲ್ಲ'ವೆಂದು ಆಕೆಯು ಹೇಳಿದರೆ 'ಸರಿ' ಎಂದು ವೈಶ್ಯನು ... ಅವನಿಗೆ 'ಇಲ್ಲ'ವೆಂದರೆ ಇನ್ನೊಂದು ವೈಶ್ಯ ... ತಾಯಿ ಅನ್ನುತ್ತಾನೆ. ಎಷ್ಟೋ ಹೊತ್ತು ಹಾಳುಮಾಡುವರು! ಬೆಳ್ಳಿ ಬಂಗಾರ, ಜನಳ ಕೊಂಡುಕೊಳ್ಳುವದರಲ್ಲಿ, ಮುಂದಿನ ಮದುವೆ ಕಾರ್ಯಗಳಲ್ಲಿ ಸಾವಿರಾರು ... ಎರಡು ವೈಗಳಿಗೆ ಸಂಕಟ! ಇಲ್ಲಿ ಸ್ಪಷ್ಟವಾಗಿಯೇ ನಮ್ಮ ಜಂಗದ ದಾನ ಬುದ್ಧಿಯು ಕಂಡು ಬರುತ್ತದೋ ಇಲ್ಲವೋ ನೋಡಿ. ಆದರೆ 'ಒಂದೊಂದು ವೈಗೆ ಜೀಕಾರ ಮಾಡುವದೇ ಸಾವಿರಕ್ಕೆ ಬೆಳೆಯುವದ' ಎಂದು ಅನೇಕರು ಹೇಳುವದನ್ನು ನಾನು ಕೇಳಿದ್ದೇನೆ. ಇರಲಿ. ಇಲ್ಲಿ ಪ್ರಶ್ನೆ ದುಡ್ಡು ಹೇಗೆ ಬೆಳೆಯುವದು ಎಂಬುದಲ್ಲ. ನಾವು ಕೇಳಿ ಹೇಳಿದ ಸಾರುವ ದಾನ ವೆಲ್ಲಿದೆ ಎಂಬುದೇ ಪ್ರಶ್ನೆ. ಬಡವರೊಡನೆ ದುಡ್ಡು ಬಿಗಿದು ಹಿಡಿಯುವ ಚಟದಿಂದ ಕಾಣಬರುವದೇನೆಂದರೆ—ನನಗೆ ಒಡೆದು ನನ್ನು ಒಗ್ಗಿಸುವದೂ, ಸುಲಿಯುವದೂ ಒಂದು ರೂಢಿಯೇ ಆಗಿ ಹೋಗಿದೆ. (2) ಬೆಲ್ಲದ ಎರಡು ಕಾಸಿಗಾಗಿ ಅಷ್ಟು ಹೊತ್ತು ಹಾಳುಮಾಡುವ ನಮಗೆ ಹೊತ್ತಿನ ಬೆಲೆ ಏನು ಎನ್ನುವದು ಗೊತ್ತಿಲ್ಲ. (3) ಆ ಬಡವರಿಗೆ ನಮ್ಮ ವರ್ತನದಿಂದ ಮನಸ್ಸಿನಲ್ಲಿ ಎಂತಹ ವಿಚಾರಗಳು ಹುಟ್ಟುವವು ಎಂಬುದರ ಲೆಕ್ಕವೇ ನಮಗಿಲ್ಲ. ಅದೇಕೆ—ಅವರು ಎಂದಿಗೆ ಮನುಷ್ಯರ ಲೆಕ್ಕಕ್ಕೆ ಸೇರಿದವರೇ ಅಲ್ಲ. (4) ಕಡೆಗೆ ಒಂದು ದುರ್ಗುಣ ... ನಮಗೆ ಏಕಾಕಾರದ ಧರ್ಮವೇ ಆಗಿ ಕೂತಿದೆ. ಇವೆಲ್ಲವೂ ಸ್ವಲ್ಪ ವಿಚಾರವುಳ್ಳವರಿಗೆ ಒಡನೆ ಕಾಣುತ್ತದೆ. ವ್ಯಾಪಾರ ಮರ್ಯಾದೆಯ ಮೇಲೆ ನಮ್ಮ ದುರ್ವರ್ತನದ ಪರಿಣಾಮವು ಎಷ್ಟರ ಮಟ್ಟಿಗಿದೆ ಎಂಬುದರ ಸುದ್ದಿಯೇ ನಮಗಿಲ್ಲ. ಹಾಗೆ ಮಾರುವ ಬಡವರು ಮೂರ್ಖರಲ್ಲ. ಎಷ್ಟು ಒಳ್ಳೆಯ ವಸ್ತುವನ್ನು ಎಷ್ಟು ಯೋಗ್ಯ ಬೆಲೆಯಿಂದ ಮಾರಬೇಕೆಂದುಕೊಂಡರೂ ಕೊಂಡುಕೊಳ್ಳುವವರ ಪಿಟಿ ಪಿಟಿ ಏನೋ ತಮ್ಮನ್ನು ಬಿಟ್ಟದೇ ಅಲ್ಲ, ಎಂದುಕೊಂಡು ಒಳ್ಳೆಯ ವಸ್ತುವನ್ನೇ ತಂದು ... ವದು ಅಥವಾ ಅದನ್ನೇ ತಂದರೆ ಮೊದಲೇ ಬೆಲೆ ಎಷ್ಟು ಹೇಳುವದು ... ದುಗು ... ಅನಿವಾರ್ಯವಾಗಿ ಮಾಡಬೇಕಾಗಿದೆ. ಇದಲ್ಲವೆ ... ಇಲ್ಲಿ ಬೆಲೆಯ ತರಾವು ಆಗಿ ತಕ್ಕಡಿ ಮೇಲೆ ಕೂಡಿಸುವುದನ್ನು ... ದು ಅವನನ್ನು ಬಿಟ್ಟದೇ ಇಲ್ಲ. ಒಡನೇ ತಾಯಿಯಾಗಲೀ, ಕೊತ್ತಂಬರಿಯೇ ಆಗಲೀ, ಮೆಂತೆ ಪಲ್ಯವೇ ಆಗಲೀ, ಅದನ್ನು ಹಾಕಿದ ಮೇಲೆ ಸ್ವಲ್ಪ ಕೊಡು, ... ಇದೂ ಒಂದು ಧರ್ಮವೇ! ಈ ದೇಶಕ್ಕೆ ... ಬೇಡಿದರೆ ಬೇಕೆನ್ನದ ... ಯಾರಿಗೂ ಗೊತ್ತಿಲ್ಲ ... ಸಾವಿರಾರು ... ಏನೋ? 'ಕೊಡದಿದ್ದರೆ ಹಾಕುವದಿಲ್ಲ ... ನಿನಗೆ ಬೇಡ' ಎಂದು ಜೋರಿನಿಂದ ಮೇಲೆ ಹಾಕಿ ಅವರು ಆರಿಸಿದ ತರಕಾರಿ ... ವಾಗಿ ... ಆದರ ಹೊತ್ತಿಗೂ ... ಇಲ್ಲದಂತಾಯಿತು. ಇದೂ ಒಂದು ಸನಾತನ ಧರ್ಮದ ಲಕ್ಷಣವೋ? ... ಈ ಬೆಲ್ಲದ ... ವಾಗಿ ... ಹೊತ್ತು ಹಾಳು ... ಇದೆ ಅಂಧ ... ಬೆಲೆಯ ... ಬಂಗಾರದ ... ವೈಗಾಗಿ ... ಎರಡು ... ಕೊನೆಗೆ, ಈ ಬಡವರು ... ದೇವರ ಪೂಜೆಯು ... ಧರ್ಮವಾದರೆ ... ಹಾಲಿಗೆ ನೀರ, ತುಪ್ಪಕ್ಕೆ ಎಣ್ಣೆಯನ್ನು ಬೆರೆಸುವ ಅತಿ ಸಂತ್ಯಾಗೀ ... ಕಲಿಸಿ ... ಬಿಕತ್ತದೆ.

ಹೀಗಾಗಿ ಕೇಳ—ಕಾಲ ... ಕೊರಳಿಗೆ ... ವಾರದಲ್ಲಿ ... ಕಿರಾಣಿ ... ಹೇಳಿದಲ್ಲಿ ... ದು ನೋಡುವವರು ಎಷ್ಟು ಮಂದಿ? ... ಅವರೆಲ್ಲರ ... ಕಾರಣ ... ದ ಎಷ್ಟು ... ಎಂಬುದನ್ನು ನೋಡಿ ... ಕ್ಕಿಂತಲೂ ... ಹಾಳಾಯಿತು ಎಂಬುದನ್ನು ... ವೊಳಗೆ ನೋಡುವದು ... ಇಲ್ಲಿಯೇ ಇದೇ ನಿಜವಾದ ದರ್ಮದ ... ಪರಿಣಾಮವಿಲ್ಲದ ಕಾರ್ಯವಿಲ್ಲ. ... ಫಲವನ್ನು ... ದೇವರ ... ಇನ್ನು ಮೇಲಾದರೂ ... ಸಂಭಾವನೆಯ ... ನಮ್ಮ ... ಇದರಿಂದಲೇ ... ಪಿತೃವು ... ವನಂತ—

ಧರ್ಮ ಕರ್ಮ ... ನಾರಾ ...
... ಹಾರ್ ... ಕಾವಿನ್ ...

[ನಾವು ಮಾಡುತ್ತೇವೆ ಹಸನು ಬಗ್ಗಿಸದು. ನಮ್ಮ ಕೈಯಲ್ಲಿಯೇ ಎಲ್ಲ ಕೆಲಸವೂ ಇದೆ.]

ಸಾರಾಂಶ.—ಒಳ್ಳೇದನ್ನು ಕೆಟ್ಟದನ್ನು ಮಾಡುವವರೂ ನಾವೇ; ಆದರೆ ಭಾರವನ್ನೆಲ್ಲ ನಾವು ಲೋಕದ ಮೇಲೆ ಹಾಕಿ ಬಿಡುತ್ತೇವೆ. ನಿಜವಾಗಿಯೂ ನೋಡಿದರೆ ನಾವು ನಡೆಸಿದಂತೆಯೇ ಜಗತ್ತು ನಡೆಯುತ್ತದೆ.

ಶ್ರೀ ಕಾವೇರಿ ಸಂಕ್ರಮಣದ ಮುಹೂರ್ತ ಪತ್ರಿಕೆ.

ಇದೇ ಅಕ್ಟೋಬರ್ ತಾರೀಕು 14ನೇ ಸೋಮವಾರ ದಿನ 12 ಗಂಟೆ ಸಮಯುಕ್ತ ... ಕಾಲ ಹೊದೆಯಲ್ಲಿ ಅಕ್ಷಯ ಪಾತ್ರೆ ... ಶುಭ ಮುಹೂರ್ತ.

ಇದೇ ದಿನ ಮಧ್ಯಾಹ್ನದ ಮೇಲೆ ಗಂಟೆ 4ಕ್ಕೆ ಗುರುವಿನ ಕಾಲ ಹೊಳೆಯಲ್ಲಿ ದೇವರ ಭಂಡಾರದ ಕಾಣಿಕೆ ಒಪ್ಪಿಸುವದಕ್ಕೆ ಶುಭ ಮುಹೂರ್ತ.

ಇದೇ ಅಕ್ಟೋಬರ್ ತಾರೀಕು 17ನೇ ಗುರುವಾರ ಮೃಗಶಿರಾ ನಕ್ಷತ್ರದಲ್ಲಿ (ಮಧ್ಯಾಹ್ನದ ಮೇಲೆ) ಸಾಯಂಕಾಲ 5 ಗಂಟೆ 1½ ನಿಮಿಷಕ್ಕೆ ಸರಿಯಾಗಿ ತುಲಾ ಕಾವೇರಿ ಸಂಕ್ರಮಣದ ... ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚಂಗಪ್ಪ.
ಮಡಿಕೇರಿ ... (ಪ್ರೆಸಿಡೆಂಟ್)

ಹೊಸ ಪುಸ್ತಕ. ತ್ವರೆ ಮಾಡಿರಿ.

ತಾವು ಸ್ವಂತವಾಗಿ ಹಣವನ್ನು ಸಂಪಾದಿಸುವುದಕ್ಕೆ ಸುಲಭವಾಗಿ ತಿಳಿಸುವ

ವೈಗಾರಿಕೆಯ ಮರ್ಮಶಾಸ್ತ್ರ.

ಈ ಪುಸ್ತಕದಲ್ಲಿ ಸಾಬೂನುಗಳನ್ನು ಮಾಡುವ ವಿಧ, ವಿಧವಾದ ಮಸಿಗಳು, ತೈಲಗಳು, ಬಂಗಾರದ ... ಅನೇಕ ವಿಧವಾದ ... ವಿಧ ವಿವರವಾಗಿ ... ಭಾಷೆಯಲ್ಲಿ 24 ಪೇಜುಗಳೊಳಗೆ ... ಈ ಪುಸ್ತಕದಲ್ಲಿ ಹೇಳಿದ ಪ್ರಕಾರ ... ಮಾಡಿದರೆ ... ಇದನ್ನು ಓದಿ ನೋಡಿದರೆ ಸಂತೋಷಪಡುವಿರಿ. ಪುಸ್ತಕ ಒಂದಕ್ಕೆ ಬೆಲೆ ರೂ 1—0—0

ವೆಂಕಟೇಶ್ ಅಂಡ್ ಕೋ.,
... ಪಾರ್ಕ್ ಟೌನ್, ಮದರಾಸ.
Venkatesh & Co. Parktown Madras

ಡಾಕ್ಟರ್ ಮೋರ್‍ಟ್ಯುಥ್ ಎಲ್ಲಿಹಾರ.

ಪಂಡಿತ ವೈದ್ಯರು.

ಗೀತಾಂಜಲಿ ಬಿಲ್ಡಿಂಗ್.

(ಕೃಷ್ಣಾ ಥೀಯೇಟರ್ ಎದುರುಗಡೆ)

ಸಕಲ ಸ್ತ್ರೀ ರೋಗಗಳನ್ನು ಶೀಘ್ರವಾಗಿ ಗುಣಪಡಿಸುವ ಸ್ಥಳ, ಸುಂದರವಾದ ಕೃತಕ ಹಲ್ಲುಗಳನ್ನು ಮಾಡಿ ... ಪರೀಕ್ಷಿಸಿದಲ್ಲಿ ತಿಳಿಯುವದು. [52—3]

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ ಅಶೋಕಾರಿಷ್ಟ.

ಸ್ತ್ರೀಯರು ಕೃಶವಾಗಿ ... ಗರ್ಭದಿಂದಿಕೆ ... ನಿಂದ ... ಹೊಟ್ಟೆ ನೋವು, ... ಬಿಳಿ ಸೆರಗು, ... ವು, ಸೋಮರೋಗ, ಕುಸುಮ ... ಇವು ... ವೈದ್ಯರ ... ಆರೋಗ್ಯ ... ಕಾಪಾಡುವ ... ಶಕ್ತಿಯು.

ದೊಡ್ಡ ಶೀಸೆ 2—8—0
ಅರ್ಧ ಶೀಸೆ 1—6—0

ನವರತ್ನ ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ

ಅರುಚಿ ... ಕೆಮ್ಮು, ದೇಹಶಕ್ತಿ ... ನಮ್ಮ ... ಉಂಟಾಗುವ ಮನಸ್ಸಿಗೆ ಉಲ್ಲಾಸ ... ಕೊಡುವ ಪ್ರಸಿದ್ಧವಾದ ಔಷಧ. ಶೀಸೆ ದೊಡ್ಡ ಶೀಸೆ 1—8—0, ಅರ್ಧ ಶೀಸೆ 0—13—0

ಎಲ್ಲಾ ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ... ಯು.

ಸ್ಟಾಕಿಸ್ಟ್—ಎ. ಎಸ್. ಮಾಚಯ್ಯ, ಬಜೆ ವ್ಯಾಪಾರಿ, ಸಂಟಿಕೊಪ್ಪ
ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.
52—23

ನವರತ್ನ ಫಾರ್ಮಸಿ,

ವಿವಿಧ ವಾರ್ತಾವಳಿ.

ಗಾಂಧಿ ಜಯಂತಿಗೆ ಮಹಾರಾಜರ ಪ್ರೋತ್ಸಾಹ.

ಗಾಂಧಿ ಜಯಂತಿ ನಿಧಿಗೆ ಬರ್ದ್ವಾನ್ ಮಹಾರಾಜರು ರೂ. 4000ಗಳ ಕಾಣಿಕೆಯನ್ನು ಕೊಟ್ಟು ತಮ್ಮ ಪ್ರೋತ್ಸಾಹವನ್ನು ವ್ಯಕ್ತಗೊಳಿಸಿರುವರು. ಕೃತಜ್ಞತಾರ್ಹ.

—೦೦—

ಹೊಸ ವೈಸರಾಯರು.

ಭಾರತದ ಮುಂದಿನ ವೈಸರಾಯರು ಬರುವ ವರ್ಷ ಏಪ್ರಿಲ್ 11ಕ್ಕೆ ಬೊಂಬಾಯಿಯಲ್ಲಿ ಇಳಿದು ತಮ್ಮ ಪ್ರಥಮ ಕಾರ್ಯಕ್ರಮವನ್ನು ಬೊಂಬಾಯಿ ಕಾರ್ಪೊರೇಶನ್ ಹಾಲ್‌ನಲ್ಲಿ ಪ್ರಾರಂಭಿಸುವರು. ಆ ಸಮಯದಲ್ಲೇ ಈಗಿನ ವೈಸರಾಯರು ಭಾರತದಿಂದ ಲಂಡನಿಗೆ ಪ್ರಯಾಣ ಬೆಳೆಸುವರು.

—೦೦—

ಅಳ್ವಾರ್ ಮಹಾರಾಜರ ರಾಜ್ಯ ಚ್ಯುತಿ

ಅಳ್ವಾರ್ ಸಂಸ್ಥಾನಾಧೀಶ್ವರರಿಗೆ ತಾತ್ಕಾಲ ರಾಜ್ಯ ಚ್ಯುತಿಯುಂಟಾಗಿದೆಯಷ್ಟೆ. ಹಿಂದಿನ ಏರ್ಪಾಡಿನಂತೆ ಅವರು ಶೀಘ್ರದಲ್ಲೇ ಹಿಂತಿರುಗಬೇಕಾಗಿತ್ತು. ಆದರೆ ಭಾರತ ಸರಕಾರದ ಕೃಪಾ ಕಟಾಕ್ಷವು ವಕ್ರವಾಗಿದೆ. ಅವರು ಇನ್ನು 15 ವರ್ಷಗಳ ಕಾಲ ತಮ್ಮ ರಾಜ್ಯಕ್ಕೆ ಹಿಂತಿರುಗಕೂಡದಂತೆ.

—೦೦—

ಗಾಂಧೀ ಜಯಂತಿಗೆ ಕೊಲ್ಹಾಪುರ ರಾಜರ ಅಡ್ಡಿ.

ಕಳೆದ ವಾರದಲ್ಲಿ ಇಡೀ ಭಾರತದಲ್ಲೆಲ್ಲ ಅತೀ ಉತ್ಸಾಹದಿಂದ ಆಚರಿಸಲ್ಪಟ್ಟಂಥ ಗಾಂಧಿ ಜನ್ಮೋತ್ಸವವನ್ನು ಕೊಲ್ಹಾಪುರದಲ್ಲಿ ಆಚರಿಸಕೂಡದೆಂದು ಕಟ್ಟಪ್ಪಣೆಯಾಯಿತು.

ದೇಶೀಯರು ವಿದೇಶಿಯರು ಎಂಬ ತಾರತಮ್ಯವಿಲ್ಲದೆ ಸರ್ವರಿಂದಲೂ ಆಚರಿಸಲ್ಪಟ್ಟ ಈ ಉತ್ಸವಕ್ಕೆ ಅಡ್ಡಿಯನ್ನೊಡ್ಡಲು ಕೊಲ್ಹಾಪುರ ರಾಜರಿಗೆ ಮಾತ್ರ ಯಾವ ಕಾರಣವಿತ್ತೋ ತಿಳಿಯದು.

—೦೦—

ಹೆಂಗಸರಲ್ಲಿ ನಿರುದ್ಯೋಗ.

ಸುಶಿಕ್ಷಿತ ಹೆಂಗಸರಲ್ಲಿಯೂ ನಿರುದ್ಯೋಗ ಎಷ್ಟು ತೀಕ್ಷ್ಣವಾಗಿದೆ ಎಂಬುದು ಕರಾಚಿಯ ಒಂದು ಸಂಗತಿಯಿಂದ ತಿಳಿಯುತ್ತದೆ. ಅಲ್ಲಿ 30 ರೂಗಳ ಒಬ್ಬ ಶಿಕ್ಷಕಳ ಖಾಲಿ ಜಾಗಕ್ಕೆ 264 ದರಖಾಸ್ತುಗಳು ಬಂದಿದ್ದುವು. ಅದರಲ್ಲಿ 21 ಜನ ಗ್ರಾಜುಯೇಟರೂ, 46 ಅಂಡರ್ ಗ್ರಾಜುಯೇಟರೂ, ಉಳಿದವರು ಮೆಟ್ರಿಕ್ಯುಲೇಟುಗಳೂ ಇದ್ದರು.

—೦೦—

ಕರ್ನಾಟಕ ಮಹಿಳೆಗೆ ಉಚ್ಚ ಪದವಿ.

ಕರ್ನಾಟಕಸ್ಥರಾದ ಶ್ರೀಮತಿ ಕಮಲಾಬಾಯಿ ಜಮಖಂಡಿಯವರು ದಕ್ಷಿಣ ಆಫ್ರಿಕದಲ್ಲಿರುವ ಜಾಂಜಿಬಾರ್ ಬಾಲಿಕಾ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯರಾಗಿ ಹೋಗಿದ್ದಾರೆ. ಭಾರತ ಮಹಿಳೆಯರಲ್ಲಿ ಹೀಗೆ ಪರದೇಶ ಪ್ರವಾಸಮಾಡಿ ಉಚ್ಚ ಪದವಿಯನ್ನು ಪಡೆಯುವುದರಲ್ಲಿ ಇವರೇ ಮೊದಲು. ಇವರು ಪಾಶ್ಚಿಮಾತ್ಯ ವಿದ್ಯಾಪೀಠಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆದಿರುವರು.

—೦೦—

ರಾಜ್ಯಚ್ಯುತನಾದ ಕೈಸರರು.

ಕಳೆದ ಘೋರ ಯುದ್ಧದ ಸೋಲಿನ ಪರಿಣಾಮವಾಗಿ ಜರ್ಮನಿಯ ಅರಸರಾದ ಕೈಸರರು ರಾಜ್ಯಚ್ಯುತರಾಗಿ ಹಾಲೆಂಡಿನ ಡೂರ್ನ್ ಎಂಬ ಒಂದಾನೊಂದು ಹಳ್ಳಿಯಲ್ಲಿ ಕಷ್ಟ ಜೀವಿತವನ್ನು ನಡೆಸುತ್ತಲಿರುವ ವೃತ್ತಾಂತವಿದು.

ಕೈಸರರು ಈಗ ಪ್ರಾತಃಕಾಲ ಎದ್ದು ಅಲ್ಪ ಉಪಹಾರ ತೆಗೆದುಕೊಂಡು ಕೊಡಲಿಯನ್ನು ಹೆಗಲಮೇಲಿರಿಸಿಕೊಂಡು ಕಾಡಿಗೆ ಹೋಗುವರು. ಅಲ್ಲಿ ಕೈಗೆ ಎಟುಕುವ ಸಣ್ಣ ರೆಂಬೆಗಳನ್ನು ಮತ್ತು ಚಿಕ್ಕ ಮರಗಳನ್ನು ಕಡಿದುರುಳಿಸಿ ಸೀಳಿ ಸೌದೆ ಮಾಡಿ ಅದನ್ನು ಮನೆಗೆ ಕಳಿಸುತ್ತಲಿರುವರು. ಹೀಗೆ ನಡು ಹಗಲು ವರೆಗೆ ಪೂರ್ತಿ ಶ್ರಮವಹಿಸಿ ಕೆಲಸ ಮಾಡಿ ಮನೆ ಸೇರುವರು. ಅವರ ಆಹಾರವು ಈಗ ಒಬ್ಬ ಸಾಧಾರಣ ಮನುಷ್ಯನ ಆಹಾರ. ಹೋಲಿ ಸಾಮ್ರಾಜ್ಯದ ಚಿಂತೆ ಈಗ ಅವರಿಗಿಲ್ಲ. ಈಗ ಜೀವನ ಸಾಮ್ರಾಜ್ಯ ನಡೆಸುವ ಪ್ರಯತ್ನದಲ್ಲಿ ಸೌಹಾರ್ದದಿಂದ ಅನೇಕ ಗೃಹಸ್ಥರನ್ನು ಮಿತ್ರರನ್ನಾಗಿ ಮಾಡಿಕೊಂಡು ಅವರೊಡನೆ ಸಂತೃಪ್ತರಾಗಿರುವರಂತೆ. ಈ ಅದೃಷ್ಟದ ತಿರುಗಾಟದ ಮಹಿಮೆಯನ್ನು ವಿವರಿಸಲಸದಳ.

—೦೦—

ಮಹಾತ್ಮರ ಸಂದೇಶ.

'ತಮ್ಮ ಜನ್ಮೋತ್ಸವದ ನಿಮಿತ್ತ ದೇಶಕ್ಕೊಂದು ಸಂದೇಶವನ್ನು ಕೊಡಬೇಕೆಂದು ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು ಮಹಾತ್ಮರನ್ನು ಕೇಳಿಕೊಂಡದ್ದಕ್ಕೆ ಮಹಾತ್ಮರು ಈ ಪ್ರಕಾರ ಬರೆದಿರುವರು.

'ನನ್ನ ಹುಟ್ಟಿದ ದಿನವೆಂದರೆ ನನ್ನ ಪಾಲಿಗೆ ಚರಕದ ದಿನವೇ ಆಗಿದೆ. ಅದ್ದರಿಂದ ಜಯಂತೀ ಸಪ್ತಾಹವು ಚರಕಾ ಸಪ್ತಾಹವೇ ಆಗಿದೆ. ನನ್ನ ಹುಟ್ಟಿದ ದಿನದ ಸಂದೇಶವನ್ನು ಕೊಡುವದಾದರೆ ಖಾದಿಯ ಹೊರತು ಮತ್ತೇನನ್ನೂ ಹೇಳಲಾರೆ'

—೦೦—

ಸತ್ತವರನ್ನು ಬದುಕಿಸುವ ಅದ್ಭುತ ಶೋಧ.

ಕಳೆದ ಆಗೋಸ್ತು ತಾರೀಖು 19ರಲ್ಲಿ ನಡೆದ ಅಂತರರಾಷ್ಟ್ರೀಯ ಶಾಸ್ತ್ರಜ್ಞರ ಮಹಾಸಭೆಯಲ್ಲಿ ರಷ್ಯಾದ ಪ್ರಸಿದ್ಧ ಶಾಸ್ತ್ರಜ್ಞರಾದ ಮಿ ಎಸ್ ಬ್ರುಕನ್ಕೊಟ್ಟರು ಪ್ರಾಣ ಹೋಗಿ ಮೂವತ್ತು ನಿಮಿಷ ಅಂದರೆ ½ ತಾಸಿನೊಳಗೆ ಪ್ರಾಣವಾಯುವಿನಿಂದ ಶವವನ್ನು ಬದುಕಿಸಬಹುದೆಂದು ಹೇಳಿದರು. ಆ ಸಮಯವಾದನಂತರ ಶರೀರದ ನರನಾಡಿಗಳು ಸ್ಥೂಲವಾಗಿ ಬರುವುದರಿಂದ ಆನಂತರ ಸಾಧ್ಯವಿಲ್ಲವಂತೆ

—೦೦—

೫ ಲಕ್ಷ ಕಾಂಗ್ರೆಸು ಸದಸ್ಯರು.

ದೇಶದ ಆರ್ಥಿಕ ಸ್ಥಿತಿಯು ಬಹು ಹೀನಾವಸ್ಥೆಯಲ್ಲಿರುವದಾದರೂ ಕೂಡ ಕಾಂಗ್ರೆಸು ಸಂಸ್ಥೆಗೆ ಈಗಾಗಲೇ 5 ಲಕ್ಷಕ್ಕಿಂತ ಮೇಲ್ಪಟ್ಟು ಸದಸ್ಯರುಗಳು ಸೇರಿರುವರಾಗಿ ತಿಳಿದು ಬಂದಿದೆ

ಈ ಮಹಾ ಸಂಸ್ಥೆಯ ಮುಂದಿನ ಅಧ್ಯಕ್ಷ ಪದವಿಗೆ ಶ್ರೀ ರಾಜಗೋಪಾಲಾಚಾರ್ಯರು ಒಪ್ಪಿರುವದಿಲ್ಲ. ಪಂಡಿತ ಜವಾಹರಲಾಲರು ಸ್ವಾಗತಾಧ್ಯಕ್ಷರಾವದಕ್ಕೆ ಒಪ್ಪಿರುವದರಿಂದ ಇನ್ನು ಶ್ರೀ ಜಮ್ನಾಲಾಲ್ ಬಜಾಜ್, ಅಬ್ದುಲ್ ಗಫಾರ್ ಖಾನ್, ಪಟ್ಟಾಭಿ ಸೀತಾರಾಮಯ್ಯ ಮತ್ತು ಟಿ ಪ್ರಕಾಶಂ ಇವರುಗಳ ಹೆಸರು ಅನೇಕರಿಂದ ಸೂಚಿಸಲ್ಪಟ್ಟಿವೆ. ಯಾವದೂ ನಿಶ್ಚಿತವಾಗಿಲ್ಲ.

—೦೦—

ಮೊಸಲ್ ಪ್ರಾಂತವು ಜರ್ಮನಿಗೆ.

ಯುರೋಪಿನ ಮೊಸೆಲ್ ಪ್ರಾಂತವು ಜರ್ಮನಿಗೆ ಸೇರಿದ್ದು ಯುದ್ಧವಾದನಂತರ ಫ್ರಾನ್ಸಿಗೆ ಸೇರಿತು. ಅಲ್ಲಿ ಜರ್ಮನರದೇ ಪ್ರಾಬಲ್ಯ. ಕೆಲವು ದಿನಗಳ ಕೆಳಗೆ ಚುನಾವಣೆಗಳು ನಡೆದವು. ತಮ್ಮ ಜಯವನ್ನು ಸಾಧಿಸಲು ಈ ಜರ್ಮನರು ಅತ್ಯಂತ ಗೊಂದಲವೆಬ್ಬಿಸಿದರು. ಅದು ಯಾವ ಗದ್ದಲವೂ ಇಲ್ಲದೆ ನಡೆಯಲು ಅಂತರರಾಷ್ಟ್ರೀಯ ಅಧಿಕಾರಿಗಳ ಮೇಲ್ವಿಚಾರಣೆ ನಡೆಸಬೇಕಾಯಿತು. ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿಲ್ಲ. ಆದರೂ ಶೇಕಡ 75ರಷ್ಟು ಓಟುಗಳನ್ನು ಜರ್ಮನರು ಪಡೆದಿರುವರೆಂದು ಊಹಾಪೋಹಗಳು ಎದ್ದಿವೆ. ಅಂತೂ ಜರ್ಮನರು ಗೆಲ್ಲುವುದರಲ್ಲಿ ಸಂದೇಹವೇ ಇಲ್ಲ

—೦೦—

ಸಪ್ರು ಜಯಕರರವರಿಗೆ ಉಚ್ಚ ಪದವಿಗಳು.

ಹಿಂದೂಸ್ಥಾನದ ಮುಂದಿನ ರಾಜ್ಯಾಂಗ ರಚನೆಯಲ್ಲಿನ ಫೆಡರಲ್ ಸರಕಾರದ ಮುಖ್ಯ ಮಂತ್ರಿಗಳಾಗಿ ಸರ್ ತೇಜ್ ಬಹದೂರ್ ಸಪ್ರುರವರು ನೇಮಕ ಹೊಂದಲ್ಪಡುವರೆಂದೂ, ಫೆಡರಲ್ ಸುಪ್ರೀಮ್ ಕೋರ್ಟಿಗೆ ಶ್ರೀ ಎಂ ಆರ್. ಜಯಕರರವರು ಜಡ್ಜರಾಗಿ ನೇಮಕವಾಗುವರೆಂದೂ ಊಹೆ ಹೊರಟಿದೆ

—೦೦—

ಗಾಳಿಯಲ್ಲಿ ಸೈಕಲ್ ಹಾರಾಡಿಸುವುದು.

ಪೆಟ್ರೋಲನ್ನಾಗಲೀ, ಇಂಜಿನ ಶಕ್ತಿಯನ್ನಾಗಲೀ ಉಪಯೋಗಿಸದೆ ಹರ್ ಡ್ಯಾಂಬಿಯಲಸ್ ಜರ್ಮನನೊಬ್ಬನು ಗಾಳಿಯಲ್ಲಿ 255 ಯಾರ್ಡು ದೂರ ಸೈಕಲ್ ಹಾರಿಸಿರುವನು. ಈ ಹಾರಾಟವು ಬರೇ ಪೆಡಲ್‌ಗಳ ಮೂಲಕ 3 ಅಡಿ ಎತ್ತರದಲ್ಲಿ ನಡೆಸಲ್ಪಟ್ಟಿತು. ಗಾಳಿಯಲ್ಲಿ ಸೈಕಲನ್ನು ಹಾರಿಸುವ ಕೆಲಸ ಇದೀಗ ಪ್ರಥಮ ಸಲ ಜಯಶೀಲವಾಗಿ ಕಾರ್ಯಕ್ಕೆ ತರಲ್ಪಟ್ಟಿತು. ಈ ಸಾಹಸಿಯು 3 ಸಲ ಪ್ರಯತ್ನ ಮಾಡಿದನು. ಮೊದಲನೇ ಸಲ 210 ಯಾರ್ಡು ಹಾರಿದನು, 2ನೇ ಸಲ 255 ಅಡಿ ದೂರ ಹಾರಿದನು, 3ನೇ ಸಲ ಸೈಕಲ್ ಯಂತ್ರವು ಕೆಳಗೆ ಬಿದ್ದು ಹೋಯಿತು. ಮನುಷ್ಯನ ಬರೀ ಶರೀರ ಶಕ್ತಿಯಿಂದ ಸೈಕಲನ್ನು ಗಾಳಿಯಲ್ಲಿ ಹೆಚ್ಚು ದೂರ ಹಾರಾಡಿಸಲು ಸಾಧ್ಯವಿಲ್ಲವೆಂದು ತಜ್ಞರ ಅಭಿಪ್ರಾಯವಾಗಿದೆ.

—೦೦—

೫೦ ವರ್ಷಗಳ ಪ್ರತಿಜ್ಞೆಗೆ ಭಂಗವಾಯಿತು.

(ಪಂಡಿತ ಮದನ ಮೋಹನ ಮಾಳವೀಯರು)

ಶರ್ಮರು ಉಪವಾಸ ಬಿಟ್ಟರು.

ಕಲ್ಕತ್ತೆಯ ಕಾಳೀ ದೇವಾಲಯದಲ್ಲಿನ ಭೀಕರ ಪ್ರಾಣಿ ವಧೆಯನ್ನು ನಿಲ್ಲಿಸದಿದ್ದರೆ ಮರಣಾಂತಿಕ ಉಪವಾಸ ಮಾಡುವದಾಗಿ ದೃಢಸಂಕಲ್ಪವನ್ನು ಮಾಡಿಕೊಂಡಿದ್ದ ಪಂಡಿತ ರಾಮಚಂದ್ರ ಶರ್ಮರ ದೇಹಸ್ಥಿತಿಯು ಅತೀ ಶೋಚನೀಯಾವಸ್ಥೆಗೆ ತಲಪಿದ್ದರಿಂದ ಪಂಡಿತ ಮದನ ಮೋಹನ ಮಾಳವೀಯರು ಅಲ್ಲಿಗೆ ಹೋಗಿದ್ದರು. ೫೦ ವರ್ಷಗಳಿಗೆ ಹಿಂದೆ ಬಿ ಎ ಪರೀಕ್ಷೆಗೆ ಕಲ್ಕತ್ತ ನಗರಕ್ಕೆ ಹೋದಾಗ ಈ ದೇವಾಲಯದಲ್ಲಿನ ಪ್ರಾಣಿವಧೆಯ ಭೀಕರತೆಯನ್ನು ಪ್ರತ್ಯಕ್ಷ ಕಂಡು 'ಇನ್ನು ಮುಂದೆ ಆ ದೇವಾಲಯಕ್ಕೇ ಕಾಲಿಡುವದಿಲ್ಲ'ವೆಂದು ಅವರು ಪ್ರತಿಜ್ಞೆ ಮಾಡಿದ್ದರು. ಆದರೆ ಇಂದು ಪಂಡಿತ ರಾಮಚಂದ್ರರ ಜೀವವನ್ನು ಉಳಿಸುವ ಕಾರ್ಯಕ್ಕಾಗಿ ತಮ್ಮ ಪ್ರತಿಜ್ಞೆಗೆ ಭಂಗವುಂಟಾಗ, ಕಳೆದ ಸೋಮವಾರ ಕಾಳೀ ದೇವಾಲಯಕ್ಕೆ ಹೋಗಿ ಅಲ್ಲಿನ ಪೂಜಾರಿ ಪಂಡರುಗಳೊಡನೆ ಪ್ರಸ್ತಾಪ ನಡೆಸಿ ಬಹಳ ಕಷ್ಟದಿಂದ ರಾಮಚಂದ್ರರ ಪ್ರಾಣವನ್ನುಳಿಸಲು ದೀರ್ಘ ಪ್ರಯತ್ನ ಮಾಡಿ ಒಂದು ವರ್ಷದೊಳಗಾಗಿ ಪ್ರಾಣಿವಧೆಯನ್ನು ನಿಲ್ಲಿಸುವ ಏರ್ಪಾಡು ಮಾಡುವೆನೆಂದೂ ಹಾಗೆ ನಿಲ್ಲಿಸಲ್ಪಡದಿದ್ದಲ್ಲಿ ಪುನಃ ಶರ್ಮರು ತಮ್ಮ ಉಗ್ರ ವ್ರತವನ್ನು ಕೈಕೊಳ್ಳಬಹುದೆಂದೂ ಪ್ರತಿಜ್ಞೆಯಿಂದ ಭರವಸೆಯನ್ನು ಕೊಡಲು, ಅದರಂತೆ ಶರ್ಮರಿಗೆ ತಿಳಿಸಿದ ಮೇಲೆ ಶರ್ಮರವರು 32 ದಿನಗಳ ನಂತರ ಅವರ ಉಪವಾಸ ವ್ರತವನ್ನು ಈ ತಾ. 7ನೇ ಸೋಮವಾರ ಕೊನೆಗಾಣಿಸಿದರು.

—೦೦—

Reg. No. M. 1550

11-10-1935

KODAGU

ಕೊಡಗು

IF NOT delivered please return to "KODAGU" OFFICE, MERCARA.

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.
—•—
ಬೆಲೆಯ ವಿಷಯಕ್ಕೆ ಕಾಗದ ಬರೆಯಿರಿ.

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೧೧ ನೇ ಶುಕ್ರವಾರ. [ಸಂಚಿಕೆ ೨೧

By Appointment
To H. E. The Governor of Madras.

CUPS AND MEDALS.

Telephone: 3145

Telegrams 'PRECIOUS.'



V. SUBRAMANIA IYER.

Jeweller, & Diamond Merchant,

52-47 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office,—UDIPI (S. Kanara)

It will pay you if you call at our offices at MERCARA or VIRARAJENDRAPET

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) Production of pass books unnecessary at each withdrawal.
(3) Accounts transferred from one office to another free of any charges.

(4) Cumulative Deposits—a speciality.

Advances granted on approved securities on easy terms.

All kinds of banking business transacted. For further particulars please apply to any of our offices.

Udipi, 29-7-1935 52—48 M. Srinivasa Prabhu, Manager.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಉದಾರವಾದ ಕೃಟ್ಟಿ ಭೂಕಂಪ ಸೌಲಭ್ಯಗಳು.

(1) ಆಮ ಪಂಗಡಗಳವರಿಗೆ ಪ್ರೀಮಿಯಂ ಇಲ್ಲದೆ ಪಾಲಿಸಿಗಳು ಜಾರಿಯಲ್ಲಿರವದು
(2) ಕ್ಲೇಮುಗಳು ಮತ್ತು ಪಾಲಿಸಿಯು ಅತೀ ಬೇಗ ಮತ್ತು ತೃಪ್ತಿದಲ್ಲಾಗುವುದು.
(3) ಸಾಲಗಳಮೇಲಿನ ಬಡ್ಡಿಯ ದರವು 4½%ಗೆ ಇಳಿಸಲ್ಪಟ್ಟಿದೆ.
(4) ಹೊಸ ಜಾರಿಗೆ ತರುವ ಕರಾರುಗಳು ಸುಲಭ ರೀತಿಯಲ್ಲಿವೆ

ಜಾರಿಯಲ್ಲಿರುವ ವಿಮೆಗೊಬಲಗು (ಹೆಚ್ಚು) 265 ಲಕ್ಷ
ದೇವಾದೇವಿಯಲ್ಲಿರುವದೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ 16 ಲಕ್ಷ
ವಿಮಾ ಹಣ್ಯಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾಲಯೋಜನೆ 25% | ಎಂಡೋಮೆಂಟ್ ಪಾಲಿಸಿಗಳಿಗೆ ಸಾಲಯೋಜನೆ 20%

ವಿಶ್ವಸ್ತಿಯ ವಿಮಾ ವಗಳು ವಿಶೇಷ ಲಾಭದಾಯಕ

ಇತರ ವಿವರಗಳಿಗೆ ಕೆಳಕಂಡ ವಿಳಾಸಕ್ಕೆ ಬರೆಯಿರಿ.—

ಟಿ. ಬಿ. ಭಾಗವತ, ಎಮ್. ಎ. ಎಲ್. (ಲಂಡನ್).
ಜನರಲ್ ಮ್ಯಾನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ.—
ವಿ. ಎಸ್ ಎಸ್ ಅಯ್ಯಂಗಾರ್
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡು

51—19

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000—0—0
ವಸೂಲಾದ ಶೇರ್ ಮೊಬಲಗು	—	36,030—0—0
ಜನರಿಂದ ಠೇವಣಾತಿ	—	2,48,305—14—8
ವಸೂಲಾದ ಕ್ಷೇಮನಿಧಿ	—	94,623—6—0

ಈ ಬ್ಯಾಂಕಿನಿಂದ ಕೊಡಗು ಜಿಲ್ಲಾ ಸಹಕಾರಿ ಸಂಘಗಳಿಗೆ ಸಾಲ ಕೊಡಲಾಗುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ ರೂ. 4—8—0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ವಾರ್ಷಿಕ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಡ ಪರ್ಮನೆಂಟ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು,	ಸೆಕ್ರೆಟರಿ
ಪಂದ್ಯಂಡ ಎ. ಬೆಳ್ಯಪ್ಪನವರು.	ರಾ. ಸಾ. ಐಚಂಡ ಚಂಗಪ್ಪನವರು,

ಮ್ಯಾನೇಜರ್
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—9—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜ ಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಿರುವರು. ಮಗುವು ಹುಟ್ಟಿ ದೃಢವಾಗಿ, ಸುಖದಿಂದ ಬಾಳುವುದಕ್ಕೆ ಬೇಕಾಗಿರುವ ಅಂಶಗಳನ್ನು ಹೊಂದಿರುವ, ಅನೇಕ ರೋಗಗಳಿಗೆ ರಾಮಬಾಣವಾಗಿರುವ ಪ್ರಸಿದ್ಧಿ ಹೊಂದಿರುವ

ಡೋಲಿಂಗರ ಬಾಲಾಮೃತವನ್ನೆ

ಕೊಡಬೇಕು. ಡೋಲಿಂಗರ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಯಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್—

ಕೆ. ಟಿ. ಡೋಲಿಂಗರ ಕಂಪೆನಿ,
(52—33) ಸಿದ್ದಾಪುರ್, ಕೊಡಗು.

EMPIRE OF INDIA LIFE ASSURANCE CO., LTD.

WANTED

Influential and active persons who can guarantee business are required to work as Organisers of the Company in the areas detailed below. Applicants should be well known in the locality and must have considerable influence. Previous experience in the line will be preferred.

BANGALORE	MYSORE
COORG	HASSAN
KADUR	SHIMOGA.

Also applications for agencies are solicited from important centres where the Company is not well represented. The Company is very well known for its low Premiums, economical management, sound investments and prompt settlement of claims. In the past 38 years it has built up an excellent position of financial strength and great popularity. It will be easy to organise and secure business for the Company and earn a very decent and steady income.

For further particulars please apply to—

Branch Secretary,
EMPIRE OF INDIA LIFE ASSURANCE CO., LTD.,
52—48 152/3, Commercial Street Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವ ವಿಮೆ ಕಂಪೆನಿ ಲಿಮಿಟೆಡ್.

(ಸ್ಥಾಪಿತವಾದದ್ದು 1874ರಲ್ಲಿ) (ಹೆಡ್ ಆಫೀಸು—ಬೊಂಬಾಯಿ.)

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮುಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸು ಶಿಲ್ಕು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನು ಮತ್ತು ಪ್ರಸಿದ್ಧಿಯನ್ನು ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮ್ಯಾನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರಾ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪೂರು	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನಾ	ಸಿಂಗಪೂರ
ಅಲಹಾಬಾದು	ಢಕ್ಕಾ	ಲಕ್ನೋ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂದ್ರಮ್
ಬರೇಲಿ	ಜಲಗಾಂವ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬತ್ತೂರು	ಗುಂಟೂರು	ಜಲ್ಪೈಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು. 52—39

ಎಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು,
ಕಾಟ್ರಿಜುಗಳು, ಹತ್ಯಾರುಗಳು
ಮತ್ತು ಶಿಕಾರು ಹಿಡಿಯಲು
ಅವಶ್ಯಕವಾದ ಎಲ್ಲಾ ಸಲ
ಕರಣೆಗಳು ವಿಕ್ರಯಕ್ಕು
ಸಿದ್ಧವಿರುವವು.

ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329–331, Abdul Rehman Street,
26—6 BOMBAY, 3.

Printed & published by P. I. Belliappa at "Kodagu" Press, Mercara for 'Kodagu' Ltd.

ಶಾಕ್ತಿಯೊದ ಔಷಧಗಳು.

ಅಂತ್ರಿಯ ಸ್ತ್ರೀಯರ ಕಾಯಿಗೆ ಎಂಬ ಲಿತಿ ವಿಲಾಸ ಶಾಸ್ತ್ರಗಳು.

ಈ ಅದ್ಭುತವಾದ ಶಾಸ್ತ್ರಯನ್ನು ಪ್ರಾರಂಭಿಸುವದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಸಕ್ಕರೆ ಸೇರಿಸಿ ತೆಗೆದು ಕೊಳ್ಳಬೇಕು. ಈ ತರ ಧಾತು ವೃದ್ಧಿಯಾಗಿ ಗಟ್ಟಿಯಾಗುವದು. ಔಷಧವನ್ನು ತಿಂದು ಗಂಟೆ ಕಾಲ ಕಳೆದು ಸ್ತ್ರೀ ಸಂಗ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನು, ಆನಂದವನ್ನು ಕೊಡುವದು. ಈ ಶಾಸ್ತ್ರಗಳಿಗೆ ದೇಶ, ಧಂಗಾರ, ಕಾಮ್ಯ ಧರ್ಮವು ಎಷ್ಟೇ ಶಾಸ್ತ್ರವೂ ಸಮಾನವಾಗಲಾರದು. ಅದು ಅಲ್ಲದೆ ಧಾತುವು ನೀರಿನಂತೆ ಇದ್ದರೂ ಶೀಘ್ರಸ್ಖಲನವಾದರೂ ಸ್ತ್ರೀ ಸಂಘಕ್ಕೆ ಹೋದರೇ ಸ್ಖಲನವಾದರೂ, ಮೂರು ದಿವಸದಲ್ಲಿ ನಿಲ್ಲಿಸುವದು. ಎಲ್ಲರೂ ಸೇವಿಸಬಹುದು. ಡಬ್ಬಿ 1ಕ್ಕೆ ಕ್ರಯ ರೂ. 1—8—0.

ಲಿವಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರಿ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯನ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ವೈದ್ಯರಿಂದಲೂ, ವ್ಯಾಯಾಮ ಕಸರತ್‌ನಿಂದಲೂ, ಯೌವನಾಗಲೂ ಕಡಕುತನಿಂದೇ ಇದ್ದರೂ ಹಸ್ತ ಪ್ರಯೋಗಾದಿಗಳಿಂದಲೂ ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ವ್ಯಾಯಾಮ ಇಲ್ಲದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವದಕ್ಕೆ ಆಗುವದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ)ದಲ್ಲಿಯೂ ಇಂಥಾ ವ್ಯಾಧಿಗಳನ್ನು ಹೊಂದುವವರೂ ಇರುತ್ತಾರೆ. ಇಂಥಾ ವ್ಯಾಧಿಯನ್ನು ಬೇಗ ಗುಣಪಡಿಸುವ ಸಾಧನವು ರತಿ ಸುಖಕ್ಕೆ ಶಕ್ತಿ ಇಲ್ಲದ ಅಂಗಕ್ಕೆ ಈ ದಿಂದ ಬಲವನ್ನಿತ್ತು ಮನೋಧೈರ್ಯವನ್ನುಂಟುಮಾಡುತ್ತದೆ. ಇಂಥಾ ಉಪಯೋಗಕ್ಕೋಸ್ಕರವಾಗಿ ಇಂಗ್ಲಿಷ್ ದೇಶದಿಂದ ಈ ತೈಲವನ್ನು ತರಿಸಿ ಮಾರಲ್ಪಡುತ್ತದೆ. ಇದು ಉಪಯುಕ್ತದ ಮೇಲೆ ಈ ದಿನದ ಸ್ಥಿತಿಗತಿಯಿಂದ ಗುಣವಾಗುವದು. ಮತ್ತು ಕೆಲವು ಬಲಹೀನಾಂಗಗಳೂ ದೃಢವಾಗುವವು. ಉಪಯೋಗಿಸುವ ವಿಧ ಬಾಟ್ಲಿ ಜೊತೆಯಲ್ಲಿದೆ.

ಕ್ರಯ ಸೀಸೆ 1ಕ್ಕೆ ರೂ. 1—4—0

ಟಿ. ಆರ್. ರಾಯುಲು ಕಂಪನಿ,

3 ಕೃಷ್ಣಪ್ಪ ನಾಯಕ ಅಗ್ರಹಾರ ಬೀದಿ,

52—2 ಜಿ. ಟಿ. ಮದ್ರಾಸ್.

ಸೆಲ್ಪ್ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ

ಇಂಗ್ಲಿಷ್ ಓದುವದನ್ನು, ಬರೆಯುವದನ್ನು, ಮಾತಾಡುವದನ್ನು, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವದನ್ನು 2 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಿಲ್ಲ. 884 ಪೇಜುಗಳ ದೊಡ್ಡ ಪುಸ್ತಕ. ಸ್ಟಾಕು ಕಡಿಮೆ ಇರುವದರಿಂದ ಬೇಗನೇ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ. 2

METHA & Co.

11 Peryanayakaran Street.

12—9 G. T. Madras

ರೋಲ್ಡ್ ಗೋಲ್ಡ್ ರಿಸ್ಟ್ ವಾಚ್.



ಈ ಗಡಿಯಾರಗಳು ಬಹು ಪ್ರಖ್ಯಾತಿ ಹೊಂದಿದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್ ಮೇಡ್) ತಯಾರಾಗಿವೆ. ಇವು ಬರಾಬರಿ ಗಂಟೆಯನ್ನು ತೋರಿಸುವವು. ಈ ಗಡಿ ಕಂಪೋಸ್ಟುಳ್ಳರುವದು. ಇದರ ಕೇಸು ಧಂಗಾರದ್ದು ಹೊಳೆಯುತ್ತಿದೆ. ಈ ಗಡಿಯಾರಗಳಿಗೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 5—8—0.

METHA & CO.

11 Peryanayakaran Street.

12—9 G. T. Madras.

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಏಲೋಪತಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನದಲ್ಲಿ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಉರಿಯುವದು, ನಾಲಿಗೆ ಒಣಗುತ್ತಿಕೆ, ಒಳಜ್ವರ, ಅಶಕ್ತಿ, ಇವುಗಳನ್ನೆಲ್ಲಾ ಹೋಗಲಾಡಿಸಿ ಮನಸ್ಸನ್ನು, ದೇಹ ಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವದು. ಶರೀರಕ್ಕೆ ಆರೋಗ್ಯವನ್ನು ಮುಖ್ಯ ಶಕ್ತಿಯನ್ನು, ಕಾಂತಿಯನ್ನು ಉಂಟುಮಾಡುವದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಮಲೇರಿಯಾ ನಿವಾರಿಣಿ.

(ಚಳಿಜ್ವರ, ದಿನಜ್ವರ, ಮೂರು ದಿನದ ಜ್ವರ, ಶೀತಜ್ವರ, ಪಿತ್ತಜ್ವರ, ಗಡ್ಡೆ ಜ್ವರ, ವಿಷಮಜ್ವರ, ಪ್ರಾಚೀನ ಜ್ವರ, ವಾಯು ಜ್ವರ, ಜ್ವರದ ಜೊತೆಯಲ್ಲಿರುವ ಕೆಮ್ಮು ಮುಂತಾದ ಜ್ವರ, ಕಫ ಕೆಟ್ಟ ಶೀತ ಜ್ವರಗಳು.) ಜ್ವರ, ಪಿತ್ತಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಚ್ಯವನ ಪ್ರಾಶ—ಡಬ್ಬಿ 1ರ 2—8—0. ಅರ್ಧಕ್ಕೆ ರೂ 1—5—0.

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ನಂಬರು 1, ಮಂಗಳೂರು.

(1) ಪಿ. ಎಂ. ಸೀತಾರಾಮ, ದೇವರಕೇರಿಪೇಟೆ, ಮಡಿಕೇರಿ (ಕೊಡಗು).

(2) ಎ. ಎಸ್. ವೆಂಕಟಪ್ಪ, ಔಷಧ ವ್ಯಾಪಾರಿ, ಪುಂಜಾಲಕಟ್ಟೆ.

(3) ಮೆಸರ್ಸ್ ರಾಮನಾಥ ಎಂಡ್ ಕಂ, ಡಿಸ್ಪೆನ್ಸರಿ ಗಿರ್ಗಾಂವ್ ಬ್ಯಾಕ್ ರೋಡ್, ಬೊಂಬಾಯಿ ನಂ. 4.

52—13 (4) ಮೆಸರ್ಸ್ ದೊಡ್ಡ ಬಳ್ಳಾಪುರ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

FRASER'S

FOOTWEAR
have
the HALLMARK of
distinctive finish,
upto-date style,
fine workmanship
best materials

AMAZING VALUE FOR LOW PRICE

HARDWEAR BOOTS & SHOES,
for estate and monsoon a speciality.

G. W. FRASER & CO., CALICUT.

12—4

ಹೊಸ ಪುಸ್ತಕ. **ಪ್ರತಿ ಮಾಡಿರಿ.**

ಶಾಪು ಸ್ವಂತವಾಗಿ ತಾನೇನು ಸಂಪಾದಿಸುವದಕ್ಕೆ ಸುಲಭವಾಗಿ ತೋರಿಸುವ

ಶೃಂಗಾರಿಕೆಯ ನಿರ್ಮಾಣಶಾಸ್ತ್ರ.

ಈ ಪುಸ್ತಕದಲ್ಲಿ ಪೆರ್‌ಫ್ಯೂಮ್ ಮಾಡುವ ವಿಧ, ವಿಧ ವಿಧ ಸೆಂಟ್‌ಗಳು, ಸಾಬೂನು, ಬಣ್ಣಗಳು, ಔಷಧಿಗಳು, ಪೌಡರ್ ಇಂಕ್ ಗುಳಿಗೆಗಳು, ವಿಲಾಸ ಇವನ್ನು ಅನೇಕ ವಿಧವಾದ 72 ಅಧ್ಯಾಯಗಳು ಮಾಡುವ ವಿಧ ವಿವರವಾಗಿ ಕನ್ನಡ ಭಾಷೆಯಲ್ಲಿ 240 ಪೇಜುಗಳೊಡನೆ ಅಂದವಾಗಿ ಪ್ರಕಟವಾಗಿದೆ. ಈ ಪುಸ್ತಕದಲ್ಲಿ ಹೇಳಿದ ಪ್ರಕಾರ ತಯಾರು ಮಾಡಿದರೆ ತಿಂಗಳಿಗೆ ರೂ. 50 ಮೊದಲು ರೂ. 500 ವರೆಗೆ ಸಂಪಾದಿಸಬಹುದು. ಇದನ್ನು ಒಬ್ಬ ನೋಡಿದರೇ ಸಂತೋಷಪಡದವರು. ಪುಸ್ತಕ ಒಂದಕ್ಕೆ ಬೆಲೆ ರೂ 1—0—0.

ವೆಡ್‌ಲಾಕ್ ಅಂಡ್ ಕಂ.

52—2 ಪಾರ್ಕ್ ಟೌನ್, ಮದ್ರಾಸ್.

Wedlock & Co., Parktown, Madras.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ

ಯಾವ ಗುಣಗಳು ಅವಶ್ಯಕವೆಂದು ನೀವು

ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—32 ಬೆಂಗಳೂರು.

ಸೆಂಟ್ರಲ್ ಬ್ಯಾಂಕಿನ ಮೀಟಿಂಗು.

(3ನೇ ಪುಟದಿಂದ ಮುಂದುವರಿದದ್ದು)

ಇನ್ನು ಆರು ತಿಂಗಳುಗಳೊಳಗಾಗಿ ಸದರಿ ಸೊಸೈಟಿಯ ಕೆಲಸ ಕಾರ್ಯಗಳು ತೃಪ್ತಿಕರವಾಗಿ ಕಂಡು ಬಾರದೆ ಹೋದರೆ ಅವರಿಂದ ಬ್ಯಾಂಕಿಗೆ ಬರಬೇಕಾದ ಪೂರ್ತಿ ಹಣವನ್ನು ವಸೂಲ್ಮಾಡುವ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂತಲೂ ಈ ವಿಷಯವನ್ನು ಅವರಿಗೆ ಎಚ್ಚರಿಸುವಂತೆಯೂ ತೀರ್ಮಾನಿಸಲಾಯಿತು.

9 ಬೇಳೂರು ಸೊಸೈಟಿಯವರು ತಮಗೆ ತಾ. 12-7-35 ರಲ್ಲು ಮಂಜೂರಾದ 1000 ರೂಪಾಯಿಗಳಿಗೆ 5 ಕಂತುಗಳ ಬದಲು 10 ಕಂತುಗಳನ್ನು ಕೊಡಿಸಿಕೊಡಬೇಕೆಂದು ಬರೆದಂಥ ಅರ್ಜಿ ಮೇಲೆ ಪೊನ್ನಂಪೇಟೆನವರ ಯೂನಿಯನ್ ಪ್ರೆಸಿಡೆಂಟರು ಬರೆದಂಥ ರಿಪೋರ್ಟನ್ನು ಓದಲಾಯಿತು.

ಅವರ ಶಿಫಾರಸಿನಂತೆ ಮೇಲ್ಕಂಡ ಸಾಲಗಳನ್ನು ವಾಪಸು ಮಾಡಲು 8 ಕಂತುಗಳನ್ನು ಕೊಡಬಹುದೆಂದು ತೀರ್ಮಾನವಾಯಿತು.

10 ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಷ್ಯೂರೆನ್ಸ್ ಸೊಸೈಟಿಯ ಡೈರೆಕ್ಟರುಗಳ ಬೋರ್ಡಿಗೆ ಸೆಂಟ್ರಲ್ ಬ್ಯಾಂಕಿನ ಪರವಾಗಿ ಒಬ್ಬ ಡೈರೆಕ್ಟರನ್ನು ಚುನಾಯಿಸಿ ಕಳುಹಿಸಲು ಅನುಕೂಲವಾಗುವಂತೆ ಬ್ಯಾಂಕು ಇನ್ನು 150 ಶೇರುಗಳನ್ನು ಸದರಿ ಇನ್ಷ್ಯೂರೆನ್ಸ್ ಸೊಸೈಟಿಯಿಂದ ಪಡೆಕೊಳ್ಳಬೇಕೆಂಬ ವಿಷಯ ಆಲೋಚಿಸಲಾಗಿ ಅದರಂತೆ 150 ರೂಪಾಯಿಗಳ 150 ಶೇರುಗಳನ್ನು ಕೊಂಡುಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

11. ಕೋಟೂರು ಸೊಸೈಟಿಯ ಮೆಂಬರು ಜನ ಸಾಲಗಾರರು ವಾಯಿದೆ ಮೀರಿದ ಬಾಕಿದಾರರಾಗಿದ್ದು ಅವರಿಗೆ ಅಸಲಿನಲ್ಲಿಯೂ ಮತ್ತು ಬಡ್ಡಿಯಲ್ಲಿಯೂ ಕೆಲವು ಮಟ್ಟಿಗೆ ರಿಯಾಯಿತಿಯಾಗಿ ರೆಮಿಷನ್ ಕೊಡುವ ವಿಷಯ ರಿಜಿಸ್ಟ್ರಾರವರಿಂದ ಬಂದ ತಾ. 26—7—35 ರ ನಂಬ್ರ 133 ರ ಪತ್ರವನ್ನು ಓದಲಾಯಿತು.

ಹಾಗೆ ಬಾಕಿದಾರರುಗಳಿಗೆ ಅಸಲಿನಲ್ಲಿಯೂ ರೆಮಿಷನ್ ಕೊಡುವುದಾದರೆ ಅಂಥಾ ಪದ್ಧತಿಯು ಇನ್ನು ಮುಂದಕ್ಕೆ ಸೊಸೈಟಿಗಳ ಆರ್ಥಿಕ ಸ್ಥಿತಿಗೆ ಬಹು ಮಟ್ಟಿಗೆ ಕೆಡುಕನ್ನುಂಟುಮಾಡಿ ಅವುಗಳ ಕೆಲಸ ಕಾರ್ಯಗಳು ತೃಪ್ತಿಕರವಾಗಿ ನಡೆಯಲು ಅನುಕೂಲವಾಗುವುದಿಲ್ಲವಾದ ಕಾರಣ ಈ ವಿಷಯವನ್ನು ರಿಜಿಸ್ಟ್ರಾರವರಿಗೂ ತಿಳಿಸುವಂತೆ ತೀರ್ಮಾನವಾಯಿತು.

12. ಚೆಂಬೆಬೆಳ್ಳೂರು ಅಂತಾದ ಸೊಸೈಟಿಯ ಮತ್ತು ವೀರಾಜಪೇಟೆ ಹೈಸ್ಕೂಲ್ ವಿದ್ಯಾರ್ಥಿಯರ ಸೊಸೈಟಿಗಳು ಬ್ಯಾಂಕಿನ ಮೆಂಬರುಗಳಾಗಲು ಬರೆದಂಥ ಅರ್ಜಿಗಳನ್ನು ಓದಲಾಗಿ ಸದರಿ ಸಂಘಗಳನ್ನು ಮೆಂಬರುಗಳಾಗಿ ಅಂಗೀಕರಿಸಲಾಯಿತು.

13. ತಾ 31—8—35 ರ ರೆಸೊಲ್ಯೂಶನ್ ನಂಬ್ರ 3535 ರ ಪ್ರಕಾರ ಅಮ್ಮತ್ತಿ ಸೊಸೈಟಿಯವರು ಕಳುಹಿಸಿದ ಸಾಲದ ಅರ್ಜಿಯನ್ನು ಕಾರಣಾಂತರದಿಂದ ಕಳೆದ ಮೀಟಿಂಗಿನಲ್ಲಿ ತಿರಸ್ಕರಿಸಿದ್ದುದರಿಂದ ಸದರಿ ಸೊಸೈಟಿಯವರು ಸಾಲ ಮಂಜೂರು ಕೊಡಿಸುವಂತೆ ರಿಜಿಸ್ಟ್ರಾರವರಿಗೆ ಅರ್ಜಿ ಬರೆದಂಥ ಮೇರೆ ರಿಜಿಸ್ಟ್ರಾರವರು ಕಳುಹಿಸಿದ ನಂಬ್ರ 371 ರ ಪತ್ರವನ್ನು ಮತ್ತು ಸದರಿ ಸೊಸೈಟಿಯವರು ಬರೆದಂಥ ಪತ್ರವನ್ನೂ ಸಹ ಓದಲಾಯಿತು.

ಅವರ ಶಿಫಾರಸಿನಂತೆ ರೂ 1500 ನ್ನು ಮಂಜೂರ್ಮಾಡಲಾಯಿತು.

14. ಬ್ಯಾಂಕಿನ ಡೆಪೋಸಿಟ್ ಕ್ಲಾಸಿಫಿಕೇಷನ್ ಬೋರ್ಡಿನ ಸಿಫಾರಸ್ಸಿನ ಮೇರೆ ಶಾಂತೊಳ್ಳಿ ಸಂಘದಿಂದ ಮೆ|| ಕೇಟಪ್ಪರವರಿಗೆ ಮಂಜೂರಾದ ರೂ 400 ಗಳಿಗೆ ಜಾಮೀನುದಾರರನ್ನು ಕೊಡಬೇಕೆಂದು ವಗೈರೆಯಾಗಿ ರಿಜಿಸ್ಟ್ರಾರವರಿಗೆ ಕೋ-ಆಪರೇಟಿವ್ ಇನ್ಸ್‌ಪೆಕ್ಟರು ರಿಪೋರ್ಟು ಬರೆದಂಥ ಮೇರೆ ಸದಾಯಿವರಿಂದ ಬಂದ ತಾ. 18—9—35 ರ ನಂಬ್ರ 359 ರ ಪತ್ರವನ್ನು ಓದಲಾಯಿತು.

ಸದರಿ ಸೋಮಪ್ಪನವರು ಹೊಂದಿರೊಂದ ಸಾಲಗಳಿಗೆ ಅವರು ಆಧಾರವಾಗಿ ಕೊಟ್ಟಿರುವ ನಾಗು ಭೂಮಿ ಮತ್ತು ತೃಪ್ತಿಕರವಲ್ಲ ಸಾಕಾದ ಜಾಮೀನುಗಳಿಂದೆಂದು ಅವರಿಗೆ ಕೊಟ್ಟಿರುವ ಕಂತುಗಳನ್ನು 10 ಕ್ಕೆ ಇಳಿಸದೇ ಆಗಿ ಸೊಸೈಟಿಯವರನ್ನು ಕೇಳಿಕೊಳ್ಳುವ ಹಾಗೂ ತೀರ್ಮಾನಿಸಲಾಯಿತು.

15 ಡೆಪೋಸಿಟ್ ಕ್ಲಾಸಿಫಿಕೇಷನ್ ಬೋರ್ಡಿನವರ ಸಿಫಾರಸ್ಸಿನ ಮೇರೆ ಮೆ|| ಕೋಟೆರ ಪೊನ್ನಪ್ಪನವರಿಗೆ ಹೆಚ್ಚಿನ 400 ರೂಪಾಯಿಗಳನ್ನು ಮಂಜೂರು ಮಾಡಿದ ಸೊಸೈಟಿಯಿಂದ ಕೊಡಿಸಿ ಕೊಡತಕ್ಕದಾಗಿ ಕೋ-ಆಪರೇಟಿವ್ ಇನ್ಸ್‌ಪೆಕ್ಟರು ರಿಜಿಸ್ಟ್ರಾರವರಿಗೆ ರಿಪೋರ್ಟು ಬರೆದಂಥ ಮೇರೆ ಸದರಿಯವರಿಂದ ಬಂದ ತಾ. 18—9—35 ರ ನಂಬ್ರ 352 ರ ಪತ್ರವನ್ನು ಓದಲಾಯಿತು.

ಈ ವಿಷಯದಲ್ಲಿ ಅರ್ಜಿದಾರ ಪೊನ್ನಪ್ಪನವರು ಈ ಮೊದಲೇ ಸೊಸೈಟಿಯಿಂದ ಹೊಂದಿರೊಂದ ಸಾಲವನ್ನು ತೀರಿಸಲು ಅನುಕೂಲವಾಗಬೇಕಾದರೆ ಈಗಿನ ಸಾಲಕ್ಕೆ ಅವರ ಒಬ್ಬ ದ ಭೂಮಿಯನ್ನು ಭೋಗ್ಯಕ್ಕೆ ಕೊಟ್ಟು ಹಣ ಪಡೆಕೊಳ್ಳುವಂತೆ ಸೂಚನೆ ಕೊಡುವ ಹಾಗೆ ರಿಜಿಸ್ಟ್ರಾರವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

16 ಕಾಲೂರು ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಬೇಕಾದ ವಾಯಿದೆ ಮೀರಿದ ರೂ 18—13—0 ಗಳಿಗೆ ಬರುವ ಡಿಸೆಂಬರ್ ತಿಂಗಳು ಆಖೈರು ವರೆಗೆ ಹೆಚ್ಚಿನ ಸಮಯ ಕೊಡಬೇಕೆಂದು ಅವರು ಕಳುಹಿಸಿದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಲಾಯಿತು.

ಅವರ ಕೋರಿಕೆಯಂತೆ ಡಿಸೆಂಬರ್ ಆಖೈರು ವರೆಗೆ ಸಮಯ ಕೊಡುವಂತೆ ತೀರ್ಮಾನವಾಯಿತು

17. ಮದ್ರಾಸು ಪ್ರೊವಿನ್ಸಿಯಲ್ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಿರುವ ರೂ 20,1?—8—9 ಗಳಿಗೆ ರನ್ನಿಂಗ್ ಬಡ್ಡಿಯ ದರವನ್ನು 3½ ಯಿಂದ 3 ಕ್ಕೆ ಇಳಿಸಿರುವುದಾಗಿ ಸದರಿ ಬ್ಯಾಂಕಿನಿಂದ ತಾ 14—9—35 ರಲ್ಲು ಬಂದ ನಂಬ್ರ 5883 ರ ಪತ್ರವನ್ನು ಓದಲಾಯಿತು.

ಬೇರೆ ಕಡೆ ಬ್ಯಾಂಕುಗಳಿಂದ ಹೆಚ್ಚಿನ ದರ ಬಡ್ಡಿ ಸಿಗುವುದು ಅಸಾಧ್ಯವಾಗಿ ಕಂಡು ಬಂದರೆ ಮದರಾಸು ಪ್ರೊವಿನ್ಸಿಯಲ್ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಹಣವನ್ನು ಶೇಕಡ 3 ಕ್ಕೆ ದರದ ಬಡ್ಡಿಯಲ್ಲಿ ರಿನ್ಯೂ ಮಾಡಲು ಸದರಿ ಬ್ಯಾಂಕಿಗೆ ತಿಳಿಸುವಂತೆ ತೀರ್ಮಾನಿಸಲಾಯಿತು.

18. ಆಲ್ ಇಂಡಿಯಾ ಕೋ-ಆಪರೇಟಿವ್ ಇನ್ಸ್‌ಟಿಟ್ಯೂಟಿನ ಸ್ಟ್ಯಾಂಡಿಂಗ್ ಕಮಿಟಿ ಮೀಟಿಂಗು ಕ್ರಿಸ್ಮಸ್ ರಜಾ ದಿನಗಳಲ್ಲಿ ಹೈದರಾಬಾದಿನಲ್ಲಿ ನಡೆಯುವುದರಿಂದ ಅಲ್ಲಿನ ಮೀಟಿಂಗಿನ ಅಜೆಂಡದ ಬಗ್ಗೆ ಏನಾದರೂ ಸಲಹೆಗಳಿದ್ದರೆ ಕಳುಹಿಸಬೇಕೆಂದು ಅವರು ತಾ. 18—9—35 ರಲ್ಲು ಕಳುಹಿಸಿ ನಂಬ್ರ 478 ರ ಪತ್ರವನ್ನು ಓದಲಾಯಿತು.

ಈ ವಿಷಯವಾಗಿ ಈ ಕೆಳಗಿನ ಮಹನೀಯರುಗಳಿಂದ ಕೂಡಿದ ಒಂದು ಸಬ್ ಕಮಿಟಿಯನ್ನು ಏರ್ಪಡಿಸಿ ಬರುವ ಡೈರೆಕ್ಟರುಗಳ ಮೀಟಿಂಗಿನೊಳಗೆ ಅವರು ಒಂದು ಕರಡು ರಿಪೋರ್ಟನ್ನು ಒದಗಿಸಬೇಕೆಂದು ತೀರ್ಮಾನಿಸಲಾಯಿತು. ಮೆ|| ಗಳಾದ 1 ಪಾಲ್ಯಂಡ ಪಿ ಬೆಳ್ಯಪ್ಪನವರು (ಪ್ರೆಸಿಡೆಂಟರು) 2 ಮಂ. ರಾಮ ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ) 3 ಪಿಲ್ಲಚಂಡ ಬೆಳ್ಯಪ್ಪನವರು ಎಂ ಎಲ್. ಸಿ.

19 ವೀರಾಜಪೇಟೆ ಲ್ಯಾಂಡ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಯವರು ಕಾಫಿ ವಾಪತಿ ಮಾಡಬೇಕಾದ ಸಪರ್ ವಿಜನ್ ಫಂಡು ಹಣಗಳನ್ನು ಈ ವರ್ಷ ಕೊಡಲು ಆಗುವುದಿಲ್ಲವೆಂದಾಗಿ ಪ್ರೊಸೀಡಿಂಗ್ಸು ಮಾಡಿರುವ ಮೇರೆ ಕೋ-ಆಪರೇಟಿವ್ ಸಾಪ್ ಕ್ರೆಡಿಟ್ ಸೀನಿಯರ್ ಇನ್ಸ್‌ಪೆಕ್ಟರು ಬರೆದು ಕಳುಹಿಸಿದ ರಿಪೋರ್ಟನ್ನು, ಯೂನಿಯನ್ ಪ್ರೆಸಿಡೆಂಟರ ರಿಪೋರ್ಟನ್ನು ಮತ್ತು ರಿಜಿಸ್ಟ್ರಾರವರ ಎಂಡಾರ್ಸ್ಮೆಂಟನ್ನೂ ಸಹ ಓದಲಾಯಿತು.

ಸದರಿ ಲ್ಯಾಂಡ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಯವರ ಇರಾದೆ ಮೇರೆ ಒಂದು ವರ್ಷದ ಸುಪರ್ ವಿಜನ್ ಫಂಡು ಹಣಗಳನ್ನು ಕೊಡುವ ಆಗತ್ಯವಿಲ್ಲವೆಂದು ತೀರ್ಮಾನಿಸಲಾಯಿತು

20 ಆಲ್ ಇಂಡಿಯಾ ಕೋ-ಆಪರೇಟಿವ್ ಇನ್ಸ್‌ಟಿಟ್ಯೂಟ್ಸ್ ಎಸೋಸಿಯೇಷನ್‌ರವರು ಸಹಕಾರ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಕಂಡು ಬರುವ ಕುಂದು ಕೊರತೆಗಳನ್ನು ಸಮೀಕರಿಸಿ ರಿಜಿಸ್ಟ್ರಾರವರಿಗೆ ಪತ್ರ ಬರೆದ ಮೇರೆ ಸದರಿಯವರಿಂದ ತಾ 3—4—35 ರಲ್ಲಿ ಬಂದ ನಂಬ್ರ 995 ರ ಪತ್ರವನ್ನು ಆಲೋಚಿಸಿ ಎಲ್ಲಾ ಯೂನಿಯನ್‌ಗಳು ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಕಳುಹಿಸುವಂತೆ ತಾ 21—7—35 ರ ಡೈರೆಕ್ಟರುಗಳ ಮೀಟಿಂಗಿನಲ್ಲಿ ತೀರ್ಮಾನಿಸಿದ ಮೇರೆ ಅದರಂತೆ ಯೂನಿಯನ್ನುಗಳಿಂದ ಬಂದ ಅಭಿಪ್ರಾಯಗಳ ಮೇಲೆ ತಯಾರಿಸಿದಂತ ಕರಡ ಕನ್ಸಾಲಿಡೇಟೆಡ್ ರಿಪೋರ್ಟನ್ನು ರಿಜಿಸ್ಟ್ರಾರವರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

21. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಲ್ ಕಾನ್ಫರೆನ್ಸಿನ ತೀರ್ಮಾನದ ಮೇರೆ ಒಂದು ಸಹಕಾರ ಕನ್ನಡ ಮಾಸ ಪತ್ರಿಕೆಯನ್ನು ಹೊರಡಿಸುವ ವಿಷಯ ತಾ 31—8—35 ರ ರೆಸೊಲ್ಯೂಶನ್ ನಂಬ್ರ 3539 ರ ಮೇರೆ ಸದರಿ ವಿಷಯದಲ್ಲಿ ಎಲ್ಲಾ ಯೂನಿಯನ್‌ಗಳಿಗೆ ಕಳುಹಿಸಿ ಅವರು ಅಭಿಪ್ರಾಯಗಳನ್ನು ತಿಳಿಸುವಂತೆ ತೀರ್ಮಾನಿಸಿದ ಪ್ರಕಾರ ಈಗ ಆ ಯೂನಿಯನ್‌ಗಳು ಬರೆದು ಕಳುಹಿಸಿದ ಜವಾಬನ್ನು ಓದಲಾಗಿ ಈ ವಿಷಯವನ್ನು ಬರುವ ಮೀಟಿಂಗಿನಲ್ಲಿ ಚರ್ಚಿಸುವಂತೆ ಮುಂದಿರಿಸಲಾಯಿತು.

22 ಕಾರ್ಪೆಂಟರ್ ಗೋಪಾಲಾಚಾರಿಯು ಬ್ಯಾಂಕಿಗೆ ತಯಾರಿಸಿದ ಕವುಂಟರಿನಿಂದ ತನಗೆ 30 ರೂಪಾಯಿ ನಷ್ಟವಾಯಿತೆಂದೂ ಸದರಿ ನಷ್ಟವನ್ನು ಭರ್ತಿಮಾಡಿಕೊಡಬೇಕೆಂಬದಾಗಿಯೂ ಬರೆದಂಥ ಅರ್ಜಿಯನ್ನು ಓದಲಾಯಿತು.

ಅವನ ಅರ್ಜಿಯನ್ನು ತಿರಸ್ಕರಿಸುವಂತೆ ತೀರ್ಮಾನಿಸಲಾಯಿತು.

23 ಬ್ಯಾಂಕಿನ ಉಪಯೋಗಕ್ಕೆ ಒಂದು ಅಲ್ಮೆರಿಯವನ್ನು ಮಾಡಿಸುವ ವಿಷಯ ಆಲೋಚಿಸಲಾಗಿ 24 ರೂಪಾಯಿ ಬೆಲೆ ಬಾಳುವ ಒಂದು ಅಲ್ಮೆರಿಯವನ್ನು ಮಾಡಿಸುವಂತೆ ತೀರ್ಮಾನಿಸಲಾಯಿತು

24 ಮೆ. ಗಿರಿಯಪ್ಪನವರು ಬರೆದ ರಿಪೋರ್ಟಿನ ಮೇಲೆ ಚೀಫ್ ಇನ್ಸ್‌ಪೆಕ್ಟರ್‌ರವರು ಮಾಡಿರುವ ಆರ್ಡರನ್ನು ಸಮೀಕರಿಸಿ ರಿಜಿಸ್ಟ್ರಾರವರು ತಾ —9—35 ರಲ್ಲಿ ಕಳುಹಿಸಿದ ನಂಬ್ರ 302 ರ ಪತ್ರವನ್ನು ಓದಲಾಯಿತು.

ಈ ವಿಷಯವನ್ನು ಬರುವ ಮೀಟಿಂಗಿನಲ್ಲಿ ಚರ್ಚಿಸುವಂತೆಯೂ ಮೆ ಗಿರಿಯಪ್ಪನವರ ರಿಪೋರ್ಟು ಮತ್ತು ಚೀಫ್ ಇನ್ಸ್‌ಪೆಕ್ಟರ್‌ರವರ ಆರ್ಡರಿನಿಂದ ಪ್ರಿಂಟಾದ ಪುಸ್ತಕಗಳನ್ನು ಎಲ್ಲಾ ಡೈರೆಕ್ಟರುಗಳ ತಿಳುವಳಿಕೆ ಬಗ್ಗೆ ಸರ್ಕ್ಯುಲೇಟು ಮಾಡುವಂತೆಯೂ ತೀರ್ಮಾನವಾಯಿತು

25 ವೀರಾಜಪೇಟೆ ಟೌನ್ ಬ್ಯಾಂಕಿನ ಕೆಲಸ ಕಾರ್ಯಗಳ ವಿಷಯ ನಂಬ್ರ 36 ನೇ ಸೆಕ್ಷನ್ ಮೇರೆ ತನಿಖೆ ಮಾಡುವಂತೆ ರಿಜಿಸ್ಟ್ರಾರವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು.

ಪಿ ಪಿ ಬೆಳ್ಯಪ್ಪ,
(ಅಧ್ಯಕ್ಷರು.)

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.
ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆನೋವು, ಸೊಂಟನೋವು, ನಿಶ್ಶಕ್ತಿ, ಬೆನ್ನುನೋವು, ಬಿಳಿ ರೋಗ, ಕೈಕಾಲು ಜಾಡ್ಯ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭರಕ್ಷಣಾಯು.
ದೊಡ್ಡ ಶೀಸೆ 2—8—0.
ಅರ್ಧ ಶೀಸೆ 1—6—0.

ನವರತ್ನ
ದ್ರಾಕ್ಷಾರಿಷ್ಟ.
ಅಜೀರ್ಣ, ಅಗ್ನಿಮಾಂದ್ಯ
ಅರುಚಿ ನಿಶ್ಶಕ್ತಿ ವಗೈರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು ಕ್ರಯ ದೊಡ್ಡ ಶೀಸೆ 1—8—0, ಅರ್ಧ ಶೀಸೆ —13—0.

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

ಸ್ಟಾಕಿಸ್ಟ್—ಎ. ಎಸ್. ವೆಂಕಟಯ್ಯ, ಪೇಟೆ ವ್ಯಾಪಾರಿ, ಸೋಮವಾರಪೇಟೆ
ಏಜೆಂಟ್—ಬಿ. ಕೆ. ಶಾಮರಾವ್, ಮಹದೇವಪೇಟೆ, ಮಡಿಕೇರಿ.
52—22

ನವರತ್ನ ಫಾರ್ಮಸಿ.

ಡಾಕ್ಟರ್ ಪೋತ್ತುಸ್ ಎಬ್ರಹಾಮ್.
ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಹೈಸ್ಕೂಲಿನ ಎದುರುಗಡೆ)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದ್ದಲ್ಲಿ ತಿಳಿಯುವುದು [52—2]

ಪತ್ರವ್ಯವಹಾರ.

[ಬಾತ್ಮೀದಾರರು ಮಾಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಶ್ರೀ ರಾಮ ಭಾರತಿ ಸಂಘ.

ಪೋಂದಲೇ ನಾವು ಅಮ್ಮಂಗೇರಿ ಶ್ರೀರಾಮ ಭಾರತಿ ಸಂಘದ ಅಧ್ಯಕ್ಷರಾದ ಮೆ. ಕೊಂಬಂಡ ಅಯ್ಯಣ್ಣನವರಲ್ಲಿ ವಿನಂತಿ.

ದೇಶದಲ್ಲಿ ಹಲವು ಮಹಸ್ತರ ಸಂಘಗಳು ದಿನೇ ದಿನೇ ವೃದ್ಧಿಯಾಗುತ್ತಲಿವೆ. ಶ್ರೀ ರಾಮ ಭಾರತಿ ಸಂಘವು ಸ್ಥಾಪಿಸಲ್ಪಟ್ಟು ನಾಲ್ಕೈದು ವರ್ಷಗಳಾದರೂ ಇತ್ತೀಚೆಗೆ ಅದರ ಮೀಟಿಂಗುಗಳೇನೂ ನಡೆಯದೆ ಕಲಕ್ಷವಾಗಿರಲು ಕಾರಣವೇನು?

ಈ ಸಂಘದ ಅಧ್ಯಕ್ಷರು ಮೆಂಬರುಗಳನ್ನು ಸೇರಿಸಿ ಸೇರಿಸಿ ಅದರ ಕಾರ್ಯಕಲಾಪಗಳನ್ನು ಮುಂದುವರಿಸಲು ತಕ್ಕ ಏರ್ಪಾಡು ಮಾಡಬೇಕಾಗಿ ಕೋರಿಕೆ.

'ಅಕ್ಕರಾಮ'

ರಸ್ತೆಯಲ್ಲಿ ಕಾನ್ವೆಂಟ್ ಮಕ್ಕಳ ಎಚ್ಚರಿಕೆ.

ಮಡಿಕೇರಿ ಹುಡುಗಿಯರ ಹೈಸ್ಕೂಲ್ ಈ ನಮ್ಮ ಚಿಕ್ಕ ಪಟ್ಟಣದ ಒಂದು ಕಡೆ ಪ್ರತ್ಯೇಕವಾಗಿದ್ದಾಗ್ಯೂ, ಪಟ್ಟಣದ ಎಲ್ಲಾ ಕಡೆಯಿಂದಲೂ ಡೇ ಸ್ಕಾಲರುಗಳಾಗಿ ಬೆಳಿಗ್ಗೆ ಸಾಯಂಕಾಲ ಎರಡು ಹೊತ್ತಿನಲ್ಲಿ, ವಾರಗಳ ಎರಡು ದಿನಗಳ ವಿನಹ ಬಾಕಿ ದಿನಗಳಲ್ಲಿ, ಎಷ್ಟೋ ಬಹಳ ಸಣ್ಣ ಸಣ್ಣ ಬಾಲಕ ಬಾಲಕಿಯರು ಸದರಿ ಶಾಲೆಗೆ ವಿದ್ಯೆ ಕಲಿಯುವ ಅಭಿಲಾಷೆಯಿಂದ ಕಾಲು ನಡಿಗೆಯಲ್ಲಿ ಹೋಗುತ್ತಾ, ಬರುತ್ತಾ, ಇರುವದು ಅನೇಕ ಜನರು ನೋಡಿರಬಹುದು. ಪೇಟೆ ಚೌಕಿನಿಂದ ಹಿರಿದು ರೇಸ್ ಕೋರ್ಸ್ ಬಳಿ ರಸ್ತೆನೆಸ್ಸುವಾಗ ವಿದ್ಯಾರ್ಥಿಗಳ ತಂಡ ಹೆಚ್ಚಾಗುವದು, ಶಾಲೆಯಿಂದ ಹೊರಟು ಬರುವಾಗ ಸಹ ಇದೇ ವೇಳೆ ಗುಂಪು ಗುಂಪಾಗಿ ಬರುವರು. ಈ ಮಕ್ಕಳಿಗೆ ಸದರಿ ರಸ್ತೆಗಾಗಿ ಬಹಳ ಜೋರಿನಿಂದ ಮೋಟಾರ್ ಬಸ್ಸು, ಲಾರಿಗಳನ್ನು ಓಡಿಸುವದರಿಂದ ಅಪಾಯ ಬರುವ ಸಂಭವ ಉಂಟು. ಇಷ್ಟರ ವರೆಗೆ ಅಪಾಯ ಬಾರದಿರುವದು ದೇವರ ದಯೆ ಎಂದೆನ್ನಬಹುದು. ಯಾಕೆಂದರೆ, ಈಗ ತಾನೇ ಒಬ್ಬ ಸಣ್ಣ ಮಕ್ಕಳ ತಂದೆಯು ಒಬ್ಬ ಮೋಟಾರ್ ಕಾರ್ ಡ್ರೈವರು ರಸ್ತೆಯಲ್ಲಿ ಮಕ್ಕಳು ನಡಕೊಂಡು ಹೋಗುತ್ತಿರುವ ಸಮಯದಲ್ಲಿ ಬಹು ವೇಗವಾಗಿ ಕಾರನ್ನು ಬಿಟ್ಟುಕೊಂಡು ಹೋಗುತ್ತಿರುವಾಗ ಮಕ್ಕಳು ಗಾಬರಿಯಿಂದ ಅತ್ತಿತ್ತ ಓಡ್ಯಾಡುವದನ್ನು ನೋಡಿ ಏನಾದರೂ ಅಪಾಯವಾಗಬಹುದೆಂಬ ಭೀತಿಯಿಂದ ಡ್ರೈವರನ್ನು ಕರೆದು ನಿಲ್ಲಿಸಿ ಎಚ್ಚರಿಸಿದರಾಗಿ ನನ್ನಲ್ಲಿ ಹೇಳಿ ಈ ಬಾಬಿನಲ್ಲಿ ಪೋಲೀಸಿನವರಿಗೂ ವಿದ್ಯೆ ಇಲಾಖೆಯವರಿಗೂ ಬೇಗ ತಿಳಿದುಕೊಳ್ಳುವಂತೆ ಬರೆಯುವದು ಬಹಳ ಯುಕ್ತವಾಗಿದೆಯೆಂದು ಹೇಳಿದರು.

ಹಲವು ಕಡೆಗಳಲ್ಲಿ 'School Zone—Drive Slowly' ಎಂಬದಾಗಿ ನೋಟೀಸ್ ಬೋರ್ಡು ಹಾಕಿರುವದುಂಟು. ಆದರೆ ಸದರಿ ಶಾಲೆಗೆ ಹೋಗುವ ಮೇಲೆ ಹೇಳಿದ ರಸ್ತೆ ಕಡೆ ಅಂಥ ಬೋರ್ಡು ಇಲ್ಲವಾಗಿ ಕಾಣುತ್ತೆ.

ಆದ್ದರಿಂದ ಇನ್ನು ಮುಂದೆಯಾದರೂ ನೋಟೀಸು ಬೋರ್ಡು ಇಡಿಸುವದಲ್ಲದೆ ತಕ್ಕ ಪೋಲೀಸ್ ಬಂದೋಬಸ್ತು ಸಹ ಇರುವಂತೆ ಸದರಿ ಶಾಲಾ ಹೆಡ್ ಮಿಸ್ಟ್ರೆಸ್ಸಾಗಲೀ, ಸಬ್ ಇನ್ಸ್‌ಪೆಕ್ಟರಾಗಲೀ ಎಚ್ಚರಿಕೆ ವಹಿಸಿಕೊಳ್ಳುವರಾಗಿ ಕೋರುವ,

'ಬಡ ಮಕ್ಕಳ ತಂದೆ.'

ಸಹಕಾರ ಸಂಘಗಳು ಮತ್ತು ಹಳ್ಳಿಗಾಡಿನವರ ಉದ್ಧಾರ.

ಕೊಡಗು ದೇಶದಲ್ಲಿ ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆ, ಸಹಕಾರ ತತ್ವ ಚಳುವಳಿ ಪ್ರಾರಂಭವಾದುದು 1905—1906 ರಲ್ಲಿ, ಇಂದಿಗೆ 30 ವರ್ಷಗಳಾದವು. ಈಗಾಗಲೆ ಸುಮಾರು 275 ಸಂಘಗಳು ಆರಂಭಿಸಿವೆ.

ಸಹಕಾರ ಚಳವಳಿಯು ಮೊದಲು ಹುಟ್ಟಿದ್ದು ಮುಖ್ಯವಾಗಿ ಹಳ್ಳಿಗಾಡಿನವರ ಉದ್ಧಾರಕ್ಕಾಗಿ, ಹಳ್ಳಿಗಾಡಿನವರ ಸಾಲದ ಹೊರೆಯನ್ನು ಇಳಿಸಿ, ಅವರ ಜೀವನವನ್ನು ಕಾಹಿಲ್ಯದ ಏಲ ದಂತೆ ಮಾಡಲಿಕ್ಕಾಗಿ. ಆದರೆ 'ತಾನೊಂದು ನೆನೆದರೆ ದೈವ ಬೇರೊಂದು ನೆನೆಯಿತು' ಎನ್ನುವ ಹಾಗೆ, ಪರಿಣಾಮದಲ್ಲಿ ಬೇರೆಯಾಗಿ ತೋರುತ್ತದೆ. ಎಲ್ಲಾ ಸಾಲದ ಸಂಘಗಳೇ ಆಗಿ ಹೋದುವು.

ಕೊಡಗು ದೇಶದವರ ಸಾಲ 6 ಕೋಟಿ ರೂಪಾಯಿಗಳ ವರೆಗೆ ಇರುವದೆಂದು ಊಹಿಸಲಾಗಿದೆ. ಇದರಲ್ಲಿ ಸಹಕಾರ ಸಂಘಗಳ ಕೊಟ್ಟಿರುವ ಸಾಲವೆಲ್ಲ 846,689 ರೂ ಗಳು ಆದರೆ ಹಳ್ಳಿಗಾಡಿನವರ 6 ಕೋಟಿ ರೂ. ಗಳ ಸಾಲ ಹೊರುವದರಲ್ಲಿ ಸಹಕಾರ ಸಂಸ್ಥೆಗಳು ಕೇವಲ ಶೇಕಡ 1½ ರೂಪಾಯಿಗಳನ್ನು ಮಾತ್ರ ವಹಿಸಲು ಶಕ್ಯವಾಗಿದೆಯೆಂದು ಹೇಳಲು ವಿಷಾದವಾಗುತ್ತದೆ. ಉಳಿದ 97½ ರೂಪಾಯಿಗಳಿಗೆ ರೈತನು ಎಲ್ಲಿಗೆ ಹೋಗಬೇಕು? ಸಾಹುಕಾರ, ಲೇವಾದೇವಿಗಾರರು ಮತ್ತು ದಳ್ಳಾಳಿಗಳು ! ಏಕೆ ಸಾಲಮಾಡಬೇಕೆಂದು ಕೇಳಬಹುದು ? ಆದರೆ ಸಾಲ ಸೋಲಗಳಿಲ್ಲದೆ ಜೀವನ ವ್ಯವಹಾರ ನಿರ್ವಹವಿಲ್ಲ.

ಸಹಕಾರ ಸಂಘಗಳು ಹಳ್ಳಿಗಾಡಿನವರಿಗೆ ಸುಲಭ ದರದ ಬಡ್ಡಿಗೆ ಸಾಲ ದೊರಕಿಸಿ ಕೊಡುವುದರಿಂದಲೇ ತೃಪ್ತಿಹೊಂದಿ ಫಲವಿಲ್ಲ. ಅವನು ತಾನು ಮಾಡಿದ ಸಾಲವನ್ನು ತೀರಿಸಲು ಬೇಕಾದ ಶಕ್ತಿ ಪಡೆಯಲು ಅವನಿಗೆ ಸಹಾಯ ಮಾಡಬೇಕು. ವ್ಯವಸಾಯದಲ್ಲಿ ಹೊಸ ಹಾದಿ ತೋರಿಸಬೇಕು. ಒಳ್ಳೇ ಬೀಜ, ಗೊಬ್ಬರ, ಮುಂತಾದ್ದು ಒದಗಿಸಬೇಕು. ಎಲ್ಲಕ್ಕಿಂತ ಅಧಿಕವಾಗಿ ಅವನ ಬೆಳೆಗೆ ಒಳ್ಳೆ ಗಿರಾಕಿ ಸಂಪಾದಿಸಿ ಕೊಡಬೇಕು. ರಕ್ತ ಹೀರುವ ದಳ್ಳಾಳಿಗಳನ್ನು ಕೊನೆಗಾಣಿಸಬೇಕು. ಸಹಕಾರ ಸಂಸ್ಥೆಗಳಿಗೆ ಇದಕ್ಕಿಂತ ಹೆಚ್ಚಿನ ಸೇವೆ ಬೇರೆ ಯಾವದೂ ಇಲ್ಲವೆಂದು ನನ್ನ ಅಭಿಪ್ರಾಯ.

ಇನ್ನು ಸಹಕಾರ ಸಂಘಗಳ ಆಡಳಿತ ವಿಚಾರ ಎಲ್ಲರ ಅಭಿಪ್ರಾಯದಲ್ಲಿ ಸಹಕಾರ ಸಂಸ್ಥೆಗಳೆಲ್ಲ ಆಡಳಿತ ವಿಚಾರವು ಅಷ್ಟು ತೃಪ್ತಿಕರವಾಗಿಲ್ಲ. ಅನೇಕ ಸಂಘಗಳು ನಾಮಮಾತ್ರವಾಗಿ ಇವೆ. ಎಷ್ಟೋ ಸಂಘಗಳು ವರ್ಷಕ್ಕೊಮ್ಮೆ ಆಟ ಮಾಡಿ ಕೈತೊಳೆಯುವದರಲ್ಲಿ ಹೆಸರು ಸಂಪಾದಿಸಿವೆ. ಆಡಳಿತವು ಅನೇಕ ಸಂಘಗಳಲ್ಲಿ ಸಡಿಲವಾಗಿಯೂ ಮತ್ತು ಉದಾಸೀನತೆಯುಳ್ಳದ್ದಾಗಿಯೂ ಇರುತ್ತೆ. ಕೆಲವೆಡೆಗಳಲ್ಲಿ ಕಾರ್ಯನಿರ್ವಾಹಕ ಮಂಡಳಿಯವರು ತಮ್ಮ ಕೆಲಸವನ್ನು ನಡಿಸಿದರೂ ಸಹ, ಆಡಳಿತವು ಅಷ್ಟು ಫಲಕಾರಿಯಾಗಿಲ್ಲ ಮತ್ತು ಸಮ್ಮಂಧಪಟ್ಟ ಇಲಾಖೆಯವರ ಅಪ್ಪಣೆಯನ್ನು ಸಂಪೂರ್ಣವಾಗಿ ಮನ್ನಿಸುವದಿಲ್ಲ. ಕಾರ್ಯಸ್ಥಾನದಲ್ಲಿ ಅನೇಕ ವರ್ಷ ಇದ್ದುಕೊಂಡು, ತನ್ನ ಸ್ವಾರ್ಥ ಲಾಭವನ್ನು ವೃದ್ಧಿಗೊಳಿಸುವುದಕ್ಕೂ ಮತ್ತು ಅಧಿಕಾರವನ್ನು ಮತ್ತು ತನ್ನ ಗೌರವನ್ನು ಬಲಪಡಿಸಲಿಕ್ಕೂ ಉಪಯೋಗಿಸಿಕೊಂಡು ಬರುವಂಥಾ ನೀತಿಯ ಕಡೆಗೆ ಈ ಸಂಸ್ಥೆಗಳ ಆಡಳಿತವು ಮತ್ತು ಅಧಿಕಾರವು ಬಿದ್ದದ್ದು ಉಂಟು. ಇಂಥಾ ಸಂದರ್ಭಗಳಲ್ಲಿ ಅವರ ಸ್ವಯಂ ಪ್ರಭುತ್ವದ ಕಂಟಕ ಮತ್ತು ವಿನಾಶಕ್ಕೆ ನೆರವಾಗಿದೆ ಮತ್ತು ಇಲಾಖೆಯವರು ಇಂಥಾ ಪ್ರಸಂಗಗಳಲ್ಲಿ ಮಧ್ಯಸ್ಥಿಕೆ ವಹಿಸಿ ಪಡೆಯಿಸಿ ತಿದ್ದುವಂತೆ ಪ್ರಯತ್ನಪಟ್ಟರೂ ಸಹ, ಇವರ ಅಂಥಾ ಪ್ರಯತ್ನವು, ಕಾನೂನುಗಳಿಂದ ಸಂರಕ್ಷಣೆಯಿಲ್ಲದ ಕಾರಣ ಫಲಕಾರಿಯಾಗಿರುವದಿಲ್ಲ. ಸರಕಾರದವರ ಆಡಳಿತವು ಬೇರೆಯವನ್ನು ಮಟ್ಟಿಗೆ ಒಂದಾಗೂ ಕೂಡ. ಹಿಂದೆಯನ್ನು ನಿವಾರಿಸಿ ಸುಧಾರಿಸಲಿಕ್ಕೂ ಮತ್ತು ಸಹಕಾರ ಚಳವಳಿಯ ಬೆಳವಣಿಗೆಯನ್ನು ಕುಂದಿಲ್ಲದೆ ಭದ್ರಪಡಿಸಲಿಕ್ಕೂ ಸರಕಾರದವರ ಉತ್ಸಾಹವು ಆವಶ್ಯ ಸಂಘಗಳ ವಿಚಾರದಲ್ಲಿ ಎಳ್ಳಷ್ಟೂ ಚೆನ್ನಾಗಿಲ್ಲ. ಆದುದರಿಂದಲೇ ಸಹಕಾರ ಶಾಖೆಯ ಅಧಿಕಾರಿಗಳು (ರಿಜಿಸ್ಟ್ರಾರವರು) ತಮ್ಮ 33—34 ನೇಯ ವಾರ್ಷಿಕ ವರದಿಯಲ್ಲಿ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವದನ್ನು ಬಿಟ್ಟು, ಅನುಕೂಲಕ್ಕೆ ಸರಿಯಾಗಿ ಒಟ್ಟುಗೂಡಿಸಿ, ಸಹಕಾರ ಚಳುವಳಿಯನ್ನು ನಿರ್ಮಲಗೊಳಿಸುವ, ಚೊಕ್ಕಟಗೊಳಿಸುವ ಮತ್ತು ಬಲಪಡಿಸುವ, ಎಂಬದಾಗಿ ಹೇಳಿರುವರು.

ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಸಹಕಾರ ಚಳವಳಿಯು ಪ್ರಾರಂಭವಾದಂದಿನಿಂದ, ದೇಶದಲ್ಲಿ ಸಹಕಾರ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತಿವೆ ? ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕು ಮತ್ತು ಟವುನ್ ಬ್ಯಾಂಕು ಮುಂತಾದವುಗಳೆಲ್ಲಾ ಹೇಗಿವೆ ? ಪ್ರಾಥಮಿಕ ಸಂಘಗಳ ಅವಸ್ಥೆಯೇನು ? ಆಡಳಿತ ಕ್ರಮದಲ್ಲಿ ದೋಷಗಳಿದ್ದರೆ ಅವುಗಳನ್ನು ಹೇಗೆ ತಿದ್ದಬಹುದು ಇವೇ ಮುಂತಾದ ವಿಚಾರಗಳನ್ನೆಲ್ಲಾ ವಿಚಾರಮಾಡಿ ವರದಿಯನ್ನೊಪ್ಪಿಸಿ ಸಲಹೆಗಳನ್ನು ಕೊಡುವಂತೆ 1934 ನೇ ಇಸವಿಯಲ್ಲಿ ಮದ್ರಾಸಿನ ಡೆಪ್ಯುಟಿ ರಿಜಿಸ್ಟ್ರಾರಾಗಿದ್ದ ಮೆ. ಗಿರಿಯಪ್ಪನವರನ್ನು ಕರೆಸಿದ್ದಾಯಿತು. ಅವರು ಬಂದಾಯಿತು. ವರದಿಯನ್ನೊಪ್ಪಿಸಿದ್ದೂ ಆಯಿತು ಸಲಹೆಗಳನ್ನು ಕೊಟ್ಟೂ ಆಯಿತು. ಇವುಗಳು ಯಾವ ಸ್ಥಿತಿಯಲ್ಲಿವೆಯೋ ತಿಳಿಯದು. ಇದರ ವಿವರಗಳು ನಮಗಿನ್ನೂ ದೊರೆತಿರುವದಿಲ್ಲ. ಅಲ್ಲದೆ ಮದ್ರಾಸಿನ ರಿಜಿಸ್ಟ್ರಾರವರು ಕಳೆದ ತಾರೀಕು 28 ರಲ್ಲು ಕೊಡಗಿಗೆ ಬಂದು, ಇಲ್ಲಿಯ ರಿಜಿಸ್ಟ್ರಾರವರಿಗೆ ಭೇಟಿಕೊಟ್ಟು, ಕೆಲವು ಸಲಹೆಗಳನ್ನು ಕೊಟ್ಟಿರುವದಾಗಿ ತಿಳಿಯಬರುತ್ತದೆ. ಮದ್ರಾಸಿನ ರಿಜಿಸ್ಟ್ರಾರವರ ಆಗಮನವು ಈ ಮೊದಲು ಬಂದು ಹೋದವರ ಹಾಗೆ ನಿರರ್ಥಕವಾಗದೆ ಈ ಮೇಲೆ ನಮೂದಿಸಿರುವ ಸಮಸ್ಯೆಯನ್ನು ಬಿಡಿಸಲಿಕ್ಕೆ ಸಹಾಯಕವಾದೀತಾಗಿ ನಿರೀಕ್ಷಿಸುದರಲ್ಲಿ ತಪ್ಪೇನೂ ಇಲ್ಲ.

'ಜೋಡೀಗಾಡ.'

ಪ್ರಕಟಣೆ.

ಈ ಮೊದಲು ನಾಪೋಕ್ಲಿನಿಂದ ವೀರಾಜಪೇಟೆಗೆ ಓಡುತ್ತಿದ್ದ, 'ಶ್ರೀ ರಾಧಾಕೃಷ್ಣ ಮೋಟಾರು ಸರ್ವಿಸು' ಮಳೆಗಾಲದ ದೆಸೆಯಿಂದ ಜೂನ್ ಅಂತ್ಯಕ್ಕೆ ನಿಲ್ಲಿಸಲ್ಪಟ್ಟಿದ್ದನ್ನು, ಪುನಃ ಅಕ್ಟೋಬರ್ ತಾ. 1 ರಿಂದ ಕಕ್ಕಬೆಯಿಂದ (ಸದ್ಯಕ್ಕೆ) ಬೆಳಿಗ್ಗೆ 7½ ಘಂಟೆಗೆ ಹೊರಟು 9 ಘಂಟೆಗೆ ವೀರಾಜಪೇಟೆಗೆ ತಲುಪಿ ಅಲ್ಲಿಂದ ಮಡಿಕೇರಿಗೆ ಹೋಗುವ ಶ್ರೀರಾಮ ಮೋಟಾರ್ ಸರ್ವಿಸಿಗೆ ಕನೆಕ್ಷನ್ ಕೊಡುವದು. ಸಾಯಂಕಾಲ 4 ಘಂಟೆಗೆ ಮಡಿಕೇರಿಯಿಂದ ಶ್ರೀರಾಮ ಸರ್ವಿಸು ಬಸ್ಸು ಬಂದ ಮೇಲೆ, ವೀರಾಜಪೇಟೆಯಿಂದ ಹೊರಟು 5½ ಘಂಟೆಗೆ ಕಕ್ಕಬೆಗೆ ತಲುಪುವದು. ಕಕ್ಕಬೆ ಸೇತುವೆಯ ರಿಪೇರಿಯ ನಂತರ ನಾಪೋಕ್ಲಿನಿಂದಲೇ ಹೊರಟು ಮರಳಿ ನಾಪೋಕ್ಲಿಗೆ ಬಂದು ತಲುಪುವದು. ದೇಶಸ್ಥರೆಲ್ಲರು ಈ ಹೊಸ ಸರ್ವಿಸಿಗೆ ಯಥಾಪ್ರಕಾರ ಪ್ರೋತ್ಸಾಹಿಸುವರಾಗಿ ಕೇಳಿಕೊಳ್ಳುತ್ತೇನೆ.

2—2. ಬಾಚಿಟ್ಟಿರ ಕುಟ್ಟಪ್ಪ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹೊಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮಾನವಾದ ಸೀಮೆಯ ಭಂಗಾರದಿಂದ ಕಟ್ಟಿಸ ಕಟ್ಟಿರುವದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರು ಬಹಳವಾಗಿ ಉಪಯೋಗಿಸುತ್ತಿರುವರು. ಇದನ್ನು ಅನೇಕರು ಮದರಾಸಿನಲ್ಲಿಯೇ ಬಹಳ ಪ್ರಿಯವಾಗಿ ಹಾಕಿಕೊಳ್ಳುವದರಿಂದ ನಾವು ಇದನ್ನು ಹೊರ ಊರಿನ ಮಹನೀಯರುಗಳಿಗೆ ಉಪಯೋಗವಾಗುವುದಕ್ಕೆ ಇಲ್ಲಿ ಪ್ರಚುರಿಸುತ್ತೇವೆ. 7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ ರೂ. 1—8—0. 7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ ರೂ. 1—12—0.

ಎಲ್ಜಿನ್ ಟ್ರೇಡಿಂಗ್ ಕಂಪನಿ

52—3 19. ಬೇಟ್ ಮದರಾಸು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ೮. ೩. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕೆ,

(52—2) ಮತ್ತು ಕಂಪನಿ,

ಗಿರಗಾಂವ, ಮುಂಬಯಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ: —

ನಮ್ಮ ಕೋವಿ ಮತ್ತು ತೋಟಗಳ ಕಿರ್ಟ್ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26—2 210, Abdulrehman Street, BOMBAY 3.

ಮೈಸೂರಿನ ಕ್ಷೇತ್ರ ಧರ್ಮಾರ್ಥ ಫಂಡಿಗೆ

ಹಣ ಸಹಾಯ ಮಾಡಿದ ಮಹನೀಯರು

(ಕೊಡಗು ಕಮೀಷನರವರ ಅಪ್ಪಣೆಯಂತೆ)

ಶಾಲಾ ಡಿಪ್ಟಿ ಇನ್ಸ್‌ಪೆಕ್ಟರವರ ಮೂಲಕ ಬಂದಿದ್ದ ವಸೂಲಿ 1—15—0, ಪೆಂಟರ್‌ಪೇಟೆ ಸಾಹುಕಾರರಿಂದ 2—4—0 ಹಿಂದಿನ ವಸೂಲು ರೂ 33 8—5—10. ಒಟ್ಟು ಜಮ್ಮ 3362—8—10

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಸಂಗಿಸ ಕಡವು ಮಡಪ್ಪುರ ದೇವಸ್ಥಾನದ ಹರಕೆಯಾಗಿ ಭಕ್ತ ಮಹಾ ಜನಗಳಿಂದ ಹರಕೆ ಸಹಿತ ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರೆಂದು ತಿಳಿಯಬಂದಿದೆ. ಅದ್ದರಿಂದ ಮಲ ಯಾಳದಲ್ಲಿರುವ ಪರಸಿನಕಡವು ಮಡಪ್ಪುರ ದೇವಸ್ಥಾನದ ಯಾವ ಕಾಣಿಕೆ ಯಾ ಹರಕೆಗಳನ್ನು ಈ ದೇವಸ್ಥಾನಕ್ಕೆ ಕೊಡಬೇಕಾದರೂ ಕೊಡಗಿನ ಸ್ಥಳಾದಿಗಳಲ್ಲಿ ವಿನಹ ಪರ ಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸ ಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದನ್ನು ಮುಖ್ಯವಾಗಿ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗೆ ವಿಳಾಸದವರಿಗೇನೇ ಕಳು ಹಿಸಿಕೊಡಬೇಕೆಂದು ಈ ವಿಚಾರವನ್ನು ಸಕಲ ಮಹಾ ಜನಗಳಿಗೆ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಬೇಡುತ್ತೇನೆ.

ಪಿ. ಎಂ. ಕೆ ರಾಮನ್
ಪರಸಿನಕಡವು. [56—17] ಮೇನೇಜರ್,
25—5—'35 ಪರಸಿನಕಡವು ಮಡಪ್ಪುರ ದೇವಸ್ಥಾನ

ಶೃಂಗಾರವಾದ ಪುಸ್ತಕ! ನೂತನ ಮುದ್ರಣ!!

ಸ್ತ್ರೀ ಪುರುಷರು ಪ್ರೀತಿಸುವ 37 ಫೋಟೋಗಳು ಕೂಡಿದ

ಮದನ ರತಿ ಕಾಮಶಾಸ್ತ್ರ

ಬಹು ಶೃಂಗಾರದ ರಹಸ್ಯಗಳು ರೂ. 1—0—0.

ಈ ಪುಸ್ತಕವು ಫ್ರೆಂಚ್, ಜರ್ಮನ್ ಭಾಷೆಗಳಲ್ಲಿ ಸ್ವತಂತ್ರ, ಅದನ್ನು ಕನ್ನಡ ಭಾಷೆಯಲ್ಲಿ ಬೇರೆ ಫೋಟೋಗಳೊಂದಿಗೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ಪ ತ್ನಿ ಪತಿಗಳು ವರ್ತಿಸುವ ರಹಸ್ಯಗಳು, ಶೃಂಗಾರ ವಿ

ನೋದಗಳು, ಸ್ತ್ರೀ ಪುರುಷರು ಬಗೆಬಗೆ ಯಾಗಿರುವ ಸುಖಗಳು, ಇಂಗ್ಲಿಷ್, ಫ್ರೆಂಚ್, ಅಮೇರಿಕನ್, ಜರ್ಮನ್ ಜಪಾನ, ಮಲಯ, ಸಯಾಂ, ಜಪಾನ್, ಬರ್ಮಾ, ಇಂಡಿಯನ್ ಮೊದಲಾದ ದೇಶದ ಸ್ತ್ರೀಪುರುಷರುಗಳು ಪ್ರೀತಿಸುವ ರಹಸ್ಯಗಳು. ಮುಖ್ಯವಾದ ವಿಧಗಳು, ಕನ್ನೆಗಳ ದೇಹ ಸೌಂದರ್ಯದ ಮರ್ಮಗಳು. ಇನ್ನು ಅನೇಕ ಪ್ರೀತಿಸುವ, ಪ್ರೀತಿಸುವ ಬಗೆಗಳ ನಾನಾ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಇದು ವರೆಗೂ ಕನ್ನಡ ಭಾಷೆಯಲ್ಲಿ ಇಷ್ಟು ಏಕರೀತಿಯಾಗಿ ಪ್ರಕಟಿಸಿಲ್ಲ. ಓದಿ ನೋಡಿದರೆ ಪುಸ್ತಕ ಸುಗುಣ ಪಡೆಗಳ ಮೇಲ್ಪಂಕ್ತಿ ಮನಸು ಬಾರದು. ಕ್ರ. 37 ಫೋಟೋಗಳ ಸಹಿತ ಇರುವ ಪುಸ್ತಕ ರೂ 1—0—0 ವಿ ಪಿ ಪೋಸ್ಟ್ ಖರ್ಚ 5 ಆಣೆ. ಪ್ರತ್ಯೇಕ ಮುಂಗಡ ರೂ 1 ಕಳುಹಿಸಿದವರಿಗೆ ಪೋಸ್ಟು ಖರ್ಚು ಇಲ್ಲದೆ (ಫ್ರೀ) ಕಳುಹಿಸುವೆವು.

ದೇವಕರ್ ಅಂಡ್ ಕಂಪನಿ,
57—2] ನಂ. 8 ಶ್ರೀ ರಾಮ ಪೇಟೆ ಜಿ ಟಿ ಮದ್ರಾಸು.

SHIROMANI NARAYANACHARYA
Choukhamba Benares City

ಶ್ರೀಮಂತಿಕೆ, ಭೂಮಿಕಳು ಆರೋಗ್ಯದ ಆಧಾರ ಈಗಿನವ ರೇ ರಾಮಬ್ಲಿಯ್ಯನವರೇ ಪೂ ರ್ವಕಾಲ ಆರೋಗ್ಯವೇ ಐಶ್ವ ರ್ಯ ಆರೋಗ್ಯ ಆದಕ್ಕೆ ಈ ರತ್ನವನ್ನು ಅವರು ರುದ್ರಾ ಕ್ಷಿಯನ್ನು ಬರದೆ ಯಾರಾಗ ಲೂ ಧರಿಸುವವರಾಗಿ ಇದ್ದ ರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ದೇಹಶ ಕ್ತಿ ಬುದ್ಧಿಶಕ್ತಿ ವಿದ್ಯಾಭಿವೃ ದ್ಧಿ ಐಶ್ವರ್ಯವೃದ್ಧಿ ಸಂತತಿ ಕೀ ರ್ತಿ ಇವುಗಳೆಲ್ಲಾ ಅನುಭ ಹಾಗಾದರೆ ನಮಗೆ ಅಂಥ ರುದ್ರಾಕ್ಷಿ ಎಲ್ಲಿ ದೊರೆಯುವು ದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶಿ ಚೌಖಂಬಾ ಶಿರೋಮಣಿ ನಾರಾಯಣಾಚಾ ರ್ಯರಲ್ಲಿಯೇ. ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವವು.

ಸಣ್ಣ ಅಷ್ಟೆ ಪ್ರತಿಯೊಂದರ ಕ್ರಯ 1ಕ್ಕೆ ಆಣೆ 1 ರಿಂದ ರೂ 25ರ ವರೆಗೆ 10 ಮುಖ ರುದ್ರಾಕ್ಷಿಗಳಲ್ಲದ ಸರ 1ಕ್ಕೆ ಆಣೆ 30ರಿಂದ ರೂ 25ರ ವರೆಗೆ ಗೌರಿಶಂಕರ ರುದ್ರಾಕ್ಷಿ 1ಕ್ಕೆ ರೂ 30ರಿಂದ ರೂ 50ರ ವರೆಗೆ ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ 10, ಮತ್ತು 9—10—11 ಮುಖಗಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ, 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 1 00 ರ ವರೆಗೆ. ಸರ ರುದ್ರಾಕ್ಷಿ ಅವರ ಶಾಲೆಗಿಂತ ಸಂಪಾದಿಸುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಆದರಿಂದ ಪ್ರಭಾವಾಗುತ್ತ ಕ್ರಯ ಜಾಸ್ತಿ ಆಗುತ್ತದೆ. (ಏವಕ್ಕೆ ಕಟಲಾಗ್‌ಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇನೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಆಣೆಯಗಳು— 1 ಪಸ್ತಕದ ಜತೆ 1 ಕಾಪೀ ಕಳ್ಳ 1 ಕಾಪಿ ಏಜಂಟರ ಕೆಟಲಾಗ್‌ನೊಡನೆ 3 ಆಣೆಯಗಳು)

ಶಿರೋಮಣಿ ನಾರಾಯಣಾಚಾರ್ಯ,
52—9 ಚೌಖಂಬಾ, ಬೆನಾರಿಸ್ (ಕಾಶೀ.)

ಪಂಡಿತ ಜವಾಹರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ, ಆಯುರ್ವೇದೋಕ್ತ, ಶಾಸ್ತ್ರ ಮತ್ತು, ಪಾಶ್ಚಾತ್ಯ ವಿಜ್ಞಾನದಿಂದ ತಯಾರಿಸಿದ ಮತ್ತು, ಇತರ ಗುಣಕಾರಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕಗಳನ್ನು ಪಡೆದು ಮನ್ನಣೆಯನ್ನು ಧಾರಾಳವಾಗಿ ಪಡೆದಿರುವ

ಶಕ್ತಿವರ್ಧಕ ಉತ್ತಮ ತರದ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ಪದಾರ್ಥಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯುಕ್ತಿಯಿಂದ ತಯಾರಾದ ಈ ಆಯುರ್ವೇದ ಪುಷ್ಟಿಕಾರಕ ಅವರ ಸೇವನೆಯಿಂದ ಉಷ್ಣ (ಗರಮಿ), ಧಾತುನಾಶ, ಸ್ವಪ್ನಾವಸ್ಥೆ, ಕೈಕಾಲು ಉರಿ, ತಲೆ ತಿರುಗು, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವು ದ್ದಲ್ಲ ಬಲು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೆ, ಗಂಡಸರಿಗೂ ಇದು ಗುಣಕಾರಿ. ಮುಟ್ಟಿನ ಗದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತಾನ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ.—ಬೆಳಗನ್ನು ಒಂದ ಚಮಚೆ ಮತ್ತು ಸಂಜೆಗೆ ಒಂದು ಚಮಚೆ ತಕ್ಕೊಳ್ಳಬೇಕು.

ಬೆಲೆ:—1 ಬಾಟ್ಲಿಗೆ ರೂ 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ, ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ)

ಕೊಡಗಿನ ಏಜಂಟರು.—ಕೆ ತಿಮ್ಮಯ್ಯ & ಬ್ರದರ್ಸ್, ಮಡಿಕೇರಿ

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ

52—5 ಎ ಎನ್ ಸುಬ್ಬಯ್ಯ ಪ ಜೆಂಟ್ ಗೋಣಿಕೊಪ್ಪಲು.

ವಜ್ರದ ಉಂಗುರಗಳು ಒಂದಕ್ಕೆ ೧೨ ಆಣೆ.



ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ತಟ್ಟಿದ ಕಟ್ಟಿದ ಇವುಗ ದರ ಒಣ್ಣವು ಎಂದಿಗೂ ಕೆಡದಂತೆ ಗ್ಯಾರೆಂಟಿ ಕೊಡಲ್ಪಡುವದು. 1ಕ್ಕೆ 12 ಆಣೆ



3 ಉಂಗುರಗಳಿಗೆ 1 ಟೈಂಪೀಸನ್ನೂ, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು. ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿ ಕೊಡುವೆವು

ವಿಳಾಸ—
Mehta & Co.
Periynayakaran Street,
G T Madras

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಪಟಗಳ ಸಹಿತ, ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ಜಾತಿಶಾಸ್ತ್ರ ರಹಸ್ಯ

ಎಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದುಸ್ಥಾನೀ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರ ಯತ್ನದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯು ವಂತೆ ಸರಳವಾದ ಕನ್ನಡ ಭಾಷೆಯಲ್ಲಿ ಬರೆದು, ಫೋಟೋಗಳ ಸಹಿತ ಛಂದಸ್ಸಾದ ಗ್ಲೇಜು ಕಾ ಗದದಲ್ಲಿ 300 ಪೇಜುಗಳು ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು ಪುರುಷರು



ಸ್ತ್ರೀಯರಲ್ಲಿ ನಡೆಯಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳ ಸಂದೇಹಗಳಿಂದಾಗುವ ಸಂಕೋಚ ಜನನೇಂದ್ರಿಯಗಳ ವರ್ಣನೆ ಪಕ್ವ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ ವಿಧ ಗುಪ್ತ ವ್ಯಾಧಿಗಳ ಚಿಕಿತ್ಸೆ ಶಯನಸ್ಥಾನದ ರಹಸ್ಯ ನಿಯಮಗಳು ಮಾನಸ ಶರೀರದ ಮರ್ಮಗಳ ವಿವರ ನಪುಂಸಕತ್ವಕ್ಕೆ ಚಿಕಿತ್ಸೆ ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಚಿತ್ರಪಟಗಳ ಸಹಿತ ಪ್ರಕಟಿಸಿದೆ. ಬೆಲೆ ಪುಸ್ತಕವೊಂದಕ್ಕೆ ರೂ 1—0—0.

ವಿಳಾಸ—MEHTA & Co.,
Periyanayakaran Street,
12—9 G. T. Madras



ಬೆಚ್ಚ ಕಡಿಮೆ, ವಸ್ತ್ರ ಬಾಳಿಕೆ, ಶ್ರಮ ಅತೀ ಕಡಿಮೆ!

501 Soap

ಟಾಟಾಕಂಪೆನೀ ಗ. ಪೆಟ್ಟಿನ್ ಸ್ಟ್ರೀಟ್,
ಮಾರಾಟದ ಮಳಿಗೆ, ಬೆಂಗಳೂರು ದಂಡು

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ಟಾಟಾಪುರಂ

52—22 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ವರ್ತಮಾನ ಸಂಗ್ರಹ.

ಸ್ವದೇಶ.

ಕಳೆದ ವಾರದಲ್ಲಿ ಬೆಂಗಳೂರು ಸಿಟಿಯ ಪ್ಲೇಗಿನಲ್ಲಿ 361 ಜನಗಳೂ, 382 ಮರಣಗಳೂ ಸಂಭವಿಸಿದವು.

ಮಿ. ಜೆ. ಎ. ಯಂಗ್‌ಹಸ್ಬೆಂಡರು ಕೊಡಗಿನ ಚೀಫ್ ಕಮಿಷನರಾಗಿ ನೇಮಿಸಲ್ಪಟ್ಟಿರುವರೆಂದು ವರ್ತಮಾನ.

ಈ ತಾ. 17 ನೇ ಗುರುವಾರ ಸಾಯಂಕಾಲ 5 ಗಂಟೆ 1½ ನಿಮಿಷದಲ್ಲಿ ತುಲಾಕಾವೇರಿ ಸಂಕ್ರಮಣದ ತೀರ್ಥೋದ್ಭವವಾಗುವುದು.

ಅಖಿಲ ಭಾರತ ಹರಿಜನ ದಿನವನ್ನು ಕೊಡಗಿನ ಹರಿಜನ ಸೇವಾ ಸಂಘದವರು ಕಳೆದ ತಾ. 24 ರಲ್ಲಿ ಆಚರಿಸಿದರು.

ಈ ತಾ. 3 ರಲ್ಲಿ ಪೊನ್ನಂಪೇಟೆ ... ... ಆರಂಭವಾಗುತ್ತದೆ.

ಮಹಾತ್ಮ ಗಾಂಧಿಯವರ 67 ನೇ ವರ್ಷದ ... ... ಆಚರಿಸುವ ಬಗ್ಗೆ ಈ ತಾ. 2 ರಲ್ಲಿ ... ... ಸಭೆ ... ...

ಕಳೆದ ... ... ತಾ. 7 ... ... ಯೂನಿವರ್ಸಿಟಿ ... ... ಪ್ರಕಟಿಸಿದೆ.

... ... ಕಾಲೇಜಿನ ... ... ಈ ವರ್ಷ 1200 ... ... ಬರಬಹುದಾಗಿ ತಿಳಿಯುತ್ತದೆ.

ಬೆಂಗಳೂರಿನ ... ... ಗ್ರಾಮದ ... ... ದೇವಸ್ಥಾನದ ... ... ತಿಳಿದುಬಂದಿದೆ.

ಇಂಡಿಯಾ ಸರ್ಕಾರದ ... ... ಕಳೆದ ತಾ. 29 ರಲ್ಲಿ ... ... ಬಂದರು.

ಕೊಡಗು ... ... ಕೊಡಗಿನ ... ... ಕಳೆದ ಆಗಸ್ಟ್ 31 ರಲ್ಲಿ ... ...

ಕೊಡಗಿನ ... ... ಅಧಿಕಾರಿ ... ... ಇನ್‌ಸ್ಪೆಕ್ಟರುಗಳು, ಪಾರುಪತ್ಯಗಾರರುಗಳಿಗೂ ಮತ್ತು ಸಹಕಾರ ಸಂಘಗಳ ... ... ಕೊಡಲಾಗಿದೆ.

ಈ ತಾ. 4 ರಲ್ಲಿ ನಡೆಯುವ ಮೈಸೂರು ಸಹಕಾರ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಬಂದಿರುವ ಇಂಗ್ಲೆಂಡಿನ ಪ್ರಸಿದ್ಧ ಸಹಕಾರಿಗಳಾದ ಡಾಕ್ಟರ್ ಫೇ. ಮಿ. ಫೇ ಯವರು ಈ ತಾ. 3 ರಲ್ಲಿ ಮೈಸೂರಿಗೆ ಬಂದು, ತಾ. 9 ರಲ್ಲಿ ... ... ಹೋಗುವರೆಂದು ವರ್ತಮಾನ.

ಈ ತಾ. 4 ರಲ್ಲಿ ನಡೆಯುವ ಮೈಸೂರು ಪ್ರಾಂತೀಯ ಸಹಕಾರ ಸಮ್ಮೇಳನಕ್ಕೆ ಕೊಡಗಿನ ಸಹಕಾರ ಸಂಘಗಳ ... ... ಮ. ರಾ. ಕೆ. ... ... ಸಹಕಾರ ... ... ಹೋಗಿರುವರಾಗಿ ತಿಳಿಯುತ್ತದೆ.

ಕಳೆದ ತಾ. 30 ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಪ್ರೊಫೆಸರಾದ ಮ. ರಾ. ಯನ್. ಕಸ್ತೂರಿ ಎಂ. ಎ. ಬಿ. ಎಲ್ ಅವರು ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ... ... ಹಾಲ್‌ನಲ್ಲಿ ಒಂದು ಉಪನ್ಯಾಸವನ್ನು ಮಾಡಿದರು.

ಕಳೆದ ತಾ. 28 ಮತ್ತು 29 ರಲ್ಲಿ ಮದ್ರಾಸಿನಲ್ಲಿ ನಡೆದ ಮದ್ರಾಸು ಪ್ರಾಂತೀಯ ಸಹಕಾರ ಸಮ್ಮೇಳನಕ್ಕೆ ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರಾದ ಮ. ರಾ. ಪಿ. ಬಿ. ಬೆಳ್ಯಪ್ಪನವರು ಮತ್ತು ... ... ಮ. ರಾ. ... ... ಬೆಳ್ಯಪ್ಪನವರು ಸದರಿ ಬ್ಯಾಂಕಿನ ಪ್ರತಿನಿಧಿಗಳಾಗಿ ಹೋಗಿದ್ದರು.

ಮಡಿಕೇರಿಯಲ್ಲಿ ಈ ವಾರ ಇಂಗ್ಲಿಷ್ ... ... ಪ್ಲೇಗು ... ... ಅಂಟುತ್ತಿಲ್ಲ. ಇಷ್ಟರವರೆಗೆ ಪಟ್ಟಣದಲ್ಲಿ 10 ಜನರಿಗೆ ಪ್ಲೇಗು ಅಂಟಿದರಲ್ಲಿ 3 ಮರಣಗಳುಂಟಾದವೆಂದೂ, ಸುಂಟಿಕೊಪ್ಪದಲ್ಲಿ 4 ಜನರಿಗೆ ... ... ಸುಂಟಿಕೊಪ್ಪದ ... ... ವರ್ತಮಾನವಿದೆ.

ಕೆ. ಜಗನ ... ... ಸುಬೇದಾರ್ ... ... ಮತ್ತು ಎ. ಕೆ ... ... ಎ. ಮಾದಣ್ಣನ

...ಎರವ... ... ಕಾರ್ಯದರ್ಶಿಯ (ಎಕ್ಸಿಕ್ಯೂಟಿವ್) ಮೆಂಬರುಗಳು ಚುನಾಯಿತರಾಗಿ ತಿಳಿಯುತ್ತದೆ.

ಸಿ ... ... ಇಂಜಿನಿಯರ್ ... ... ಕಳೆದ ತಾ. 19 ರಲ್ಲಿ ... ... ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕೊಡಗು ... ... 5 ... ... 3-3 ... 10 ... ... ಎಂಬಲ್ಲಿ 200 ... ... ಪ್ರಕಟಿಸಲಾಗಿದೆ ... ...

ಕಳೆದ ತಾ. 28 ರಲ್ಲಿ ಸಹಕಾರ ... ... ಮೈಸೂರು ... ... ಕಮಿಟಿ ... ... ಹಾಕಿ ... ... ಮತ್ತು ... ... ತಾ. 2 ... ... ದಿನಗಳಲ್ಲಿ ... ... ಮೂರು ... ... ಸ್ಥಳಗಳಿಗೆ ... ... ಬಹುಮಾನ ... ... ಕೊಡಲಾಗಿದೆ.

ಹಿಂದೂದೇಶ.

ಕಪೂರ್ಥಲಾ ಮಹಾರಾಜರವರಿಗೆ ಸರ್ ಪದವಿಯನ್ನು ಕೊಟ್ಟು ಅವರನ್ನು ಸನ್ಮಾನಿಸಲಾಗಿರುವದೆಂದು ಪ್ರಕಟವಾಗಿದೆ.

ಕಲ್ಕತ್ತಾ ಕಾರ್ಪೋರೇಶನಿನವರು ವಿದ್ಯಾರ್ಥಿಗಳಿಗೆ ಗ್ರಾಮೋದ್ಯೋಗ ... ... ಶಿಕ್ಷಣವನ್ನು ಕೊಡಲು ಗ್ರಾಂಟುಗಳನ್ನು ಮಂಜೂರು ಮಾಡುತ್ತಿದ್ದಾರೆ.

ಕಲ್ಕತ್ತೆಯ ಹಿಂದೀ ಪತ್ರಿಕೆಯಾದ 'ವಿಶ್ವಮಿತ್ರ'ದ ಒಡೆಯರಿಂದ 1 ಸಾವಿರ, ಅದರ ಮುದ್ರಕ ಪ್ರಕಾಶಕರಿಂದ 1 ಸಾವಿರ ರೂಪಾಯಿಗಳ ಭದ್ರತೆ ಕೇಳಲಾಗಿದೆ.

ದೇಶಭಕ್ತ ... ... ದಾಸರು 1933 ನೇ ಇಸವಿಯ ಕ್ರಿಮಿನಲ್ ಶಾಸನದ ... ... ಬಿಡುಗಡೆಯಾದರು ... ...

ಹಿಂದೂಸ್ಥಾನದ ಮಿಲಿಟರಿ ಎಕಾಡಮಿಗೆ ಸೇರುವುದಕ್ಕೆ ... ... ಸ್ಟೇಟಿನಲ್ಲಿ ತಿಳಿಸಿದರು.

ಲಾಹೋರಿನ ಶಾಹಿದ್ ಗಂಜ್ ಮಸೀದಿಗೆ ಸಂಬಂಧಪಟ್ಟ ... ... 123 ಮಂದಿ ಮುಸಲ್ಮಾನರ ಪೈಕಿ 110 ಜನರು ... ... ಬಿಡುಗಡೆ ... ... ಮೇಲೆ ... ... ನಡೆಯುತ್ತಿದೆ.

ವಿವಾದದಲ್ಲಿರುವ ಲಾಹೋರಿನ ಮಸೀದಿಯ ಸ್ಥಳವನ್ನು ... ... ಪ್ರೈವಿ ಕೌನ್ಸಿಲಿಗೆ ... ... ಹೋಗಿದ್ದಾರೆ.

ಹುಗ್ಲಿ ನದಿಯ ಮೇಲಿನ ಹೊಸ ಸೇತುವೆಯ ನಿರ್ಮಾಣಕ್ಕಾಗಿ ಅನೇಕ ಬ್ರಿಟಿಷ್ ಫರ್ಮುಗಳೂ, ಹಿಂದೀ ... ... ಟೆಂಡರುಗಳನ್ನು ... ... 17,50,000 ರೂಪಾಯಿಗಳ ... ... ಕೊಡಲಾಗಿದೆ.

ಪಂಜಾಬಿನಲ್ಲಿ ಖಡ್ಗಗಳನ್ನು ಯಾರೂ ಲೈಸನ್ಸಿಲ್ಲದೆ ಹಿಡಿಯಬಹುದೆಂದು ಸರ್ಕಾರದವರು ... ... ಮೇಲೆ ಪಂಜಾಬಿನ ಮುಸಲ್ಮಾನರಿಗೆ ಬೇಕಾದ ಆಯುಧಗಳನ್ನು ತಯಾರಿಸುವ ಏರ್ಪಾಡನ್ನು ಮಾಡುವುದರಲ್ಲಿದ್ದಾರೆ. ಹಿಂದೂಗಳೂ ... ... ಖಡ್ಗದ ... ... ಸ್ಥಾಪಿಸಬೇಕೆಂದಿರುವರಂತೆ.

ಅನಂತಪುರ ಜಿಲ್ಲೆಗೆ ಸೇರಿದ ಕಾಂಚನಪಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ತನ್ನ ಹೊಲವನ್ನು ಉಳುತ್ತಿದ್ದಾಗ ಸುಮಾರು 20 ರತಿ (ಕ್ಯಾರೆಟ್) ಯ ದೊಡ್ಡ ವಜ್ರವೊಂದು ಸಿಕ್ಕಿತು. ತನ್ನ ... ... ಅದಕ್ಕೆ ... ... ಬೆಂಗಳೂರಿಗೆ ಹೋಗಿ ... ... ಆದನ್ನು ... ... ಹಣವನ್ನು ... ... ತಿಳಿಯುತ್ತದೆ.

ಕೋಟಿಯಂ ತಾಲೋಕಿ (ಮಲಬಾರ್) ಸೇರಿದ ... ... ಎಂಬ ಗ್ರಾಮದಲ್ಲಿ ಒಂದು ... ... ಧ್ವನಿ ಕೇಳಿಸಿತು. ಗ್ರಾಮದವರು ... ... ಒಂದು ಗುಡ್ಡದ ಮೇಲೆ ... ... ಅದರಲ್ಲಿ ... ... ಅವರ ... ... ಒಂದು ... ... ಹೊಗೆಯ ... ... ನೀರು ... ... ಕಾಣುತ್ತದೆಯಂತೆ.

ವಿದೇಶ.

ಇಟಲಿಯವರು ಅಬಿಸೀನಿಯದ ವಿರೋಧವಿಲ್ಲದೆ ಹಟ್ಟಿ(?) ... ... ಮುತ್ತುತ್ತಿರುವರೆಂದೂ, ... ಯುದ್ಧ ಪ್ರಾರಂಭವೇ!

ಜನಾಂಗಗಳ ಸಂಘದ ... ... ಅವರ ... ... 24 ... ... ನಿರ್ಧರಿಸಿದೆ.

ಆಫ್ರಿಕಕ್ಕೆ ಹೋಗಲು ... ... ಸೈನ್ಯದವರು ... ... ಹಲವು ... ... ಸುದ್ದಿ.

ಆಫ್ರಿಕದ ... ... ಇಟಲಿಯಲ್ಲಿ ... ... 32 ... ... ಹೆಚ್ಚಿದೆ.

ಬಿರುಗಾಳಿಯ ರಭಸದಿಂದ ಜಪಾನ್ ... ... 80 ಸಾವಿರ ... ... 300 ಮಂದಿ ಮೃತರಾದರು. 200 ಮಂದಿಗೆ ಗಾಯ. 190 ... ... ಬಿದ್ದಿವೆ.

20 ಕೋಟಿ ವರ್ಷಗಳ ಹಿಂದೆ ... ... 20 ಅಡಿ ... ... ಒಂದು ದೊಡ್ಡ ಹಾವಿನ ... ... ಸಿಕ್ಕಿದೆ.

ಶ್ರೀ ಕಾವೇರೀ ಸಂಕ್ರಮಣದ ಮುಹೂರ್ತ ಪಟ್ಟಿ.

ಇದೇ ಅಕ್ಟೋಬರ್ ತಾರೀಕು 11 ನೇ ... ... ದಿನ 12 ಗಂಟೆ ... ... ಶುಕ್ರನ ... ... ಶುಭ ಮುಹೂರ್ತ.

ಇದೇ ದಿನ ಮಧ್ಯಾಹ್ನದ ಮೇಲೆ ... ... ದೇವರ ಭಂಡಾರದ ... ... ಶುಭ ಮುಹೂರ್ತ.

ಇದೇ ಅಕ್ಟೋಬರ್ ತಾರೀಕು 17 ನೇ ಗುರುವಾರ ... ... ನಕ್ಷತ್ರದಲ್ಲಿ (ಮಧ್ಯಾಹ್ನದ ಮೇಲೆ) ಸಾಯಂಕಾಲ 5 ಗಂಟೆ 1½ ನಿಮಿಷಕ್ಕೆ ಸರಿಯಾಗಿ ತುಲಾ ಕಾವೇರಿ ಸಂಕ್ರಮಣದ ತೀರ್ಥೋದ್ಭವದ ಪುಣ್ಯಕಾಲದ ಶುಭ ಮುಹೂರ್ತ.

ಕೆ. ಚಂಗಪ್ಪ,
ಮುಖ್ಯ ... ... (ಪ್ರೆಸಿಡೆಂಟ್)

Wanted.

Candidates for Telegraph and Station Master class. Allowance Rs. 18. Uniform, passage and quarter free. Service essential. Rules and Entrance form on annas eight.

Director,
Royal Telegraph and Rly.
Duties College,
Bombay No. 10.

14—3

ಕೊಡಗು

ಅಕ್ಟೋಬರ್ ತಾ. ೪ ನೇ ಶುಕ್ರವಾರ ೧೯೩೫.

ಇಂಡಿಯಾ ಎಸೆಂಬ್ಲಿಯಲ್ಲಿ ಜನರ ಪ್ರತಿನಿಧಿಗಳ ಬಹುಮತದ ತೀರ್ಮಾನವನ್ನು ಉಲ್ಲಂಘಿಸಿ, ರಾಷ್ಟ್ರೀಯ ಪತ್ರಿಕೆಗಳನ್ನು ಮೂಲೆಗೊತ್ತಲು ಸಾಧನವಾದ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ'ಯನ್ನು ಸೈಸರಾಯರು ಮಂಜೂರು ಮಾಡಿದ್ದಕ್ಕಾಗಿ ನಮ್ಮ ನಿಷೇಧವನ್ನು ಸೂಚಿಸುವ ಬಗ್ಗೆ ಈ ವಾರದ ಅಗ್ರಲೇಖನವನ್ನು ಪ್ರಕಟಿಸಿರುವುದಿಲ್ಲ.

ಜನಾಂಗಗಳ ಕೂಟವೂ, ಯುದ್ಧವೂ.

ಇಟಲಿ—ಅಬಿಸೀನಿಯಾ ಸಮಸ್ಯೆಯು ಇಂದಿನ ಯೂರೋಪಿನ ರಾಷ್ಟ್ರಗಳ ಅಸ್ತಿತ್ವವನ್ನೇ ಅಲ್ಲಾಡಿಸುತ್ತಿದೆ. ಪ್ರಪಂಚದ ಅಗ್ರಗಣ್ಯ ರಾಷ್ಟ್ರಗಳೆಲ್ಲವೂ ದೊಡ್ಡ ಸಿಡಿಮದ್ದಿನ ಭಂಡಾರಗಳೆಂದೆನ್ನಲೂ ಬಹುದು. ಒಂದು ಕಿಡಿ ಎಲ್ಲಾದರೂ ಬಿದ್ದಿತಾದರೆ ಎಲ್ಲವೂ ಏಕ ಕಾಲದಲ್ಲೇ ಸಿಡಿಯಬಹುದು. ಇಂದಿನ ಕಿಡಿಯೆಂದರೆ ಇಟಲಿ — ಅಬಿಸೀನಿಯಾ ಯುದ್ಧ. ಕಿಡಿ ಹಾರಿತೆಂದರೆ, ಯಾವ ಯಾವ ಮದ್ದಿನ ಭಂಡಾರಗಳಿಗೆ ಬೆಂಕಿ ಹಿಡಿಯುವದೋ ಹೇಳಲಶಕ್ಯ. ಈ ಅನಾಹುತವನ್ನು ನಿವಾರಿಸಲು ಜಿನೀವಾದಲ್ಲಿ ಅಂತರರಾಷ್ಟ್ರ ರಾಜಕೀಯ ಮುಖಂಡರು ಸಭೆ ಸೇರಿರುವರು. ಜನಾಂಗಗಳ ಕೂಟವು ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಈ ಅನಾಹುತವನ್ನು ನಿವಾರಿಸಿದ್ದಾದರೆ ಅದರ ಜನ್ಮವು ಸಾರ್ಥಕವಾಯಿತೆನ್ನಬಹುದು. ಕಳೆದ ಸೆಪ್ಟಂಬರು ತಿಂಗಳು ಇಡೀ ಜಿನೀವಾದಲ್ಲಿ ಈ ಸಮಸ್ಯೆಯ ಚರ್ಚೆಯು ನಡೆದು ಅದರಿಂದ ಒಂದು ರಾಜೀ ತೀರ್ಮಾನವು ಹೊರಬಿದ್ದಿತು. ಆ ತೀರ್ಮಾನವನ್ನು ಇಟಲಿಯು ತಿರಸ್ಕರಿಸಿದ್ದರಿಂದ ಈಗ ಪುನಃ ಒಂದು ರಾಜಿ ಪ್ರಸ್ತಾಪದ ಮಾತು ಕತೆಗಳು ಪ್ರಾರಂಭವಾಗಿವೆ. ಈ ರಾಜಿ ಪ್ರಸ್ತಾಪಗಳೂ ತಿರಸ್ಕರಿಸಲ್ಪಟ್ಟದ್ದಾದರೆ ಇನ್ನು ಯುದ್ಧ ನಿಶ್ಚಯ. ಹಾಗೆ ಯುದ್ಧವು ನಿಶ್ಚಯವಾದಲ್ಲಿ ಜನಾಂಗಗಳ ಕೂಟ ನಿಯಮಕ್ಕೆ ವಿರುದ್ಧವಾಗಿ ವರ್ತಿಸುವ ರಾಷ್ಟ್ರ ಅಥ ರಾಷ್ಟ್ರಗಳ ಮೇಲೆ ಲೀಗಿನವರು ವಿಧಿಸಬಹುದಾದ ಶಿಕ್ಷೆಯೇ 'ಲೀಗ್' ಸ್ಯಾಂಕ್ಷನ್'ಗಳು. ಈ 'ಲೀಗ್ ಸ್ಯಾಂಕ್ಷನ್'ಗಳು ಎರಡು ವಿಧವಾಗಿವೆ. ಆರ್ಥಿಕೋಪಾಯ ಮತ್ತು ಯುದ್ಧೋಪಾಯ.

ಯಾವದೇ ರಾಷ್ಟ್ರವು ತಾನು ಭಾಗಿಯಾದ ಒಡಂಬಡಿಕೆಗಳನ್ನು ಮುರಿದು ಕಾಲ್ಕೆರೆದು ಮತ್ತೊಂದು ರಾಜ್ಯದ ಮೇಲೆ ಧಾಳಿಗೈದಲ್ಲಿ, ಅಂಥ ರಾಷ್ಟ್ರಕ್ಕೆ ಯುದ್ಧ ಸಮಯದಲ್ಲಿ ಬೇಕಾಗಬಹುದಾದ ಶಸ್ತ್ರಾಸ್ತ್ರಗಳೂ ಮತ್ತು ಆಹಾರ ಸಾಮಗ್ರಿಗಳೂ ಹೋಗದಂತೆ ಅಡ್ಡಮಾಡುವದೇ ಆರ್ಥಿಕೋಪಾಯದ ಸಾರಾಂಶ.

ಈ ಮೊದಲು ದಕ್ಷಿಣ ಅಮೇರಿಕದ ಬೊಲಿವಿಯಾ ಮತ್ತು ಪೆರಾಗ್ವೆಗಳೊಳಗೆ ತಲೆದೋರಿದ್ದ ಮನಸ್ತಾಪಗಳಿಂದ ಯುದ್ಧವು ಸಂಭವಿಸದಂತೆ ಮಾಡಿದ್ದು ಈ ರೀತಿಯಿಂದಲೇ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಮಾರ್ಗದಿಂದ ಏನೂ ಪ್ರಯೋಜನವಾಗಲಾರದು. ಏತಕ್ಕೆಂದರೆ, ಯುದ್ಧ ಸಾಮಗ್ರಿಗಳನ್ನು ಯಥೇಷ್ಟವಾಗಿ ತಯಾರಿಸುವ ಜರ್ಮನಿ, ಜಪಾನು, ಯುನೈಟೆಡ್ ಸ್ಟೇಟ್ಸ್ ಮುಂತಾದ ರಾಷ್ಟ್ರಗಳು ಜನಾಂಗಗಳ ಸಂಘದಲ್ಲಿರುವದಿಲ್ಲ. ಅದ್ದರಿಂದ ಈ ಸ್ಯಾಂಕ್ಷನುಗಳನ್ನು ಇಟಲಿಯು ತಿರಸ್ಕರಿಸಿದ್ದಾದರೂ ಸಹ ಯುದ್ಧೋನ್ಮತ್ತವಾದ ರಾಷ್ಟ್ರಕ್ಕೆ ಯುನೈಟೆಡ್ ಸ್ಟೇಟ್ಸ್, ಜರ್ಮನಿ ಮತ್ತು ಜಪಾನು ದೇಶಗಳಿಂದ ಯಥೇಷ್ಟವಾದ ಯುದ್ಧ ಸಾಮಗ್ರಿಗಳ ಸರಬರಾಯಿಯಾಗುವದು. ಅಷ್ಟೇ ಅಲ್ಲ, ಇಪ್ಪತ್ತು ವರ್ಷಗಳ ಹಿಂದೆ ಯಾವ ರಾಷ್ಟ್ರಕ್ಕಾದರೂ ಯುದ್ಧದ ಮದ್ದಿಗಾಗಿ ದಕ್ಷಿಣ ಅಮೇರಿಕಾದ 'ಚಿಲಿ' ಎಂಬ ಪ್ರದೇಶದಿಂದ 'ನೈಟ್ರೇಟ್' ಎಂಬ ಪದಾರ್ಥವು ಹೋಗಬೇಕಾಗಿದ್ದಿತು. ಅದ್ದರಿಂದ ಆ 'ಚಿಲಿ' ಪ್ರಾಂತ್ಯದಿಂದ ನೈಟ್ರೇಟಿನ ವ್ಯಾಪಾರವನ್ನು ನಿಲ್ಲಿಸಿ ಪ್ರಪಂಚದಲ್ಲಿ ಎಲ್ಲಿಯಾದರೂ ಆಗಬಹುದಾದ ಯುದ್ಧಕ್ಕೆ ಅಡಚಣೆಯೊಡ್ಡಬಹುದಿತ್ತು. ಆದರೆ ಈಗ ಎಲ್ಲ ಮುಂದುವರಿದ ರಾಷ್ಟ್ರಗಳು ಗಾಳಿಯಲ್ಲಿರುವ ನೈಟ್ರೋಜನಿನಿಂದಲೇ ನೈಟ್ರೇಟನ್ನು ಪಡೆಯುವ ವಿಧಾನಗಳರುವದರಿಂದ ಯಾವ ಮುಂದುವರಿದ ರಾಷ್ಟ್ರವೂ ಈ ವಿಚಾರದಲ್ಲಿ ಪರಾವಲಂಬಿಯಾಗಿರುವದಿಲ್ಲ. ಇನ್ನು ಯುದ್ಧಕ್ಕೆ ಬೇಕಾಗದ್ದು ತಾಮ್ರ, ನಿಕ್ಕಲ್, ಎಂಟಿಮನಿ, ಕಬ್ಬಿಣ ಮತ್ತು ಪೊಟೇಷ್. ತಾಮ್ರ ನಿಕ್ಕಲ್ ಮೊದಲಾದವುಗಳು ಯುನೈಟೆಡ್ ಸ್ಟೇಟ್ಸಿನಿಂದಲೂ, ಎಂಟಿಮನಿ ಜಪಾನಿನ ಕೈವಶದಲ್ಲಿರುವ ಉತ್ತರ ಚೈನಾ ಮತ್ತು ಚೈನಾದಿಂದಲೂ ಮತ್ತು ಪೊಟೇಷ್ ಜರ್ಮನಿಯ ಪ್ರಾಂತ್ಯದಿಂದಲೂ ಸಿಗುವದರಿಂದ ಲೀಗ್ ಸ್ಯಾಂಕ್ಷನುಗಳು ಪ್ರಯೋಗದಲ್ಲಿ ಬಂದರೂ ಇಟಲಿಗೆ ಅನಾಯಾಸವಾಗಿ ಈ ಸಾಮಗ್ರಿಗಳು ದೊರೆತೇ ದೊರೆಯುವವು.

ಕಳೆದ ಘೋರ ಯುದ್ಧದಲ್ಲಿ ಜರ್ಮನಿಗೆ ಯಾವ ರಾಷ್ಟ್ರವೂ ಯುದ್ಧ ಸಾಮಗ್ರಿಗಳನ್ನು ಒದಗಿಸಬಾರದೆಂದು ಒಪ್ಪಂದವಿದ್ದರೂ ಕೂಡ ಜರ್ಮನಿಯು ಪಿತೃವರ್ಗದವರ ರಾಷ್ಟ್ರಗಳಿಂದ ತಟಸ್ಥವಾಗಿರುವ ರಾಷ್ಟ್ರಗಳ ಮೂಲಕ ಧಾರಾಳ ಯುದ್ಧ ಸಾಮಗ್ರಿಗಳನ್ನು ಪಡೆದರು. ಅದ್ದರಿಂದ ಈ ಲೀಗ್ ಸ್ಯಾಂಕ್ಷನುಗಳು ಎಷ್ಟರ ಮಟ್ಟಿಗೆ ಅಪ್ರಯೋಗಿಕವಾದವೆಂಬುದು ತಿಳಿದುಬರುವದು.

ಈ ಭೇದೋಪಾಯದಲ್ಲಿ ಹೆಚ್ಚು ಪ್ರಯೋಗಿಸಬಹುದೆಂದರೆ, ಆಹಾರ ಸಾಮಗ್ರಿಗಳ ತಡೆ. ಇದೂ ಈಗಕ್ಕೆ ಸಾಧ್ಯವಲ್ಲವೆಂದೆನ್ನಬಹುದು. ಯುನೈಟೆಡ್ ಸ್ಟೇಟ್ಸಿನಿಂದ ಗೋಧಿಯು ಧಾರಾಳವಾಗಿ ಬರುವದರಿಂದ ರಾಷ್ಟ್ರ ಸಂಘದವರು ಅದಕ್ಕೆ ತಡೆಯನ್ನು ಹಾಕಲಿಕ್ಕಾಗುವದಿಲ್ಲ.

ಇನ್ನು ಉಳಿದುದೆಂದರೆ, ಬಲಪ್ರಯೋಗಗಳನ್ನು ಮಾಡುವದು. ಈಗಿನ ಸಂದರ್ಭದಲ್ಲಿ ಸುಯೇಜನ್ನು ಮುಚ್ಚುವದರಿಂದ ಯುದ್ಧವನ್ನು ಖಂಡಿತವಾಗಿಯೂ ನಿಲ್ಲಿಸಬಹುದು. ಆದರೆ ಆ ಮೇಜು ಕಾಲುವೆಯು ಯಾವ ರಾಷ್ಟ್ರದ ಅಧೀನದಲ್ಲಿಯೂ ಇಲ್ಲ. ಅದರ ವ್ಯವಸ್ಥೆಯು ಒಂದು ಕಂಪೆನಿಯಿಂದ ನಡೆಯುತ್ತಿದೆ. ಆ ಕಂಪೆನಿ... [illegible] ... ಭಂಡವಾಳಗಾರರಿಂದಲೇ ಕೂಡಿದೆ. ಅಲ್ಲದೆ 1888 ನೇ ಇಸವಿಯ ಕಾನ್ಸ್ಟಾಂಟಿನೋಪಲಿನ ಒಪ್ಪಂದದ ಮೇರೆ ಕಾಲುವೆಯು ಸದಾ ಎಲ್ಲರಿಗೂ ತೆರೆದಿರಬೇಕೆಂಬ ಶರತ್ತು ಇರುವದರಿಂದ ಇದೂ ಕೂಡ ಸಾಧ್ಯವಾಗುವದು ಸಂಶಯಾಸ್ಪದವಾಗಿದೆ.

ಆರ್ಥಿಕೋಪಾಯ ಇಷ್ಟಾಯಿತು. ಇನ್ನು ಯುದ್ಧೋಪಾಯ. ಈಗಿನ ಪ್ರಪಂಚದ ಸ್ಥಿತಿಯು 'ಇಬ್ಬರಿಗೆ ಗುದ್ದಾಟ ಮೂರನೆಯವನಿಗೆ ಲಾಭ' ಎಂಬ ಸಂದರ್ಭದ ನಿರೀಕ್ಷಣೆಯಲ್ಲಿದೆ. ಯಾರಾದರಿಬ್ಬರಿಗೆ ಗುದ್ದಾಟವಾದರೆ ನಮಗೇನಾದರೂ ಲಾಭವಾದೀತೆಂಬ ನಿರೀಕ್ಷಣೆಯಲ್ಲಿರುವಾಗ ಯುದ್ಧೋನ್ಮತ್ತ ರಾಷ್ಟ್ರದ ವಿರುದ್ಧ ರಾಷ್ಟ್ರಸಂಘಕ್ಕೊಳಪಟ್ಟ ರಾಷ್ಟ್ರಗಳೆಲ್ಲವೂ ಯುದ್ಧ ಯಾತ್ರೆಗೆ ಸಿದ್ಧರಾಗುವದು ಸಾಧ್ಯವೇ ಇಲ್ಲ. ರಾಷ್ಟ್ರಗಳಲ್ಲಿ ಒಗ್ಗಟ್ಟು ಇಲ್ಲ. ಎಲ್ಲವೂ ನ್ಯಾಯಕ್ಕಿಂತ ಲಾಭದ ಕಡೆ ಹೆಚ್ಚು ದೃಷ್ಟಿಯನ್ನಿಟ್ಟಿವೆ.

ಲೀಗಿನ ಸ್ಯಾಂಕ್ಷನುಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗುವವೆಂಬದನ್ನರಿತೇ ಇಂದು ಇಟಲಿಯು ಇಷ್ಟು ಅಬ್ಬರಿಸುತ್ತಲಿರುವದು. ರಾಷ್ಟ್ರಸಂಘವು ಸ್ಯಾಂಕ್ಷನುಗಳನ್ನು ಜಾರಿಯಲ್ಲಿ ತಂದದ್ದೇ ಆದರೆ ದೊಡ್ಡ ಘೋರ ಸಂಗ್ರಾಮವೇ ಯೂರೋಪನ್ನಾಕ್ರಮಿಸುವದು. ಮುಸೊಲಿನಿ ಕಾಲಹರಣ ಮಾಡುತ್ತ, ಇಟಲಿಯು ದುರಾಶೆಗಳಿಗೆ ಎಡೆಕೊಟ್ಟದ್ದಾದರೆ ಇಟಲಿಯ ಇಂದಿನ ಸರ್ವಾಧಿಕಾರಿಯಾದ ಮುಸೊಲಿನಿಯು ನಾಳೆ ಯೂರೋಪಿನ ಸರ್ವಾಧಿಕಾರಿಯಾಗಲೂಬಹುದು.

ಮಹಾತ್ಮಗಾಂಧಿಯವರ ಜನ್ಮದಿನೋತ್ಸವ.

ಲೋಕ ವಿಖ್ಯಾತರೂ, ಬಡವರ ಉದ್ಧಾರಕರೂ ಆದ ಮಹಾತ್ಮ ಗಾಂಧಿಯವರು ಜನ್ಮವೆತ್ತಿ ಈ ತಾ. 2ಕ್ಕೆ 66 ವರ್ಷಗಳಾದವು. ಈ ಉತ್ಸವವು ಭಾರತ ಭೂಮಿಯ ಮೂಲೆ ಮೂಲೆಗಳಲ್ಲೆಲ್ಲಾ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಕೊಡಗಿನವರು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಮಾಡಲು ಹಿಂಜರಿಯಲಿಲ್ಲ. ಗಾಂಧಿಜೀಯವರ ಜನ್ಮದಿನೋತ್ಸವವನ್ನು ಆಚರಿಸಲಿಕ್ಕಾಗಿ ಕೊಡಗು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಈ ತಾ. 2ನೇ ಬುಧವಾರ ವೀರರಾಜಪೇಟೆ ರೀಡಿಂಗ್ ರೂಮಿನ ಎದುರುಗಡೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿಸಲ್ಪಟ್ಟಿತು. ಮ. ರಾ. ನಾಯಡ ಬೆಳ್ಳಿಯಪ್ಪನವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು. ಮ. ರಾ. ಪಿ. ಎ. ಬೆಳ್ಯಪ್ಪನವರು—'ಜಗದ್ವಂದ್ಯರಾದ ಮಹಾತ್ಮರು ಅದ್ವಿತೀಯ ರಾಜಕೀಯ ಮುಂದಾಳೂ, ಅಸಾಧಾರಣ ಸಾಮಾಜಿಕ ಸುಧಾರಕರೂ, ಆರ್ಥಿಕ ಸುಧಾರಣೆಯ ವಿಶೇಷ ಧುರೀಣರೂ ಆಗಿದ್ದಾಗ್ಯೂ ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರು ಪ್ರಪಂಚದಲ್ಲಿ ಸತ್ಯವನ್ನೂ, ಅಹಿಂಸಾ ತತ್ವವನ್ನೂ ಪುನಸ್ಥಾಪಿಸಲು ಜನ್ಮವೆತ್ತಿದ ಧಾರ್ಮಿಕ ಮಹಾ ಪುರುಷರೆಂದೂ, ಅವರ ಜೀವಮಾನಕಾಲದಲ್ಲಿಯೇ ಜೀವಿಸುತ್ತಾ, ಅವರ ಜನ್ಮದಿನೋತ್ಸವದಲ್ಲಿ ಭಾಗ ವಹಿಸಲು ಅವಕಾಶ ದೊರೆತ ಜನರೆಲ್ಲರೂ ಪುಣ್ಯಶಾಲಿಗಳೆಂದೂ, ಮುಂತಾಗಿ ಒಂದು ಗಂಟೆಯ ಕಾಲ ಭಾಷಣ ಮಾಡಿದರು. ನಂತರ ಎಲ್ಲರೂ ಎದ್ದು ನಿಂತುಕೊಂಡು ಮೌನವಾಗಿ ಪ್ರಾರ್ಥನೆ ಮಾಡುತ್ತಾ, ಈ ಕೆಳಗಿನ ಗೊತ್ತುವಳಿಯನ್ನು ಮಂಜೂರು ಮಾಡಿದರು.

"ಭಾರತ ಭೂಮಿಯ ಧಾರ್ಮಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಉದ್ಧಾರಕ್ಕಾಗಿ ಮಹಾತ್ಮ ಗಾಂಧಿಯವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸುವಂತೆ ಈ ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ."

ಹರಿಜನ ದಿನಾಚರಣೆ.

ಹಿಂದೂ ಮತಾವಲಂಬಿಗಳಾಗಿದ್ದರೂ ಮೇಲ್ವರ್ಗದ ಹಿಂದೂಗಳಿಂದ ಅಸ್ಪೃಶ್ಯರೆಂದು ಭಾವಿಸಲ್ಪಡುತ್ತಿರುವ ಕೋಟಿಗಟ್ಟಲೆ ಹರಿಜನರ ಉದ್ಧಾರಕ್ಕಾಗಿ ಮಹಾತ್ಮಗಾಂಧಿಯವರು ಅಖಿಲ ಭಾರತ ಹರಿಜನ ಸೇವಾ ಸಂಘವನ್ನು ಸ್ಥಾಪಿಸಿ ಕಳೆದ ಸೆಪ್ಟಂಬರು ತಾ. 24ರಲ್ಲಿ ಮೂರು ವರ್ಷಗಳಾದವು. ಈ ಸಂಘದ 3ನೇ ವಾರ್ಷಿಕೋತ್ಸವವು ಹಿಂದೂ ದೇಶದ ಅನೇಕ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಕೊಡಗಿನ ಹರಿಜನ ಸೇವಾ ಸಂಘದವರೂ ಈ ದಿನವನ್ನು ಆಚರಿಸಿದರು. ಕಳೆದ ತಾ. 24 ನೇ ಮಂಗಳವಾರ ಬೆಳಿಗ್ಗೆ ಇಲ್ಲಿಯ ಹರಿಜನ ಸೇವಾಸಂಘದ ಸೆಕ್ರೆಟರಿಯವರಾದ ಶ್ರೀ ಪಿ ಎ ಬೆಳ್ಯಪ್ಪನವರು ಹರಿಜನ ಸೇವಾ ಬೋರ್ಡಿನ ಒಬ್ಬ ಸದಸ್ಯರಾದ ಶ್ರೀ. ಮಂಡೇಪಂಡ ಸೋಮಯ್ಯನವರು ಮತ್ತು ಹರಿಜನೋದ್ಧಾರ ಕೆಲಸಗಾರರಲ್ಲೊಬ್ಬರಾದ ಶ್ರೀ ಪುಲಿಯಂಡ ಸುಬ್ಬಯ್ಯನವರ ಸಮೇತ ಬೆಪ್ಪುನಾಡು ಅರಮೇರಿ ಗ್ರಾಮದಲ್ಲಿರುವ ಹರಿಜನರ ಕೇರಿಗೆ ಹೋಗಿ, ಅಲ್ಲಿಯ ಹರಿಜನ ಶಾಲಾ ಕಮಿಟಿಯ ಅಧ್ಯಕ್ಷರಾದ ಮ. ರಾ. ಬಲ್ಲಚಂಡ ಉತ್ತಯ್ಯನವರು ಮತ್ತು ಆ ಶಾಲಾ ಹೆಡ್ಮಾಸ್ತರಾದ ಮ. ರಾ. ಅಪ್ಪಯ್ಯನವರ ಜೊತೆಗೂಡಿ ಹರಿಜನರ ಮನೆಗಳನ್ನೆಲ್ಲಾ ಸಂದರ್ಶಿಸಿದರು. ನಂತರ ಅಲ್ಲಿಯ ಶಾಲೆಯಲ್ಲಿ ನೆರೆದಿದ್ದ ಹರಿಜನರಿಗೆ ಅವರ ಮಕ್ಕಳನ್ನು ನಿರ್ಮಲವಾಗಿಟ್ಟುಕೊಂಡು, ಪಾತ್ರೆಗಳನ್ನೂ, ಬಟ್ಟೆಗಳನ್ನೂ ಆಗಾಗ್ಗೆ ತೊಳೆಯುತ್ತಾ, ಮದ್ಯಪಾನ, ಸತ್ತ ದನಗಳ ಮಾಂಸ ಆಹಾರವನ್ನು ತ್ಯಜಿಸಿ, ತಮ್ಮ ಮಕ್ಕಳನ್ನೆಲ್ಲಾ ಶಾಲೆಗೆ ಕಳುಹಿಸುತ್ತಾ ತಾವು ಮುಂದಕ್ಕೆ ಬರಬೇಕೆಂದು ಮುಂತಾಗಿ ಮ. ಪಿ ಬೆಳ್ಯಪ್ಪನವರು ಬೋಧನೆ ಕೊಟ್ಟರು. ಆ ಮೇಲೆ, ತಮ್ಮ ಮನೆಗಳನ್ನು ಚೊಕ್ಕಟವಾಗಿ ಇಟ್ಟುಕೊಂಡದ್ದಕ್ಕಾಗಿ ಕಾಳ್ಯನಿಗೆ 1 ನೇ, ತಿಮ್ಮಂಬನಿಗೆ 2 ನೇ ಮತ್ತು ಸುಬ್ಬನಿಗೆ 3 ನೇ ಇನಾಮುಗಳನ್ನು ಖಾದಿ ಬಟ್ಟೆಯ ರೂಪದಲ್ಲಿ ಹಂಚಲಾಯಿತು.

ಯುವಕರಿಗೆ ಹೊಸ ಹಾದಿ.

(ಲೇಖಕರು—ಪಂಡಿತ ತಾರಾನಾಥರು, ತುಂಗಭದ್ರಾ)

ನ್ಯೂಯಾರ್ಕಿನಲ್ಲಿ ಕ್ರೈಸ್ತ ಮತ ಪ್ರಚಾರಕರಾಗಿ ಯುವಕರಿಗೆ ತರಬೇತು ಕೊಡುವ ಕಾಲೇಜ್ ಇದೆ. ಅಲ್ಲಿ ಕ್ರೈಸ್ತ ಮತ ಸಂಬಂಧವಾದ ಅನೇಕ ವಿಚಾರಗಳು ಯುವಕ ಯುವತಿಯರಿಗೆ ಕಲಿಸಲ್ಪಡುತ್ತವೆ. ಜಗತ್ತಿನಲ್ಲಿಯ ಇತರ ಮತಗಳ ಮಾಹಿತಿಯನ್ನೂ ಅವರಿಗೆ ಸಾಕಷ್ಟು ಕೊಡಲಾಗುತ್ತದೆ. ಆದರೆ ಕಾಲೇಜಿನ ಉದ್ದೇಶವು ಕ್ರೈಸ್ತ ಮತ ಪ್ರಚಾರವೇ!

ಸ್ವಾತಂತ್ರ್ಯದ ಗಾಳಿಯು ಮನುಷ್ಯನ ಜೀವಿತದ ಸಕಲ ಭೂಮಿಕೆಗಳಲ್ಲಿಯೂ ಜೋರಾಗಿ ಬೀಸುತ್ತಿರುವ ಕಾಲದಲ್ಲಿ ವಿಚಾರಗಳು ಎಷ್ಟು ಪ್ರಾಚೀನವೇ ಇರಲಿ, ಅಗಲಿ ಯೋಗ್ಯತೆಯನ್ನು ನ್ಯಾಯಬುದ್ಧಿಗೆ ತೋರಿಸಿ ಕೊಡದೆ ಅವು ಉಳಿಯುವುದು ಕಷ್ಟ. ಹಿರಿಯರು ಹೇಳಿದ ಮಾತಿದು ಎಂದು ಯಾರಾದರೂ ಭೂತಕಾಲಾಭಿಮಾನಿಗಳು ಹೇಳಿದರೆ ಈ ಕಾಲದವರು ಸಾಧಾರಣವಾಗಿ ಅವುಗಳ ದೊಡ್ಡಸ್ತಿಕೆಯನ್ನು ಅಷ್ಟರಿಂದಲೇ ಒಪ್ಪಿಕೊಳ್ಳಲಾರರು. ಇದಕ್ಕೆ ಮುಖ್ಯವಾದ ಕಾರಣಗಳೆನೆಂದರೆ (1) ಜನ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿರುವುದು, (2) ಭೌತಿಕ ಶಾಸ್ತ್ರಜ್ಞಾನವು ಎಲ್ಲಾ ಕಡೆ ಹಬ್ಬುತ್ತಿರುವುದು, (3) ಜೀವಿತದ ಆವಶ್ಯಕತೆಗಳು ಕೂಡಿಸಿಕೊಡುವುದಕ್ಕಾಗಿ ಉಂಟಾದ ಯಂತ್ರಗಳು, ಸಲಕರಣೆಗಳು, (4) ಪ್ರವಾಸವು ವೇಗವಾಗಿಯೂ, ಸುಲಭವಾಗಿಯೂ ಆಗೋಣವಾದಿಂದ ಅನೇಕ ಜನಾಂಗಗಳ ಜ್ಞಾನವೂ, ಧರ್ಮಗಳೂ ಜನರಿಗೆ ತಿಳಿದು ಬರುವುದು. (5) ಜೀವನದ ಸಂಗ್ರಾಮವು ಬಿಕ್ಕಟ್ಟಾದುದು, ಅದರಲ್ಲಿ ಭೌತಿಕ ನಾಶೀರ್ಯಗಳಿಂದ ಉಂಟಾದ ಜ್ಞಾನ ಯಂತ್ರ ಕುತೂಹಲವು ಇರುವುದು, (6) ವಿಚಾರ ವಿನಿಮಯದ ಸ್ವಾತಂತ್ರ್ಯದಿಂದಲೂ, ಹೊಟ್ಟೆಗಾಗಿದವರಿಂದಲೂ ನಾಶವಾಗುತ್ತಿರುವ ಅಂಧಶ್ರದ್ಧೆಯೂ.

ಇಷ್ಟು ಸಾಧನೆಗಳ ಭಾರವನ್ನು ಮನುಷ್ಯನು ಈಗ ಕೈಕಟ್ಟಿ ಕೂತುಕೊಂಡು ತಾನು ಅಂತಿಂತದಲ್ಲಿ ಊಹಿಸುತ್ತಿರುವ ದೇವರ ತಲೆಯ ಮೇಲೆ ಹಾಕುವುದಿಲ್ಲ. ಸೃಷ್ಟಿಯಲ್ಲಿ ಅವನ ಶ್ರದ್ಧೆಯು ಹೆಚ್ಚಿದಂತೆಲ್ಲಾ ಆತನ ವಿಕಾಸವೂ ಹೆಚ್ಚಾಗುತ್ತದೆ. ಪ್ರತಿಯೊಂದು ಅನುಭವದ ಕಾರಣವನ್ನು ಹುಡುಕುವುದರ ಕಡೆಗೆ ಆತನ ಕಲೆಯು ಈ ಕಾಲದಲ್ಲಿ ಹೋಗುತ್ತಲಿದೆ. ಇಂಥಾ ಶೋಧದಿಂದ 'ಉದ್ಧರೇದಾತ್ಮನಾತ್ಮಾನಂ' ಎಂಬಂತೆ ಆತನು ತನ್ನ ಉದ್ಧಾರವನ್ನು ತನ್ನ ಕೈಯಿಂದ ತಾನೇ ಮಾಡಲುದ್ಯುಕ್ತನಾಗಿರುತ್ತಾನೆ. ಇದಕ್ಕಾಗಿ ಆತನು ಸಕಲ ಶಕ್ತಿಗಳನ್ನು ತನ್ನಲ್ಲಿಯೇ ಹುಡುಕಬೇಕಾಗಿದೆ. ಇದನ್ನೆಲ್ಲ ವಿಮರ್ಶಿಸಿದರೆ ಆತನಿಗೂ ಆತನ ಹಿರಿಯರಿಗೂ ಇರುವ ಭಿನ್ನತೆ ಗೊತ್ತಾಗುತ್ತದೆ.

ಆತಂಕವೇನೋ ಒಂತು ಸರಿಯೆ. ಆದರೆ ಅದು ನಿಷ್ಕಾರಣವಾಗಿ ಏನೂ ಬರಲಿಲ್ಲ. ಅದು ಊಹಾ ಪೋಹಗಳ ಫಲವಲ್ಲ. ಜೀವನ ಸಂಗ್ರಾಮದಲ್ಲಿ ಪ್ರಾಣ ಪಣವೊಡ್ಡಿದ ಹಾದಿಯಲ್ಲಿಯೇ ಸಹಜವಾಗಿ ಯುವಕರಿಗೆ ಹುಟ್ಟಿದ ವಿಷಯವೇ ಈ ಸ್ವತಂತ್ರ ವಿಚಾರ. ಈಗ ಕೈಚಾಚಿ ಬೇಡುವುದರಲ್ಲಿ ಅಷ್ಟನಿಗದ್ದ ನಂಬಿಕೆಯು ಮಗನಿಗಿಲ್ಲ. ನಾಡಿನಲ್ಲಿಯೂ ವಿವೇಕದಲ್ಲಿಯೂ ಹುಟ್ಟಿರುವ ನಂಬಿಕೆಯನ್ನಿಟ್ಟುಕೊಂಡ ಯುವಕರಿಗೆ ಸ್ವರ್ಗ ನರಕಗಳ ಪರಿವೆಯೇ ಇಲ್ಲ. ಆದರೆ ಇಷ್ಟಕ್ಕೇನೂ ಸಂದೇಹವಿಲ್ಲ. ಲೋಕ ಸಂಗ್ರಹ ತತ್ವ ವಿಕಾಸ ಮುಂತಾದ ಸನಾತನ ಧರ್ಮಾಂಗಗಳ ಅಭಿಮಾನವು ಎಲ್ಲ ಕಡೆಯಲ್ಲಿಯೂ ಯುವಕರಲ್ಲಿ ಹೆಚ್ಚುತ್ತಲೇ ಇದೆ. ಇವು ಎಲ್ಲಿ ಕಾಣಬರುವುದಿಲ್ಲವೋ ಅಲ್ಲಿ ಈ ಯುವಕರಿಗೆ ವೈರಾಗ್ಯ ಉತ್ಪತ್ತಿಯೊಂದೇ ಕಂಡು ಬರುತ್ತದೆ. ಗೊತ್ತು ಇದರಿಂದ ಧರ್ಮವು ಕೆಟ್ಟಿತೆಂದು ಗೋಳಿಟ್ಟರೂ ಇವರು ಆ ವನ್ನು ಹಾದಿಯನ್ನು ಬಿಡುವುದಿಲ್ಲ.

ಸುಮ್ಮನೆ ಏತಕಾದರೂ ಬಿಟ್ಟಾರು? ಹಿರಿಯರ ಟೊಳ್ಳು ಊಹೆಗಿಂತಲೂ ಇವರ ಪ್ರತ್ಯಕ್ಷ ಅನುಭವಗಳಿಂದ ಹುಟ್ಟಿದ ವಿಚಾರಗಳು ಏನೂ ಕಡಿಮೆ ಇಲ್ಲವಷ್ಟೆ? ಹೀಗಿರುವಾಗ ಅದೇ ನಿಂದೆಯಿಂದ ಯುವಕರು ಒಗ್ಗುವರೇ? ವಿವೇಕವೇ ಸದಾ ಮುಖ್ಯವಾದ ವಸ್ತು ಎಂಬ ತಿಳುವಳಿಕೆಯು ಎಲ್ಲಿ ನುಡಿದೆಯೋ ಅಲ್ಲಿಂದ ಹೊಸದನ್ನ ಪಡೆಯಬೇಕಾದರೆ ಅವಿವೇಕಕ್ಕೆ ತಲೆ ಬಾಗಿಸಬೇಕಲ್ಲದೇ ತನ್ನ ಅಕ್ಷರ ಹಿರಿತನದ ಅಂತಃಶಕ್ತಿಯನ್ನುಪಯೋಗಿಸುವುದಿಲ್ಲ ಏನೇನೂ ಉಪಯೋಗವಿಲ್ಲ. ಯುವಕರಿಗೆ 'ಜಾಗ್ರತೆ' ಎಂದು ಹಿರಿಯರು ಹೇಳಬಹುದಾದರೆ ಯುವಕರು ಹಿರಿಯರಿಗೆ 'ಎಚ್ಚರಿಕೆ' ಎಂದು ಹೇಳದರೆ ಏನೂ ತಪ್ಪಾಗಲಾರದು. ವಿಚಾರ, ವಿಕಾಸ ಇವು ಎಲ್ಲರ ಜನ್ಮಸಿದ್ಧ ಹಕ್ಕು; ಸ್ವಾತಂತ್ರ್ಯದ ಮೂಲ. ಇವನ್ನು ತಿರಸ್ಕರಿಸಿ ನಡೆಸುತ್ತಿರುವುದನ್ನು ಯಾರೂ ಒಪ್ಪಿಕೊಳ್ಳಲಾರರು. ಇವುಗಳನ್ನು ಒಪ್ಪಿ ಹಿತವನ್ನು ನಿಂದಿಸಬೇಕು. ಅವರು ತಮ್ಮನ್ನು ವಂದಿಸಬೇಕೆಂದರೆ ಅದು ಆಗಲಾರದ ಕೆಲಸವೇ. ಹಿರಿಯರು ಹಿರಿಯರು ಅದೇ ಪ್ರತಿಬಂಧಗಳಿಂದಬೇಕೆಂದರೆ ಸಾಧ್ಯವಲ್ಲ. ಪ್ರಪಂಚದ ಸ್ಥಿತಿಯೇ ಆದಕ್ಕನುಕೂಲವಾಗಿಲ್ಲ. ಯಾರಾದರೂ ತಮ್ಮ ಮತವೇ ದೊಡ್ಡದೆಂದು ತೋರಿಸಿಕೊಳ್ಳುತ್ತಾ ತಮ್ಮ ಮಕ್ಕಳಿಗೆ ತಮ್ಮ ನಿಜ ಮತವನ್ನೇ ಕಲಿಸಬೇಕೆಂದು ಪ್ರಯತ್ನಿಸಿದರೆ ಕಾಲ ಮಹಿಮೆಯೇ ಅವನ್ನ ಶ್ರಮವನ್ನು ಸೋಲಿಸಿ ಅಂಥಾ ಹಿರಿಯರನ್ನು ವಿವಾಕರನ್ನಾಗಿ ಮಾಡುವುದು. ಜೇಮ್ಸ್ ಹೊಗಾರ್ತರೆಂತೆ ಹೂವಿನ ಜನ್ಮ ಸ್ಥಾನ, ಜಾತಿ ವರ್ಣಗಳನ್ನು ಲೆಕ್ಕಿಸದೇ ಒಳಗಣ ಸಾರವನ್ನು ಮಾತ್ರ ಹೀರುವ ಮನೋಗತಿಯು ಯುವಕರಲ್ಲಿ ಮನೆ ಮಾಡಿಕೊಂಡಿದೆ. ಇದರ ದೃಷ್ಟಾಂತವು ಕ್ರೈಸ್ತ ಮತ ಪ್ರಚಾರಕ್ಕಾಗಿ ಸ್ಥಾಪಿಸಿದ ನ್ಯೂಯಾರ್ಕಿನ ಯುವಕರು ತಮ್ಮ ಪರೀಕ್ಷೆಯಲ್ಲಿ ಕೊಟ್ಟ ಉತ್ತರಗಳೇ?

'ಧರ್ಮವೆಂದರೇನು?' ಎಂಬುದು ಅವರಿಗೆ ಕೇಳಲ್ಪಟ್ಟ ಪ್ರಶ್ನೆಗಳಲ್ಲಿ ಒಂದು. ಪ್ರತಿಯೊಬ್ಬರೂ ತಮ್ಮ ತಮ್ಮ ವಿಚಾರಕ್ಕೆ ತೋರಿದ ಉತ್ತರಗಳನ್ನು ಕೊಟ್ಟಿದ್ದಾರೆಯೇ ಹೊರತು ಶಿಕ್ಷಕರು ಕಲಿಸಿದ ಉತ್ತರವನ್ನು ಕೊಟ್ಟವರು ತೀರ ಕಡಿಮೆ. ಕೆಳಗೆ ಒಂದೊಂದಾಗಿ ಕೊಡತಕ್ಕ ಅವರ ಉತ್ತರಗಳನ್ನು ವಾಚಕರು ಓದಿ ಅಮೇರಿಕದ ಯುವಕರ ತಲೆಯಲ್ಲಿ ಸಂಚರಿಸುತ್ತಿರುವ ಸ್ವಾತಂತ್ರ್ಯದ ಜೋರಿನ ಅಂದಾಜು ಮಾಡಿಕೊಳ್ಳಬಹುದು.

'ಪೂರ್ವದ ಒಂದಿಷ್ಟು ಸೂತ್ರಗಳಿಗೆ ಸಿದ್ಧಾಂತಕ್ಕಾಗಲೀ ನನ್ನ ಜೀವನವನ್ನು ಸಂಪೂರ್ಣವಾಗಿ ನಡೆಸುವ ಅಧಿಕಾರ ಕೊಡಲು ನಾನು ಒಪ್ಪುವುದಿಲ್ಲ. ನಾನು ಯಾವ ಪುರಾತನ ಧರ್ಮವನ್ನು ಅಂಗೀಕರಿಸಲಿಕ್ಕಿಲ್ಲ. ಯಾವ ಚರ್ಚಿಗೂ ಸೇವಕನಾಗಿ ಹೋಗಲಿಕ್ಕಿಲ್ಲ. ಏಕೆಂದರೆ ಅವಕ್ಕೆ ನನ್ನ ಜೀವಿತದೊಡನೆ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ನನಗೆ ತೋರುವ ಧರ್ಮವು ಯಾವುದೆಂದರೆ ಪ್ರಕೃತಿಯ ನಿಯಮಕ್ಕನುಸರಿಸಿ ಕಾಲ ದೇಶಗಳಿಗನುಗುಣವಾಗಿ ಹೊಂದಿದ ಒಂದೇ ಒಂದು ಸಹಜ ಜೀವನ. ಸದ್ಗುಣದ ವಿಷಯವು, ನನ್ನ ಈ ಧರ್ಮದಲ್ಲಿ ಸಹಜವಾಗಿಯೇ ಸೇರಿಕೊಂಡಿದೆ. ಬಹುಜನರು ಬಹು ಹಿಂದೆಯೇ ನನ್ನ ಮತದ ಸಾರಾಂಶ.'

'ದೇವರು ಎಂದರೆ ಬದಲಿಸಿದ ವಿಶ್ವದ ನಿಯಮಗಳಿಗೆ ಒಂದು ಇಟ್ಟ ಅಸ್ಪಷ್ಟವಾದ ಹೆಸರು. ಧರ್ಮವೆಂದರೆ ಆತನ ಸ್ವಭಾವ ನಡೆಯುವದು. ಪ್ರಾರ್ಥನೆಗಳಿಂದಲೂ ಪೂಜೆಗಳಿಂದಲೂ ದೇವರನ್ನು ಮೆಚ್ಚಿಸಿ ತನ್ನಂತೆ ಮಾಡಿಕೊಳ್ಳಬಹುದೆಂದು ಭಾವಿಸುವವನ ತಲೆಯೇ ಕೆಟ್ಟಿದೆ ಎನ್ನಬೇಕು.'

ವಿವೇಕದಿಂದ ಸಕಲ ಜನರೊಡನೆ ನಗುನಗುತ್ತ ಕರ್ಮವನ್ನು ಮಾಡುವುದೇ ಸಂಪೂರ್ಣ ಶಿವಸ್ವರ್ಗ.

'ಎಲ್ಲ ಮತಗಳೂ, ಧರ್ಮಗಳೂ, ಹೆಚ್ಚಾಗಿ ಬರಿಯ ನಂಬಿಕೆಯನ್ನೇ ಅವಲಂಬಿಸಿ ಇರೋಣವರಿಂದ ಅವುಗಳನ್ನು ಮುಕ್ತಾಯುಕ್ತ ದೃಷ್ಟಿಯಿಂದ ನೋಡುವರು ಒಂದು ವಿಚಾರವೇ ಸರಿ. ಧರ್ಮಗಳನ್ನು ಪರೀಕ್ಷಿಸಬೇಕಾದರೆ ಉದಯೋಗಿಸತಕ್ಕದ್ದು ಮುಕ್ತಾ ಮುಕ್ತಾ ಪರಿಜ್ಞಾನವಲ್ಲ. ಸಾಧ್ಯಾಸಾಧ್ಯ ಹಿತಾಹಿತ ದೃಷ್ಟಿ ಮಾತ್ರದಿಂದಲೇ ಮತಗಳನ್ನು ವಿಮರ್ಶಿಸತಕ್ಕದ್ದು.'

'ಸ್ವರ್ಗದ ಪ್ರೀತಿಯೂ, ನರಕದ ಭೀತಿಯೂ ಬಿಟ್ಟರೆ ಮನುಷ್ಯನನ್ನು ಸ್ವರ್ಗದಲ್ಲಿ ನಡೆಸೀತು. ಆದರೆ ಇವೆರಡನ್ನು ಲೆಕ್ಕಿಸದೆ ಫಲಾಪೇಕ್ಷೆ ಮನ ಸಹ ಇಲ್ಲದೆ ಗ್ರೀಸ್ ದೇಶದ ಸ್ಟೋಯಿಕರು ಹೇಳಿದಂತೆ ಮತ್ತು ಹಿಂದೂ ವೇದಾಂತ ಭಗವದ್ಗೀತೆಯು ಉಪದೇಶವಂತೆ ಕರ್ಮವನ್ನು ಮಾಡುವುದು ಬಹಳ ಮೇಲು.'

'ಬೌದ್ಧ ಧರ್ಮವು ಹೇಳಿದಂತೆ ಕಾರಣ ಪರಿಣಾಮ ದೃಷ್ಟಿಯಿಂದ ಕರ್ಮವನ್ನು ಪರೀಕ್ಷಿಸಿ ತನ್ನ ಉದ್ಧಾರವನ್ನು ತನ್ನ ಸಿದ್ಧಾಂತದಂತೆ ತಾನೇ ಮಾಡಿಕೊಳ್ಳುವುದು ಉತ್ತಮವೆಂದು ನನಗೆ ತೋರಿ ಬರುತ್ತದೆ.'

'ನಾನು ಚಿಕ್ಕಂದಿನಲ್ಲಿಂದ ಕ್ರೈಸ್ತ ಮತದ ಸ್ಥಿರಬಂಧಗಳಲ್ಲೇ ಬೆಳೆದವನು. ನಮ್ಮ ಮನೆಯಲ್ಲಿ ನಡೆಸಿದ್ದೇ ಧರ್ಮವೆಂದು ತಿಳಿದುಕೊಂಡಿದ್ದೆ. ಈಗ ಮಾಡಿದುದರ ಫಲವು ಸತ್ಯ ಮೇಲೆ ಸಿಗುವದು ಎಂದುಕೊಂಡಿದ್ದೆ.'

'ದೊಡ್ಡವನಾದ ಮೇಲೆ ಎಲ್ಲಾ ಮತಗಳ ಗ್ರಂಥಗಳನ್ನು ವಿಮರ್ಶಿಸಿದ ನಂತರ ನನಗೇನು ತೋಚಿಕೆಂದರೆ ಸತ್ಯ ಮೇಲೆ ಬೀಳಿಸಿ ಫಲವನ್ನು ಪಡೆಯುವುದಕ್ಕೋಸ್ಕರವಾಗಿ ಈಗ ಬದುಕಿರುವಾಗ ಕ್ರೂರರಾದ ನಾವು ಈಗ ಸಾಯುತ್ತಲಿದ್ದೇವೆ. ಇದೊಂದು ಅವಿವೇಕ ಅಲ್ಲವೇ?'

'ಗ್ರೀಕರೂ ಹಿಂದೂಗಳು ಹೇಳಿದಂತೆ ತನ್ನನ್ನು ತಾನು ತಿಳಿಯುವುದು. ಅದರಲ್ಲಿಯೇ ದೈವವೂ ಇದೆ ಧರ್ಮವೂ ಇದೆ. ಅದಕ್ಕಾಗಿ ಕಷ್ಟಪಡುವುದು ಮನುಷ್ಯನ ಕರ್ತವ್ಯವೆಂದು ನನಗೆ ತೋರುತ್ತದೆ. ಅಷ್ಟರಿಂದಲೇ ಆತನಿಗೂ ಸೃಷ್ಟಿಗೂ ಇರುವ ಸಂಬಂಧವು ತಾನೇ ತೋರುತ್ತದೆಂದು ನನಗೆ ಕಾಣುತ್ತದೆ. ಸತ್ತ ಮೇಲೆ ಗೋರಿಯ ಮುಂದೆ ಆಚೆ ಕಡೆ ಏನಿದೆಯೋ ನಾನರಿಯೆ. ಸೇರಿದರ ದೇವರೆನ್ನುವರೇನೋ, ಶಾಶ್ವತವಾದ ಆತ್ಮವೆಂದರೇನೋ ನನಗೆಂದೂ ತಿಳಿಯದು. ಜಯ ಊಹೆಗಳಿಗೆ ನಾನು ಧರ್ಮವೆಂದೆ ಹೇಳಲಾರೆ.'

'ಆತ್ಮಜ್ಞಾನವೇ ಬಹು ಶ್ರೇಷ್ಠವಾದುದೆಂದು ನನಗೆ ತೋರುತ್ತದೆ. ಚರ್ಚಿಗೆ ಸೇರಿದಾಗ ಮುಂದಿಯೊಡನೆ ಪ್ರಾರ್ಥಿಸುವುದರಲ್ಲಿ ಯಾವ ಧರ್ಮವಿದ್ದಂತೆಯೂ ನನಗೆ ತೋರಿ ಬರುವುದಿಲ್ಲ. ನಿಜವಾಗಿಯೂ ಧರ್ಮವಿರುವುದಾಗಿದ್ದರೆ ಅದು ಕಾದರೆ ವಿಶೇಷಾನುಭವಗಳಲ್ಲಿ ಹುಟ್ಟಿದ ತೃಪ್ತಿಯನ್ನುಳಿದಿದ್ದೇ ಹೊರತು ಚರ್ಚಿನ ಅಧಿಕಾರ ಗ್ರಂಥಗಳ ಅರ್ಥದಲ್ಲಿ ಅಲ್ಲ.'

ಸಮಾಲೋಚನೆಗಾಗಿ ಕೆಲವರ ಉತ್ತರಗಳು ಮಾತ್ರವೇ ಕೊಡಲ್ಪಟ್ಟಿವೆ. ಪರೀಕ್ಷಕರು ತಮ್ಮ ಇಚ್ಛಾನುಸಾರವಾದ ವಿಚಾರಗಳನ್ನು ಈ ಉತ್ತರಗಳಲ್ಲಿ ಪಡೆಯದೆ ಇದ್ದರೂ ಅಧಿಕ ಪ್ರಸಂಗವೆಂದು ಅವನ್ನು ತಿರಸ್ಕರಿಸದೆ ಅವಕ್ಕೆ ತಕ್ಕ ಮಾನವನ್ನು ಕೊಟ್ಟೇ ಇರುತ್ತಾರೆ. ಅಂಥಾ ವಾತಾವರಣವು ನಮ್ಮ ಯುವಕರಿಗೂ ಹಿರಿಯರಿಂದ ಲಭಿಸುವದೋ?

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 21—9—35 ರಲ್ಲಿ ಬೆಳಗ್ಗೆ 11 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು.

1. ದಿ. ಗಳಾದ ಪಂದ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಕಟ್ಟೆರ ಎಂ. ಉತ್ತಪ್ಪನವರು, 3 ಐನಂಡ ಕಾರ್ಯಪ್ಪನವರು, 4. ಉದಿಯಂಡ ಪೂಚ್ಚೆಯ್ಯನವರು, 5. ಕಂಬೀರಂಡ ಬೆಳ್ಯಪ್ಪನವರು, 6. ಎಸ್. ಯನ್. ರಾಮಶೆಟ್ಟಿಯವರು, 7 ಒಲ್ಲಚಂಡ ಬೆಳ್ಯಪ್ಪನವರು, 8 ನಾಳೆಕಂಡ ತಮ್ಮಯ್ಯನವರು, 9 ಸಣ್ಣೇರಿಯಂಡ ಸಿ.ಬೈಯ್ಯನವರು, 10. ಚೇರಂಡ ತಮ್ಮಯ್ಯನವರು, 11. ಪಿ ಜಿ ಮುದ್ದಯ್ಯನವರು 12 ಕೊಳ್ಳಿಮಾಡ ಕರುಂಬಯ್ಯನವರು, 13. ರಾ. ಸಾ. ನಾಪಂಡ ಚಂಗಪ್ಪನವರು ಮತ್ತು 14 ಮನಿಯಪಂಡ ಎಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿ)

ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ನಾನ್ ಅಫಿಷಿಯಲ್ ಸೀನಿಯರ್ ಇನ್ಸ್‌ಪೆಕ್ಟರು ಮಿ. ಪಿ. ಯಂ. ಚಂಗಪ್ಪನವರೂ ಸಹ ಹಾಜರಿದ್ದರು.

ಡೈರೆಕ್ಟರು ಮಿ. ರಾ ಐಚೆಟ್ಟಿರ ಸುಬ್ಬಯ್ಯನವರು ಗೈರು ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ನಾರ್ತ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಸೊಸೈಟಿಯ ಲೋಕಲ್ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

3. ಕಳೆದ ಆಗೋಸ್ಟು ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಹಿಂದಿನ ತಿಂಗಳ ಸಿಲ್ಕು	ರೂ.	10726	9	3
ಈ ತಿಂಗಳಲ್ಲಿ ವಸೂಲಾತಿ		13074	15	0
ಒಟ್ಟು.		23801	8	3
ಸದರಿ ತಿಂಗಳಲ್ಲಿ ಖರ್ಚು		9678	6	0
ಬಾಕಿ ಸಿಲ್ಕು ರೂ.		14123	2	3

4 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. (1) ಕಡಗದಾಳು ಸೊಸೈಟಿಗೆ ರೂ 1500, (2) ಗಾಳಿಬೀಡು ಸೊಸೈಟಿಗೆ 725, (3) ಹೊದವಾಡ ಸೊಸೈಟಿಗೆ 800 ಮತ್ತು (4) ಅಮ್ಮತ್ತಿ ಸೊಸೈಟಿಗೆ 1500.

5 ಈ ಕೆಳಗಿನ ಸೊಸೈಟಿಗಳಿಗೆ ಕಾರಣಾಂತರಗಳಿಂದ ಸಾಲಗಳು ಮಂಜೂರಾಗಲಿಲ್ಲ. (1) ಅರಳೆಗಳಮುಡಿ ಸೊಸೈಟಿಗೆ ಮತ್ತು (2) ಬೆಂಬಳೂರು ಲಂಕಾಸ ಸೊಸೈಟಿಗೆ.

6 ಬ್ಯಾಂಕಿಗೆ ಸಲ್ಲಿಸಬೇಕಾದ ಬಾಯಿದೆ ಮೀರಿದ ಬಾಕಿ ರೂ. 1971—9—0 ಗಾಗಿ ಹುಟ್ಟಿನ 10 ಕಂತುಗಳನ್ನು ಕೊಡಿಸಿ ಕೊಡಬೇಕಾಗಿಯೂ ತಾ. 25—8—34 ರ ರಿಸೊಲ್ಯೂಶನ್ ನಂಬ್ರು 3136 ರ ಪ್ರಕಾರ ಮೇಲ್ಕಂಡ ಮೊಬಲಗುಗಳ ಕೇಕಡ 25 ರಷ್ಟು ಮೊಬಲಗನ್ನು ಬ್ಯಾಂಕಿಗೆ ಸಲ್ಲಿಸಲು ಈಗಿನ ಆರ್ಥಿಕ ಹೀನ ದೆಸೆಯಿಂದ ಅನಾನುಕೂಲವೆಂತಲೂ ಪಟ್ಟೆರಿಮಾಗಿ ಆಟ್ಟಮಾಡ ಕುಟುಂಬದ ಸಂಘದವರು ಬರಕೊಂಡ ಅರ್ಜಿಯನ್ನು ಓದಲಾಯಿತು.

ಸದರಿ ಸೊಸೈಟಿಯವರು ಬ್ಯಾಂಕಿಗೆ ಸಲ್ಲಿಸಬೇಕಾದ ವಾಯಿದೆ ಮೀರಿದ ಹಣಗಳ ಪೈಕಿ ಸ್ಟ್ರಾರಲ್ಲಿ ಒಂದು ಹಿಸ್ಸೆಯನ್ನಾದರೂ ಬರುವ 1936 ನೇ ಇಸವಿ ಮಾರ್ಚ ಆಖೈರು ವಳಗೆ ಸಲ್ಲಿಸಿದ್ದೇ ಆದರೆ ಅವರಿಗೆ ಹುಟ್ಟಿನ ಕಂತುಗಳನ್ನು ಕೊಡುವ ವಿಷಯ ಆಲೋಚಿಸಬಹುದೆಂತ ತೀರ್ಮಾನವಾಯಿತು.

7 ತಾ. 31—8—35ರ ರಿಸೊಲ್ಯೂಶನ್ ನಂಬ್ರು 3546ರ ಪ್ರಕಾರ ಗೌರವ ಕಾರ್ಯದರ್ಶಿಯವರು ಸೆಂಟ್ರಲ್ ಬ್ಯಾಂಕಿಗೂ ಮತ್ತು ಟೌನ್ ಸೊಸೈಟಿಗಳಿಗೂ ಆಡಿಟ್ ಫೀಜು ವಿಧಿಸಬೇಕೆಂದು ಮಿ. ಗಿರಿಯಪ್ಪ ಬಿ ಎ. ಯವರು ಬರೆದಿರುವ ಸಿಫಾರ್ಸನ್ನು ವಿರೋಧಿಸಿ ಅವರು ಬರೆದು ತಯಾರಿಸಿದಂತ ಒಂದು ಕರಡು ರಿಪೋರ್ಟನ್ನು ಓದಲಾಯಿತು.

ಸದರಿ ಕರಡು ಪತ್ರವನ್ನು ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರ ಮುಖಾಂತರ ಕಮಿಷನರಾದವರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

8 ಕಣಗಾಲು ಸೊಸೈಟಿಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲವೆಂದು ತನಿಖೆಮಾಡಬೇಕೆಂದು ಹೋಬಳಿ ಯೂನಿಯನ್ ಪ್ರೆಸಿಡೆಂಟರು ಬರಕೊಂಡ ರಿಪೋರ್ಟನ್ನು ಓದಲಾಯಿತು.

(8ನೇ ಪುಟಕ್ಕೆ ನೋಡಿ)

ವಿವಿಧ ವಾರ್ತಾವಳಿ.

ಕ್ವೆಟ್ಟಾದಲ್ಲಿ ಮತ್ತೂ ಕಂಪನಗಳು.

ಕಳೆದ ತಾ. 29 ರಲ್ಲಿ ರಾತ್ರಿ ಕ್ವೆಟ್ಟಾದಲ್ಲಿ ಎರಡು ಬಾರಿ ಭೂಕಂಪನಗಳುಂಟಾದುವು. ಕಂಪನಗಳಿಗೆ ಸ್ವಲ್ಪ ಮುಂಚಿತವಾಗಿ ನೆಲದೊಳಗೆ ಭಯಂಕರ ಗುಡುಗು ಶಬ್ದಗಳು ಕೇಳಿಬಂದುವು. ಕಟ್ಟಾಲಿಕ ಮತ್ತು ಶೀಟುಗಳಿಂದ ಕಟ್ಟಿದ ಕಿಟ್ಟಗಳ ಅಲುಗಾಟದಿಂದ ದೊಡ್ಡ ಶಬ್ದವು ಉಂಟಾಯಿತು. ಆದರೆ ನೆಲಸಮವಾಗಲು ಬಾಕಿ ಕಟ್ಟಡಗಳಿಲ್ಲದಿರುವದರಿಂದಲೋ ಏನೋ ನಷ್ಟವೇನೂ ಸಂಭವಿಸಿರುವದಿಲ್ಲ.

—೦।೦—

ಆಯುಷ್ಯವರ್ಧಕರ ಶಿಕ್ಷಣಕ್ಕೊಂದು ಕಾಲೇಜು!

ಅಮೇರಿಕೆಯಲ್ಲಿ ಆಯುಷ್ಯವರ್ಧನ ನವೀನ ವಿಧಾನಗಳನ್ನು ಈಗಿನ ಸಂಪ್ರದಾಯಕ್ಕನುಗುಣವಾಗಿ ಕಲಿಸುವ ಒಂದು ಕಾಲೇಜು ಕೆಲಸಮಾಡುತ್ತಲಿದೆ. ಇಲ್ಲಿ ಲಂಡನ್, ಪ್ಯಾರಿಸ್ ನಗರಗಳಲ್ಲಿನ ಹೇರ್ ಕಟಿಂಗ್ ಸೆಲೂನುಗಳಲ್ಲಿ ಮಾಡುವ ಪ್ರಕಾರದ ನೂತನ ಆಯುಷ್ಯವರ್ಧಕ ಸೂತ್ರಗಳನ್ನು ಕಲಿಸುವರು. ಇಲ್ಲಿ ತರಬೇತಾದವರಿಗೆ ಯುಕ್ತ ಉದ್ಯೋಗಗಳನ್ನು ಸಹ ಈ ಕಾಲೇಜಿನವರೇ ದೊರಕಿಸಿ ಕೊಡುವರಂತೆ.

—೦೦೦—

ಗಡಿ ಪ್ರಾಂತ್ಯದ ಗಡಿಬಿಡಿ ಕೊಂಚ ಸಮಾಧಾನಿಸಿದೆ.

ವಾಯವ್ಯ ಗಡಿ ಪ್ರಾಂತ್ಯದ ಮೊಹಮಂಡ್ ಗಲಾಟೆಯು ಕೊಂಚ ಸಮಾಧಾನವಾಗಿದೆ. ಇಂಡಿಯಾ ಸರ್ಕಾರದ ಸೈನ್ಯಗಳು ಅಲ್ಲಲ್ಲಿ ಇರಿಸಲ್ಪಟ್ಟಿವೆ. ಅನೇಕ ಪಂಗಡಗಳು ಶಾಂತಿಯನ್ನಪೇಕ್ಷಿಸಿ ಧಾವಿಸುತ್ತಿರುವುವು. ವಿಮಾನಗಳು ಆಕಾಶದಲ್ಲಿ ಹಾರಾಡುತ್ತ ಎಚ್ಚರಿಕೆ ಕೊಡುತ್ತಿರುವುವು. ಅಲಿಂಗರ್ ಫಕೀರ್ ಎಂಬ ಮುಖಂಡನು ಮತ್ತೆ ದಂಗೆಗಳನ್ನೆಬ್ಬಿಸುವ ಪ್ರಯತ್ನದಲ್ಲಿರುವನಂತೆ. ಆದರೆ ಅವನಿಗೆ ದಂಗೆಗಳನ್ನೆಬ್ಬಿಸಿ ಮುಂದುವರಿಸಲು ಸಾಧ್ಯವಿಲ್ಲವಾಗಿದೆ ಎಂದು ತಿಳಿದುಬಂದಿರುತ್ತೆ.

—೦೦೦—

ಅ. ಭಾ. ಕಾಂಗ್ರೆಸ್ ಕಮಿಟಿ ಮೀಟಿಂಗು.

ಮದ್ರಾಸಿನಲ್ಲಿ ಅಕ್ಟೋಬರ್ ತಾರೀಕು 14, 15, 16ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಸಭೆಯ ವರ್ಕಿಂಗ್ ಕಮಿಟಿಯ ಸಭೆ ಕೂಡುವದು. ಆ ಸಮಯಕ್ಕೆ ಬರುವ ಸಭಾಸದರೆಲ್ಲರೂ ಶ್ರೀಯುತ ನಾಗೇಶ್ವರರಾವ್ ಪಂತಲುರವರ ಅತಿಥ್ಯದಲ್ಲಿರುವರು. ಅಲ್ಲದೆ ಸಭೆಯು ಕೂಡ ಅವರ ಭವನದಲ್ಲೇ ನೆರವೇರುವದು. ಇದಾದ ಮೇಲೆ ತಾ 17 ಮತ್ತು 18ರಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯು ಜರುಗುವದು. ಇದಕ್ಕಾಗಬೇಕಾದ ಪ್ರಬಂಧಗಳೆಲ್ಲವೂ ಉತ್ಸಾಹದಿಂದ ಜರುಗುತ್ತಲಿವೆ.

—೦।೦—

ಇದೆಂಥ ಸೃಷ್ಟಿ ವೈಚಿತ್ರ್ಯ!

ಲಗ್ನವಾದ ಹುಡುಗಿಯು ಹುಡುಗನಾದನು.

ಕಾಥೆವಾಡದ ಪಶ್ಚಿಮ ಭಾಗದಲ್ಲಿರುವ ಜಸದಣ್ ಎಂಬಲ್ಲಿ ಒಬ್ಬ ಹುಡುಗಿಯನ್ನು ಅವಳ 17ನೇ ವಯಸ್ಸಿನಲ್ಲಿ (6 ವರ್ಷಕ್ಕೆ ಹಿಂದೆ) ಒರ್ವನಿಗೆ ವಿವಾಹ ಮಾಡಿದ್ದರು. ಈಚೆಗೆ ಕ್ರಮೇಣ ಅವಳ ಸ್ತ್ರೀ ಲಕ್ಷಣಗಳು ಮಾಯವಾಗುತ್ತ ಪುರುಷ ಚಿಹ್ನೆಗಳು ಕಾಣಬರುತ್ತಲಿರುವುದನ್ನು ಕಂಡು ಆಕೆಯ ಗಂಡನು ಗಾಬರಿಪಟ್ಟು ಅವಳನ್ನು ಅವಳ ತಂದೆಯ ಮನೆಗೆ ಕಳುಹಿಸಿಬಿಟ್ಟನು. ಅವಳ ತಂದೆಗೆ ಪುತ್ರ ಸಂತಾನವಿಲ್ಲದ್ದರಿಂದ ಈಗ ಹುಡುಗನಾಗಿ ಮಾರ್ಪಡುತ್ತಿರುವ ತನ್ನ ಹುಡುಗಿಯನ್ನೇ ತನ್ನ ಆಸ್ತಿಗಳ ಉತ್ತರಾಧಿಕಾರಿಯಾಗಿಸಲು ನಿರ್ಧರಿಸಿರುವನು.

—೦೦೦—

ವಿಜ್ಞಾನದ ಭಯಾನಕ ಶೋಧೆ.

'Xರೇ' ಯಲ್ಲ ಇದು 'Zರೇ'

'ಮರಣದ ಕಿರಣ'

ಇಂಗ್ಲೆಂಡಿನಲ್ಲಿ ಒಬ್ಬ ವೈಜ್ಞಾನಿಕನು ತನ್ನ ಅವಿಶ್ರಾಂತ ಶೋಧನೆಯಿಂದ ಒಂದು ಕಿರಣವನ್ನು ಕಂಡು ಹಿಡಿದಿರುವನು. ಆ ಕಿರಣಗಳು ಯಾರ ಮೇಲೆ ಬೀಳುವವೋ ಅವರು ತಕ್ಷಣ ಮೃತರಾಗುವರು. ಈ ಅತ್ಯಂತ ಶಕ್ತಿಯುಳ್ಳ ಮತ್ತು ಭಯಾನಕ ಕಿರಣವನ್ನು ಬ್ರಿಟಿಷ್ ಮಂತ್ರಿ ಮಂಡಲಕ್ಕೆ ತಿಳಿಸಿದನಂತೆ. ಇದಕ್ಕೆ 'Zರೇ' ಎಂದು ಹೆಸರು. ವಿಜ್ಞಾನ ಶಾಸ್ತ್ರವು ಯುದ್ಧವನ್ನು ಎಷ್ಟೋ ಭೀಕರವಾಗಿ ಮಾಡಿದ ಹಾಗೆ ಈ ಮರಣ ಕಿರಣದಿಂದ ಹೇಗೋ ಏನೋ! ವಿಜ್ಞಾನವು ಮನುಷ್ಯ ಕುಲದ ನಾಶಕ್ಕಾಗಿ ಉಪಯೋಗಿಸಲ್ಪಡುವುದಾದರೆ ಪ್ರಪಂಚಕ್ಕೆ ಶಾಂತಿ ದೊರಕೀತು ಎನ್ನುವೆಯೋ?

—೦೦೦—

ಕಮಲಾನೆಹರೂರವರೂ ಸ್ವಲ್ಪ ಸ್ವಾಸ್ಥ್ಯ ಹೊಂದುತ್ತಲಿರುವರು.

ಪಂಡಿತರು ಹೊಸ ಪುಸ್ತಕ ಬರೆಯುತ್ತಲಿರುವರು.

ಶ್ರೀ. ಕಮಲಾನೆಹರೂರವರ ದೇಹಸ್ಥಿತಿಯು ಕೊಂಚ ಸುಧಾರಿಸಿದೆ. ಜ್ವರವು ಕೊಂಚ ಕೊಂಚವಾಗಿ ಇಳಿಯುತ್ತಲಿದೆ. ಆಹಾರಗಳ ಸೇವನೆಯೂ ಸ್ವಲ್ಪ ಅಧಿಕ ಪ್ರಮಾಣದಲ್ಲಾಗುತ್ತಲಿದೆ. ಮೊನ್ನೆ ಮಾಡಿದ ಒಂದು ಶಸ್ತ್ರಕ್ರಿಯೆ ನಡೆಸಿದುದರ ಫಲವಾಗಿ ಸ್ವಲ್ಪ ಇಳಿದಿದ್ದು ಈಗ ಪುನಃ ವಿರಾಮದಿಂದ ಒಟ್ಟಿನಲ್ಲಿ ದೇಹಸ್ಥಿತಿಯು ಸುಧಾರಿಸಿದೆಂದು ಅಲ್ಲಿನ ವರ್ತಮಾನ.

ಪತ್ನಿಯ ಉಪಚಾರದಲ್ಲಿದ್ದ ಜವಾಹರರು ಬಿಡುವಿನ ಸಮಯಗಳನ್ನು ತಮ್ಮ ಒಂದು ಗ್ರಂಥದ ಪರಿಶೋಧನೆಯಲ್ಲಿ ಪಂಡಿತರು ಉಪಯೋಗಿಸುತ್ತಲಿರುವರು. ಹೊಸದಾಗಿ ತಮ್ಮ ಜೀವನ ಚರಿತ್ರೆಯನ್ನು, ಅದರೊಡನೆ ಸಂಭವಿಸಿದ ಕೆಲವು ಸಂಭವಗಳನ್ನು ಒಳಗೊಂಡ ಈ ಪುಸ್ತಕವನ್ನು ಲಂಡನಿನ ಒಂದು ಕಂಪೆನಿ ಪ್ರಕಟಿಸಲು ಮುಂದಾಗಿ ಪ್ರಕಟಿಸಲಿರುವರು.

—೦।೦—

ಲಾಹೋರಿನ ಷಾಹಿದ್‌ಗಂಜ್ ಮಸೀದಿ ಪ್ರಕರಣಕ್ಕೆ ಅಂತ್ಯವಿಲ್ಲದಾಗಿದೆ.

ಲಾಹೋರಿನಲ್ಲಿ ಕಲಿಯುತ್ತಿರುವ ಸಿಖ್—ಮುಸ್ಲಿಮ್ ವಿವಾದಕ್ಕೆ ಅಂತ್ಯವೇ ಇಲ್ಲ! ಸರ್ಕಾರದವರು ವ್ಯವಸ್ಥೆ ನಡೆಸಿದರೂ ಮನಸ್ತಾಪವು ಒಂದಲ್ಲ ಒಂದು ರೀತಿಯಲ್ಲಿ ಉಪಸ್ಥಿತವಾಗುತ್ತಲಿದೆ. ಇತ್ತೀಚೆಗೆ ಸರಕಾರ ನಿಷೇಧಿಸಿದ್ದ ಮೆರವಣಿಗೆ, ಸತ್ಯಾಗ್ರಹ, ದೊಂಬಿ ಗಲಭೆ ಮೊದಲಾದ ಕಾರ್ಯಕ್ರಮಗಳಿಂದ ಕಲಹವು ಹೆಚ್ಚಾಗಿದೆ. ಈಗ ಇತ್ತಂಡದವರೂ ಪರಸ್ಪರ ವಿಶ್ವಾಸದಿಂದ ತಮ್ಮ ಮನಸ್ತಾಪವನ್ನು ಹೋಗಲಾಡಿಸುತ್ತಲಿರುವರು. ಯಾವ ಮುಸಲ್ಮಾನನೂ ಮಿಂಡಗಾರಗೇಡಿಯಂತೆ ವಿಕ್ರಮಿಸಬಾರದೆಂದು ಎಚ್ಚರಿಸಿದರು. ಮುಸಲ್ಮಾನರಿಗೊಬ್ಬರಾದರೂ ವಿಸರ್ಜನ [illegible] ಮಾಡಬಾರದೆಂದು ಹಿಂದೂಗಳ [illegible] ಇದರಿಂದ ವ್ಯಾಪಾರ ಕಿರಿದು ಮುಂದುವರಿಸಿ ಸಹಕಾರವು [illegible] ಗಳನ್ನು ಪ್ರತಿ ದಿನವೂ ಜರುಗುತ್ತಲಿದೆಯಂತೆ.

—೦।—

ಸನಾತನಿಗಳು ಹರಿಜನ ಕೀರ್ತನಕಾರರ ಕಾಲಿಗೆ ಮಣಿದರು.

ರತ್ನಗಿರಿಯ ಹರಿಜನ ಮುಖಂಡರೂ, ಪ್ರಖ್ಯಾತ ಗಾಯಕರೂ ಆದ ಶ್ರೀ. ಎಸ್. ಎನ್ ಕಜ್ರೋಳ್ಕರರೆಂಬುವರನ್ನು ರತ್ನಗಿರಿಯ ಪತಿತಪಾವನ ದೇವಸ್ಥಾನದಲ್ಲಿ ಹರಿಕೀರ್ತನೆ ನಡೆಸಬೇಕೆಂದು ಹಲವು ಮಂದಿ ಆಮಂತ್ರಿಸಿದರು. ಕಜ್ರೋಳ್ಕರರು ಕೀರ್ತನೆ ನಡೆಸಲು ಬಹಳ ಸಂದೇಹಪಟ್ಟರು. ಆ ಮೇಲೆ ಒಪ್ಪಿ ಕೀರ್ತನೆ ನಡೆಸಿದರು. ಕೀರ್ತನೆಗೆ ಎಲ್ಲಾ ಜಾತಿ ಮತಗಳವರೂ ಬಂದಿದ್ದರು. ಕೀರ್ತನೆ ಮುಗಿದನಂತರ ಬನೆಲ್ಲಾ ಮೆಚ್ಚಿ, ಶ್ರೀ ಕಜ್ರೋಳ್ಕರರು ನಡಿಸುವ ಹರಿಜನ ಶಾಲೆಗಳಿಗಾಗಿ ಉಪಯೋಗಿಸಲು ಹಲವು ನಾಣ್ಯಗಳನ್ನಿತ್ತರು. ಕೀರ್ತನಕಾರರು ತಮ್ಮ ಜಾತಿಯ ದುರಂತ ಮಾಡಿದ ಗಾಢ ಭಕ್ತಿಪರ ವಾತಾವರಣದ ಸೆಳೆತಕ್ಕೆ ಸಿಕ್ಕಿ ನೆರೆದವರೆಲ್ಲಾ ಕೀರ್ತನಕಾರರ ಕಾಲು ಮುಟ್ಟಿ ನಮಸ್ಕರಿಸಿದರು. ಕೀರ್ತನ ನಡೆಯುತ್ತಿದ್ದಾಗ ದೂರದಲ್ಲೇ ನಿಂತುಕೊಂಡು ನೋಡುತ್ತಿದ್ದ ಬ್ರಾಹ್ಮಣ ಪಂಡಿತರೂ ಶ್ರೀ ಕಜ್ರೋಳ್ಕರರ ಕಾಲು ಮುಟ್ಟಿ ನಮಸ್ಕರಿಸಿದರು.

—೦೦೦—

ಇಟಲಿ - ಅಬಿಸೀನಿಯಾ.

ಅಬಿಸೀನಿಯಾ ಚಕ್ರವರ್ತಿಯವರ ಸೂಚನೆ.

ರಾಷ್ಟ್ರಸಂಘದವರು ಅಬಿಸೀನಿಯಾದವರ ರಕ್ಷಣೆಗೂ ಬೇಕಾದ ಏರ್ಪಾಟನ್ನು ಮಾಡದೆ, ಯುದ್ಧವಾಗಿ ಸೈನಿಕರನ್ನು ಅಬಿಸೀನಿಯಾದ ಕಡೆ ಕಳುಹಿಸುವ ಇಟಲಿಗೆ ಯಾವ ನಿರ್ಬಂಧವನ್ನೂ ಹಾಕದೆ ಇದ್ದು, ನಿರ್ಲಕ್ಷ್ಯದಿಂದಿರುವುದರಿಂದ ಅಬಿಸೀನಿಯಾ ಚಕ್ರವರ್ತಿಯವರು, ಸಾರ್ವತ್ರಿಕ ಸೈನ್ಯ ಜಮಾವಣೆಯನ್ನು ಕೈಕೊಳ್ಳಬೇಕಾಗುವದೆಂದು ರಾಷ್ಟ್ರಸಂಘ ಅಧ್ಯಕ್ಷರಿಗೂ ಕಾರ್ಯದರ್ಶಿಗಳಿಗೂ ತಿಳಿಸಿರುವರು.

ಅಕ್ಟೋಬರ್ ತಾ. 10 ರೊಳಗೆ ಯುದ್ಧ.

ಇಟಲಿಯು ಯುದ್ಧ ಸನ್ನಾಹಗಳನ್ನೂ, ರಾಷ್ಟ್ರಸಂಘದ ನಿರ್ಲಕ್ಷ್ಯ ಭಾವವನ್ನೂ ನೋಡುವಲ್ಲಿ ಯುದ್ಧವು ಶೀಘ್ರದಲ್ಲೇ ಪ್ರಾರಂಭವಾಗುವದೆಂದು ಅನೇಕರ ಮತ. ಅದರ ಅನೇಕ ಅಬಿಸೀನಿಯಾದವರು, ಯುದ್ಧವು ಅಕ್ಟೋಬರ್ 10 ರೊಳಗೆ ಪ್ರಾರಂಭವಾಗುವದೆಂದು ಹೇಳುತ್ತಲಿರುವರು.

ಅಬಿಸೀನಿಯಾದ ಎಲ್ಲೆಕಟ್ಟುಗಳಲ್ಲಿ.

ಅಬಿಸೀನಿಯಾದ ಎಲ್ಲೆಕಟ್ಟುಗಳಲ್ಲಿ ಇಟಲಿಯವರು ಅನೇಕ ಸೈನ್ಯ ಸನ್ನಾಹಗಳನ್ನು ಮಾಡುತ್ತಿರುವುದರಿಂದ ಅಲ್ಲಿರುವ ಅಬಿಸೀನಿಯಾದ ಸೈನಿಕರೂ ಇಟಲಿ ಸೈನಿಕರ [illegible] ಕಡೆ ಬರುವರೆಂಬ ವಿಚಾರದಿಂದಲೂ ಮತ್ತು ಇಟಲಿಯವರು ಬೇಕೆಂದು ಕಾಲ್ಕೆರೆಯುವರೆಂಬ ಕಾರಣದಿಂದಲೂ ಅಬಿಸೀನಿಯಾದ ಸೈನ್ಯಗಳು ತಮ್ಮ ಈಗಿನ ಠಾಣ್ಯದಿಂದ 18 ಮೈಲು ಹಿಂದಕ್ಕೆ ಸರಿಯಬೇಕೆಂದು ಅಬಿಸೀನಿಯಾ ಚಕ್ರವರ್ತಿಗಳು ಆಜ್ಞೆ ಮಾಡುತ್ತಿರುವರು. ಅಲ್ಲದೆ ಎಲ್ಲೆಕಟ್ಟುಗಳಲ್ಲಿ ಅಬಿಸೀನಿಯಾ ಸೈನಿಕರು ಧಾಳಿಗೈದರೆಂದು ಇಟಲಿಯು ನೆಪ ತೆಗೆದು ಯುದ್ಧ ಪ್ರಾರಂಭ ಮಾಡದಂತೆ ಆ ಎಲ್ಲೆಕಟ್ಟುಗಳಲ್ಲಿ ನಡೆಯುವ ವಿಚಾರಗಳನ್ನು ಪರೀಕ್ಷಿಸುತ್ತಿರಲಿಕ್ಕಾಗಿ ಒಂದು ಸಮಿತಿಯನ್ನು ರಾಷ್ಟ್ರಸಂಘದವರು ಕಳುಹಿಸಿಕೊಡಬೇಕೆಂದು ಅಬಿಸೀನಿಯಾ ಚಕ್ರವರ್ತಿಗಳು ರಾಷ್ಟ್ರಸಂಘಕ್ಕೆ ಬಿನ್ನೈಸಿಕೊಂಡಿರುವರು.

ಗೊಂಡರ್ ಹಾದಿಯನ್ನು ಮುಚ್ಚಿದರು.

ಅಬಿಸೀನಿಯಾದಿಂದ ಇಟಲಿಯ ಎರಿಟ್ರಿಯ ಪ್ರಾಂತ್ಯಕ್ಕೆ ಹೋಗುವ 'ಗೊಂಡರ್ ಪಾಸ್' ಎಂಬ ಕಣಿವೆ ಹಾದಿಯ ಮುಖಾಂತರ ಎರಿಟ್ರಿಯಕ್ಕೆ ಯಾರೂ ವ್ಯಾಪಾರ ಸಾಮಗ್ರಿಗಳನ್ನು ಸಾಗಿಸಕೂಡದೆಂದು ಅಬಿಸೀನಿಯಾ ಸರ್ಕಾರದವರು ಪ್ರಕಟಿಸಿ ಆ ಹಾದಿಯನ್ನು ಮುಚ್ಚಿರುವರು.

ಅಮೇರಿಕದ ಪ್ರೆಸಿಡೆಂಟರ ಪ್ರಕಟಣೆ.

ಯುದ್ಧವು ಸಂಭವಿಸಿದ್ದಲ್ಲಿ ಕೋವಿ ಮದ್ದು ಮುಂತಾದ ಯುದ್ಧ ಸಾಮಗ್ರಿಗಳನ್ನು, ಯುದ್ಧದ ಸಮಯದಲ್ಲಿ ಬೇಕಾಗುವ ಬೇರೆ ಪದಾರ್ಥಗಳನ್ನೂ, ಹಡಗು ವಿಮಾನ ಮೊದಲಾದುವುಗಳನ್ನೂ ಯುದ್ಧಮಾಡುತ್ತಿರುವ ಪ್ರದೇಶಗಳಿಗೆ ರಫ್ತು ಮಾಡಕೂಡದೆಂದು ಅಮೇರಿಕದ ಪ್ರೆಸಿಡೆಂಟರು ಪ್ರಕಟಿಸಿರುವರು.

ಸೂಯೆಜಿಗಾಗಿ ಹಡಗುಗಳು ಹೋಗುವುದು ಬೇಡ.

ಯುದ್ಧ ಸಂಭವದ ಭಯದಿಂದ ಪ್ರಿನ್ಸ್ ಅಂಡ್ ಸಿಲ್ವರ್ ಶಿಪ್ಪಿಂಗ್ ಕಂಪೆನಿಯವರು ಮುಂಬಯಿಯಿಂದ ಯೂರೋಪಿಗೆ ವ್ಯಾಪಾರ ಸಾಗಿಸುವ ತಮ್ಮ ಹಡಗುಗಳಿಗೆ ಇನ್ನು ಸೂಯೆಜ್ ಕಾಲುವೆಗಾಗಿ ಪ್ರಯಾಣ ಮಾಡದೆ ಕೇಪ್ ಆಫ್ ಗುಡ್‌ಹೋಪ್‌ಗಾಗಿ ಪ್ರಯಾಣ ಮಾಡಬೇಕೆಂದು ಆಜ್ಞಾಪಿಸಿರುವರು.

ಮೂವತ್ತು ಸಾವಿರ ಸೈನಿಕರು ಒಂದೇ ವಾರದಲ್ಲಿ.

ಇಟಲಿಯಿಂದ ಈ ವಾರದಲ್ಲಿ 30 ಸಾವಿರ ಸೈನಿಕರನ್ನು ಅಬಿಸೀನಿಯಾದ ಕಡೆ ಕಳುಹಿಸಲಾಗಿದೆ. ಇಂದಿನ ವರೆಗೆ ಒಂದೇ ವಾರದಲ್ಲಿ ಇಷ್ಟು ಸೈನಿಕರನ್ನು ಕಳುಹಿಸಿರಲಿಲ್ಲ. 5 ದೊಡ್ಡ ಹಡಗುಗಳಲ್ಲಿ ಸಾವಿರಗಟ್ಟಲೆ ಸೈನಿಕರನ್ನು ಕಳುಹಿಸಿರುವರು.

ಇಟಲಿಯ ಪ್ರಕಟಣೆ.

ಸೆಪ್ಟಂಬರ್ ತಾ 28ರಲ್ಲಿ ಇಟಲಿಯ ಮಂತ್ರಿಮಂಡಳಿಯವರು ಹೊರಡಿಸಿದ ಪ್ರಕಟಣೆಯಲ್ಲಿ ಹೀಗಿದೆ—"ಇಂದಿನ ವರೆಗೆ ರಾಷ್ಟ್ರಸಂಘವು ಇಟಲಿಯ ಹಿತವನ್ನು ಪೂರೈಸುವ ವಿಚಾರಗಳ ಒಪ್ಪಂದವನ್ನು ಮಾಡುವುದಿಲ್ಲವೋ ಅಂದಿನ ವರೆಗೆ ಇಟಲಿಯು ರಾಷ್ಟ್ರಸಂಘವನ್ನು ತ್ಯಜಿಸುವ ಇರಾದೆಯಲ್ಲಿಲ್ಲ. ಇಂಗ್ಲೆಂಡಿನ ಪರರಾಷ್ಟ್ರ ಸಚಿವರಾದ ಸರ್ ಸಾಮುವೆಲ್ ಹೋರ್‌ರವರ ಪತ್ರದ ವಿಷಯ. ಇಟಲಿಗೆ ಬ್ರಿಟನ್ನಿನ ಹಿತಕ್ಕೆ ಭಂಗವನ್ನುಂಟುಮಾಡಬೇಕೆಂಬ ಯಾವ ಉದ್ದೇಶವೂ ಇಲ್ಲ. ಇಟಲಿ—ಅಬಿಸೀನಿಯಾದ ಮನಸ್ತಾಪಗಳನ್ನು ಆಫ್ರಿಕದಲ್ಲೆಲ್ಲಾ ವ್ಯಾಪಿಸುವಂತೆ ಮಾಡುವದೇ ಇಲ್ಲವೆಂದು ಇಟಲಿಯು ಬ್ರಿಟನ್ನಿಗೆ ಭರವಸೆ ಕೊಡುತ್ತದೆ. ಅಬಿಸೀನಿಯಾ ಚಕ್ರವರ್ತಿಗಳ ಹೇಳಿಕೆಗಳಲ್ಲೂ, ಧೋರಣೆಗಳಲ್ಲೂ ಇಟಲಿಗೆ ವಿಶ್ವಾಸವಿಲ್ಲ. ತಮ್ಮ ಸೈನಿಕರನ್ನು ಎಲ್ಲೆಕಟ್ಟುಗಳಿಂದ ಹಿಂತೆಗೆದರೂ ಅವರು ಒಳಗೊಳಗೆ ಯುದ್ಧ ಸನ್ನಾಹಗಳನ್ನು ತ್ವರೆಯಲ್ಲಿ ನಡೆಸುತ್ತಲಿರುವರು. ಇಟಲಿಯ ಹಕ್ಕುಗಳು ರಾಷ್ಟ್ರಸಂಘದಲ್ಲಿ ಪ್ರಾರಂಭದಿಂದಲೇ ನಿರ್ಲಕ್ಷಿಸಲ್ಪಟ್ಟಿರುವದರಿಂದ ಈಗ ಮನಸ್ತಾಪಗಳು ಹುಟ್ಟಿರುವವು.

ಹದಿಮೂರು ಮಂದಿಯ ಮತ್ತೊಂದು ಕಮಿಟಿ

ಹೊಸ ರೀತಿ ಪ್ರಸ್ತಾಪಗಳನ್ನು ವಿಮರ್ಶಿಸಲಿಕ್ಕೆ ಮತ್ತೊಂದು ಕಮಿಟಿಯು ನೇಮಕವಾಗಿದೆ. ಇದರಲ್ಲಿ 13 ಮಂದಿ ಮೆಂಬರು ನಿಯಮಿತರಾಗಿರುವರು. ಇವರು ಪುನಃ ಈ ಮನಸ್ತಾಪಗಳ ಆದಿಯನ್ನು ಪರಿಶೀಲಿಸುವರಂತೆ. ಕಳೆದ ತಾ. 29 ರಲ್ಲೂ ಮತ್ತೆ 30 ರಲ್ಲೂ ಇವರ ಪಂಚಾಯತಿಗಳು ನಡೆದವು. ಕೀವುದೇ ನಿರ್ಣಯವನ್ನೂ ಹೊಂದಿದ್ದಿಲ್ಲ. ಕಾಲ ವಿಳಂಬನವಾಗಬಾರದೆಂದು ಹಲವರ ಸೂಚನೆ.

ಸೂಯೆಜ್ ಕಾಲುವೆಯು ಮುಚ್ಚಲ್ಪಡುವುದಿಲ್ಲ.

ಸೂಯೆಜು ಕಾಲುವೆಯು ಆಡಳಿತವು ಒಂದು ಕಂಪೆನಿಯ ಸ್ವಾಧೀನದಲ್ಲಿದೆ. ಅಕ್ಟೋಬರ್ ತಾ 16ರಲ್ಲಿ ಅದರ ಡೈರೆಕ್ಟರುಗಳ ಮೀಟಿಂಗು ಕೂಡುವದು ಆ ಸಭೆಯ ಕಾರ್ಯಕ್ರಮದಲ್ಲಿ ಕಾಲುವೆಯನ್ನು ಮುಚ್ಚುವ ವಿಷಯದ ವಿಚಾರವೇ ಇಲ್ಲವೆಂದು ಕೇಳಿಬಂದಿದೆ. 1888ನೇ ಒಪ್ಪಂದದ ಪ್ರಕಾರ ಕಾಲುವೆಯು ಸದಾ ತೆರೆಯಲ್ಪಡುವದೆಂದು ಪ್ರಕಟವಾಗಿದೆ.

Reg. No. M. 1550.

KODAGU

4—10—1935

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕೆಲಸಕ್ಕೆ
"ಕೊಡಗು"
ಪ್ರೆಸ್,
ಮಡಿಕೇರಿ.
—•—
ಹೆಚ್ಚಿನ ವಿಷಯಕ್ಕೆ
ಕೂಡಲೆ ಬರೆಯಿರಿ.

[illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೪ನೇ ಶುಕ್ರವಾರ. [ಸಂಚಿಕೆ ೩೦

By Appointment
To H. E. The Governor of Madras.

CUPS AND MEDALS.

Telephone:
3 1 4 5

Telegrams:
'PRECIOUS.'



V. SUBRAMANIA IYER.
Jeweller. & Diamond Merchant,
2 & 3 Kuppumuthu Street Tiruvateswaranpet. MADRAS. POST BOX 423 TRIPLICANE.
52—46
Catalogue & special designs with quotations (free) on enquiry

THE CANARA BANKING CORPORATION UDIPI, LTD.,
Established 1906.] [Incorporated in British India.
Head office;—UDIPI (S. Kanara.)
It will pay you if you call at our offices at
MERCARA or VIRARAJENDRAPET
(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at
$3\frac{1}{2}\%$
Special facilities offered—(1) Withdrawals allowed by cheques.
(2) Production of pass books unnecessary at each withdrawal.
(3) Accounts transferred from one office to another free of any charges.
(4) Cumulative Deposits—a speciality.
Advances granted on approved securities on easy terms.
All kinds of banking business transacted. For further particulars please apply to any of our offices.
Udipi.
29-7-1935.
52—47
M. Srinivasa Prabhu,
Manager.

"ಜನರಲ್ ಅಶ್ಯೂರೆನ್ಸ್" ಆಫೀಸ್.
ಉದಾರವಾದ ಕೆಲವು ಧೋರಣೆಗಳು.
(1) [illegible]
(2) [illegible]
(3) [illegible] $4\frac{1}{2}\%$ [illegible]
(4) [illegible]
[illegible] 265 ಲಕ್ಷ
[illegible] 70 ಲಕ್ಷ
ವಾರ್ಷಿಕ [illegible] 16 ಲಕ್ಷ
[illegible] 33 ಲಕ್ಷ
[illegible]
[illegible] 25% | [illegible] 20%
[illegible]
[illegible]
[illegible]
[illegible]
52—18

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, [illegible]

[illegible]

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಷೇರ್ ಬಂಡವಾಳ	—	50,000— 0—0
ವಸೂಲಾದ ಷೇರ್ ಮೊಬಲಗು	—	36,030— 0—0
ಜನಗಳಿಂದ ಠೇವಣಿ	—	2,48,365—14—8
ವಸೂಲಾದ ಕ್ಷೇಮನಿಧಿ	—	94,623— 6—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ [illegible].

ಒಂದು ವರ್ಷ [illegible] ಠೇವಣಿಗಳಿಗೆ [illegible] ರೂ. 4–8–0 [illegible]

[illegible]

ಪ್ರೆಸಿಡೆಂಟರು, ಪಂದ್ಯಂಡ ಎ. ಬೆಳ್ಯಪ್ಪನವರು.

[illegible], ರಾ. ಸಾ. [illegible] ಚಂಗಪ್ಪನವರು.

ಸೆಕ್ರೆಟರಿ, ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1–9–1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ [illegible] 50 ವರ್ಷಗಳಿಂದ [illegible]

ಡೋಂಗರ ಬಾಲಾಮೃತವನ್ನು

[illegible]

(52–32) [illegible]

EMPIRE OF INDIA LIFE ASSURANCE CO., LTD.

WANTED.

Influential and active persons who can guarantee business are required to work as Organisers of the Company in the areas detailed below. Applicants should be well known in the locality and must have considerable influence. Previous experience in the line will be preferred.

BANGALORE	MYSORE
COORG	HASSAN
KADUR	SHIMOGA.

Also applications for agencies are solicited from important centres where the Company is not well represented. The Company is very well known for its low Premiums, economical management, sound investments and prompt settlement of claims. In the past 38 years it has built up an excellent position of financial strength and great popularity. It will be easy to organise and secure business for the Company and earn a very decent and steady income.

For further particulars please apply to—

Branch Secretary,
EMPIRE OF INDIA LIFE ASSURANCE CO., LTD.,
152/3, Commercial Street, Bangalore.

52—47

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

([illegible] ಸ್ಥಾಪಿತವಾದದ್ದು) (ಹೆಡ್ ಆಫೀಸು— ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,528
ಕ್ಲೇಮುಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ [illegible]	ರೂ.	15,53,88,843

ಈ ಮೇಲಿನ ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ [illegible] ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು [illegible].

[illegible]—

ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

[illegible]

ಆಗ್ರಾ	ಕಲ್ಲಿಕೋಟೆ	ಕರಾಚಿ	ಪೇಶಾವರ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	[illegible]	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಲಹಾಬಾದು	[illegible]	ಲಕ್ನೌ	ಪೂನ	ಸುಕ್ಕೂರು
[illegible]	ಡೆಲ್ಲಿ	ಮದ್ರಾಸು	[illegible]	[illegible]
[illegible]	ಗದಗ	ಮಂಡಲೆ	[illegible]	[illegible]
[illegible]	[illegible]	[illegible]	ರಾಂಚಿ	[illegible]
[illegible]	[illegible]	[illegible]	[illegible]	[illegible] & [illegible]

ಓರಿಯಂಟಲ್ ಬಿಲ್ಡಿಂಗ್ಸ್, [illegible], ಬೆಂಗಳೂರು. 52—38

ಎಂ. ವಿ. [illegible] ನಾಯುಡು, (ಬ್ರಾಂಚ್ ಸೆಕ್ರೆಟರಿ.)

ಶಿಕಾರಿಗೆ ಬೇಕಾಗುವ ನಾನಾ ವಿಧದ

[illegible], [illegible], ರಿವಾಲ್ವರು,

[illegible],

ಮತ್ತು [illegible]

[illegible]

[illegible]

[illegible].

[illegible]



[CURRENT CATALOGUE FREE.

The Bombay Armoury,

329–331, Abdul Rehman Street,

BOMBAY, 3.

26—5

Printed & published by P. I. Belliappa, at "Kodagu" Press, Mercara for "Kodagu" Ltd.

ಣ್ಣನವರು ಹೇಳಿದಾಗಿ ತಿಳಿಯುತ್ತದೆ. ಕೊಡಗಿನ ಜನರು ಪೋಲೀಸು (ಸರ್ವೀಸಿಗೆ ಅರ್ಹರಲ್ಲವೆಂದು ಹಿಂದೆ ಹೇಳು ತ್ತಿದ್ದುದೆಲ್ಲ) ಶುದ್ಧ ನಿಜವಾಗಿಲ್ಲ. ಕೊಡಗಿನವರ ಸರ್ಕಾರಕ್ಕಾಗಿ ಇರುವಂತ ನ್ಯಾಯ (justice) ದೊರೆಯುತ್ತಾ ಇರುವುದಿಲ್ಲ. ಕೊಡಗಿನವರು ಪೋಲೀಸು ಸರ್ವೀಸಿಗೆ ಅನರ್ಹರೆಂ ದು ತೋರಿಬಂದಿದೆಯೋ ಹೇಳುವುದು ಕಷ್ಟ. ಆದ್ದರಿಂದ ಅವರಿಗೆ ಸಂದರ್ಭವನ್ನೇ ಕೊಡದಿದ್ದರೆ ಅವರು ತಮ್ಮ ಯೋ ಗ್ಯತೆಯನ್ನು ತೋರಿಸುವುದಾದರೂ ಹೇಗೆ? ಒಂದುವೇಳೆ ಒ ಪ್ಪಿದರೂ ಪೋಲೀಸು ಸರ್ವೀಸಿಗೆ ಯೋಗ್ಯರಲ್ಲವೆಂದು ಹೇಳು ವಂತ ಕಲ್ಪನೆಯು ಸಹ, ಕೊಡಗಿನವರೆಲ್ಲ ಅವರ ತಕ್ಕ ವರಲ್ಲವೆನ್ನುವುದು ಯಾವ ನ್ಯಾಯ? ಇದು ಅವರ ಸಂಕುಚಿತ ಬುದ್ಧಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆಯೇ ಹೊರತು ಬೇರೆಯಲ್ಲ.

ಪೋಲೀಸು ಸರ್ವೀಸು ಕೊಡಗು ದೇಶದಲ್ಲಿ ಮಾತ್ರವಲ್ಲ, ಬೇರೆ ಕಡೆಗಳಲ್ಲಿಯೂ ಇಲ್ಲಿಗಿಂತ ಹೆಚ್ಚು ಸಮರ್ಪಕವಾಗಿ ಯೇ ಅಥವಾ ಇಷ್ಟೇ ಸಮರ್ಪಕವಾಗಿಯೋ ಕೆಲಸವನ್ನು ನ ಡೆಸುತ್ತದೆಂದು ಅವರು ತಿಳಿಯಬೇಕಾಗಿದೆ.

ಕೊಡವರಾದರು ಕತ್ತಿಯ ವೀರ ಸರ್ವೀಸಿಗೆ ಆರಿಸಿಕೊಳ್ಳು ವುದು ಸರಿಯಾದ ಕೆಲಸವಲ್ಲವೆಂದು ತಿಳಿದವರು ಒಪ್ಪಲೇ ಬೇಕು. ಆದಾಗ್ಯೂ ಪ್ರತಿಯೊಂದು ಕೊಡವನನ್ನೂ ಅವರವರ ವರ್ಗಗಳಿಗೆ ಯುಕ್ತಿಸುವುದ ಸಹಜವೇ. ಆದರೆ ಅದನ್ನು ಸಾಧಿ ಸಲು ಇನ್ಸ್ಪೆಕ್ಟರನ್ನು ಅಲ್ಲದ ಕೆಲ್ಲದ ದಾರಿಗಳಿಂದ ದಾಟಲಿ ಕ್ಕೆಲು ಯುಕ್ತಿಸುವುದು ಖಂಡನೀಯವಾಗಿದೆ.

ಇಡೀ ಹಿಂದೂದೇಶವೇ ಒಂದು ಜನಾಂಗವೆಂದು ತಿಳಿದು ಕೊಳ್ಳುವವರು ವೈಷಮ್ಯಗಳನ್ನು ಬಿಟ್ಟುಬಿಟ್ಟು ಕೆಲಸಮಾ ಡುವುದು ಉತ್ತಮವೂ ಶ್ರೇಯಸ್ಕರವೂ ಆದದ್ದು. ಈ ದಾರಿ ಯಲ್ಲೇ ಸಾಗಿದರೆ ಎಲ್ಲರೂ ಸೌಹಾರ್ದ ಭಾವದಿಂದ ಅನ್ಯಾ ಶನ್ಯೂಂದಿರಂತೆ ಬಾಳಬಹುದು. ಹಾಗಲ್ಲದೆ, ವಯೋ ವೃದ್ಧರೂ, ವಿದ್ಯಾಬುದ್ಧಿಯಲ್ಲಿ ಮುಂದುವರಿದವರೂ, ಕೋ ಮುವಾರು ವೈಷಮ್ಯಗಳ ಬೀಜಗಳನ್ನು ಬಿತ್ತುವುದಕ್ಕೆ ತೊಡಗಿ ದರೆ, ಅವರನ್ನೇ ಮಾರ್ಗದರ್ಶಕರಾಗಿ ಹಿಂಬಾಲಿಸುವಂಥ ಇನ್ನಿ ತರರಿಗೆ ಎಂಥ ದೃಷ್ಟಿ ಸಿಕ್ಕೀತು, ಇತರ ಕೊಡವನವರ ಮೇಲೆ ಸಹೋದರ ಭಾವವೂ ಬರುವುದು ಹೇಗೆ? ಆಗಬಹುದಾದ್ದೂ ಇ ದನ್ನು ತಿಳಿದು 'ಕೂಪ ಮಂಡೂಕ ನ್ಯಾಯ'ವನ್ನು ಬಿಟ್ಟು ತಮ್ಮ ಸಂಕುಚಿತ ಭಾವನೆಯಿಂದ ಹೊರಗೆ ಒಂದು ವಿಶಾಲ ಪ್ರಪಂಚ ವನ್ನು ನೋಡುವರೆಂದು ಆಶಿಸುವ,

ವಿಶಾಲದೃಷ್ಟಿ.

ಕೆ ಡಗು ವಿದ್ಯಾರ್ಥಿವೃದ್ಧಿ ಫಂಡು ಮತ್ತು ಅದರ
ಸೆಕ್ರೆಟರಿಯವರು

ಈ ಫಂಡಿನಿಂದ ಕಳೆದ 18 ವರ್ಷಗಳಿಂದ ಕೊಡಗು ಯು ವಕ ಯುವತಿಯರಿಗೆ ಅವರ ವಿದ್ಯಾಭ್ಯಾಸಕ್ಕೆ ಎಷ್ಟರ ಮಟ್ಟಿಗೆ ಧನ ಸಹಾಯವಾಗಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ ಯಾಗಿದೆ. ಕಳೆದ 7, 8 ವರ್ಷಗಳ ಅನಂತರ ಇದರ ಟ್ರೆ ಜರರ್ ಮತ್ತು ಸೆಕ್ರೆಟರಿಯಾಗಿದ್ದ ಮು. ರಾ. ಕೆ. ಎಂ ಬೆಳ್ಳಿ ಯಪ್ಪನವರು ಅವರ ರಾಜೀನಾಮೆ ಕೊಟ್ಟದರಿಂದ ಈ ಕೆಲಸವನ್ನು ಕೈಕೊಳ್ಳಲು ಬೇರೆ ಜನರು ಯಾರೂ ಮುಂದಕ್ಕೆ ಬಾರದಿ ದ್ದ [illegible] ಹೆಚ್ಚಿನ ಜವಾಬ್ದಾರಿ ಕೆಲಸವಿದ್ದರೂ ಕೂಡ ಫಂಡಿನ ಏಳಿಗೆಗಾಗಿ ಇಂಗ್ಲೀಷ್ ಆಫೀಸಿನಲ್ಲಿ ಮೇನೇಜರ ರಾಗಿರುವ ಮು. ರಾ. ಕೋಳೆರ ಕುಟ್ಟಪ್ಪನವರು ಸೆಕ್ರೆಟರಿಯೂ ಗಿರಲು ಒಪ್ಪಿಕೊಂಡರೆಂದೂ ತಿಳಿಯಲಾಯಿತು. ಕಮಿ ಟಿಯವರು ಮು. ರಾ. ಕೆ. ಎಂ. ಬೆಳ್ಳಿಯಪ್ಪನವರ ರಾಜೀನಾಮೆ ಯನ್ನು ಅಂಗೀಕರಿಸಿ ಈ ವರೆಗೆ ಮಾಡಿದ ಕೆಲಸವನ್ನು ಸ್ತುತಿಸಿದ್ದಾರೆಂದು ತಿಳಿಯುತ್ತೇವೆ. ಮು. ರಾ. ಬೆಳ್ಳಿಯಪ್ಪನವ ರು ಈ ಫಂಡಿನ ಏಳಿಗೆಗಾಗಿ ತುಂಬಾ ಶ್ರದ್ಧೆಯನ್ನು ತೆಗೆದು ಕೊಂಡಿದ್ದಾರೆಂಬುದರಲ್ಲಿ ಏನೂ ಸಂಶಯವಿಲ್ಲ. [illegible] ಪೇಟೆಯ ಅಂತ್ಯ ವಿಷಯದಲ್ಲಿಯೂ, ಬಂದ ಹಣವನ್ನು [illegible] ಮಾಡುವುದರಲ್ಲಿಯೂ ಬಹಳ ಶ್ರಮ ತೆಗೆ ದುಕೊಂಡಿದ್ದಾರೆ. ಮತ್ತು ಇವರು ಗವರ್ನ್‌ಮೆಂಟ್ ಪ್ರೋ [illegible] ಹಣವನ್ನು ತಕ್ಕ ಸಮಯದಲ್ಲಿ ಕೆಳ್ಳಿನ [illegible] ಸೆಂಟ್ರಲ್ ಬ್ಯಾಂಕಿನಲ್ಲಿ ಇಟ್ಟದ್ದರಿಂದ ವರ್ಷ ಕ್ಕೆ ಸುಮಾರು 80 ರೂಪಾಯಿ ಹೆಚ್ಚಿಗೆ ಬಡ್ಡಿ ಬರುತ್ತದೆ [illegible] ಇದು ನಿಜ ವಾಗಿ ಸ್ತುತ್ಯಾರ್ಹವಾಗಿದೆ. [illegible] ಕಳೆದ 3–4 ವ ರ್ಷಗಳಿಂದ, ಮು. ರಾ. ಬೆಳ್ಳಿಯಪ್ಪನವರ [illegible] 80, [illegible] ಇವರು ಫಂಡಿನ ಏಳಿಗೆಗಾಗಿ [illegible] ಶ್ರಮಿಸಿದ್ದಾರೆ. [illegible] ಕೆಲಸಕ್ಕೆ ನಿಜವನ್ನು ಅವರಿ ಗೆ [illegible] ಅವರ ಮಂದಿನ [illegible] [illegible] ಕೆಲಸವನ್ನು ಕೈಕೊಂಡಿ ರು. [illegible] ಕುಟ್ಟಪ್ಪನವರು ತುಂಬಾ ವಿದ್ಯಾವಂತರಾಗಿ ಒಳ್ಳೆ [illegible] ಇವರು ಈ ಫಂಡಿನ ಏಳಿಗೆ ಮ ತ್ತು ವೃದ್ಧಿಯನ್ನು ತೆಗೆದುಕೊಂಡಾಗಿ ನಮಗೆ ಪೂರ್ಣ ಭರವಸೆ ಇದೆ.

ಒಬ್ಬ ಕೊಡವ.

ಸೇಫ್ ಇಂಗ್ಲೀಷ್ ಸ್ವತಿ.

ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ

ಇಂಗ್ಲಿಷ್ ಓದುವುದನ್ನೂ, ಬರೆಯು ವುದನ್ನೂ, ಮಾತಾಡುವುದನ್ನೂ, ಇಂ ಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡು ವುದನ್ನೂ 2 ತಿಂಗಳಲ್ಲಿ ಕಲಿತುಕೊ ಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಿ ಲ್ಲ. 884 ಪೇಜುಗಳ ದೊಡ್ಡ ಪುಸ್ತಕ ಸ್ವಲ್ಪ ದಿನಗಳು ಮಾತ್ರ ಇರುವುವು. ಬೇಗನೆ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ 2

METHA & Co,
11 Peryanayakaran Street.
12—8 G T Madras

ರೋಲ್ಡ್ ಗೋಲ್ಡ್ ರಿಸ್ಟ್ ವಾಚ್.

ಈ ಗಡಿಯಾರಗಳು ಬಹು ಪ್ರಖ್ಯಾತ ರಾದ ಲಿವರ್ ಮೂವ್‌ಮೆಂಟ್ಸುಗಳಿಂದ (ಸ್ವಿ ಸ್ ಮೇಡ್) ತಯಾರಿಸಿವೆ. ಇವು ಖರಾ ದು ಗಂಟೆಯನ್ನು ತೋರಿಸುವುವು. ಒಳ ಗಡೆ ರಂಧ್ರ ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಈ ಗಡಿಯಾ ರಗಳಿಗೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 5–8–0.

METHA & CO.
11 Peryanayakaran Street.
12—8 G. T. Madras.

ಧಾತುಪುಷ್ಟಿ ಲೇಹ.

ಸ್ವರ್ಣ ಶಿಲ್ಪದ ಹಾಲೆ ಮಿಶ್ರಿತ.

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯ ನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗ ತಲೆ ತಿರುಗುವಿಕೆ, ಸೊಂಟ ನೋವು, ಕೈಕಾಲು ಉರಿ, ಮೈ ದು, ಮಲಬದ್ಧತೆ, ಹಸಿವಿನ ಅಶಕ್ತತೆ, ಇವುಗಳನ್ನೆಲ್ಲಾ ಹೋ ಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿ ಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನು, ತೇಜಸ್ಸು ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು

ಡಬ್ಬಿ 1ಕ್ಕೆ ರೂ 2–8–0. 3ಕ್ಕೆ ರೂ 7–0–0

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತು ರ್ಥಿಕ ಜ್ವರ, ಗಿಣ್ಣೆ ಬರುವ [illegible], ಪುರಾಣ ಜ್ವರ, ವಿಷಮ ದ ಜ್ವರ, ಮನ ಪ್ರೀಯಂಬಾ, ಸಿವ ಲಿಸಿ ಜ್ವರ, ಕಪ ಜ್ವರ, ವಾತಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ, ಶಕ್ತಿ ಯನ್ನುಂಟುಮಾಡುವುದು.

[illegible] ಧರ್ಮಾರ್ಥ)

ಬಾಟ್ಲಿ 1ಕ್ಕೆ ರೂ. 1–8–0 ಸಣ್ಣ ಬಾಟ್ಲಿಗೆ 0–13–0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರ ದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದು ಕಡೆಯುತ್ತಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ

ಡಬ್ಬಿ 1ಕ್ಕೆ ರೂ. 2–8–0 3ಕ್ಕೆ ರೂ. 7–0–0

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿ ಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ಕ್ಕೆ ರೂ. 2—0—0. ಅರ್ಧ ಬಾಟ್ಲಿಗೆ ರೂ 1—2—0

ಚ್ಯವನ ಪ್ರಾಶ—ಡಬ್ಬಿ 1ಕ್ಕೆ 2–8–0. ಅರ್ಧಕ್ಕೆ ರೂ. 1—5—0.

ಅಶೋಕಾರಿಷ್ಟ—ಬಾಟ್ಲಿ 1ಕ್ಕೆ ರೂ 1—0—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಾರ್ಮಸಿಯನ್ಸ್, ರಥಬೀದಿ, ನಂಬರು 1, ಮಂಗಳೂರು.

(1) ವಿ. ಪಿ. ಅಯ್ಯರ್ ಮಹದೇವಪೇಟೆ, ಮಡಿಕೇರಿ (ಕೊಡಗು).

ನಮ್ಮ ಔಷಧಿ (2) ಎಂ. [illegible] ಮಂಜಯ್ಯ, ಒಟ್ಟ ವ್ಯಾಪಾರಿ, ಸುಂಟಿಕೊಪ್ಪ

ಸಿಕ್ಕುವ ಸ್ಥಳ. (3) ಮೆಸರ್ಸ್ ಕಾಮತ ಎಂಡ್ ಕೊ, ತಾರಾ ಹೌಸ್ ಗಿರಗಾಂವ್ ಬ್ಯಾಕ್‌ರೋಡ್, ಬೊಂಬಾಯಿ ನಂ 4

52–12 (4) ಮೆಸರ್ಸ್ ಸುಬ್ಬರಾವ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ

ಯಾವ ಗುಣಗಳು ಅವಶ್ಯಕವೆಂದು ನೀವು

ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಸಾಬೂ ಪ್ರಿಯರಿಗೆ ಖಚಿತವಾಗಿತ್ತಿಯುತ್ತಿದೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52–31 ಬೆಂಗಳೂರು.

ಗಂಧದ ಮರಕ್ಕೆ ಬೋನಸ್ಸು.

ಶನಿವಾರಸಂತೆ ಪಬ್ಲಿಕ್ ಮೀಟಿಂಗು,

ತಾ. 3ರಲ್ಲಿ ಶನಿವಾರಸಂತೆಯಲ್ಲಿ ಮಿ. ಸಿ ಹೆಚ್. ಕಾಳೇಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸುಮಾರು 50 ಗ್ರಾಮಗಳಿಂದ 200 ಜನರ ವರೆಗೆ ನೆರೆದಿದ್ದರು.

ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದುವು.

1. ಪ್ರಕಟವಾಗಿರುವ ನಂಬ್ರ 67 ತಾ 28—6—35 ಗಂಧದ ಮರದ ಕರಡು ಬೋನಸ್ ರೂಲ್ಸುಗಳು ಅತ್ಯಂತ ಅಸಮರ್ಪಕವಾಗಿರುವವೆಂತಲೂ, ಅದರಲ್ಲಿರುವ ಷರತ್ತುಗಳಾದರೆ ರೈತರು ನಡೆಸಲು ಅಸಾಧ್ಯವೆಂತಲೂ ಈ ಸಭೆಯ ಅಭಿಪ್ರಾಯ. ಈ ಕರಡು ನಿಬಂಧನೆಗಳು ಪೂರಾ ರದ್ದು ಆಗಬೇಕು; ಹಾಗೆ ಒಪ್ಪಬಾರದು.

2. ಆಕ್ಷೇಪಣೆ ಹೇಳಲು ಮತ್ತು ಸಲಹೆ ಕೊಡಲು ಇಟ್ಟಿರುವ 90 ದಿನದ ಅವಧಿಯು ಸಾಲದಾಗಿಲ್ಲ ಮತ್ತು ಇದನ್ನು ಒಂದು ವರ್ಷಕ್ಕೆ ಹೆಚ್ಚಿಸಬೇಕು.

3. ಸರ್ಕಾರದವರಿಗೆ ನಿಜವಾಗಿಯೂ ರೈತರಿಗೆ ಗಂಧ ವೃದ್ಧಿ ಮಾಡಲು ಉತ್ತೇಜನಕೊಡುವ ಇರಾದೆ ಇದ್ದರೆ ಮರದ ಮೇಲೆ ಬೋನಸ್ ಕೊಡಬೇಕೆಂಬ ಷರತ್ತನ್ನು ತಪ್ಪಿಸಿ, ಯಾವ ನಿರ್ಬಂಧ ರೂಪವಾದ ಜವಾಬ್ದಾರಿಯನ್ನೂ ರೈತನ ಮೇಲೆ ಹೊರಿಸದೆ ಅಂದರೆ ರೈತನು ಬೆಳೆದ ಗಂಧಕ್ಕೆ ಇರುವ ಪೇಟೆ ಕ್ರಯದ ಮುಕ್ಕಾಲು ಪಾಲನ್ನು (75%) ಅಸೆಸ್ಮೆಂಟು ಆಗದ ಗಂಧಕ್ಕೆ ಕೊಡಬೇಕು.

4. ಫಾರೆಸ್ಟು ಇಲಾಖೆಯವರು ಸ್ವಂತ ಜಾಗದಿಂದ ಎಲ್ಲಾ ಗಂಧದ ಗಿಡಗಳನ್ನು ಕಿತ್ತು, ಫಾರೆಸ್ಟು ಜಾಗಗಳಲ್ಲಿ ನೆಡುತ್ತಾ ಇರುವ ಪದ್ಧತಿಯನ್ನು ತಕ್ಷಣ ನಿಲ್ಲಿಸಬೇಕು.

5. ಬೋನಸ್ ಕೊಡುವ ವಿಷಯದಲ್ಲಿ ರೂಲ್ಸು ಮಾಡ ಬೇಕಾದರೆ ಗಂಧದ ಮರ ವಿಶೇಷವಾಗಿ ಬೆಳೆಯುವ ಪ್ರಾಂತ್ಯದ ರೈತರಿಂದ ಚುನಾಯಿತರಾದ ಮೆಜಾರಿಟಿ ನಾನ್ ಅಫಿಷಿಯಲ್ ಇರುವ ಒಂದು ಕಮಿಟಿಯನ್ನು ಅದಕ್ಕಾಗಿ ಗೊತ್ತುಪಡಿಸಬೇಕು.

6. ಹಾಲಿನ ರೂಲ್ಸುಗಳು ಜನರ ತಲೆಯಮೇಲೆ ಬರಲು ಕಾಣುತ್ತಿರುವ ದಿನದ ಅವಧಿಯೊಳಗೇ ರೆವಿನ್ಯೂ ಇಲಾಖೆಯವರು ಪಟೇಲರುಗಳನ್ನು ಉಪಯೋಗಿಸಿ ರೈತರ ಹಿಡುವಳಿಯಲ್ಲಿ ಗಂಧದ ಮರಗಳ ಲೆಖ್ಖ ತೆಗೆಯಲು ಹಚ್ಚುಕಟ್ಟು ಮಾಡಿ ಬಹುವಟ ಪಟ್ಟಿ ಸಿದ್ಧಮಾಡಬೇಕೆಂತ ನೋಟೀಸುಗಳನ್ನು ಕಳುಹಿಸುತ್ತಿರುವದನ್ನು ವಿರೋಧಿಸುವದಲ್ಲದೆ ಈ ರೀತಿ ನಿರ್ಬಂಧವಾದ ಹಾಗೆ ಸಮ್ಮಂಧಪಟ್ಟ ರೆವಿನ್ಯೂ ಅಧಿಕಾರಿಗಳು ಸ್ವತಃ ಅಧಿಕಾರಿಗಳಿಗೆ ಬರೆದು ತಿಳಿಸಬೇಕಾಗಿ ಕೇಳಿಕೊಳ್ಳುತ್ತದೆ

7. ಈ ಪ್ರೊಸೀಡಿಂಗ್ಸು ಕಾಪಿಯನ್ನು ಚೀಫ್ ಕಮಿಷನರಿಗೂ, ಕಮಿಷನರಿಗೂ, ಚೀಫ್ ಫಾರೆಸ್ಟು ಅಫೀಸರಿಗೂ, 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೂ ಕಳುಹಿಸಬೇಕು

8. ಈ ಬಗ್ಗೆ ಚೀಫ್ ಕಮಿಷನರ್ ಸಾಹೇಬರವರಲ್ಲಿಗೆ ಒಂದು ಡೆಪ್ಯುಟೇಷನ್ ಹೋಗತಕ್ಕದ್ದು ಹೋಗಬೇಕೆಂತಲೂ ಆ ಬಗ್ಗೆ ಈ ಸಭೆಯಿಂದ ಮಿ. ಕಾ. ಸಿದ್ದ ಕಾಫಿ ಪ್ಲಾಂಟರ್ ಮುತ್ತಣ್ಣಯ್ಯನವರು ಹೋಗಬೇಕೆಂತಲೂ ತೀರ್ಮಾನಿಸಿದೆ

9. ನಮ್ಮ ಕೌನ್ಸಿಲ್ ಮೆಂಬರಾದ ವ. ರಾ ಹಾಸ್ಟ ಣ್ಣ ಮಲ್ಲಪ್ಪನವರು ಈ ಶಾಲೆಸಲೀಸ ಕೊಡುಗೋಪಿ, ಸೋಮವಾರಪೇಟೆ, ಫ್ರೇಜರ್‌ಪೇಟೆ ಮುಂತಾದ ಸ್ಥಳಗಳಲ್ಲಿ ಈ ಬಗ್ಗೆ ಮೀಟಿಂಗುಗಳನ್ನು ಮಾಡಬೇಕೆಂದು ಅವರನ್ನು ಈ ಸಭೆಯವರು ಕೇಳಿಕೊಳ್ಳುತ್ತಾರೆ

10. "ಕಾಫಿ ಸಾಗುವಳಿಗೆ ಜಾಗ ಕೊಡಬೇಕಾದರೆ ಗಂಧದ ಮರ ಕಾಪಾಡುತ್ತೇವೆಂತ ಕರಾರು ಮುಚ್ಚಳಿಕೆ ಕೊಡಬೇಕೆಂದು ಅರ್ಜಿದಾರರು ಮಾಡುವುದು ಇರುವದನ್ನು ನಿಲ್ಲಿಸಿ ಹಾಗೆ ಮುಚ್ಚಳಿಕೆ ಕೊಡದಿದ್ದರೂ ಜಾಗ ಕೊಡಬೇಕು ಮತ್ತು ಕಾಫಿ ತೋಟದಲ್ಲಿದ್ದ ಗಂಧದ ಮರ ರೈತರಿಗೇ ಸೇರತಕ್ಕದ್ದು ಎಂದು ಕಾನೂನು ಮಾಡಬೇಕು" ಎಂಬ ಠರಾವನ್ನು ಮಿ. ಬೆಳ್ಳಿಯಪ್ಪನವರು ಸೂಚಿಸಿ, ಮಿ. ಬಿ. ಚಂಗಪ್ಪನವರು ಅನುಮೋದಿಸಿದ ನಂತರ ಸರ್ವಾನುಮತದಿಂದ ಅಂಗೀಕರಿಸಲಾಯಿತು

11. 'ಗಂಧದ ಮರಕ್ಕೆಂತ ಕೊಟ್ಟಿರುವ ಜಾಗವನ್ನು ಸಾಗುವಳಿಗೆ ಕೊಡುವುದಿಲ್ಲವೆಂತ ಮಾಡಿರುವ ನಿರ್ಬಂಧವನ್ನು (Notification No 87 dated 10—8—1935) ತೆಗೆದು ಹಾಕಿ ಮಾಮೂಲು ಪ್ರಕಾರ ಸಾಗುವಳಿಗೆ ಕೊಡುತ್ತಾ ಬರಬೇಕು' ಎಂಬ ಠರಾವನ್ನು ಮಿ. ಬೆಳ್ಳಿಯಪ್ಪನವರು ಸೂಚಿಸಿ, ಮಿ. ಕಾಳಪ್ಪನವರು ಅನುಮೋದಿಸಿದ ನಂತರ ಸರ್ವಾನುಮತದಿಂದ ತೀರ್ಮಾನವಾಯಿತು

ಸಿ. ಹೆಚ್. ಜಿ. ಕಾಳೇಗೌಡ.
ಅಧ್ಯಕ್ಷ.

ವೀರಾಜಪೇಟೆ ಪಬ್ಲಿಕ್ ಮೀಟಿಂಗು

ಜಮೀನ್ದಾರರ ಸಂಘದ ಆಶ್ರಯದಲ್ಲಿ ಈ ತಾ 18ರಲ್ಲಿ ವೀರಾಜಪೇಟೆ ರೀಡಿಂಗ್ ರೂಮಿನ ಎದುರುಗಡೆ ಮಿ. ಬಲ್ಲಚಂಡ ಪೂವಯ್ಯನವರ ಅಧ್ಯಕ್ಷತೆಯಲ್ಲಿ ಗಂಧದ ಮರಗಳಿಗೆ ಬೋನಸು ಕೊಡುವ ಕರಡು ರೂಲ್ಸುಗಳ ವಿರೋಧದ ಬಗ್ಗೆ ಸಭೆಯು ನಡೆಯಿತು.

ಸುಮಾರು 300 ಜನರು ಸೇರಿದ್ದರು. ಜಮೀನ್ದಾರರ ಸಂಘದ ಅಧ್ಯಕ್ಷರಾದ ಮಿ. ಪಿ ಐ ಬೆಳ್ಯಪ್ಪನವರು ಕರಡು ರೂಲ್ಸುಗಳ ವಿಷಯ ವಿವರಿಸಿ ಭಾಷಣಮಾಡಿದನಂತರ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದುವು.

(1) ಹಾಲಿ ರೈತರ ಹಿಡುವಳಿ ಜಾಗಗಳಲ್ಲಿನ ಗಂಧದ ಮರಗಳಿಗೆ ಸರ್ಕಾರದವರು ಯಾವ ನಿರ್ಬಂಧವೂ ಇಲ್ಲದೆ ಕ್ರಯದ 75% ರಷ್ಟು ಸಂಪೂರ್ಣವಾಗಿ ಕೊಡುವುದು, ಇರುವಂತೆಯೇ ಅಸೆಸ್ಮೆಂಟ್ ಆಗದ ಗಂಧಕ್ಕೂ ಪ್ರತಿಫಲ ಕೊಡಬೇಕು ' ಎಂಬ ಠರಾವನ್ನು ಮಿ. ಪಟ್ಟಂಡ ಕಾರ್ಯಪ್ಪನವರು ಸೂಚಿಸಿದರು. ಇದನ್ನು ಮಿ. ಕುಪ್ಪಂಡ ಕಾಳಪ್ಪನವರು ಅನುಮೋದಿಸಿದನಂತರ ಸರ್ವಾನುಮತದಿಂದ ಪಾಸಾಯಿತು.

(2) "ಡ್ರಾಫ್ಟ್ ರೂಲ್ಸ್‌ಗಳ ವಿರುದ್ಧಗೆ ಸರ್ಕಾರದವರು ಇಟ್ಟಿರುವ 90 ದಿನಗಳ ಅವಧಿಯು ಸಾಲದೇ ಇರುವುದರಿಂದಲೂ ಈ ಪತ್ರಿಯು ಅತೀ ಪ್ರಾಮುಖ್ಯವಾದ್ದರಿಂದಲೂ ಆರು ತಿಂಗಳ ವರೆಗಾದರೂ ಈ ಅವಧಿಯನ್ನು ಮುಂದರಿಸಿಕೊಡಬೇಕೆಂದು ಈ ಸಭೆಯು ಚೀಫ್ ಕಮಿಷನರವರನ್ನು ಕೇಳಿಕೊಳ್ಳುತ್ತದೆ" ಈ ಠರಾವನ್ನು ಮಿ. ಕೊಡಂದ ಗಣಪತಿಯವರು ಸೂಚಿಸಿದರು. ಇದನ್ನು ಮಿ. ನಾಚಪ್ಪ ಮುತ್ತಣ್ಣನವರು ಅನುಮೋದಿಸಿದಾಗಿ ಒಮ್ಮತದಿಂದ ಪಾಸಾಯಿತು.

(3) 'ರೈತರಿಂದ ಚುನಾಯಿಸಲ್ಪಟ್ಟ ಹಾಗೂ ಮೆಂಬರುಗಳ ಹೆಚ್ಚು ಸಂಖ್ಯೆಯುಳ್ಳ ಒಂದು ನಾನ್ ಅಫೀಷಿಯಲ್ ಮೆಜಾರಿಟಿ ಕಮಿಟಿಯನ್ನು ಏರ್ಪಡಿಸಿ ಅದರ ಮೂಲಕ ನಿರ್ಧರಿಸಿ ಗಂಧದ ಮರದ ರೂಲ್ಸುಗಳ ಕರಡು ಬದಲಾಯಿಸಬೇಕೆಂಬ ಠರಾವನ್ನು ಮಿ. ನಾಯಕರ ಬೆಳ್ಯಪ್ಪನವರು ಸೂಚಿಸಿ, ಮಿ. ಕೊಡಂದ ಗಣಪತಿಯವರು ಅನುಮೋದಿಸಿದನಂತರ ಸರ್ವಾನುಮತದಿಂದ ಮಂಜೂರಾಯಿತು

ಮಿ. ಕೊಡಂದ ಗಣಪತಿಯವರು ಈ ಸಭೆ ಸೇರಿಸಿದ್ದಕ್ಕಾಗಿ ಜಮೀನ್ದಾರರ ಸಂಘದ ಅಧ್ಯಕ್ಷರನ್ನೂ ಮತ್ತು ಕಾರ್ಯದರ್ಶಿಯವರನ್ನೂ ವಂದಿಸಿದನಂತರ ಸಭೆಯು ಕೊನೆಗೊಂಡಿತು

ಬಲ್ಲಚಂಡ ಪೂವಯ್ಯ.
(ಅಧ್ಯಕ್ಷರು)

ಗೋಣಿಕೊಪ್ಪಲು ಪಬ್ಲಿಕ್ ಮೀಟಿಂಗು

ಜಮೀನ್ದಾರರ ಸಂಘದ ಆಶ್ರಯದಲ್ಲಿ ಈ ತಾ 22ರಲ್ಲಿ ಗೋಣಿಕೊಪ್ಪಲಲ್ಲಿ ಈ ಬಗ್ಗೆ ಮಿ. ಚೆಪ್ಪುಡಿರ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ಸೇರಿತ್ತು.

ಸುಮಾರು 250 ಜನರು ಹಾಜರಿದ್ದರು. ಜ. ಸಂಘದ ಅಧ್ಯಕ್ಷರಾದ ಮಿ. ಪಿ ಐ ಬೆಳ್ಯಪ್ಪನವರು ಗಂಧದ ಮರಗಳಿಗೆ ಬೋನಸು ಕೊಡುವ ಹೊಸ ಕರಡು ರೂಲುಗಳನ್ನು ವಿವರಿಸಿ ಭಾಷಣಮಾಡಿದನಂತರ ವೀರಾಜಪೇಟೆ ಪಬ್ಲಿಕ್ ಮೀಟಿಂಗಲ್ಲಿ ಪಾಸಾದ ಠರಾವುಗಳೇ ಇಲ್ಲಿಯೂ ಈ ಪ್ರಕಾರ ಪಾಸಾದವು

1ನೇ ಠರಾವನ್ನು ಮಿ. ಕೊಡಂದ ಚಂಗಪ್ಪನವರು ಸೂಚಿಸಿ, ಮಿ. ಕಾಳೇಂಗಡ ಚಂಗಪ್ಪನವರು ಅನುಮೋದಿಸಿದ ನಂತರ ಸರ್ವಾನುಮತದಿಂದ ಪಾಸಾಯಿತು.

2ನೇ ಠರಾವನ್ನು ಮಿ. ಅಜ್ಜಿಕುಟ್ಟಿರ ಚಂಗಪ್ಪನವರು ಸೂಚಿಸಿ, ಮಿ. ಐಮುಡಿಯಂಡ ನಾಣಯ್ಯನವರಿಂದ ಅನುಮೋದಿಸಲ್ಪಟ್ಟು ಒಮ್ಮತದಿಂದ ಸ್ವೀಕೃತವಾಯಿತು.

3ನೇ ಠರಾವನ್ನು ಮಿ. ಐಮುಡಿ ಮಾದಪ್ಪನವರು ಸೂಚಿಸಿ, ಮಿ. ಮುಕ್ಕಾಟಿರ ಉತ್ತಪ್ಪನವರು ಅನುಮೋದಿಸಿದ ನಂತರ ಸರ್ವಾನುಮತದಿಂದ ಪಾಸಾಯಿತು.

ಚೆಪ್ಪುಡಿರ ಮುತ್ತಣ್ಣ
(ಅಧ್ಯಕ್ಷರು)

ಹುದಿಕೇರಿ ಪಬ್ಲಿಕ್ ಮೀಟಿಂಗು.

ಜಮೀನ್ದಾರರ ಸಂಘದ ಆಶ್ರಯದಲ್ಲಿ ಹುದಿಕೇರಿಯಲ್ಲಿ ಮಿ. ಅಜ್ಜಮಾಡ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಈ ತಾ. 23ರಲ್ಲಿ ಸಭೆ ಸೇರಿತ್ತು. ಸುಮಾರು 200 ಜನರ ವರೆಗೆ ಕೂಡಿದ್ದರು.

ಜಮೀನ್ದಾರರ ಸಂಘದ ಅಧ್ಯಕ್ಷರಾದ ಮಿ. ಪಿ ಐ ಬೆಳ್ಯಪ್ಪನವರು ಗಂಧದ ಮರಗಳಿಗೆ ಬೋನಸು ಕೊಡುವ ಕರಡು ರೂಲ್ಸುಗಳನ್ನು ವಿವರಿಸಿದರು.

ಅನಂತರ ವೀರಾಜಪೇಟೆ, ಗೋಣಿಕೊಪ್ಪಲಲ್ಲಿ ಪಾಸಾದ ಠರಾವುಗಳೇ ಇಲ್ಲಿಯೂ ಈ ಪ್ರಕಾರ ಪಾಸಾದವು.

1ನೇ ಠರಾವನ್ನು ಮಿ. ಕೆ ಸಿ ಕರುಂಬಯ್ಯನವರು ಸೂಚಿಸಿ, ಮಿ ಚೆಕ್ಕೆರ ಕುಶಾಲಪ್ಪನವರಿಂದ ಅನುಮೋದಿಸಲ್ಪಟ್ಟ ನಂತರ ಸರ್ವಾನುಮತದಿಂದ ಪಾಸಾಯಿತು.

2ನೇ ಠರಾವನ್ನು ಮಿ. ಕೊಟ್ಟಂಗಡ ಚಂಗಪ್ಪನವರು ಸೂಚಿಸಿ, ಮಿ. ಚೆಕ್ಕೆರ ಬೆಳ್ಯಪ್ಪನವರು ಅನುಮೋದಿಸಿದ ನಂತರ ಒಮ್ಮತದಿಂದ ಅಂಗೀಕೃತವಾಯಿತು

3ನೇ ಠರಾವನ್ನು ಮಿ. ಚೊಟ್ಟೆಯಂಡಮಾಡ ಕುಶಾಲಪ್ಪನವರು ಸೂಚಿಸಿ, ಕಾಳಿಮಾಡ ಪೂವಪ್ಪನವರಿಂದ ಅನುಮೋದಿಸಲ್ಪಟ್ಟು, ಮಿ. ಮಣ್ಣೀರ ಮಲ್ಲಿಯಣ್ಣನವರಿಂದ ಒಪ್ಪಿಸಲ್ಪಟ್ಟನಂತರ ಸರ್ವ ಸಮ್ಮತದಿಂದ ಪಾಸಾಯಿತು.

ಅಜ್ಜಮಾಡ ಮಾದಪ್ಪ,
(ಅಧ್ಯಕ್ಷರು)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಸ್ತುತ್ಯ ಕಾರ್ಯ.

ಮಾಮೂಲು ಮೇರೆ ವೀರಾಜಪೇಟೆ ಬಸವನ ಗುಡಿಯಲ್ಲಿ ನಡೆಸುವ ಗೌರಿ ಮತ್ತು ಗಣೇಶನ ಉತ್ಸವಾದಿಗಳ ಖರ್ಚಿಗಾಗಿ ದೇಶಾಭಿಮಾನಿಗಳಲ್ಲಿ ಚಂದಾವೆತ್ತಿದ ಹಣ 93—11—0 ಅಲ್ಲದೆ ಪ್ರತಿ ಬುಧವಾರ ಪಟಾಲಿ ಮಾಡಿದ 'ಬಸವನ ಗುಡಿ ಹಬ್ಬ' ಬಾಬ್ತು 13 ರೂ. ಜುಮ್ಲಾ 106—11—0 ಆದರೂ ಒಂದಿದೆ ಈ ವರ್ಷದ ಉತ್ಸವಾದಿಗಳ ಖರ್ಚ 148—1—3. ಹೆಚ್ಚಿಗೆ ಖರ್ಚು ಆದ ರೂ. 41—6—3ನ್ನು ಮಿ ಎಂ ಬಿ ಪರ್ವತಯ್ಯನವರು ಕೊಟ್ಟಿರುತ್ತಾರೆ ಈ ಸ್ತುತ್ಯ ಕಾರ್ಯಕ್ಕಾಗಿ ಅವರಿಗ ಬಸವೇಶ್ವರನ ಭಕ್ತಾದಿಗಳ ವಂದನೆಗಳು

"ಭಕ್ತ"

ಇದನ್ನು ಸಂಕುಚಿತ ಬುದ್ಧಿಯೋ?

ಈ ತಿಂಗಳು 23ರಲ್ಲಿ ಮಡಿಕೇರಿಯಲ್ಲಿ ಪೊಲೀಸ್ ಹೆಡ್ ಕಾನ್ಸ್‌ಟೇಬಲರ ಕೆಲಸಗಳಿಗೆ ಇಷ್ಟರನ್ನು ಚುನಾವಣೆ ಮಾಡಿದ್ದು ಸರಿಯಷ್ಟೆ ಈ ಸಂದರ್ಭದಲ್ಲಿ ಕೆಲವು ಕೊಡವರ ಮತಸ್ಥರ ಒಂದು ಡೆಪ್ಯುಟೇಶನ್ನು ಆವಿ ಕಡದವರಲ್ಲಿಗೆ ಹೋಗಿತ್ತೆಂದು ತಿಳಿದು ಬರುತ್ತದೆ. ಕೊಡಗಿನವರು ಪೊಲೀಸು ಸರ್ವಿಸಿಗೆ ಯೋಗ್ಯರಲ್ಲವೆಂದು ಹಿಂದೆ ಕಂಡು ಬಂದಿರುವದರಿಂದ, ಈ ಎಲ್ಲಾ ಕೆಲಸಗಳನ್ನು ಕೊಡವರಿಗೆ ಕೊಡಬೇಕೆಂದರು ಡೆಪ್ಯುಟೇ

ನವರತ್ನ ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.
ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆನೋವು, ಸೊಂಟನೋವು, ಪಿತ್ತ, ಬೆನ್ನು ಮೂಳೆನೋವು, ಸೋಮರೋಗ ಮುಂತಾದ ಜಾಡ್ಯಗಳಿಗೆ ಉತ್ತಮ. ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಿಣೀಯು.
ದೊಡ್ಡ ಶೀಸೆ 2—8—0.
ಅರ್ಧ ಶೀಸೆ 1—6—0.

ನವರತ್ನ
ದ್ರಾಕ್ಷಾರಿಷ್ಟ.
ಅಜೀರ್ಣ, ಅಗ್ನಿಮಾಂದ್ಯ
ಬಹಳ ದಿವಸಗಳ ಜ್ವರದಿಂದಾದ ನಿಶ್ಶಕ್ತಿ, ಕೆಮ್ಮು, ಕ್ಷಯ, ರಕ್ತಪಿತ್ತ ಮುಂತಾದವುಗಳಿಗೆ ಉಪಯುಕ್ತವಾದ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಶೀಸೆ 1—8—0, ಅರ್ಧ ಶೀಸೆ 0—13—0
ವಿ ಸೂ.—ಔಷಧ ಬೇಕಾದವರು ನವರತ್ನ ಫಾರ್ಮಸಿಯ ವಿಳಾಸಕ್ಕೆ ಬರೆಯಿರಿ.

ಪ್ರೊಪ್ರೈಟರ್—ಎ ಎಸ್ ಪಾಟೀಲ್.
ಪೆಟ್ಟಿ ಬ್ಯಾಸರ್, ಸಂಟಿಕೊಪ್ಪ
ಏಜೆಂಟ್—ವಿ. ಬಿ ಕಾಮತ್,
ಮಹದೇವಪೇಟೆ, ಮಡಿಕೇರಿ

ನವರತ್ನ ಫಾರ್ಮಸಿ,

ಅಸ್ಪೃಶ್ಯರಿಗೋಸ್ಕರ ಕೊಡುವರ ಪ್ರಥಮ ಸಮ್ಮೇಳನ.

ಕಳೆದ ತಿಸ್ಸ್ರೆಸ್ಸ್ ಸೋಮವಾರ ಮಧ್ಯಾಹ್ನ 8—9—1935ರಲ್ಲಿ ಶ್ರೀ ಮುತ್ತ ಅಸ್ಪೃಶ್ಯ ಮಧ್ಯಾಹ್ನ 2 ಗಂಟೆಗೆ ಚಿಕ್ಕಮಗಳೂರಿನ ಬೀದಿಯಲ್ಲಿರುವ ಮ. ರಾ. ಶಾಸ್ತ್ರಿ ವಕೀಲರ ಮನೆಯಲ್ಲಿ ಸಭೆ ಸೇರಿ ತಿಂಡಿ ತೀರ್ಥ ಕೊಡಲಾಯಿತು. ಅಲ್ಲಿ ಮ. ರಾ. ... ಪ್ರಥಮ ... ಸಂತರ ಇತರ ವಿಷಯಗಳನ್ನು ... ಅನಂತರ ಸಮ್ಮೇಳನದ ... ಅದೇ ಗಂಟೆ ಸಮಯಕ್ಕೆ ಸಮ್ಮೇಳನದ ... ಮ. ರಾ. ... ಅಧ್ಯಕ್ಷತೆಯಲ್ಲಿ ಜರಗಿತು. ... ಸಮ್ಮೇಳನದ ಜನರು ... ಮ. ರಾ. ... ಉಚಿತವಾಗಿ ... ಮತ್ತು ಮ. ರಾ. ... ಸಮ್ಮೇಳನದ ಜನರ ... ಸಂಗೀತ ವಿನೋದಗಳಿಂದ ಸಾಯಂಕಾಲ 12 ಗಂಟೆ ರಾತ್ರಿಗೆ ಸಭೆ ವಿಸರ್ಜಿಸಲಾಯಿತು.

ಚಿಕ್ಕಮಗಳೂರು, ಪಿ. ಟಿ. ಗಣಪತಿ,
9—9—1935, (ಅಧ್ಯಕ್ಷರು.)

ಶೃಂಗಾರಿಕರಾದ ಪುಸ್ತಕ! ಮುದ್ರಣದ ಪವಾಡ!!

ಶ್ರೀ ಪುರುಷರು ಪ್ರೀತಿಸುವ 32 ಫೋಟೋಗಳು ಸಹಿತ

ಮದನ ರತಿ ಕಾಮಶಾಸ್ತ್ರ

ಎಂಬ ಶೃಂಗಾರ ರಹಸ್ಯಗಳು ರೂ. 1—0—0.

ಈ ಪುಸ್ತಕವು ಫ್ರೆಂಚ್, ಪರ್ಷಿಯನ್ ಭಾಷೆಗಳಲ್ಲಿ ಗುರುತಾಗಿತ್ತು. ಅದನ್ನು ಕನ್ನಡ ಭಾಷೆಯಲ್ಲಿ ಬರೆದು ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ಸ್ತ್ರೀಯರು ಮೋಹಿಸುವ ರಹಸ್ಯಗಳು, ಪಾಶ್ಚಿಮ ಮತ್ತು

ವಿಲಾಸಗಳು, ಸ್ತ್ರೀ ಪುರುಷರು ದಿನಾಲು ಮಾಡುವ ... ಇಂಗ್ಲಿಷ್, ಫ್ರೆಂಚ್, ಅಮೇರಿಕನ್, ಜರ್ಮನ್ ... ಮಲಯ, ಸಯಾಂ, ಜಪಾನ್, ... ಇಂಡಿಯನ್ ಮೊದಲಾದ ದೇಶ ಸ್ತ್ರೀ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುಖ್ಯವಾದ ವಿಷಯಗಳು, ಕನ್ಯೆಗಳ ದೇಹ ಸೌಂದರ್ಯದ ಮರ್ಮಗಳು ಇನ್ನು ಅನೇಕ ಪ್ರೀತಿಯು, ಮುಖ್ಯವಾದ ... ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಇದು ವರೆಗೂ ಕನ್ನಡ ಭಾಷೆಯಲ್ಲಿ ಇಷ್ಟು ... ಪ್ರಕಟಿಸಿಲ್ಲ. ... ಕ್ರಯ 32 ಫೋಟೋಗಳ ಸಹಿತ ಇರುವ ಪುಸ್ತಕ ರೂ. 1—0—0. ವಿ. ಪಿ. ಪೋಸ್ಟು ಖರ್ಚು ... ಪ್ರತ್ಯೇಕ ... ರೂ. 1 ... (ಫ್ರೀ) ...

ದೇವಕರ್ ಅಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ. ಮದ್ರಾಸು.

52—1 Devakar & Co.
Nambulier Street, G. T. Madras.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಬಂಗಾರಕ್ಕಿಂತ ಸಮಾನವಾದ ... ಗಾರದಿಂದ ಕಟ್ಟಿ ...

... ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು ... ಬಂಗಾರದ ಗಿಲೀಟು ಕೊಟ್ಟಿರುವುದು. ಇದನ್ನು ನೋಡಿದವರು ಬೆಲೆಯಾದ ವಜ್ರದ ಓಲೆಯೆಂದೇ ಹೇಳುವರು. ... ಉಪಯೋಗಿಸುತ್ತಿರುವರು. ಇದನ್ನು ಅನೇಕರು ... ಉಪಯೋಗಿಸಲು ... ನಾವು ಇದನ್ನು ... ಉಪಯೋಗವಾಗುವುದಕ್ಕೆ ಇಲ್ಲಿ ಪ್ರಕಟ ಮಾಡುತ್ತೇವೆ. 7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ ರೂ. 1—8—0. 7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ ರೂ. 1—12—0.

ಎಲ್ಲಿಸ್ ಟ್ರೇಡಿಂಗ್ ಕಂಪನಿ.

52—1 19, ಬೀಟು ಮದರಾಸು.

FRASER'S.

FOOTWEAR
have
the HALLMARK of
distinctive finish,
upto-date style,
fine workmanship
best materials.

AMAZING VALUE FOR LOW PRICE

HARDWEAR BOOTS & SHOES,
for estate and monsoon a speciality

G. W. FRASER & CO., CALICUT.

12—3

ಹೊಸ ಪುಸ್ತಕ. ತ್ವರೆ ಮಾಡಿರಿ.

ಕಾಮ ಸ್ವಂತವಾಗಿ ... ಮುಖ್ಯವಾಗಿ ಕೇಳಿರುವ

ಶೃಂಗಾರಿಕೆಯ ಮರ್ಮಶಾಸ್ತ್ರ.

ಈ ಪುಸ್ತಕದಲ್ಲಿ ... ವಿಧ ವಿಧವಾದ ... ಔಷಧಿಗಳು, ... ಅನೇಕ ವಿಧವಾದ 72 ... ಕನ್ನಡ ... ಈ ಪುಸ್ತಕದಲ್ಲಿ ... ರೂ. 50 ... ರೂ. 500 ... ಪುಸ್ತಕ ಒಂದಕ್ಕೆ ಬೆಲೆ ರೂ. 1—0—0.

ನ್ಯಾಷನಲ್ ಅಂಡ್ ಕಂ.,

52—1 ... ಮದರಾಸು.

ಮೊರಾಟಿಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಮತ್ತು ಗ್ರಾಮ ಪಂಚಾಯತಿಗಳ ಪ್ರತಿ ... ಸಹಕಾರಿ ಸಂಘದ ಮತ್ತು ಗ್ರಾಮ ... ಪುಸ್ತಕಗಳು ... ಕೊಡಗು ... ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಶಾಸ್ತ್ರೀಯೋಕ್ತ ಔಷಧಗಳು.

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ಮಾತ್ರೆಗಳು.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ಸೇವಿಸಿಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ

ಗಟ್ಟಿಯಾಗುವುದು. ಔಷಧವನ್ನು ತಿಂದು ... ಗಂಟೆ ಕಾಲ ಕಳೆದು ಸ್ತ್ರೀ ಸುಖ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನೂ, ಆನಂದವನ್ನೂ ಕೊಡುವುದು. ಈ ಮಾತ್ರೆಗಳಿಗೆ ... ಬಂಗಾರ, ತಾಮ್ರ ಭಸ್ಮವು ಎಷ್ಟೋ ಮಾತ್ರವೂ ಸಮಾನವಾಗಲಾರವು. ಅದು ಅಲ್ಲದೆ ಧಾತುವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಘಕ್ಕೆ ಹೋದರೇ ಸ್ಖಲನವಾದರೂ, ಮೂರು ದಿವಸದಲ್ಲಿ ನಿಲ್ಲಿಸುವುದು. ಎಲ್ಲರೂ ಸೇವಿಸಬಹುದು. ಡಬ್ಬಿ 1ಕ್ಕೆ ಕ್ರಯ ರೂ. 1—8—0.

ಲಿನಿಮೆಂಟ್ ಅಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರಿ ತೈಲವು.

ಮನುಷ್ಯನಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯನ ದೇಹದ ವೀರ್ಯವು ಗರ್ಭಕ್ಕೆ ... ಅತ್ಯಂತ ವ್ಯಭಿಚಾರದಿಂದಲೂ, ವ್ಯಾಧಿಯ ... ಸ್ತ್ರೀ ಸಂಬಂಧ ... ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ... ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲಿಷ್ ... ಈ ತೈಲವನ್ನು ... ಈ ಎಣ್ಣೆಯನ್ನು ಪುರುಷತ್ವದ ಮೇಲೆ 4 ದಿನಗಳ ವರೆಗೆ ... ಮತ್ತು ಲಿಂಗವು ... ದೃಢವಾಗುವುದು. ಉಪಯೋಗಿಸುವ ವಿಧ ಚೀಟಿ ಜೊತೆಯಲ್ಲಿದೆ.

ಕ್ರಯ ಸೀಸೆ 1ಕ್ಕೆ ರೂ. 1—4—0.

ಟಿ. ಆರ್. ರಾಯಲ್ ಕಂಪನಿ,
3 ಕೃಷ್ಣಪ್ಪ ನಾಯಕ ಟ್ಯಾಂಕ್ ಬೀದಿ,
52—1 ಜಿ. ಟಿ. ಮದ್ರಾಸು.

ಡಾಕ್ಟರ್ ಮೋತ್ಯಸ್ ಎಬ್ರಹಾಮ್.
ದಂತ ವೈದ್ಯರು.

ಗೀತಾಂಜಲಿ ಬಿಲ್ಡಿಂಗ್
(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರು. ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—1]

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಷಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳ ಪುಸ್ತಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,

26—1 210, Abdulrehman Street, BOMBAY 3.

ಕ್ವೆಟ್ಟಾ ಭೂಕಂಪ ಫಂಡಿಗೆ

ಹಣ ಕೊಟ್ಟವರು ಕಳುಹಿಸಿದ ಮೊಬಲಗು

(ಕೊಡಗು ಕಮಿಷನರವರ ಆಫೀಸಿನಿಂದ)

ಶಾಂತಳ್ಳಿ ಕೋ-ಆಪರೇಟಿವ್ ಸೊಸೈಟಿ ರೂ 4, ತ್ರಿಮಂಗಲ ಕೋ-ಆಪರೇಟಿವ್ ಸೊಸೈಟಿ 2, ಶಾಲಾ ವಿದ್ಯಾರ್ಥಿಗಳ ಮೊಬಲಗು ಚಂದಾ 3—4—0, ಮಡಿಕೇರಿ ಜಿ ಎಸ್. ಯೂನಿಯನ್ ಸಂಘದ ಪರವಾಗಿ 25 ಡಬ್ಲ್ಯು. ಎ ಹೋಟೆಲ್ ಬಾಳೆಹೊನ್ನೂರು ಕೋಟೆ 35, ಬಿ ಯಂ ಜಾಕ್ಸನ್ ಸೆಂಟರ್ ಫಾರ್ ಕೋಟೆ 10, ಸೇಂಟ್ ಜೋಸೆಫ್ ಸ್ಕೂಲ್ ಕೋಟೆ 25, ಜಿ. ಹೆಚ್. ಸ್ಕೂಲ್ ಕೋಟೆ ಶಾಲು ಕೋಟೆ 36, ಕೊಡಗು ವರ್ತಕರ ಸಂಘದಿಂದ ಸೇರಿಸಿದ ಮೊಬಲಗು ಚಂದಾ 20, ಸೊಸೈಟಿಗಳಿಂದ ಕೊಡಗು ಸೆಂಟ್ರಲ್ ಬ್ಯಾಂಕ್ ಮೊಬಲಗು ಚಂದಾ 11—11—0, ಪೊನ್ನಂಪೇಟೆ ಕೋ-ಆಪರೇಟಿವ್ ಸಂಘದಿಂದ 2. ಹಿಂದಿನ ಮೊಬಲಗು ರೂ 3186—3—10, ಜುಮ್ಲಾ 33 8—5—10

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪಂಗಿನ ಕಳವು ಮಡಿಕೇರಿ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿದುಬಂದಿದೆ. ಆದ್ದರಿಂದ ಮಡಿಕೇರಿಯಲ್ಲಿರುವ ಪರಿಸಿನ ದೇವಸ್ಥಾನದ ಯಾವ ಕಾಣಿಕೆ ಹರಕೆಗಳನ್ನು ಆ ದೇವಸ್ಥಾನಗಳಲ್ಲಿ ಕೊಡತಕ್ಕದ್ದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ [illegible] ಸೇವಕರನ್ನು ನೇಮಿಸಿರುವುದಿಲ್ಲ. ಆದ್ದರಿಂದ ಯಾವ ದೇವಸ್ಥಾನಕ್ಕೆ ಸಲ್ಲುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಆ ಕಾರ್ಯದ ವಿಚಾರಣೆದಾರರಿಗೇನೇ ಕೊಡತಕ್ಕದ್ದಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಈ ಮೂಲಕ ಕೋರಲಾಗಿದೆ.

ಪಿ. ಯಂ. ಕಣ್ಣಪ್ಪ [illegible]

ಮೆನೇಜರ್,

ಮಡಿಕೇರಿ [26—16]

25—5—'35. ಪರಿಸಿನ ದೇವಸ್ಥಾನ.

೬೦ ವರ್ಷಗಳಿಂದ ಅನುಭವಸಿದ್ಧ ಖ್ಯಾತಿ ಹೊಂದಿದ

ಕರ್ಕಿ ಕಂಪನಿ

ಜ್ವರದ ಗುಳಿಗೆಗಳು.

ಒಳ್ಳೆ, ಚಾತುರ್ಥಿಕ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಎಲ್ಲಾ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ ೧. [illegible]

[illegible]

(೨೭—1) [illegible]

ಪಂಡಿತ ಜವಾಹಿರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ, ಶಾಸ್ತ್ರೀಯ ಮತ್ತು ಪ್ರಾಕೃತಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕಗಳನ್ನು ಪಡೆದು ಪ್ರದರ್ಶನದಲ್ಲಿ ಪ್ರಥಮವಾಗಿ ಬರತಕ್ಕ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ರಸಾಯನಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಮೃತ ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನದೋಷ, ಕೈಕಾಲು, ಕಣ್ಣುಗಳ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿ, ಬುದ್ಧಿ, ದೇಹದಾರ್ಢ್ಯ ವೃದ್ಧಿಯಾಗುವವು. ಇದರಿಂದ ನಪುಂಸಕತ್ವವು ಬಲ್ಲಿ ಬಿಡುಹೋಗಿ ವೀರ್ಯವೃದ್ಧಿಯಾಗುವದು. ಹೊಗೆಸೊಪ್ಪು, ಗಾಂಜಾ, ಭಂಗಿ, ಗಾಯ ಇತ್ಯಾದಿ ಉಪಯೋಗಿಸುವವರಿಗೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೊಸ ರಕ್ತ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಬರುತ್ತದೆ. 1 ಬಾಟ್ಲಿಯನ್ನು ಸೇವಿಸುವದರಿಂದಲೇ ಇದರ ಗುಣ ಕಂಡು ಬರುವದು. ಪ್ರಮಾಣ.—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತೆಗೆದುಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ ಪೋಸ್ಟ್ ಪಿಸ್ಪಾಣ ಜೆಲ್ಲಾ (ಬೆಳಗಾವ್)

ಕೊಡಗಿನ ಏಜಂಟರು:—ಕೆ ಶಿವಾಜಿರಾವ್ & ಬ್ರದರ್ಸ್, ಮಡಿಕೇರಿ.

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ

52—4 ಎ ಎಸ್ ಸುಬ್ಬಯ್ಯ, ಪಿ.ಡಬ್ಲ್ಯು ಡಿ. ಓವರ್ಸಿಯರ್, ಗೋಣಿಕೊಪ್ಪಲು



ಉತ್ತಮ ಪ್ರತಿಫಲ ಯಾವುದರಲ್ಲಿ?

50 ಸಾಬೂನು — ಅತ್ಯಲ್ಪ ಬೆಲೆಗೆ ದೊರೆಯುವ,

ಒಳ್ಳೆ ಸ್ಟಾಕ್ ಸಾಬೂನು



ಅಧಿಕ ಶಕ್ತಿಯ ಪಿಷ್ಟದ ಹೀರ ಬೆರೆಸಿದ್ದು. ನಿಮಗೆ ಒಳ್ಳೆ

ಯಾವುದೇ ಇತರ ಸಾಬೂನು.

ಇಗ್ಗದ ಈ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿಗೆ ಕಾರಣ. ಯಾಕೆಂದರೆ ಸಾಬೂನುಗಾಗಿ ನೀವು ಹಣಕೊಟ್ಟು ಅದರ ಬದಲು ಸಾಮಾನನ್ನು ಪಡೆಯುವಿರಿ. ಈ ಸಾಬೂನುಗಳಲ್ಲಿ 30% ನೀರು ಇದೆ. 501 ಸಾಬೂನು ಬೇಗನೆ ಕರಗುವುದಿಲ್ಲ ಮತ್ತು ಹೆಚ್ಚು ಬಾಳಿಕೆ ಬರುವದರಲ್ಲಿ ಅಸದೃಶವಾದ್ದು!

501 Soap

ಬಟ್ಟೆ ಶುದ್ಧವು.

ವಸ್ತ್ರ ಬಾಳಿಕೆ.

ಶ್ರಮ ಅತೀ ಕಡಿಮೆ!

ಮಾರ್ಕೆಟ್ ಪೊಲೀಸ್ ಠಾಣೆ, ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು

ತಯಾರಿಸುವವರು—ಟಾಟಾ ಆಯಿಲ್ ಮಿಲ್ ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ಟಾಟಾಪುರಂ

52—21. ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೇಪೇಟೆ, ಮೈಸೂರು.

SHIROMANI NARAYANACHARYA

Choukhamba Benares City.

THIS MAN WISHES HE HAD

ಶಾಸ್ತ್ರಗಳೇ, ಪುರಾಣಗಳೇ ಆರೋಗ್ಯದ ಅರ್ಥ ಏನೆಂದು ಬಲ್ಲಿರೇ? ರುದ್ರಾಕ್ಷಿಯವರೇ, ಈ ಶರೀರ ಆರೋಗ್ಯವೇ ಜೀವನದ ಆರೋಗ್ಯ. ಅದಕ್ಕೆ ಕಾರಣವೇನು? ಅದು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜ್ಞಾನಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಐಶ್ವರ್ಯವೃದ್ಧಿ ಸಂತತಿ, ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಕೋಟೀಶ್ವರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುವು.

ಏಕ ಮುಖ ಪ್ರಮಾಣದ ಕಂಠದ 1ಕ್ಕೆ ಆಣೆ 1 ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 30ರಿಂದ ರೂ 50ರ ವರೆಗೆ ಮತ್ತು ...4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ 10, ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ, 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಏಕ ಮುಖ ರುದ್ರಾಕ್ಷಿ ಅವರೆ ಕಾಳಿಗಿಂತ ಸಣ್ಣದಾಗುತ್ತಿರುವ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತಿರುವ ಜಾಸ್ತಿ ಆಗುವದು. (ಇವುಗಳ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ಪಂಚಾಂಗ, 1 ಕಾಶೀ ಚಿತ್ರ 1 ಕಾಶೀ ವಿಶ್ವೇಶ್ವರ ಫೋಟೋದ ಸಹಿತ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ,

51—3 ಚೌಖಂಬಾ, ಬೆನಾರಸ್ (ಕಾಶೀ.)

ವಜ್ರದ ಉಂಗುರಗಳು ಒಕ್ಕೆ ೧೨ ಆಣೆ.



ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿದ ಕಟ್ಟಿದೆ. ಇದರ ಬಣ್ಣವು ಎಂದಿಗೂ ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಬಣ್ಣ ಕೊಟ್ಟಿದೆ 1ಕ್ಕೆ 12 ಆಣೆ

3 ಉಂಗುರಗಳಿಗೆ 1 ಟೈಂಪೀಸನ್ನು, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನು, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚನ್ನು ಇನಾಮಾಗಿ ಕೊಡುವೆವು. ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿ ಕೊಡುತ್ತೇವೆ.

ವಿಳಾಸ—

Mehta & Co.
Periyanaykaran Street,
G. T. Madras.

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಪಟಗಳ ಸಹಿತ, ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯ

ಎಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದುಸ್ಥಾನೀ ಭಾಷೆಗಳಲ್ಲಿ ಬಹುಕಾಲದಿಂದ ಪ್ರಚಾರದಲ್ಲಿತ್ತು. ಈಗ ನಾವು ಬಹು ಪ್ರಯತ್ನದಿಂದ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ದಪ್ಪಕಾಗದದ ಗ್ಲೇಜು ಕಾಗದದಲ್ಲಿ 330 ಪೇಜುಗಳು. ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ಪ್ರಶ್ನೆಗಳು ಪುರುಷರು ಸ್ತ್ರೀಯರೊಡನೆ ನಡೆದುಕೊಳ್ಳಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಚಿತ್ರಗಳು ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳ ಸಂಪೂರ್ಣ ಸಂಕೋಚ ಜನನೇಂದ್ರಿಯಗಳ ವರ್ಣನೆ ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ, ವಿಧ ಗುಪ್ತ ರೋಗಗಳ ಚಿಕಿತ್ಸೆ ಶಯನಗೃಹದ ರಹಸ್ಯ ನಿಯಮಗಳು ಮನಸಿನ ಸಂಯಮ ವಿವರ ನಪುಂಸಕತ್ವಕ್ಕೆ ಚಿಕಿತ್ಸೆ ಇವನ್ನು ಸ್ತ್ರೀಪುರುಷರುಗಳಿಗೆ ಬೇಕಾದ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಬೆಲೆ ಪುಸ್ತಕ ಒಂದಕ್ಕೆ ರೂ. 1—0—0.



ವಿಳಾಸ—Mehta & Co.,
Periyanaykaran Street,
12—8 G. T. Madras

ವರ್ತಮಾನ ಸಂಗ್ರಹ.

ಒಳದೇಶ.

[illegible] ರೂ. 181 [illegible] ರೂ. 25 ರಿಂದ 26 ರ ವರೆಗೆ [illegible]

[illegible] ತಾ 22 ರಲ್ಲಿ [illegible]

[illegible]

ಹಿಂದೂದೇಶ.

[illegible]

[illegible] 1935ನೇ [illegible]

[illegible] 120 ರೂ. [illegible]

[illegible] ತಾ. 9 ರಲ್ಲಿ [illegible] 25,000 ರೂ. [illegible]

ವಿದೇಶ.

ಬ್ರಿಟಿಷ್ [illegible] ತಾ. 31 ಕ್ಕೆ 7,80,40,000 [illegible] 2,68,61,000 [illegible]

[illegible] 35,000 [illegible] 18 [illegible]

ಪ್ರಕಟಣೆ.

[illegible] 7½ ಘಂಟೆಗೆ [illegible] 9 ಘಂಟೆಗೆ [illegible] 4 ಘಂಟೆಗೆ [illegible] 5½ ಘಂಟೆಗೆ [illegible]

2—1. [illegible]

Wanted.

Candidates for Telegraph and Station Master class. Allowance Rs 28. Uniform passage and quarter free. Service essential. Rules and Entrance form on annas eight.

Director.
Royal Telegraph and Rly.
Duties College.
12—3 Bombay No 20.

ಕೊಡಗು

ಸೆಪ್ಟಂಬರ್ ತಾ. ೨೭ ನೇ ಶುಕ್ರವಾರ ೧೯೩೫.

ಗಂಧದ ಸಂಬಂಧ ಇನ್ನೊಂದು ನಿರ್ಬಂಧ.

ಇಷ್ಟರ ವರೆಗೆ ರೈತರ ಅಸ್ಸೆಸ್ಮೆಂಟು ಜಾಗದಿಂದ ತೆಕ್ಕೆಯೊಂದು ಹೋಗುತ್ತಿದ್ದ ಗಂಧದ ಮರಗಳಿಗೆ ಸರ್ಕಾರದವರು ಏನೊಂದೂ ಪ್ರತಿಫಲ ಜಾಗದ ಮಾಲೀಕರಿಗೆ ಕೊಡದೆ ಇದ್ದವರಿಂದ ಅವರಿಗೆ ತಮ್ಮ ಭೂಮಿಯು ಯಾ ಜಾಗದ ಸಮೀಪ ಪೈಸಾರಿ ಜಾಗವನ್ನು ಕ್ರಯಕ್ಕೆ ಹೆಚ್ಚಿನ ಅವಕಾಶಗಳಿಲ್ಲದೆ ಕೊಡುತ್ತಿದ್ದರು. ಆದರೆ ಇನ್ನು ಮುಂದಕ್ಕೆ ಅಸ್ಸೆಸ್ಮೆಂಟ್ ಜಾಗದಲ್ಲಿಯೂ ಗಂಧದ ಮರಗಳಿಗೆ ಅಲ್ಪ ಸ್ವಲ್ಪ ಬೋನಸು ಕೊಡಲು ನಿಬಂಧನೆಗಳನ್ನು ಮಾಡುತ್ತಿರುವುದರಿಂದ ಅವರಿಗೆ ಇನ್ನೊಂದು ಅಡಚಣೆಯನ್ನು ಸರ್ಕಾರದವರು ತಂದೊಡ್ಡುವಂತೆ ಆಗುತ್ತದೆ. ಈ ಸಂಬಂಧ ತಿದ್ದುಪಡಿ ಮಾಡಿದ ಕರಡು ನಿಬಂಧನೆಗಳ ಕನ್ನಡ ತರ್ಜುಮೆಯು ಇನ್ನೊಂದು ಕಡೆ ಕೊಡಲಾಗಿದೆ. ರೈತರು ಅರ್ಜಿ ಹಾಕುವ ಜಾಗದಲ್ಲಿ ಗಂಧದ ಮರಗಳಿದ್ದರೆ ಜಾಗವನ್ನು ಮಂಜೂರು ಮಾಡುವ ಮೊದಲು ಚೀಫ್ ಫಾರೆಸ್ಟು ಆಫೀಸರ ಸಲಹೆ ತೆಗೆದುಕೊಳ್ಳಬೇಕೆಂತಲೂ, ಅಲ್ಲಿ ೫ ಗಂಧದ ಮರಗಳಿಗಿಂತ ಹೆಚ್ಚು ಇದ್ದು, ಅವರ ಅಭಿಪ್ರಾಯದಲ್ಲಿ ಅದು ಗಂಧ ಬೆಳೆಸಲು ಒಳ್ಳೇ ಜಾಗವೆಂದಾದರೆ ಅಷ್ಟು ಬಂದ ಅರ್ಜಿಗಳನ್ನು ಸಾಧಾರಣವಾಗಿ ತಿರಸ್ಕರಿಸಬೇಕೆಂತಲೂ ನಿಬಂಧನೆ ಮಾಡುವರು. ಇದರಿಂದ ರೈತರಿಗೆ ತುಂಬಾ ಕಷ್ಟವಾಗುತ್ತದೆ. ತಮ್ಮ ಭೂಮಿಗೆ ಸರಿಯಾದ ಜಾಗವಿಲ್ಲದ ರೈತರು ಮುಖ್ಯವಾಗಿ ಉತ್ತರ ಕೊಡಗಿನಲ್ಲಿ ಅನೇಕರಿರುವರು. ಅಂಥವರು ತಮ್ಮ ವ್ಯವಸಾಯಕ್ಕೂ, ದನಕರುಗಳನ್ನು ಮೇಯಿಸುವುದಕ್ಕೂ ಸಾಕಷ್ಟು ಜಾಗವಿಲ್ಲದೆ ವಿಪರೀತ ತೊಂದರೆಯಲ್ಲಿರುವರು. ಆದುದರಿಂದಲೇ ಈ ವಿಷಯ ಈ ಮೊದಲು ಕೌನ್ಸಿಲು ಸಭೆಯಲ್ಲಿ ಚರ್ಚೆ ನಡೆದಾಗ್ಯೂ ಸರ್ಕಾರದವರು ಪೈಸಾರಿಯಿಂದ ರೈತರಿಗೆ ಜಾಗ ಕೊಡುವ ವಿಷಯದಲ್ಲಿ ಉದಾರಭಾವದಿಂದ ವರ್ತಿಸುವರೆಂದು ಭರವಸೆ ಕೊಟ್ಟದ್ದಾಯಿತು. ಈಗ ರೈತರಿಗೆ ಒತ್ತಾಗಿರುವ ಪೈಸಾರಿಯಿಂದ ಜಾಗ ಪಡೆಯಲು ಮೇಲಿನ ಅಡಚಣೆಗಳನ್ನೊಡ್ಡಿದರೆ ಸರ್ಕಾರದವರು ಕೊಟ್ಟ ಭರವಸೆಯನ್ನು ಹಾಳುಮಾಡಿದಂತಾಗುವುದಲ್ಲದೆ, ರೈತರ ಪಾಡು ಮತ್ತಷ್ಟು ಶೋಚನೀಯ ಸ್ಥಿತಿಗೆ ಇಳಿಯುವುದರಲ್ಲಿ ಸಂಶಯವಿಲ್ಲ. ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ರೈತರ ಸ್ಥಿತಿಯು ದಿನೇ ದಿನೇ ಹೀನವಾಗುತ್ತಾ ಬರುತ್ತಿರುವ ಈ ಕಾಲದಲ್ಲಿ ಸರ್ಕಾರದವರೇ ವ್ಯವಸಾಯಕ್ಕೆ ಅವರಿಗೆ ಎಲ್ಲಾ ತರಹದ ಅನುಕೂಲತೆಗಳನ್ನು ಮಾಡಿ ಕೊಡುವುದರ ಬದಲು, ಅವರ ಉತ್ಪತ್ತಿಯ ದಾರಿಗೆ ಕಲ್ಲು ಹಾಕುತ್ತಾ ಬರುತ್ತಿರುವುದು ವ್ಯಸನಕರ.

ಒಂದು ವೇಳೆ ಅಂಥಾ ಜಾಗವು ಕೊಡಲ್ಪಟ್ಟರೆ ಅದರಲ್ಲಿರುವ ಗಂಧದ ಮರಗಳನ್ನೂ ಮತ್ತು ಅವುಗಳ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಜಾಗ ಪಡಕೊಳ್ಳುವವನು ಮುಚ್ಚಳಿಕೆ ಮಾಡಿ ಕೊಡಬೇಕಂತೆ. ಸರ್ಕಾರದವರು ರೈತರಿಗೆ ಈ ತರಹದ ತೊಂದರೆಗಳನ್ನು ಕೊಡಲು ಯಾಕೆ ಇಚ್ಛಿಸುತ್ತಾರೋ ತಿಳಿಯದು. ಆ ಜಾಗದಲ್ಲಿರುವ ಗಂಧದ ಮರಗಳಲ್ಲಿ ಕಡೆಗೊಂದು ಎರಡು ಮರಗಳನ್ನು ರಿಜರ್ವ್ ಮಾಡಿಕೊಂಡು ಈ ಜೋಡಿಸಿರುವ ಜಾಗವನ್ನು ಅರ್ಜಿದಾರರಿಗೆ ಕೊಡಬಹುದು. ಹಾಗೆ ರಿಜರ್ವ್ ಮಾಡದಿದ್ದರೂ ಕೂಡ ಇನ್ನು ಮುಂದೆ ಅಸ್ಸೆಸ್ಮೆಂಟ್ ಜಾಗದಲ್ಲಿಯೂ ಗಂಧದ ಮರಗಳಿಗೆ ಬೋನಸು ಕೊಡಲು ನಿಶ್ಚಯಿಸಿರುವುದರಿಂದ ಜಾಗದ ಮಾಲೀಕರು ತಮಗೊಂದು ಭಾಗ ಉತ್ಪತ್ತಿ ದೊರೆಯುವ ಕಾರಣ ಗಂಧದ ಮರಗಳ ಎಚ್ಚರಿಕೆಯನ್ನು ತಾವಾಗಿಯೇ ತೆಗೆದುಕೊಳ್ಳುವುದು ಸ್ವಾಭಾವಿಕವಾಗಿದೆ. ಅಂದ ಮೇಲೆ ಸರ್ಕಾರದವರು ಇವರ ಮೇಲೆ ಮುಚ್ಚಳಿಕೆ ಕೊಡಬೇಕೆಂಬ ನಿಬಂಧನೆಯನ್ನು ಹೊರಿಸುವುದು ಅನಾವಶ್ಯವೂ ಮತ್ತು ಅನ್ಯಾಯವೂ ಆಗಿದೆ. ಆದುದರಿಂದ ಸರ್ಕಾರದವರು ಅವಶ್ಯವಾಗಿ ಜನರಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳನ್ನು ಜಾರಿಗೆ ತಂದೆ ಇಷ್ಟರ ವರೆಗೆ ನಡೆಯುತ್ತಿದ್ದಂತೆಯೇ ಇನ್ನು ಮುಂದಕ್ಕೂ ಏನೊಂದೂ ತರತಿಲ್ಲದೆ ರೈತರಿಗೆ ಸರಾಗವಾಗಿ ಜಾಗಗಳನ್ನು ಕೊಡುತ್ತಾ ಬರುವರಾಗಿ ನಂಬುತ್ತೇವೆ.

ದೇಶದ ಶಾಂತಿರಕ್ಷಣೆಯೋ ?

'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್ಲ್' ಎಂಬುದಾಗಿ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಇತ್ತೀಚೆಗೆ ಒಂದು ಬಿಲ್ಲು ಬಹುಮತದಿಂದ ತಿರಸ್ಕರಿಸಲ್ಪಟ್ಟಿತು. ಆದರೂ, 'ದೇಶದ ಶಾಂತಿರಕ್ಷಣೆಗಾಗಿ' ಎಂಬ ಶುಭನಾಮವನ್ನಿಟ್ಟು ವೈಸರಾಯರು 1919 ನೇ ಇಂಡಿಯಾ ಆಕ್ಟಿನ 67—ಬಿ ಸೆಕ್ಷನಿನಲ್ಲಿರುವ ತಮ್ಮ ಅಧಿಕಾರದಿಂದ ಅದನ್ನು, ದೇಶವಾಸಿಗಳ ಅಭಿಪ್ರಾಯವನ್ನು ಲೆಕ್ಕಿಸದೆ ಸರ್ಟಿಫೈ ಮಾಡಿರುವರು. ಇದರಿಂದ ಪ್ರಭುತ್ವದ ನಿರಂಕುಶ ಪ್ರವೃತ್ತಿಯು ಎಷ್ಟರ ಮಟ್ಟಿಗಿದೆ ಎಂಬುದು ವ್ಯಕ್ತವಾಗುವುದು.

ಇಷ್ಟಕ್ಕೆ ತೃಪ್ತರಾಗದೆ, ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರಭುತ್ವದವರು ಇದೇ ರೀತಿಯ ಶಾಸನಗಳನ್ನು ಜಾರಿಗೆ ತರಲು ಉದ್ಯುಕ್ತರಾಗಿರುವರು. ಬಂಗಾಳ ಮತ್ತು ಅಸ್ಸಾಮಿನ ನ್ಯಾಯವಿಧಾಯಕ ಸಭೆಗಳಲ್ಲಿ ಈ ರೀತಿಯ ಶಾಸನಗಳ ಮಸೂದೆಯೊಂದೊಂದು ಮಂಡಿಸಲಾಯಿತು. ಈಗ ಬೊಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ 1932 ನೇ ಇಸವಿಯ 'ಬೊಂಬಾಯಿ ಎಮರ್ಜೆನ್ಸಿ ಪವರ್ಸ್ ಆಕ್ಟ'ನ್ನು ಶಾಶ್ವತಗೊಳಿಸಲು ಒಂದು ಮಸೂದೆಯು ಒಂದಿದೆ. ಮದ್ರಾಸು ಪ್ರಾಂತ್ಯದಲ್ಲೂ 'ಯು. ಪಿ. ಸ್ಪೆಷಲ್ ಪವರ್ಸ್ ಆಕ್ಟ'ನ್ನು ಐದು ವರ್ಷಗಳ ವರೆಗೆ ಮುಂದರಿಸಬೇಕೆಂದು ಸಹ ಪ್ರಯತ್ನ ಏರ್ಪಡಾಗುತ್ತಲಿದೆ. ಇವನ್ನೆಲ್ಲ ನೋಡುವಾಗ್ಗೆ ಪ್ರಜೆಗಳ ಶಾಂತಿರಕ್ಷಣೆಯೆಂಬ ಹೆಸರಾದವು ಯಾವ ಸ್ವರೂಪದಲ್ಲಿರುವವೆಂಬುದು ಸ್ಪಷ್ಟವಾಗುತ್ತೆ. ಅಖಿಲ ಭಾರತಕ್ಕಾಗಿ ಒಂದು ಶಾಸನವನ್ನು ಪ್ರಾಂತ್ಯ ಪ್ರಾಂತ್ಯಕ್ಕೆ ನಾನಾ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಶಾಸನವನ್ನು ಜಾರಿಯಲ್ಲಿ ತರಲು ಸರಕಾರದವರು ನಿಶ್ಚಯಿಸಿರುವರು. ಹಾಗೆಂದ ಮೇಲೆ ಪ್ರತಿಯೊಂದು ಪ್ರಾಂತ್ಯದಲ್ಲಿ 'ಕ್ರಿಮಿನಲ್ ಲಾ ಎಮೆಂಡ್ ಮೆಂಟ್' ಎಂಬ ಒಂದು ಶಾಸನವೂ ಮತ್ತು, ಆ ಪ್ರಾಂತ್ಯದ ಸ್ಪೆಶಲ್ ಪವರ್ಸ್ ಮತ್ತೊಂದು ಶಾಸನವೂ ಜಾರಿಯಲ್ಲಿರ ಬೇಕು. ಇದರಿಂದ ಅಧಿಕಾರಿಗಳಿಗೆ ಮಿತಿಯಿಲ್ಲದ ಅಧಿಕಾರಗಳು ದೊರೆತು ಅದರಿಂದ ಅವರ ನ್ಯಾಯದ ದೃಷ್ಟಿಯು, ಮುಖ್ಯವಾಗಿ ಪ್ರಜೆಗಳ ಹಿತದ ಸಾಧನೆಯಲ್ಲಿ ಪ್ರಜೆಗಳಿಗೆ ವಿಶಾಲವಾದ ಹಿತಕ್ಕೆ ಅಧಿಕವಾಗುವದೆಂಬುದಕ್ಕೆ ನಿದರ್ಶನಗಳನ್ನು ಕೊಟ್ಟು ನಮ್ಮ ರಾಷ್ಟ್ರೀಯ ಪ್ರತಿನಿಧಿಗಳು ಎಷ್ಟೇ ಹೇಳಿದಾಗ್ಯೂ ಸರಕಾರದವರು ಸ್ವರಾಜ್ಯವಾದಿಗಳನ್ನು ಧಿಕ್ಕರಿಸಿ ಈ ಪ್ರಕಾರದ ವಿಶೇಷ ಶಾಸನಗಳನ್ನು ಮಂಜೂರುಮಾಡುವುದರಿಂದ ಪರಿಸ್ಥಿತಿಯ ತೀವ್ರತೆಯೂ, ಸ್ವದೇಶಿಯೂ ದೊರೆಯುವದೆಂಬುದು ನಿಶ್ಚಯ.

ಅಲ್ಲದೆ, ದೇಶದಲ್ಲಿನ ರಾಷ್ಟ್ರೀಯ ಜಾಗೃತಿಯ ಎದುರು ಸರಕಾರವು ಈ ಶಾಸನಗಳ ಬೆಂಬಲವಿಲ್ಲದೆ ನಿಲ್ಲಲು ಸಾಧ್ಯವಿಲ್ಲದಾಗಿದೆಯೆಂಬುದೂ ಸಹ ವ್ಯಕ್ತವಾಗುವದು.

ಗಂಧದ ರೂಲ್ಸ್‌ಗಳ ಕೆಲವು ತಿದ್ದುಪಡಿ.

ನಂಬ್ರ 85.—1899 ನೇ (1 of 1899) ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನಿನ 42 ಮತ್ತು 143 ರ (1) (F) ಈ ಸೆಕ್ಷನ್‌ಗಳಲ್ಲಿ ಕೊಟ್ಟಿರುವ ಅಧಿಕಾರವನ್ನು ನಡಸಿ, ಈಚಿನ ತಿದ್ದುಪಡಿಗಳನ್ನೊಳಗೊಂಡ 31—12—1912 ರ ಚೀಫ್ ಕಮಿಷನರ ನೋಟಿಫಿಕೇಶನ್ ನಂ 78 ರ ರೂಲ್ಸಿನಲ್ಲಿ ಈ ಕೆಳಗಿನ ಕರಡು ತಿದ್ದುಪಡಿಗಳನ್ನು ಮಾಡಬೇಕೆಂದು ಉದ್ದೇಶವನ್ನು ಸಂಬಂಧಪಟ್ಟ ಎಲ್ಲಾ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ ಮತ್ತು ಈ ವಿಷಯವು ಈ ನೋಟಿಫಿಕೇಶನು ಕೊ. ಗೆಜೆಟ್ಟಿನಲ್ಲಿ ಪ್ರಕಟವಾದ ದಿನದಿಂದ 60 ದಿನಗಳ ನಂತರ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತದೆಂಬುದನ್ನು ಈ ಮೂಲಕ ತಿಳಿಯಪಡಿಸಿದೆ

ಕರಡು ತಿದ್ದುಪಡಿಗಳ ವಿಷಯದಲ್ಲಿ ಮೇಲ್ಕಂಡ 60 ದಿನದೊಳಗೆ ಬರುವ ಯಾವ ಆಕ್ಷೇಪಣೆಗಳಾಗಲೀ ಯಾ ಸಲಹೆಗಳಾಗಲೀ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತದೆ

ಕರಡು ತಿದ್ದುಪಡಿಗಳು.

1. 7 ನೇ ರೂಲಿಗೆ ಈ ಪ್ರಕಾರ ಸೇರಿಸತಕ್ಕದ್ದು.—'ಗಂಧದ ಮರವುಳ್ಳ ಜಾಗವನ್ನು ಮಂಜೂರು ಮಾಡಿಕೊಡುವುದಕ್ಕೆ ಮೊದಲು ಚೀಫ್ ಫಾರೆಸ್ಟ್ ಆಫೀಸರ ಸಲಹೆ ತೆಗೆದುಕೊಳ್ಳತಕ್ಕದ್ದು. 5 ಮರಗಳಿಗಿಂತ ಹೆಚ್ಚು ಗಂಧವುಳ್ಳ ಜಾಗವನ್ನು ಫಾರೆಸ್ಟು ಇಲಾಖೆಯವರು, ಆ ಜಾಗವು ಗಂಧ ಬೆಳೆಯಲು ಅನುಕೂಲ್ಯವಾದ ಜಾಗವೆಂದು ಅಭಿಪ್ರಾಯಪಟ್ಟರೆ ಅಂಥಾ ಸಂದರ್ಭದಲ್ಲಿ ಆ ಜಾಗವನ್ನು ಪಡೆಯಲು ಬಂದಿರುವ ಅರ್ಜಿಗಳು ಸಾಧಾರಣವಾಗಿ ನಿರಾಕರಿಸಲ್ಪಡುತ್ತವೆ

2. 13 ನೇ ರೂಲಿನ V ನೇ ಕ್ಲಾಸಿನ ಕೊನೆಯಲ್ಲಿ 'ಬೌಂಡ್ ಬಿಲ್' ಎಂಬ ಪದದ ಮೇಲೆ ಇದನ್ನು ಸೇರಿಸಿಕೊಳ್ಳತಕ್ಕದ್ದು—'ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನು ಕಾಪಾಡುವ ಬಗ್ಗೆ'

3 'ಗಂಧದ ಮರವನ್ನೂ ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನು ಕಾಪಾಡುವ ಬಗ್ಗೆ ಸಹಿ ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕು.' ಈ ವಾಕ್ಯವನ್ನು 14 ನೇ ರೂಲಿನ I ನೇ ಕ್ಲಾಸ್ ಕೊನೆಯಲ್ಲಿ ಸೇರಿಸತಕ್ಕದ್ದು.

4 'ಈ ರೂಲಿನಂತೆ ಗಂಧವುಳ್ಳ ಜಾಗವನ್ನು ಮಂಜೂರು ಮಾಡಲ್ಪಟ್ಟ ಭಾಗದಲ್ಲಿ' ಇದನ್ನು 19 ನೇ ರೂಲು, ಕ್ಲಾಸ್ I ರ 'ಅಪ್ಪಟ ವ್ಯವಸಾಯಗಾರರು' ಎನ್ನುವುದಾದ ಮೇಲೆ ಸೇರಿಸಲ್ಪಡಬೇಕು.

5. 'ಮತ್ತು, ಯಾವ ಗಂಧದ ಮರವನ್ನು ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನು ಕಾಪಾಡುವ ಬಗ್ಗೆ ಒಂದು ಒಪ್ಪಂದಕ್ಕೆ ಬರಬೇಕು' ಇದನ್ನು 21 ನೇ ರೂಲಿನ ಕೊನೇ ವಾಕ್ಯದ 2 ನೇ ಅಟ್ಟವಾಗಿ ಸೇರಿಸತಕ್ಕದ್ದು.

6 'ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಪೋಷಕ ಮರಗಳನ್ನು' ಇದನ್ನು 75—ಎ ರೂಲಿನ ಕೊನೆಯಲ್ಲಿ ಸೇರಿಸತಕ್ಕದ್ದು.

7 82 ನೇ ರೂಲಿಗೆ 3 ನೇ ನಿಯಮ (Provison) 'ಮಾಲೀಕನು ನಮ್ಮ ಜಾಗದಲ್ಲಿ ಕಾಡು ಬರುವ ಗಂಧದ ಮರಗಳನ್ನು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಒಂದು ಒಪ್ಪಂದಕ್ಕೆ ಬರುವವನಾಗಿದ್ದರೂ.'

8 'ಮತ್ತು ತನ್ನ ಜಾಗದಲ್ಲಿ ಹುಟ್ಟುತ್ತಿರುವ ಗಂಧದ ಮರಗಳನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಮಾಲೀಕನು ಒಪ್ಪಬೇಕಾಗುತ್ತದೆ' ಇದನ್ನು 111 ನೇ ರೂಲಿನ ಕೊನೆ ವಾಕ್ಯವಾಗಿ ಸೇರಿಸತಕ್ಕದ್ದು.

9 'ಮಾಲೀಕನು ಜಾಗವನ್ನು ವ್ಯವಸಾಯ ಮಾಡುವುದಕ್ಕೆ ಮೊದಲೇ ಆ ಜಾಗದಲ್ಲಿ ಹುಟ್ಟುತ್ತಿರುವ ಗಂಧದ ಮರಗಳನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತುಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಒಂದು ಒಪ್ಪಂದಕ್ಕೆ ಬರದಿದ್ದರೆ' ಇದನ್ನು 112 ನೇ ರೂಲಿನ ಕೊನೆಯಲ್ಲಿ ಸೇರಿಸತಕ್ಕದ್ದು.

10 'ಅಲ್ಲದೆ ಮಾಲೀಕನು ಯಾವ ಗಂಧದ ಮರವನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಭರವಸೆಕೊಡಬೇಕು' ಇದನ್ನು 113 ನೇ ರೂಲಿನ ಮೊದಲನೇ ವಾಕ್ಯದ ಕೊನೆಯಲ್ಲಿ ಸೇರಿಸತಕ್ಕದ್ದು.

11 'ಮಾಲೀಕನು ಯಾವ ಗಂಧದ ಮರವನ್ನೂ ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಒಪ್ಪುವನಾಗತಕ್ಕನು' ಇದನ್ನು 115ನೇ ರೂಲಿನ (c) ಉಪ ಕ್ಲಾಸಾಗಿ ಸೇರಿಸತಕ್ಕದ್ದು.

ನೋಟಿಫಿಕೇಶನ್ ನಂ. 86.

1899 (1 of 1899) ರ ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ್‌ನುಸಾರ ಹೊರಡಿಸಿದ್ದು ಮತ್ತು 5—6—1913 ರ ಚೀಫ್ ಕಮಿಷನರವರ ನೋಟಿಫಿಕೇಶನ್ ನಂ 54 ರಲ್ಲಿ ಮಂಜೂರಾದ ಜಾಗಗಳನ್ನು ಕೊಡುವ ವಿಷಯದಲ್ಲಿ ಪ್ರಕಟಿಸಿದ್ದ ರೂಲ್ಸುಗಳಲ್ಲಿ ಮಾಡಬೇಕೆಂದಿರುವ ಈ ತಿದ್ದುಪಡಿಯನ್ನು ಮೇಲಿನ ರೆಗ್ಯುಲೇಷನ್ನಿನ 144ನೇ ಸೆಕ್ಷನ್ನನುಸರಿಸಿ ಸಂಬಂಧಪಟ್ಟ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸಿದೆ ಮತ್ತು ಈ ಕರಡು ತಿದ್ದುಪಡಿಗಳು ನೋಟಿಫಿಕೇಶನು ಕೊಡಗು ಗಜೆಟಿನಲ್ಲಿ ಪ್ರಕಟವಾದುದರಿಂದ 60 ದಿನಗಳ ನಂತರ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತವೆ. ಈ ಬಗ್ಗೆ ಆ 60 ದಿನದೊಳಗೆ ಬರುವ ಯಾವ ಆಕ್ಷೇಪಣೆ ಯಾ ಸಲಹೆಗಳಾಗಲೀ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತವೆ.

ಕರಡು ತಿದ್ದುಪಡಿ.

1 4—A ರೂಲಾಗಿ ಸೇರಿಸಿಕೊಳ್ಳತಕ್ಕದು. "ಗಂಧದ ಮರವುಳ್ಳ ಜಾಗ—ಗಂಧದ ಮರವುಳ್ಳ ಸಾಧಾರಣ ಜಾಗವು ಈ ರೂಲಿನಂತೆ ಕೊಡಲಾಗುವುದಿಲ್ಲ. ಯಾವ ಸಂದರ್ಭದಲ್ಲಿಯಾದರೂ ಅಂಥಾ ಜಾಗವು ಕೊಡಲ್ಪಡದಿದ್ದರೆ ಆ ಜಾಗವನ್ನು ಬಿಟ್ಟುಕೊಡುವ ಮೊದಲೇ ಫಾರೆಸ್ಟು ಇಲಾಖೆಯವರು ಅಲ್ಲಿನ ಗಂಧವನ್ನು ತೆಗೆದುಕೊಳ್ಳಲು ಯಾವ ನಿರ್ಬಂಧವೂ ಇಲ್ಲ. ಅಥವಾ ಸೇ. ಲ್ಯಾಂ. ರೂಲ್ಸಿನಂತೆ ಗಂಧವನ್ನು ಟಿಂಬರ್ ಬೆಲೆಗೇ ಸೇರಿಸಿ ಟಿಂಬರ್ ಮೌಲ್ಯ ಕಟ್ಟಬಹುದು. ಈ ಎರಡನೇ ಸಂದರ್ಭದಲ್ಲಿ ಮಾತ್ರ ಜಾಗ ಪಡಕೊಂಡವನು ಟಿಂಬರ್ ಬೆಲೆಯನ್ನು ಕಟ್ಟಿದನಂತರ ಗಂಧವನ್ನು ಬೇಕಾದ ಹಾಗೆ ಮಾಡಬಹುದು.'

2. 4ನೇ (c) ರೂಲಿನಲ್ಲಿ "(ವಿಸ್ತಾ ಅಧಿಕಾರಿಗಳು" ಎಂಬುದರ ಮೇಲೆ ಸೇ. ಲ್ಯಾಂ. ರೂಲ್ಸಿನಂತೆ" ಎನ್ನುವದನ್ನು ಸೇರಿಸಿಕೊಳ್ಳಬೇಕು.

ಬೆಂಗಳೂರು,
10—6—1935

ದೇಶೀಯ ವಾಚನಾಲಯದ ಅವಸ್ಥೆ.

(ಲೇಖಕರು—ಶ್ರೀ ಎಸ್ ಎಸ್. [illegible] ಹುಬ್ಬಳ್ಳಿ)

'ಸಮ್ಮುದೀ, ಸನ್ಮುದೀ ಭರತ ವರ್ಷ' ಎಂಬ ಹಿಂದೀ ಸ್ವದೇಶೀಯತ್ವವನ್ನು ಬಿರುಸಾಗಿ ಬಿತ್ತಿ ಹುಲುಸಾಗಿ ಬೆಳಸಿದ ಲೋಕಮಾನ್ಯ ತಿಲಕರ ಜ್ಞಾಪಕಾರ್ಥವಾಗಿ ತಿಲಕ ಗ್ರಂಥ ಸಂಗ್ರಹವು ಹುಬ್ಬಳ್ಳಿಯಲ್ಲಿ 1922 ನೇ ಇಸವಿ 13ರಲ್ಲಿ ಸ್ಥಾಪಿತವಾಯಿತು. ಇದನ್ನು ಕರ್ನಾಟಕದಲ್ಲಿಯೇ ಅತ್ಯುತ್ಕೃಷ್ಟವಾದ ಗ್ರಂಥ ಭಂಡಾರವನ್ನಾಗಿ ಮಾಡಬೇಕೆಂದು ಸ್ಥಾಪಕರ ಆಶೆಯಿತ್ತು.

ಪುಸ್ತಕ ಭಂಡಾರಗಳು ವಿವಿಧ ವಿಷಯದ ಶಿಕ್ಷಣಾಲಯಗಳು. ಸಾಮಾನ್ಯ ಜನರಲ್ಲಿ ಅವು ಕಲಿಯುವ ಅಭ್ಯಾಸವನ್ನು ಹುಟ್ಟಿಸುತ್ತವೆ. ಹೊಸ ಹೊಸ ವಿಚಾರಗಳನ್ನು ಹೊಸ ಹೊಸ ಅನುಭವ ದೃಷ್ಟಿಕೋನಗಳಿಂದ ನೋಡಲು ಕಲಿಸುತ್ತವೆ. [illegible] ಮನೆಗೊಂದು [illegible] ಬೇಕೆಂದು ಅವರು ಹೇಳುವುದು ಸದ್ಯದಲ್ಲಿ ನಾವು ಆಶಿಸುವಂತಿಲ್ಲ. [illegible] ಉಪದೇಶದಂತೆ [illegible] ಪುಸ್ತಕಗಳನ್ನು ಸಂಗ್ರಹಿಸಬೇಕೆಂದರೆ ಸಾಧ್ಯವಲ್ಲ. ಸಾರ್ವಜನಿಕ ಸಂಗ್ರಹಾಲಯಗಳು, ಧರ್ಮಾರ್ಥ ವಾಚನಾಲಯಗಳು ಆಗ ಓದುವವರಿಗೆ ಅವಶ್ಯಕವಾಗಿವೆ. ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಲು ಜ್ಞಾನದ ಬೆಳಕು ಬೇಕು. [illegible] ನಾವು ಜ್ಞಾನ ವೈಶಾಲ್ಯಕ್ಕೆ [illegible] ಜೀವನದ ಜೀವಾಳವಾದ [illegible] ಹೊಂದಿದ ವಿಚಾರಗಳನ್ನು ನೋಡಿ, ನಮ್ಮ ನಿಜ ಹಕ್ಕು ತತ್ವ [illegible] ನಾವು ಕಂಡುಕೊಳ್ಳಬಹುದು.

ಲೋಕಮಾನ್ಯರು ತಮ್ಮ ಧ್ಯೇಯ ಸಾಧನೆಯನ್ನು ವಿದ್ಯಾರ್ಥಿದೆಸೆಯಲ್ಲಿಯೇ ಆರಂಭಿಸಿದರು. ಸಾರ್ವಜನಿಕರಲ್ಲಿ ದೇಶಾಭಿಮಾನವನ್ನು [illegible] ನಮ್ಮ ದೇಶಕ್ಕೆ ಸ್ವರಾಜ್ಯ [illegible] ಅವರು ಗಂಭೀರರು [illegible] ಅಂಥವರ ಜ್ಞಾಪಕವನ್ನು [illegible] ಸಾರ್ವಜನಿಕ ಶಿಕ್ಷಣೋಪಯೋಗಿ ಗ್ರಂಥ ಭಂಡಾರಕ್ಕಿಂತಲೂ ಉತ್ತಮವಾದದ್ದಾವುದು?

ಈ ದೃಷ್ಟಿಯಿಂದ ಸ್ಥಾಪಿತಗೊಂಡು ನಾನಾ ಹಲವರು ಸ್ನೇಹಿತರೊಡನೆ ವಿಷಯವನ್ನು ಚರ್ಚಿಸಿದೆ. ಅವರ ಸಲಹೆಯಂತೆ ಸಹಕರಿಸಿದರು. ಅಂದಿನಿಂದ ತಿಲಕ ಗ್ರಂಥ ಸಂಗ್ರಹಕ್ಕೆ ಪುಸ್ತಕಗಳನ್ನು ಜೋಡಿಸಿದೆವು. ಆರಂಭದಲ್ಲಿ ಇಂಗ್ಲಿಷ್, ಮರಾಠೀ ಮುಂತಾದ ಭಾಷೆಗಳ ಪುಸ್ತಕಗಳು ಹುಬ್ಬಳ್ಳಿಯ [illegible] ಲೈಬ್ರರಿಯ ಪುಸ್ತಕಗಳು ಈ ಸಂಗ್ರಹಾಲಯದ ಪ್ರಥಮ ಗ್ರಂಥಗಳಾದುವು. ನಾನು ದಾನಿಗಳ ಪ್ರಚಾರಕ್ಕೆ ಹೋಗಬೇಕಾಗಲಿಲ್ಲ. ನನ್ನ ಸ್ನೇಹಿತರನ್ನು, ಹಿತೈಷಿಗಳನ್ನು [illegible] ಪುಸ್ತಕಗಳನ್ನು ತಂದೆ. [illegible] ಪ್ರಕಾಶಕರನ್ನು ತಿಲಕ ಗ್ರಂಥ ಸಂಗ್ರಹಕ್ಕೆ ಪುಸ್ತಕಗಳನ್ನು ದಾನವಾಗಿ ಕೊಡಲು ಬೇಡಿದೆ. ಅಂತವರಲ್ಲಿ [illegible] ಮುಂತಾದವರ ಪುಸ್ತಕಗಳು ಬಂದುವು. ಕೆಲವು ಅಪರೂಪದ ಕಂಪನಿಗಳು ತಮ್ಮ ಗ್ರಂಥಗಳನ್ನು ಅರ್ಧ ಬೆಲೆಗೆ ಒದಗಿಸಿದುವು. [illegible] ಪ್ರಕಾಶಕರು ಬಹಳ ಸಹಾಯ ಮಾಡಿದರು. ಹೀಗೆ ಜರ್ಮನ್, ಬೆಂಗಾಲಿ, ಆಲ್ಬರ್ಟ ಮುಂತಾದ ನಾನಾ ದೇಶಗಳನ್ನು ನೋಡಿ [illegible] ಈ ತಿಲಕ ಸಂಗ್ರಹವನ್ನು ಬೆಳೆಸಿದರು. ಸಂಗ್ರಹವು ಈ ರೀತಿ ಅಭಿವೃದ್ಧಿಯಾಗುತ್ತಿರುವಾಗ ಅದರಲ್ಲಿ [illegible] ಪುಸ್ತಕಗಳಿದ್ದವು. ಅವುಗಳ ಬೆಲೆಯು 10,000 ರೂ ಗಳಿಗೆ ಮಿಗಿಲಾಯಿತು.

ಆದರೇನು? ಈ ಸಂಗ್ರಹದ ಮೇಲೆ ಅಧಿಕಾರ ವರ್ಗದ ಕ್ರೂರ ದೃಷ್ಟಿ ಬಿತ್ತು. ರಾಷ್ಟ್ರೀಯ ಪ್ರಚಾರಕನ ಸಂಗ್ರಹವನ್ನು [illegible] ಈ ಪುಸ್ತಕಭಂಡಾರದ [illegible] ಸರಕಾರದವರು ಕಾಂಗ್ರೆಸ್ಸಿನ [illegible] 1930, 1932 ರಲ್ಲಿ ನಡೆದ ಚಳುವಳಿಯ ಕಾಲದಲ್ಲಿ ಸಂಗ್ರಹವನ್ನು ಸರಕಾರದವರು ವಶಪಡಿಸಿಕೊಂಡರು. 1931 ರಲ್ಲಿ ಗಾಂಧಿ-ಅರ್ವಿನ್ ಒಪ್ಪಂದವಾದಾಗ ಸಂಗ್ರಹಕ್ಕೆ [illegible] ಮುಂದೆ [illegible] ಹುಬ್ಬಳ್ಳಿಯ ವಕೀಲ [illegible] 9 ಜನರ ಕೂಡಿದ ಟ್ರಸ್ಟಿಯಿಂದ [illegible] ಸರಕಾರದಲ್ಲಿ ನಿವೇದಿಸಲಾಯಿತು.

ಇಷ್ಟಾದರೂ ಪ್ರಭುತ್ವದ [illegible] ಹೋಗಲಿಲ್ಲ. 1932ರಲ್ಲಿ ಸಂಗ್ರಹವು ಅನ್ಯಾಯವಾಗಿ [illegible] ಸರಕಾರದ ಹಿಡಿತದಲ್ಲಿ ಅದು ಸಿಕ್ಕಿ ಹೋಯಿತು. [illegible] ಪುಸ್ತಕಗಳು ಹಾಳಾದವೆಷ್ಟೋ, ಚೆದರಿ ಹೋದವೆಷ್ಟೋ! ಈಗಲೂ ಸಂಗ್ರಹದ ಅನೇಕ ಪುಸ್ತಕಗಳು ಹುಬ್ಬಳ್ಳಿಯ ಕೆಲವು [illegible] ಸರಕಾರದವರು [illegible] ಹೋಗಲಿ ಅದನ್ನು ಬಿಡುಗಡೆ ಮಾಡಲು ಸರಕಾರದವರು ಮನಸ್ಸು ಮಾಡಲಿಲ್ಲ.

1934 ರಲ್ಲಿ ಸರಕಾರವು ಪುನಃ ಸಂಗ್ರಹವನ್ನು ಹಿಂದಿರುಗಿ ಕೊಟ್ಟಾಗ ನಮಗೆ ಸಿಕ್ಕಿದ್ದು ಮುರಿದ ಪಟ್ಟು. ತಿಲಕ ಗ್ರಂಥ ಸಂಗ್ರಹ

ಸಂಗ್ರಹಾಲಯವು ಉಪಯೋಗದಲ್ಲಿದ್ದಾಗ ಅದಕ್ಕೆ ಲೋಕಮಾನ್ಯ ವಾಚನಾಲಯ'ವು ಸಂಬಂಧಿಸಿತ್ತು. ಅದರ ಸ್ಥಿತಿಯೂ ಸಾಮ್ರಾಜ್ಯಶಾಹಿ ಪ್ರಭುತ್ವದವರ ಕೃಪೆಯಿಂದ [illegible] ಇಂಗ್ಲಿಷ್, ಹಿಂದಿ, ಕನ್ನಡ, ಮರಾಠಿ—ಈ ನಾಲ್ಕು ಭಾಷೆಗಳಲ್ಲಿ ಪತ್ರಿಕೆಗಳು ಬರುತ್ತಿದ್ದವು. ದಿನವೂ [illegible] ಜನರು ಓದಿ ಹೋಗುತ್ತಿದ್ದರು.

ಇಂಥ ಸಾರ್ವಜನಿಕ ಸಂಗ್ರಹವನ್ನು ಅನ್ಯಾಯವಾಗಿ [illegible] ಕಸಿದುಕೊಳ್ಳುವುದು ಪ್ರಭುತ್ವಕ್ಕೆ ತಕ್ಕದ್ದೇ? ಅದು [illegible] ರಾಷ್ಟ್ರೀಯ [illegible] ಎಂದು ಹೇಳಬಹುದೇ? [illegible] ಅದರಿಂದ ಪ್ರಭುತ್ವಕ್ಕೆ ಏನು ಲಾಭವಾಯಿತೆಂದೇ? ಆದರೆ ಈ ಕೃತ್ಯದಿಂದ ನಾನು ಹಿಂಜರಿದಿದ್ದಿಲ್ಲ. ತಿಲಕ ಗ್ರಂಥ ಸಂಗ್ರಹದ ಆಗಿನ ಕಲೆ ಕಳೆದು, ಅದರ ಭಕ್ತರಿಂದ ಆಧಾರವನ್ನು ಹೊಂದಿ [illegible] ವಾಚನಾಲಯವು ಪುನಃ ಹುಟ್ಟುತ್ತದೆ.

ಕೋಳಿಸಾಕಣೆ ಮತ್ತು ಪಳ್ಳಿಗಳ ಉತ್ಪಾದನೆ.

(ಲೇಖನಾಂಕ ೩)

(ಲೇಖಕರು—ಶ್ರೀ [illegible] ಹುಣಸೂರು)

ದೇಹಪುಷ್ಟಿಯಲ್ಲಿ ಕಸ್ತೂರಿಭಾಗ [illegible] ಎಂಬುದನ್ನು ಇತರ ಆಹಾರಗಳಿಂದ ಹೆಚ್ಚು ಹಿಂದಿನ ಬಯಲಿನಿಂದ ತೀರಿಸಿದ್ದಾಯಿತು. ಆದರೆ ಅದು ಸಸ್ಯಾಹಾರಿಗಳಿಗೆ ತಪ್ಪದೇ ಪ್ರಯೋಜನಕ್ಕೆ ಬಂದ ಆಹಾರವಲ್ಲವೇ? ಎಂದು ಸಸ್ಯಾಹಾರಿಗಳು (Vegetarians) ಪ್ರಶ್ನಿಸಬಹುದು. ಅದಕ್ಕೆ ಉತ್ತರ, ಅಂದರೆ ಹಾಲು, ಬೆಣ್ಣೆ, ಮಜ್ಜಿಗೆ ತಪ್ಪು ಎನ್ನುತ್ತೀರಲ್ಲವೇ? ಇಷ್ಟು ಪ್ರಾಣಿಗಳಿಂದ ಅಲ್ಲವೇ ಉಂಟಾಗುವುದು? ಹೀಗಿರುವಾಗ ಮೊಟ್ಟೆಗಳಿಗೂ ಇವುಗಳಿಗೂ ಭೇದವೇನು ಎಂದೂ ಸನ್ಮಾನಿಗಳು ನಕ್ಕೇ?

ಹಾಲು ಬೇರೆಯಲ್ಲಿ ಹಿಂಸೆಯಿಲ್ಲ, ಮೊಟ್ಟೆಯನ್ನಂತೂ ಪಡೆಯಲ್ಲಿ ಹಿಂಸೆ ಇದೆ—ಎಂದು ಅನೇಕರು ಆಕ್ಷೇಪಿಸುವುದುಂಟು. ಇದೊಂದು ಅಂಧ ಪರಂಪರೆಯ ಮಾತು. ಅವರಿಗೆ ಸಂದೇಹವು ಉಳಿಯದೆ ಈ ವಿಷಯ [illegible] ಅದರ ನಾನಿಲ್ಲಿ ಹೇಳಬಯಸುವ ವಿಷಯವನ್ನು ಆ ಗೃಹಸ್ಥರು ನೋಡಬೇಕು. [illegible] ಈ ದೃಷ್ಟಿಯಿಂದ ನೋಡಿದರೆ ಹಾಲಿಗಾಗಿ ಎಮ್ಮೆ ದನಗಳಿಗೆ ಆಗುವ ಹಿಂಸೆ ಮೊಟ್ಟೆಗಳಿಗಾಗಿ ಕೋಳಿಗಳಿಗಾಗುವುದಿಲ್ಲ. ಹಾಲು ಹಿಂಡ ಬೇಕಾಗಿ ಹಾಲಿಳಿಯುವಂತೆ ಕರು [illegible] ಹಾಕಬೇಕು. ಹಾಲಿಳಿದ ಗುಂಡಾಯಿತೋ—ಕರು—ಆ ಕರುವಿನ ಬಾಯಿಗೆ ಸಿಕ್ಕಿದ್ದೋ ಗೊತ್ತು. ಇದರಲ್ಲಿ ಹಿಂಸೆ ಇಲ್ಲವೋ? ಮೊಲೆಗಳಲ್ಲಿರುವ ಹಾಲನ್ನೆಲ್ಲ ಹಿಂಡುವುದರಲ್ಲಿ ಹಿಂಸೆ ಇಲ್ಲವೋ? ಬದಲಾಗಿ ಅವುಗಳ ಸ್ವಭಾವವನ್ನು ಬಿಡದಿದ್ದಾಗಿ ಅವುಗಳನ್ನು, ನೋಡುವಾಗುವದಿಲ್ಲ. ಮೊಲೆಗಳ ಮೊಲೆಗಳಿಗೆ ಆಗುತ್ತಿರುವುದನ್ನು ಎಷ್ಟೋ ಮಂದಿ ನೋಡುತ್ತಾರೆ. ಮದ್ರಾಸ್ ಮುಂತಾದ ಕೆಲವು ಕಡೆ ಮನೆಯಿಂದ ಮನೆಗೆ ದನವನ್ನು ಹೊಡೆದುಕೊಂಡು ಬಾಗಿಲ ಮುಂದೆ ಬೇಕಾದಷ್ಟು ಹಾಲು ಹಿಂಡಿಕೊಡುವ ರೂಢಿ ಇದೆ. ಎಷ್ಟೋ ಮಂದಿ ಆಕಳು ಹಾಲಿಳಿಸುವುದಿಲ್ಲ ವಾದರೆ ಮತ್ತಿಗೆ ಕಟ್ಟಲು ಗುದ್ದುವುದೂ ಉಂಟು! ಇಷ್ಟೆಲ್ಲ [illegible] ಕೊಂಡ ಮೇಲೆಯಿಂದ ಸಹಜೀವ ಪ್ರಕೃತಿ [illegible] ಇದೆಲ್ಲ ಹಿಂಸೆಯಲ್ಲವೇ?

ಇಷ್ಟೇ ಅಲ್ಲ. ಆಕಳ ಕಟುಕರಿಗೆಯೂ ಪ್ರಚಾರವೂ ಮರೆಯಲ್ಲಿಲ್ಲ? ಅವುಗಳಿಗೆ ಸರಿಯಾ ಹಾಕಲು ಕರುವ ಹುಲ್ಲನ್ನು ಕೊಡುವುದಿಲ್ಲ? ಬೇಗನೆ ಹಣ್ಣಿಗಾದ ಹಸುವಿನ ಗತಿಯೇನು? ಅಸ್ವಾಸ್ಥ್ಯಗಳಿಂದ ಅಳಿಗೆ ಇವೆಲ್ಲ ಅಷ್ಟು ಅಹಿಂಸೆಯಿಂದ ವಿಚಾರಿಸಿದರೆ [illegible] ಹಿಂಸೆಯೆಂದೇ ಹೇಳಬೇಕಲ್ಲವೇ?

ಇವನ್ನೆಲ್ಲ ಸುಧಾರಿಸಲಿಕ್ಕಾಗುವದಿಲ್ಲ ಎಂದು ಹೇಳಿದ್ದಾಗಲು ಆದರೆ ಅದು ಸ್ಥಾನದ ಮೇಲಕ್ಕೆ ಆಗಬಹುದು ದ ಹಿಂಸೆಗಳಲ್ಲಿ ಅಧಿಕಾರಿಯಿರುವಾದರೂ ಕೋಳಿಗಳಿಗೆ ಆಗುವ ಹಿಂಸೆ ಬಹಳವಿಲ್ಲ. ಅವುಗಳ ಹಿಂದೆ ತಿಂದು ಮುಗಿಸುವ ಸೆಟ್ಟೆಯಲ್ಲಿಯೇ ಆಗಲಿ, ಅವುಗಳ ಸಿಪಾಯಿಕ್ಷ್ಯಾಸದಲ್ಲಿಯೇ ಆಗಲಿ, ಅವುಗಳ ಮೊಟ್ಟೆಗಳನ್ನು ತೆಗೆದು ಉಪಯೋಗಿಸುವದರಿಂದೇ ಆಗಲಿ, ಅಂಥ ಯಾವೊಂದು ಹಿಂಸೆಯೂ ಆಗದು. ಮೊಟ್ಟೆಯನ್ನು ತೆಗೆದ ಸ್ವಲ್ಪ ಹೊತ್ತಿಗೇ ಅದನ್ನಿಟ್ಟ ಕೋಳಿಯು ಅದನ್ನು ಮರೆತು ಹೋಗುವುದು. ಯಥಾಪ್ರಕಾರ ತಿರುಗಿ ಹೆಚ್ಚಿ ತಿನ್ನುತ್ತ ಮತ್ತೆ ಇಡುವುದು.

ಹೀಗಿರುವಾಗ ಬೇರೊಂದು ಆಗವನ್ನು ನಿರಾಕರಿಸಿ ಕೇವಲ ಹಿಂಸೆಯ ಕಾಲಿನ ಉಪಯೋಗದಲ್ಲಿಯೇ ಹೆಚ್ಚು ಗಿರುವದೆಂದು ಹೇಳುವದಿಲ್ಲವೇ? ಹಾಲನ್ನೇ ಬಿಡದೇ ಕುಡಿದು ಇದರ ಸಾರಾಂಶವಿಲ್ಲ. ಆದರೆ ಎರಡರ ಉಪಯೋಗದಲ್ಲಿಯೂ ಆಗುವ ಹಿಂಸೆಯನ್ನು ತಕ್ಕಡಿಗೆ ಹಾಕಿ ತೋರಿಸಬೇಕೆಂಬುದೇ ಈ ಬರಹದ ಉದ್ದೇಶ.

ಆಗ ಈ ಮೊಟ್ಟೆಗಳಿಂದ ಆಗುವ ಆರ್ಥಿಕ ಲಾಭವನ್ನು ನೋಡೋಣ. ಒಂದು ಕೋಳಿಯು ವರುಷವೊಂದಕ್ಕೆ ಸರಾಸರಿ [illegible] ಇಡುತ್ತದೆ. ಅವುಗಳ ಬೆಲೆ [illegible] ಮದ್ರಾಸ್ ಪ್ರಾಂತ್ಯದ [illegible] ಕೃಷಿ ಶಾಖೆಯ [illegible] ಇಟ್ಟ ಲೆಕ್ಕದಂತೆ, ಅವುಗಳಿಂದ ತಿಂಗಳೊಂದಕ್ಕೆ [illegible] ಬೆಲೆ ಸಿಗುವುದು. ಮತ್ತು ಈ ಬಗೆಯ ಕೋಳಿ ಸಾಕಣೆ ಉತ್ತಮ ಆದಾಯ ಸ್ಥಿತಿಯಲ್ಲಿರುವುದಾದರೆ ನಮ್ಮ ಹಳ್ಳಿಯವರಿಗೆ ಇದರ ಲಾಭ ಬರಬಹುದು.

ಹೊಸ ಗಸ್ತಿ, ಹತ್ತಿ, ತೋಟಪಟ್ಟಿಗಳನ್ನು ಇಟ್ಟುಕೊಳ್ಳುವವರಿಗೆ ಕೋಳಿಯಿಂದ ಬಹಳ ಲಾಭವುಂಟು. ಮನುಷ್ಯರ ಉಪಯೋಗಕ್ಕೆ ಬಾರದ ಕಸ—ಕಸರು ಆದೆಷ್ಟೋ ತಿಂದು ಹಾಕುತ್ತವೆ. ಕೊಯಿಲು ತೀರಿದ ಮೇಲೆ ಹೊಲದಲ್ಲಿ ಸ್ವಚ್ಛವಾಗಿ ಬಿದ್ದಿರುವ ಕಾಳುಗಳನ್ನು ಆರಿಸಿ ತಿನ್ನುತ್ತವೆ. ಹೊಲಗದ್ದೆಗಳಲ್ಲಿ ನಮ್ಮ ಬೆಳೆಗೆ ಕಂಟಕಪ್ರಾಯವಾದ ಹುಳುಹುಪ್ಪಟೆಗಳನ್ನು ಅವು ಹೆಕ್ಕಿ ನುಂಗಿಬಿಡುತ್ತವೆ. ಇದರಿಂದ ಪೈರಿಗೆ ಆಗುವ ಲಾಭ ಬಹಳ ಗಣನೀಯವಾಗಿದೆ. ಪೈರು ಬಂದ ಮೇಲೆ ಹೊಲದಲ್ಲಿ ಇವನ್ನು ಹೋಗಲು ಬಿಟ್ಟರೆ ಅಲ್ಲಿ ಅವು [illegible] ಹುಳ ಹುಪ್ಪಟೆಗಳನ್ನು ತಿಂದು ಹಾಕಿ ಬಿಡುತ್ತವೆ. ಸಾರಾಂಶ—ಸ್ವಲ್ಪದಲ್ಲಿ ಪೋಲು ಹೋಗುವ ಎಷ್ಟೋ ಕಸ—ಕಸರು ಅವುಗಳಿಗೆ ಆಹಾರವಾಗಿ ಪರಿಣಮಿಸುತ್ತದೆ. ಆದರ ಪೈರಿಗೆ ಹಾನಿಯನ್ನುಂಟುಮಾಡುವ ಜೀವಿಗಳು ಅವುಗಳ ಆಹಾರವಾಗಿ ವೈರಿಯ ಉದ್ಧಾರವಾಗುತ್ತದೆ.

ಹೀಗೆಲ್ಲ ಇರುವಾಗ, ಕೋಳಿ ಒಂದಕ್ಕೆ ತಿಂಗಳಿಗೆ 5 ಆಣೆ [illegible] ಬರುವದು ಅಸಾಧ್ಯವಲ್ಲ. ಆದರೆ ಮುರ್ಗ 5 ಆಣೆಯಾದರೆ ಅದೇ ತಿಂಗಳೊಂದಕ್ಕೆ 11 ಆಣೆಯ ಮೊಟ್ಟೆಗಳು ಸಿಗುತ್ತವೆ. ಇದನ್ನು ಕುರಿತು ಮದ್ರಾಸ್ ಸರಕಾರದ ಕೋಳಿ ವ್ಯವಸಾಯದ ಶಾಖೆಗೆ ಪ್ರಮುಖರಾದ ಶ್ರೀಯುತ [illegible] ಇವರು ಹೀಗೆಂದು ಬರೆಯುತ್ತಾರೆ:—ಮತ್ತು ಕೋಳಿ ಇಟ್ಟುಕೊಂಡವರಿಗೆ ತಿಂಗಳಿಗೆ 11 ರೂಪಾಯಿ ಆದಾಯವಿದೆ ಸ್ವಲ್ಪವೇ ಹುಡುಕಿದರೆ ವರ್ಷ ಒಂದಕ್ಕೆ 130 ರೂಪಾಯಿಗಳ ಉತ್ಪನ್ನ ಬರುವದು. ಒಬ್ಬ ರೈತನಿಗೆ ಈ ಉತ್ಪನ್ನವು ಒಂದು ಇತರ ಪೈರು ಕೃಷಿಯ ಬೆಳೆಯಷ್ಟಿದ್ದಂತಾಗುವುದೋ ಇಲ್ಲವೋ? ಪ್ರತ್ಯಕ್ಷ ಅನುಭವದ ಮಾತು. ಕೆಲವು [illegible] ಮಾತುಗಳವು.

ಟಿಪ್ಪಣಿ—ವಿಶೇಷ ಮಾಹಿತಿ ಬೇಕಾದವರು ಮದ್ರಾಸ್ ಸರಕಾರದ ಕೋಳಿ ವ್ಯವಸಾಯದ ಶಾಖೆಯ ಮುಖ್ಯರಿಗೆ ಬರೆದರೆ ಅವರು ಇಂಗ್ಲಿಷ್, ತೆಲುಗು, ಕನ್ನಡ, ಮುಂತಾದ ಭಾಷೆಗಳಲ್ಲಿಯೂ ಪತ್ರಿಕೆಗಳು [illegible] ಏನು ಬೇಕಾದರೂ ಉಚಿತ ಪ್ರತಿಗಳನ್ನು ಬರೆಯುವವರು ಒಂದು ಆಣೆ ಸ್ಟ್ಯಾಂಪು ಕಳಿಸಬೇಕು. ಬೇಕಾದ ಮಾಹಿತಿಯನ್ನು ಕಳುಹಿಸುತ್ತಾರೆ.

"Poultry farming in the East" by Mrs A. K. Franks ಎಂಬ ಪುಸ್ತಕವು ಬಹು ಯೋಗ್ಯವಾಗಿದೆ. ಇದನ್ನು—The U. P. poultry Association 1, Sultanpur Road Lucknow—ಇವರು ಮಾರುತ್ತಾರೆ.

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟೀಯಾದ ಜೋರ ಮಾಲುಗಳು



ಬರಲಿಕ್ಕಿರುವ ಶಿಕಾರಿ ಸಮಯಕ್ಕಾಗಿ.

ASHOO TOSH DAW & CO.,

GUN MAKERS.

"DAW BUILDING" 184, DHARMTALA ST., CALCUTTA

[ಒಮ್ಮೆ ವಿಚಾರಿಸಿ ನೋಡಿರಿ]   [ಬಂದುಕಿನ ಲೈಸೆನ್ಸ್ ಬೇಕು

ನಿಮ್ಮ ಕಷ್ಟದ ಹಣವನ್ನು ವೃಥಾ ಕಳೆದುಕೊಳ್ಳಬೇಡಿರಿ. ಖಾತ್ರಿಗೆ ಕಸ್ಟಮರನ್ನು ವಿಚಾರಿಸಿರಿ.

ವಿವಿಧ ವಾರ್ತಾವಳಿ.

[illegible] ಕರ್ನಲ್ ಲಾರೆನ್ಸನು ವ್ಯಕ್ತಪಟ್ಟಿರುವನೇ.

ಕಳೆದ ಯೂರೋಪಿಯನ್ ಯುದ್ಧದ ಅವಸರದಲ್ಲಿ ಸ್ವತಂತ್ರ ಅರಬ್ಬಸ್ಥಾನವನ್ನು ವೇಷಾಂತರದಾರಿಯಾಗಿ ಅಲ್ಲಿ ನಾನಾ ಜಾತಿಯ ಅರಬ್ಬೀ ಜನಾಂಗಗಳನ್ನು ಸಮೆಟಿ ಬ್ರಿಟಿಷರಿಗನುಕೂಲವಾಗುವಂತೆ ಕ್ರಾಂತಿಗಳನ್ನೆಬ್ಬಿಸಿದ ಕರ್ನಲ್ ಲಾರೆನ್ಸೆಂಬವನು ಮಡಿದಿದ್ದನೆಂದು ತಿಳಿದಿದ್ದೆವು. ಆದರೆ, ಆತನೇ ಈಗ ಅಬಿಸೀನಿಯಾದಲ್ಲಿ ವೇಷಾಂತರದಾರಿಯಾಗಿ ನಾನಾ ಷಡ್ಯಂತ್ರಗಳನ್ನು ನಡೆಸುತ್ತಲಿರುವನೆಂದು ಒಂದು ಪ್ರಬಲವಾದ ವಾರ್ತೆಯಿದೆ.

—ooo—

ಮಕ್ಕಳನ್ನು ಪೋಷಿಸದ ತಂದೆಗಳಿಗೆ ಶಿಕ್ಷೆ.

ಸೋವ್ಹಿಯಟ್ ರಷ್ಯದಲ್ಲಿ ಮಕ್ಕಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳದ ತಾಯಿ ತಂದೆಗಳನ್ನು ಶಿಕ್ಷೆಗೀಡುಮಾಡಲಾಗುತ್ತದಂತೆ! 1933ರಲ್ಲಿ 142,000 ಜನ ತಂದೆಯರೂ, 1934ರಲ್ಲಿ 2 ಲಕ್ಷಕ್ಕೆ ಮೀರಿದ ತಂದೆಯರೂ, ತಮ್ಮ ಮಕ್ಕಳ ಜೀವನಾಂಶವನ್ನು ಕೊಡದೆ ತಪ್ಪಿದ್ದರಿಂದ, ಶಿಕ್ಷೆಗೀಡಾದರು.

—ooo—

ಹಿಂದೂ ದೇಶದಲ್ಲಿ ವಿಪುಲ ಎಣ್ಣೆಯ ಗಣಿಗಳು.

700 ವರ್ಷಗಳಿಗೆ ಬೇಕಾಗುವಷ್ಟು ಎಣ್ಣೆಯು ದೊರೆಯುವದು

ಹಿಂದೂ ದೇಶದಲ್ಲಿ ಧಾರಾಳ ಎಣ್ಣೆಯುಳ್ಳ ಗುಜರಾತ, [illegible] ಎಣ್ಣೆ ಗಣಿಗಳನ್ನು ಶೋಧಕರು ಕಂಡು ಹಿಡಿದಿದ್ದಾರೆ. ಈ ಗಣಿಗಳಿಂದ ಒದಗುವ ಎಣ್ಣೆಯು ಹಿಂದೂಸ್ಥಾನಕ್ಕೆ 700 ವರ್ಷಗಳಿಗೆ ಸಾಕಾಗುವುದು. ಈ ಗಣಿಗಳನ್ನು ಆಧುನಿಕವಾಗಿ ನಡೆಸಲು ಕಂಪನಿಗಳು ಸ್ಥಾಪನೆಯಾಗುವವು. ಈ ಕಾರ್ಯಕ್ಕೆ 1 ಕೋಟಿ ರೂಪಾಯಿ ವೆಚ್ಚ ತಗಲುವುದು. ವರ್ಷ ಒಂದಕ್ಕೆ 5 ಕೋಟಿ ರೂಪಾಯಿಗಳನ್ನು ಹಿಂದೂ ದೇಶದಲ್ಲಿ ಉಳಿಸುವುದು.

—ooo—

ಕಾಂಗ್ರೆಸ್ಸಿನ ಮುಂದಿನ ಅಧ್ಯಕ್ಷರಾರು?

ಪಂಡಿತ ಜವಾಹಿರಲಾಲರೇ?

ಕಾಂಗ್ರೆಸ್ಸಿನ ಮುಂದಿನ ಅಧ್ಯಕ್ಷ ಪದವಿಯನ್ನು ಸ್ವೀಕರಿಸಲು ಯಾರೂ ಸನ್ನದ್ಧರಾಗಿರುವರಾಗಿ ತೋರುವದಿಲ್ಲ. ಸಿ. ರಾಜಗೋಪಾಲಾಚಾರ್ಯರನ್ನೇ [illegible] ಮಾಡಬೇಕೆಂದು ಕೆಲವರು ಅಪೇಕ್ಷಿಸಿದ್ದರೂ ಅವರು ನಿರಾಕರಿಸುವರಂತೆ. ಇನ್ನು ಪಂಡಿತ ಜವಾಹಿರಲಾಲರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೆಲವರ ಅಭಿಪ್ರಾಯ. ಪಂಡಿತರು ಸದ್ಯಕ್ಕೆ ಯುರೋಪಿನಲ್ಲಿ ಅವರ ಪತ್ನಿಯವರ ಸಮೀಪದಲ್ಲಿರುವರು. ಇದರ ಮಧ್ಯದಲ್ಲಿ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಬೆಜವಾಡದಲ್ಲಿನ ಒಂದು ಸಭೆಯಲ್ಲಿ ಠರಾವುಗಳು ಪಾಸಾಗಿರುವವಂತೆ. ಯಾವದೂ ಇನ್ನೂ ನಿಶ್ಚಯವಾಗಿರುವುದಿಲ್ಲ.

—ooo—

127 ವರ್ಷದ ಪ್ರಾಯ

200 ಮೊಮ್ಮಕ್ಕಳ ಸ್ವಂತ ಪಿತಾಮಹ.

[illegible] ಜಿಲ್ಲೆಯಲ್ಲಿ ಮೊಹಿಂದ್ರಗುರ್ಜನ್ ಅಲಿ ಎಂಬ ವ್ಯವಸಾಯಗಾರನ ವಯಸ್ಸು 125. ಆತನ [illegible] ಇವನ ಹಿರಿಯ ಮಗನ ವಯಸ್ಸು 100. ಕಿರಿಯ ಮಗಳ ವಯಸ್ಸು 95. 200 ಮಂದಿ ಮೊಮ್ಮಕ್ಕಳು ಇರುವರು. [illegible] 18 [illegible] ಸ್ವಲ್ಪ ಕಿವುಡು ಆಗಿದ್ದರೂ, ಇನ್ನುವರೆಗೂ [illegible] 14 [illegible] 25 [illegible] 650 [illegible] 7 [illegible]

—ooo—

[illegible]

[illegible]

ಗಲಿಬಿಲಿಪಟ್ಟರು. ಒಂದು ಗಾಡಿಯನ್ನು ಬಾಡಿಗೆಗೆ ಪಡೆದು, ಇಬ್ಬರೂ ಆತನ ಗೃಹಾಧಿಪತಿಯಾಗಿ ತೆರಳಿದರು. ಆದರೆ, ಮಾರ್ಗಮಧ್ಯದಲ್ಲಿ ಕಳ್ಳನು ಒಂದು ಅಂಗಡಿಯ ಬಳಿ ಗಾಡಿಯನ್ನು ನಿಲ್ಲಿಸಿ ತನ್ನ ಸೇವಕನಿಗೆ ಅಂಗಡಿಯ ಬೀಗದ ಕೈ ಕೊಟ್ಟುಬರುವೆನಾಗಿ ಹೇಳಿ ಗಾಡಿಯಿಂದಿಳಿದನು. ಅಂಗಡಿಗೆ ಹೋಗುವ ಬದಲು ಆತನು ಡಾಕ್ಟರ ಆಫೀಸಿಗೆ ನೆಟ್ಟಗೆ ಹೋಗಿ, ಡಾಕ್ಟರು ಹೇಳಿದನೆಂದು ಕೆಲವು ವಸ್ತುಗಳನ್ನು ಪಡೆದುಕೊಂಡು ಅಲ್ಲಿಂದ ಪಲಾಯನ ಮಾಡಿದನು. ಇತ್ತ ಡಾಕ್ಟರು ದಾರಿಯಲ್ಲಿ ಬಹಳ ಹೊತ್ತು ಕಾದಿದ್ದರೂ ಕಳ್ಳನು ಬಾರದಿರಲು ಪುನಃ ತನ್ನ ಆಫೀಸಿಗೆ ಬಂದಲ್ಲಿ ಸಂಗತಿ ತಿಳಿಯಿತು.—ಪೊಲೀಸರಿಗೆ ದೂರು ಕೊಡಲಾಗಿದೆ. ಆದರೆ ಆ ಕಳ್ಳನು ಇನ್ನೂ ಸಿಕ್ಕಿರುವದಿಲ್ಲ.

—ooo—

79 ತಾಸು ನೀರಿನಲ್ಲಿ.

ಬಂಗಾಲಿ ತರುಣನ ಅದ್ವಿತೀಯ ಸಾಹಸ

ಅಲಹಾಬಾದಿನ ಶ್ರೀ ರಾಬಿನ್ ಚಟರ್ಜಿ ಎಂಬ ಬಂಗಾಲಿ ತರುಣರು ಬಹಳ ಹೊತ್ತು ನೀರಲ್ಲಿ ತೇಲುವದರಲ್ಲಿ ಹೆಚ್ಚಿನ ನೈಪುಣ್ಯವನ್ನು ತೋರಿಸಿದ ಶ್ರೀ ಚಟರ್ಜಿಯವರು ಕಳೆದ ತಾ. 14 ನೇ ಶನಿವಾರ ರಾತ್ರಿ 1 ಘಂಟೆಗೆ ನೀರಲ್ಲಿ ಇಳಿದು ತಾ. 17 ನೇ ಮಂಗಳವಾರ ಸಾಯಂಕಾಲ 4—41 ರ ವರೆಗೆ, ಅಂದರೆ 79 ತಾಸು 25 ಮಿನಿಟುಗಳ ವರೆಗೆ ನೀರಲ್ಲಿ ಸತತವಾಗಿ ತೇಲಿದರು.

ಇಷ್ಟು ಕಾಲಾವಧಿ ವರೆಗೆ ಸತತವಾಗಿ ತೇಲಿದವರೇ ಇಲ್ಲ. ಬುಧವಾರ ರಾತ್ರಿ 1 ಗಂಟೆಯ ವರೆಗೆ ನೀರಲ್ಲಿಯೇ ಇದ್ದು ಸಂಪೂರ್ಣ ನಾಲ್ಕು ದಿವಸಗಳ ವರೆಗೆ ತೇಲಿ ಜಗತ್ತಿನ ರಿಕಾರ್ಡು ಮುರಿಯಬೇಕೆಂದು ಆಶಿಸಿದರು. ಮತ್ತು ಆ ಶಕ್ತಿಯು ಅವರಲ್ಲಿದೆಯೆಂಬ ಭರವಸೆಯು ಇದೆ. ಸಾವಿರಾರು ಜನರು ನೋಡಲು ನೆರೆಯುತ್ತಿದ್ದರು. ಶ್ರೀ ಚಟರ್ಜಿಯವರು [illegible] ತೋರಿಸಿದರೂ, ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸುವ ಧೈರ್ಯದಲ್ಲಿದ್ದರು.

—ooo—

ಪ್ರಾಣಿಗಳ ಬಲಿಗಾಗಿ ತನ್ನ ಪ್ರಾಣವನ್ನೇ ಬಲಿ!

ಕಲ್ಕತ್ತೆಯ ಕಾಳೀಘಾಟ ದೇವಾಲಯದಲ್ಲಿ ನಡೆಯುವ ಅಮಾನುಷವಾದ ಪ್ರಾಣಿ ಬಲಿಯನ್ನು ನಿಲ್ಲಿಸಲು ಪಂಡಿತ ರಾಮಚಂದ್ರ ಶರ್ಮರವರು ಮರಣಾಂತಿಕ ಉಪವಾಸ ದೀಕ್ಷೆಯನ್ನು ಕೈಕೊಂಡು ಆಗಾಗಲೇ ಇಪ್ಪತ್ತು ದಿನಗಳ ಮೇಲ್ಪಟ್ಟಿಯಿತು. ಪಂಡಿತರ ದೇಹವು ಕೃಶವಾಗುತ್ತಲಿದ್ದರೂ ಸಂಕಲ್ಪವು ದ್ವಿಗುಣ ದೃಢವಾಗುತ್ತಿದೆ. ಇವರ ಸಂಕಲ್ಪಕ್ಕೆ ಕಲ್ಕತ್ತೆಯ ಪುರವಾಸಿಗಳು ಸಹಾನುಭೂತಿಯನ್ನು ವ್ಯಕ್ತಗೊಳಿಸಿ ದೇವಾಲಯವನ್ನೇ ಬಹಿಷ್ಕರಿಸುತ್ತಿರುವರು.

'ಪ್ರಾಣಿಗಳ ರಕ್ತದಿಂದ ತೃಪ್ತಳಾಗದ ದೇವಿಯು ನನ್ನ ರಕ್ತದಿಂದಾದರೂ ತೃಪ್ತಳಾಗಲಿ' ಎಂದು ಪಂಡಿತರು ನುಡಿಯುತ್ತಾರೆ.

'ಈ ಪ್ರಾಣಿ ಬಲಿಯು ಅನಾದಿಯಿಂದಲೇ ನಡೆದು ಬಂದಿರುವುದು' ಮಿ॥ ಮೋಯಿತ್ರರವರು ಅವರ ಮುದ್ರಿತ 'ಇಂಡಿಯಾ' ಗ್ರಂಥದಲ್ಲಿ, [illegible] ದೇಶವೆಂದು ವರ್ಣಿಸಿರುವದರಿಂದ [illegible] ಈ ಕೃತ್ಯವನ್ನು ನಿಲ್ಲಿಸಿ [illegible] ವರು ವೈಸರಾಯರಿಗೆ [illegible] ಮಾಡಿದ್ದರು.

—ooo—

ಇಟಲಿ–ಅಬಿಸೀನಿಯಾ.

ಸಂಧಾನ [illegible]

ಇಟಲಿ–ಅಬಿಸೀನಿಯಾ ಸಮಸ್ಯೆಗಳನ್ನು ಪರಿಹರಿಸ [illegible] ರಾಜಿ ತೀರ್ಮಾನವನ್ನು ಮಾಡಲು [illegible] ಸಂಧಾನವು ರಾಜಿ ಮುಂದಿನ [illegible] ಇಟಲಿಯು ರಾಷ್ಟ್ರಸಂಘದ [illegible] ಇಟಲಿಯು ಅಬಿಸೀನಿಯಕ್ಕೆ [illegible] ಇಟಲಿಗೆ [illegible] ಆಗಿದೆ.

ಅಬಿಸೀನಿಯದ ತೀರ್ಮಾನಕ್ಕೆ ಒಪ್ಪಿಗೆ.

ಅಬಿಸೀನಿಯಾ ಚಕ್ರವರ್ತಿಯವರು ತಮ್ಮ ಮಂತ್ರಾಲೋಚನಾ ಸಭೆಯಲ್ಲಿ ಒಂದು ದಿನವೆಲ್ಲ ಈ ತೀರ್ಮಾನಗಳ ಕುರಿತು ಚರ್ಚಿಸಿದ ಬಳಿಕ ಕಡೆಗೆ ತೀರ್ಮಾನಕ್ಕೆ ತಮ್ಮ ಒಪ್ಪಿಗೆಯಿತ್ತಿರುವರು. 'ಕೆಲ ಆರ್ಥಿಕ ವಿಚಾರದಲ್ಲಿ ಇಟಲಿಯವರಿಗೆ ಕೊಡಲ್ಪಟ್ಟಿರುವ ಹೆಚ್ಚಿನ ಸೌಲಭ್ಯಗಳು ಅಬಿಸೀನಿಯಕ್ಕೆ ಬಾಧಕವಿದ್ದರೂ ಶಾಂತಿ ಪಾಲನೆಯ ದೃಷ್ಟಿಯಿಂದ ತೀರ್ಮಾನಕ್ಕೆ ನಮ್ಮ ಸಮ್ಮತಿ ಇದೆ' ಎಂದು ಅಬಿಸೀನಿಯಾದ ಚಕ್ರವರ್ತಿಗಳು ನುಡಿದಿರುವರು.

ಇಟಲಿಯ ತಿರಸ್ಕಾರ.

ಇಟಲಿಯ ಮಂತ್ರಿಮಂಡಲವು ಮುಸೋಲಿನಿಯವರ ಅಧ್ಯಕ್ಷತೆಯಲ್ಲಿ ಸೇರಿ ಸಂಧಾನ ತೀರ್ಮಾನವು ಅಸಮರ್ಪಕವೆಂದೂ, ಅದನ್ನು ಇಟಲಿಯು ಸ್ವೀಕರಿಸುವದಿಲ್ಲವೆಂದೂ ಪ್ರಕಟಿಸಿರುವದು. ಆದರೆ ಇಟಲಿಯು ತನ್ನ ಬೇಡಿಕೆಗಳಿಗೆ ಇನ್ನು ಹೆಚ್ಚಿನ ಭದ್ರತೆಯುಳ್ಳ ಹೊಸ ಒಪ್ಪಂದಕ್ಕೆ ಇಟಲಿಯು ಒಪ್ಪಲು ಸಿದ್ಧವಿದೆಯೆಂದೂ ತಿಳಿಯಲಾಗಿದೆ.

ಇಟಲಿಗೆ ಈಗ ದೊರೆತಿರುವ ಪ್ರಾಂತ್ಯಗಳು ಸಾಲವೆಂದೂ, ಎರಿಟ್ರಿಯಾ ಮತ್ತು ಇಟಲಿಯನ್ ಸೋಮಾಲಿಲೇಂಡನ್ನು ಜೋಡಿಸುವಷ್ಟು ಪ್ರದೇಶಗಳು ಇಟಲಿಗೆ ಸಿಕ್ಕಬೇಕೆಂದೂ, ಅಬಿಸೀನಿಯಕ್ಕೆ ಕೊಡಲಾಗುವ ಬಂದರಕ್ಕೆ ಹೋಗುವ ಮಾರ್ಗವು ಇಟಲಿಯ ಎರಿಟ್ರಿಯಾದ ಮಧ್ಯದಿಂದಾಗಬೇಕೆಂದೂ ಹೊಸ ಶರತ್ತುಗಳನ್ನು ಇಟಲಿಯು ಕೇಳುತ್ತಿರುವದೆಂದು ಇಂಗ್ಲೆಂಡಿನ 'ಡೈಲಿ ಟೆಲಿಗ್ರಾಫ' ಪತ್ರಿಕೆಯು ಪ್ರಕಟಿಸಿದೆ.

ತಿರಸ್ಕಾರದಿಂದ ಅಬಿಸೀನಿಯರು ಖೇದಗೊಂಡಿರುವರು.

ಇಟಲಿಯು ರಾಜಿ ತೀರ್ಮಾನಗಳನ್ನು ತಿರಸ್ಕರಿಸಿದೆಂಬ ವರ್ತಮಾನದಿಂದ ಅಬಿಸೀನಿಯವು ಹೆಚ್ಚು ಖೇದಗೊಂಡಿರುವದು. ಯುದ್ಧಕ್ಕಾಗಿ, ಸಾರ್ವತ್ರಿಕ ಸೈನ್ಯ ಸೇರಿಸುವ ಟಿಪ್ಪಣಿಗಳನ್ನು ಸಾರ್ವಭೌಮರು ಕೂಡಲೇ ಹೊರಡಿಸಬೇಕೆಂದು ಕೆಲವರು ಸೂಚಿಸಿರುವರು.

ಫ್ರಾನ್ಸ್ ಜರ್ಮನಿಗಳಿಗೆ ವಿಸ್ಮಯ.

ಸಂಧಾನ ತೀರ್ಮಾನವು ಇಟಲಿಯಿಂದಲೂ ಸ್ವೀಕೃತವಾಗುವದೆಂಬ ಭರವಸೆಯಲ್ಲಿದ್ದ ಅನೇಕ ರಾಷ್ಟ್ರಗಳು ಈಗ ಇಟಲಿಯ ತಿರಸ್ಕಾರದಿಂದ ವಿಸ್ಮಯಗೊಂಡಿವೆ. ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಈ ಘಟನೆಯು ಅಧಿಕ ವಿಸ್ಮಯವನ್ನುಂಟುಮಾಡಿದೆ. ಇಂಗ್ಲೆಂಡದಲ್ಲಿ ವಿಸ್ಮಯ ವುಂಟಾದರೂ ಅನೇಕರು, ಇಟಲಿಯು ಇನ್ನು ತೀರ್ಮಾನಕ್ಕೆ ಒಪ್ಪುವದೆಂಬ ವಿಚಾರದಿಂದ ನಿರಾಶರಾಗಿಲ್ಲ.

ಅಬಿಸೀನಿಯದ ಯುದ್ಧಕ್ಕೆ ಸಿದ್ಧ.

ಟರ್ಕಿಯ ಸೇನಾನಾಯಕನಾದ ಜನರಲ್ ವಾಹಿದ್ ಪಾಶಾರವರೇ ಇಂದಿನ ಅಬಿಸೀನಿಯಾದ ಸೇನಾಧಿಪತಿ. ಇವರ ನೇತೃತ್ವದಲ್ಲಿ ಅನೇಕ ಬಂದೋಬಸ್ತುಗಳು ನಡೆಯುತ್ತಲಿವೆ. ಎತ್ತರವಾದ ಗುಡ್ಡಗಳಲ್ಲಿ ಸಾವಿರ ಗಟ್ಟಿ ಸೈನಿಕರು ಇಟಲಿಯವರ ಧಾಳಿಯನ್ನು ನಿರೀಕ್ಷಿಸುತ್ತಲಿರುವರು, ಅನೇಕ ಕೋಟೆಗಳನ್ನು ಸುರಂಗಗಳನ್ನು ನಿರ್ಮಿಸಿರುವರು. ಸ್ತ್ರೀಯರ ಉತ್ಸಾಹವು ಅವರ್ಣನೀಯವಾಗಿದೆ. ಸ್ತ್ರೀಯರೇ ಸೇನಾಧಿಕಾರಿಗಳಾಗಿ ಸೈನ್ಯಗಳನ್ನು ನಡೆಸುತ್ತಲಿರುವರು.

ಇಟಲಿಯ ಯುದ್ಧ ಸನ್ನಾಹ.

ಈ ವಾರ ಇಟಲಿಯಿಂದ ಅಬಿಸೀನಿಯಾದ ಎಲ್ಲೆಕಟ್ಟಿನಲ್ಲಿರುವ ಇಟಲಿಯ ಪ್ರಾಂತ್ಯಗಳಿಗೆ 6,000 ಸೈನಿಕರನ್ನೂ, ಎಂಜಿನೀಯರರು, ಡಾಕ್ಟರರು, ಮತ್ತು ಇತರ ಯುದ್ಧೋಪಕರಣಗಳನ್ನು 5 ದೊಡ್ಡ ಯುದ್ಧನಾವೆಗಳಲ್ಲಿ ಸಾಗಿಸಿದರು. 2000 ಸೈನಿಕರು [illegible] ಇಟಲಿಯು ಕಳಿಸಿರುವದು. ಯುದ್ಧವಾದಲ್ಲಿ ಇಟಲಿಯ ಸೋಮಾಲಿಲೇಂಡ, ಎರಿಟ್ರಿಯಾ, ಮಸ್ಸಾವಾ ಮುಂತಾದ ಪ್ರದೇಶಗಳು ಯುದ್ಧ ಕ್ಷೇತ್ರಗಳಾಗಿ ನಿರ್ಧಾರಿತವಾಗುವವೆಂದು ಅಲ್ಲಿನ ನಿವಾಸಿಗಳಿಗೆ ಎಚ್ಚರಿಕೆಗಳನ್ನು ಕೊಟ್ಟಿರುವರು.

ಇಟಲಿಯ [illegible]—ಅಬಿಸೀನಿಯಾದ [illegible]

ಇಟಲಿಗೆ ಅಬಿಸೀನಿಯಾದ ಎಲ್ಲೆಕಟ್ಟಿನಲ್ಲಿರುವ ತನ್ನ ಪ್ರಾಂತ್ಯಗಳಿಗೆ ಸೈನ್ಯ ಕಳಿಸಲು ಮತ್ತು ಯುದ್ಧ ಸನ್ನಾಹಗಳನ್ನು ಮಾಡಲು ಇಂದಿನ ವರೆಗೆ 2500 ಮಿಲಿಯನ್ ಲೈರ್ (ಇಟಲಿ ನಾಣ್ಯ) ವೆಚ್ಚವಾಗಿದೆ. ಇನ್ನು 12 ಮಿಲಿಯ [illegible] ಇಟಲಿಯು [illegible] ಇನ್ನು [illegible] ತಮ್ಮ [illegible]

ಅಬಿಸೀನಿಯಾದಲ್ಲಿ ಈಗ 1 ಮಿಲ್ಲಿಯ [illegible] ಸೈನಿಕರಿರುವರು. [illegible] ಇದಲ್ಲದೆ [illegible]

Reg. No. M. 1550. 27-9-1938

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೊಳ್ಳೆನ ಮುದ್ರಣಾಲಯ "ಕೊಡಗು" ಪ್ರೆಸ್, ಮಡಿಕೇರಿ. ಪತ್ರಿಕೆಯ ವಿಷಯಕ್ಕೆ ಕಛೇರಿ ವಿಚಾರಿಸಿ.

ಮುಂಗಡ ಚಂದಾ ರೂ. ೩-೮-೦. ಸಂಪಾದಕ—ಸಂದ್ಯಂಡ ಬಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫] ಮಡಿಕೇರಿ, ಸನ್ ೧೯೩೮ನೇ ಇಸವಿ ಸಪ್ಟಂಬರ್ ತಾರೀಕು ೨೭ ನೇ ಶುಕ್ರವಾರ. [ಸಂಚಿಕೆ ೩೯

By Appointment
To H. E. The Governor of Madras.

CUPS AND MEDALS.

Telephone: 3145

Telegrams: 'PRECIOUS.'



V. SUBRAMANIA IYER.
Jeweller, & Diamond Merchant,
52—45 2 & 3 Kuppumutha Street Perumalteswarampet. MADRAS. POST BOX 423 TRIPLICANE.
Catalogues & special designs with quotations (free) on enquiry.

THE CANARA BANKING CORPORATION UDIPI, LTD.,

Established 1906.] [Incorporated in British India.
Head office—UDIPI (S. Kanara.)

It will pay you if you call at our offices at
MERCARA or VIRARAJENDRAPET

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) Production of pass books unnecessary at each withdrawal.
(3) Accounts transferred from one office to another free of any charges.
(4) Cumulative Deposits—a speciality.
Advances granted on approved securities on easy terms.
All kinds of banking business transacted. For further particulars please apply to any of our offices.

Udipi. 20-7-1938. 52—46 M. Srinivasa Prabhu, Manager.

ಕಷ್ಟಗಳಲ್ಲಿ ನಿಷ್ಪಕ್ಷಪಾತವಾಗುವವು ... ಸ್ಥಿತಿ ಮತ್ತು ಸಂಖ್ಯೆಗಳು ನಿಮ್ಮಿಂದವನ್ನು ವ್ಯಕ್ತಗೊಳಿಸುವವು.

"ಜನರಲ್ ಅಷ್ಯೂರೆನ್ಸ್" ಏಜೆನ್ಸೀ.

ಈ ವಿಮಾ ಸಂಸ್ಥೆಯು ... ಶೋಧನೆಗಳನ್ನು ... ಕಾಲಗಳಿಂದ ಧೃಢಪಡಿಸುವದು.

ಚಾಲ್ತಿಯಲ್ಲಿರುವ ವಿಮೆಗಳು (ಕೋಟ್ಯ) 265 ಲಕ್ಷ
ಈ ವರೆಗೆ ವಿಮೆ ... ಕೊಟ್ಟವರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಕೋಟ್ಯ) ರೂ. 16 ಲಕ್ಷ
ವಿಮಾ ಪತ್ರಗಳ ... ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ
... 25% } { ... 20%

... ವಿಶೇಷ ಲಾಭದಾಯಕ.
... ಬರೆಯಿರಿ:—
ಮ. ಬಿ. ಭಾರ್ಗವ, ಎಂ. ಎ. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ... ಲಿ., ಅಜ್ಮೀರ್. ಅಥವಾ:—
... ಎಸ್ ಎಸ್ ಅಯ್ಯಂಗಾರ್
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ... 3ನೇ ರೋಡು.
52—17 ಬೆಂಗಳೂರು ...

ಪ್ರಕಟಣೆ.

[illegible]
(1922[illegible])

		ರೂ.
[illegible]	—	50,000— 0—0
[illegible]	—	36,030— 0—0
[illegible]	—	2,48 3,5—14—8
[illegible]	—	94,623— 6—0

[illegible]

[illegible] 4-8-08 [illegible]

[illegible]

ತಾರೀಖು 1- 9 -1935

ನೋಟೀಸು.

[illegible] "ಕೊಡಗು" [illegible]

[illegible]

"ಕೊಡಗು" ಲಿಮಿಟೆಡ್,
ಮಡಿಕೇರಿ.

[illegible]

[illegible]

"ಕೊಡಗು" ಲಿಮಿಟೆಡ್,
ಮಡಿಕೇರಿ.

EMPIRE OF INDIA LIFE ASSURANCE CO., LTD.

ANNOUNCEMENT.

All our policyholders in Coorg are hereby informed that to give facilities to them to pay their premiums etc., we have made arrangements with the Canara Banking Corporation, Udipi, Ltd., Mercara and Virarajendrapet to receive premiums etc. on our behalf at par and our policyholders may therefore pay their premiums etc., to them to save remittance charges.

Branch Secretary,
EMPIRE OF INDIA LIFE ASSURANCE CO., LTD.,
152/3, Commercial Street Bangalore.

52—46

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

[illegible] (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ [illegible]

[illegible] ಪ್ರಿಮಿಯಂ	ರೂ.	7,62,42,761
[illegible]	ರೂ.	3,14,01,970
[illegible] ಪಾಲಿಸಿಗಳು	ರೂ.	54,20,38,519
[illegible]	ರೂ.	16,29,86,814
ಫಂಡ್ಸ್ [illegible]	ರೂ.	15,53,88,863

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ [illegible]

[illegible] ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ [illegible]

[illegible]

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

[illegible]

[illegible]

ಓರಿಯಂಟಲ್ ಬಿಲ್ಡಿಂಗ್ಸ್, [illegible] ಬೆಂಗಳೂರು.

ಯಂ. ವಿ. [illegible] ನಾಯುಡು
([illegible])

52—30

ಶಿಕಾರಿಗೆ ಬೇಕಾಗುವ ನಾನಾ ವಿಧದ

[illegible]

[CURRENT CATALOGUE FREE.

The Bombay Armoury,
329—331, Abdul Rehman Street,
BOMBAY, 3.

26—4

Printed & published by P. I. Belliappa at "Kodagu" Press, Mercara for "Kodagu" Ltd.

[illegible]

'ಮುಪ್ಪಿದನು ಮರೆತು ಮಗುವಿನಂತೆ ... [illegible]

ಒಂದು ... [illegible] ... ದೇಶದ ... ಜನರ ... ಸ್ವತಂತ್ರ ... ಆರೋಗ್ಯದಿಂದಲೂ ... ಪರಿಪಾಲಿಸಬೇಕಾದ ... ಆರೋಗ್ಯದಿಂದ ... ಯಮಪುರಿಯನ್ನು ... ದುರ್ಗಂಧದ ... ಇದಲ್ಲದೆ ... ಬಲಿ ... ಪಡೆಯಬೇಕು ... ಬಂಧಿಸಲ್ಪಟ್ಟಿರುವ ... ಜನರಾದ ... ಗೊತ್ತಾಗುವದಿಲ್ಲ.

[illegible] 'ಕೆ. ಸಿ.'

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜ ... ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ... ಮಕ್ಕಳ ... ಒಂದು ಅಪೂರ್ವ ... ಇಲ್ಲ. ... 50 ವರ್ಷಗಳಿಂದ ಉಪಯೋಗಿಸಲ್ಪಡುತ್ತಿರುವ ... ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

... ಡೋಂಗರೆ ಬಾಲಾಮೃತವು ಒಂದು ... ಎಲ್ಲ ಕಡೆಗಳಲ್ಲಿ ದೊರೆಯುವುದು.

... ಡೋಂಗರೆ ... ಬೊಂಬಾಯಿ.

ಸೆಲ್ಫ್ ಇಂಗ್ಲಿಷ್ ಸ್ಟಡಿ.

... ಇಂಗ್ಲಿಷ್ ... 2 ತಿಂಗಳಲ್ಲಿ ... 884 ಪೇಜುಗಳ ದೊಡ್ಡ ಪುಸ್ತಕ ...

ಕ್ರಯ ಪುಸ್ತಕ 1ಕ್ಕೆ ರೂ 2

METHA & CO,
11 Peryanayakaran Street,
12—7 G. T. Madras

ರೋಲ್ಡ್ ಗೋಲ್ಡ್ ರಿಸ್ಟ್ ವಾಚ್.

ಈ ಗಡಿಯಾರಗಳು ... ಈ ಗಡಿಯಾರಗಳಿಗೆ 5 ವರ್ಷ ... ಗ್ಯಾರಂಟಿ ಕೊಡುತ್ತೇವೆ. ಕ್ರಯ 1ಕ್ಕೆ 5—8—0.

METHA & CO.
11 Peryanayakaran Street.
12—7 G. T. Madras

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ... ಮಿಶ್ರಿತ.

... ಧಾತು ... ಜೀರ್ಣ ಶಕ್ತಿಯನ್ನು ... ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಮಲೇರಿಯಾ ನಿವಾರಿಣಿ.

... ಜ್ವರ, ... ಜ್ವರ, ... ಜ್ವರ, ... ಜ್ವರ, ... ಜ್ವರ, ... ಜ್ವರ, ... ಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ... ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ... ಮೂತ್ರ ದ್ವಾರದಿಂದ ... ಧಾತು ಹೋಗುವುದು, ... ದಿವ್ಯ ಔಷಧ

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಬಾಲಗ್ರಹ ಗುಳಿಗೆ—ಮಕ್ಕಳ ಎಲ್ಲಾ ... ರಾಮಬಾಣ.

... —ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

... —ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—5—0.

...—ಬಾಟ್ಲಿ 1ರ ರೂ. 1—0—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಾರ್ಮಸಿ ..., ನಂಬರು 1, ಬೆಂಗಳೂರು.

(1) ... ಮಡಿಕೇರಿ (ಕೊಡಗು).

ನಮ್ಮ ಔಷಧಿ (2) ... ಕುಂದಾಪುರ,

... (3) ... ನಂ. 4.

52—11 (4) ... 91, ... ಬೆಂಗಳೂರು ಸಿಟಿ,

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

... ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—30 ಬೆಂಗಳೂರು.

ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವ ನಿಬಂಧನೆಗಳ ನಿಷೇಧ.

ದೇಶದವರಿಗೆಂದೂ ಸಮ್ಮತವಲ್ಲ.

ರಾಮಸ್ವಾಮಿ ಕಣಿವೆಯವರ ಪಬ್ಲಿಕ್ ಮೀಟಿಂಗು.

ತಾ. 15-9-35ರಲ್ಲಿ ರಾಮಸ್ವಾಮಿ ಕಣಿವೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಮೆ. [illegible] ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಈ ಸಭೆಗೆ ಸೋಮವಾರಪೇಟೆಯಿಂದ ಶ್ರೀಮಾನ್ [illegible] ಬಂದಿದ್ದರು. ಕಣಿವೆ [illegible] ಸುಮಾರು 50 ಜನಗಳ ವರೆಗೆ [illegible] [illegible]

[illegible]

1. [illegible] ನಂಬರು 67 ತಾ. 28-6-35ರ [illegible]

2. [illegible]

3. [illegible] 90 ದಿವಸ [illegible]

4. [illegible]

5. ಗಂಧದ ಮರಗಳ [illegible]

6. ಇದೇ ಸೆಪ್ಟಂಬರ್ ತಿಂಗಳ ಕೊಡಗು ಗೆಜೆಟಿನಲ್ಲಿ [illegible] ತಾ. 10-8-35ರ [illegible]

7. ಈ ನಿರ್ಣಯಗಳ ನಕಲು ಚೀಫ್ ಕಮಿಷನರ್ ಸಾಹೇಬರಿಗೂ, ಕಮಿಷನರ್ ಸಾಹೇಬರಿಗೂ, ಚೀಫ್ ಫಾರೆಸ್ಟ್ ಆಫೀಸರರಿಗೂ, 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೂ ಅಧ್ಯಕ್ಷರು ಕಳುಹಿಸಬೇಕು.

[illegible]
(ಅಧ್ಯಕ್ಷ)

ಸೋಮವಾರಪೇಟೆ ಪಬ್ಲಿಕ್ ಮೀಟಿಂಗು.

ತಾ. 13-9-35 ರಲ್ಲಿ ಸೋಮವಾರಪೇಟೆ [illegible] ನಡೆದ ಮೀಟಿಂಗಿನ ವಿವರ:-

ಸುಮಾರು 150 ಜನಗಳ ವರೆಗೆ ಸೇರಿದ್ದ [illegible] ಮ. ರಾ. [illegible] ನಾರಾಯಣ ಶೆಟ್ಟರು ಈ ದಿನದ ಸಭೆಗೆ ಅಧ್ಯಕ್ಷರಾಗಬೇಕೆಂದು [illegible] ಅನುಮೋದಿಸಿದ ನಂತರ ಸಭಿಕರೆಲ್ಲರೂ ಒಪ್ಪಿದರು. ಮೆ. ನಾರಾಯಣಶೆಟ್ಟರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಈ ದಿನದ ಸಭೆಯ [illegible] ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸ್ ಕೊಡಲು ಏರ್ಪಡಿಸಿರುವ ನಂಬ್ರ 67 ತಾ. 28-6-35ರ [illegible] ಚೀಫ್ ಕಮಿಷನರ್ ಸಾಹೇಬರವರಿಗೆ 25-9-35 [illegible]

ಅಧ್ಯಕ್ಷರ ಅನುಮತಿಯಿಂದ ಸಭೆಯಲ್ಲಿ ಮೆ. [illegible]

[illegible]

1. 'ಹಾಲಿ ಕೃಷಿಕರ ರಿಡೀಮ್ಡ್ ಜಾಗಗಳಲ್ಲಿನ ಗಂಧದ ಮರಗಳಿಗೆ [illegible] 75% [illegible]

2. (a) [illegible] (b) [illegible]

3. [illegible] 90 ದಿವಸ [illegible]

4. ಇದೇ ಸೆಪ್ಟಂಬರ್ ತಿಂಗಳ ಕೊಡಗು ಗೆಜೆಟಿನಲ್ಲಿ [illegible] 3 ಗಂಧದ ಮರ [illegible]

[illegible] ಕೊಡಲ್ಪಟ್ಟ ನಂಬರು 85 ತಾ. 10-8-35ರ [illegible]

5. ದೇಶೀಯರಿಂದ ಚುನಾಯಿಸಲ್ಪಟ್ಟ [illegible] ಒಂದು ನಾನ್ ಅಫಿಷಿಯಲ್ ಅಡ್ವೈಸರಿ ಕಮಿಟಿಯನ್ನು ಏರ್ಪಡಿಸಿ ಅದರ ಮೂಲಕ [illegible] ಗಂಧದ ಮರದ [illegible]

6. ಈ ದಿನದ ಠರಾವುಗಳೆಲ್ಲವನ್ನೂ ಚೀಫ್ ಕಮಿಷನರ್ ಸಾಹೇಬರಿಗೂ, ಕಮಿಷನರ್ ಸಾಹೇಬರಿಗೂ [illegible] ಕಳುಹಿಸಿಕೊಡಬೇಕೆಂದು [illegible]

7. ಈ ದಿನದ ನಡವಳಿಕೆಗಳೆಲ್ಲವನ್ನೂ 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೆ ಕಳುಹಿಸಬೇಕಾಗಿ [illegible]

[illegible] ನಾರಾಯಣಶೆಟ್ಟಿ,
(ಅಧ್ಯಕ್ಷ)

ಗಂಧದ ಮರಗಳಿಗೆ ಬೋನಸು.

ತಾ. 31-8-35 ರ 'ಕೊಡಗು' ಪತ್ರಿಕೆಯಲ್ಲಿ [illegible] ಗಂಧದ ಮರಗಳಿಗೆ ಬೋನಸು [illegible]

[illegible]

೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ.

ಅಧ್ಯಕ್ಷರು:—ಶ್ರೀ ಆರ್. ಆರ್. ಸುಬ್ಬರಾಯರವರು.

ಬರುವ ಡಿಸೆಂಬರ್ ತಿಂಗಳಲ್ಲಿ ದೇವಂಗಿರಿಯ ಪಟ್ಟಣದಲ್ಲಿ ನಡೆಯಲಿರುವ ೨೧ನೇ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಬೇಕೆಂದು ಅಲ್ಲಿಯ ಸ್ವಾಗತ ಮಂಡಲಿಯೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೂ ಬೇಡಿಕೊಂಡ ಮೇರೆಗೆ ಮೈಸೂರು ಸಂಸ್ಥಾನದ ವಿದ್ಯಾ ಪ್ರಚಾರಕ ಇಲಾಖೆಯ ಡೈರೆಕ್ಟರರಾದ ಶ್ರೀಮಾನ್ ಎಸ್. ಎಸ್. ಸುಬ್ಬರಾವ್ ಎಂ. ಎ (ಆಕ್ಸೊನಿಯನ್) ಬಾರ್-ಎಟ್-ಲಾ ರವರು ಅನುಗ್ರಹವಿಟ್ಟು ಒಪ್ಪಿರುತ್ತಾರೆ. ಘನ ವಿದ್ವಾಂಸರೂ ವಿದ್ಯಾಸೇವಾಧ್ಯಕ್ಷರೂ ಆಗಿ ಭಾರತದ ಸಕಲ ವಿದ್ವತ್ಸಂಸ್ಥೆಗಳಲ್ಲಿ ಮನ್ನಣೆ ಪಡೆದಿರುವ ಈ ಮಹನೀಯರು ಮುಂದಿನ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವುದು ಎಲ್ಲ ಕನ್ನಡಿಗರಿಗೂ ಸಂತೋಷಕರವಾಗಿರುವುದು.

ಸಾಹಿತ್ಯ ಸಮ್ಮೇಳನದ ಜೊತೆಗೆ ಕಲಾ ಪ್ರದರ್ಶನ ಮೊದಲಾದ ಅನೇಕ ಆಕರ್ಷಕವಾದ ಉತ್ಸವಗಳನ್ನು ಏರ್ಪಡಿಸಬೇಕೆಂದು ದೇವಂಗಿರಿಯ ಸ್ವಾಗತ ಮಂಡಲಿಯವರು ಪ್ರಯತ್ನ ಪಡುತ್ತಿದ್ದಾರೆ. ಎಲ್ಲ ಕನ್ನಡಿಗರೂ ಅಲ್ಲಿಗೆ ದಯಮಾಡಿ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪರಿಷತ್ತು ಬೇಡುತ್ತದೆ.

ಬೆಂಗಳೂರು ಸಿಟಿ, } ಸಿ. ಕೆ. ವೆಂಕಟರಾಮಯ್ಯ,
ತಾ॥ 12—9—1935. } (ಗೌ. ಕಾರ್ಯದರ್ಶಿ)

ಪತ್ರವ್ಯವಹಾರ.

[ಬರೆಯುವವರು ಪಡುವ ಅಭಿಪ್ರಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ]

ವೀರಶೈವ ವಿದ್ಯಾನಿಧಿ

ಶಿವಮೊಗ್ಗದ ವೀರಶೈವ ವಿದ್ಯಾನಿಧಿ ಸಂಘದ ಪ್ರೆಸಿಡೆಂಟರಾದ ಮಿ. ಹೆಚ್. ಕಾಳೇಗೌಡರಲ್ಲಿ ವಿನಂತಿ —ದೇಶದಲ್ಲಿ ಹಲವು ವಿದ್ಯಾಭಿವೃದ್ಧಿ ಸಂಘಗಳು ಬಹು ಉತ್ಸಾಹದಿಂದ ನಡೆಯುತ್ತಿವೆ. ಶಿವಮೊಗ್ಗದ ವಿದ್ಯಾಭಿವೃದ್ಧಿ ಸಂಘವು ನಾಲ್ಕು ವರ್ಷಗಳಿಂದ ಸುಪ್ತವಾಗಿರುವ ಕಾರಣವೇನೆಂದು ತಿಳಿಯದು. ಆದಕಾರಣ ಈ ಸಂಘದ ಅಧ್ಯಕ್ಷರಾದ ತಾವು ಸಂಬಂಧಪಟ್ಟ ಮೆಂಬರುಗಳಿಗೆ ತಿಳಿಸಿ ಸಂಘದ ಮೀಟಿಂಗನ್ನು ಕೂಡಲೇ ಸೇರಿಸಿ ಅದರ ಕಾರ್ಯಕಲಾಪಗಳನ್ನು ಮುಂದುವರಿಸಲು ಏರ್ಪಾಡು ಮಾಡಬೇಕಾಗಿ ಕೋರಿಕೆ.

ಜಿ. ಸಂಗಯ್ಯ.

[illegible] ಸ್ವಾಗತ.

[illegible] ಅವರು ಏಳು ತಿಂಗಳ ತಮ್ಮ ಕೊಡಗಿನ ಪ್ರವಾಸವನ್ನು ಮುಗಿಸಿಕೊಂಡು ಇದೇ ಸೆಪ್ಟಂಬರು ತಾರೀಕು 12 ನೇ ಗುರುವಾರ ದಿನ [illegible] ಪ್ರಯಾಣವಾಗಿರುವರಾಗಿ ತಿಳಿದುಬರುತ್ತದೆ. ಅಲ್ಲದೆ ಕೊಡಗಿನ [illegible] ಮುಂದಾಳತ್ವದಲ್ಲಿ [illegible] ವೇರ [illegible] ಸ್ಥಾಪಿಸುವದು ಯೋಗ್ಯವೆಂದು ದಿವಾನ್ ಬಹದ್ದೂರ್ [illegible] ಸ್ವಾಮಿಯವರು [illegible] ವ್ಯಕ್ತಗೊಳಿಸಿದ [illegible]

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟಿಯೊಡನೆ ಕೊಡುವೆವು.

ಬರೆದಿಟ್ಟಿರುವ ಪಟ್ಟಿ ಕಳುಹಿಸುವೆವು.

ASHOO TOSH DAW & CO.,

GUN MAKERS.

"DAW BUILDING" 184, DHARMTALA ST, CALCUTTA.

ಒಮ್ಮೆ ವಿಚಾರಿಸಿ ನೋಡಿ] [ಬಂದು ಪರೀಕ್ಷಿಸಿ

4—3] ನಿಮ್ಮ ಹಣದ [illegible] ವ್ಯರ್ಥ ಮಾಡಬೇಡಿ ನಮಗೆ ಕಳ್ಳ [illegible] ತರಿಸಿಕೊಳ್ಳಿ.

[illegible] ಕಾರ್ಯವನ್ನು ಕೈಕೊಳ್ಳುವುದಕ್ಕಾಗಿಯೂ ಮತ್ತು ಕೊಡಗಿನ ಶ್ರೀರಾಮೇಶ್ವರ ಕ್ಷೇತ್ರದ ಮುಂದಿನ ಅಭಿವೃದ್ಧಿ [illegible] ಒಂದು ಕರ್ತವ್ಯವೆಂದೂ, ಈ ಎರಡು ಮುಖ್ಯ ಉದ್ದೇಶದಿಂದ ಮುಂದಿನ ಮಹಾ ಸಂಕ್ರಮಣಕ್ಕೆ ನಡೆಯುವ ಗಂಗಾಸ್ನಾನದ ಯಾತ್ರೆಯನ್ನು ಮುಗಿಸಿಕೊಂಡು ಮತ್ತೊಂದು ಪ್ರವಾಸಕ್ಕಾಗಿ ಕೊಡಗಿಗೆ ಬರುತ್ತಾರಾಗಿ ತಿಳಿದುಬರುತ್ತದೆ.

'ದೇಶೀಯ.'

[illegible]

ಮಹನೀಯರೇ,

ಬೆಂಗಳೂರಲ್ಲಿ ಟೈಲರಿಂಗ್ ವಿದ್ಯಾಭ್ಯಾಸ ಮಾಡುತ್ತಿರುವ ಮಿ. ಡಿ. ಕೆ. ಮೇದಪ್ಪನವರು ಕಳೆದ ತಿಂಗಳ 27 ನೇ ತಾರೀಕಿನಲ್ಲಿ, ಅವರ ಕೆಲಸ ತೀರಿ ಹಿಂದಕ್ಕೆ ಬರುವ ಸಮಯದಲ್ಲಿ, ಅವರನ್ನು ಬೆಂಗಳೂರಿನ ಮೂರು [illegible], [illegible] ಬಂದವರೆಂತಲೂ, ಅಲ್ಲಿ ಒಬ್ಬರ ಮನೆಕಳ್ಳತನವಾಗಿ [illegible] ಚಿನ್ನದ ಸುಮಾರು [illegible] ಬೆಲೆ ಬಾಳುವ ಆಭರಣಗಳು ಸಿಕ್ಕಿತ್ತೆಂತಲೂ, ಅದನ್ನು [illegible] ಉಂಟಾಗುತ್ತದೆಂದು ಬೆಂಗಳೂರಿಗೆ ಬಂದು ಬಿಟ್ಟಿದ್ದೇವೆಂತಲೂ, ಅದನ್ನು ತಮಗಾಗಿ ಬೇಕಾದರೆ 400 ರೂಪಾಯಿಗೆ ಕೊಟ್ಟುಬಿಡುತ್ತೇವೆಂದು ಹೇಳಿ, ಚಿನ್ನತ್ತಿಂತಲೂ ಚೆನ್ನಾಗಿ ಹೊಳೆಯುತ್ತಿರುವ [illegible] ತೋರಿಸಿದರಂತೆ. ಆದರೆ ಮೇದಪ್ಪನವರಿಗೆ ಅವರ ಮೇಲೆ ಸಂಶಯ ಹುಟ್ಟಿದ್ದರಿಂದ, ಈ ವಿಷಯವನ್ನು ಸಬ್ ಇನ್ಸ್ಪೆಕ್ಟರ್ ಮಿ. [illegible] ಅವರಿಗೆ ತಿಳಿಸಿ, ಅವರನ್ನು ಹಿಡಿಯಬೇಕೆಂದು ಬಂದು [illegible] ಮಿ. ಅಪ್ಪಚ್ಚನವರು ಮತ್ತು ಮೇದಪ್ಪನವರು ಬಹು [illegible] ಬೆನ್ನಟ್ಟಿ, ಹಿಡಿದು ತಂದರೆಂತಲೂ, ಈ ಕೇಸಿನಲ್ಲಿ ಕಳೆದ ವಾರ ಈ ಕಳ್ಳರಿಗೆ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಆರಾರು ತಿಂಗಳು ಕಠಿಣ ಶಿಕ್ಷೆ ವಿಧಿಸಿರುವರೆಂದೂ ಮತ್ತು ಮೇದಪ್ಪನವರ ಈ ಸಾಹಸಕ್ಕೆ ಮೆಚ್ಚಿ ಬಂದ [illegible] ಪೋಲೀಸು (ರಿವಾರ್ಡ್) ಇನಾಮು ಕೊಡುವ ಹಾಗೆ ಬರೆದಿರುವರೆಂದೂ ಬೆಂಗಳೂರಿನ 'ಡೈಲಿ ಪೋಸ್ಟ್' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.

'ತಿಳಿದವ.'

ತಪ್ಪಿ ಹೋದ ಆನೆಯನ್ನು ಹಿಡಿದದ್ದು.

ಅಯ್ಯಾ,

ಈ ತಾ 6ರ 'ಕೊಡಗು' ಪತ್ರಿಕೆಯಲ್ಲಿ ತಿತಿಮತಿ ರೇಂಜಿನಲ್ಲಿ ಬಿಟ್ಟು ಹೋದ 'ಬುಧಿಲ'ವೆಂಬ ಆನೆಯನ್ನು ಆ ರೇಂಜಿನ ಫಾರೆಸ್ಟ್ ಗಾರ್ಡಿಗಿರುವ [illegible] ಮುದ್ದಪ್ಪನವರು ಶಕ್ತಿ ಮೀರಿ ಬಹಳ ಸಾಹಸದಿಂದ ತಂದು ಹಿಡಿದರೆಂದು ಪ್ರಕಟಿಸಿರುವುದು ನಿಜವಾದ ಸಂಗತಿಯಲ್ಲ. ತಾ 23—8—35 ರ ಸಾಯಂಕಾಲ ಸದರಿ ಮುದ್ದಪ್ಪನವರು ಕುರುಬರೊಡಗೂಡಿ ಕೆಲಸದಿಂದ ವಾಪಾಸು ಬರುತ್ತಿದ್ದಾಗ್ಯೆ ದಾರಿಯಲ್ಲಿ ಅಂದರೆ ಮತ್ತಿಗೋಡ್ ಫಾರೆಸ್ಟಿನಲ್ಲಿ ಸದರಿ ಆನೆಯನ್ನು ಕಂಡು ಆ ಸಾಯಂಕಾಲವೇ ತಿತಿಮತಿ ರೇಂಜಾಫೀಸರವರಿಗೆ ತಿಳಿಸಿದರು. ಕೂಡಲೆ ರೇಂಜಾಫೀಸರವರು ಅದಕ್ಕೆ ಸಲುವಾಗಿ ಕಳ್ಳ ಬಂದೋಬಸ್ತು ಮಾಡಿದರು. ಅದೇ ಮೇರೆ ಮಾರನೆ ದಿನ ಬೆಳಿಗ್ಗೆ ಸದರಿ ಮುದ್ದಪ್ಪನವರೂ, ಆನೆ ಮಾವುತರೂ, ಬೇರೆ ಕೆಲವು ಜನರೂ 2 ಸಾಕಾನೆಗಳನ್ನು ತೆಗೆದುಕೊಂಡು ಮೊದಲು ದಿನ ಆನೆಯನ್ನು ಕಂಡ ಸ್ಥಳಕ್ಕೆ ಹೋಗಿ ಅಲ್ಲಿ ಸುತ್ತ ಮುತ್ತಲೂ ಹುಡುಕುವಷ್ಟರಲ್ಲಿ ಅಂದರೆ ಸಾಧಾರಣ 12 ಗಂಟೆಯ ಸಮಯಕ್ಕೆ ಆನೆಯನ್ನು ಕಾಣಲು ಸಿಕ್ಕಿ ಅವರೆಲ್ಲ ಸೇರಿ ಆನೆಯನ್ನು ಹಿಡಿಯಲು ಪ್ರಯತ್ನಪಡುತ್ತಿರುವಾಗ್ಯೆ ಆನೆಯು ಬೆದರಿ ಸದರಿ ಮುದ್ದಪ್ಪನವರು ನಿಂತುಕೊಂಡಿದ್ದ ಸ್ಥಳಕ್ಕಾಗಿ ಓಡುವಾಗ್ಯೆ ಅವಕ್ಕೆ ಮುಂಚಿತವಾಗಿ ಕಾಲು ಜಾರಿ ಬಿದ್ದಿದ್ದ ಮುದ್ದಪ್ಪನವರ ಮೇಲೆ ದಾಟಿ ಹೋಗುವಾಗ್ಯೆ ಆನೆಯ ಕಾಲು ತಗಲಿ ಮುದ್ದಪ್ಪನವರಿಗೆ ಸ್ವಲ್ಪ ಜಖಂ ಆಯಿತು. ಆ ಕೂಡಲೆ ಅವರು ವೀರಾಜಪೇಟೆ ಆಸ್ಪತ್ರೆಗೆ ಒಯ್ಯಲ್ಪಟ್ಟರು. ಅನಂತರ ಸಾಧಾರಣ 3 ಗಂಟೆಯ ಮೇಲೆ ಸದರಿ ಆನೆಯನ್ನು ಬಾಕಿ ಇದ್ದವರು ಸಾಕಾನೆಗಳ ಸಹಾಯದಿಂದ ಹಿಡಿದದ್ದಾಗಿದೆ. ಆನೆಯನ್ನು ಹಿಡಿಯುವುದರಲ್ಲಿ ಸದರಿ ಮುದ್ದಪ್ಪನವರು ಯಾವ ಹೆಚ್ಚಿನ ಭಾಗವನ್ನೂ ವಹಿಸಿಕೊಂಡಿರುವುದಿಲ್ಲ.

ಕಂಡಾದ ಕಂಡವ.

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ

ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆನೋವು, ಸೊಂಟನೋವು, ನಿಶ್ಶಕ್ತಿ, ಬೆನ್ನುಮೂಳೆನೋವು, ಸೋಮರೋಗ, ಇವು ಮೊದಲಾದ [illegible] ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭರಕ್ಷಿಣಾಯು.

ದೊಡ್ಡ ಶೀಷೆ 2—8—0.
ಅರ್ಧ ಶೀಷೆ 1—6—0.

ನವರತ್ನ

ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ

[illegible] ನಿಶ್ಶಕ್ತಿ ಪಚನ [illegible] ರಕ್ತವೃದ್ಧಿ [illegible] ಕಾಂತಿಯುಳ್ಳ ಮಾಡುವ [illegible] ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಶೀಷೆ 1—8—0, ಅರ್ಧ ಶೀಷೆ 0—13—0

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ

ಸ್ಟೋಕಿಸ್ಟ್—ವಿ. ಎಸ್. ಪೂಜಯ್ಯ, } ಏಜೆಂಟ್—ಡಿ. ಆ. [illegible],
52—20 ಒಟ್ಟೆ ವ್ಯಾಪಾರ, ಪೊನ್ನಂಪೇಟೆ } [illegible]ಪೇಟೆ, ಮಡಿಕೇರಿ.

[illegible] ನವರತ್ನ ಫಾರ್ಮಸಿ, [illegible]

FRASER'S

FOOTWEAR

have

the HALLMARK of

distinctive finish,

upto-date style,

fine workmanship

best materials.

AMAZING VALUE FOR LOW PRICE.

HARDWEAR BOOTS & SHOES,

for estate and monsoon a speciality.

G. W. FRASER & CO., CALICUT.

14—2

ನೈಸರ್ಗಿಯರ ಕೃಷ್ಣ ಭೂಕಂಪ ಫಂಡಿಗೆ

ಹಣ ಕಳಿಸಿದ ಪೂರೈಕೆ ಪಟ್ಟಿ ಮಹನೀಯರು.

(ಕೆಳಗಿನ ಕಾರ್ಯಾಲಯದ ಅಧಿಕಾರಿಗಳ)

ಹಿಂದಿನ ವರದಿ	3.(5	14	10
ಫ್ರೀಡಮ್ ಪ್ರೆಸ್ ಪಾರ್ಟಿ ದಕ್ಷಿಣಗಾರರ ವರದಿ	5	0	(
ಭಾಗವತುಲದ್ದ ಪಾರ್ಟಿ ದಕ್ಷಿಣಗಾರರ ವರದಿ	1	6	0
ಈ ವಾರದ ಇಪ್ಪತ್ತೈದರ ಮೊಬಲಗು	10	15	0
ಒಟ್ಟು	3186	3	10

ಪ್ರಕಟಣೆ.

ಕೆಳಗಿನ ಕೆಲವು ಸ್ಥಳದ ದೇವಸ್ಥಾನಗಳಲ್ಲಿ ಪರಸಿನ ಕಡವು ಮುದಪ್ಪನ ದೇವಸ್ಥಾನದ ಪರವಾಗಿ ಭಕ್ತ ಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರೆಂದು ತಿಳಿಯಬಂದಿದೆ. ಅಲ್ಲದೆ ಮಲಯಾಳದಲ್ಲಿರುವ ಪರಸಿನಕಡವು ಮುದಪ್ಪನ ದೇವಸ್ಥಾನದ ಹೆಸರಿನ ಕಾಣಿಕೆ ಮತ್ತು ಹರಕೆಗಳನ್ನು ಆ ದೇವಸ್ಥಾನಗಳಲ್ಲಿ ಕೊಡಬಹುದಾಗಿ ಕೆಲವರು ಪತ್ರಿಕೆಗಳಲ್ಲಿ ಪ್ರಕಟಿಸಿ ಪರಸಿನಕಡವು ದೇವಸ್ಥಾನದಿಂದ ಆ ಕಾಣಿಕೆಗಳನ್ನು ಸ್ವೀಕರಿಸಲು ಕೆಳಗಿನವರನ್ನು ಯಾರನ್ನೂ ನೇಮಿಸಿರುವದಿಲ್ಲ. ಆದಪ್ರಯುಕ್ತ ಪೇಟ್ರಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದಾರರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೇಳುವ,

ಟಿ. ಯಂ. ಕ. ರಾಮನ್

ಮೆನೇಜರ್,

ಪರಸಿನಕಡವು. [26—15]

29—5—'35 ಪರಸಿನಕಡವು ಮುದಪ್ಪನ ದೇವಸ್ಥಾನ

Wanted.

Candidates for Telegraph and Station Master class. Allowance Rs 8. Uniform passage and quarter free. Service essential. Rules and Entrance form on annas eight.

Director
Royal Telegraph and Rly.
Duties College
Bombay No 20

1—3

ಅರವತ್ತು ವರ್ಷಗಳಿಂದ ಅನುಭವಸಿದ್ಧ ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ೭ ಆಣೆ ಬರೆಯಿರಿ ತಂಡಿಕೊಳ್ಳಿ

ಗಣೇಶ ರಾಮಚಂದ್ರ ಕರ್ಕಿ,

(12—1) ಮತ್ತು ಕಂಪನಿ,

ಗಿರಗಾಂವ, ಮುಂಬಯಿ.

SHIROMANI NARAYANACHARYA

Choukhamba Benares City.

ಕಾಶೀ ನಗರ, ಪುರಾತನ ಆರೋಗ್ಯದ ಆಶ್ರಯ ಕೇಂದ್ರ ... ಆರೋಗ್ಯವೇ ಪರಮ ಧನವಾಗಿದೆ ... ಆರೋಗ್ಯ ... ಔಷಧಿಗಳು ... ಪ್ರತಿಯೊಬ್ಬ ಮನುಷ್ಯನಿಗೆ ಅವಶ್ಯ ...

ಶಿರೋಮಣಿ ನಾರಾಯಣಾಚಾರ್ಯ,

52—7 ಚೌಖಂಬಾ, ಬನಾರಸ್ (ಕಾಶೀ.)

ವಜ್ರದ ಉಂಗುರಗಳು ಬಿಕ್ಕೆ ೧೨ ಆಣೆ.

ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಬಂಗಾರದಿಂದ ಕಟ್ಟಿದ ಕಟ್ಟಿವೆ. ಇದರ ಒಟ್ಟು ಬೆಲೆಗೂ ಕೇವಲ ೨ ಬಿಕ್ಕಿಗೆ ... ಒಟ್ಟು ಕೊಟ್ಟಿದೆ 1ಕ್ಕೆ 12 ಆಣೆ



3 ಉಂಗುರಗಳಿಗೆ 1 ಪೆಂಡೆಂಟನ್ನು, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನು, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಬಂಗಾರದ ರಿಸ್ಟ್ ವಾಚನ್ನು ಇನಾಮಾಗಿ ಕೊಡುತ್ತೇವೆ. ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿ ಕೊಡುತ್ತೇವೆ.

ವಿಳಾಸ—

Mehta & Co.,
Periyanayakaran Street,
G. T. Madras.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ

ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪ್ರಶಂಸಿಸಲ್ಪಟ್ಟು ಆಯುರ್ವೇದೀಯ ಶಾಸ್ತ್ರ ಮತ್ತು ವಾಸ್ತವಿಕ ಪದಾರ್ಥಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಮೆಡಲುಗಳನ್ನು ಪಡೆದು ಪದರ್ಶನದಲ್ಲಿ ಧಾರಾಳವಾಗಿ ಬಹುಮಾನದ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ಪದಾರ್ಥಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಪಂಚಕರ್ಮವಿಧಾನದಿಂದ ತಯಾರಿಸಿದ ಮಧುರವಾದ ಔಷಧ. ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಕ್ಷಯ, ಸ್ವಪ್ನದೋಷ, ಕೈಕಾಲು ಉರಿ, ತಲೆ ಸುತ್ತುವಿಕೆ ಮುಂತಾದವು ಗುಣವಾಗುವದಲ್ಲದೆ ಬೇಗ ಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನರ ದೌರ್ಬಲ್ಯದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಿನ ದೋಷ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಿಗ್ಗೆ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಂವ)

ಕೆಳಗಿನ ಏಜಂಟರು:—ಕೆ. ಶಿವಾಜೀರಾವ್ & ಬ್ರದರ್ಸ್, ಮಡಿಕೇರಿ.

ವಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

52—3 ಎ. ಎನ್. ಸುಬ್ಬಯ್ಯ ಏಜೆಂಟ್, ಗೋಣಿಕೊಪ್ಪಲು.

ಉತ್ತಮ ಪ್ರತಿಫಲ ಯಾವದರಲ್ಲಿ?



50 ಸಾಬೂನು — ಅಕ್ಕಸ್ಸಾಲಿಗರಿಂದ ಕೊಡಿರಿ, ಒಳ್ಳೆ ಸಿಟ್ಟಿ ಸಾಬೂನು



ಅಧಿಕಾಂಶಕ್ಕಿಂತ ಹೆಚ್ಚು ನೀರು ಬೆರೆತಿದ್ದು, ಚ ಟಿಕ್ಕೆ ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನು.

ಅಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿನ ಕಾರ್ಯ. ಹೆಚ್ಚಾಗಿ ನೀರು ಬೆರೆಸಿದ ಸಾಬೂನುಗಳು ಬೇಗ ತೀರಿಹೋಗುವವು. ಆದ್ದರಿಂದ ಸಾಬೂನನ್ನು ತೂಕ ಮಾಡಿರಿ. ಈ ಸಾಬೂನುಗಳಲ್ಲಿ 50% ರಷ್ಟು ನೀರು. 501 ಸಾಬೂನು ಬೇಗ ಕರಗುವುದಿಲ್ಲ ಮತ್ತು ಹೆಚ್ಚು ದಿನ ಬಾಳಿಕೆ ಬರುತ್ತದೆ!

501 Soap

ಹೆಚ್ಚು ಅಡಿಮ.
ಹಚ್ಚ ಬಾಳಿಕೆ.
ಕ್ರಯ ಅತೀ ಕಡಿಮೆ!

ಟಾಟಾ ಆಯಿಲ್ ಮಿಲ್ ಕಂಪನಿ, ಲಿಮಿಟೆಡ್ ... ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ಸಿಟಿ.

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕಂಪನಿ, ಲಿಮಿಟೆಡ್, ಮುಂಬಯಿ ಮತ್ತು ...

52—10. ಕೊಡಗಿನ ಡಿಸ್ಟ್ರಿಬ್ಯೂಟರ್—ಎ. ಎನ್. ಸುಬ್ಬಯ್ಯ, ಗೋಣಿಕೊಪ್ಪಲು, ಕೊಡಗು.

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಗಳ ಸಹಿತ, ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯ

ಎಂಬ ಕಾಮಶಾಸ್ತ್ರ

ಈ ಪುಸ್ತಕವು ಸೈನ್ಸ್ ಹಿಂದುಸ್ಥಾನದ ಭಾಷೆಗಳಲ್ಲಿ ... ಅನೇಕ ... ವಿಶದವಾಗಿ ... ಬಣ್ಣದ ಚಿತ್ರಗಳ ಸಹಿತ ... ಗಳ ಸಹಿತ ಛಾಯಾಚಿತ್ರಗಳು ... ಗನೊಳಗೆ 300 ಪೇಜುಗಳು. ಇಂದು ನಾನು ಪ್ರಕಟಿಸಿದ್ದೇವೆ. ಈ ಪುಸ್ತಕದಲ್ಲಿ ಸ್ತ್ರೀ ... ಗಂಡಸರಿಗೂ ...

ಸ್ತ್ರೀ ಪುರುಷರು ನಡೆಯಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸಂತಾನಕ್ಕೆ ಬೇಕಾದ ಅನೇಕ ಗುಪ್ತ ವಿಷಯಗಳು ... ಹೆಚ್ಚಾಗಿ ಸಂತಾನವಿಲ್ಲದಿರುವಿಕೆ, ಗರ್ಭನಿರೋಧ ... ಉಪಯೋಗದಿಂದಾಗುವ ಹಾನಿ, ಗರ್ಭಿಣಿ ಮತ್ತು ... ಉತ್ಪತ್ತಿ ... ಗುಪ್ತ ರೋಗಗಳ ಚಿಕಿತ್ಸೆ ... ಮಾನವ ಜೀವನದ ಮರ್ಮಗಳ ವಿವರ ಸಹಿತ ... ಇದನ್ನು ಸ್ತ್ರೀಪುರುಷರುಗಳಿಗೆ ಬೇಕಾದ ... ಪ್ರಿಂಟಾಗಿದೆ. ಬೆಲೆ ಪುಸ್ತಕ ಒಂದಕ್ಕೆ ರೂ. 1—0—0.

ವಿಳಾಸ—Mehta & Co.,
Periyanayakaran Street,

12—7 G. T. Madras

ವರ್ತಮಾನ ಸಂಗ್ರಹ.

ಒಳದೇಶ.

[illegible]

ಶ್ರೀಕೃಷ್ಣರಾಜೇಂದ್ರ [illegible] ಈ ತಾ. 17 ರಲ್ಲಿ [illegible]

[illegible] ಈ ತಾ. 14ರಲ್ಲಿ [illegible]

[illegible] 45 [illegible] ಈ ತಾ. 23 ರಲ್ಲಿ [illegible]

ಈ ತಾ. 13 ರಿಂದ 19 ರ ವರೆಗೆ [illegible] 4.48 [illegible]

[illegible] 1000 [illegible]

[illegible] ತಾ. 13 ರಲ್ಲಿ [illegible] ತಾ. 16 ರಲ್ಲಿ [illegible] ತಾ. 18 ರಲ್ಲಿ [illegible]

[illegible] ತಾ. 18 ರಲ್ಲಿ [illegible]

[illegible] 100 [illegible]

ಈ ತಾ. 28 ನೇ [illegible] 1 [illegible] 2 [illegible] 3. [illegible]

[illegible] 4 [illegible] 5 [illegible] 6 [illegible] 2 [illegible] 1 [illegible] 3 [illegible] 1 [illegible] 2 [illegible] 4 [illegible] 5 [illegible] 6 [illegible] 3 [illegible]

ಈ ತಾ. 17 ರಲ್ಲಿ [illegible] 'ಜಾನ' [illegible]

ಹಿಂದೂದೇಶ.

[illegible] 131 [illegible] ಪ್ರಕಟವಾಗಿದೆ.

ಈ ತಾ. 16 ರಲ್ಲಿ [illegible]

[illegible] (1929) [illegible] (1941) [illegible] 166 [illegible]

[illegible] 31 [illegible]

[illegible] 1 [illegible]

ವಿದೇಶ.

[illegible] 600 [illegible]

[illegible] 1 [illegible]

10 [illegible] 10 [illegible]

ಇಟಲಿ - ಅಬಿಸೀನಿಯಾ ಯುದ್ಧ ಪ್ರಾರಂಭವೋ?

[illegible] 5 [illegible]

[illegible] 2 [illegible]

[illegible]

ವಂದನೆಗಳು.

[illegible]

ಚಿಕ್ಕಣ್ಣದೇವ ಕೆ. [illegible]
ಸುಪರಿಂಟೆಂಡೆಂಟ್,
[illegible] ಡಿವಿಷನ್,
[illegible] ಎಸ್ಟೇಟ್ಸ್ ಲಿಮಿಟೆಡ್,
ನೀಲಗಿರಿ.

ನೋಟೀಸು.

[illegible]
1935ನೇ [illegible] ನಂಬರು 75.

ವಾದಿ— [illegible]

VS.

ಪ್ರತಿವಾದಿಗಳು—(1) [illegible]
(2) [illegible]

[illegible] 1ನೇ ಪ್ರತಿವಾದಿ [illegible] 2ನೇ ಪ್ರತಿವಾದಿ [illegible] 2ನೇ ಪ್ರತಿವಾದಿ [illegible] 29—6—1932 ರಿಂದ [illegible] 1ನೇ ಪ್ರತಿವಾದಿಯು [illegible] 2ನೇ ಪ್ರತಿವಾದಿಯಿಂದ [illegible] 1—10—1935 [illegible]

[illegible]
([illegible])

ಕೊಡಗು

ಸಪ್ಟೆಂಬರ್ ತಾ. ೨೦ ನೇ ಶುಕ್ರವಾರ ೧೯೩೫.

'ಕ್ರಿಮಿನಲ್ ಲಾ ಎಮೆಂಡ್ಮೆಂಟ್ ಬಿಲ್.'

ಕಾಂಗ್ರೆಸು ಪಕ್ಷದವರು ಎಸೆಂಬ್ಲಿ ಸಭೆಯನ್ನು ಪ್ರವೇಶ ಮಾಡಿದ ಮೇಲೆ ಅದರ ಕಾರ್ಯ ಕಲಾಪಗಳಲ್ಲಿ ಒಂದು ಹೊಸ ವೈಶಿಷ್ಟ್ಯವು ಉಂಟಾಗಿರುವುದರಲ್ಲಿ ಸಂದೇಹವಿಲ್ಲ. ಮೊದಲು ಈ ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು ನೀರಸವಾಗಿದ್ದುವು. ಆದರೆ ಈಗ ಜನರ ನಿಜವಾದ ಪ್ರತಿನಿಧಿಗಳು ಎಸೆಂಬ್ಲಿಯಲ್ಲಿ ಸರ್ಕಾರದ ವರ್ತನೆಯನ್ನು ಕುರಿತು ಮಾಡುತ್ತಿರುವ ಟೀಕೆಗಳೂ, ಸರ್ಕಾರೀ ಮೆಂಬರುಗಳಿಗೂ ವಿರೋಧಪಕ್ಷದವರಿಗೂ ಆಗುತ್ತಿರುವ ವಾಗ್ವಾದಗಳೂ ಓದಲು ಬಹು ಮನೋರಂಜಕವಾಗಿವೆ ಮತ್ತು ಅವು ಎಸೆಂಬ್ಲಿಯ ಚರ್ಚೆಗಳಲ್ಲಿ ಜನರಿಗೆ ಹೆಚ್ಚಿನ ಅಭಿರುಚಿಯನ್ನುಂಟುಮಾಡುತ್ತಿವೆ. ಈ ಮುನ್ನ ಸರ್ಕಾರದವರು ತಮಗೆ ಬೇಕಾದ ಕಾಯಿದೆಗಳನ್ನೂ, ತೀರ್ಮಾನಗಳನ್ನೂ ಸುಲಭದಲ್ಲಿ ಪಾಸು ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಸರ್ಕಾರಕ್ಕೆ ಎದುರು ಪಕ್ಷದ ಪಾರ್ಟಿಯಲ್ಲಿ ನಿಂತಿರುವ ಕಾಂಗ್ರೆಸ್ಸಿನವರನ್ನು ತಮ್ಮ ಕಡೆ ಒಲಿಸಿಕೊಳ್ಳುವುದು ಸಾಧ್ಯವಿಲ್ಲವಾಗಿದೆ ಮಾತ್ರವಲ್ಲ, ಸರ್ಕಾರದವರು ಹಲವು ಸಾರಿ ಬಹುಮತದಿಂದ ಸೋಲಿಸಲ್ಪಡುತ್ತಿರುವರು.

ಈ ಸಾರಿ ಎಸೆಂಬ್ಲಿ ಮೀಟಿಂಗು ಈ ತಾ. 2 ರಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲೇ ಸರ್ಕಾರದವರಿಗೆ ಎರಡು ಸೋಲುಗಳು ದೊರೆತವು. 'ಲೋಕೊಮೋಟಿವ್' ಇಂಜಿನ್'ಗಳನ್ನು ಇಂಡಿಯಾದಲ್ಲಿಯೇ ತಯಾರಿಸಬೇಕೆಂಬ ವಿಷಯವನ್ನು ಸರ್ಕಾರಕ್ಕೆ ಮನವರಿಕೆ ಮಾಡುವ ಉದ್ದೇಶದಿಂದ ಶ್ರೀಮಾನ್ ವೆಂಕಟಾಚಲಂ ಚೆಟ್ಟಿಯಾರವರೂ, ವಾಯವ್ಯ ಪ್ರಾಂತ್ಯದ ಗಡಿಯಲ್ಲಿರುವ ಜನರ ಮೇಲೆ ಇಂಡಿಯಾ ವಿಮಾನ ಸೈನ್ಯದವರು ಬಾಂಬುಗಳನ್ನು ಎಸೆದುದನ್ನು ಖಂಡಿಸಲಿಕ್ಕಾಗಿ ಡಾ. ಖಾನ್ ಸಾಹೇಬರವರೂ ಈ ಸಭೆಯಲ್ಲಿ 'ಎಡ್ಜರ್ನ್‌ಮೆಂಟ್' ಠರಾವುಗಳನ್ನು ತಂದಿದ್ದರು. ಇವೆರಡು ಠರಾವುಗಳಲ್ಲಿಯೂ ಸರ್ಕಾರಿ ಪಕ್ಷದವರು ಸೋಲಿಸಲ್ಪಟ್ಟರು. ಆದುದರಿಂದ ಈ ಸಾರಿಯ ಎಸೆಂಬ್ಲಿಯ ಸುರುವೇ ಸರ್ಕಾರದವರಿಗೆ ಶುಭದಾಯಕವಾಗಿಲ್ಲ.

ಎಸೆಂಬ್ಲಿ ಸಭೆಯ ಈ ಸಲದ ಪ್ರಮುಖ್ಯ ಕಾರ್ಯವು 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್'ನ ಚರ್ಚೆಯಾಗಿತ್ತು. 1930 ರಲ್ಲಿ ಸವಿನಯ ಕಾಯಿದೆ ಭಂಗ ಚಳವಳಿವು ಸುರುವಾದಲ್ಲಿಟ್ಟಾಗ್ಯೆ ವೈಸರಾಯರು ತಮಗಿದ್ದ ವಿಶೇಷ ಅಧಿಕಾರವನ್ನು ಚಲಾಯಿಸಿ, ಆರ್ಡಿನೇನ್ಸ್‌ಗಳನ್ನು ಜಾರಿಗೆ ತಂದರು. ಸತ್ಯಾಗ್ರಹವು 1932 ರಲ್ಲಿ ಪುನಃ ಪ್ರಾರಂಭವಾದಾಗ್ಯೆ ವೈಸರಾಯರ ಆರ್ಡಿನೇನ್ಸ್‌ಗಳು ಸಾಲದೆಂದು ಕ್ರಿಮಿನಲ್ ಲಾವನ್ನು ತಿದ್ದುಪಡಿ (ಎಮೆಂಡ್‌ಮೆಂಟ್) ಮಾಡಿದ ಆಕ್ಟನ್ನು ಜಾರಿಗೆ ತಂದರು. ಜಾರಿಗೆ ತರುವ ಮುಂಚೆ ಈ ಮಸೂದೆಯು ಎಸೆಂಬ್ಲಿಯಲ್ಲಿ ಚರ್ಚಿಸಲ್ಪಟ್ಟಿತು. ಆಗ್ಯೆ, ಭಾರತ ಭೂಮಿಯ ವೀರ ಪುತ್ರ ಪುತ್ರಿಯರು ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥತ್ಯಾಗ ಮಾಡಿ ಲಾಠಿ ಪೆಟ್ಟಿಗೆ ಗುರಿಯಾಗುತ್ತಲೂ, ಜೈಲುವಾಸವನ್ನು ಅನುಭವಿಸುತ್ತಲೂ ಕಠಿಣ ತರಹದ ಶಾಸನಗಳನ್ನು ಸಹಿಸುತ್ತಿದ್ದಾಗ್ಯೆ, ಎಸೆಂಬ್ಲಿಯವರು ಈ ಕಠಿಣ ಕಾಯಿದೆಗೆ ಬಹುಮತದಿಂದ ಸಮ್ಮತಿಯನ್ನಿತ್ತರು. ಆದರೆ ಈ ಆಕ್ಟಿಗೆ ಮೂರು ವರ್ಷದ ಜೀವದಾನ ಮಾತ್ರ ಮಾಡಲಾಗಿತ್ತು. ಈ ಅವಧಿಯು ಬರುವ ಡಿಸೆಂಬರು 18 ರಲ್ಲಿ ಮುಗಿಯುತ್ತದೆ. ಆದುದರಿಂದ ಈ ತಾತ್ಕಾಲಿಕ ಆಕ್ಟನ್ನು ಖಾಯಂ ಮಾಡಿಕೊಳ್ಳುವ ಉದ್ದೇಶದಿಂದ ಸರ್ಕಾರದವರು ಅದನ್ನು ಈಗ ಪುನಃ ಎಸೆಂಬ್ಲಿಯ ಮುಂದಿಟ್ಟದ್ದಾಗಿದೆ.

ಈ ಮಸೂದೆಯನ್ನು ಕುರಿತು ತಾ. 5ರಿಂದ 13ರ ವರೆಗೆ ದೀರ್ಘ ಚರ್ಚೆ ನಡೆಯಿತು. ಸರ್ಕಾರಿ ಪಕ್ಷದವರೂ, ಕಾಂಗ್ರೆಸ್ ಪಕ್ಷದವರೂ ತಮ್ಮ ಉತ್ತಮವಾದ ಭಾಷಣಗಳನ್ನು ಮಾಡಿದರು. ಮಸೂದೆಯನ್ನು ಮುಂದಿಡುತ್ತಾ ಸರ್ಕಾರಿ ಹೋಮ್ ಮೆಂಬರರು—'ಜನಸಮುದಾಯದ ಹಿತಕ್ಕಾಗಿ ಭಾರತ ಖಂಡದ ಶಾಂತಿ ಸಂರಕ್ಷಣೆಗೆ ಈ ಶಾಸನವು ಅಗತ್ಯ. ಈ ಶಾಸನವು ಮಾಡಿದ್ದು ಸತ್ಯಾಗ್ರಹ ಚಳವಳಿವನ್ನು ಮಾತ್ರ ಅಡಗಿಸಲಿಕ್ಕಲ್ಲ; ಕ್ರಾಂತಿಕಾರರ ಚಳವಳಿ, 'ಕಮ್ಯೂನಿಸ್ಟ್' ಚಳವಳಿ ಮತ್ತು ಇತ್ತೀಚೆಗೆ ಹೆಚ್ಚಾಗಿರುವ ಕೋಮುವಾರು ವಿದ್ವೇಷಗಳನ್ನು ಎದುರಿಸಲಿಕ್ಕಾಗಿಯೂ ಆಗಿದೆ. ಸತ್ಯಾಗ್ರಹ ಚಳವಳಿ ಹಿಂತೆಗೆಯಲ್ಪಟ್ಟಿದೆಯಲ್ಲದೆ ಬಹುಕಾಲ ಆಗಿ ನಿಲ್ಲಿಸಲ್ಪಟ್ಟಿರುವುದಿಲ್ಲ. ಕಾಂಗ್ರೆಸಿನ ಕೊಂದರೆಯನ್ನುಂಟುಮಾಡುವ 'ಪಿಕೆಟಿಂಗ್' ಕಾರ್ಯಕ್ಕೆ ಅವಕಾಶ ಕೊಡಬಾರದು. ವೃತ್ತಪತ್ರಿಕೆಗಳ ಮೇಲಿರುವ ನಿರ್ಬಂಧವನ್ನು ಸಡಿಲಿಸಿದರೆ ಕ್ರಾಂತಿಗೂ, ಕಮ್ಯೂನಿಸ್ಟ್ ಮತ್ತು ಕೋಮುವಾರು ಚಳವಳಿಗಳಿಗೂ ತುಂಬಾ ಉತ್ತೇಜನ ದೊರೆಯುವುದು. ಈಗಿನ ಸರ್ಕಾರಕ್ಕೆ ಅನುಭವದಲ್ಲಿ ಅಗತ್ಯವೆಂದು ಕಂಡು ಬಂದಿರುವ ಕಾಯಿದೆಯನ್ನು ಮುಂದೆ ಬರುವ ಹೊಸ ಸರ್ಕಾರದ ಉಪಯೋಗಕ್ಕಾಗಿ ಮಾಡುವುದು ಅವಶ್ಯ' ಎಂಬ ಮುಂತಾದ ಕಾರಣಗಳನ್ನು ಕೊಟ್ಟರು.

ಜನಸಮುದಾಯದ ಹಿತಕ್ಕಾಗಿ ಈ ಶಾಸನವು ಮಾಡಲ್ಪಡುವುದಾಗಿದ್ದರೆ ಜನ ಪ್ರತಿನಿಧಿಗಳು ಇದಕ್ಕೆಂದಿಗೂ ವಿರೋಧಿಸುತ್ತಿರಲಿಲ್ಲ. 85 ಹಿಂದೀಯ ಚುನಾಯಿತ ಮೆಂಬರುಗಳಲ್ಲಿ 15 ಮುಸಲ್ಮಾನರು ಸಹಿತ ಬಹುಮತದವರೆಲ್ಲರೂ ಈ ಮಸೂದೆಗೆ ವಿರೋಧಿಸಿದ್ದರಿಂದ ಇದು ಜನಸಮುದಾಯಕ್ಕೆ ಬೇಕಾದ ಶಾಸನವಲ್ಲವೆಂಬುದು ವಿಶದವಾಯಿತು. ಸರ್ಕಾರಿ ಮೆಂಬರರು ಈಗ ಕೊಡುವ ಕಾರಣಗಳನ್ನು ಎತ್ತಿಟ್ಟರೂ 1932 ರಲ್ಲಿ ಈ ಆಕ್ಟನ್ನು ಮಾಡಿದ್ದು ಸತ್ಯಾಗ್ರಹ ಚಳವಳಿಯನ್ನು ಮುರಿಯಲಿಕ್ಕಾಗಿ ಎಂಬುದರಲ್ಲಿ ಸಂಶಯವಿಲ್ಲ. ಈಗ ಆ ಚಳವಳಿ ಪೂರ್ತಿಯಾಗಿ ನಿಲ್ಲಿಸಲ್ಪಟ್ಟಿಲ್ಲವೆಂಬ ಸರ್ಕಾರಿ ಮೆಂಬರರ ವಾದದಲ್ಲಿ ಹುರುಳಿಲ್ಲ. ಜನರ ಜನ್ಮಹಕ್ಕಾದ ಭಾಷಣ, ಲೇಖನ ಸ್ವಾತಂತ್ರ್ಯಗಳಿಗೆ ಅಡ್ಡಿ ತರುವ ಈ ಮಸೂದೆಯಂಥ ಶಾಸನಗಳನ್ನು ಜಾರಿಗೆ ತರುವುದರಿಂದಲೇ ಶಾಸನ ಭಂಗ ಚಳವಳಿವು ಪುನಃ ಪ್ರಾರಂಭವಾಗಲು ಅನುಕೂಲವಾಗುವುದು. ಕ್ರಾಂತಿಕಾರರ ಚಳವಳಿವನ್ನಡಗಿಸಲಿಕ್ಕಾಗಿ ಈ ಆಕ್ಟನ್ನು ಈ ಮೊದಲು ಜಾರಿಗೆ ತಂದುದಲ್ಲ. ಕ್ರಾಂತಿಯನ್ನು ನಿಲ್ಲಿಸಲು ಬಂಗಾಳ ಪ್ರಾಂತ್ಯದಲ್ಲಿ ಬೇಕಾದಷ್ಟು ಶಾಸನಗಳಿವೆ. ಅಲ್ಲದೆ ಕ್ರಾಂತಿಯ ಮೂಲ ಕಾರಣಗಳಾದ ಬಡತನ, ನಿರುದ್ಯೋಗತನ ಮತ್ತು ಆಡಳಿತ ಕ್ರಮದಲ್ಲಿ ಜನರಿಗಿರುವ ಅತೃಪ್ತಿ ಇವುಗಳನ್ನು ಹೋಗಲಾಡಿಸುವುದೇ ಕ್ರಾಂತಿ ಚಳವಳಿವನ್ನು ನಿಲ್ಲಿಸಲು ಸುಲಭ ಉಪಾಯವಲ್ಲದೆ ಇಂಥಾ ಕಠಿಣ ತರದ ಕಾಯಿದೆಯನ್ನು ಎಲ್ಲಾ ಜನರ ಮೇಲೆ ಹೊರಿಸುವುದರಿಂದಲ್ಲ. 'ಕಮ್ಯೂನಿಸ್ಟ್' ಚಳವಳಿಯನ್ನಡಗಿಸುವುದರ ವಿಷಯದಲ್ಲಿ ಸರ್ಕಾರಿ ಮೆಂಬರುಗಳ ಅಭಿಪ್ರಾಯಗಳೇ ಭಿನ್ನವಾಗಿವೆ. ಈ ಚಳವಳಿಯನ್ನು ಮೊಳಕೆಯಲ್ಲಿಯೇ ನಿರ್ಮೂಲ ಮಾಡಬೇಕೆಂದು ಒಬ್ಬರು ಹೇಳುವಾಗ್ಯೆ, ಆ ತರಹದ ಅಭಿಪ್ರಾಯ ಪ್ರಚಾರಕ್ಕೆ ಸರ್ಕಾರದವರು ಅಡ್ಡಿ ಮಾಡಲಾರರೆಂದು ಇನ್ನೊಬ್ಬ ಮೆಂಬರು ಹೇಳಿದರು. ಆದುದರಿಂದ ಈ ಮಸೂದೆಯ ಉದ್ದೇಶವು ಕಮ್ಯೂನಿಸ್ಟ್ ಚಳವಳಿಯನ್ನು ನಿಲ್ಲಿಸುವುದಲ್ಲ. ಕೋಮುವಾರು ವಿದ್ವೇಷಗಳನ್ನು ತಡೆಗಟ್ಟುವ ಕಾರಣವನ್ನು ಹೋಮ್ ಮೆಂಬರರು ಹೇಳಿದರು. ಆದರೆ ಈ ಕಾರಣವನ್ನು ಇತ್ತೀಚೆಗೆ ಸೇರಿಸಿಕೊಂಡದ್ದಾಗಿದೆ. ಅದನ್ನು ಅಡಗಿಸಲು ಈ ಶಾಸನದಿಂದ ಸಾಧ್ಯವೂ ಇಲ್ಲ. ವೃತ್ತಪತ್ರಿಕೆಗಳಿಂದ ಕ್ರಾಂತಿಗೂ, ಕೋಮುವಾರು ದ್ವೇಷಗಳಿಗೂ ತುಂಬಾ ಉತ್ತೇಜನ ಸಿಕ್ಕುತ್ತಿದೆಯೆಂದು ಸರ್ಕಾರಿ ಮೆಂಬರರ ಹೇಳಿಕೆ. ಸ್ವಲ್ಪ ಮಂದಿ ಕ್ರಾಂತಿಕಾರರ ನೆಪದಿಂದ ಇಡೀ ದೇಶದ ಮೇಲೆಯೇ ಈ ಶಾಸನವನ್ನು ಹೊರಿಸುವುದು ಎಂದೂ ನ್ಯಾಯವಲ್ಲ. ವ್ಯಾಪಾರ, ಉದ್ಯೋಗ, ಕೌನ್ಸಿಲು ಮೆಂಬರುತನ ಮುಂತಾದವುಗಳಿಗೆ ಸಂಬಂಧಪಟ್ಟ ಕೋಮುವಾರತ್ವವು ಸರ್ಕಾರದವರಿಂದ ಪ್ರೋತ್ಸಾಹಿಸಲ್ಪಡುತ್ತಿರುವುದಾಗಿದೆ. ಬೇರೆ ಕೋಮುವಾರು ಜಗಳಗಳು ಹೆಚ್ಚಾಗಿ ಬೀದಿಯ ಪೋಲಿ ಜನರಿಂದ ಉಂಟಾಗುವುದಾಗಿದೆ. ಇದರ ಮೇರೆ ಪತ್ರಿಕೆಗಳ ಬಲವೇನೂ ಇಲ್ಲ. ಆದುದರಿಂದ ಪತ್ರಿಕೆಗಳ ಮೇಲೆ ಅನಾವಶ್ಯಕವಾದ ನಿರ್ಬಂಧ ಇಡುವುದರಲ್ಲಿ ಅರ್ಥವಿಲ್ಲ. ಮುಂದೆ ಬರುವ ಹೊಸ ಸರ್ಕಾರಕ್ಕಾಗಿ ಈಗಿನ ಸರ್ಕಾರವು ಈ ತರಹದ ಶಾಸನಗಳನ್ನು ಮಾಡುವುದರಿಂದ ಮುಂದಿನ ಸರ್ಕಾರಕ್ಕೆ ಸಹಾಯ ಮಾಡುವುದರ ಬದಲು ಇದರಿಂದ ತುಂಬಾ ಅತೃಪ್ತಿಗೊಂಡ ದೇಶದ ಆಡಳಿತವನ್ನು ಅವರಿಗೆ ಬಿಟ್ಟು ಕೊಟ್ಟಂತಾಗುವುದು.

ಸರ್ಕಾರದವರ ಈ ಬಿಲ್ ಬಹುಮತದಿಂದ ಸೋಲಿಸಲ್ಪಟ್ಟಿತು. 61 ಮೆಂಬರರು ಇದಕ್ಕೆ ಪರವಾಗಿಯೂ, 71 ಮಂದಿ ಜನರ ಪ್ರತಿನಿಧಿಗಳು ವಿರೋಧವಾಗಿಯೂ ಓಟು ಕೊಟ್ಟರು. ವೈಸರಾಯರ ಶಿಫಾರಸ್ಸಿನೊಡನೆ ಈ ಮಸೂದೆಯು ತಾ. 16 ರಲ್ಲಿ ಪುನಃ ಎಸೆಂಬ್ಲಿಯ ಮುಂದಿಡಲಾಯಿತು. ಆಗಲೂ ಅದಕ್ಕೆ ಪರವಾಗಿ 57 ಓಟುಗಳೂ, ವಿರೋಧವಾಗಿ 69 ಓಟುಗಳೂ ದೊರೆತದ್ದರಿಂದ ಅದು ತಿರುಗಿ ಅಪಜಯ ಹೊಂದಿತು. ದೇಶದಲ್ಲಿ ರಾಷ್ಟ್ರೀಯ ಭಾವನೆಯನ್ನೇ ನಾಶಮಾಡಲು ಸಾಧನವಾದಂಥ ಈ ಬಿಲ್ಲನ್ನು ತಿರಸ್ಕಾರ ಮಾಡಿದ ಎಸೆಂಬ್ಲಿಯವರನ್ನು ಅಭಿನಂದಿಸಬೇಕಾಗಿದೆ.

ಮುಸೋಲಿನಿಗೆ ಯುದ್ಧ ಯಾತಕ್ಕಾಗಿ?

ಆರ್ಥಿಕ ಮುಗ್ಗಟ್ಟಿನ ಬಂಧನದಿಂದ ಪಾರಾಗಲಿಕ್ಕೆ.

ಮುಸೋಲಿನಿಯವರು ಅಬಿಸೀನಿಯಾದೊಡನೆ ಯಾವ ಕಾರಣದಿಂದಾದರೂ, ಬೇರೆ ಯಾವುದಾದರೂ ರಾಷ್ಟ್ರದೊಡನೆ ಯುದ್ಧವನ್ನು ಹೂಡಲೇ ಬೇಕು. ಇಟಲಿಯಲ್ಲಿನ ಆರ್ಥಿಕ ಮುಗ್ಗಟ್ಟೇ ಇದಕ್ಕೆ ಕಾರಣ. ಅಲ್ಲದೆ ಮುಸೋಲಿನಿಯವರ ಮನೋಗತಿಯೂ ಕಾರಣವೆನ್ನಲೂ ಬಹುದು. ಯಾತಕ್ಕೆಂದರೆ ಮುಸೋಲಿನಿಯವರು ರಾಜಕೀಯ ಪಟುವಲ್ಲ, ಅವರು ಸುಸಜ್ಜಿತವಾದ ಸಾಹಸಿ ಯೋಧ.

ಇಟಲಿಯಲ್ಲಿ ಇಂದು ಚಾಲ್ತಿಯಲ್ಲಿರುವ 'ಫ್ಯಾಸಿಸ್ಟ್' ಎಂಬ ಸರ್ಕಾರ ತತ್ವವು ಅವರಿಂದ ಜನ್ಮಪಡೆದುದಾಗಿರುವುದು. ಈ ತತ್ವದ ಸೂತ್ರಧಾರಿಯಾದ ಮುಸೋಲಿನಿಯವರು ತಮ್ಮ ಈ ತತ್ವವನ್ನು ಸಕಲ ಅಡಚಣೆಗಳ ಮಧ್ಯದಲ್ಲಿ ಸಾಹಸದಿಂದ ಮುಂದೊತ್ತುತ್ತಿರುವರು. ಇಟಲಿಯ ಹಾಳುಬಿದ್ದಿರುವ ವಿಶಾಲ ಪ್ರದೇಶಗಳನ್ನು ಸ್ವಾವಲಂಬ್ಯಸುಳ್ಳವುಗಳನ್ನಾಗಿ ಮಾಡುತ್ತಿರುವರು. ಇದೇನು ಸುಲಭದ ಕೆಲಸವೇ? ಈ ಕೆಲಸದಿಂದ ಇಟಲಿಯ ಭಂಡಾರವೆಲ್ಲಾ ಬರಿದಾಗಿದೆ. ಈ ಪರಿಗ್ರಾಮ ಎಷ್ಟೋ ಪ್ರದೇಶಗಳನ್ನು ಹಸನಗೊಳಿಸಿದರೂ ಅವುಗಳಲ್ಲಿ ನ್ಯಾಯವಾದ ಕೃಷಿಗಳನ್ನು ಬೆಳೆಸಲು ಇನ್ನೂ ಹಣಬೇಕಾಗಿದೆ. ಇಟಲಿಯ ಇಂದಿನ ನೂತನ ರಾಜಕೀಯ ತತ್ವ ರಾಜ್ಯಭಾರದಿಂದ ಇಟಲಿಯ ದೇಶ ಶ್ರಮಿಗಳಿಗೆ (ಕೂಲಿಕಾರರಿಗೆ) ಹೆಚ್ಚಿನ ಸೌಲಭ್ಯಗಳೇನೂ ದೊರೆತಿಲ್ಲ. ಮುಸೋಲಿನಿಯವರು ಅವರಿಗೆ ರಾಷ್ಟ್ರೀಯ ಉನ್ನತಿಯ ಹುಚ್ಚು ಹಿಡಿಸಿರುವರು. ಅವರೆಲ್ಲರೂ ತಮ್ಮ ಹಕ್ಕುಗಳಿಂದ ರಾಷ್ಟ್ರದ ಉನ್ನತಿಯಾಗುವದೆಂದು ನಂಬಿ ತಮ್ಮ ಹಿತವನ್ನೇ ಮರೆತಿರುವರು. ಅಸಂಖ್ಯಾತರಾಗಿರುವ ಈ ಬಡಜನರುಗಳನ್ನು ಮರುಳುಗೊಳಿಸಲು 'ದೇಶ ಭಕ್ತಿ', 'ರಾಷ್ಟ್ರೀಯತ್ವ' ಮೊದಲಾದ ಮಂತ್ರಗಳನ್ನು ಮುಸೋಲಿನಿಯವರು ಇವರ ಕಿವಿಯಲ್ಲಿ ಊದುತ್ತಿರುವರು.

ಇಟಲಿಯ ರಾಜ್ಯಭಾರದಲ್ಲಿ ಹಣದ ಅಭಾವವು ಅವರಿಗೆ ಸಿಕ್ಕಿದರೆ ಮುಸೋಲಿನಿಯವರ ಅವಸಾನವಾಗುವದೆಂದೇ ಹೇಳಬಹುದು. ಶೀಘ್ರದಲ್ಲೇ ಇಟಲಿಯ ಖಜಾನೆಗಳು ಬರಿದಾಗಿ ಬಿಡುವವೆಂಬುದನ್ನು ಅರಿತ ಮುಸೋಲಿನಿಯು ಹ್ಯಾಗಾದರೂ ತನ್ನ ಖಜಾನೆಯನ್ನು ತುಂಬುವ ಯೋಚನೆಯಲ್ಲಿ ಮಗ್ನರಾಗಿರುವರು. ಕೇವಲ ಸಾಮಾನ್ಯ ವರ್ಗದ ಕುಲದಿಂದ ಹುಟ್ಟಿ ಸ್ಕೂಲ್ ಮಾಸ್ತರನಾಗಿಯೂ, ದೇಶಭ್ರಷ್ಟನಾಗಿಯೂ, ಕಮ್ಮಾರನಾಗಿದ್ದ ತನ್ನ ತಂದೆಯ ವೃತ್ತಿಯಲ್ಲಿ ಸಹಾಯಕನಾಗಿಯೂ, ಪತ್ರಿಕೋದ್ಯೋಗಿಯಾಗಿಯೂ ಹೆಚ್ಚು ಅನುಭವವನ್ನು ಪಡೆದಿರುವ ಈ ಧೀಮಂತನಿಗೆ ದೂರದೃಷ್ಟಿ ಇದ್ದೇ ಇರಬೇಕಲ್ಲವೇ. ಸಮಾಜದ ಪ್ರತಿಯೊಂದು ಮೆಟ್ಟಲಿನಲ್ಲೂ ಅನುಭವ ಪಡೆದ ಸಮಾಜವಾದಿಯು ಜನತೆಯ ದೃಷ್ಟಿಕೋನವನ್ನು ಚೆನ್ನಾಗಿ ಅರಿತಿರುವರು. ಜನಸಾಮಾನ್ಯರ ಮನೋಗತಿಯು ಯಾವ ಸಂದರ್ಭದಲ್ಲಿ ಹೇಗಾಗುವದೆಂಬುದನ್ನು ತಿಳಿಯುವದರಲ್ಲಿ ಇವರ ಪಾಂಡಿತ್ಯಕ್ಕೆ ಮಿತಿಯೇ ಇಲ್ಲ. ಜನರಲ್ಲಿ ದೇಶಭಕ್ತಿ, ರಾಷ್ಟ್ರೀಯತ್ವಗಳನ್ನು ಬೆಳೆಸಿ, ಅವುಗಳಿಂದ ತನ್ನ ಪಕ್ಷದ ಸಾಧನೆಯನ್ನು ಸಾಧನಗಳಿಂದ ನಡೆಸುತ್ತಲಿರುವರು.

ಇಟಲಿಯವರಿಗೆ ನಾಟಕದ ಅಭಿರುಚಿ ಹೆಚ್ಚು. ಅವರಿಗೆ ರಣಭೇರಿಗಳನ್ನು ಮೊಳಗಿಸಿ ಸೇನಾ ಕೌಶಲವನ್ನು ತೋರಿಸುವುದು, ಬಣ್ಣಬಣ್ಣಗಿ ಮೊದಲಾದ ಧ್ವಜಾಧ್ವಜ, ಪೋಷಾಕಿನಲ್ಲಿ ಮೆರೆಯುವುದು ಮೊದಲಾದವುಗಳಲ್ಲಿ ಆಸಕ್ತಿ ಹೆಚ್ಚು. ಮುಸೋಲಿನಿಯವರಿಗೆ ಬೇಕಾದದ್ದೂ ಇದೆ.

ಇಟಲಿಗೆ, ಈ ಆರ್ಥಿಕ ಮುಗ್ಗಟ್ಟಿನ ಹಸಿವಿನಲ್ಲಿ, ಇವನ್ನು ಸ್ವತಂತ್ರದ ಪುಷ್ಟಿಯಾದ ವಾತಾವರಣದಲ್ಲಿ ಸುಖ ಸಂಪತ್ತಿನಿಂದ ಸಂತೃಪ್ತಿಯಾಗಿರುವ ಅಬಿಸೀನಿಯಾದ ಮೇಲೆ ಕಣ್ಣು ಬಿದ್ದಿರುವುದರಲ್ಲಿ ಸೋಜಿಗವೇನು! ಇಟಲಿಯ ಜನಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿದೆ. ಇವರಿಗೆ ಜೀವನಕ್ಕೆ ತಕ್ಕ ಸಾಧನವನ್ನು ಸಂಪಾದಿಸದಿದ್ದರೆ ಮುಸೋಲಿನಿಯವರ ಅಧಿಕಾರಕ್ಕೆ ಉಳಿಗಾಲವಿಲ್ಲದಾಗುವದು. ಒಂದೋ ಅವರಿಗೆ ಜೀವನ ಸಾಧನವನ್ನು ಹೊಸ ವಸಾಹತುಗಳನ್ನು ದೊರಕಿಸಿಕೊಡಬೇಕು. ಇಲ್ಲವೇ ಯುದ್ಧವನ್ನಾದರೂ ಹೂಡಿ, ಇಟಲಿಯು ಅಪಜಯ ಹೊಂದಿದರೂ ಚಿಂತೆಯಿಲ್ಲ, ಈ ಅಸಂಖ್ಯಾತರಾಗಿರುವ ಇಟಲಿಯ ಜೀವಿಗಳ ಸಂಖ್ಯೆಯನ್ನು ಕಡಮೆಮಾಡಬೇಕು. ಈಗಿನ ನೂತನ ಯುದ್ಧ ವಿಧಾನದಲ್ಲಿ ಒಬ್ಬನೇ ಸಹಸ್ರ ಸೈನಿಕರನ್ನು ಧ್ವಂಸಗೊಳಿಸಬಲ್ಲನು. 'ದೇಶದ ಕೀರ್ತಿಗಾಗಿ, ಸೇವೆಗಾಗಿ' ಮುಂತಾಗಿ ಹುರಿದುಂಬಿಸಿ ರಣರಂಗಕ್ಕೆ ಅಟ್ಟಿ ಅವರು ಮಡಿದರೂ ಯಾ ಜಯಶಾಲಿಗಳಾದರೂ ಮುಸೋಲಿನಿಯವರಿಗೆ ಪ್ರಯೋಜನವೇ. ಮಡಿದರೆ ಅಷ್ಟು ಜನ ಸಂಖ್ಯೆಯು ಕಡಿಮೆಯಾಯಿತು ನಿರುದ್ಯೋಗದ ಬಾಧೆಯು ಕೊಂಚ ಸುಧಾರಿಸುವುದು. ಜಯಶಾಲಿಗಳಾದರೆ ಹೊಸ ರಾಜ್ಯಗಳು ದೊರಕುವವು, ಹೆಚ್ಚಿರುವ ಜನಸಂಖ್ಯೆಯನ್ನು ಅಲ್ಲಿ ತುಂಬಿಸಬಹುದು. ಹೇಗೂ ಹೀಗೂ ಯುದ್ಧ ಬೇಕೇ ಬೇಕು.

ಮುಸೋಲಿನಿಗೆ ಇಂಡಿಯಾದ ಮೇಲೂ ಕಣ್ಣು!

ಮುಸೋಲಿನಿಯ ರಾಜ್ಯವಿಸ್ತರಣಾ ತೃಷೆಯು ಒಂದೇ ಅಬಿಸೀನಿಯಾವನ್ನು ನಾಶ ಮಾಡುವುದರಲ್ಲಿ ಶಮನವಾಗುವುದಿಲ್ಲ. ಅಬಿಸೀನಿಯಾವನ್ನು ಆಕ್ರಮಿಸಿದ ನಂತರ (1) ಬ್ರಿಟಿಷರವರ ಮಾಲ್ಟಾ ಮತ್ತು ಸೈಪ್ರಸ್ ದ್ವೀಪಗಳನ್ನು ಬಿಟ್ಟುಕೊಡಬೇಕು, (2) ಬ್ರಿಟಿಷರು ಈಜಿಪ್ಟಿನ ಮೇಲಿಟ್ಟಿರುವ ಅಧಿಕಾರವನ್ನು ತೊರೆದು ಇಟಲಿಯ ಅಧಿಕಾರಕ್ಕೆ ಅವಕಾಶಕೊಡಬೇಕು (3) "ಬ್ಲೂನೈಲ್" ನದಿಯ ನೀರಿನ ಹಕ್ಕನ್ನೂ ತೊರೆಯಬೇಕು ಎಂಬ ಮುಂತಾದ ಹವಣಿಕೆಯಲ್ಲಿರುವರೆಂದು ಬ್ರಿಟಿಷ್ ಮಂತ್ರಿ ಮಂಡಲಕ್ಕೆ ಎಚ್ಚರಿಕೆಗಳು ಬಂದಿವೆಯಂತೆ.

ಸರಿ, ಈ ಹವಣಿಕೆಗಳ ಉದ್ದೇಶವು ಭಾರತದ ವರೆಗೆ ದಾಳಿಗೆ ಕಾಲುಸೇತುವೆ ಕಟ್ಟಬೇಕೆಂಬುದನ್ನು ವ್ಯಕ್ತಗೊಳಿಸಿದೆ. ಈಜಿಪ್ಟ್ ಮಾಲ್ಟಾ ಪ್ರದೇಶಗಳು ಸ್ವಾಧೀನವಾದರೆ ಹಿಂದೂದೇಶಕ್ಕೆ ದಾರಿ ಹೆದ್ದಾರಿ ಸ್ವಾಧೀನವಾದಂತೆ. ಮುಸೋಲಿನಿಯವರ ಈಗಿನ ಸಾಹಸಗಳನ್ನೂ, ಧೂರ್ತತೆಯನ್ನೂ ನೋಡಿದರೆ ಭಾರತದ ಮೇಲೂ ಅವರಿಗೆ ಕಣ್ಣಿದೆ ಎಂಬುದು ವಿಶದವಾಗುತ್ತದೆ

ಗಂಧದ ಮರಗಳಿಗೆ ಬೋನಸು ಕೊಡುವ ನಿಬಂಧನೆಗಳ ವಿಚಾರ.

ಬಾಧಕಗಳಲ್ಲದೆ ಸಾಧಕಗಳೇನೂ ಇಲ್ಲ.

ಕೈಮರ ಅನ್‌ರಿಡೀಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಸರ್ಕಾರದವರು ಬೋನಸು ಕೊಡಲು ನಿರ್ಧರಿಸಿರುವ ಹೊಸ ನಿಬಂಧನೆಯ ಕನ್ನಡದ ಭಾಷಾಂತರವನ್ನು 30—8—35 ರ 'ಕೊಡಗು' ಪತ್ರಿಕೆಯಲ್ಲಿ ಓದಿದೆನು. ಅದರ ಮೇಲೆ ಸಂಪಾದಕರು ಬರೆದಿರುವ ಅವರ ಟೀಕೆಯು ಸಾಧಾರಣ ಮಟ್ಟಿಗೆ ನ್ಯಾಯವಾಗಿದೆ. ಅವರು ನಮೂದಿಸಿರುವುದಕ್ಕಿಂತಲೂ ಹೆಚ್ಚಿನ ಅಡಚಣೆ ಇವೆ ಎನ್ನುವುದು ತಿಳಿಯುತ್ತದೆ. ಆದರೆ ಸಂಪಾದಕರು ಗಂಧ ಬೆಳೆಯುವ ಈ ತಾಲೂಕುಗಳಲ್ಲಿ ವಾಸವಿಲ್ಲದ್ದರಿಂದ ಗಂಧದ ಮರ ಬೆಳೆಯುವ ಅರಿವು ಅವರಿಗೆ ಕಮ್ಮಿ. [illegible] ಹೇಗೂ ಇರಲಿ. ಅವರು ಇಷ್ಟು ಮಟ್ಟಿಗೆ ಸದರಿ ಹೊಸ ನಿಬಂಧನೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅದರ ಟೀಕೆಯನ್ನು ಪತ್ರಿಕೆಯಲ್ಲಿ ಪ್ರಕಟಪಡಿಸಿದ್ದು ಕೈಮರದ ಜನರಿಗೆ ನಮ್ಮ [illegible] ತೆರದಂತಾಗಿ ಅವರಿಗೆ ನಾವು ಚಿರಋಣಿಗಳಾಗಿದ್ದೇವೆ. ಈ ಮೇಲೆ ತಾ. 7—9—35ಕ್ಕೆ ಈ ಸಂಬಂಧವಾಗಿ ವಿರಾಜಪೇಟೆ ಕೌನ್ಸಿಲ್ ಮೆಂಬರು ಒಂದು ಮೀಟಿಂಗು ನಡೆಸ ತಕ್ಕದೆಂದು ನನಗೆ ತಿಳಿಯಿತು. ಅದೇ ಪ್ರಕಾರ ಆ ಮೀಟಿಂಗಿಗೆ ಹೋದೆನು. ಕುತೂಹಲದಿಂದ ನೋಡಿದೆನು. ಸರ್ಕಾರದ ಶ್ರೀ [illegible] ಮಿಲ್ಲಿನಲ್ಲಿ ಮೀಟಿಂಗು ನಡೆಯಿತು. ಸುಮಾರು 250 ಜನರು ನೆರೆದಿದ್ದರು.

ಸಭಾಕಾರ್ಯವು ನಡೆಯಬೇಕಾದ ರೀತಿಯಲ್ಲಿ ಪ್ರಾರಂಭವಾಗಿ ಶ್ರೀ ಕೊಡಂದೇರ ಸುಬ್ರಮಣಿ [illegible] ಮೇಲಿನವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲ್ಪಟ್ಟರು.

ಈಚೆಗೆ ಸರ್ಕಾರದವರು ಪ್ರಕಟಿಸಿರುವ ನಂಬರು 67 ತಾರೀಖು 28—6—35ರ ಗಂಧದ ಮರದ ಬೋನಸು ವಿಚಾರವಾಗಿ ಇನ್ನೂ ಹಾಗಿನ ಸಾಧಕ ಬಾಧಕಗಳನ್ನು ಪರಿಶೀಲಿಸಿ ಫಲಿತಾಂಶವನ್ನು 28—9—35ರೊಳಗೆ ಹುಜೂರ್ ಚೀಫ್ ಕಮಿಷನರ್ ಸಾಹೇಬರವರಿಗೆ ತಿಳಿಸಬೇಕಾಗಿರುವುದರಿಂದ ಈ ಸಭೆ ಕೂಡಿದ್ದಾಗಿತ್ತು. ಈ ಸಂಬಂಧವಾಗಿ ಸರ್ಕಾರದವರೊಡನೆ ಮಾತಾಡಲಿಕ್ಕೋಸ್ಕರ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ಶ್ರೀಮಾನ್ ಮಿ. ಸಿದ್ದ ಸುಬ್ಬಯ್ಯನವರನ್ನು ಈ ಸಮಿತಿಯಲ್ಲಿರುವ ಗಣ್ಯಾವಧಿಗಳ ವಿವರ ಹೇಳಬೇಕೆಂದು ಅಧ್ಯಕ್ಷರು ಕೇಳಿಕೊಂಡ ಮೇರೆಗೆ ಮಿ. ಸುಬ್ಬಯ್ಯನವರು ಈ ಕೆಳಗಿನಂತೆ ಹೇಳಿದ್ದಾರೆ:—

ಅವರು, ತಾ 28—8—35ರ 'ಜನ್ಮಭೂಮಿ' ಮತ್ತು ತಾ. 30—8—35ರ 'ಕೊಡಗು' ಪತ್ರಿಕೆಯಲ್ಲಿ ಕನ್ನಡ ಭಾಷಾಂತರವಾಗಿರುವ ಸರಕು ನಿಬಂಧನೆಗಳನ್ನು ಸಭಿಕರ ಅವಗಾಹನೆಗಾಗಿ ವಿವರವಾಗಿ ಓದಿಸಿದ್ದಲ್ಲದೆ ಅವುಗಳಲ್ಲಿರುವ ತಿರುಳಿ ಲೇಖನಗಳನ್ನು ಓದಿಸಿ ತಿಳಿಸಿದರು. ಅದರ 'ಜನ್ಮಭೂಮಿಯ' ಟೀಕೆ ಲೇಖನದಲ್ಲಿ ರಿಡೀಮ್ಡ್ ಜಾಗದ ಗಂಧಕ್ಕೆ ಪ್ರತಿಫಲ ಸಿಕ್ಕಿಲು ಇದಕ್ಕೆ ಕೌನ್ಸಿಲ್ ಒಂದ ಸಂತರನೆಂತ ಅಭಿಪ್ರಾಯವು ನೈದುವಂತೆ ಅಲ್ಲವೆಂತಲೂ ಆ ವಿಷಯಕ್ಕೆ ರೀತಿಯ ಸ್ಟ್ರಾಂಗ್ ರೂಲ್ಸ್ (1881) ಜಾರಿಗೆ ಒಂದ ಅನಂತರವೂ ಇದೆ ರೀತಿಯಲ್ಲೂ ಕೈಮರ ಎಸ್ಟೇಟ್ ಅವರ ಪ್ರಯೋಜನ ಹೊಂದಲು ಸಾಧ್ಯವಿದೆಯೆಂದು ಒಬ್ಬರು ಉಕ್ತಿಸಿದಂತೆ ವಿವರಿಸಿದರು.

ಈಗ ಸರ್ಕಾರದವರು ಕೈಮರ ಜಾಗದ ಗಂಧದ ಮರಕ್ಕೆ ಹಕ್ಕುದಾರರಿಗೆ ಸ್ವಲ್ಪ ಪ್ರತಿಫಲವನ್ನು ಕೊಡಬೇಕೆಂಬ ತತ್ವಕ್ಕೆ ಒಪ್ಪಿದುದಕ್ಕಾಗಿ ಸಂತೋಷಪಡಬೇಕಾದದ್ದೇ ಅದರೂ ಅದಕ್ಕಾಗಿ ನಿರ್ಧರಿಸಿರುವ ನಿಬಂಧನೆಗಳ ಪರಿಣಾಮಗಳು ತುಂಬಾ ಬಿಕ್ಕಟ್ಟಾಗಿ ಕೈಮರದವರಿಗೆ ಹಿಂಸಾತ್ಮಕವೆಂತಲೂ, ಇದರಿಂದ ಸರ್ಕಾರಗಳಿಗೆ ಲಾಭವಾಗಲೀ ದೊರೆಯುವಂತೆ ಕಾಣುವುದಿಲ್ಲವಾಗಿಯೂ, ನಮ್ಮ ದೇಶದಲ್ಲಿ ವ್ಯಾಪಿಸಿರುವ ಹಣದ ಮುಗ್ಗಟ್ಟಿನಲ್ಲಿ ಪ್ರಕಟವಾದ ಪ್ರಜೆಯೂ ತನ್ನಲ್ಲಿರುವ ಜಮೀನುಗಳನ್ನು ಮಾರಿ ಮರದ ಉತ್ಪತ್ತಿ ಹೊಂದಲು ಅನೇಕ ಬಾಧೆಗಳು ಸ್ಪಷ್ಟವಾಗಿ ಕೈಮರ ಕಿರ್ಜಾ ದೆಸೆಗೆ ಬರುತ್ತಿರುವುದು ಸರ್ಕಾರದವರಿಗೆ ಮನವರಿಕೆಯಾಗಿದ್ದಾಗ್ಯೂ ಇಂಥಾ ದರಿದ್ರಾವಸ್ಥೆಯಲ್ಲಿಯೂ ಅವರ ಮೇಲೆ ಭಾರವಾದ ಸುಂಕ ತೆರಿಗೆ, ಪ್ರತಿಫಲವಿಲ್ಲದ ಜವಾಬ್ದಾರಿಗೆ ಗುರಿಪಡಿಸುವುದು ನ್ಯಾಯವಲ್ಲವೆಂತಲೂ ತಿಳಿಸಿದರು. ಅವರು 1924ರಿಂದ 27ರ ವರೆಗೆ ಕೌನ್ಸಿಲು ಮೆಂಬರಾಗಿದ್ದಾಗ ಕೈಮರಕ್ಕೆ ಅವರ ರಿಡೀಮ್ಡ್ ಜಾಗದ ಗಂಧಕ್ಕೆ ಸಿಕ್ಕುವ ಪ್ರತಿಫಲದಂತೆಯೇ ಅನ್‌ರಿಡೀಮ್ಡ್ ಜಾಗದ ಗಂಧಕ್ಕೂ ಪ್ರಯೋಜನ ಸಿಕ್ಕಬೇಕೆಂದು ಸರ್ಕಾರದವರೊಡನೆ ವಾದಿಸಿದ್ದಕ್ಕೆ, ಕೈಮರಕ್ಕೆ ಸ್ವಲ್ಪ ಪ್ರತಿಫಲ ದೊರಕಬೇಕಾದದ್ದು ನ್ಯಾಯವೆಂತ ಸರ್ಕಾರದವರು ಒಪ್ಪಿ, ಅಂತಿಕ್ಕೆ ಯೋಚನೆಯ ಕೊಡಬೇಕೆಂಬುದನ್ನು ನಿರ್ಧರಿಸಲು ಸರ್ಕಾರದವರಿಗೇ ಬಿಡಬೇಕೆಂದು ಹೇಳಿ ತಾವು ಗಂಧದ ಗಿಡ ಬೆಳೆ ಬಿಡುವ ಪದ್ಧತಿ [illegible] ಸಂಬಂಧವಾಗಿ [illegible] ನಾದದ ಅಭಿಪ್ರಾಯ ಹೊಂದಿದ್ದವರೆಂದು ಭಾವಿಸಿ ಹೇಳಿದೆಂತಲೂ, ಸರ್ಕಾರದವರು ಕೈ ಬಿಟ್ಟಿದ್ದಂತೆ ಹಕ್ಕು ಮತ್ತು ಸಂಸ್ಥಾನಕ್ಕಿರುವ ಗು

ಕೆಸಿನಾಡು ಹೋಬಳಿ ಪಬ್ಲಿಕ್ ಮೀಟಿಂಗು.

—೦೦೦—

(ಕಾಣೆಯಾದವರಿಂದ)

ಭವನ್ನೇ ತೀರಬೇಕೆಂಬ ಮತ್ತು ಹಾನಿ ತೀರುವ ಪರಿಣಾಮವು ವರ್ಷಕ್ಕೆ 150ರಿಂದ 200 ಟನ್ ಒಳಗೆ ಇರಬೇಕೆಂಬ ತತ್ವವನ್ನು ಹಿಡಿದಾಯಿತೆಂದು. ಅವರ ದೊಡ್ಡ ದೊಡ್ಡ ಹೊಸ ಕಾಮಗಾರಿಕೆಗಳಿಗೆ ಒಂದು ಕೋಟಿ ತೆಗೆದು ವರ್ಷಕ್ಕೆ 400 ಟನ್ ವರೆಗೂ ತೀರುವುದು ಇಲ್ಲದೆ ಕೈಮರ ಅನ್‌ರಿಡೀಮ್ಡ್ ಜಾಗದಿಂದಲೇ ಸೇರುವ ಆದರೆ ಒಳತನ್ನು ಎಲ್ಲೆಡೆ ಎರಡು ವ್ಯತ್ಯಾಸವಿಲ್ಲದೆ ತೀರುತ್ತಿರುವುದು ದೇಶಕಕ್ಕೆ ಕೈಮರ ಎದುರಿಗೆ [illegible] ಉಪಾಯದಿಂದಲೂ ಕೈಮರದವರಿಂದ ಸರ್ಕಾರದವರಿಗೆ ನಿಷೇಧಿಸಿ. ಒಪ್ಪಿದ ಮೇಲೆ ಅಲ್ಲಿಂದ ಮುಂದಕ್ಕೆ ಆ ರೀತಿಯಲ್ಲಿ ಗಂಧ ತೀರುವುದಿಲ್ಲವೆಂತ ಭರವಸೆ ಕೊಟ್ಟರು. ಅದರಂತೆ ಆ ಗಂಧದ ಉತ್ಪತ್ತಿಯನ್ನೇ ವಾದ ಮಾಡಿ ಕೈಮರ ಪ್ರಮಾಣಕ್ಕಾಗಿ ಒಟ್ಟಾರೆ ವನದ ಮೂಲಕ ಮುಂದಿನ [illegible] ಹಣವೆಲ್ಲಾ ಯಾವುದೋ ಒಂದು ಭಾರೀ ಕಾಮಗಾರಿಗಾಗಿ ಖರ್ಚಾಗಿ ಅದರಿಂದ ತೆಗೆದ ಹಣ ನಮ್ಮದೇ ಸ್ವಂತವಾಗಿ ಆ ಕೆಲಸವನ್ನೇ ಇನ್ನೊಂದಕ್ಕೆ [illegible] ಮಾಡಿಟ್ಟದ್ದೆಂತಲೂ ಹಾಗೆ ನಷ್ಟವಾದದ್ದು ದೇಶದವರ ದೃಷ್ಟಿಯಿಂದ ಒಂದು ಗಡಾಯಿ ಮಾಡಿದಂತಾಯಿತೆಂತಲೂ, ಅದಕ್ಕಾಗಿ ಈಗ ಬೆಳೆಸಿರುವ ನಿಬಂಧನೆ ಸಾಧುವೇ ವಿನಃ ಪ್ರಯೋಜನವಿಲ್ಲವೆಂತಲೂ, ಇನ್ನು ಮುಂದೆ ಕೈಮರಗಳು ಉತ್ತಮ ದೇಶದ ಹಣವು ಆ ರೀತಿ ಹೋಗದಂತೆ ನಿಗಾ ಇಟ್ಟುಕೊಳ್ಳಬೇಕಾಗಿ ಹೊಸ ಮಾರ್ಗವನ್ನು ಕೈಕೊಂಡರು. ಹಾಗೆ ನಷ್ಟಪಡದೆ ಇದ್ದಲ್ಲದೆ ಅವರ ಆಚೆಗೂ ಸಹ ಹೆಚ್ಚಾಗಿಯೇ ಗಂಧ ತೆಗೆದುಕೊಂಡ ಸರ್ಕಾರದ ಅಂಕಗಳನ್ನು ಈ ಕೆಳಗೆ ಕಾಣುವಂತೆ ನಮೂದಿಸಿದರು.

1926 ರಿಂದ 1934 ರ ವರೆಗೆ	ಟ	ಹ	ಅಣ್ಣ	ಪೈ
1. ರಿಜರ್ವ್ ಫಾರೆಸ್ಟು ಮತ್ತು ಗಂಧದ ತೋಟದಿಂದ	229	14	0	235
2. ಪೈಸಾರಿ ಜಾಗದಿಂದ	1001	2	3	2
3. ಕೈಮರ ರಿಡೀಮ್ಡ್ ಜಾಗದಿಂದ	69	18	1	21
4. „ ಅನ್‌ರಿಡೀಮ್ಡ್ „	1018	2	3	2

ಈ ಲೆಕ್ಕವನ್ನು ನೋಡಿದ್ದೇ ಆದರೆ ಯಾರಿಗೂ ಸಹ ಕೈಮರದ ಜಾಗಗಳೇ ಜಾಗದಿಂದಲೇ ಹೆಚ್ಚಾಗಿ ಗಂಧ ತೆಗೆಯಲ್ಪಟ್ಟದೆಂಬುದೂ, ಅದಕ್ಕಾಗಿ ಅವನಿಗೆ ಒಂದು ಕಾಸಿನ ಇನಾಮು ವರೆಗೆ ಪ್ರಯೋಜನವಾಗಿಲ್ಲವೆಂಬುದೂ ಎಲ್ಲರಿಗೂ ತಿಳಿಯುವ ಸಂಗತಿಯಲ್ಲವೇ?

ಮೇಲ್ಕಂಡಂತೆ ಹೆಚ್ಚು ಭಾಗ ಕೈಮರ ಅನ್‌ರಿಡೀಮ್ಡ್ ಜಾಗದಲ್ಲಿ ತೆಗೆಯಲ್ಪಟ್ಟಿರುವುದರಿಂದ ಇನ್ನು ತೆಗೆಯಲಿಕ್ಕೆ ಉಳಿದಿರುವುದು ಎಳೇ ಗಂಧದ ಮರಗಳೇ ಹೆಚ್ಚಾಗಿರುವುದರಿಂದ ಈ ಮರಗಳಿಗೆ ಸರಿಯಾದ ಪ್ರತಿಫಲ ಹೊಂದಬೇಕಾದರೆ ಕೈಮರನು ಇನ್ನು ಮುಂದೆ ಅನೇಕ ವರ್ಷ ಕಾಯಬೇಕಾಗಿದೆ. ಉರುಳಿದ ಜಂತಿ ಅಂದರೆ 35 ಇಂಚು ಸುತ್ತಳತೆಯುಳ್ಳ ಮತ್ತು ಅದಕ್ಕೆ ಮೇಲ್ಪಟ್ಟ ಸುತ್ತಳತೆಯುಳ್ಳ ಮರಗಳಿಗೆ 1942ನೇ ಇಸವಿ ವರೆಗೂ ದೊರೆಯುವಂತಿಲ್ಲ. ಮತ್ತು ಜೀವಂತ ಮರಗಳಿಗೆ ಬೋನಸು ಇಲ್ಲವೇ ಇಲ್ಲ. ಸಕ್ಕಡಕ್ಕೆ ಎಷ್ಟನಂತೆ ಬೋನಸಿಗೆ ಕೈಮರನು ಅರ್ಹನಾಗಬೇಕಾದರೆ 1936 ನೇ ಇಸವಿ ಜುಲೈ ಒಳಗೆ ತನ್ನ ಹಿಡುವಳಿಯಲ್ಲಿರುವ ಗಂಧದ ಮರಗಳ ಲೆಕ್ಕ ಮತ್ತು ಅಳತೆ ಸಹ ಅಂದಿನಿಂದಲೇ ತರುವಾಯ ಕೊಡದಿದ್ದರೆ ಹಾಗೊಂದರೆ ಅದನ್ನು ಹೀಗೆ ಲೆಕ್ಕ ಕೊಡದ ಹೊರತು ಅವನಿಗೆ ಬೋನಸು ಸಿಕ್ಕಲಾರದೆಂದು ಅರ್ಥ ಮಾಡಬೇಕಾಗುತ್ತದೆ. ಲೆಕ್ಕ ಕೊಡತಕ್ಕದ್ದಕ್ಕೆ ಅವನನ್ನು ಅನರ್ಹನನ್ನಾಗಿ ಮಾಡುವುದು ಜುಲುಮಿಯಾಗಿದೆ. ಹೀಗೆ ಲೆಕ್ಕ ಕೊಡಬೇಕೆಂದು ರೂಲ್ಸ್ ಜಾರಿಗೆ ಬರುವ ಮೊದಲೇ ಕೈಮರನು ಈಗಿನಿಂದಲೇ ಪತ್ತೆ ಹಚ್ಚುವಂತೆ ಮಾಡಬೇಕಾದರೆ ಆಗಲೇ ಇದು ಕೂಡ ಸರ್ಕಾರದವರ ಹೀನಕೆಗೆ ವ್ಯತಿರಿಕ್ತವಾದದ್ದು. ಅದಲ್ಲದೆ, ನೋಡಿದರೆ 1942ನೇ ಇಸವಿಯೊಳಗೆ ಕೈಮರನಿಗೆ ಬೋನಸು ಸಿಕ್ಕಿದರೂ ದೊರೆಯದು, ಗಂಧದ ಗಿಡಗಳು ಅವನ ಜಾಗದಲ್ಲಿದ್ದರೂ ಅವನ ಅಧಿಕಾರದ ಕೈಮರನಿಗೆ ಇಲ್ಲದಾಗ ಹಣಗಳಿಗಿದ್ದಾಗೆಂತ ಅರ್ಥ ಮಾಡಬೇಕಾಗಿದೆ. ಕೈಮರನಿಗೆ ಈ ರೂಲ್ಸ್ ಜಾರಿಗೆ ಬಂದ ಕಾಲದಲ್ಲೇ ಏನೇನೂ ಪ್ರತಿಫಲ ಸಿಕ್ಕುವಂತೆ ಏರ್ಪಾಡು ಮಾಡಿದ್ದರೆ ತುಂಬಾ ಗುಣವಿತ್ತು. ಅದರ ಬದಲು ಎಳೇ ಗಿಡ ರಕ್ಷಿಸುವ ಜವಾಬ್ದಾರಿ ಮತ್ತು, ಈಗಿನಿಂದಲೇ ಅವನ ಮೇಲೆ ಹೊರಿಸಿದಂತಾಗಿದೆ. 'ಇತ್ತಲೇ ಗಂಧವು ಯಾರ ಪಾಲು' ದಿಂದಲೂ ಸರ್ಕಾರದವರ ಸ್ವತ್ತೇ ಆಗಿದೆಯೆಂತ ಹೇಳುವುದಾದರೂ ಅವುಗಳ ಪೋಷಣೆ ಮತ್ತು ಸಿಗಾ ಮಾಡುವ ಜವಾಬ್ದಾರಿಯು ಕೈಮರನಿಗೆ ಇರಲಿಲ್ಲ. ಕಾಲಕಾಲಾಂತರದಿಂದ ಸಾಕುವಂಥ ಮರಗಳಿಗೂ ಸಹ ಕೈಮರರನ್ನು ಗುರಿಪಡಿಸುತ್ತಿಲ್ಲ. ಇದ

ರಿಂದ ಕೈಮರರಿಗೆ ತುಂಬಾ ತೊಂದರೆ ಇದ್ದು. ಈಗಿನ ಕರಡು ರೂಲ್ಸ್‌ಗಳಂತೆ ಕೈಮರನು ಸರ್ಕಾರದವರ ನೌಕರನಂತೆ ಗಂಧವನ್ನು ಬೆಳೆಸುವುದರ, ಕಾಪಾಡುವದು ಅವನ ಸ್ವಂತ ಕೆಲಸಗಳ ಪೈಕಿ ಮುಖ್ಯವಾಗುವದಲ್ಲದೆ ಅವುಗಳಿಗೆ ಸ್ವಾಭಾವಿಕವಾಗಿ ಸಂಭವಿಸಬಹುದಾದ ಅನೇಕ ಉಪಹತಿಗಳಿಂದ ಕೈಮರನಿಗೆ ಅಪಾಯ ತಪ್ಪುವದಾದರೂ ಕೈಮರನು ಗಂಧದ ಪೋಷಣೆಗಾಗಿಯೇ ತನ್ನ ಜಮೀನು ಹಾಳುಮಾಡಬೇಕಾದೀತೆಂತಲೂ ತನ್ನ ವ್ಯವಸಾಯವೇ ಮೊದಲಾದ ಇತರ ಸ್ವಂತ ಕೆಲಸಗಳಿಗಿಂತಲೂ ಇದಕ್ಕೇ ಹೆಚ್ಚು ಗಮನ ಕೊಡಬೇಕಾದೀತೆಂತಲೂ ಇತ್ಯಾದಿ ಅಡಚಣೆಗಳಿರುವುದರಿಂದ ಈಗಿನ ಕರಡು ನಿಬಂಧನೆ ಸರ್ಕಾರದ ಅಭಿಪ್ರಾಯಕ್ಕಾಗಿ ತನ್ನ ಜಮೀನು ಹಾಳುಬಿಟ್ಟುಕೊಂಡು ಗಂಧದ ರಕ್ಷಣೆ ಮಾಡಲು. ಹೊಸ ಕರಡಿನಂತೆ ಇಂಥ ರೂಲ್ಸ್ ವಿಧಿಸುವುದು ಕೈಮರ ಅಭ್ಯುದಯವನ್ನು ಕುಗ್ಗಿಸುವದಾಗ ಬಹುದು ಎಂತನ್ನು ಹೇಳಿದನು [illegible] ಅಭಿಪ್ರಾಯ ಪಟ್ಟರೆ ಕಷ್ಟಗಳಿವೆ.

ಅದಲ್ಲದೆ ಈ ಹೊಸ ನಿಬಂಧನೆ ಗಂಧವನ್ನು ಬೆಳೆಸುವ ಬಗೆ ಏನೆಂದರೆ, ಅವು ಸ್ವಾಭಾವಿಕವಾಗಿ ಬೆಳೆಯುವದನ್ನು ಬಿಟ್ಟು ಗಂಧ ವಿರಳವಾಗಿರುವ ಜಾಗಗಳಲ್ಲಿ ನೆಡಬೇಕಾಗಿರುವದನ್ನು ಇನ್ನೆರಡು ದಿನ ನೋಡಿದೆನೆಂತಲೂ ಹಾಗೆ ನೆಡುವುದಕ್ಕೆ ಇದು ಸಮಯವಲ್ಲವೆಂತಲೂ, ಕೆಲವು ಭಾಗದಲ್ಲಿ ಸಂಭವವಿಲ್ಲವೆಂತಲೂ ಇದರಿಂದ ನಷ್ಟವೇ ಹೊರತು ಲಾಭವಿಲ್ಲವೆಂತಲೂ ಹಾಗೆಯೂ ಇದೇ ರೀತಿ ಗಂಧ ಬೆಳೆಸಲು ಮತ್ತು ಅಭಿವೃದ್ಧಿಪಡಿಸಲು 'ಟೆಂಡರಿಂಗ್' ಎಂಬ ಒಂದು ಹೊಸ ಪದ್ಧತಿ ಜಾರಿಯಲ್ಲಿ ತಂದರಾಗ ಕೈಮರರು, ಆ ಹೊಸ ರೀತಿಯಿಂದ ಗಂಧದ ಬೆಳೆಗಾರರಿಗೆ ಬರುವ ದಸ್ತಾವೇಜು ಒಪ್ಪಿಕೊಳ್ಳಬೇಕೆಂದೂ ಇಲ್ಲವೆಂತ ತಿಳಿಸಿದಾಗ್ಯೂ ಅವರು ಅದಕ್ಕೆ ಗಮನಕೊಡದೆ ತಮ್ಮ ರೀತಿಯನ್ನೇ ಅನುಸರಿಸಿ ಅದರಿಂದ ತುಂಬಾ ನಷ್ಟವನ್ನುಂಟುಮಾಡಿದರು. ಈಗಲೂ, ಕಾಡು ಬಾಬತ್ತು, ಇನ್ನೂ ಅದಕ್ಕೆ ಬದಲಾಗಿ ಬೀಜ ಹಾಕಿ ಸಸಿ ಎಬ್ಬಿಸಿಕೊಂಡು ಅವುಗಳನ್ನು ಮಿಶ್ರಣದಿಂದ ಹೆಚ್ಚು ಸಹಿಸತಕ್ಕ ಬೇರೆ ತರ ನೆಟ್ಟರೆ ಗಂಧ ವೃದ್ಧಿಯಾಗುವ ಸಂಭವವಿರುವುದು ಹೊರತು ಈಗಿನ ಎಳೇ ಗಿಡ ಕಿತ್ತು ನೆಡುವುದರಿಂದ ಈ ಅಂತಲ ದಪ್ಪ ಆಗ ನೆಡಲು ಬದುಕುವುದಿಲ್ಲದೇ ಈ ಪದ್ಧತಿಯನ್ನು ಈ ಕರಡಿನ ನಮ್ಮ ಸಂಬಂಧಪಟ್ಟ ಅಧಿಕಾರಿಗಳು ನಿಲ್ಲಿಸಬೇಕೆಂತ ಹೇಳಿದರು. ಅದಲ್ಲದೆ ಈಗಿನ ಸ್ಕೀಮಿನಲ್ಲಿ ಗಂಧದ ಮರಗಳ ಪೋಷಣೆ ಏನುಮಾಡಿ ಸಂರಕ್ಷಿಸತಕ್ಕ ಇಂಥ ನಿಬಂಧನೆ ಮಾಡಿದ ಬಗ್ಗೆ ಬಹಳ ವಿಷಯಗಳನ್ನು ಈಗಲೂ ಇನ್ನು ಮುಂದೆಯೂ ಜಾರಿಯಲ್ಲಿ ತರಬಾರದೆಂತಲೂ ಹಾಗೆ ವಿರಾಜಪೇಟೆ ರೂಲ್ಸ್ ವಿಧಿಸಬೇಕಾದರೆ ಗಂಧದ ಮರ ಹೆಚ್ಚಾಗಿ ಬೆಳೆಯುವ ಪ್ರದೇಶದ ಕೈಮರರುಗಳಿಂದ ಚುನಾಯಿತರಾದ ಹೆಚ್ಚು ಸದಸ್ಯರನ್ನುಳ್ಳ ಅಂದರೆ ನಾನ್ ಅಫೀಷಿಯಲ್ ಮೆಜಾರಿಟಿಯುಳ್ಳ ಒಂದು ಸಮಿತಿಯನ್ನು ಏರ್ಪಡಿಸಿ, ಅವರು ದೇಶದವರನ್ನು ಸುತ್ತಿ ಕೈಮರ ಹೇಳಿಕೆಗಳನ್ನು ಕೇಳಿ ಆ ಮೇಲೆ ಅವರು ಕೊಡುವ ಸಲಹೆಯಂತೆ ನಿರ್ಣಯವಾಗಬೇಕೆಂತಲೂ, ಜಾರಿಗೆ ತರಲಿರುವ ಕರಡು ನಿಬಂಧನೆಗಳು ತುಂಬಾ ಅಸಮರ್ಪಕವಾಗಿರುವ ಕಾರಣ ಅವುಗಳನ್ನು ಪತ್ರಗಳ ಮುಖೇನ ಎಷ್ಟು ವಿರೋಧಿಸಿದರೂ ಚೀಫ್ ಕಮಿಷನರವರು ಮುಂದಿಟ್ಟಂಗಲು ಕ್ರಮವಾಗಬಹುದಾದ್ದರಿಂದ ಅನುಭವವುಳ್ಳ ಈ ಪ್ರಾಂತ್ಯದ ಕೆಲವು ಮುಖಂಡರು ಖುದ್ದಾಗಿ ಹೋಗಿ ಚೀ. ಕಮಿಷನರಿಗೆ ಈ ತೊಂದರೆಗಳನ್ನೆಲ್ಲಾ ಕೂಲಂಕುಷವಾಗಿ ವಿವರಿಸಿದಲ್ಲದೆ ಕೈಮರರಿಗೆ ಇರುವ ಕಷ್ಟ ಪರಿಹಾರದ ನಿರ್ಣಯವನ್ನು ತಮಗೆ ಸಂದಕೆಯಾದದೆಂತಲೂ, ಹೀಗೆ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಅನಂತರ ಸಭಿಕರಲ್ಲಿ ಅನೇಕರು ಇನ್ನೂ ಹೆಚ್ಚಾಗಿ ಚರ್ಚೆ ಮಾಡಿ ಮೇಲ್ಕಂಡ ಸಲಹೆಗಳನ್ನು ಏಕಮತ ಮೂಲವಾಗಿ ಅನುಮೋದಿಸಿದ ನಂತರ ಸಭೆಯು ಬರಖಾಸ್ತಾಯಿತು.

ಇದೇ ರೀತಿ ಈ ತಾಲೂಕಿನ ಅನೇಕ ಕಡೆಗಳಲ್ಲಿ ಸಭೆ ಸೇರಿ ಜನರ ಅಭಿಪ್ರಾಯವನ್ನು ಸರಕಾರದವರ ಗಮನಕ್ಕೆ ತರಲು ತಕ್ಕ ಸಮಯದಲ್ಲಿ ದೇಶದ ಮುಂದಾಳುಗಳು ಪ್ರಯತ್ನಪಡುತ್ತಾರೆಂತ ನಂಬಿದ್ದೇನೆ.

ಡಾಕ್ಟರ್ ಮೊತ್ತಮ್ಸ್ ಎಬ್ರಹಾಮ್.

ದಂತ ವೈದ್ಯರು.

ಗೇಟಾಂಟಿ ಬಂಕ್ಸ್.

(ಮೊಕ್ಕಾಮು ಎಮುಗಿಲ)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಹೊಸ ಒಪ್ಪವಾಗಿ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—52]

ವಿವಿಧ ವಾರ್ತಾವಳಿ.

ಗ್ರೀಸಿಗೆ ಪುನಃ ರಾಜಶಕ್ತಿ.

ಪ್ರಥಮ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಗ್ರೀಸ್ ದೇಶಕ್ಕೆ ಈಗ ರಾಜಸತ್ತೆಯು ಬೇಕಾಗಿದೆಯಂತೆ. ಇದನ್ನು ನಿರ್ಧರಿಸಲು 27ನೇ ಅಕ್ಟೋಬರಿನಲ್ಲಿ ಜನಮತವನ್ನು ಗಣಿಸುವಂತೆ ನಿರ್ಧರಿಸಿರುವರು.

—೦೦೦—

ಕಮಲಾ ನೆಹರೂರವರು ಗುಣಮುಖರಾಗುತ್ತಿದ್ದಾರೆ.

ಕಮಲಾ ನೆಹರೂರವರ ದೇಹಸ್ಥಿತಿಯು ಈಗ ಸುಧಾರಿಸುತ್ತಲಿದೆ. ಜ್ವರವು ಕಡಿಮೆಯಾಗಿದೆ. ಅನ್ನಾಹಾರಗಳನ್ನು ಈಗ ಸ್ವಲ್ಪ ಹೆಚ್ಚಾಗಿ ತೆಗೆದುಕೊಳ್ಳುತ್ತಿರುವರು. ಒಟ್ಟಾಗಿ ಅವರ ದೇಹಸ್ಥಿತಿಯು ಆಶಾಜನಕವಾಗಿದೆ.

—೦೦೦—

ಲೋಕದ ಅತಿ ಚಿಕ್ಕ ವ್ಯಕ್ತಿ.

ಲೋಕದಲ್ಲಿಯೂ ಅತೀ ಚಿಕ್ಕ ವ್ಯಕ್ತಿಯೆಂದರೆ ನ್ಯೂಯಾರ್ಕಿನಲ್ಲಿ 1893ರಲ್ಲಿ ಹುಟ್ಟಿದ್ದ ಲೂಸಿಯಾ ಜ್ಯಾರೇಟ್ ಎಂಬುವಳು. ಸಂಪೂರ್ಣ ಪ್ರಾಯ ಬಂದ ಮೇಲೆ ಇವಳ ಎತ್ತರ ಬರೇ 20 ಅಂಗುಲಗಳಾಗಿದ್ದಿತು. ಸುಪ್ರಸಿದ್ಧ ಕುಳ್ಳನಾದ ಟಾಮ್ ಥಂಬನ ಎತ್ತರ 31 ಅಂಗುಲ.

—೦೦೦—

ಜಪಾನಿನಲ್ಲಿ ಗಲಾಟೆ.

ಮಂತ್ರಿ ಮಂಡಲಕ್ಕೆ ಬಾಂಬು ಎಸೆಯುವ ಗೂಢಾಲೋಚನೆ.

ಜಪಾನಿನ ಮಂತ್ರಿ ಮಂಡಲಕ್ಕೆ ಬಾಂಬು ಎಸೆದು ಅಲ್ಲಿನ ರಾಜಕೀಯ ನಾಯಕರನ್ನೆಲ್ಲ ಕೊಲೆ ಮಾಡುವ ಒಂದು ಗೂಢಾಲೋಚನೆಯು ಬಯಲಿಗೆ ಬಂದು ಆ ಸಂಗಡದ 63 ಮಂದಿಗಳನ್ನು ಸೆರೆ ಹಿಡಿದಿರುವರು. ದಸ್ತಗಿರಿ ಮಾಡುವ ಸಮಯದಲ್ಲಿ 4 ಜನರು ಮೃತಪಟ್ಟರು. ಉಳಿದವರನ್ನೆಲ್ಲ ರಾಜದ್ರೋಹಾತ್ಮಕ ತಕ್ಷೀರಿನ ವಿಚಾರಣೆಗಾಗಿ ಬಂಧಿಸಿರುವರು.

—೦೦೦—

ಸತ್ಯ ಹೇಳಿಸುವ ದ್ರವಕ.

ತಕ್ಷೀರುಗಾರರು ನಡೆಸಿದ ತಕ್ಷೀರುಗಳನ್ನೆಲ್ಲಾ ಅವರಿಂದಲೇ ಹೇಳಿಸುವ ದ್ರಾವಕವೊಂದನ್ನು ಚಿಕಾಗೋ ವಿಶ್ವವಿದ್ಯಾಲಯದ ಮಿ. ಲಿಯೋನಾರ್ಡ್ ಕೀಲರ್ ಎಂಬವರು ಕಂಡುಹಿಡಿದಿರುವರೆಂದು ತಿಳಿದು ಬರುತ್ತದೆ. ಇದನ್ನು ಅಪರಾಧಿಯ ಮೈಗೆ ಚುಚ್ಚಿ ಅವನಿಗೆ ಪ್ರಶ್ನೆ ಹಾಕಿದರೆ ಆತನಿಗೆ ಸತ್ಯ ಹೊರತು ಸುಳ್ಳು ಹೇಳಲಿಕ್ಕೇನೇ ಸಾಧ್ಯವಿಲ್ಲದಂತಾಗುವುದಂತೆ. ಇನ್ನು ಮುಂದೆ ತಕ್ಷೀರು ವಿಚಾರಣೆಗಳಿಗಾಗಿ ಈಗಿನ ಪ್ರಕಾರದ ಸಾಕ್ಷಿ ಸುಡಿಯುವಿಕೆಗಳು ಇಲ್ಲವಾಗುವವೇ?

—೦೦೦—

ಅಮೇರಿಕಾದಲ್ಲಿ ಮುಖಂಡರ ಕೊಲೆ.

ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಲೂಸಿಯಾನಾ ಸಂಸ್ಥಾನದ ಲಿಬರಲ್ ಪಕ್ಷದ ಸೆನೆಟರ್ ಹ್ಯೂಯಿ ಲಾಂಗ್‌ರವರು 1936ರಲ್ಲಿ ಅಮೇರಿಕಾ ದೇಶದ ಅಧ್ಯಕ್ಷತೆಯ ಚುನಾವಣೆಗೆ ಇಂಡಿಪೆಂಡೆಂಟ್ ಪಕ್ಷವಾಗಿ ಉಮೇದುವಾರರಾಗಿ ನಿಲ್ಲಲು ನಿರ್ಧರಿಸಿದ್ದರು. ಇವರು ತಾ 9ನೇ ಸೋಮವಾರ ಲೂಸಿಯಾನಾ ಸಂಸ್ಥಾನದ ಪಾರ್ಲಿಮೆಂಟ್ ಮನೆಯಲ್ಲಿ ಇದ್ದಾಗ ಯಾರೋ ಇವರಿಗೆ ಗುಂಡು ಹೊಡೆದು ಗಾಯಪಡಿಸಿ ಓಡಿದರು. ಹೊಟ್ಟೆಗೆ ಗುಂಡು ಪೆಟ್ಟಾದ್ದರಿಂದ ತಕ್ಷಣವೇ ಆಸ್ಪತ್ರೆಗೆ ಸಾಗಿಸಿ ಶಸ್ತ್ರಚಿಕಿತ್ಸೆ ಮಾಡಿದ ನಂತರ ಎರಡು ದಿವಸಗಳಲ್ಲಿ ಮೃತಪಟ್ಟರು. ನಾಗರೀಕ ರಾಷ್ಟ್ರಗಳಲ್ಲೂ ಈ ಕೊಲ್ಲುಕೊಲೆಗಳೇ?

—೦೦೦—

ಪಂಡಿತ ಜವಾಹಿರ್‌ಲಾಲರ ಭವಿಷ್ಯ.

ಹಸ್ತಪರೀಕ್ಷಕರ ಹೇಳಿಕೆ.

ಪಂಡಿತ ಜವಾಹಿರಲಾಲರು ಲಂಡನಿನಿಂದ ಜರ್ಮನಿಗೆ ತೆರಳುವ ಮೊದಲು, ಲಂಡನಿನ ಜೋಯಿಸ, ಕೀರೋರವರ ಶಿಷ್ಯರಾದ ತಾಕ್ಯರ್ ಲಾಲ್‌ಖಂಡರವರು, ಪಂಡಿತರ ಹಸ್ತ ನೋಡಿ, ಶ್ರೀಮತಿ ಕಮಲಾ ನೆಹರೂರವರು ರೋಗದಿಂದ ಗುಣಹೊಂದುವರೆಂದೂ, ಪಂಡಿತರು ಹಿಂದೂಸ್ಥಾನದ ರಾಜಕಾರಣಿಗಳೆಂದು ವಿಧಿಲಿಖಿತವಿದ್ದೆಂದೂ ಭವಿಷ್ಯ ಹೇಳಿದರು. ತನ್ನನ್ನು ರಾಜಕಾರಣಿ ಎಂದು ಸಂಬೋಧಿಸಿದುದರ ಕುರಿತು ಪಂಡಿತರು ತಮ್ಮ ವಿರೋಧ ಸೂಚಿಸಿದರು. ಆಗ ಜೋಯಿಸರು, ರಾಜಕಾರಣಿ ಅಲ್ಲವೆ. ಪ್ರತ್ಯಕ್ಷ ರಾಜನಾಗುವುದಿಲ್ಲವೆ, ಹೇಳಿ, ಪಂಡಿತರು, ಪ್ರಜಾಸತ್ತಾತ್ಮಕ ಹಿಂದೂಸ್ಥಾನದ ಮೊದಲನೇ ಅಧ್ಯಕ್ಷರಾಗುವರೆಂದರು.

ಸರ್ಕಾರಕ್ಕೆ ಎರಡು ಸಾರೆ ಸೋಲು.

ರಾಷ್ಟ್ರ ಪಕ್ಷದವರ ಪ್ರಚಂಡ ಜಯ.

'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ'ಗೆ ಸಮ್ಮತಿಯಿಲ್ಲ

ಕಳೆದ ವಾರ ಎಸೆಂಬ್ಲಿಯಲ್ಲಿ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ'ಯನ್ನು ಹೋಂ ಮೆಂಬರರು ತಂದರು. ಅದನ್ನು ರಾಷ್ಟ್ರೀಯ ಪಕ್ಷದವರು ಕಠಿಣವಾಗಿ ಪ್ರತಿಭಟಿಸಿ ಅದು ದೇಶಕ್ಕೆ ದ್ರೋಹಾತ್ಮಕವಾಗಿದೆಂದು ವಿರೋಧಿಸಿದರು. ಅನಂತರ ತಾ 12ರಲ್ಲಿ ಅದನ್ನು ಓಟಿಗೆ ಹಾಕಲಾಗಿ ರಾಷ್ಟ್ರಪಕ್ಷದವರ ಪರವಾಗಿ (ಅಂದರೆ ಮಸೂದೆಗೆ ವಿರೋಧವಾಗಿ) 71 ಮತಗಳೂ, ಸರ್ಕಾರದ ಪರವಾಗಿ 61 ಮತಗಳೂ ದೊರೆತದ್ದರಿಂದ ಮಸೂದೆಯು ಪಾಸಾಗಲಿಲ್ಲ. ಅದರೂ ಈ ತಾ 16ರಲ್ಲಿ ಹೋಂ ಮೆಂಬರರು ಪುನಃ ಮಸೂದೆಯನ್ನು ಸಭೆಯ ಮುಂದಿಟ್ಟು ಅದರ ಪ್ರವೇಶಕ್ಕೆ ಅನುಮತಿ ಬೇಡಿದರು. ಓಟು ತೆಗೆಯಲಾಗಿ ಪುನಃ 69 ಮಂದಿ ವಿರೋಧವಾಗಿಯೂ, 57 ಮಂದಿ ಪರವಾಗಿಯೂ ಮತಕೊಟ್ಟದ್ದರಿಂದ ಸರಕಾರದ ಪ್ರಯತ್ನಗಳೆಲ್ಲವೂ ಮಣ್ಣುಗೂಡಿದವು. ರಾಷ್ಟ್ರಪಕ್ಷದವರ ಜಯವು ಅಭಿನಂದನೀಯವಾಗಿದೆ.

—೦೦೦—

ಸಂಕಲ್ಪ ಸಾಧನೆ.

ಕೈಲಾಸ ಪರ್ವತಾರೋಹಣ.

ಯಾರ್ಕ್‌ಷೈರಿನ ಮಿ. ಮಾರಿಸ್ ವಿಲ್‌ಸನ್‌ರವರು ಎವರೆಸ್ಟ್ ಪರ್ವತದ ಮೇಲೆ ಎಲ್ಲಿಯ ವರೆಗೆ ಸಾಧ್ಯವೋ ಅಲ್ಲಿಯ ವರೆಗೂ ವಿಮಾನಯಂತ್ರದಲ್ಲಿ ಕುಳಿತು ಹಾರಿ ಹೋಗಿ ಅಲ್ಲಿಂದ ಮುಂದೆ ಶಿಖರದ ವರೆಗೂ ನಡೆದುಕೊಂಡು ಹೋಗಿ ಯೂನಿಯನ್ ಜಾಕ್ ಬಾವುಟವನ್ನು ಆ ಶಿಖರದಲ್ಲಿ ನೆಟ್ಟು ಬರಬೇಕೆಂದು ಉದ್ದೇಶಿಸಿ ಸರ್ಕಾರದವರ ಅನುಮತಿಯನ್ನು ಬೇಡಿದರು. ಅವರು ಅನುಮತಿ ಕೊಡಲಿಲ್ಲ. ಆದಾಗ್ಯೂ ಅವರು ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುವ ಉದ್ದೇಶದಿಂದ ಹೊರಟೇ ಹೊರಟರು. ಅನೇಕ ದಿನಗಳ ವರೆಗೂ ಅವರ ಸಮಾಚಾರ ತಿಳಿಯಲೇ ಇಲ್ಲ. ಮೇ ಜ. ಜಿ. ಸಿಂಪ್ಟನ್‌ರವರ ನಾಯಕತ್ವದಲ್ಲಿ ಇವರನ್ನು ಹುಡುಕಲು ಹೊರಟವರಿಗೆ ಕಳೆದ ಜುಲೈ ತಾ 9ರಲ್ಲಿ ಇವರ ಶವವು ದೊರೆತೆಂದೂ ಅದರ ಬಳಿಯಲ್ಲಿ ಒಂದು ಯೂನಿಯನ್ ಜಾಕ್ ಬಾವುಟ, ಒಂದು ನೋಟ್ ಪುಸ್ತಕ ಮತ್ತು ಕೆಲವು ಸಿನಿಮಾ ಫಿಲಂಗಳೂ ದೊರೆತಿರುವವೆಂದೂ ತಿಳಿದಿದೆ.

—೦೦೦—

ಮೈಸೂರು ನಗರದಲ್ಲಿ ಭಿಕ್ಷುಕರು.

ಶಿಕ್ಷಿತ ಯುವಕರೂ ಭಿಕ್ಷುಕರಾಗಿರುವರು.

ಮೈಸೂರು ಯೂನಿವರ್ಸಿಟಿಯ ವಿದ್ಯಾರ್ಥಿಗಳೂ, ರಾಜಧಾನಿಯ ಮುನ್ಸಿಪಾಲಿಟಿಯ ಸಹಕಾರದಿಂದ, ಪ್ರೊಫೆಸರ್ ಕೆ ಬಿ ಮಾಧವ, ಮುನ್ಸಿಪಲ್ ಪ್ರೆಸಿಡೆಂಟ್ ಮಿ. ಯಂ. ಎ ಶ್ರೀನಿವಾಸನ್, ಮಿ. ಟಿ ಕೃಷ್ಣಮೂರ್ತಿ ಇವರುಗಳೂ ಕೂಡಿ ಸುಮಾರು ನೂರು ಮಂದಿ ಮೈಸೂರು ಸಿಟಿಯಲ್ಲಿ ಎಷ್ಟು ಮಂದಿ ಭಿಕ್ಷುಕರಿದ್ದಾರೆಂಬುದರ ಗಣತಿಯನ್ನು ತಾ. 6ನೇ ರಾತ್ರಿ ತಂದು ಹಿಡಿದರು. ಇತ್ಯರ್ ಗಣತಿಯಿಂದ ಮೈಸೂರು ಸಿಟಿಯಲ್ಲಿ 848 ಮಂದಿ ತಿರುಪೆಯವರಿದ್ದಾರೆಂದು ತಿಳಿದು ಬಂದಿದೆ. ಮೊದಲು ನಡೆದ ಪ್ರಿಲಿಮಿನರಿ ಸರ್ವೆಯಲ್ಲಿ 1,400 ಜನರಿದ್ದಾರೆಂದು ಹೇಳಲಾಗಿತ್ತು. ಮಳೆ ಸುರಿದು ಕೆರೆಕಟ್ಟೆಗಳಿಗೆ ನೀರು ಬಂದು ವ್ಯವಸಾಯಕ್ಕೆ ಅನುಕೂಲವಾದುದರಿಂದ ಎಷ್ಟೋ ಜನ ಪಟ್ಟಣ ಹಳ್ಳಿಗಳಿಗೆ ಹೊರಟು ಹೋಗಿರುತ್ತಾರೆಂದೂ, ಗೌರೀ ಗಣೇಶ ಹಬ್ಬಗಳಲ್ಲಿ ಹಳ್ಳಿಗಳಲ್ಲಿ ವಿಶೇಷ ಧನ ದೊರಕುವುದರಿಂದ ಅದಕ್ಕಾಗಿ ಕೆಲವರು ಹಳ್ಳಿಗೆ ಹೋಗಿರುತ್ತಾರೆಂದೂ ಹೇಳಲಾಗಿದೆ. ಮದರಾಸ್ ಯೂನಿವರ್ಸಿಟಿಯ ಒಬ್ಬ ಬ್ಯಾಚಲರ್ ಗ್ರ್ಯಾಜುಯೇಟೂ, ಎಸ್ ಎಸ್. ಎಲ್ ಸಿ. ಮತ್ತು ಲೋವರ್ ಸೆಕಂಡರಿ ಪರೀಕ್ಷೆ ಪ್ಯಾಸ್ ಮಾಡಿದ ಅನೇಕ ಯುವಕರೂ ಭಿಕ್ಷಾವೃತ್ತಿಯಿಂದ ಜೀವನ ಮಾಡುತ್ತಿದ್ದಾರೆಂದೂ ಈ ಗಣತಿಯಿಂದ ತಿಳಿದುಬಂದಿದೆ.

—೦೦೦—

ಮುಂದಿನ ಯುದ್ಧಗಳ ಭವಿಷ್ಯ.

ಜಗತ್ಪ್ರಸಿದ್ಧ ಸುಪ್ರಸಿದ್ಧ ಜ್ಯೋತಿಷ್ಯರಾದ ಪ್ರೊಫೆಸರ್ ಕೈಯದ್ ಅಲಿ ಎಂಬವರು ಮುಂದಿನ ಲೋಕಯುದ್ಧದ ಕುರಿತು ಈ ಕೆಳಗಣ ಭವಿಷ್ಯವನ್ನು ಪ್ರಕಟಿಸಿರುವರು. ಈ ಭವಿಷ್ಯ ಪ್ರಕಾರ ಇಟಲಿ ಮತ್ತು ಅಬಿಸೀನಿಯಗಳೊಳಗಣ ಯುದ್ಧವು ಅಕ್ಟೋಬರ ಮೊದಲನೇ ವಾರದಲ್ಲಿ ಖಂಡಿತವಾಗಿಯೂ ಆರಂಭವಾಗುವುದು. ಪ್ರಥಮದಲ್ಲಿ ಇಟಲಿಯ ಸೇನೆಯು ಜಯಶೀಲವಾಗುವುದು. ಅಬಿಸೀನಿಯದ ಸ್ವಾತಂತ್ರ್ಯ ಅಪಹಾರಕ್ಕೆ ಇನ್ನು ಸ್ವಲ್ಪವೇ ಸಮಯ ಉಳಿದಿರುವುದೆನ್ನುವಾಗ, ಇಟಲಿಯು ಸ್ವದೇಶದಲ್ಲಿ ಭಯಂಕರ ಸಾಂಕ್ರಾಮಿಕ ರೋಗ ಹಬ್ಬಿ ಅವರು ಹಿಂದೆ ಸರಿಯಬೇಕಾಗುವುದು. ಅನಂತರ ಬರುವ ಜನವರಿ ಮಾರ್ಚ್ ತಿಂಗಳಲ್ಲಿ ಇನ್ನೊಂದು ಲೋಕ ಯುದ್ಧವುಂಟಾಗಿ 1937ನೇ ಫೆಬ್ರವರಿ ತಿಂಗಳ ವರೆಗೆ ನಡೆಯುವುದು. ಅದು ಪರಿಣಾಮವಾಗಿ ಯುರೋಪಿನ ನಾಗರೀಕತೆಯೇ ವಿನಾಶವಾಗುವುದು. ನಂತರ ಯುರೋಪು ದೈವಭಕ್ತಿಯಿಂದ ವರ್ತಿಸುವುದು.

ಅದರೆ ಇಂಗ್ಲೆಂಡಿನ ಭವಿಷ್ಯಜ್ಞರಾದ ಡಾಕ್ಟರ್ ಟಿ. ಜೆಚ್. ರಿಚರ್ಡರು, ಇಟಲಿ ಅಬಿಸೀನಿಯಗಳೊಳಗೆ ಯುದ್ಧವೇ ಆಗುವುದಿಲ್ಲೆಂದು ಹೇಳಿರುವರು. ಕೈಸರ ಪತನವೇ ಮೊದಲಾದ ಹಲವು ಅನಾಹುತಗಳ ಭವಿಷ್ಯ ಹೇಳಿದವರಿವರು.

ಸಿಲೋನಿನ ಸುಪ್ರಸಿದ್ಧ ಜ್ಯೋತಿಷಿಯಾದ ಶ್ರೀ. ಲಲಿತ ಸಿಂಹಲರು, ಇಟಲಿ ಅಬಿಸೀನಿಯಗಳೊಳಗೆ ಯುದ್ಧವೇ ಆಗುವುದಿಲ್ಲೆಂದು ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲವರು ತನ್ನ ಕೀರ್ತಿಯನ್ನೇ ಪಣಕ್ಕೆ ಹಚ್ಚುತ್ತಾರೆ. ಇಟಲಿಯ ರಾಜರ ಮತ್ತು ಮುಸಲೋನಿಯವರ ಜಾತಕಗಳ ಆಧಾರದಿಂದ ಈ ಭವಿಷ್ಯವನ್ನವರು ಹೇಳಿರುವುದು.

—೦೦೦—

ಇಟಲಿ-ಅಬಿಸೀನಿಯಾ.

ಬ್ರಿಟಿಷ್ ಪ್ರತಿನಿಧಿಗಳ ಉದ್ಗಾರ.

ಇಂಗ್ಲೆಂಡಿನ ಪರರಾಷ್ಟ್ರ ಸಚಿವರಾದ ಸರ್ ಸಾಮುವೆಲ್ ಹೋರರು ಜಿನೀವಾದಲ್ಲಿ ನೆರೆದಿರುವ ರಾಷ್ಟ್ರ ಸಂಘದ ಅಧಿವೇಶನದಲ್ಲಿ ಇಟಲಿ-ಅಬಿಸೀನಿಯಾ ಸಮಸ್ಯೆಯ ವಿಷಯ ಬ್ರಿಟನ್ನಿನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

ಸಕಲ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯತ್ವವನ್ನು ಉಳಿಸಬೇಕೆಂಬುದೇ ಇಂಗ್ಲೆಂಡಿನ ಉಚ್ಚ ಉದ್ದೇಶವೆಂದು ಸಾರಿದರು. ರಾಷ್ಟ್ರ ಸಂಘವು ಎಲ್ಲ ಸಣ್ಣ ಪುಟ್ಟ ರಾಷ್ಟ್ರಗಳ ಪಕ್ಷತ್ವವನ್ನು ವಹಿಸಿ ಬಲತ್ಕಾರ ಪ್ರಯೋಗಗಳಾಗದಂತೆ ಸಂರಕ್ಷಣೆಗಳನ್ನೀಯಬೇಕೆಂದರು. ಬ್ರಿಟನ್ನು ಭಾರತದ ವ್ಯಕ್ತಿತ್ವಕ್ಕೆ ಎಷ್ಟರ ಮಟ್ಟಿಗೆ ಕೃಪೆಯನ್ನಿಟ್ಟಿರುತ್ತದೆಂಬುದನ್ನೇ ಉದಾಹರಣೆಯಾಗಿ ಹೇಳಿದರು. ರಾಷ್ಟ್ರ ಸಂಘದ ಅಧಿವೇಶನದಲ್ಲಿ ಬ್ರಿಟನಿನ ಪರ ಭಾರತದ ವಿಚಾರ ದೊಡ್ಡ ಪ್ರಚಾರ ನಡೆಸಿದರು. ಸುಭಾಷ್ಚಂದ್ರ ಬೋಸರು ಭಾರತದಲ್ಲಿನ ಕಾರ್ಯ ಕಲಾಪಗಳನ್ನು ವಿದೇಶದಲ್ಲಿ ಪ್ರಚಾರ ಮಾಡಬೇಕೆಂದು ಸೂಚನೆಯು ಪ್ರಭಾವದಾಗಿರಬಹುದೋ ಇದು!

ಜರ್ಮನಿಗೆ ಗೊಡವೆ ಬೇಡ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದ ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ, ಕೋಶದ ರೋಗಗಳಿಗೆ ದಿವ್ಯ ಔಷಧ.
ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—... ಅರ್ಧ ಬಾಟ್ಲಿಗೆ ರೂ. 1—2—0.

ಚ್ಯವನ ಪ್ರಾಶ—ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—5—0,

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—...

(... ಕೆಟಲಾಗ್ ಧರ್ಮಾರ್ಥ.)

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬರು 1, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:-
(1) ಎ. ಬಿ. ಕಾಮತ್ ಮಹದೇವಪೇಟೆ, ಮಡಿಕೇರಿ (ಕೊಡಗು).
(2) ಎ ಎಸ್. ಮಾಚಯ್ಯ, ಒಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
(3) ಮೆಸರ್ಸ್ ಕಾವ್ಲತ ಎಂಡ್ ಕೊ. ತಾರಾ ಹೌಸ್ ಗಿರಿಗಾಂವ್ ಬ್ಯಾಕ್‌ರೋಡ್, ಬೊಂಬಾಯಿ ನಂ. ...
52—8 (4) ಮೆಸರ್ಸ್ ಮುಲ್ಲರ್ ಪೆಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಸಾವು ಕಿಷ್ಕಿಗೆ ಛಲವನೆಯುತ್ತೇಯುತೀಳ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—47 ಬೆಂಗಳೂರು.

ಕೊಡಗು ವಿದ್ಯಾಭಿವೃದ್ಧಿ ಫಂಡಿನ

1934–35ನೇ ವರ್ಷದ ವರದಿ.

ಈ ವರ್ಷದಲ್ಲಿ ಡಿ. ಬಿ. ಕೆ. ಚಂಗಪ್ಪನವರು ಸಂಘದ ಅಧ್ಯಕ್ಷರಾಗಿಯೂ ಮೆ. ಕೆ. ಯಂ. ಬೆಳ್ಯಪ್ಪನವರು ಗೌರವ ಕಾರ್ಯದರ್ಶಿಯಾಗಿಯೂ ಮೆ ಯಂ. ಎ. ಚಂಗಪ್ಪನವರು ಖಜಾಂಚಿಯಾಗಿಯೂ ಫಂಡಿನ ಕಾರ್ಯಗಳನ್ನು ನಡೆಸುತ್ತಿದ್ದರು.

(2) ಫಂಡಿನ ಈ ವರ್ಷದ ಸದಸ್ಯರುಗಳ ಸಂಖ್ಯೆಯು 172 ರಿಂದ 82 ಕ್ಕೆ ಇಳಿದಿದೆ. ಇವರ ಪೈಕಿ 25 ಇತರ ಮಹನೀಯರು, 48 ಮಂದಿ ಸರಕಾರಿ ನೌಕರರು ಮತ್ತು 9 ಮಂದಿ ಈ ಫಂಡಿನಿಂದ ಸಹಾಯ ಹೊಂದಿಕೊಂಡವರು. ಈ ವರ್ಷ ಇಷ್ಟು ಮಂದಿ ಕಡಮೆಯಾದುದಕ್ಕೆ ನಾನು ತುಂಬಾ ವ್ಯಸನಪಡುತ್ತೇನೆ. ಸಂಘದಿಂದ ಸಹಾಯ ಹೊಂದಿಕೊಂಡು ಈಗ ಉದ್ಯೋಗದಲ್ಲಿರುವವರನೇಕರು ಮುಂದಿನ ವಿದ್ಯಾಭಿವೃದ್ಧಿಗೆ ಸಹಾಯಕೊಡಲು ಹಿಂಜರಿಯುತ್ತಾರೆಂದಾಯಿತು. ಈ ಫಂಡು 1917ನೇ ಇಸವಿಯಲ್ಲಿ ಸ್ಥಾಪಿತವಾದಾಗ್ಯೂ ಇದರ ಸದಸ್ಯರುಗಳ ಸಂಖ್ಯೆಯು ಈ ಫಂಡಿನಿಂದ ಸಹಾಯ ಹೊಂದುವವರಿಗಿಂತ ಕಡಮೆ. ಇಂದಿನ ಯುವಕರು ಮುಂದೆ ದೇಶೋನ್ನತಿಗೆ ಸಹಾಯವನ್ನೀಯುವ ಮುಂದಾಳುಗಳಾದರೂ ಅನೇಕ ಮಹನೀಯರು ಈ ಫಂಡಿನ ಸದಸ್ಯರುಗಳಾಗಲಿಕ್ಕೆ ಹಿಂಜರಿಯುತ್ತಾರೆ. ಇನ್ನು ಮುಂದಕ್ಕಾದರೂ ಮೆಂಬರಾಗಿ ಫಂಡಿನ ಏಳಿಗೆಗೆ ಹೋರಾಡಬೇಕೆಂದು ಕೋರಲಾಗಿದೆ. ಸೆಂಟ್ರಲ್ ಕಮಿಟಿಯವರ ಮುಖವರ್ಜಿಯಿಂದಲೂ ಸಹಾಯದಿಂದಲೂ ಈ ಫಂಡನ್ನು ಇಷ್ಟರ ಮಟ್ಟಿಗೆ ಅಭಿವೃದ್ಧಿಯಲ್ಲಿಟ್ಟದ್ದಾಗಿದೆ. ಈ ಫಂಡಿನಿಂದ ಸಹಾಯ ಹೊಂದಿದವರು ತಮ್ಮ ಹಾಗೆಯೇ ಹಿಂದುಳಿದ ಸಹೋದರ ಸಹೋದರಿಯರಿಗೆ ಸಹಾಯವನ್ನು ಈ ಫಂಡು ಮಾಡತಕ್ಕದಿದೆ ಎಂದು ತಿಳಿದು ತಮ್ಮ ಉತ್ತೇಜನವನ್ನು ಕೊಡಲು ಮರೆಯಬಾರದಾಗಿ ಕೇಳಿಕೊಳ್ಳಲಾಗಿದೆ.

ಆರ್ಥಿಕ ಸ್ಥಿತಿ.

(3) ಸಹಾಯ ಹೊಂದಿಕೊಂಡವರಿಂದ ಬರ

ಬೇಕಾದದ್ದು	ರೂ.	14666	8	0
ಸೆಂಟ್ರಲ್ ಬ್ಯಾಂಕಿನಲ್ಲಿ ಡಿಪಾಜಿಟ್ಟು	,,	4000	0	0
,, ,, ಪಾಲು	,,	1000	0	0
,, ,, ಬಡ್ಡಿ	,,	242	8	0
ಒಟ್ಟು	,,	19909	0	0

ವರದಿಯ ವರ್ಷದ ಒಟ್ಟು 8247–5–6 ರೂಪಾಯಿ ಆದಾಯದಿಂದ ರೂ. 7202–14–0 ಖರ್ಚು ಕಳೆದು ಬಾಕಿ ರೂ. 1044–7–6 ಶಿಲ್ಕು ನಿಂತಿದೆ.

(4) ಮೀಟಿಂಗುಗಳು:—ವರದಿ ವರ್ಷದಲ್ಲಿ ಒಂದು ಜನರಲ್ ಮೀಟಿಂಗು ಮತ್ತು ನಾಲ್ಕು ಕಮಿಟಿ ಮೀಟಿಂಗುಗಳು ನಡೆದವು.

ಫಂಡಿನ ಕಾರ್ಯಗಳು:—ವರದಿ ವರ್ಷದಲ್ಲಿ ರೂ. 105 ವೇತನಗಳು 8 ರೂ. 50 ವೇತನಗಳು 2 ಕೊಡಲ್ಪಟ್ಟವು. ಈ ಸಂಘಕ್ಕೆ ಚಂದಾ ಹಣವನ್ನೂ, ಉಚಿತಾರ್ಥ ಹಣವನ್ನೂ ಕೊಟ್ಟವರಿಗೂ ಮತ್ತು ವಸೂಲು ಮಾಡಲು ಪ್ರಯತ್ನಪಟ್ಟ ಮಹನೀಯರಿಗೂ ವಂದನೆಗಳನ್ನು ಅರ್ಪಿಸುತ್ತೇನೆ. ಅಲ್ಲದೆ 'ಕೊಡಗು ಮತ್ತು ಕೊಡಗರು' ಎಂಬ ಪುಸ್ತಕವನ್ನು ಕೊಂಡ ಮಹನೀಯರಿಗೆ ತುಂಬಾ ವಂದಿಸುತ್ತೇನೆ.

(5) ಸಂಘದಿಂದ ಸಹಾಯ ಹೊಂದಿಕೊಂಡವರು ತಮ್ಮ ಉತ್ಪತ್ತಿಯ ಶೇಕಡ 5ರಂತೆಯಾದರೂ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ಉತ್ತೇಜನ ಕೊಡಬೇಕೆಂದು ನಾನು ಒತ್ತಿ ಹೇಳಬೇಕಾಗಿಲ್ಲ. ಹೀಗೆ ಅನುಸರಿಸದಿದ್ದಲ್ಲಿ ಈ ಫಂಡು ಕ್ಷೀಣಗತಿಗೆ ಬೀಳುವುದು.

(6) ದಿವಂಗತ ತಿಮ್ಮಯ್ಯನವರು ಸಂಘದ ಉದ್ಧಾರಕ್ಕೋಸ್ಕರ ರೂ. 5000 ಸರಕಾರಿ ಪ್ರಾಮಿಸರಿ ನೋಟನ್ನು ಕೊಟ್ಟರು. ಇವುಗಳನ್ನು ಮಾರಿ ರೂ. 4788–9–0 ಸಿಕ್ಕಿತು. ಅವರ ಹೆಸರ ಚಿರಸ್ಮರಣೀಯಕ್ಕಾಗಿ ಆ ಹಣದ ಬಡ್ಡಿಯಿಂದ 12 ರೂಪಾಯಿಯ ಎರಡು ವೇತನಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇವು 'ತಿಮ್ಮಯ್ಯ ವೇತನ'ವೆಂಬ ಹೆಸರಿನಿಂದ ಕರೆಯಲ್ಪಡುವುವು

(7) ಸಂಘದ ಆಸ್ತಿಯನ್ನು ಬಲಪಡಿಸಲಿಕ್ಕಾಗಿ ಹಿಂದೆ ಒಂದು ಲಾಟರಿಯನ್ನು ಏರ್ಪಡಿಸಲಾಯಿತು. ಅದರ ಒಂದು ಸಾವಿರ ಟಿಕೇಟುಗಳನ್ನು ಸಹ ಮಾರಲಿಕ್ಕಾಗದಿದ್ದರೆ ಕೊಡಗಿನ ಮಹಾಶಯರು ಸಂಘದ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ಹೋರಾಡುತ್ತಿರುತ್ತಾರೆಂದು ತೋರಿಸುತ್ತದೆ. ಟಿಕೇಟುಗಳ ಬೆಲೆಯು 10 ರೂ. ಕೊಡಗಿನಂತಹ ದೇಶ ಪ್ರದೇಶಗಳ ಲಾಟರಿಗೆ ಕಳುಹಿಸುತ್ತಾರೆಂದು ನಾನು ತಿಳಿದಿದ್ದೇನೆ. ಮಧ್ಯಮ ಕಮಿಟಿಯವರೂ ಕೊಡಗಿನ ಮಹಾಶಯರಿಂದಲೂ ಮತ್ತು ಸಂಘದಿಂದ ಸಹಾಯ ಹೊಂದಿಕೊಂಡವರಿಂದಲೂ ಹೆಚ್ಚಾದ ಪ್ರೋತ್ಸಾಹವು ದೊರೆಯಬಹುದೆಂದು ನಂಬಿದ್ದೆನು. ಅದರ ಹೆಚ್ಚಿನ ಪ್ರೋತ್ಸಾಹವು ದೊರೆಯುತ್ತದೆಂದು ಲಾಟರಿಗೆ ಇಟ್ಟ ಐದು ಬೀಳೆ ಕಟ್ಟಗಳನ್ನು ಎರಡಕ್ಕೆ ಇಳಿಸಲಾಯಿತು. ಲಾಟರಿಯು ತಾ. 15–7–35 ರಲ್ಲಿ ಎತ್ತಲಾಯಿತು.

(8) ನನ್ನ ವರದಿಯನ್ನು ಪೂರೈಸುವುದಕ್ಕೆ ಮೊದಲು ನನ್ನ ಕೆಲಸದಲ್ಲಿ ಬುದ್ಧಿವಾದಗಳನ್ನೂ, ಸಹಾಯವನ್ನೂ ಮಾಡಿದ ಮಹನೀಯರಿಗೆಲ್ಲಾ ನನ್ನ ವಂದನೆಗಳನ್ನು ಅರ್ಪಿಸುವದಲ್ಲದೆ ಎಲ್ಲರೂ ಈ ಫಂಡಿಗೆ ಉತ್ತೇಜನ ಕೊಡಬೇಕೆಂದು ಕೋರುತ್ತೇನೆ.

ಕೆ. ಯಂ ಬೆಳ್ಯಪ್ಪ,
(ಗೌ. ಕಾರ್ಯದರ್ಶಿ)

ಪತ್ರವ್ಯವಹಾರ.

[ವಾರ್ತಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಮಹಮದ್ ಪೈಗಂಬರರ ಜನ್ಮದಿನೋತ್ಸವ.

ಅಯ್ಯಾ,

ಮಡಿಕೇರಿಯಲ್ಲಿ ಎಂದಿನಂತೆ ಈ ವರ್ಷವೂ ಮಹಮ್ಮದೀಯ ಸಹೋದರರು ಮಹಮ್ಮದ್ ಪೈಗಂಬರರ ಜನ್ಮದಿನವನ್ನು ಬಹು ವಿಜೃಂಭಣೆಯಿಂದ ನಡೆಸಿದರೆಂಬುದನ್ನು ಓದಿ ಸಂತೋಷವಾಯಿತು. ಇವರ ಮತಾಭಿಮಾನವೂ, ಉತ್ಸಾಹವೂ, ಒಗ್ಗಟ್ಟೂ ಹೊಗಳತಕ್ಕದ್ದು.

ಆದರೆ ಈ ವಿಷಯದಲ್ಲಿ ಸಾರ್ವಜನಿಕ ಕೂಟವನ್ನು ಸೇರಿಸಲು ಇವರೇಕೆ ಇಷ್ಟೊಂದು ಉತ್ಸಾಹವನ್ನು ತೋರಿಸುತ್ತಾರೆ? ಆದರ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ, ಸಾಧ್ಯವಾದಷ್ಟು ಸರ್ವರಿಗೂ ಅದನ್ನು ಹಂಚಿ, ಪರ ಪ್ರಾಂತ್ಯದಿಂದ ವಾಕ್ಚಾತುರ್ಯವುಳ್ಳ ಮತಾಭಿಮಾನಿಗಳನ್ನು ಕರೆಸಿ, ಇಸ್ಲಾಂ ಧರ್ಮದ ಮೇಲೂ ಮಹಮ್ಮದ್ ಪೈಗಂಬರರ ಮೇಲೂ ರಮ್ಯವಾದ ಭಾಷಣಗಳನ್ನು ಇವರೇಕೆ ಕೊಡಿಸುತ್ತಾರೆ? ಎಲ್ಲವೂ ಮತಾಭಿಮಾನ. ಈ ವಿಷಯವನ್ನು ನಾವು ಇವರಿಂದ ಕಲಿತುಕೊಂಡು ನಮ್ಮ ಮತದ ಮೇಲೂ ಇಷ್ಟೇ ಅಭಿಮಾನವನ್ನು ತೋರಿಸಿದರೆ ಲೋಕದಲ್ಲಿ ಧರ್ಮಕ್ಕೆ ನಾಶವಿಲ್ಲ.

ಮಡಿಕೇರಿಯ ಮಹಮ್ಮದೀಯ ಸಹೋದರರು ಇನ್ನಾವ ರೀತಿಯಲ್ಲೂ ಇತರರೊಡನೆ ಬೆರಕೆಯಾಗುವುದು ಅಪರೂಪವಾಗಿ ತೋರುತ್ತದೆ. ಮಹಮ್ಮದ್ ಪೈಗಂಬರರ ಜನ್ಮದಿನದ ಆಹ್ವಾನವನ್ನು ಹೊಂದುತ್ತಿದ್ದ ನಾನು ಈ ವರೆಗೆ ನನ್ನ ಮಹಮ್ಮದೀಯ ಸ್ನೇಹಿತರಿಂದ ಮದುವೆ ಅಥವಾ ಇನ್ನಾವ ಬೇರೆ ವಿಶೇಷ ಕಾರ್ಯಗಳಿಗೆ ಆಹ್ವಾನವನ್ನು ಪಡೆದಿಲ್ಲ. ಜನಾಂಗ (Nation building) ನಿರ್ಮಾಣಕ್ಕೆ ಮತ ಪ್ರಚಾರಕ್ಕಿಂತಲೂ ಒಡನಾಟ ಪ್ರೇಮವೇ ಮುಖ್ಯ. ನಮ್ಮ ಈಗಿನ ಸ್ಥಿತಿಯಲ್ಲಿ ನಮಗೆ ಮತ ಪ್ರಚಾರ ಬೇಕಾಗಿರುವುದಿಲ್ಲ. ಜಪ್ಯದೇ ನಮಗೆ ಕಟ್ಟು ಕಟ್ಟಾಗಿ ಬಿದ್ದಿದೆ. ಮತಾಭಿಪ್ರಾಯಗಳು ನಮ್ಮ ದೇಶದಲ್ಲಿ ಒಗ್ಗಟ್ಟನ್ನು ತಪ್ಪಿಸುವುದಕ್ಕೆ ಸಾಧನಗಳೇ ಹೊರತು ಅದನ್ನು ಭದ್ರಪಡಿಸಲು ಶಕ್ತಿಯುಳ್ಳವಲ್ಲ.

ಸುಮಾರು ಒಂದು ವರ್ಷದ ಹಿಂದೆ ಮದ್ರಾಸಿನ ಅರಬೀ ಕಾಲೇಜಿನ ಪಂಡಿತರಾದ ಪ್ರೊ. ಬಿಕಾರಿಯವರು ಮಡಿಕೇರಿಯಲ್ಲಿ ಇಸ್ಲಾಂ ಧರ್ಮದ ವಿಚಾರವಾಗಿ ಭಾಷಣ ಮಾಡುತ್ತಿರುವಾಗ ಮಹಮ್ಮದೀಯ ಗೃಹಸ್ಥರೊಬ್ಬರು ಎದ್ದು ನಿಂತು ಡಾಕ್ಟರ್ ಬರ್ನಾರ್ಡ್ ಷಾರವರು ಇಸ್ಲಾಂ ಮತವನ್ನು ಅಂಗೀಕರಿಸುವರೋ ಎಂಬುದಾಗಿ ಸೂಚಿಸಿದರು. ಷಾ ಬರ್ನಾರ್ಡ್ ಷಾರ ವಿಷಯವಾಗಿ ಇನ್ನೂ ಚೆನ್ನಾಗಿ ತಿಳಿದುಕೊಂಡಿದ್ದ ಸಭಿಕರು ತಮ್ಮ ನಗುವನ್ನು ನುಂಗಿಕೊಂಡು ಸುಮ್ಮನಾದರು. ಈ ತರಹದ ಪ್ರಚಾರ ಕಾರ್ಯಗಳು ಕೆಲವು ವೇಳೆ ನಮ್ಮ ಮನಸ್ಸನ್ನು ನೋಯಿಸುವುದುಂಟು. ನಮ್ಮ ಮಹಮ್ಮದೀಯ ಸ್ನೇಹಿತರು ಇತರ ವಿಷಯಗಳಲ್ಲೂ ಕೂಡ ಉತ್ಸಾಹದಿಂದ ಕೆಲಸ ಮಾಡಿ ಒಡನಾಟ ಪ್ರೇಮವನ್ನು ಹೆಚ್ಚಿಸಬೇಕೆಂದು ಕೋರಿದೆ. ಈ ವಿಷಯದಲ್ಲಿ ದಿವಂಗತ ಖಾನ್ ಬಹದ್ದೂರ್ ರಸೂಲ್ ಖಾನರು ಆದರ್ಶಪ್ರಾಯರಾಗಿದ್ದರು. ಅವರ ಹೆಸರು ಚಿರಸ್ಮರಣೀಯವಾಗಿರಲಿ.

ಗ್ರಾಮಾರ್ಜಬಿ.

SHIROMANI NARAYANACHARYA
Choukhamba Benares City.

THIS MAN
OUR CUSTOMER

ಶಾಸ್ತ್ರಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನ ಡಾಕ್ಟರುಗಳು ಯಾರನ್ನೇ ಕೇಳಿ, ಶರೀರದ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ದೇಹದಲ್ಲಿ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಮತ್ತು ಶೀಘ್ರ ಇವುಗಳೆಲ್ಲಾ ಆಗುವುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಥವ ಪ್ರಮಾಣದ ಕಂಠದ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 30ರಿಂದ ರೂ. 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 30ರಿಂದ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12–13–14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಇವುಗಳ ಕೆಟಲಾಗನ್ನು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಬಹುಮಾನಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ವಿಶ್ವನಾಥ ಕೆಟಲಾಗನ್ನೂ ದರ 3 ಬಹುಮಾನಗಳು.)

ಶಿರೋಮಣಿ ನಾರಾಯಣಾಚಾರ್ಯ,
52—4 ಚೌಖಂಬಾ, ಬೆನಾರಸ್ (ಕಾಶೀ.)

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆನೋವು, ಸೊಂಟನೋವು, ನಿಶ್ಶಕ್ತಿ, ಬೆನ್ನು ಮೂಳೆನೋವು, ಸೋಮರೋಗ, ಕುಸುಮ ಬಾಧ್ಯ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭರಕ್ಷಿಣಿಯು.

ದೊಡ್ಡ ಕುಪ್ಪಿ 2–8–0.
ಅರ್ಧ ಕುಪ್ಪಿ 1–6–0.

ನವರತ್ನ
ದ್ರಾಕ್ಷಾರಿಷ್ಟ.

ಕ್ಷಯರೋಗ, ಅಗ್ನಿಮಾಂದ್ಯ, ಅರುಚಿ ನಿಶ್ಶಕ್ತಿ ವಗೈರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉತ್ಸಾಹವನ್ನು ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಕುಪ್ಪಿ 1–8–0, ಅರ್ಧ ಕುಪ್ಪಿ 0–13–0

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

ಸ್ಟಾಕಿಸ್ಟ್—ವಿ. ಎಸ್. ಸೂರಯ್ಯ, ಲಕ್ಷ್ಮಿ ವ್ಯಾಪಾರಿ, ಕುಂಟಿಕೊಪ್ಪ. 52—17
ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

ಸುಖಿ ದಾಂಪತ್ಯಕ್ಕೆ ಇಪ್ಪತ್ತು ಪರಮ ಮಂತ್ರಗಳು.

(ಅನುವಾದಕ—ಬಿ ಟಿ ಜಿ)

ದಾಂಪತ್ಯ ಸುಖವು ಇಂದ್ರ ಜಾಲ ವಿದ್ಯೆಯಲ್ಲ. ದಂಪತಿಗಳು ಒಬ್ಬರನೊಬ್ಬರು ಒಲಿಸುವ ಗುಟ್ಟನ್ನು ತಿಳಿದರೆ ಅವರು ಸದಾ ಸುಖಿಗಳಾಗಿರುವರು. ಇಂತಹ ಗುಟ್ಟುಗಳು ಎಷ್ಟೋ ಇವೆ. ಅವುಗಳಲ್ಲಿ ಈ ಕೆಳಗಿನ ಇಪ್ಪತ್ತು ವಿಷಯಗಳನ್ನು ಮುಖ್ಯವಾದವುಗಳೆಂದು ಭಾವಿಸಬೇಕು. ಮದುವೆ ಎಂಬುದು ಎಲ್ಲಾ [illegible]ವಲ್ಲ. ಮನುಷ್ಯ ಜೀವನದಲ್ಲಿ ಇದು ಅತೀ ಮುಖ್ಯವಾದ ಬದು ಸಂಘಟನೆ. ಈ ಇಪ್ಪತ್ತು ಮರ್ಮಗಳನ್ನು

(1) ಈಗ ತಾನೆ ಮದುವೆಯಾದವರು.

(2) ಇನ್ನು ಮದುವೆಯಾಗಲಿರುವವರು.

(3) ಮದುವೆಯಾಗಿ ಸುಖಪಡುತ್ತಿರುವವರು.

ಚೆನ್ನಾಗಿ ಗ್ರಹಿಸಬೇಕು.

(1) ಮನೆಗೆ [illegible] ಗಂಡನು ಬರುವಾಗ ಆ ಸ್ವಾಗತಕ್ಕೆ [illegible] ಸ್ತ್ರೀ ಹರ್ಷದ ನಗೆಯಿಂದ ಅದಕ್ಕೆ [illegible] ಹೆಂಗಸು ಗ್ರಹಿಸಿಕೊಂಡು ಗಂಡನನ್ನು ಸ್ವಾಗತಿಸಬೇಕು.

(2) ದಾಂಪತ್ಯ ಪ್ರೇಮದ ಅಭಿವೃದ್ಧಿಗೆ ಗಂಡ—ಗಂಡ ಹೆಂಗಸು [illegible] ತನ್ನ ಪತ್ನಿಯನ್ನು [illegible] ನೋಡಿ [illegible] ಪ್ರಶಂಸಿಸಬೇಕು [illegible] ಇದರಿಂದ ಗಂಡನನ್ನು ತಿಳಿಯದ ಸ್ತ್ರೀಯರು ಯಾರೂ ಇರುವುದಿಲ್ಲ.

(3) ಗಂಡ ಹೆಂಡತಿ [illegible] ಒಬ್ಬರು ಮಾತಾಡ ಬೇಕು [illegible] ಒಬ್ಬರಿಗೆ ಸಿಟ್ಟುಗೊಳ್ಳಬಾರದು. ಒಬ್ಬರ ಸಿಟ್ಟಿನ [illegible] ಹಾಗೆ ಜಗಳಗಳಲ್ಲಿ ದುಷ್ಪರಿಣಾಮವಿಲ್ಲ.

(4) [illegible] ದೋಷಗಳು [illegible] ವಾಸ್ತವವಾದ [illegible] ಬೇಕು [illegible] ಹೆಣ್ಣು [illegible] ಮನೆಯ [illegible] ಮಾಡಿಕೊಂಡಿರುತ್ತಾರೆ.

(5) ಗಂಡನು ಪ್ರತಿ ಸ್ತ್ರೀಯ ಮನಸ್ಸನ್ನು [illegible], ವ್ಯಾಪಾರದ [illegible] ಮನೆಯಿಂದ ಹೊರಟು, ಸಾಯಂಕಾಲ ಮನೆಗೆ [illegible] ಬರುವುದರಿಂದ ತಿಳಿದರೆ [illegible] ಅವಶ್ಯಕವಾಗಿ ಇಲ್ಲಿ ತನ್ನ ಪತ್ನಿ ಬಳಿಕೆಯಿಂದ ಮಾತುಕೊಂಡಿರಬೇಕು. ಅವರ ಮುಂದೆ ತನ್ನ ಕರ್ತವ್ಯ [illegible] ಹಾಗೆ ಪತಿ ಪತ್ನಿಯರಿಬ್ಬರೂ ಪತಿಗೆ ಆ ವಿಷಯವನ್ನು ಹೇಳಬೇಕು.

(6) ಪತ್ನಿ [illegible] ದಾಂಪತ್ಯವನ್ನು ಒಟ್ಟು ಸೌಖ್ಯದಿಂದ [illegible] ಗಂಡನು [illegible] ಮನಸ್ಸಿನಿಂದ ಅವರ ಕಾರ್ಯ [illegible] ಇದರಿಂದ ಮಾಡಿ ಗೆ ಗಂಡನಲ್ಲಿ [illegible] ಹುಟ್ಟುವುದು.

(7) ಪ್ರತಿಯೊಬ್ಬ ಮನುಷ್ಯನಿಗೂ ಏನಾದರೂ ಒಂದು ಹುಚ್ಚು ಇರುತ್ತದೆ. ಕೆಲವರು ಬೇಟೆಯಲ್ಲಿ ಮಗ್ನರಾಗಿರುತ್ತಾರೆ. ಇನ್ನು ಕೆಲವರು ಛಾಯಾ ಚಿತ್ರ ತೆಗೆಯುವುದರಲ್ಲಿ. [illegible] ಬೇರೆ ಬೇರೆ ತರಹದ 'ಹುಚ್ಚು' ಗಳಿರುತ್ತವೆ. ಪತಿಯು [illegible] ಹೊರಟಿರುವಾಗ [illegible] 'ಹುಚ್ಚ'ನಲ್ಲಿ ಕಳೆಯುತ್ತಿರುವಾಗ ಪ್ರೀತಿ [illegible] ಉಚಿತ. ಪ್ರೇಮಕ್ಕೆ ವಿರೋಧ 'ಹುಚ್ಚು' ಯಾವುದೂ ಇಲ್ಲ.

(8) ದಂಪತಿಗಳು ತಮ್ಮ ಮನೆತನ ಮತ್ತು ಬಂಧುಗಳ ನೆಗ್ಗಲಿಕೆಯನ್ನು ಆಗಾಗ್ಗೆ ಹೇಳಿಕೊಳ್ಳುತ್ತಾ ಒಬ್ಬೊಬ್ಬರನ್ನು ಅಲ್ಲಗಳೆಯಬಾರದು. ಈ ವಿಷಯದಲ್ಲಿ ತುಂಬಾ ಎಚ್ಚರಿಕೆ.

(9) "ಜೋತ್ಸನಂತೆ ಮಲಗಿ ಕೋತ್ಸನಂತೆ ಏಳು" ಎಂಬ ವಿಷಯವನ್ನು ಮರೆಯಬಾರದು. ಸಿದ್ಧಾಂತೀಕರಣದಿಂದ ಆರೋಗ್ಯವು ಕೆಡುತ್ತದೆ. ಕೆಲವು ಸ್ತ್ರೀಯರು ರಾತ್ರಿ ಬಹು ವೇಳೆಯ ವರೆಗೂ ಮನೆ ಕೆಲಸಗಳನ್ನು ಮಾಡುತ್ತಿದ್ದು ದಣಿವಿನಿಂದ ಆಲಸ್ಯವನ್ನು ಹೊಂದುತ್ತಾರೆ. ಇದರಿಂದ ದೇಹಕ್ಕೆ ತುಂಬಾ ಕಷ್ಟವು.

(10) ಭೋಜನ ಶಾಲೆಯಲ್ಲಿ ಸ್ತ್ರೀಯ ಚಮತ್ಕಾರಿಕೆ ಬೇಕು. ಆಹಾರವನ್ನು ನೀಡುವುದರಲ್ಲಿ ತುಂಬಾ ಕ್ರಮಗಳಿವೆ ಮತ್ತು ಕ್ರಮ ಪ್ರಕಾರವಾಗಿ ನೀಡಿದ ಆಹಾರದಲ್ಲಿ ಹೆಚ್ಚು ರುಚಿ ಇರುತ್ತದೆ. ಬಿಸಿ ಪದಾರ್ಥಗಳೂ, ಕಾಲಕ್ಕೆ ಸರಿಯಾದ ಆಹಾರವೂ ಊಟಮಾಡುವವರ ಮನಸ್ಸನ್ನು ಸೆಳೆಯುತ್ತವೆ. ಗಂಡನು ಕ್ಲಿಪ್ತ ಕಾಲಕ್ಕೆ ಊಟಕ್ಕೆ ತಯಾರಾಗಿದ್ದರೆ ಪತ್ನಿಗೆ ಸಮಾಧಾನವಿರುವುದಿಲ್ಲ. ಊಟದ ಸಾಮಗ್ರಿಗಳನ್ನು ಸರಿಯಾಗಿ ಒದಗಿಸುವ ಕೆಲಸವು ಗಂಡನದು.

(11) ಒಮ್ಮೊಮ್ಮೆ ಆಶ್ಚರ್ಯ ಹುಟ್ಟಿಸುವ ಕೆಲಸಗಳನ್ನು ನಡಸುವುದರಿಂದ ದಾಂಪತ್ಯ ಪ್ರೇಮವು ಹೆಚ್ಚುತ್ತದೆ. ಗಂಡನು ಬರುವ ವೇಳೆಗೆ ಪತ್ನಿಯು ಒಂದೊಂದು ದಿನ ಅಂದಾಜು ಮಾಡದಿದ್ದ ಭಕ್ಷ್ಯಗಳನ್ನು ತಯಾರು ಮಾಡುವುದು. ಹಾಗೆಯೇ ಗಂಡನೂ ಕೂಡ ಮುಂದಾಗಿ ತಿಳಿಸದೆ ಏನಾದರೂ ಏನಾದರೂ ವಸ್ತುಗಳನ್ನು ತಂದು ಕೊಡುವುದು.

(12) ಗಂಡ ಹೆಂಡಿರು ಒಬ್ಬರನ್ನೊಬ್ಬರು ಹೊಗಳಿಕೊಂಡೇ ಹೊಗಳಬೇಕು. ಹೊಗಳಿದರೆ ದೇವರೂ ಮೆಚ್ಚುವನಂತೆ. ಇನ್ನು ದಂಪತಿಗಳ ಮಾತೇನು? 'ಈ ಮುಗು ಬಟ್ಟು ನಿನಗೆ ತುಂಬಾ ಚೆನ್ನಾಗಿದೆ' ಎಂದು ಹೇಳಿದರೆ ಹೆಂಡತಿಯು ಎಷ್ಟು ಹಿಗ್ಗುವಳೆಂಬುದನ್ನು ಬಲ್ಲವರೇ ಬಲ್ಲರು.

(13) ಮಕ್ಕಳು ಮತ್ತಾರಕ್ಕೆ ಇಂದೇ ತಲ್ಲದ ಈ ಮಗು 'ತಾಯಿ ಕಣೆ' ಇದು 'ತಂದೆ ಮಗ' ಎಂದು ವಿಭಾಗ ಮಾಡಬಾರದು. ದಂಪತಿಗಳು ಮಕ್ಕಳ ಮುಂದೆ ಒಬ್ಬರನ್ನೊಬ್ಬರು ಬೈದಾಡಿಕೊಳ್ಳುವುದಾಗಲೀ ಜಗಳವಾಗಲೀ ಮಾಡಬಾರದು. ಒಬ್ಬ ಮಂತ್ರಿ ಹೆಂಡತಿಯು ತನ್ನ ಗಂಡನು ಮಹಾರ್ಜನಾದ ನು ಕಲಿತ ಮಗುವಿನೊಡನೆ 'ಅಪ್ಪನ ಹತ್ತಿರ ಹೋಗು ಕಂದಾ, ಅಪ್ಪ ಪಾಪ ಅಲ್ಲವೋ' ಎಂದು ಹೇಳುವಳಲ್ಲದೆ ವಿರೋಧ ಮಾಡುವವಳಲ್ಲ.

(14) ಹಣದಿಂದ ಎಲ್ಲವೂ ಸಾಧ್ಯ. ಮನುಷ್ಯನ ಸುಖ ಸೌಕರ್ಯವನ್ನು ಹೆಚ್ಚಿಸುವುದೇ ಹಣ. ಹಣವೆಂದರೆ ಅವಾರಣ್ಯದ ಹಣವಲ್ಲ. ದುಡಿದವರೆಲ್ಲರೂ ಕುಬೇರ ಪುತ್ರರಾಗಲಾರರು. ಹಣವೆಂದರೆ ದುಡ್ಡು ಮಾಡಿದ ಗಳಿಸಿದ ಹಣ. ದಂಪತಿಗಳು ಕಾಸಿನಿಂದ ಉಳಿಸಿದರೆ ರೂಪಾಯಿ ಗಳಿಸಿದಂತೆ ಎಂಬ ವಿಷಯವನ್ನು ಗ್ರಹಿಸಬೇಕು. ಮದುವೆಯಾದ ಹೊಸತಿನಲ್ಲಿ ಸ್ತ್ರೀ ಪತಿಗೆ ಭಾರವಾಗುವುದು ಎಡೆಯಿದ್ದರೂ ಆ ಸಾಪತ್ನ ಕಳೆದು [illegible] ಖರ್ಚಾಗದಂತೆ ಇಟ್ಟಿರಿಸಿ ನೋಡಿಕೊಳ್ಳಬೇಕು. 'ಕಂಬಳಿ ಇದ್ದಷ್ಟೇ ಕಾಲು ಚಾಚು'

(15) ತನ್ನ ತಪ್ಪುಗಳನ್ನು ಹೆಚ್ಚಾಗಿ ಒಪ್ಪಿಗೊಳ್ಳುವುದು ಮೇಲೆ [illegible]. ಸಾಧ್ಯವಾದಷ್ಟು ಅವುಗಳನ್ನು ತನ್ನಷ್ಟಕ್ಕೆ ತಾನೇ ತಿದ್ದಿಕೊಳ್ಳಬೇಕು. ತನ್ನ ತಪ್ಪುಗಳನ್ನು ಬೇರೆ ಇಂದು ಒಡಿದವರ ಪತ್ನಿಯು ಕೂಡ ನ್ಯಾಯಕ್ಕಾಗಿ ತಪ್ಪುಗಳನ್ನು ಗಣನೆಗೆ ಬಾರದು.

(16) ಜಾಡಿ—ಇದು ದಾಂಪತ್ಯ ಸುಖದಲ್ಲಿ ಉಗ್ರವಾದ ಶತ್ರು. ಸಾಧಾರಣ ಸಂಶಯ ಇದನ್ನು ಬಗೆಹರಿಸಬಾರದು. ಗಂಡ ಹೆಂಡಿರು ತಾಪ್ತರುದನ್ನು ಬಾಲನೂನಿನಲ್ಲಿ ಒಂದೇ ಎಂದು ಭಾವಿಸಲ್ಪಡುವರು. ಆದುದರಿಂದ ಅವರಲ್ಲಿ ಪರಸ್ಪರ ಯಾವ ಗುಟ್ಟೂ ಗೋಪ್ಯವಾಗಿರಬಾರದು. ಆದರೆ ದಾಂಪತ್ಯದ ಹೊರಗೆ ಪ್ರಾಣಾಪಾಯ ವಿನಾದರೂ ಈ ಗುಟ್ಟನ್ನು ಹೇಳಬಾರದು ಎನ್ನಲಾಗಿದೆ.

(17) ನಮ್ರತೆ—ಸುಖದಾಂಪತ್ಯಕ್ಕೆ ನಮ್ರತೆಯು ಗಾಢ ಸ್ನೇಹಿತ. ಬೇರೆಯವರ ಎದುರಿಗೆ ಶುಷ್ಕವಾದ ಮಾತುಗಳನ್ನಾಡಬೇಕು. ಇತರರ ಇದಿರಿನಲ್ಲಿ ದಂಪತಿಗಳು ಗದರಿಸುವ ಮಾತುಗಳನ್ನಾಡಬಾರದು. ಇದರಿಂದ ಪ್ರೇಮ ಭಂಗವಾಗುವುದು ಖಂಡಿತ.

(18) 'ಹೆಂಗಸು ಮನೆಯ ಒಳಗೆ ಗಂಡಸು ಮನೆಯ ಹೊರಗೆ' ಎಂಬ ಹಳೆಯ ಪದ್ಧತಿಯು ಈಗಿನ ಕಾಲಕ್ಕೆ ಸಂಬಂಧಿಸುವುದಿಲ್ಲ. ನವೀನ ದಂಪತಿಗಳು ಮನೆಯ ಒಳಗಾಗಲೀ ಅಥವಾ ಹೊರಗಾಗಲೀ ಸದಾ ಕಾಲವೂ ಒಬ್ಬರನ್ನೊಬ್ಬರು ಅಗಲಿ ಹೋಗುತ್ತಿರಬಾರದು. ಸಂಗೀತ, ನಾಟಕ, ಸಿನೆಮಾ ಮುಂತಾದುವುಗಳಿಗೆ ಗಂಡನು ಹೋಗುವುದಾದರೆ ಪತ್ನಿಯನ್ನೂ ಜತೆಯಲ್ಲಿ ಕರೆದುಕೊಂಡು ಹೋಗುವುದರಿಂದ ಸ್ತ್ರೀಯ ಮನಸ್ಸು ಪ್ರಫುಲ್ಲಿತವಾಗುತ್ತದೆ.

(19) ಗಂಡನು ಅನ್ಯ ಸ್ತ್ರೀಯನ್ನು ಪತ್ನಿಯ ಮುಂದೆ ಸದವಿಾರ ಹೊಗಳಬಾರದು. ಇತರ ಸ್ತ್ರೀಯರ ವಿಷಯವಾಗಿ ಮಿಂಡತಿಯು ಹೊಗಳುವುದನ್ನು ಕೇಳಿದರೂ ಅಸಹ್ಯಯಿಂದಿರಬೇಕು. ಹೆಂಗಸು ಕೂಡ ಗಂಡನ ಮುಂದೆ ಪರ ಗಂಡಸರನ್ನು ಸದಾ ಹೊಗಳುತ್ತಿರುವುದರಿಂದ ದಾಂಪತ್ಯಪ್ರೇಮದಲ್ಲಿ ಕುಂದುಕನ್ನುಂಟಾಗುವುದು.

(20) ಪಠನ ಮ—ಆಂದರೆ ಯೂವತ್ತೂ ಸಂತೋಷವನ್ನು ಕೊಡುವ ಮುಖದಲ್ಲಿ ದಂಪತಿಗಳು ಇರಬೇಕು. ಅಲ್ಲದ ಸಪ್ಪದ ವ್ಯಥೆಯನ್ನು ಮನಸ್ಸಿಗೆ ಹಚ್ಚಿಕೊಂಡು ಗೂಡೆಯಂತಿರುವುದು ದಾಂಪತ್ಯ ಪ್ರೇಮಕ್ಕೆ ಸರಿಬೀಳುವುದಿಲ್ಲ.

ಮಡಿಕೇರಿ ಮುನ್ಸಿಪಲ್ ಕಮಿಟಿ ಮೀಟಿಂಗು.

—○O●—

ತಾ. 15—8—35ರಲ್ಲು ಮೆ. ಬ ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲು ನಡೆದ ಮಡಿಕೇರಿ ಮುನ್ಸಿಪಲ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಈ ಕೆಳಗಿನ ಮಹನೀಯರು ಹಾಜರಿದ್ದರು. ಮೆ ಎಂ. ಬಸಪ್ಪನವರು (ವೈಸ್ ಪ್ರೆಸಿಡೆಂಟ್) ಅಸಿಸ್ಟೆಂಟ್ ಕೊಡಗು ಸುಪರಿಂಟೆಂಡೆಂಟ್—ಸೀನಿಯರ್ ಸ. ಅ. ಸರ್ಜನರು, ಡಾಕ್ಟರ್ ಎ. ಎ ವಾರಿಯರ್ ಯವರು, ಮೆ. ಗಳಾದ ಎಸ್. ಸೋಮಣ್ಣನವರು, ಕೆ. ಮಲ್ಲಪ್ಪನವರು, ಆರ್. ತಿಮ್ಮಯ್ಯನವರು, ಎಂ. ಎಂ ಬೆಳ್ಯಪ್ಪನವರು, ಪಿ ಐ ಬೆಳ್ಯಪ್ಪನವರು ಮತ್ತು ಕೆ. ಯಂ. ಮುತ್ತಣ್ಣನವರು.

ಈ ಕೆಳಗಿನ ಮಹನೀಯರು ಗೈರುಹಾಜರಾಗಿದ್ದರು. ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರು, ಎಗ್ಸಿಕ್ಯೂಟಿವ್ ಇಂಜಿನಿಯರ್ ಅಸಿಸ್ಟೆಂಟರು, ಮೆ. ಗಳಾದ ಕೆ. ವೆಂಕಟಗಿರಿರಾವ್‌ರವರು, ಎ. ಅಬ್ದುಲ್ ರಹಮಾನ್ ಖಾನರು ಮತ್ತು ಪಿ. ಎಸ್. ನಂಜಪ್ಪಯ್ಯನವರು.

1. ಕಳೆದ ತಿಂಗಳ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಆಯ ವ್ಯಯದ ಲೆಕ್ಕ, ಓವರ್ಸಿಯರವರ ಕೆಲಸದ ರಿಪೋರ್ಟು, ಸಿವಿಲ್ ಸರ್ಜನರ ಸ್ಯಾನಿಟರಿ ರಿಪೋರ್ಟು, ಇವೇ ಮೊದಲಾದವುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

3. ಮುನ್ಸಿಪಾಲಿಟಿಯ ತಿಂಗಳುವಾರು ಲೆಕ್ಕ ಆಡಿಟ್ ಯ ರಿಪೋರ್ಟು ಮಾಡಲು ವೈಸ್ ಪ್ರೆಸಿಡೆಂಟರು ಮತ್ತು ಮೆ ಯಂ. ಯಂ. ಬೆಳ್ಯಪ್ಪನವರಿಂದ ಕೂಡಿದ ಒಂದು ಸಬ್ ಕಮಿಟಿಯಾಗಬೇಕೆಂದು ಸೂಚಿಸಿದ ಮೆ ಪಿ ಐ. ಬೆಳ್ಯಪ್ಪನವರ ಠರಾವು ಮಂಜೂರಾಯಿತು.

4. ತಾ 27ನೇ ಜುಲೈಯಿಂದ ಪ್ಲೇಗಿನ ಕಾಯಿಲೆ ಇಲ್ಲದ ಕಾರಣ ಪ್ಲೇಗ್ ಡ್ಯೂಟಿಗೆ ನೇಮಿಸಲ್ಪಟ್ಟ ಡಾಕ್ಟರ್ ರುದ್ರಪ್ಪನವರನ್ನು ವಾಪಸು ಕರೆದುಕೊಂಡಿರುತ್ತೇವೆಂದು ಬರೆದ ಸಿವಿಲ್ ಸರ್ಜನರ ನಂಬರು 634/ತಾರೀಕು 14-8-35ರ ಪತ್ರ ಓದಲಾಯಿತು.

ಇನ್ನೂ ಇಲಿಗಳು ಸಾಯುತ್ತಲಿರುವದರಿಂದ ಇನ್ನೊಂದು ತಿಂಗಳ ವರೆಗೆ ಒಬ್ಬ ಡಾಕ್ಟರನ್ನು ಪ್ಲೇಗ್ ಡ್ಯೂಟಿಗೆ ನೇಮಿಸಬೇಕೆಂದು ಸಿವಿಲ್ ಸರ್ಜನರವರನ್ನು ಕೇಳುವಂತೆ ತೀರ್ಮಾನವಾಯಿತು. ಅಲ್ಲದೆ ಇಲಿಗಳು ಸಾಯುತ್ತಿರುವ ಮನೆಗಳನ್ನೂ ಮತ್ತು ಅಂಗಡಿಗಳನ್ನೂ ಡಿಸ್ ಇನ್‌ಫೆಕ್ಷನ್ ಮಾಡುವಂತೆ ತೀರ್ಮಾನವಾಯಿತು.

5. ಬಾಬೂಸಾಬಿಯು ತನಗೆ 13ನೇ ಬ್ಲಾಕ್‌ನಲ್ಲಿ ಜಾಗ ಕೊಡಿಸಿ ಕೊಡಬೇಕೆಂದು ಬರಕೊಂಡ ಅರ್ಜಿ ಓದಲಾಯಿತು. ಈ ಮೊದಲು ಕೊಟ್ಟ ದರದ ಮೇರೆ ಸರ್ವೆ ನಂಬರು 25 1ರಲ್ಲು 0 12 ಸೆಂಟು ಜಾಗ ಕೊಡುವಂತೆ ಮಂಜೂರಾಯಿತು.

6. ಮಾರ್ಕೆಟ್ ಕಂಟ್ರಾಕ್ಟರ್ ಮೆ ಕೂಸಕೆಟ್ಟರ ಕಳುನಯ್ಯ ಶೆಟ್ಟಿಯವರು ಪ್ಲೇಗಿನಿಂದ ತನಗೆ ನಷ್ಟವಾಗುವ ಸಂಭವವಿರುವುದರಿಂದ ಕಂಟ್ರಾಕ್ಟ್ ಹಣದಲ್ಲಿ ಶೇಕಡ 25ರಂತೆ ಕಮ್ಮಿ ಮಾಡುವಂತೆ ಬರಕೊಂಡ ಅರ್ಜಿ ಓದಲಾಯಿತು.

ಕಂಟ್ರಾಕ್ಟ್ ಹಣವನ್ನು ಕಮ್ಮಿ ಮಾಡಲು ತಕ್ಕ ಕಾರಣ ಕಮಿಟಿಯವರಿಗೆ ಕಂಡು ಬಾರದ ಪ್ರಯುಕ್ತ ಈ ರಿಯಾಯಿತಿ ಕೊಡಲು ಒಪ್ಪಲಿಲ್ಲ.

7. ಈ ಕೆಳಗಿನ ಪಟ್ಟಣಿಗರು ಮನೆಗಳಿಗೆ ಸ್ವಂತ ನಳ್ಳಿಗಳನ್ನು ಕೊಡಬೇಕೆಂದು ಬರೆದುಕೊಂಡ ಅರ್ಜಿಗಳನ್ನು ಓದಿ ಮಂಜೂರು ಮಾಡಿದರು.

ಮೆ ಗಳಾದ ಕೂಸಕೆಟ್ಟ ಕಳುನ್ನಯ್ಯ ಶೆಟ್ಟಿ, ಎ. ಸಿ. ಸನ್ಮನಾಥ ಮುದಲಿಯಾರ್ ಮತ್ತು ಶಾರ್ಥ ಸಾರಥಿಯವರು.

8. ಮುನ್ಸಿಪಾಲಿಟಿಗೆ ಸೀಮೆ ಎಣ್ಣೆ ಸರಬರಾಯಿ ಮಾಡುವುದಕ್ಕೆ ಟೆಂಡರುಗಳನ್ನು ಪ್ರೆಸಿಡೆಂಟರು ಸ್ವೀಕರಿಸುವ ಈಗಿನ ಕ್ರಮವು ಬೈಲಾಕ್ಕೆ ವಿರೋಧವೆಂತಲೂ, ಸದರಿ ಟೆಂಡರುಗಳನ್ನು ಕಮಿಟಿಯು ಮಂಜೂರಾತಿಗೆ ಇಡಬೇಕೆಂತಲೂ ಮೆ. ಪಿ. ಐ ಬೆಳ್ಯಪ್ಪನವರು ಠರಾವು ತಂದರು.

ಈ ಠರಾವು ಬಹುಮತದಿಂದ ಸೋಲಿಸಲ್ಪಟ್ಟಿತು.

9. ಮೆ ಯಂ. ಯಂ ಬೆಳ್ಯಪ್ಪನವರು ಮಡಿಕೇರಿ ಮುನ್ಸಿಪಾಲಿಟಿಯೊಳಗಿರುವ ಖಾಲಿ ಸ್ಥಳಗಳನ್ನು ಭೂರಹಿತವಾಸಿಗಳಿಗೆ ವಾಸಕ್ಕೆ ಮನೆ ಕಟ್ಟಲು ಕೊಡಬೇಕೆಂದು ತಂದ ಠರಾವನ್ನು ವಾಪಸು ತೆಗೆದುಕೊಂಡರು.

10. ಮೆ ಕೆ. ಯಂ ಬೆಳ್ಯಪ್ಪನವರು ದಾಸವಾಳದಲ್ಲಿ ಬೀದಿ ದೀಪದ ಬದಲು ಒಂದು ಪೆಟ್ರೋಮ್ಯಾಕ್ಸ್ ದೀಪವನ್ನು ಇಡಬೇಕೆಂದು ಬರಕೊಂಡ ಅರ್ಜಿಯನ್ನು ಓದಿ ಮಂಜೂರು ಮಾಡಲಾಯಿತು.

11. ಸ್ಯಾಪರ್ಸ್ ಲೈನ್ ರಸ್ತೆಗೆ ಕಲ್ಲು ಹಾಕಲು ತಯಾರಿಸಿದ ರೂ. 272—4—6 ಯ ಎಸ್ಟಿಮೇಟನ್ನು ಪಾಸ್ ಮಾಡಿದರು.

12. ಮೆ. ಕಾಮಭಟ್ಟರವರು ಹಂದಿಗಳ ಕಾಟವು ಹೆಚ್ಚಾಗಿದೆ ಎಂದು ಬರೆದ ಅರ್ಜಿಯನ್ನು ಓದಲಾಯಿತು.

ಬೈಲಾದ ಮೇರೆ ಹಂದಿಗಳನ್ನು ಕೊಲ್ಲುವ ಮೊದಲು ಪಟ್ಟಣದಲ್ಲಿ ಆ ವಿಷಯವನ್ನು ಡಂಗೂರ ಹೊಡಿಸಬೇಕೆಂದು ನಿಶ್ಚಯಿಸಲಾಯಿತು.

13. ಮುನ್ಸಿಪಲ್ ಓವರ್ಸಿಯರ ರಿಪೋರ್ಟಿನ ಮೇಲೆ ದೊಡ್ಡಿಗೆ ಕೂಡಿಸಲ್ಪಟ್ಟ ಜಾನುವಾರುಗಳ ದಾಣ ಚಾರ್ಜನ್ನು ಚೀಫ್ ಕಮಿಷನರವರ ತಾ. 4—5—1891ರ 29ನೇ ಸಂವತ್ಸರದ ನೋಟಿಫಿಕೇಶನ್ ಮೇರೆ ವಸೂಲು ಮಾಡುವಂತೆ ನಿಶ್ಚಯಿಸಲಾಯಿತು.

ಬ. ಸಿ ಸುಬ್ಬಯ್ಯ,
(ಪ್ರೆಸಿಡೆಂಟ್)

ಡಾಕ್ಟರ್ ಸೋತ್ಮಸ್ ಎಬ್ರಹಾಮ್.

ದಂತ ವೈದ್ಯರು.

ಗೀಹಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವರು. ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು [52—19]

ಅನ್‌ರಿಡೀಮ್ಡ್ ಬಾಗಿನ ಗಂಧದ ಮರಗಳಿಗೆ ಬೋನಸು.

(15ನೇ ಪುಟದಿಂದ ಮುಂದುವರಿದದ್ದು)

(6) ಸರ್ಕಾರದಿಂದ ಹೊಸದಾಗಿ ಸರಕಾರದ ಬಾಗಿನಲ್ಲಿ ಹಾಕಲ್ಪಟ್ಟಂದಿನಿಂದ 5 ವರ್ಷಗಳೊಳಗೆ ಯಾವ ಗಂಧದ ಮರಕ್ಕೂ ಬೋನಸು ಕೊಡಲಾಗುವುದಿಲ್ಲ.

(7) 5 ಅಂಗುಲ ಅಥವಾ ಅದರ ಮೇಲ್ಪಟ್ಟು ಸುತ್ತಳತೆ ಯುಳ್ಳ ಮರಕ್ಕೆ ರೂ 5—3—175 ರಾಗಿರುವ 5 ವರ್ಷದ ಒಳಗಿನ ಬೋನಸ್ಸು ಕೊಡಲಾಗುವುದಿಲ್ಲ.

(8) ನೆಲದಿಂದ 1½ ಅಡಿ ಮೇಲ್ಗಡೆ ಸುತ್ತಳತೆ ತೆಗೆದುಕೊಳ್ಳಲ್ಪಡತಕ್ಕದ್ದು ಮತ್ತು ಬೊಡ್ಡೆಯು ಸ್ವಲ್ಪವಾಗಿ [illegible] ಯಾವ ಬಿದ್ದು ಮುರಿದು [illegible] 1½ ಅಡಿ ಕೆಳಗೆ ಕವಲುಗಳು ಒಡೆದಿದ್ದರೆ ಅವು ಎರಡು ಅಥವಾ ಹೆಚ್ಚು ಮರಗಳೆಂತ ಗಣಿಸಲ್ಪಡುವುದು.

(9) ಬೋನಸು ಸರ್ಕಾರಿ ವರ್ಷದ ಕೊನೆಯಲ್ಲಿ ಕೊಡಲ್ಪಡುವುದು.

(10) ಈ ರೂಲ್ಸುಗಳನ್ನು ಪಿರ್ಯಾಯಕರಿಗಿರುವ ಹಕ್ಕುಗಳು ಪೂರ್ತಿಯಾಗಿ ನಿರ್ಧರಿಸಲ್ಪಟ್ಟಿಲ್ಲವೆಂತ ಕಂಡು ಬಂದಾಗಲೂ, ಎಳೆ ಗಿಡಗಳು ಬೇರೆ ಬಾಗಿನಲ್ಲಿ ಬೆಳ್ಳಗೆ ಬೆಳೆಯುವುದರಿಂದ ಕಾರಣದ ಮೇಲೂ ಬೋನಸು ಕೊಡದೆ [illegible] ಬೇಕಾದರೂ ಯಾವ ಮರವನ್ನಾದರೂ, ಗಿಡವನ್ನಾದರೂ ತೆಗೆದುಕೊಂಡು ಹೋಗುವ ಹಕ್ಕನ್ನು ಸರ್ಕಾರವು ಉಳಿಸಿಕೊಂಡಿದೆ.

(11) ಅನ್‌ರಿಡೀಮ್ಡ್ ಬಾಗಿನ ಮಾಲೀಕನು ಗಂಧದ ಮರವನ್ನು ಕಾಪಾಡಲು ತಕ್ಕ ಎಲ್ಲಾ ಸಿಗ ತೆಗೆದುಕೊಂಡಿದ್ದಾನೆಂತಲೂ, ಗಂಧದ ಮರಗಳ ಪೋಷಣೆ ಮಾಡಲು ಈ ನೋಟಿಫಿಕೇಶನಿನಲ್ಲಿ ಬಗತಿರುವ ಕ್ರಮಗಳನ್ನು ಚಾರಿಗೆ ತಂದಿದ್ದಾನೆಂತಲೂ ಸರ್ಕಾರಕ್ಕೆ ತೃಪ್ತಿಕರವಾಗಿ ರುಜುವಾತಾದ ಹೊರತು ಯಾವ ಸಂದರ್ಭದಲ್ಲೂ ಬೋನಸು ಕೊಡಲಾಗುವುದಿಲ್ಲ.

3 ಅನ್‌ರಿಡೀಮ್ಡ್ ಬಾಗದಲ್ಲಿ ಗಂಧದ ಬೆಳವಣಿಗೆ [illegible] ಪ್ರತಿಯೊಬ್ಬ ಮಾಲೀಕನೂ ತಾನು ಬೋನಸ್ಸು ಪಡೆಯಲು ಅರ್ಹತೆಯನ್ನು ಪಡೆಯಬೇಕೆಂದು ಇಷ್ಟಪಟ್ಟರೆ 31-7-36 ರ ಒಳಗೆ ತನ್ನ ಬಾಗದಲ್ಲಿರುವ ಎಲ್ಲಾ ಗಂಧದ ಮರಗಳ ವಿವರಗಳನ್ನೂ ತಿಳಿಯಪಡಿಸಬೇಕು. ಅಂಥವನು ಅವಶ್ಯವಿರುವ ಫಾರಂಗಳಿಗೂ, ಅವನ ಬೇಕಾಗಿರುವ ಹತ್ತಿರದ ರೇಂಜ್ ಆಫೀಸರುಗಳನ್ನು ಕೇಳಿಕೊಳ್ಳಬೇಕು. ಅವನು ಕೇಳಿ ಪಡೆಯಬೇಕು. ಫಾರಮಿನಲ್ಲಿ ವಿವರಗಳನ್ನು ಹೇಗೆ ಬರೆಯಬೇಕೆಂಬ ಅಂಶಗಳನ್ನು ಸದರಿ ಆಫೀಸರು ತಿಳಿಸಿಕೊಡುತ್ತಾರೆ. ಅನ್‌ರಿಡೀಮ್ಡ್ ಬಾಗಿನ ಮಾಲೀಕನು ತನ್ನ ಬಾಗದಲ್ಲಿ ಬೆಳೆಯುತ್ತಿರುವ ಗಂಧದ ಮರದ ಸಂಖ್ಯೆ ಮತ್ತು ಅದರ ಸುತ್ತಳತೆ ಇವುಗಳ ವಿವರವುಳ್ಳ ಒಂದು ಪಟ್ಟಿಯನ್ನು ಬಾಗಕ್ಕೆ ಬರುವ ರೇಂಜಿನ ರೇಂಜ್ ಫಾರೆಸ್ಟ್ ಆಫೀಸರಿಗೆ ಎಲ್ಲಾ ಸಹಿ ಮಾಡಿ ಒದಗಿಸಬೇಕು.

4. ಈ ರೂಲ್ಸುಗಳ ಮೇರೆ ಬೋನಸು 1-5-37 ರಿಂದ ಮತ್ತು ಆಚೆಗೆ ಕೊಡಲಾಗುತ್ತೆ.

5 ಈ ರೂಲ್ಸುಗಳು ತಾತ್ಕಾಲಿಕವಾಗಿ ಅನುಭವದ ಮೇಲೆ ಬದಲಾವಣೆ ಹೊಂದತಕ್ಕವುಗಳಾಗಿವೆ.

ಎನೆಕ್ಸರ್ (ಸೇರಿಕೆ)

ಗಂಧದ ಗಿಡವನ್ನು ಸಾಕಲು ತಿಳುವಳಿಕೆಗಳು.

1 ಗಂಧವು ಕೊಡಗು ದೇಶದ ಹಟ್ಟಿವರೆಗೂ ಬೆಳೆಯುವ ಗಿಡ. ಬಾಗದ ಮಾಲೀಕರು ಮರಗಳನ್ನು ಸರಿಯಾಗಿ ಪೋಷಣೆ ಮಾಡಿದರೆ ಮತ್ತು ಕಾಪಾಡಲು ತಕ್ಕ [illegible] ದು ಅಭಿವೃದ್ಧಿ ಪಡಿಸಿದ್ದರೆ ಸರ್ಕಾರವು [illegible] ಮಾಲೀಕನಿಗೆ [illegible] [illegible] ಯೋಚನೆಯು ಇದ್ದಿದೆ.

2 ಗಂಧದ ಸಸಿಗಳನ್ನು [illegible] ಗಳಿಗೆ [illegible] ನೆರಳಿಲ್ಲದೆ ಅವು ಸರಿಯಾದ [illegible] ಬೆಳೆಯಲಾರವು. ಚಿಕ್ಕ ವಯಸ್ಸಿನಲ್ಲಿ ಈ ತರ ನೆರಳುಗೋಸ್ಕರ ಇವುಗಳ ಸುತ್ತಲೂ ತೊಗರಿ ಬೇಳೆ ಅದರ ನೆರಳು ಬೆಳೆಸಬಹುದು. ಬೇಸಿಗೆಯಲ್ಲಿ (ಕೆಳಗಿನ ಚಿತ್ರದಲ್ಲಿ ಕಾಣಿಸಿರುವಂತೆ) ಬೇಲಿ ಹಾಕಿ ಕಂಬಗಳ ಮಧ್ಯಕ್ಕೆ ಹುಲ್ಲು ಹರಡಿ ಕಟ್ಟುವುದರಿಂದ ಪಕ್ಕದಲ್ಲಿ ನೆರಳುಂಟುಮಾಡಬಹುದು. ಹೀಗೆ 2—3 ವರ್ಷ ಮಾಡಿದರೆ ಗಂಧದ ಗಿಡವನ್ನು ಬದುಕಿಸುವುದಕ್ಕೆ ಯಾವ ಕಷ್ಟವೂ ಆಗಲಾರದು.

3 ಗಂಧದ ಮರಗಳು ಇತರ ಮರಗಳ ಆಶ್ರಯವಿಲ್ಲದೆ ಬಾಳಲಾರವೆಂತ ತಿಳಿಯಬೇಕಾಗಿದೆ. ಗಂಧದ ಮರದ ಬೇರು ಬೇರೆ ಮರದ ಬೇರಿನೊಡನೆ ಕೂಡಬೇಕು; ಮತ್ತು ಅವುಗಳ ಮೂಲಕವಾಗಿ ಆಹಾರ ವಸ್ತುಗಳನ್ನು ಹೊಂದಬೇಕು. ಹಾಗೆ ಸಂಯೋಗ ಹೊಂದಿಸುವುದಕ್ಕೆ [illegible] ಬೇರೆ ಮರಗಳ [illegible] ಕೆಳಗಿನವು ಅತ್ಯುತ್ತಮವಾದವುಗಳು. 1 ಬೇವಿನ ಮರ, 2 ಅವರೆ ಮರ, 3 [illegible], 4 ಸೀಗಂಧ, 5 ಕಾಸರಕ ಜಾತಿ ಮರ, 6 [illegible].

4 ಗಿಡಕ್ಕೆ 3 ವರ್ಷವಾದ ಮೇಲೆ ಅಥವಾ 4½ ಅಡಿಗೆ ಮೇಲ್ಪಟ್ಟು ಎತ್ತರವಾದ ಮೇಲೆ ತರೆ ಮೋಟಿನಿಂದ ಬೆಳೆಯಬೇಕಾದ ರಕ್ಷಣೆಬೇಕಾದದ್ದು ಅವಶ್ಯ. ಅನೇಕ ವೇಳೆ ಇತರ ಮರದ ಕೊಂಬೆಗಳು ಗಂಧದ ಗಿಡದ ತಲೆ ಮೇಲೆ ಅವರಿಸಿಕೊಂಡಿರುತ್ತವೆ. ಹೀಗಾದರೆ ಗಂಧದ ಬೆಳವಣಿಗೆ ಕುಂದಿ ಹೋಗಿ ಗಂಧಕ್ಕೆ ಕುಂದುಂಟು ಮಾಡುವ ಅಂಥಾ ಕೊನೆ ಕೊಂಬೆಗಳನ್ನು ಕಡಿಸುವುದರಿಂದ ಗಂಧದ ಗಿಡವು ಜಾಗ್ರತೆ ಬೆಳೆಯಲು ಸಹಾಯವಾಗುತ್ತೆ. ಆದರೆ ಸರ್ಕಾರದಕ್ಕೆ, ಬಾಗಿನ ಮಾಲೀಕನಿಗೂ ಜಾಗ್ರತೆ ಬೇಕು ಸೀಕ್ಕಲು ಸಹಾಯವಾಗುತ್ತೆ. ಮಳೆಗಾಲದಲ್ಲಿ ತರೆ ಮೇಲಿನ ಮರದ ಕೊಂಬೆಗಳಿಂದ ನೀರು ಹನಿತು ಗಂಧಕ್ಕೆ ತೊಂದರೆಯಾಗುವುದರಿಂದ ಅಂಥಾ ಕೊಂಬೆಗಳನ್ನು ಕಡಿಯುವುದು. ಈ ಕಾರಣದಿಂದಲೇ ಹಿಂದೆ ಸಾವಿರಾರು ಸಸಿಗಳು ನಾಶವಾಗಿವೆ.

5 ಗಂಧದ ಮರಕ್ಕೆ ಬೆಂಕಿ ತಗಲದ ಹಾಗೆ ಕಾಪಾಡಲು ಪ್ರತಿ ವರ್ಷದ ಜನವರಿ ತಿಂಗಳಿನ ಒಳಗೆ ಒಣಗಿರುವ ಹುಲ್ಲು ಮತ್ತು ಇತರ ಕಸ ಗಳನ್ನು ಕತ್ತರಿಸಿ ಸುಟ್ಟು ತೆಗೆದು ಹಾಕಬೇಕು. ಮತ್ತು ಈ ಕೆಲಸವು ಸರಿಯಾದರೂ ತಕ್ಕ ಬಲವಾದ ಬೇಲಿಯುಳ್ಳ ಒಳಗೆ ಬಿಸಿ ಹೋಗದಂತೆ ಮಾಡತಕ್ಕದ್ದು.

6 ಇದರಲ್ಲಿ ಆಸಕ್ತಿಯುಳ್ಳವರು ಇನ್ನೂ ಹೆಚ್ಚಿನ ವಿವರಗಳನ್ನು ಹತ್ತಿರದ ರೇಂಜ್ ಆಫೀಸರಿಂದ ಪಡೆದುಕೊಳ್ಳಬಹುದು.

ಉತ್ತಮ ತರಕಾರಿ ಮತ್ತು ಹೂವಿನ ಬೀಜಗಳು.

ಮಳೆಗಾಲ ಪ್ರಾರಂಭವಾಗಿರುವ ಪ್ರಯುಕ್ತ ಈ ಕೆಳಗೆ ಕಂಡ ಗ್ಯಾರಂಟಿಯುಳ್ಳ ಗಿಡಗಳನ್ನು ಮತ್ತು ಬೀಜಗಳನ್ನು ರಿಯಾಯಿತಿ ದರಗಳ ಮೇರೆ ಮಾರಲಾಗುತ್ತೆ.

12	ಪೊಟ್ಟಣ ಹೂವಿನ ಬೀಜಗಳು	1—0—0
12	„ ಸ್ವದೇಶಿ ತರಕಾರಿ ಬೀಜಗಳು	1—0—0
12	„ ಇಂಗ್ಲಿಷ್ „	2—0—0
12	ಜಾತಿ ಗುಲಾಬಿ ಸಸಿಗಳು	3—0—0
12	„ ಇತರ ಹೂವಿನ ಸಸಿಗಳು	3—0—0
12	„ ಕಸಿ ಮಾವಿನ ಸಸಿಗಳು	ರೂ. 6ರಿಂದ 8—0—0
12	„ ಹಂಗಾಸ ಸಸಿಗಳು	5—0—0

ಈ ದರಗಳು ಕೊಂಚ ಕಾಲ ಮಾತ್ರ ಜಾರಿಯಲ್ಲಿರುವವು. ತ್ವರೆ ಮಾಡಿ. ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಯಂ. ಹೇಮಪ್ಪ ಅಂಡ್ ಸನ್ಸ್,
ಲಾಲ್‌ಬಾಗ್ ರೋಡು,
ಬೆಂಗಳೂರು.

6—4

ಮೈಸೂರಿನ ಕ್ಷಿಪ್ರಾಭಿತಕಂಪ ಫಂಡಿಗೆ

ಜನ ಕರಾರು ಮಾಡಿದ ಮಹನೀಯರು.

(ಕೊಡಗು ಕಮೀಷನರವರ ಆಫೀಸಿನಿಂದ)

ಫ್ರೇಜರ್‌ಪೇಟೆ ಪಾರುಪತ್ಯಗಾರರವರ ಮೂಲಕ ಚಂದಾ ಆಣೆ 2, ಮ ರಾ ಗಳಾದ ಕಾದರ್ ಸಾಹೇಬ್ ರೂ 1, ಬಿ ಪತಪ್ಪ 1 ಎಸ್ ಎನ್ ಕೃಷ್ಣಯ್ಯ 1, ಎ ಸನ್ಮಯ್ಯ ಶೆಟ್ಟಿ 1, ಬಿ ವೆಂಕಟರಾವ್ ಶೆಟ್ಟಿ 1, ಎ ನರಸಿಂಹಯ್ಯ 1, ಬಿ ಪೂವ 2. ಎಸ್ ಎನ್ ನಾರಾಯಣಶೆಟ್ಟಿ 1, ಎಂ ಕೆ ಬಸಪ್ಪ 1 ಬಿ ಕಾಳಿಂಗ ರ 1, ನಂಜುಂಡಸುಬ್ಬಶೆಟ್ಟಿ 1 ಇಸ್ಮಾಯಿಲ್ ರಾವುತ 1, ಪಟೇಲ್ ಮಲ್ಲಯ್ಯ 1 ಹೆಬ್ಬಾಲೆ ತಿಮ್ಮಯ್ಯ 1, ಕೆ ಕನುಂಬಯ್ಯ 2, ಮಹಾಲಕ್ಷ್ಮಿ ತಿಮ್ಮಪ್ಪ 1, ಆರ್ ವೆಂಕಟರಾಮಯ್ಯ 1, ಡಿ ಮಂಜುನಾಥಯ್ಯ 15, ಬಿ ಬಿ ತಮ್ಮಯ್ಯ ಶೆಟ್ಟಿ ಆಣೆ 4, ಶ್ರೀಮತಿ ಪಟೆಟ್ಟಿ ಪೊನ್ನವ್ವ ರೂ. 1, ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರವರ ಮೂಲಕ ಚಂದಾ 8, ಡೆಪ್ಯುಟಿ ಇನ್ಸ್‌ಪೆಕ್ಟರವರ ಮೂಲಕ ಚಂದಾ 18, ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರವರ ಮೂಲಕ ಚಂದಾ 6—12—0 ಮ ರಾ ಗಳಾದ ಆರ್ ವಿ ವಾಟರ್ ಕೊಡಗು ಪ್ಲಾಂಟರ್ ಸಂಘದ ಸೆಕ್ರಟರಿ 31, ಕೆಪ್ಟನ್ ಎ ಇ ಮಾ 10, ಮ ಎ ಎಫ್ ಪ್ರೇಶನ್ 25, ಚೀಫ್ ಫಾರೆಸ್ಟ್ ಆಫೀಸ್ ಮೂಲಕ ಚಂದಾ 2—8—0 ಹಿಂದಿನ ವಸೂಲು 2952—10—11 ಒಟ್ಟು 3 88—4—10

ವಜ್ರದ ಉಂಗುರಗಳು ರಕ್ಕೆ 12 ಆಣೆ.

ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಥಂಗಾರದಿಂದ ಕಲ್ಪಿತ ಕಟ್ಟಿದೆ. ಇದರ ಹೊಳಪು ಎಂದಿಗೂ ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಒಲ್ಲು ಕೊಟ್ಟಿದೆ. 1ಕ್ಕೆ 12 ಆಣೆ

3 ಉಂಗುರಗಳಿಗೆ 1 ಬ್ರೂಚಿನನ್ನೂ, 6 ಉಂಗುರಗಳಿಗೆ 1 ವಾಲೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಥಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು. ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿ ಕೊಡುವೆವು.

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಪಟಗಳ ಸಹಿತ, ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯ

ಎಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನೀ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ 300 ಪೇಜುಗಳು ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು ಪುರುಷನು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳ ಸಂಭೋಗದಿಂದಾಗುವ ಸಂತೋಷ ಜನನೇಂದ್ರಿಯಗಳ ವರ್ಣನೆ ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ ವಿಧ ಗುಪ್ತ ವ್ಯಾಧಿಗಳ ಚಿಕಿತ್ಸೆ ಶಯನಗೃಹದ ರಹಸ್ಯ ನಿಯಮಗಳು ಮಾನವ ಶರೀರದ ಮರ್ಮಗಳ ವಿವರ ಸಚಿತ್ರಸಹಿತ ಚಿತ್ರ ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಬೆಲೆ ಪುಸ್ತಕ ಒಂದಕ್ಕೆ ರೂ 1—0—0.

ವಿಳಾಸ—MEHTA & Co,
Periyanayakam Street,
12—4 G. T. Madras.

ಅವೆಲ್ಲವೂ ಒಂದೇ ಪ್ರಕಾರ ಕಾಣಿಸುತ್ತವೆ.



ಆದರೆ ಒಂದರಲ್ಲಿ ಅರ್ಧಾಂಶ ನೀರೇ!

[illegible] ಸಾಬೂನುಗಳಲ್ಲಿ [illegible] ಅಗ್ಗವಾಗಿರುವ ಅನೇಕ ಸಾಬೂನುಗಳಲ್ಲಿ ಕೇವಲ 50ಕ್ಕಿಂತ ಹೆಚ್ಚು ನೀರೇ ಇರುತ್ತೆ. ಆದ್ದರಿಂದಲೇ ಅವು ಬೇಗನೆ ಕರಗಿಹೋಗುವುದು. 501 ಸಾಬೂನು ಹೆಚ್ಚು ಕಾಲ ಬಾಳುತ್ತೆ. [illegible] ಅವಶ್ಯವಿದ್ದಷ್ಟು ನೀರನ್ನೂ [illegible] ಫಟ್ಟಿ ಸಾಬೂನು.

ಇತರ ವಿಷಯಗಳಿಗೆ ಬರೆಯಿರಿ— ಟಾಟಾ ಕೋ ಮಾರಾಟದ ಮಳಿಗೆ. 6, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ನೆಚ್ಚಿ ಕೊಡಿರಿ. ವಸ್ತ್ರ ಬಾಳಿಕೆ, ಕ್ರಮ ಬೇರೇ ಕಡಮೆ!

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕೊಚಿನ್, ಎರ್ನಾಕುಲಂ, ಬೊಂಬಾಯಿ ಮತ್ತು ಕಲ್ಕತ್ತಾ

52—17. ಕೊಡಗಿನ ಡಿಸ್ಟ್ರಿಬ್ಯುಟರ್—ಬಿ. ಎಸ್ ಸುಬ್ಬಣ್ಣ, ಸೋಮವಾರಪೇಟೆ, ಕೊಡಗು.

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ದಕ್ಷಿಣ ಕೊಡಗಿನ ಹಲವು ಕಡೆಗಳಲ್ಲಿ ಚೆನ್ನಾಗಿ ಮಳೆ ಬಿದ್ದಿದೆಯೆಂದು ಸುದ್ದಿ.

ಮಡಿಕೇರಿಯಲ್ಲಿ ಪ್ಲೇಗಿನಿಂದ ಒಬ್ಬನು ಮೃತಪಟ್ಟ ನಂತರ ಈ ವಾರ ಪ್ಲೇಗ ಕೇಸುಗಳು ಕಂಡು ಬಂದಿಲ್ಲವಾಗಿ ವರ್ತಮಾನ.

ಈ ತಾ 23 ರಿಂದ 29 ರ ವರೆಗೆ ಮಡಿಕೇರಿಯಲ್ಲಿ 8.73 ಇಂಚು ಮಳೆಯಾಗಿದೆ. ಜೋರಾಗಿ ಮಳೆ ಬಿದ್ದ ತಾ 28 ರಲ್ಲಿ 2.95 ಇಂಚಾಗಿತ್ತು.

ಈ ವರೆಗಲು ವಿರಾಜಪೇಟೆಯಲ್ಲಿ ಛತ್ರ ಗಾರ್ಡನ್‌ನಲ್ಲಿ 13 ದಿನವಾಯಿ ನಡೆದ ಕೃಷಿ ಪ್ರದರ್ಶನ ...

ಸೆಪ್ಟಂಬರು ತಾ 3 ರಲ್ಲಿ ಕ್ಯಾಪ್ಟನ್ ...ಸಿವಿಲ್ ಸರ್ಜನ್ ಉದ್ಯೋಗದ ... ಕ್ಯಾಪ್ಟನ್ ... ಈ ತಾ 27 ರಲ್ಲೇ ಮಡಿಕೇರಿಗೆ ಬಂದಿರುವರು.

ಸೆಪ್ಟಂಬರು ತಾ 3 ನೇ ಮಂಗಳವಾರ ... ಸಂಬಂಧ ಮಡಿಕೇರಿಯಲ್ಲಿ ಮತ್ತು ... ಸಾರ್ವಜನಿಕ ಆಟ ಓಟಗಳು ಎಂದಿನಂತೆ ನಡೆಸಲ್ಪಡುವವೆಂದು ತಿಳಿಯಬರುತ್ತದೆ.

ಸೆಪ್ಟಂಬರು 4 ರಲ್ಲಿ ರಜೆಯಲ್ಲಿ ಹೋಗುವ ಕೊಡಗಿನ ಸಿವಿಲ್ ಸರ್ಜನರಾದ ಕ್ಯಾಪ್ಟನ್ ... ಈ ತಾ 27 ರಲ್ಲಿ ಮಡಿಕೇರಿಯಲ್ಲಿ ಒಂದು ಟೀಪಾರ್ಟಿಯನ್ನು ಕೊಟ್ಟರಾಗಿ ತಿಳಿಯುತ್ತೇವೆ.

ಮಡಿಕೇರಿನಾಡು ... ತಾ 23 ರಲ್ಲಿ ... ಅವರ ಶವವು ... ದಹನ ಮಾಡಲ್ಪಟ್ಟಿತೆಂದೂ ತಿಳಿಸಲು ವಿಷಾದಿಸುತ್ತೇವೆ.

ಶ್ರೀಕೃಷ್ಣ ಜಯಂತಿ ಉತ್ಸವವನ್ನು ಮಡಿಕೇರಿ ವೇದಾಂತ ಸಂಘದವರು ಕಳೆದ ... ಹಾಲ್‌ನಲ್ಲಿ ಆಚರಿಸಿದರು. ... ಶ್ರೀಕೃಷ್ಣ ಜಯಂತಿಯನ್ನು ... ಭಾಷಣ ಮಾಡಿದರು.

ಈ ತಾ. 24 ರಲ್ಲಿ ... ಸುಮಾರು 12 ವರ್ಷ ಪ್ರಾಯದ ... ಬಾವಿಯಲ್ಲಿ ನೀರು ಸೇದುತ್ತಿದ್ದಾಗ್ಯೆ ... ಬಾವಿಗೆ ಬಿದ್ದಳೆಂದೂ, ಅದನ್ನು ... ಬಾವಿಗೆ ಹಾರಿದಳೆಂದೂ ... ವರ್ತಮಾನ.

ಒಂದು ಸೆಪ್ಟಂಬರು ತಾ 1 ರಿಂದ ... ಪೋಲೀಸ್ ಇನ್‌ಸ್ಪೆಕ್ಟರ್ ... ಸರ್ಕಲ್ ಇನ್‌ಸ್ಪೆಕ್ಟರಾಗಿಯೂ, ... ಸರ್ಕಲ್ ಇನ್‌ಸ್ಪೆಕ್ಟರಾಗಿಯೂ ... ವರ್ಗಾಯಿಸಿರುವರೆಂದು ತಿಳಿಯಬರುತ್ತದೆ.

ತಿರುವಾಂಕೂರಿನಲ್ಲಿ ಒಂದು ... ಸ್ಥಾಪಿತವಾಗಿದೆ ... ವಾಂಕೂರು ಮಹಾರಾಜರೇ ಮಾಡಿದರು. ಅಲ್ಲಿ ... ಟೈಪಿಸ್ಟಿಂಗ್ ... ಇತ್ಯಾದಿ ಸಾಧನಗಳು ... ವೆ.

ರಾಜಮಹೇಂದ್ರಿ ... ಒಂದು ... ಶ್ರೀ ... ಒಂದು ... 500 ರೂಪಾಯಿಗಳ ... ಬಹುಮಾನವಾಗಿ ... ಕೊಡಲಾಗಿದೆ.

... ಒಂದು ... ಹೊಲದಲ್ಲಿ ... ಅವರ ... ಆನೆ ... ಅದನ್ನು ಅಲ್ಲಿನ ... ನೋಡಲು ... ಮಂದಿ ಬರುತ್ತಿದ್ದಾರೆ.

ಶ್ರೀಯುತ ... ಒಂದು ... ತಾ 28 ರಲ್ಲಿ ...

ಹಿಂದೂದೇಶ.

ಹೈದರಾಬಾದ ... ಮತ್ತು ... ಬಂಗಾಲದಲ್ಲಿ ... ಹೋಗುವಾಗ ... ಎಂದು ...

ಎರ್ನಾಕುಲದ ... ಜೈಲಿನಲ್ಲಿ ... ಮುಕ್ತರಾದರು. 4 ಮಂದಿ ... ಅವರನ್ನು ... ಕೊಡಲಾಗಿದೆ.

... ಸಭೆಯ ಅಧ್ಯಕ್ಷರಾದ ಶ್ರೀ ... ಪ್ರೆಸಿಡೆಂಟ್ ... ಅವರ ... ಒಪ್ಪಿದರು.

ಅಖಿಲ ... ಕಾಂಗ್ರೆಸ್ ... ಕಮಿಟಿ ... ಮುಂತಾದ ...

ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಅಕ್ಟೋಬರು 16 ನೇ ತಾರೀಖಿನಿಂದ ... ಈ ಪ್ರವಾಸದ ಉದ್ದೇಶ.

ಬಂಗಾಳ ಕಾಂಗ್ರೆಸ್ಸಿನ ... ಪಂಡಿತ ಜ ... ಶಾಲೆಯ ಅಧ್ಯಕ್ಷರಾಗಬೇಕೆಂದು ... ಈಗ ... ಈ ವೇಳೆಗೆ ... ದುವರು.

ಪಂಡಿತ ಜವಾಹರಲಾಲರ ಪತ್ನಿಯವರ ... ಅವರ ... (ಮಿಸರ್ ... ನೆಹರು) ಆರೋಗ್ಯವು ... ಎಂದು ...

ಇಟಾಲಿಯನ್ ... ಇಂಡಿಯದಿಂದ ... ಹೋಗಿದ್ದ ... ಯುದ್ಧ ಸಂದರ್ಭಗಳಲ್ಲಿ ... ಇಂಡಿಯಾ ಸರಕಾರವು ತಿಳಿಸಿದೆ.

ಆಂಧ್ರ ದೇಶದ ... ಬೇಕೆಂದೂ ಕೇಳಿದ್ದಾರೆ.

ಮುಂದಿನ ... 70 ... 20 ...

ಇಂಡಿಯಾ ಸರಕಾರವು ಇದೇ ಅಕ್ಟೋಬರ ತಾ 16 ರ ... 21 ...

ವಿಶೇಷ.

ಇಂಡಿಯದ ಹಾಕಿ ಟೀಮಿನವರು ... ನ್ಯೂಜಿಲೆಂಡಿನಲ್ಲಿ ... ಗೆದ್ದರು.

... ಬೊಂಬಾಯಿ ... ಪ್ರಿನ್ಸ್ ಆಫ್ ವೇಲ್ಸ ... ಮೃಗಾಲಯಕ್ಕೆ ...

... 20 ... 5 ...

ಒಗ್ಗಿನ ... 'ಬೆಳಗು ...' ... ಗುತ್ತದೆ ಎಂದು ...

ಇಟಲಿ ಅಬಿಸೀನಿಯಾ ಸಮಸ್ಯೆ.

ಅಫ್ರಿಕದಲ್ಲಿ ಇಂಡಿಯನರ ದಸ್ತಗಿರಿ.

ಇಟಲಿಯವರ ಅಧಿಕಾರದಲ್ಲಿರುವ ಆಫ್ರಿಕದ ಮಸ್ಸಾವ ಪಟ್ಟಣದಲ್ಲಿ ಬ್ರಿಟಿಷ್ ಪ್ರಜೆಗಳಾದ 15 ಹಿಂದೀ ಯರು ಎಷ್ಟೋ ಕಾಲದಿಂದಿರುವ ತಮ್ಮ ಸಹವ್ಯಾಪಾರಿಗಳಿಗೆ ಮುಚ್ಚುವಕ್ಕೆ ಸಾಮಾನುಗಳನ್ನು ಕಳುಹಿಸಬಾರದೆಂದು ಬರೆದರೆಂಬ ಕಾರಣದಿಂದ ಅಲ್ಲಿಯ ಇಟಾಲಿಯನ್ ಅಧಿಕಾರಿಗಳು ಆ 15 ಜನರನ್ನು ದಸ್ತಗಿರಿ ಮಾಡಿದರೆಂದು ತಾ 26 ರ ವರ್ತಮಾನ. ಈ ವರ್ತಮಾನವು ನಿಜವೇ ಎಂದು ಅಧಿಕಾರಪೂರ್ವಕವಾಗಿ ತಿಳಿಯಬಂದಿಲ್ಲವೆಂದು ತಾ 27 ರ ಸುದ್ದಿ.

ಅಬಿಸೀನಿಯಾದ ಚಕ್ರವರ್ತಿನಿಯವರ ಉಪವಾಸ ಮತ್ತು ಪ್ರಾರ್ಥನೆ.

ಅಬಿಸೀನಿಯಾದ ಕ್ರೈಸ್ತ ಕ್ಯಾಲೆಂಡರಿನ ಪ್ರಕಾರ ಅಲ್ಲಿಯ ಚಕ್ರವರ್ತಿನಿಯವರು 16 ದಿವಸಗಳ ವರೆಗೆ ಉಪವಾಸವಿದ್ದು ಅಬಿಸೀನಿಯಾದ ಮತ್ತು ಪ್ರಪಂಚದ ಶಾಂತಿಗಾಗಿ ಪ್ರಾರ್ಥನೆ ಮಾಡಿದರು. ಶಾಂತಿಗಾಗಿ ಪ್ರಾರ್ಥನೆ ಮಾಡಬೇಕೆಂದು ಅವರು ಪ್ರಪಂಚದ ಸ್ತ್ರೀಯರಿಗೆಲ್ಲಾ ವಿನಂತಿ ಮಾಡಿರುವರು. ಅಬಿಸೀನಿಯಾದವರ ಪ್ರಯತ್ನಕ್ಕೆ ವಿರೋಧವಾಗಿ ಶಾಂತಿಗೆ ಭಂಗ ಉಂಟಾದರೆ ಮುತ್ತಿಗೆಕಾರರ ದೇಶದ ... ಜನರಲ್ಲಿ ... ಎಂದು ಅವರು ಹೇಳಿರುವರು.

ಅಬಿಸೀನಿಯದಲ್ಲಿ ಯುದ್ಧ ವಾತಾವರಣ.

ಯುದ್ಧವಾಗುವದೆಂಬ ಭಯದಿಂದ ಹಲವು ಪರದೇಶದವರು ಅಬಿಸೀನಿಯಾದಿಂದ ಹೊರಟು ಹೋಗುತ್ತಿರುವರು. ಅಡಿಸಾಬಾಬಾದ ಅಲ್ಲಿಯ ಬ್ಯಾಂಕಿನವರು ಪರದೇಶೀ ಕರೆನ್ಸಿಗಳ ಮೊತ್ತದ ... ಇಟಲಿಯ ರಾಯಭಾರಿಗಳು ತಮ್ಮ ಸಾಮಾನುಗಳನ್ನು ಸಾಗಿಸುತ್ತಿರುವರು. ಪರದೇಶೀ ವ್ಯಾಪಾರಿಗಳು ತಮ್ಮ ಸಾಮಾನುಗಳ ಪಟ್ಟಿ ಮಾಡಿ, ತಮ್ಮ ದೇಶದ ರಾಯಭಾರಿಗಳಿಗೆ ಕೊಡುತ್ತಿರುವರು.

ಇಟಲಿಯ ಸೈನ್ಯ ಪ್ರದರ್ಶನ.

ಇಟಲಿಯ ಸರ್ವಾಧಿಕಾರಿ ಮುಸ್ಸೊಲಿನಿಯವರು ಇಟಲಿಯ ಹಲವು ಭಾಗಗಳಲ್ಲಿ ಆಧುನಿಕ ಸೈನ್ಯದ ಕವಾಯತ್ತಿನ ಪ್ರದರ್ಶನ ನಡೆಸಿದರು. ಅಲ್ಲದೆ ಬೋಲ್ಜಾನೊ ಪಟ್ಟಣದಲ್ಲಿ ತಾ. 28ರಲ್ಲಿ ಇಟಲಿಯ ಮಂತ್ರಿ ಮಂಡಳಿಯ ವಿಶೇಷ ಸಭೆ ಸೇರಿರುವದು. ತಾ 25 ಮತ್ತು 26ರಲ್ಲಿ ಸುಯೆಜ್ ಕಾಲುವೆಗಾಗಿ 17 ಇಟಲಿಯ ಹಡಗುಗಳು, ಸೈನಿಕರು ಮತ್ತು ಕೆಲಸಗಾರರನ್ನು ಆಫ್ರಿಕಕ್ಕೆ ಒಯ್ದವು. ಬ್ರಿಟನದ 'ಗ್ಲೋರಿಯಸ್' ಎಂಬ ಯುದ್ಧದ ಹಡಗು ಮಾಲ್ಟಾಕ್ಕೆ ಬಂದಿದೆ.

ಮುಸ್ಸೊಲಿನಿಯವರ ಹೆದರಿಸುವಿಕೆ.

ಸಪ್ಟೆಂಬರ್ ತಾರೀಖು 4 ರಲ್ಲಿ ನಡೆಯುವ ಜನಾಂಗಗಳ ಕೂಟದ ಕೌನ್ಸಿಲು ಎಂಟಿಗಿಂಗೆ ಅಬಿಸೀನಿಯಾದ ಪ್ರತಿನಿಧಿಯನ್ನು ಸೇರಿಸಿಕೊಳ್ಳಕೂಡದೆಂದು ಇಟಲಿಯವರ ವಾದ. ಲೀಗ್ ಕೌನ್ಸಿಲಿನವರು ಇಟಲಿಯವರಿಗೆ ಅನಕೂಲ ಮಂಜೂರು ಮಾಡದಿದ್ದರೆ ಲೀಗನ್ನು ಕಡಿದಲೇ ಬಿಡುವೆನೆಂದೂ, ಹಾಗೆ ಅನಕೂಲವನ್ನು ಒಪ್ಪುವವರ ಮೇಲೆ ಸೈನ್ಯ ನಡೆಸಲಾಗುವದೆಂದೂ ಮುಸ್ಸೊಲಿನಿಯವರು ಹೇಳಿರುವರು.

ಯುದ್ಧದ ಭವಿಷ್ಯ.

ಇಟಲಿಗೂ ಅಬಿಸೀನಿಯಾಕ್ಕೂ ಅಕ್ಟೋಬರು 5 ರಲ್ಲಿ ಯುದ್ಧ ಸುರುವಾಗುವದೆಂದೂ, ಪ್ರಾರಂಭದಲ್ಲಿ ಇಟಲಿಗೆ ದೃಢ ಜಯ ... ಅದು ... ನವೆಂಬರಿನಲ್ಲಿ ಇನ್ನೊಂದು ಪ್ರಪಂಚ ಯುದ್ಧವಾಗುವದೆಂದೂ, ಅದು ಒಂದು ವರ್ಷದ ವರೆಗೆ ನಡೆಯುವದೆಂದೂ ಕೆಯಿಮುಂತಸ್ಥರ ... ಜ್ಯೋತಿಷ್ಯರು ಭವಿಷ್ಯ ಹೇಳಿರುವರು.

Coorg Forest Department, South Division, Mercara, dated the 22nd August, 1935

TIMBER SALE NOTICE.

For sale by public auction on 19-9-1935 at Hunsur Depot commencing at 10 a. m. 6256 c. ft. of Teak, 7426 c. ft. of Biti, and 8372 c. ft. of Honne lying at Hunsur and some timber lying Ex Forest Depots of Tittimatti and Nagerhole Ranges.

The timber is open for inspection.

For further particulars please apply to:—

THE DIVISIONAL FOREST OFFICER,
SOUTH COORG, MERCARA

ಕೊಡಗು

ಆಗೊಸ್ಟು ತಾ. [illegible]

ಗಂಧದ ಉತ್ಪತ್ತಿಯ ಪಾಲು.

ಕೊಡಗಿನ ಸರ್ಕಾರದ ಉತ್ಪತ್ತಿಯಲ್ಲಿ [illegible] ಆದಾಯವೇ ಅತಿ ಮುಖ್ಯವಾದದ್ದು. [illegible] ಉತ್ಪತ್ತಿಗಿಂತ ಹೆಚ್ಚಾದದ್ದು. ಆದರಲ್ಲಿ ಗಂಧದ ಮರದ ಆದಾಯವೇ ಬಹು ದೊಡ್ಡ ಭಾಗ. ಈ ಉತ್ಪತ್ತಿಯ ಬಾಬಿನಲ್ಲಿ [illegible] ಗಂಧದ ಮರಗಳನ್ನೇ [illegible]

[illegible]

ಈ ಮಧ್ಯೆ, ಚೀಫ್ ಕಮಿಷನರವರು ಗಂಧದ ಮರದ ಬೋನಸು ಕೊಡುವುದನ್ನು ಕುರಿತು ಅವರ 1932 ನೇ ಮೇ 5 ರ ಪ್ರಕಟನೆಯನ್ನು ರದ್ದು ಮಾಡಿ, ಕಳೆದ ಜುಲೈ ತಿಂಗಳ ಗಜೆಟಿನಲ್ಲಿ ತಾ. 28—6—35 ರಲ್ಲಿ ಕೆಲವು ಕರಡು ನಿಬಂಧನೆಗಳ [illegible] ಹೊರಡಿಸಿರುವರು. [illegible] ನಿಬಂಧನೆಗಳು 1937 ನೇ ಮೇ 5 ರ ನಂತರ [illegible]

[illegible] ಇದಾಗಿ [illegible]

[illegible] ತರುವುದು ಉಚಿತವಾಗಿದೆ. ತಿಳುವಳಿಕೆಯುಳ್ಳ ಮಹನೀಯರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ಬೇಗನೆ ಸೂಚಿಸುವುದು ಅವಶ್ಯವಾಗಿದೆ

'ಅರುಣೋದಯ'ದ ಮಹಾ ಸಾಹಸ.

ವಿಜಯನಗರ ಸಾಮ್ರಾಜ್ಯ ಸಂಚಿಕೆ.

ಒಂದಾನೊಂದು ಕಾಲದಲ್ಲಿ ಇಡೀ ಭರತ ಖಂಡಕ್ಕೆ [illegible] ಸಾಮ್ರಾಜ್ಯವಾಗಿದ್ದು [illegible] ಸಂಪಾದಿಸಿ [illegible] 'ಅರುಣೋದಯ' [illegible] 'ವಿಜಯನಗರ ಸಾಮ್ರಾಜ್ಯ ಸಂಚಿಕೆ'ಯನ್ನು [illegible]

[illegible] 'ಅರುಣೋದಯ' [illegible] "ವಿಜಯನಗರ ಸಾಮ್ರಾಜ್ಯ ಸಂಚಿಕೆ" [illegible] ಈ ವಿಷಯದಲ್ಲಿ 'ಅರುಣೋದಯ' [illegible]

ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸು.

ಇದನ್ನು ಕುರಿತು ಕಳೆದ ಜುಲೈ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟವಾದ ನಿಬಂಧನೆಗಳ ಸಾರಾಂಶ

ಬೆಂಗಳೂರು 1935ನೇ ಜೂನ್ 28.

ನಂ. 67 ತಾ 5—5—32ರಲ್ಲಿ ಪ್ರಕಟಿಸಿದ ಚೀಫ್ ಕಮಿಷನರವರ ನಂಬರು 60ನೇ ನೋಟಿಫಿಕೇಶನಿನಲ್ಲಿ [illegible] ರೂಲ್ಸ್‌ಗಳನ್ನು [illegible] ಗಂಧದ ಮರವು [illegible] ಬೋನಸು [illegible] ಈ ವಿಷಯದಲ್ಲಿ ಸಂಬಂಧ ಪಡುವ ಸಮಸ್ತ ಜನರ [illegible] ಪ್ರಕಟಿಸಲ್ಪಟ್ಟಿದೆ. ಸದರಿ ರೂಲ್ಸ್‌ಗಳು ಕೊಡಗು ಗಜೆಟಿನಲ್ಲಿ ಈ ನೋಟೀಸು ಪ್ರಕಟವಾದ 90 ದಿವಸಗಳ ಮೇಲೆ [illegible]

ಸದರಿ ಕರಡು ರೂಲ್ಸ್‌ಗಳ ಬಗ್ಗೆ ನೋಟೀಸಿನ 90 ದಿವಸಗಳ ಒಳಗೆ [illegible] ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತದೆ.

ಕರಡು ನಿಬಂಧನೆಗಳು.

1. ಗಂಧದ ಮರಗಳ [illegible] ಬೋನಸು [illegible]

2. ಆಯಾ ಸುತ್ತಳತೆಗೆ ಬೆಳೆದ ಮರಗಳಿಗೆ [illegible] ಬೋನಸನ್ನು ಈ ಕೆಳಗೆ [illegible]

ನೆಲದಿಂದ 4½ ಅಡಿ ಮೇಲೆ ಅಳತೆ ಮಾಡಿದ ಸುತ್ತಳತೆ	ಬೋನಸ್ಸು		
20 ಅಥವಾ 20 ಇಂಚಿನ ವರೆಗೆ	0	8	0
20 ಇಂಚಿನ ಮೇಲ್ಪಟ್ಟು 25 ಇಂಚು ವರೆಗೆ	2	0	0
25 ,, ,, 30 ,, ,,	5	0	0
30 ,, ,, 35 ,, ,,	20	0	0
35 ,, ,, 40 ,, ,,	40	0	0
40 ಇಂಚಿನ ಮೇಲೆ	75	0	0

ಸೂಚನೆ—(1) ಈ ಬೋನಸು ಅಥವಾ [illegible] ಅದನ್ನು ಕೊಡಲಾಗುವುದು.

(2) [illegible] 20 ಇಂಚು ಸುತ್ತಳತೆ [illegible] ಬೋನಸು ಕೊಡಲಾಗುವುದಿಲ್ಲ.

(3) [illegible] ಬೋನಸ್ಸು ಕೊಡಲಾಗುವುದಿಲ್ಲ.

(4) [illegible] ಬೋನಸು ಕೊಡಲಾಗುವುದಿಲ್ಲ.

(5) [illegible] (ಮೇಲಿನ [illegible] ನೋಡುವುದು).

ಕೋಳಿ, ಮೊಟ್ಟೆ ಮತ್ತು ಹಳ್ಳಿಗಳ ಉದ್ಧಾರ.

—೦೦೦—

(ಬರೆದವರು—ಜೆ. ಸಿ. ಕುಮಾರಪ್ಪ)

ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘವು ಈಗಿನ್ನೂ ಮಾತ್ರ ಶಿಶುವಾ ವಾಡಿಕೆಗಾದ ಹೊಸದ ವಿಷಯವೇ ಆಗಿದೆ. ಮಹಾತ್ಮ ಗಾಂಧಿಯವರೇ ಇದನ್ನು ಹುಟ್ಟಿಸಿದವರಾಗಿರುವದರಿಂದ ಈ ಸಂಘವು ಅವರ ಪ್ರಭಾವದಿಂದ ದಿನೇ ದಿನೇ ಹೆಚ್ಚುಗೊಳ್ಳುತ್ತಿದೆ. ಅದರ ಕಾರ್ಯಕ್ಷೇತ್ರವೂ ಬೆಳೆಯುತ್ತಿದೆ.

ಎಲ್ಲ ಧನಗಳಿಗಿಂತಲೂ ಯಶಸ್ಸು ಘನವಾದದ್ದು. ಬಹು ಕಾಲ ಬಾಳುವಂಥಾದ್ದು. ಬೆಳೆಯುವ ಶಕ್ತಿಯು ಅದರ ಹಿಂದೆ ತುಳುಕುತ್ತಿರುತ್ತದೆ. ಅದರ ಬೇರುಗಳು ಶುದ್ಧ ಹೃದಯ, ಜನಸೇವಾ ತತ್ಪರತೆಯಲ್ಲಿ ಕೂಡಿರುವದರಿಂದ, ಅದು ಒಣನೆಲದಲ್ಲಿಯೂ ಚಿಗಿಯುತ್ತದೆ. ಕೊಂಬೆಗಳನ್ನು ವಿಶಾಲವಾಗಿ ಹಬ್ಬಿಸುತ್ತದೆ. ಎಲ್ಲ ಕಳವಳಿಗಳಿಗೂ ಇದೊಂದು ಬಲವಾಗಿದ್ದರೆ, ಅವುಗಳ ಬೆಳವಣಿಗೆಯು ಎಷ್ಟು ನಿಧಾನವಾಗಿದ್ದರೂ, ಅದು ನಿಶ್ಚಯ. ಈ ಯಶಸ್ಸು ಅ. ಭಾ. ಗ್ರಾ. ಸಂಘಕ್ಕೆ ಇರೋಣದರಿಂದ ಅದಕ್ಕೆ ನೀರು ಗೊಬ್ಬರ ಹಾಕುವದು ಉತ್ತಮವಲ್ಲವೇ? ಜನಹಿತ ದೃಷ್ಟಿಯಿಂದ ನೋಡಿದರೆ ಯೋಗ್ಯವೇ ಅಲ್ಲವೇ?

ಆದರೆ ಅದಕ್ಕೆ ಸರ್ವಾಂಗ ಪರಿಪುಷ್ಟವಾಗಿ ಬೆಳೆಯಲಿಕ್ಕೆ ಯಾವ ಅಡ್ಡಿಯೂ ಇರಬಾರದು. ತುಳಿದಿದ ಕೊಂಬೆಗಳನ್ನು ಕತ್ತರಿಸುವದು ಯೋಗ್ಯವೇ. ಆದರೆ ಗಟ್ಟಿಮುಟ್ಟಾಗಿ ತಾವೂ ಬೆಳೆದು, ತನ್ನ ಎಲೆಗಳ ಸಹಜ ವ್ಯಾಪಾರದಿಂದ ತಾಪ ಗಿಡಕ್ಕೇ ತೃಪ್ತಿಯನ್ನು ಕೊಡುವ ಯಾವ ಕೊಂಬೆಯನ್ನು ಕೊಯಿದು ಹಾಕುವದು ತಪ್ಪಲ್ಲವೇ?

ಗಾಂಧಿಯವರ ಧ್ಯೇಯವೇನು? ಹಳ್ಳಿಯವರು ತಮ್ಮ ಹಳ್ಳಿಯಲ್ಲಿ ಹುಟ್ಟುವ ತಮ್ಮ ಆಹಾರ ವಸ್ತುಗಳನ್ನು ಹಳ್ಳಿಯ ರೀತಿಯಿಂದಲೇ ಸಿದ್ಧಪಡಿಸಿ ಉಪಯೋಗಿಸಿಕೊಂಡರೆ (1) ಅವರ ಧನ ಅವರಲ್ಲಿಯೇ ಉಳಿಯುವುದು (2) ಅಲ್ಲದೆ ಅವರ ಊರಿಂದಿಗಳಲ್ಲಿ, ಸ್ವತಕೋಪಾಯಗಳ ಸುಳಿವಿಲ್ಲದೆ ಹೋಗಿ, ಅವುಗಳಲ್ಲಿಯ ಪುಷ್ಟಿಕರ ಅಂಶವು ಹಾಳಾಗದೆ ಇದ್ದು, ಅವರ ಆರೋಗ್ಯಗಳೂ ಬೆಳೆಯುವವು. ಎಂಬುದೇ ಅಲ್ಲವೇ ಅವರ ಸಾಧುವಾದ ಸಾರಾಂಶ.

ಜನರ ಆಹಾರದ ಪಟ್ಟಿಯಲ್ಲಿ ಅವರು ಅಕ್ಕಿ, ಜೋಳ, ಮುಂತಾದ ಧಾನ್ಯ, ಎಣ್ಣೆ, ಬೆಲ್ಲ ಇವುಗಳಲ್ಲಿ ಸುಧಾರಣೆ ಬೇಕು ಎಂದೇ ಅವರು ಈಗ ಒತ್ತಿ ಒತ್ತಿ ಹೇಳುತ್ತಿದ್ದಾರೆ. ಇದು ಬಹು ಯೋಗ್ಯವಾದ ಮಾತೇ ಎಂದು ಅವರ ವಿಚಾರವನ್ನರಿತವರಿಗೆಲ್ಲ ಮನವರಿಕೆಯಾಗಿದೆ.

ಆದರೆ ಇಲ್ಲೊಂದು ಮಾತು. ಹಳ್ಳಿಯವರ ಆಹಾರವು ಇವಷ್ಟಕ್ಕೇ ಮುಗಿಯಿತೋ? ಹಳ್ಳಿಗಳಲ್ಲಿ ಧಾನ್ಯ, ಕಾಯಿಪಲ್ಯ, ಬೆಲ್ಲ ಇವುಗಳ ಉಪಯೋಗ ಮಾತ್ರವೇನೋ ಇರುವದು. ಇವನ್ನು ಮಾತ್ರ ತಿಂದುಂಡು ಬೇರೆ ವಸ್ತುಗಳನ್ನು ನಿಷೇಧಿಸುವವರೆಷ್ಟು ಮಂದಿ? ಇವನ್ನಲ್ಲದೆ ಇತರ ಆಹಾರ ವಸ್ತುಗಳನ್ನೂ ಅವಶ್ಯಕವೆಂದಿಟ್ಟುಕೊಂಡು ಅವನ್ನು ತಿನ್ನುವವರೆಷ್ಟು ಮಂದಿ? ಅವರ ಸಂಖ್ಯೆ ಹೆಚ್ಚೋ? ಇವರದೋ? ಆ ಇತರ ಆಹಾರ ವಸ್ತುಗಳಾವವು? ಇವು ಬೇರೆಯಾಗಿ ಸ್ವತಂತ್ರವಾಗಿವೆಯೋ, ಅಥವಾ ಅವಕ್ಕೂ ಇವಕ್ಕೂ ಪರಸ್ಪರ ಸಂಬಂಧವೂ ಇದೆಯೋ? ಈ ಪ್ರಶ್ನೆಗಳನ್ನು ಈಗ ಬಿಡಿಸಬೇಕು.

ಒಂದೇ ಮಾತಿನಲ್ಲಿ ಈ ಪ್ರಶ್ನೆಗಳಿಗೆಲ್ಲ ಉತ್ತರ ಕೊಡಲಿಕ್ಕೆ ಹೋದರೆ ಧಾನ್ಯ, ಕಾಯಿಪಲ್ಯ, ಬೆಲ್ಲ ಮಾತ್ರವೇ ಅಲ್ಲದೆ ಇತರ ಆಹಾರಗಳನ್ನು ತಿನ್ನುವವರ ಸಂಖ್ಯೆಯೇ ಹೆಚ್ಚು ಎಂದು ಹೇಳಬೇಕಾಗುತ್ತದೆ. ಯಾಕೆಂದರೆ ಹಾಲು ಮೊಸರು, ತುಪ್ಪ, ಮೊಟ್ಟೆ, ಮೀನು, ಮಾಂಸ ಮುಂತಾದವುಗಳ ಉಪಯೋಗವೂ ಧಾರಾಳವಾಗಿದೆ. ಹಾಲನ್ನು ಕೊಡುವದು ಎಮ್ಮೆ ದನ ಕುರಿಗಳು, ಮಾಂಸವನ್ನು ಕೊಡುವವು ದನ ಕುರಿ ಕೋಳಿಗಳು ಮುಖ್ಯ. ಎಮ್ಮೆಯನ್ನು ತಿನ್ನುವವರೂ ಹಿಂದುಗಳಲ್ಲಿ ಎಷ್ಟೋ ಜನರಿದ್ದಾರೆ. ಹಂದಿಯನ್ನು ಅನೇಕ ಹಿಂದುಗಳು ತಿನ್ನುತ್ತಾರೆ. ಕ್ರೈಸ್ತರೂ ತಿನ್ನುತ್ತಾರೆ. ಮೊಟ್ಟೆಯನ್ನು ಅನೇಕಾನೇಕ ಹಿಂದುಗಳೂ, ಕ್ರೈಸ್ತರೂ, ಮುಸಲ್ಮಾನರೂ ಪ್ರತ್ಯಹವೂ ಉಪಯೋಗಿಸುತ್ತಾರೆ. ಹಿಂದುಸ್ಥಾನದಲ್ಲಿ ಮೀನು ಮೊಟ್ಟೆ ಮಾಂಸಗಳ ಉಪಯೋಗ ಮಾಡುವವರ ಸಂಖ್ಯೆಯೇ ಹೆಚ್ಚು. ದಕ್ಷಿಣ ಹಿಂದುಸ್ಥಾನದ ಬ್ರಾಹ್ಮಣರು, ವೈಶ್ಯರು ಇವುಗಳನ್ನು ತಿನ್ನುವದಿಲ್ಲ. ಉತ್ತರ ಹಿಂದುಸ್ಥಾನದಲ್ಲಿ ಎಷ್ಟೋ ಹಲವು ಪಂಗಡದವರನ್ನು ಬಿಟ್ಟರೆ ಬಾಕಿ ಹಲ್ಲು ವರ್ಣದವರೂ ಮೀನು ಮಾಂಸ ತಿನ್ನುತ್ತಾರೆ. ಆದರೆ ಬ್ರಾಹ್ಮಣರು, ವೈಶ್ಯರು, ಕೋಳಿ, ಮೊಟ್ಟೆಗಳನ್ನು ತಿನ್ನುವದಿಲ್ಲ. ಜೈನರು, ಲಿಂಗಾಯತರು, ಬೌದ್ಧರು ಯಾವ ಮಾಂಸವನ್ನೇ ಆಗಲಿ ಮೊಟ್ಟೆಯನ್ನೇ ಆಗಲಿ ತಿನ್ನುವದಿಲ್ಲ. ಆದರೆ ಇವರು ಕೇವಲ ಸಸ್ಯಾಹಾರಿಗಳು ಎಂದೆನ್ನಲಿಕ್ಕಾಗುವದಿಲ್ಲ. ಯಾಕೆಂದರೆ ಪಶುವಿನಿಂದ ಬರುವ ಹಾಲು ಮತ್ತು ಅದರಿಂದುಂಟಾಗುವ ಕೆಲವು ಪದಾರ್ಥಗಳನ್ನು ತಿನ್ನುತ್ತಾರೆ. ಸಾರಾಂಶ—ಹೊಲ - ಗದ್ದೆ - ತೋಟಗಳಲ್ಲಿ ಬೆಳೆಯುವ ಆಹಾರವನ್ನುಂಡುವವರಿಂತಲೂ ಪಶುಪ್ರಾಣಿಗಳಿಂದ ದೊರೆಯುವ ಆಹಾರವನ್ನುಂಡುವವರ ಸಂಖ್ಯೆಯೇ ಹೆಚ್ಚು.

ಹೀಗಿರುವಾಗ ಮಹಾತ್ಮರು ತಮ್ಮ ಕಾರ್ಯರಂಗದಲ್ಲಿ ಸುಧಾರಣೆಗಾಗಿ ಸೇರಿಸಿಕೊಂಡ ಕೆಲವು ಕಡಿಮೆ ಜನಸಂಖ್ಯೆಗೆ ಬೇಕಾದವು ಅಲ್ಲದೆ ಹೆಚ್ಚಿನ ಭಾಗಕ್ಕೆ ದೇಕಾರವಲ್ಲವೆಂದು ತೋರುತ್ತಿದೆ. ಆದರೆ ಮಹಾತ್ಮರ ಮೇಲೆ ಇದರಿಂದ ಒಂದು ಆರೋಪವನ್ನು ಹೊರಿಸಬೇಕೆಂಬುದು ನನ್ನ ಉದ್ದೇಶವಲ್ಲ. ಯಾಕೆಂದರೆ ಕಾರ್ಯರಂಗದಲ್ಲಿ ಮೊದಲು ಸುಲಭ ಸಾಧ್ಯವಾದದ್ದನ್ನೇ ಕೈಕೊಳ್ಳುವದು ಒಂದು ಯೋಗ್ಯವಾದ ವಾಡಿಕೆಯಾಗಿದೆ. ಅವರು ಈ ದೃಷ್ಟಿಯಿಂದಲೇ ತಮ್ಮ ಕೆಲಸವನ್ನು ಮೊದಲು ಮಾಡಿರಬೇಕು.

ಅವರಿಗೆ ಕೋಳಿ, ಕುರಿಗಳನ್ನು ಸಾಕಿ ಬೆಳೆಸುವದು ಒಗ್ಗುವದಿಲ್ಲೆಂದೂ ಹೇಳಲಿಕ್ಕಾಗದು. ಮೊನ್ನೆ ಮೊನ್ನೆಯೇ ಅವರು ಹರಿಜನರು ಕುರಿ ಕೋಳಿಗಳನ್ನು ಧಾರಾಳವಾಗಿ ಸಾಕಿ ಬೆಳೆಸಬಹುದು. ಆದರೆ ಗೋಮಾಂಸವನ್ನೇ ಆಗಲಿ, ಸತ್ತ ಪ್ರಾಣಿಯ ಮಾಂಸವನ್ನೇ ಆಗಲಿ ತಿನ್ನಕೂಡದು' ಎಂದು ಹೇಳಿಬಿಟ್ಟಿದ್ದಾರೆ. ಆದರೆ ಕೋಳಿ ಕುರಿಗಳ ಮಾಂಸವನ್ನು ತಿನ್ನಬಹುದು, ಎಂದು ಸ್ಪಷ್ಟವಾಗಿ ಹೇಳಲಿಲ್ಲ. ಆದರೆ ಹರಿಜನರು ಗೋಮಾಂಸವನ್ನೇ ಆಗಲಿ, ಸತ್ತ ಪ್ರಾಣಿಗಳ ಮಾಂಸವನ್ನೇ ಆಗಲಿ ತಿನ್ನಕೂಡದು ಎಂದವರು ಹೇಳಿದ ಮಾತಿನಿಂದ ಇತರ ಮಾಂಸಗಳನ್ನು ತಿನ್ನಬಹುದೋ ಏನೋ ಎಂಬ ಸಂದೇಹವು ಸಹಜವಾಗಿಯೇ ಹುಟ್ಟುತ್ತದಲ್ಲವೇ? ಇದನ್ನು ಅವರಿಗೆಂದು ಪ್ರಶ್ನೆ ಹಾಕಿ ದಿಟ್ಟೇ ನಿರ್ಧರಿಸಿಕೊಳ್ಳುವದುತ್ತಮ.

ಆದರೆ ಇಲ್ಲಿ ಮಾಂಸ ತಿನ್ನಬಹುದೋ ಕೂಡದೋ ಎಂಬ ಪ್ರಶ್ನೆಯಲ್ಲ. ಅವನ್ನು ತಿನ್ನುವವರ ಸಂಖ್ಯೆ ಹೆಚ್ಚು. ಮೀನು, ಮಾಂಸ, ಮೊಟ್ಟೆ ಮತ್ತು ಹಾಲು ಇವುಗಳ ಉಪಯೋಗವು ಬಹಳವಾಗಿದೆ. ಆದರೆ ಹಾಲಿಗೆ ಯಾರ ಆಕ್ಷೇಪಣೆ ಯೂ ಇಲ್ಲ. ಇತರ ಪದಾರ್ಥಗಳನ್ನು ಬಿಡು ಅಂದರೆ ಕೂಡಲೆ ಬಿಡುವವರೂ ಇಲ್ಲ. ಅವನ್ನು ಬಿಡಿಸುವದೂ ಪ್ರಾಣಿದಯೆಯೂ ಸಂಘದ ಕೆಲಸವಲ್ಲವೆ, ರಾಷ್ಟ್ರೀಯ ಅಥವಾ ಆರ್ಥಿಕ ಸಂಘದ ಕೆಲಸವಲ್ಲ. ಅವುಗಳ ಮುಂದಾಳುಗಳ ಕೆಲಸವಲ್ಲ. ಇಗಿದ್ದ ಸ್ಥಿತಿಯಲ್ಲಿ (1) ಈ ವಸ್ತುಗಳೇನೋ ಬಹು ಜನರ ಆಹಾರಕ್ಕೆ ಬೇಕೇಬೇಕಾಗಿವೆ. (2) ಇವುಗಳ ಸುಧಾರಣೆಯಿಂದಲೂ ಜನರ ಆರ್ಥಿಕ ಪ್ರಶ್ನೆಯು ಬೆಳೆಯುತ್ತಿದೆ. (3) ಅಷ್ಟು ಮಾತ್ರವೇ ಅಲ್ಲ ಹೊಲ - ಗದ್ದೆ - ತೋಟಗಳಲ್ಲುಂಟಾಗುವ ಪದಾರ್ಥಗಳಿಗೂ, ಈ ಪ್ರಾಣಿಗಳಿಗೂ ಬಹಳವಾದ ಸಂಬಂಧವಿದೆ. ಅವುಗಳು ಇವಕ್ಕೆ ಆಹಾರ. ಇವುಗಳ ಗೊಬ್ಬರ ಅವಕ್ಕೆ ಖಾದ್ಯ. ಹೀಗಿರುವಾಗ ಒಂದರ ವೃದ್ಧಿಯಿಂದ ಇನ್ನೊಂದರ ವೃದ್ಧಿಯಾಗಲೇಬೇಕು. ಎರಡರ ಉದ್ಯೋಗವನ್ನೂ ಧಾರ್ಮಿಕ ಶಾಸ್ತ್ರೋಕ್ತವಾಗಿ ಮಾಡಿದರೆ ಎರಡರ ವೃದ್ಧಿಯೂ ಆಗಿ ಆ ಜನಾಂಗದ ಆರ್ಥಿಕ ಸ್ಥಿತಿಗತಿಯು ಪ್ರಗತಿಯೂ ಆಗಲೇಬೇಕು. ಹೀಗಿರುವಾಗ ಆರ್ಥಿಕ ಪ್ರಗತಿಯನ್ನು ಧ್ಯೇಯವನ್ನಾಗಿಟ್ಟುಕೊಂಡ ಯಾವ ಆಂದೋಲನದಲ್ಲಿಯೇ ಆಗಲಿ, ಒಂದನ್ನು ಮುಂದಿಟ್ಟುಕೊಂಡು ಇನ್ನೊಂದನ್ನು ಗಮನಿಸದೇ ಹೋದರೆ ಉದ್ದೇಶವು ಕೊನೆಗಾಣದು - ಒಂದರ ಸುಧಾರಣೆಯಿಂದ ಇನ್ನೊಂದೂ ಸಹಜವಾಗಿ ಅನಾಯಾಸವಾಗಿ ಸುಧಾರಿಸಲ್ಪಡುವದೆಂಬ ನಂಬಿಕೆಯೂ ಆಗದು. ಅದು ಶುಷ್ಕ ತಪ್ಪು.

ಎರಡನ್ನೂ ಕೂಡಲೇ, ಏಕೇಚಸಿ, ಉಪಾಯಗಳಿಂದಲೇ ಬೆಳೆಸಬೇಕು. ಹಾಗೆ ಮಾಡಿದರೆ (1) ಜನಾಂಗ ಸರ್ವಸ್ವದ ಆಹಾರದ ಸುಧಾರಣೆಯನ್ನೂ ಕೈಕೊಂಡಂತಾಗುವದು. (2) ಆರ್ಥಿಕ ಅಭಿವೃದ್ಧಿಯಲ್ಲಿ ಯಶವಂತ ಕಡೆಯಲ್ಲಿಯೂ ಪಟ್ಟ ಬಾಗದಂತೆ ಸರ್ವಾಂಗ ಪರಿಪುಷ್ಟಗೊಳ್ಳುವ ಹಾದಿಯನ್ನು ಹಾಕಿಕೊಟ್ಟಂತಾಗುವದು.

ದೇಶಬಾಂಧವ್ಯದ ಆರ್ಥಿಕೋದ್ಧಾರವೇ ಗಮ್ಯವಾಗಿದ್ದರೆ ಈ ಹಾದಿಯನ್ನು ಹುಡುಕಲೇಬೇಕು. ಆದರೆ ಹೊಸ ನೋಟದಲ್ಲಿ ಕಷ್ಟಸಾಧ್ಯ ವಿಷಯಗಳನ್ನು ತೆಗೆದುಕೊಳ್ಳದೆ ಸುಲಭವಾದವುಗಳನ್ನೇ ತೆಗೆದುಕೊಂಡು ಬೆಳೆಸಬೇಕು. ಅದು ಬಹು ಉಪಯೋಗಿಯಾಗಿಯೂ ಇರಬೇಕು. ಈ ದೃಷ್ಟಿಯಿಂದ ನೋಡಿದರೆ, ಕೋಳಿ ಮೊಟ್ಟೆಗೇ ಮೊದಲಿನ ಸ್ಥಾನವು, ಎಂದು ಆಹಾರ ಶಾಸ್ತ್ರ, ಮತ್ತು ಅರ್ಥಶಾಸ್ತ್ರಗಳ ಮತ. ಇದರ ಉದ್ಯೋಗಕ್ಕೆ ಬಂಡವಾಳ ಕಡಿಮೆ ಫಲ ಹೆಚ್ಚು ಮತ್ತು ಬಹು ಅನುಕೂಲ. ಹಾಲೊಂದನ್ನು ಬಿಟ್ಟರೆ ಮೊಟ್ಟೆಯಂಥ ಆಹಾರ ಬೇರೊಂದಿಲ್ಲ ಎಂದು ಆಹಾರ ಶಾಸ್ತ್ರಗಳ ತೀರ್ಮಾನ. ಹೀಗಿರುವಾಗ ಕೋಳಿಗಳನ್ನು ಸಾಕುವ ಉದ್ಯೋಗವನ್ನು ಏಕೆ ಪ್ರಚುರಿಸಬಾರದು?

ಏನುಗಳಿಗೇಕೆ ಪ್ರಾಮುಖ್ಯತೆಯನ್ನು ಕೊಡಬಾರದು. ಎಂದು ಯಾರಾದರೂ ಕೇಳಬಹುದು. ಕೋಳಿಗಳನ್ನು ಎಲ್ಲ ಹಳ್ಳಿಗಳಲ್ಲಿಯೂ ಬೆಳೆಸಬಹುದು. ಮೀನುಗಳು ಎಲ್ಲ ಕಡೆ ಗೂ ಸಿಕ್ಕುವದಿಲ್ಲ. ದನ-ಕುರಿಗಳಿಗೆ ಹೆಚ್ಚಿನ ಬಂಡವಾಳ ಬೇಕು ಖರ್ಚು ಬೇಕು. ಈ ಎಲ್ಲ ಪಕ್ಷಗಳಿಂದಲೂ ವಿಚಾರಿಸಿದರೆ ಕೋಳಿ, ಮೊಟ್ಟೆ ಇವುಗಳ ಉದ್ಯೋಗವೇ ಸಾಧ್ಯವೂ ಅವಶ್ಯಕವೂ ಎಂದು ತೋರುತ್ತದೆ. ಈ ತೀರ್ಮಾನವು ಹಲವು ಧರ್ಮಭಾವನೆಗಳಿಗೆ ಅಸಮ್ಮತವಾಗಿರಬಹುದು. ಆದರೆ ಇಲ್ಲಿ 'ಚರ್ಚೆಗೆ ಬಂದ ವಿಷಯ ಧರ್ಮವಲ್ಲ ಧಾರ್ಮಿಕ ಆರ್ಥಿಕ ಎಂಬುದನ್ನು ಮರೆಯಕೂಡದು.

ಯುದ್ಧ ಅನಿವಾರ್ಯ.

—೦೦೦—

ಬ್ರಿಟನ್ನಿನ ಚಿಂತೆ.

ಅಬಿಸೀನಿಯಕ್ಕೆ ಜಪಾನಿನ ಸಹಾಯ.

ಇಟಲಿ ಅಬಿಸೀನಿಯಾಗಳ ಯುದ್ಧವನ್ನು ತಡೆಗಟ್ಟಿ ಶಾಂತ ರೀತಿಗಳಿಂದ ಇಬ್ಬರ ಸಮಾಧಾನಗಳನ್ನು ಮಾಡಲು ಯತ್ನಿಸುತ್ತಿರುವ ಫ್ರಾನ್ಸ್ ಮತ್ತು ಇಂಗ್ಲೆಂಡಿನ ಪ್ರತಿನಿಧಿಗಳ ಉಪಾಯಗಳು ನಿಷ್ಫಲವಾದಂತೆಯೇ ಸರಿ.

ಇಟಲಿಯು ಈಗಿನ ನಾನಾ ಅವಸ್ಥೆಗಳನ್ನು ನೋಡಿ ಅದರ ಆರ್ಥಿಕ ಸ್ಥಿತಿಯನ್ನು ಹೇಗಾದರೂ ಉತ್ತಮಗೊಳಿಸದೇ ಇರಾಗಿದಷ್ಟು ಅನಿವಾರ್ಯವೆಂದು ತಿಳಿದು ಲಾವಲ್ ಮತ್ತು ಈಡನ್ನರವರು ಮುಸಲೋನಿಯ ಪ್ರತಿನಿಧಿಯಾದ ಬ್ಯಾರನ್ ಅಲೋಸಿಯವರಿಗೆ ಈ ಸಲಹೆಗಳನ್ನು ಕೊಟ್ಟರು.

ಅಬಿಸೀನಿಯದಲ್ಲಿ ಇಟಲಿಗೆ ಆರ್ಥಿಕ ಹಕ್ಕುಗಳನ್ನು ಕೊಡಬೇಕಾದರೆ—

(1) ಅಬಿಸೀನಿಯದ ಸ್ವಾತಂತ್ರ್ಯ ವ್ಯಕ್ತಿತ್ವಗಳು ಕಾಪಾಡಲ್ಪಡಬೇಕು.

(2) ಇಟಲಿಯು ಆರ್ಥಿಕ ಹಕ್ಕುಗಳಿಗೆ ರಾಜ್ಯಭಾರಿಯು ಒಪ್ಪಬೇಕು.

(3) ಇವೆಲ್ಲಕ್ಕೂ ಲೀಗ್ ಆಫ್ ನೇಷನ್ ಸಭೆ ಹಾಕಬೇಕು.

ಮುಸಲೋನಿಯು ಲಾವಲ್ ಈಡನ್‌ರ ಈ ಸಲಹೆಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾನೆ. ಅಬಿಸೀನಿಯವು ಇಟಲಿ ಸಾಮ್ರಾಜ್ಯದ ಅಂಗವಾಗಬೇಕೆಂಬುದೇ ಆತನ ಹಟ. ಇದಕ್ಕೆ ಬ್ರಿಟನ್ ಸ್ವಲ್ಪವೂ ಒಪ್ಪದು. ಫ್ರಾನ್ಸ್ ಕೂಡ ಮುಸಲೋನಿಯ ಈ ದುರಾಶೆಯನ್ನು ಉಗ್ರವಾಗಿಯೇ ನೋಡುತ್ತಿದೆ.

ಬ್ರಿಟನ್ನಿಗೇಕೆ ಈ ವಿಷಯದ ಇಷ್ಟೊಂದು ಚಿಂತೆ.

ಅಬಿಸೀನಿಯದ ಸ್ವಾತಂತ್ರ್ಯಕ್ಕಾಗಿ ವಾದಿಸುತ್ತಿರುವ ಬ್ರಿಟನ್ನಿನ ಯುಕ್ತಿಯು ಅದರ ಧರ್ಮಬುದ್ಧಿಯೇನೂ ಅಲ್ಲ. ಅಬಿಸೀನಿಯವು ಇಟಲಿಯ ಪಾಲಾಯಿತೆಂದರೆ ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಗೆ ಒಂದು ದೊಡ್ಡ ಪೆಟ್ಟು ಎಂದು ಅದರ ಅಭಿಪ್ರಾಯ.

ಇಂಡಿಯಾಕ್ಕೂ ಆಫ್ರಿಕಾಕ್ಕೂ ಮಧ್ಯೆ ಇರುವ ಹಿಂದೂ ಸಾಗರವು ಯುದ್ಧ ದೃಷ್ಟಿಯಿಂದ ಬಹು ಮುಖ್ಯವಾದದ್ದು.

ಇಂಗ್ಲೆಂಡಿನಿಂದ ಅಥವಾ ಯೂರೋಪಿನಿಂದ ಇಂಡಿಯಕ್ಕೆ ಬರಬೇಕಾದರೆ ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರ ಇವುಗಳ ಮೂಲಕವೇ ಹತ್ತಿರ ಮಾರ್ಗ.

ಎರಿಟ್ರಿಯಾ ಸೋಮಾಲೀ ಲ್ಯಾಂಡಿನಿಂದ ಕೆಂಪು ಸಮುದ್ರದ ದಕ್ಷಿಣ ಭಾಗದಲ್ಲಿ ಇಟಲಿಯ ಅಧಿಕಾರವೂ ಸ್ವಲ್ಪವಿದೆ. ಕೆಂಪು ಸಮುದ್ರದ ಉತ್ತರ ಭಾಗದಲ್ಲಿ ಸ್ವತಂತ್ರ ಅರೇಬಿಯಾ ಸಂಸ್ಥಾನವಿದೆ. ಈಗ ಅಬಿಸೀನಿಯವೂ ಇಟಲಿಗೆ ಸೇರಿ ಹೋದರೆ ಪೂರ್ವ ಆಫ್ರಿಕದಲ್ಲಿ ಅದರ ಪ್ರಾಬಲ್ಯವು ಬಹಳವಾಗಿ ಇಟಲಿಯವರೂ ಅರೇಬಿಯನರೂ ಯಾವಾಗಲಾದರೂ ಒಟ್ಟುಗೂಡಿ ಇಂಗ್ಲೆಂಡ್ ಇಂಡಿಯಾಗಳ ಕೆಂಪುಸಮುದ್ರದ ಶೀಘ್ರ ಮಾರ್ಗವನ್ನು ಅಡ್ಡಗಟ್ಟಬಹುದು. ಇಂಥ ಸಂಭವದಿಂದ ಬ್ರಿಟಿಷ್ ಸಾಮ್ರಾಜ್ಯದ ಬಹು ಮುಖ್ಯಾಂಗವಾದ ಇಂಡಿಯವನ್ನು ಕಾಪಾಡಿಕೊಳ್ಳಲು ಬ್ರಿಟನ್ನಿಗೆ ಬಹಳ ಕಷ್ಟವಾಗುತ್ತದೆ.

ಇಷ್ಟೊಂದೇ ಅಲ್ಲ, ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಾದ ಈಜಿಪ್ಟ್ ಮತ್ತು ಸೂಡಾನ್‌ಗಳು ಅಬಿಸೀನಿಯದ ಪಶ್ಚಿಮ ದಿಕ್ಕಿನಲ್ಲಿವೆ. ಆ ದೇಶಗಳನ್ನು ವರ್ಷ ವರ್ಷವೂ ಫಲವತ್ತಾಗಿ ಮಾಡುತ್ತಿರುವ ನೈಲ್ ನದಿಯ ಮೂಲ ಪ್ರದೇಶವೂ ಶಾಖೆಗಳು ಅಬಿಸೀನಿಯದಲ್ಲಿವೆ. ಈಜಿಪ್ಟ್ ಮತ್ತು ಸೂಡಾನ್‌ಗಳಲ್ಲಿ ಹತ್ತಿ ಕೃಷಿಯ ವ್ಯವಸಾಯವನ್ನು ಅಭಿವೃದ್ಧಿಪಡಿಸಿ ಬ್ರಿಟಿಷರು ಹಣವನ್ನು ಸಂಪಾದಿಸುತ್ತಿದ್ದಾರೆ. ಇಟಲಿಯು ಅಬಿಸೀನಿಯವನ್ನು ನುಂಗಿಕೊಂಡರೆ ನೈಲ್‌ನದಿಯ ಮೂಲ ಪ್ರದೇಶಗಳೂ ಅದರ ಶಾಖೆಗಳೂ ಇಟಲಿಯ ಕೈಯಲ್ಲಿ ನಿಲ್ಲುವವು. ಬ್ರಿಟನ್ನಿನೊಡನೆ ಸ್ವಲ್ಪ ಮನಸ್ತಾಪ ಬಂದೊಡನೆಯೇ ಇಟಲಿಯು ನೈಲಿನ ಮಾರ್ಗವನ್ನು ಬೇರೆ ಕಡೆ ತಿರುಗಿಸಿ ಬ್ರಿಟಿಷ್ ಸೂಡಾನನ್ನು ಮರುಭೂಮಿಯನ್ನಾಗಿ ಮಾಡಬಹುದು.

ಇವೆಲ್ಲ ಬ್ರಿಟನ್ನಿನ ತಲೆಯಲ್ಲಿರುವ ಚಿಂತೆಗಳು.

ಲೀಗ್ ಆಫ್ ನೇಷನ್ಸ್ ಅಥವಾ ಬ್ರಿಟನ್ನು ಬೇಕಾದ್ದು ಹೇಳಲಿ ಇಟಲಿ ಸೈನ್ಯವು ಅಬಿಸೀನಿಯಾದ ಮೇಲೆ ಅಕ್ಟೋಬರದಲ್ಲಿ ದಂಡೆತ್ತುವ ಸಂಭವವಿದೆ.

ಅಬಿಸೀನಿಯಕ್ಕೆ ಜಪಾನಿನ ಜಾತಿಯ ಸಹಾಯ.ಹಸ್ತ.

ಕಳೆದ ಯುದ್ಧದಲ್ಲಿ ಫ್ರಾನ್ಸಿಗೆ ಸಹಾಯ ಮಾಡಿದ ಆಫ್ರಿಕದ ಅನುಕೂಲ ದಾಹಿಯ ಮುಖ್ಯಸ್ಥನಾದ ವಾಲ್ಲಡ್ ಕುವಾರಿಕೋಟ ಈ ಸಲ ಇಟಲಿ ಅಬಿಸೀನಿಯಕ್ಕೆ ಯುದ್ಧವೊದಗಿದರೆ ಜಪಾನುಗಳ ದುರ್ಭೂಪತನನ್ನು ತಪ್ಪಿಸಿಕೊಡಲು ಜಪಾನಿನವರಿಗೆ ಸಹಾಯ ಮಾಡುವೆನೆಂದು ತಿಳಿಸಿದ್ದಾನೆ. 'ಈ ಜಪಾನು ಯಾರೇ ಆದರು ದೈಶ್ಯರಂತೆ ಯುದ್ಧ ಮಾಡುವದು. ಅವರಿಗೆ ಸಾವೆಂಬ ಭಯವು ಕ್ಷಣವಾತ್ರವೂ ಇಲ್ಲವಾಗಿ.

ವಿವಿಧ ವಾರ್ತಾವಳಿ.

ಒಹ್ಯಾಯೋನಿನಲ್ಲಿ ಮಹಾ ನೆರೆ!

ವರ್ಣನಾತೀತವಾದ ಸಂಕಷ್ಟ.

ಒಹ್ಯೋನಿನಲ್ಲಿ ಭಯಂಕರ ನೆರೆಯು ಬಂದಿದೆ. 1913ರ ನೆರೆಗಿಂತ ಪ್ರಚಂಡವಾಗಿದೆಯೆಂದು ಜನರಾಡುತ್ತಿರುವರು. ಪಟ್ಟಣದ ಮಾರ್ಗಗಳಲ್ಲೆಲ್ಲ ದೋಣಿಗಳು ಓಡಾಡುತ್ತಿವೆ. ಸ್ಮರಣಪಟ್ಟೆಗಳು ಹಾಳಾಗಿವೆ. ದಕ್ಷಿಣ ರೋಡ್‌ನಲ್ಲಿ ಒಂದು ಸೇತುವೆ ಒಡೆದುದರಿಂದ ಕಮಿಶನರರು ಅನೇಕ ಮನೆಗಳನ್ನು ನೆರೆಯ ಬಾಯಿಯಿಂದ ರಕ್ಷಿಸಿದಂತಾಗಿದೆ. ಜನರು ತಂತಮ್ಮ ವಸ್ತು ಒಡವೆಗಳನ್ನು ನೀರಿನ ಬಾಯಿಯಿಂದ ತಪ್ಪಿಸಲು ಸಮಯವಿಲ್ಲದ ಅವಸರದಿಂದ ನೆರೆಯು ಮುಂದೊತ್ತುತ್ತು. ಫೇಡರಲ್ ಯೂನಿಯನ್ ಬೋರ್ಡ್, ರೆಡ್ ಕ್ರಾಸ್ ಕಮಿಟಿ ಮತ್ತು ಸಾಲ್ವೇಷನ್ ಆರ್ಮಿ ಸಮಾಜದವರು ಜನರಿಗೆ ಅನ್ನಾಹಾರಗಳನ್ನಿತ್ತು ಸಹಾಯಮಾಡುತ್ತಿರುವರು.

—೦೦೦—

ಅರ್ಧ ತಾಸಿನ ರಾತ್ರಿ!

ಜನರಿಗೊಂದು ಚಾತ್ರಿ.

ಕಳೆದ ಜೂನ್ 22ರಲ್ಲಿ ಅಲಾಸ್ಕಾದಲ್ಲಿರುವ ಫೇರ್ ಬ್ಯಾಂಕ್ಸ್ ನಗರದ ಜನರಿಗೆ ರಾತ್ರಿಯೇ ಇರಲಿಲ್ಲ. ಒಂದು ಸಂಪೂರ್ಣ ದಿನ ಸೂರ್ಯನು ಮತ್ತೆ ಮುಳುಗಲೇ ಇಲ್ಲ. ರಾತ್ರಿ ಮಧ್ಯರಾತ್ರಿಯಾಗುವಾಗ ಸೂರ್ಯನು ಮೇಲಕ್ಕೆ ಹೋಗಿ ಅರ್ಧ ಗಂಟೆಯೊಳಗೆ ಮೂಡಿದನು. ಈ ವಿಚಿತ್ರ ನೋಟವನ್ನು ನೋಡಲು ಅಲ್ಲಿಯ ಜನರೆಲ್ಲರೂ ಎತ್ತರವಾದ ಪರ್ವತವನ್ನೇರಿ ಬಂದು ನಗರದ ಜನರೆಲ್ಲ ಆನಂದಿಸುತ್ತಿದ್ದರು. ಅಲ್ಲಿ ನರ್ತನಗಳೂ, ವಿವಿಧ ಆಟಗಳೂ ಇದ್ದುವು. ವರ್ಷದಲ್ಲೊಂದು ದಿನವಾದ್ದರಿಂದ ಎಲ್ಲಾ ಕಂಪೆನಿಗಳಿಗೂ ಅಂಗಡಿಗಳಿಗೂ ರಜೆ ಇತ್ತು.

—೦೦೦—

ಗಡಿಯಾರಗಳು ಬೇಡ

ಹೂವಿನ ತೋಟವಿದ್ದರೆ ಸಾಕು.

ಇನ್ನು ಮೇಲೆ ಗಡಿಯಾರಗಳ ಅವಶ್ಯಕತೆ ಇಲ್ಲ. ವಿಚಿತ್ರ ಹೂಗಳ ತೋಟವೊಂದನ್ನು ನಿರ್ಮಿಸಬೇಕು. ಇತ್ತೀಚೆಗೆ ಹೂಗಳು ಅರಳುವ ಸಮಯವನ್ನು ಸಂಶೋಧಿಸಿ ಅವುಗಳು ಯಾವಯಾವಾಗ ಅರಳುತ್ತವೆಯೆಂಬುದನ್ನು ನಿರ್ಧರಿಸಿದ್ದಾರೆ. ಗಂಟೆಗೊಂದರಂತೆ ಅರಳುವ ಪುಷ್ಪಗಳು ಅನೇಕವಿವೆ. ಗೋಟ್ಸ್‌ಬಿಯರ್ಡ್ ಎಂಬ ಪುಷ್ಪವು ಬೆಳಿಗ್ಗೆ ಆರು ಗಂಟೆಗೆ ಅರಳುವುದು. ಇನ್ನು ಕೆಲವು ಪುಷ್ಪಗಳು ಒಂಬತ್ತು ಗಂಟೆಗೂ, ಕೆಲವು ಹನ್ನೆರಡು ಗಂಟೆಗೂ, ಕೆಲವು ನಾಲ್ಕು ಗಂಟೆಗೂ ಅರಳುತ್ತವೆ. ಆದರೆ ಇವುಗಳನ್ನೆಲ್ಲಾ ಬೆಳೆಯಿಸುವುದೂ ಕಷ್ಟ. ಅದರಲ್ಲೂ ಒಂದು ದಿನ ಪುಷ್ಪವು ಅಗದಿದ್ದರೆ!

—೦೦೦—

ವಿಚಿತ್ರ ಶಿದ್ರಾ ರೋಗ.

ಜಪಾನಿನಲ್ಲಿ ಈ ವಿಚಿತ್ರ ಕಾಯಿಲೆಯು ಹರಡಿದಾಯು ಪ್ರಬಲವಾಗಿದೆಯಂತೆ. ನಿದ್ರಿಸಿದವನು ಏಳುವುದೇ ಇಲ್ಲ!

ಈ ಕಾಯಿಲೆಯು ಮೊದಲು ಆಫ್ರಿಕದ ನೀಗ್ರೋಗಳಲ್ಲಿತ್ತಂತೆ. ಇದಕ್ಕೆ ಔಷಧೋಪಚಾರಗಳನ್ನು ಕಂಡುಹಿಡಿಯಲು ಅನೇಕ ಡಾಕ್ಟರುಗಳು ಪ್ರಯತ್ನಿಸುತ್ತಲಿದ್ದರು. ಮೊನ್ನೆಯಷ್ಟೆ ಡಾ. ಕೋಸ್ಟರನವರು ಈ ಕಾಯಿಲೆಯನ್ನು ತನಗೆನೇ ಬರಮಾಡಿಕೊಂಡು ಅದಕ್ಕೆ ಒಂದು ಚಿಕಿತ್ಸಾ ಕ್ರಮವನ್ನು ಕಂಡುಹಿಡಿದಿರುವರಂತೆ. ಕಳೆಯದ ಕಾಯಿಲೆಗಳೆಲ್ಲ ಶಿಕ್ಷಿಸಲಾಯಿತು.

—೦೦೦—

ರಷ್ಯವು ಯುದ್ಧಕ್ಕೆ ಸಿದ್ಧವಾಗಿದೆ:—

ಸರಿಯಾಗಿ ತಯಾರಾದ ರಷ್ಯದ ಸೇನೆಯು ಸಂಖ್ಯೆಯು ಒಂದು ಮಿಲ್ಯನ್ನಿಂತ ಹೆಚ್ಚಿದೆ. ಇನ್ನೂ ಹೆಚ್ಚಾದ ಸಂಖ್ಯೆಯನ್ನು ಒಟ್ಟುಗೂಡಿಸಬಹುದು. ಪ್ರಪಂಚದ ಸೇನೆಗಳಲ್ಲೆಲ್ಲ ರಷ್ಯದ ಸೇನೆ ಬಲವಾದದ್ದೆಂದು ಯುದ್ಧ ಶಾಸ್ತ್ರ ಪಂಡಿತರು ಹೇಳುವರು. ರಷ್ಯದ ಪೂರ್ವ ಪಶ್ಚಿಮ ಭಾಗಗಳಲ್ಲಿ ಸೇನೆಯನ್ನಿಟ್ಟಿದೆ. 4000 ಮಿಲಿಟರಿ ವಿಮಾನಗಳು ಸಿದ್ಧವಾಗಿವೆ. ಗುಪ್ತವಾಗಿ ರಷ್ಯದ ಮೇಲೆ ಬೀಳಲು ಯಾರಿಂದಲೂ ಸಾಧ್ಯವಿಲ್ಲ.

—೦೦೦—

ಪ್ರೇಮ ಕಾಗದಗಳಿಗೆ ನಿರ್ಬಂಧ.

ರಷ್ಯದಲ್ಲಿ ಪುನಃ ಒಂದು ವರ್ಷದ ವರೆಗೆ ಕರ್ಫ್ಯೂ ಆಜ್ಞೆ ಜಾರಿ ಮಾಡಲ್ಪಟ್ಟಿದೆ. 12 ಮತ್ತು 30 ವರ್ಷ ಪ್ರಾಯದೊಳಗಿನವರು 19 ಘಂಟೆಗಳಲ್ಲಿ ಕತ್ತಲಾದ ಮೇಲೆ ನಿಲ್ಲಬಾರದೆಂದು ಆಜ್ಞಾಪಿಸಲಾಗಿದೆ. ಈ ಶಾಸನವನ್ನುಲ್ಲಂಘಿಸಿದವನಿಗೆ 1000 ರೂ. ಜುಲ್ಮಾನೆ ಮತ್ತು ಕಾರಾವಾಸ

—೦೦೦—

ಸ್ವರ ಶುದ್ಧಿಗಾಗಿ ಶಸ್ತ್ರಕ್ರಿಯೆ.

(ಹರ್ ಹಿಟ್ಲರ್)

ಜರ್ಮನಿಯ ಸರ್ವಾಧಿಕಾರಿಯಾದ ಹರ್ ಹಿಟ್ಲರರಿಗೆ ದೀರ್ಘ ಭಾಷಣಗಳನ್ನು ಮಾಡುತ್ತಿರುವವರಾದ ಸ್ವರದಲ್ಲಿ ಸ್ವಲ್ಪ ಭೇದವುಂಟಾಗಿ ಸ್ಪಷ್ಟವಾಗಿ ಭಾಷಣಮಾಡಲು ತೊಡಕಾಗಿತ್ತಂತೆ. ಅದಕ್ಕಾಗಿ ಕೆಲ ಸಮಯದ ಹಿಂದೆ ಅವರ ಗಂಟಲಲ್ಲಿ ಶಸ್ತ್ರಕ್ರಿಯೆ (ಅಪರೇಶನ್) ಮಾಡಿಸಿದರು. ಈಗ ಸ್ವರವು ಸುಧಾರಿಸಿದೆಯಂತೆ. ಇನು ನಮ್ಮ ವಾಕ್ಪಟುಗಳಿಗೂ, ಗಾಯಕರಿಗೂ ಸ್ವರ ವ್ಯತ್ಯಾಸ ಬಂದಲ್ಲಿ ಶಸ್ತ್ರಕ್ರಿಯೆ ಮಾಡಿಕೊಳ್ಳಬಹುದಷ್ಟೆ.

—೦೦೦—

ಪ್ರಭಾತಕ್ಕೆ ಅಪಖ್ಯಾತಿ.

4000 ರೂಪಾಯಿಯ ಭದ್ರತೆ.

ಒಸ್ಮಪೆತ್ತು ಇನ್ನೂ ಒಂದು ವರ್ಷವಾಗುವದರೊಳಗಾಗಿ ಮಂಗಳೂರಿನ 'ಪ್ರಭಾತ'ವೆಂಬ ನೂತನ ಕನ್ನಡ ವಾರಪತ್ರಿಕೆಯ ಸಂಪಾದಕರೂ ಮತ್ತು ಪ್ರಕಾಶಕರೂ ಎರಡೆರಡು ಸಾವಿರ ರೂಪಾಯಿಗಳ ಭದ್ರತೆಯನ್ನು ಕೊಡಬೇಕೆಂದು 1931ನೇ ಎಮರ್ಜೆನ್ಸಿ ಪವರ್ಸ್ ಆಕ್ಟು' ಮೇರೆ ಸರಕಾರದವರು ನೋಟೀಸು ಕೊಟ್ಟಿರುವರು.

'ಪ್ರಭಾತದ ಕಳೆದ ಜೂನ್ ತಾ 23 ರ ಸಂಚಿಕೆಯಲ್ಲಿ ಕೈಬಾಬು ಮಿಲಿಟರಿ ಮೇಲೆ ದೇಶದ್ರೋಹದ ಆರೋಪ ಎಂಬ ತಲೆಬರಹದ ಲೇಖನವನ್ನು ಪ್ರಕಟಿಸಿದಕ್ಕಾಗಿ ಆ ನೋಟಿಸು.

—೦೦೦—

ಗುಪ್ತ ಪಂಚಾಯಿತಿ.

(ಶ್ರೀ ಭುಲಭಾಯಿ ದೇಸಾಯಿಯವರು)

ಶ್ರೀ. ಭುಲಭಾಯಿ ದೇಸಾಯಿಯವರೂ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರೂ, ಒಂದು ಗುಪ್ತಪಂಚಾಯಿತಿ ನಡೆಸಿರುವರೆಂದೂ, ಅದರಲ್ಲಿ ಕಾಂಗ್ರೆಸ್ ಮತ್ತು ಉದಾರಪಕ್ಷಗಳು ಸರಕಾರದ ಮುಂದಿನ ನ್ಯಾಯವಿಧಾಯಕ ಸಭೆಗಳಲ್ಲಿ ಕೆಲಸ ಮಾಡಬೇಕೆಂದೂ ನಿರ್ಧಾರ ಮಾಡಿರುವುದಾಗಿ ತಿಳಿಯಬರುತ್ತದೆ.

—೦೦೦—

ಕೋಳಿ ಹೊಟ್ಟೆಯಲ್ಲಿ ಮುತ್ತು!

ಇಂಗ್ಲೆಂಡ್ ಎಂಬಲ್ಲಿಯ ಮಿಸ್ ರುತ್ ಕ್ಲಿಪ್ ಎಂಬವಳು ಒಂದು ಕೋಳಿ ಹೊಟ್ಟೆಯನ್ನು ತಿನ್ನುವಾಗ ಅದರ ಒಳಗೆ ಮುತ್ತೊಂದು ಸಿಕ್ಕಿಕೊಂಡು ಗಂಟಲಲ್ಲಿ ಹೋಗುವುದರಲ್ಲಿತ್ತು. ಆಗ ಅವಳ ಸ್ನೇಹಿತರ ಸಹಾಯದಿಂದ ಅವಳು ಕೆಮ್ಮಿ ಗಂಟಲಲ್ಲಿ ಸಿಕ್ಕಿಕೊಂಡಿದ್ದ ವಸ್ತುವನ್ನು ಹೊರ ಹಾಕಿದಳು. ಅದೊಂದು ಬೆಲೆಬಾಳುವ ಮುತ್ತಾಗಿದ್ದಿತು.

—೦೦೦—

'ದುರದೃಷ್ಟ' ವೆಂದರೆ ಇದು!

ಕಷ್ಟಗಳು ಒಂದೇ ಸಮನೆ ಬಂದು ಮುತ್ತುವುವು. ಹಾಗೆಯೇ ಅಪಘಾತಗಳೂ, ಗಂಡಾಂತರಗಳೂ ಬರುವುದುಂಟು. ಕೆನ್ನಿಲ್ಲನ್ ಎಂಬಲ್ಲಿಯ ನಾಥನ್ ಬ್ರೌನ್ ಎಂಬ ಬೇಸಾಯಗಾರನು ಪೇಟೆಯಿಂದ ಮನೆಗೆ ಹಿಂತಿರುಗುವಾಗ ಅವನಿಗೆ ಒಂದು ದೊಡ್ಡ ಜೇನು ನೊಣ ಕಚ್ಚಿತು. ನೋವು ತಾಳಲಾರದೆ ಅವನ ಮನೆಗೆ ಓಡುತ್ತಿರಲು, ಬಾಗಿಲು ಬಳಿಯಲ್ಲಿ ಒಂದು ಹಾವು ಕಚ್ಚಿತು. ಅಲ್ಲಿಂದಾತನು ಆಸ್ಪತ್ರೆಗೆ ಒಯ್ಯುವಾಗ ಒಂದು ಬಸ್ ನಾಯಿಯೂ ಕಚ್ಚಿತು. ಇಷ್ಟರಲ್ಲಿ ಮೂರ್ಛೆ ಹೊಂದಿ ಕಣ್ಮುಚ್ಚಿಯೇ ಬಿಟ್ಟನು.

—೦೦೦—

ನೌಕಾ ಪರಿಷತ್ತಿಗೆ ಜಪಾನಿನ ತಿರಸ್ಕರಣೆ.

ನೌಕಾ ಒಪ್ಪಂದದ ಕುರಿತಾದ ಮಾತುಕತೆಗಳನ್ನು ಮುಂದರಿಸುವ ವಿಷಯವಾಗಿ ಬ್ರಿಟನ್ನಿನವರು ಜಪಾನನ್ನು ಆಹ್ವಾನಿಸಿರಲು —ತನಗೆ ಸಮಾನತೆ ಕೊಡುವವರಿಲ್ಲದಿದ್ದರೆ ತಾನು ಬಾರೆನು ಎಂದು ಜಪಾನು ತಿರಸ್ಕರಿಸಿದೆ.

—೦೦೦—

ಭಾರತದಿಂದ ಅಬಿಸೀನಿಯೊಕ್ಕೆ ಸೈನಿಕರು.

ಯಾತಕ್ಕಾಗಿ?

ಅಬಿಸೀನಿಯಾದ ಮುಖ್ಯ ಪಟ್ಟಣವಾದ ಅಡಿಸ್ ಅಬಾಬದಲ್ಲಿನ ಬ್ರಿಟಿಷ್ ಲಿಗೇಷನಿನ ಮತ್ತು ಭಾರತದ ಕೆಲವು ಹಿತಗಳ ರಕ್ಷಣಾರ್ಥವಾಗಿ 5/4 ಪಂಜಾಬು ರೆಜಿಮೆಂಟಿನ ಒಂದು ಚಿಕ್ಕ ದಳವನ್ನು (150 ಸೈನಿಕರು) ಮೇಜರ್ ಡಬ್ಲ್ಯು ಯಫ್ ಚಾರ್ಟರರವರ ನಾಯಕತ್ವದಲ್ಲಿ ತಾ. 23ರಲ್ಲಿ ಅಬಿಸೀನಿಯಕ್ಕೆ ಕಳುಹಿಸಲಾಯಿತು. ಅದೇ ಹಡಗಿನಲ್ಲಿ 2000 ಗೋಣಿ ಧಾನ್ಯಗಳನ್ನೂ ಸಹ ಕಳುಹಿಸಲಾಗಿದೆಯಂತೆ.

ಅಬಿಸೀನಿಯಾವನ್ನು ಧ್ವಂಸ ಮಾಡಲು

ಇಬ್ಬರು ವೀರಪುತ್ರರು!

ಇಟಲಿಯ ಸರ್ವಾಧಿಕಾರಿ ಮುಸೋಲಿನಿಯವರ ಇಬ್ಬರು ಪುತ್ರರು ಸಿನಿಯರ್ ವಿಟೋರಿಯೋ ಮತ್ತು ಬ್ರೂನೋ ಎಂಬವರು ಈ ತಾ 24ರಲ್ಲಿ ಇಟಲಿಯಿಂದ 5000 'ಕಪ್ಪಂಗಿ' ಗಳೊಡನೆ ಅಬಿಸೀನಿಯದ ಕಡೆ ತೆರಳಿದರಂತೆ. ರಾಮಾಯಣದ ಇಂದ್ರಜಿತ್ ಮತ್ತು ಅಕ್ಷಯ ಕುಮಾರರಲ್ಲವಷ್ಟೆ ಇವರು!

ಯುದ್ಧಕ್ಕೆ ಧರ್ಮವೆಂತು! ಪಾದಗಳನ್ನು ಸುಟ್ಟು ಧ್ವಂಸ ಮಾಡುವ ವಿಧಾನ.

ಅಬಿಸೀನಿಯದವರ ಬಗ್ಗೆ ಇಟಲಿಯ ಮುಸ್ಸೋಲಿನಿಯು ಹೊಸದೊಂದು ಭಯಾನಕ ಸಿದ್ಧತೆ ನಡೆಸಿದ್ದಾನೆ. ಅವರ ಪಾದತಲಗಳನ್ನೆ ಸುಟ್ಟುಬಿಡುವನಂತೆ!

ಅಬಿಸೀನಿಯದವರು ಪಾದ ರಕ್ಷೆಗಳನ್ನು ಹಾಕಿಕೊಳ್ಳುವುದಿಲ್ಲ. ಅವರ ಸೈನಿಕರೂ ಹಾಗೆಯೇ! ಅದೊಂದು ಬಗೆಯ ದ್ರಾವಕವನ್ನು, ಇಟಲಿಯ ವಿಮಾನಗಳು ಅಬಿಸೀನಿಯಾ ಭೂಮಿಯ ಮೇಲೆ ಚೆಲ್ಲುವರು. ಅದು ಬಿದ್ದಲ್ಲಿ ನಡೆದವರ ಕಾಲುಗಳು ತಕ್ಷಣವೇ ಸುಟ್ಟು, ಕರಗುವುವು!

ಸುಯೇಜ್ ಕಾಲುವೆ ಮುಚ್ಚಲ್ಪಡುವದೇ?

ಇಟಲಿಯು ಅಬಿಸೀನಿಯದ ಮೇಲೆ ಧಾಳಿ ಮಾಡದಂತೆಯೂ ಇನ್ನೂ ಇನ್ನೂ ಹೆಚ್ಚು ಸೈನ್ಯವನ್ನು ಅಬಿಸೀನಿಯದ ಕಡೆಗೆ ಸಾಗಿಸದಂತೆಯೂ ಸುಯೇಜ್ ಕಾಲುವೆಯನ್ನು ಇಟಲಿಗೆ ಮುಚ್ಚಿಬಿಡುವ ಸೂಚನೆಯೊಂದಿದೆಯಂತೆ. ಅದನ್ನರಿತೋ ಏನೋ ಸಾವಿರಗಟ್ಟಲೆ ಸೈನಿಕರನ್ನು ಶೀಘ್ರದಲ್ಲಿಯೇ ಅಬಿಸೀನಿಯಾದ ಕಡೆ ಇಟಲಿಯವರು ಕೊಂಡೊಯ್ಯುವ ಹವಣಿಕೆಯಲ್ಲಿರುವರು.

ಗಾಂಧಿಯವರ ಸಹಾಯವೆಂಬ ಸುದ್ದಿಯು ಸತ್ಯವಲ್ಲ.

ಅಬಿಸೀನಿಯಾ—ಇಟಲಿಗಳೊಳಗೆ ಸಮರವು ನಿಶ್ಚಯವೆಂದ ಸಂಭವದಲ್ಲಿ, ಯುದ್ಧದಲ್ಲಿ ಗಾಯ ಹೊಂದಿದವರ ಸಹಾಯದ ಬಗ್ಗೆ ಮಹಾತ್ಮ ಗಾಂಧಿಯವರು ಸ್ವಯಂ ಸೇವಕ ದಳವೊಂದನ್ನು ತಯಾರಿಸುತ್ತಿರುವರೆಂಬ ಸುದ್ದಿಯು ನಿರಾಧಾರವಾದುದೆಂದು ಪ್ರಕಟವಾಗಿದೆ.

ಇಂಗ್ಲೆಂಡಿನಿಂದ ಸೈನಿಕರನ್ನು ಕಳುಹಿಸುವರು.

ಇಂಗ್ಲೆಂಡಿನ ಸೌತ್ ಹಾಂಪ್ಟನ್ ಬಂದರಿನಿಂದ 1200 ಸೈನಿಕರನ್ನು ಮಾಲ್ಟಾ ಮತ್ತು ಏಡನಿನ ರಕ್ಷಣಾರ್ಥವಾಗಿ ಕಳುಹಿಸುವರಾಗಿ ತಿಳಿಯಬರುತ್ತದೆ. ಅಲ್ಲದೆ ಮೆಡಿಟರೇನಿಯನ್ ಸಮುದ್ರದ ಹಡಗು ಪಡೆಯನ್ನು ವರ್ಧಿಸಿ ಬಲಪಡಿಸುವ ಯೋಜನೆಯು ತ್ವರೆಯಿಂದ ಸಾಗುತ್ತಿರುವುದಾಗಿ ತೋರುತ್ತದೆ.

—೦೦೦—

Reg. No. M. 1550 | KODAGU | 30—8—1935

IF NOT delivered please return to "KODAGU" OFFICE, MERCARA.

ಕೊಡಗು

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಯಾ॥ ಅಭ್ಯುದಯೋ ಜನಾನಾಂ ಸುಸ್ಥಿರಾ ರಾಜ್ಯ ಸಂಪದಾ

ಅಚ್ಚುಮೊಳೆಯ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.
ಚಾರ್ಜಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦. | ಸಂಪಾದಕ—ಸಂಪ್ರೋಪ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಆಗೊಸ್ಟು ತಾರೀಕು ೩೦ನೇ ಶುಕ್ರವಾರ. [ಸಂಚಿಕೆ ೧೩

By Appointment
To H. E. The Governor of Madras.

CUPS AND MEDALS.





Telephone; 3145 | Telegrams: 'PRECIOUS.'

V. SUBRAMANIA IYER.

Jeweller, & Diamond Merchant,

52—41 2 & 3 Kuppumuthu Street Tiruvateswaranpet. MADRAS. POST BOX 4/3 TRIPLICANE.

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office;—UDIPI (S. Kanara)

Branches:—(1) Udipi, (2) Coondapur, (3) Car-Street (Mangalore), (4) Shimoga (Mysore State), (5) Madras (George Town) (6) Bunder (Mangalore), (7) Mercara (North Coorg), (8) Virarajendrapet (South Coorg).

Bankers at:—(1) Bombay, (2) Karachi (3) Calcutta, (4) Mysore, (5) Bangalore, (6) Cochin and other important centres in India and elsewhere.

(1) Authorised issued and Subscribed Capital	Rs	[illegible]
(2) Paid up Capital	,,	2 3[illegible] 795
(3) Reserve and other funds	,,	3 21 326
(4) Investment on Government securities	,,	6 77, 6[illegible]
(5) Deposits	,,	25,47,464
(6) Total working capital exceeds	,,	36,00,000

Rates on deposits:—(1) Fixed—for 1 and 2 years 4½% and 3 and 4 years 5%
(2) Savings Bank—3½%. (3) Current—1 and 2%

All kinds of banking business transacted. For further particulars please apply to any of our offices.

Udipi. 29—7—1935. 52—42 M. Srinivasa Prabhu, Manager.

ಅಂಕಗಳಲ್ಲಿ ಸ್ಪಷ್ಟವಾಗುವವು. ಅಲ್ಲಿ ಕಾಯರ್ ಸ್ಥಿತಿ ಮತ್ತು ಸಂಖ್ಯೆಗಳು ನಿಜಾಂಶವನ್ನು ವ್ಯಕ್ತಗೊಳಿಸುವವು.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಈ ವಿಮಾ ಸಂಸ್ಥೆಯು ಕಠಿಣ ಶೋಧನೆಗಳನ್ನು ಈ ಫಲಿತಾಂಶಗಳಿಂದ ಧಿಕ್ಕರಿಸಿರುವದು.

ಚಾಲನೆಯಲ್ಲಿರುವ ವಿಮೆ ಪಾಲಿಸಿಗಳು (ಹೆಚ್ಚು) 265 ಲಕ್ಷ
ಕ್ಲೇಮುಗಳಲ್ಲಿ ಕೊಡಲ್ಪಟ್ಟವುಗಳು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿಮಾ ಹಣ್ಣುಗಳ ಮೊತ್ತ ರೂ. 33 ಲಕ್ಷ
ಬೋನಸನ್ನು ಬೇರೆ ಕಂಪೆನಿಗಳಿಗಿಂತ ಅಧಿಕ
[illegible] } { ಏಜಂಟರುಗಳಿಗೆ ಕಮಿಷನ್ ರೂ. 20%

[illegible] ವಿಶೇಷ ಲಾಭವಾಯಿತು. ಹೆಚ್ಚಿನ ವಿವರಗಳಿಗೆ ಕೆಳಗಿನವರಿಗೆ ಬರೆಯಿರಿ:—

ಟಿ. ಡಿ. ಭಾಗವತ, ಎಮ್. ಎಸ್. ಎಸ್. (ಲಂಡನ್), ಜನರಲ್ ಮ್ಯಾನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್, ಅಥವಾ—

ಎ. ಎಸ್. ಎನ್. ಅಯ್ಯಂಗಾರ್, ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಅಮೃತರಾಜಪೇಟೆ, 3ನೇ ರೋಡ್, ಬೆಂಗಳೂರು ಸಿ.

52—13

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದುದ್ದು 1922ರಲ್ಲಿ)

		ರೂ.
ಷೇರ್ ಬಂಡವಾಳ	—	50,000—0—0
ವಸೂಲಾದ ಷೇರ್ ಮೊಬಲಗು	—	36,030—0—0
ಜನರಿಂದ ಠೇವಣಾತಿ	—	2,48 3?5—14—8
ವಸೂಲಾದ ರಿಸರ್ವ್ ನಿಧಿ	—	94,623—6—0

ಈ ಬ್ಯಾಂಕಿನಿಂದ ಕೊಡಗು [illegible] ಸಹಕಾರಿ ಸಂಘಗಳಿಗೆ [illegible].

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ [illegible] 4-8-0 [illegible] ಬಡ್ಡಿ ಕೊಡೆಯುತ್ತೆ. [illegible] ವಾಯಿದೆಯ ಠೇವ [illegible] 4 [illegible] ಬಡ್ಡಿ ಕೊಡೆಯುತ್ತೆ.

ವರ್ತಕರುಗಳ [illegible] ಕೋ ಆಪರೇಟಿವ್ [illegible] ಮಾಡುತ್ತಾರೆ

ಪ್ರಸಿಡೆಂಟು,	ಸೆಕ್ರೆಟರಿ
ಕೆ ಎಸ್. ಸುಬ್ಬಯ್ಯ.	[illegible]
([illegible])	[illegible]

[illegible]

[illegible]

ತಾರೀಖು 1—7—1935.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ [illegible] ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. [illegible] ಚಂದಾದಾರರು ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು [illegible] ರಶೀತಿ ಪಡೆಯಬೇಕಾಗಿ ಕೋರಿದೆ

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. [illegible] ಸೋಮಯ್ಯನವರು. ([illegible])

[illegible]—ಮೆ [illegible] ನವರು,

[illegible]—ಮೆ. ಪಿ. ಜಿ. [illegible] ನವರು

[illegible]—ಮೆ. [illegible] ನವರು

[illegible]—ಮೆ [illegible] ನವರು

ಸೋಮವಾರಪೇಟೆ—ಮೆ. ಕೆ. [illegible] ನವರು

ಸೂಚನೆ.—[illegible] ರಶೀತಿ [illegible] ಚಂದಾ [illegible] ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಜವಸ ಭಂಡಾರಗಳ [illegible] [illegible] ಸಹಕಾರ ಸಂಘದ ಮತ್ತು ಜವಸ ಭಂಡಾರದ [illegible] ನಿಬಂಧನೆಗಳೂ, [illegible] ಪುಸ್ತಕಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ಜವಸ ಭಂಡಾರಗಳ ಕೆಲಸಗಳನ್ನು [illegible] ನಡಿಸಲು ಅವಶ್ಯವಾಗಿರುವ, [illegible] ದಾವಾ ಫಾರಮುಗಳೂ, [illegible] ಫಾರಮುಗಳೂ, [illegible] ಫಾರಮುಗಳೂ, [illegible] ಒಪ್ಪಿಗೆ ಫಾರಮುಗಳೂ, [illegible] ಫಾರಮುಗಳೂ, [illegible] ಫಾರಮುಗಳೂ [illegible] ಪುಸ್ತಕಗಳೂ, [illegible] ಪುಸ್ತಕಗಳೂ, [illegible] ಪುಸ್ತಕಗಳೂ, [illegible] ಪುಸ್ತಕಗಳೂ [illegible] ದೊರೆಯುತ್ತವೆ. [illegible] ವಿ. ಪಿ [illegible] ಕಳುಹಿಸಲಾಗುವುದು

ಮೇನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ

EMPIRE OF INDIA LIFE ASSURANCE CO., LTD.

ANNOUNCEMENT.

All our policyholders in Coorg are hereby informed that to give facilities to them to pay their premiums etc., we have made arrangements with the Canara Banking Corporation, Udipi, Ltd., Mercara and Virarajendrapet to receive premiums etc. on our behalf at par and our policyholders may therefore pay their premiums etc., to them to save remittance charges.

Branch Secretary,
EMPIRE OF INDIA LIFE ASSURANCE CO., LTD.,
152/3, Commercial Street Bangalore.

52—42

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

([illegible]) (ಹೆಡ್ ಆಫೀಸು—ಬೊಂಬಾಯಿ)

ಇಂಡಿಯಾದ ಹೊಸ ಸುಧಾರಣೆಗಳನ್ನೊಳಗೊಂಡ ಶ್ವೇತಪತ್ರವನ್ನು ಕುರಿತು ಕಳೆದ ವಾರ ಬರೆದಿದ್ದೆವು. ಇಂದೂ ದೇಶದ ದೊಡ್ಡ ಪಕ್ಷವಾದ ಕಾಂಗ್ರೆಸ್ಸು ಪಾರ್ಟಿಯವರು ಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವುದರಿಂದ, ಅದರ ತಿರುಳನ್ನೊಳಗೊಂಡ ಪೂರ್ಣ ಜವಾಬ್ದಾರಿ ಸರ್ಕಾರ ಯಾ ಸಾಮಂತ ಸ್ವರಾಜ್ಯವಾದರೂ ದೊರೆಯುವುದೆಂದು ನಿರೀಕ್ಷಿಸುತ್ತಿದ್ದ ಹಿಂದೀಯರಿಗೆಲ್ಲಾ ಇಂಡಿಯಾ ಆಕ್ಟಿನಿಂದ ಹೇಗೆ ನಿರಾಶೆಯುಂಟಾಗಿದೆಯೆಂಬುದನ್ನೂ, ಪ್ರಾಂತೀಕ ಸ್ವಾತಂತ್ರ್ಯ ಸರಕಾರ, ಕೇಂದ್ರದಲ್ಲಿ ಫೆಡರೇಶನ್ ಸರ್ಕಾರವೇ ಮುಂತಾದ ಅಲ್ಪಸ್ವಲ್ಪ ಸುಧಾರಣೆಗಳು ಕೊಡಲ್ಪಟ್ಟರೂ ಅವುಗಳ ಪ್ರಯೋಜನವು ಸಂಪೂರ್ಣವಾಗಿ ದೊರೆಯದಂತೆ ಧನ್ಯತೆಯು ದರ್ಜೆಯಲ್ಲಿ ವೈಸರಾಯರಿಗೂ, ಗವರ್ನರುಗಳಿಗೂ ಈಗಿರುವುದಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿರುವುದನ್ನೂ ಕಳೆದ ಸಾರಿಯ ಲೇಖನದಲ್ಲಿ ವಿವರಿಸಿದ್ದೆವು. ಈ ಸಲ ಕೊಡಗಿನ ಮುಂದಿನ ಸ್ಥಿತಿ ಏನೆಂಬುದನ್ನು ಕುರಿತು ಬರೆಯಬಿಚ್ಛಿಸುತ್ತೇವೆ.

ಕೆಲವು ವರ್ಷಗಳ ಹಿಂದೆ ಈ ಪ್ರಾಂತ್ಯದಲ್ಲಿ ಅಷ್ಟೇನೂ ವಿಷಯದಲ್ಲಿ ಜನ ಜಾಗ್ರತಿಯು ಕಡಿಮೆಯಾಗಿದ್ದ ಕಾರಣ ರಾಜಕೀಯ ಆಂದೋಲನವೇ ನಡೆದಿಲ್ಲ. ಆದುದರಿಂದ ಹಿಂದೆ ದೇಶದ ದೊಡ್ಡ ಪ್ರಾಂತ್ಯಗಳಿಗೆ ಪ್ರಥಮವಾಗಿ ಕೊಟ್ಟಂಥ ಮಾರ್ಲೆ-ಮಿಂಟೋ ಸುಧಾರಣೆಗಳು ಕೊಡಗಿಗೆ ಬಂದುದಲ್ಲ. ಕಳೆದ ಘೋರ ಯುದ್ಧದ ನಂತರ ಇಂಡಿಯಾಕ್ಕೆ ಎರಡನೇ ಮೆಟ್ಟಿಲಾಗಿ ಮಾಂಟ್-ಫರ್ಡ್ ಸುಧಾರಣೆಗಳು ಕೊಡಲ್ಪಟ್ಟವು. ಆದರೂ, ಕೊಡಗು ಬರಿದು ಮಾಡಲ್ಪಟ್ಟಿತು. ಇದನ್ನು ನೋಡಿದ ಕೊಡಗಿನವರು ಜವಾಬ್ದಾರರ ಸಂಘದ ಮೂಲಕ ಕೊಡಗನ್ನು ಮದ್ರಾಸಿಗೆ ಸೇರಿಸುವ ಚಳವಳವನ್ನು ದೇಶದ ಉದ್ದಗಲಕ್ಕೂ ನಡೆಸಿದರು; ಜನರು ಎಚ್ಚತ್ತು, ಇಲ್ಲಿಯ ಸರ್ಕಾರ ಪದ್ಧತಿಯ ಮೇಲೆ ತಮ್ಮ ಅತೃಪ್ತಿಯನ್ನು ಬಲವಾಗಿ ತೋರಿಸಿದರು. ಇದರ ಪರಿಣಾಮವಾಗಿ ಈಗಿನ ನ್ಯಾಯ ವಿಧಾಯಕ ಸಭೆಯು 1923ರಲ್ಲಿ ಮಂಜೂರು ಮಾಡಲ್ಪಟ್ಟಿತು.

ಕೌನ್ಸಿಲು ಸಭೆಯು ದೊರೆತಂದಿನಿಂದ, ತಾವು ರಾಜಕೀಯ ಸುಧಾರಣೆಯಲ್ಲಿ ಹಿಂದೂ ದೇಶದ ಬೇರೆ ಭಾಗಗಳಿಗಿಂತ ಹಿಂದು ಬಿದ್ದಿರುವುದನ್ನು ಇಲ್ಲಿಯವರು ಚೆನ್ನಾಗಿ ಮನವರಿಕೆ ಮಾಡಿಕೊಂಡು ಕೌನ್ಸಿಲಿನ ಒಳಗೂ, ಹೊರಗೂ, ರಾಜಕೀಯ ಸಂಸ್ಥೆಗಳ ಮೂಲಕವೂ, ಸಾರ್ವಜನಿಕ ಸಭೆಗಳಲ್ಲಿಯೂ ಜನ ಜಾಗ್ರತಿಯನ್ನು ಹಬ್ಬಿಸಿ, ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟಿರುವ ಸುಧಾರಣೆಗಳನ್ನೇ ಇಲ್ಲಿಗೂ ಕೊಡಬೇಕೆಂಬ ಚಳವಳವನ್ನು ಪ್ರಬಲವಾಗಿ ನಡೆಸಿದರು. ಈ ಮಧ್ಯೆ ಜನರ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ನಡೆಸಿದ ಕಾರ್ಯಕಲಾಪಗಳು ಚೀಫ್ ಕಮಿಷನರುಗಳ ಮೆಚ್ಚಿಕೆಯನ್ನು ಪಡೆಯುತ್ತಾ ಬಂದವು. ದೇಶೀಯ ಉದ್ಯೋಗಸ್ಥರು ದೊಡ್ಡ ದೊಡ್ಡ ಜವಾಬ್ದಾರಿಯ ಪದವಿಯನ್ನೇರಿ ಮೇಲಧಿಕಾರಿಗಳಿಗೆ ತೃಪ್ತಿಕರವಾಗಿ ಉದ್ಯೋಗವನ್ನು ಮಾಡುತ್ತಾ ಬಂದಿರುವರು. ಕೊಡಗಿಗೆ ಸುಧಾರಣೆಗಳು ಕಡಿಮೆಯಾಗಿ ಕೊಡಲ್ಪಟ್ಟರೂ, ಅದಕ್ಕೆ ಕ್ರಮವನ್ನು ನಡೆಸುವುದರಲ್ಲಿ ಇಲ್ಲಿಯವರು ತಮ್ಮ ಯೋಗ್ಯತೆಯನ್ನು ಚೆನ್ನಾಗಿ ತೋರಿಸಿರುವರು.

ಹೆಚ್ಚಿನ ಸುಧಾರಣೆಗಳ ವಿಷಯದಲ್ಲಾಗಲೀ, ಇಡೀ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಪಡೆಯುವ ವಿಷಯದಲ್ಲಾಗಲೀ ಕೊಡಗಿನವರು ತಮ್ಮ ಕಾಂಕ್ಷೆ ಮತ್ತು ಕುತೂಹಲವನ್ನು ಇತ್ತೀಚೆಗೆ ಚೆನ್ನಾಗಿ ವ್ಯಕ್ತಪಡಿಸಿರುವರು. ಸುಮಾರು ಹದಿನೈದು ವರ್ಷಗಳ ಹಿಂದೆ ಗಾಢ ನಿದ್ರೆಯಲ್ಲಿದ್ದ ಕೊಡಗು ಪ್ರಾಂತ್ಯವು ಈಚೆಗೆ ಎಡೆಬಿಡದೆ ನಡೆದ ರಾಜಕೀಯ ಆಂದೋಲನದ ಜಿಪಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಇಂಡಿಯಾದ ಬೇರೆ ಭಾಗಗಳನ್ನು ಮೀರುವಷ್ಟು ಜಾಗ್ರತಿಗೊಂಡಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇದು ಕಳೆದ ಸತ್ಯಾಗ್ರಹ ಚಳವಳದಲ್ಲಿ ಪ್ರತ್ಯಕ್ಷವಾಗಿದೆ. ಈಚೆಗೆ ರಾಜಕೀಯ ವಿಚಾರದಲ್ಲಿ ಈ ಪ್ರಾಂತ್ಯದವರಿಗೆ ಅತಿ ವೇಗದಿಂದ ಉಂಟಾಗಿರುವ ವಿಶೇಷ ಕುರುಹು ಕೆಲವು ಕಾಲದ ಹಿಂದಿನ ಉದಾಸೀನತೆಗೆ ಪ್ರಾಯಶ್ಚಿತ್ತದಂತಿದೆಯೆಂದರೆ ತಪ್ಪಾಗಲಾರದು. ಇಂದು ಕೊಡಗು ರಾಜಕೀಯ ಹೋರಾಟದ ವಿಷಯದಲ್ಲಿ ಬೇರೆ ಪ್ರಾಂತ್ಯಗಳಿಗೆ ಹಿಂದು ಬಿದ್ದಿರುವುದಿಲ್ಲ. ಅವುಗಳ ಜೊತೆಯಲ್ಲಿ ಸಹಸವನಸ್ಪದದಿಂದ ಹೋರಾಡಲು ತಯಾರಾಗಿದೆ.

ಆದರೆ ರಾಜಕೀಯ ವಿಚಾರದಲ್ಲಿ ಇಷ್ಟು ವೇಗದಲ್ಲಿ ಜಾಗ್ರತಿಗೊಂಡಿರುವ ಕೊಡಗಿಗೆ ಇಂಡಿಯಾ ಆಕ್ಟಿನ ಮೇರೆ ಏನು ದೊರೆತಿದೆ? ಕೇಂದ್ರ ಸರ್ಕಾರದ ಎಸೆಂಬ್ಲಿಯಲ್ಲಿಯೂ, ಕೌನ್ಸಿಲ್ ಆಫ್ ಸ್ಟೇಟಿನಲ್ಲಿಯೂ ಒಂದೊಂದು ಮೆಂಬರುತನ ಮಾತ್ರ. ಇದು ಈ ಮೊದಲೇ ದೊರೆಯಬೇಕಿತ್ತು. ಅದನ್ನು ಈಗ ಬಹು ತಡವಾಗಿ ಕೊಟ್ಟು, ಅದರಿಂದಲೇ ಇಲ್ಲಿಯವರನ್ನು ಸಮಾಧಾನಪಡಿಸುವ ಯತ್ನವಾಗಿರಬಹುದೇ? ಇದು ನಿಜವಾದರೆ, ನ್ಯಾಯ ರೀತಿಯಿಂದ ಜನರನ್ನು ತೃಪ್ತಿಗೊಳಿಸುವ ಉತ್ತಮ ಮಾರ್ಗವಲ್ಲವಿದು; ಅಧಿಕಾರವಿದೆಯೆಂದು ಜನರ ಕೋರಿಕೆಗಳನ್ನು ತಿರಸ್ಕರಿಸುವ ವಿಧಾನವಿದು. ಸ್ವಾಭಿಮಾನವಿರುವ ದೇಶೀಯರು ಇದಕ್ಕೆ ತಲೆಬಾಗುವರೇ?

ಇಂಡಿಯಾದ ರಾಜ್ಯಾಂಗರಚನೆಯ ನಿಯಮಗಳನ್ನೊಳಗೊಂಡ ಶ್ವೇತಪತ್ರವು ಹೊರಬಿದ್ದಾಗ್ಯೂ ಕೊಡಗಿಗೆ ಏನೊಂದೂ ಸುಧಾರಣೆಯನ್ನು ಸೂಚಿಸದೆ ಇರುವುದು ಇಲ್ಲಿಯವರಿಗೆ ನಿರಾಶೆಯನ್ನುಂಟುಮಾಡಿತು. ದೇಶದವರು ತಮ್ಮ ಅಸಮಾಧಾನವನ್ನು ಸೂಚಿಸಿದಾಗ್ಯೂ ಈ ಮೊದಲಿನ ಚೀಫ್ ಕಮಿಷನರವರು ಕೊಡಗಿನ ಸುಧಾರಣೆಗಳನ್ನು ಆಲೋಚಿಸಲು ಒಂದು ಕಮಿಟಿಯು ನೇಮಿಸಲ್ಪಡುವದೆಂದು ಹೇಳಿದರು. ಆದರೆ ಆ ಮಾತನ್ನೇನೂ ಅವರು ನಡೆಸಿಕೊಡಲಿಲ್ಲ. ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯವರ ವರದಿಯು ಪ್ರಕಟವಾದಾಗ್ಯೂ, ಅದರ ಮೇರೆ ಕೊಡಗಿನ ಸ್ಥಿತಿಯು ಉತ್ತಮಗೊಳ್ಳದ್ದರಿಂದ ದೇಶದವರ ಅತೃಪ್ತಿಯು ಪ್ರದರ್ಶನವು ಬಲವಾಯಿತು. ಜವಾಬ್ದಾರರ ಸಂಘದ ವಸ್ತುಸ್ಥಿತಿ ಕಟೊಂದು ಈಗಿನ ಚೀಫ್ ಕಮಿಷನರವರನ್ನು ಭೇಟಿಮಾಡಿತು. 'ಕೊಡಗಿನವರು ನಿರಾಶೆಗೊಳ್ಳುವ ಕಾರಣವಿಲ್ಲ. ಇಂಡಿಯಾ ಬಿಲ್ಲು ಹೊರಬೀಳುವ ವರೆಗೆ ತಾಳಿ' ಎಂದವರು ಸಮಾಧಾನಗೊಳಿಸಿದರು. ಇಂಡಿಯಾ ಬಿಲ್ಲೂ ಪ್ರಕಟವಾಯಿತು. ಅದು ಜಾಯಿಂಟ ಪಾರ್ಲಿಮೆಂಟರಿ ಕಮಿಟಿಯವರ ನಿರ್ಧಾರಗಳನ್ನೇ ಒಳಗೊಂಡಿದ್ದಾಗಿದ್ದುದರಿಂದ ಕೊಡಗಿನವರ ನಿರಾಶೆಯು ಮತ್ತಷ್ಟು ಹೆಚ್ಚಿತು.

ಸ್ಥಳೀಯ ಸರ್ಕಾರದವರು ಇಲ್ಲಿಯ ಜನರ ನಿಜವಾದ ಕೋರಿಕೆಗಳನ್ನೂ, ಇಲ್ಲಿಯವರ ಅಸಮಾಧಾನವನ್ನೂ ಇಂಡಿಯಾ ಸರ್ಕಾರಕ್ಕೆ ಸರಿಯಾಗಿ ತಿಳಿಸದೆ ಇರುವುದರಿಂದಲೇ ಕೊಡಗಿಗೆ ಏನೊಂದೂ ದೊರೆಯದೆ ಇರಲು ಕಾರಣವೆಂತಲೂ, ವಿಚಾರವಂತ ತ್ರೀವೆ, ತಾಳಿ ಎಂದು ಹೇಳುವುದು ಕಾಲಹರಣದ ಉಪಾಯವೆಂತಲೂ ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಕೆಲವು ಮೆಂಬರುಗಳು ಸರ್ಕಾರದ ವರ್ತನೆ ಮನ್ನು ಖಂಡಿಸಿದರು. ಆಗ ಪ್ರಮುಖ ಅಧಿಕಾರಿಗಳು ತಮ್ಮ ಪಕ್ಷವನ್ನು ಸಮರ್ಥಿಸಲು ಹಾರಿದರು. 'ದೊಡ್ಡ ಪ್ರಾಂತ್ಯಗಳಿಗೆ ದೊರೆವ ಹೊಸ ಸುಧಾರಣೆಯು ದೊರೆಯುವದೆಂದು ಇನ್ನೂ ಸ್ಪಷ್ಟವಾಗಿಲ್ಲ. ಅದು ಗೊತ್ತಾದ ಮೇಲೆ ಇಲ್ಲಿಯ ರಾಜಕೀಯ ಬದಲಾವಣೆ ವಿಷಯ ಆಲೋಚಿಸಬಹುದು. ಇನ್ನೂ ಸ್ವಲ್ಪ ತಡೆಯಿರಿ' ಎಂದು ಉತ್ತರಿಸಿದರು. ಇಂಡಿಯಾ ಬಿಲ್ಲು ಪಾರ್ಲಿಮೆಂಟುಗಳಲ್ಲಿ ಪಾಸಾಗಿ ಸಾರ್ವಭೌಮರ ಒಪ್ಪಿಗೆ ಪಡೆದು ಶಾಸನವಾಯಿತು. ದೊಡ್ಡ ಪ್ರಾಂತ್ಯಗಳಿಗೆ ದೊರೆಯುವ 'ಪ್ರಾಂತೀಕ ಸ್ವರಾಜ್ಯ' ರಚನೆಯು ಎಂಥಾದೆಂದು ಬಹಿರಂಗವಾಗಿದೆ. ಕೊಡಗಿನ ಸರ್ಕಾರದ ಅಧಿಕಾರಿಗಳು ಇನ್ನೇನು ಅನ್ನುವರೋ ನೋಡಬೇಕು 'ದೊಡ್ಡ ಪ್ರಾಂತ್ಯಗಳು ಹೊಸ ಸುಧಾರಣೆಗಳನ್ನು ಜಾರಿಗೆ ತಂದು ಅವು ಜಯಪ್ರದವಾಗುವವೋ ಎಂಬುದನ್ನು ನೋಡುವ ವರೆಗೆ ತಾಳಿ; ಅವರ ಅನುಭವದ ಮೇಲೆ ನಮ್ಮ ಪ್ರಾಂತ್ಯದ ಆಡಳಿತ ಕ್ರಮವನ್ನು ಸರಿಪಡಿಸುವ' ಎಂದು ಅಧಿಕಾರಿಗಳು ಹೇಳಿದರೆ, ಅದರಲ್ಲಿ ಆಶ್ಚರ್ಯವೇನೂ ಇರಲಾರದಲ್ಲವೇ!

ಇಂಡಿಯಾದ ಬೇರೆ ಕಡೆಗಳಲ್ಲಿ ಹೊಸ ಸುಧಾರಣೆಗಳನ್ನು ಜಾರಿಗೆ ತರಲು ಜುನಾವಣೆಯ ಏರ್ಪಾಡುಗಳು ಮಾಡಲ್ಪಡುತ್ತಿವೆ. ಆದರೆ ಕೊಡಗಿನಲ್ಲಿ ಸುಧಾರಣೆಯ ಮಾತೇ ಇಲ್ಲದಾಗಿದೆ. ಇದಕ್ಕೆ ಸ್ಥಳೀಯ ಸರ್ಕಾರದವರ ಉದಾಸೀನತೆಯೇ ಮುಖ್ಯ ಕಾರಣವೆಂಬುದರಲ್ಲಿ ಸಂಶಯವಿಲ್ಲ. ಸರ್ಕಾರದವರು ಕೊಡುತ್ತಾ ಬಂದ ಭಾಷೆಗಳನ್ನು ನಡಿಸಿಕೊಡದ ಕಾಲವನ್ನು ಕಳೆಯುತ್ತಾ ಬಂದರೆ ಕೊಡಗಿನವರು ತಣ್ಣಗಾಗುವರೆಂಬ ಭಾವನೆಯು ಸರ್ಕಾರಕ್ಕೆ ಇದ್ದರೆ, ಆ ತಪ್ಪು ಭಾವನೆಯು ಬೇಗನೆ ಹೋಗಲಾಡಿಸಲ್ಪಡುವುದು. ಕೊಡಗಿನ ಪ್ರತಿಯೊಬ್ಬ ವ್ಯಕ್ತಿಗೂ ಸ್ವಾಭಿಮಾನವಿದೆ; ಅದರಂತೆಯೇ ಇಲ್ಲಿಯ ಜನಾಂಗಕ್ಕೂ ಅಸ್ತಿತ್ವವಿದೆ ಎಂಬುದನ್ನು ಸರ್ಕಾರದವರು ಮರೆಯದಿರಲಿ. ಶೀಘ್ರದಲ್ಲೇ ಕೊಡಗಿಗೂ ಬೇರೆ ಪ್ರಾಂತ್ಯಗಳಿಗೆ ಕೊಟ್ಟಂಥ ಸುಧಾರಣೆಗಳನ್ನು ಕೊಡುವಂಥ ಏರ್ಪಾಡು ಮಾಡದೆ ಹೋದರೆ ದೇಶದವರು ಪಾರ್ಟಿ ಪಂಗಡ, ಜಾತಿ ಮತ ಭೇದವೆಣಿಸದೆ ಒಗ್ಗಟ್ಟಾಗಿ, ತೀವ್ರ ತರಹದ ಚಳವಳವನ್ನು ಹೂಡುವುದರಲ್ಲಿ ನ್ಯಾಯವಿರುವುದಲ್ಲದೆ, ಅದರ ಪರಿಣಾಮವೂ ಕಠಿಣ ತರದ್ದಾಗುವುದೆಂಬುದನ್ನು ಸರ್ಕಾರದವರು ಅರಿತಿರಲಿ.

ಸಹಕಾರಿ ಚಳವಳಕ್ಕೆ ನಿಯೋಜಿತಿ.

'ತಾನು ಪರರಿಗೆ, ಪರರು ತನಗೆ' ಎಂಬ ಪರಸ್ಪರ ಸಹಕಾರದ ಮಹತ್ವದ ತತ್ವವು ನಮ್ಮ ಪೂರ್ವೀಕರಲ್ಲಿ ತುಂಬಿ ತುಳುಕುತ್ತಿದ್ದಷ್ಟು, ಇತ್ತಂಡಿಗೆ ನವನಾಗರೀಕತೆಯ ಹಬ್ಬುವಿಕೆಯ ಪರಿಣಾಮವಾಗಿಯೋ ಏನೋ, ಮಾಯವಾಗುತ್ತಾ ಬಂದದ್ದರಿಂದ ದೇಶದ ಜನರ ಸ್ಥಿತಿಯು ಹೀನಾವಸ್ಥೆಗೆ ಇಳಿಯುತ್ತಾ ಬಂತು. ಇದನ್ನು ನೋಡಿದ ಸರ್ಕಾರದವರು 'ತಾನೆಲ್ಲರಿಗೆ, ಎಲ್ಲರು ತನಗೆ' ಎಂಬ ತತ್ವವನ್ನು ಪುನಃ ಜನರಲ್ಲಿ ಹರಿಸಿಕೊಳ್ಳುವಂತೆ ಮಾಡಲು ದೇಶದಲ್ಲಿ ಸಹಕಾರ ಚಳವಳವನ್ನು ಹೂಡಿ, ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಲಾರಂಭಿಸಿದರು. ಮುಖ್ಯವಾಗಿ ಬಡವರ ಆರ್ಥಿಕ ಮತ್ತು ನೈತಿಕ ಸ್ಥಿತಿಯನ್ನು ಉತ್ತಮಗೊಳಿಸಲು ಹೊರಡಿಸಿದ ಈ ಚಳವಳಕ್ಕೆ ಉತ್ತೇಜನ ಕೊಡುವ ಉದ್ದೇಶ್ಯ ಸರ್ಕಾರದವರು ಅದಕ್ಕೆ ಕೆಲವು ರಿಯಾಯಿತಿಗಳನ್ನು ತೋರಿಸಿದರು.

ಸಹಕಾರಿ ಸಂಘಗಳು ಬರೆಸಿಕೊಳ್ಳುವ ಮತ್ತು ಬರೆದು ಕೊಡುವ ಕರಾರು ಪತ್ರಗಳಿಗೆ ಸ್ಟಾಂಪು ತೆರಿಗೆ ಮಾಫಿಯೆಂದೂ, ಅವುಗಳನ್ನು ರಿಜಿಸ್ಟರು ಮಾಡಲು ಚಾರ್ಜಿಲ್ಲವೆಂದೂ, ರಿಜಿಸ್ಟ್ರೇಶನ್ ಆಕ್ಟಿನ ಮೇರೆ ಈ ಸಂಘಗಳು ಬೇರೆ ಯಾವತರಹದ ಫೀಸು ಕೊಡಬೇಕಾಗಿಲ್ಲವೆಂದೂ ಸರ್ಕಾರದವರು ಹುಕುಂ ಮಾಡಿದ್ದರು. ಆದರೆ ಕೆಲವು ವರ್ಷಗಳ ನಂತರ, ಸಹಕಾರ ಚಳವಳವು ದೇಶದಲ್ಲಿ ತಕ್ಕಷ್ಟು ಮಟ್ಟಿಗೆ ಬೇರೂರಿದೆಯೆಂದೋ, ಯಾ ಸರ್ಕಾರದ ಉತ್ಪತ್ತಿಯು ಕಡಿಮೆಯಾಗುತ್ತಿದೆಯೆಂದೋ ಸಹಕಾರಿ ಸಂಘಗಳು ಕರಾರುಗಳ ಸ್ಟಾಂಪು ತೆರಿಗೆಯ ಅರ್ಧವನ್ನೂ, ಅರ್ಧ ರಿಜಿಸ್ಟ್ರೇಶನ್ ಚಾರ್ಜನ್ನೂ ಕೊಡಬೇಕೆಂದು 1931 ನೇ ಸೆಪ್ಟೆಂಬರಿನಲ್ಲಿ ಪ್ರಕಟಿಸಿದರು. ಇದು ದೇಶದಲ್ಲಿ ತುಂಬಾ ಅತೃಪ್ತಿಯನ್ನುಂಟುಮಾಡಿತು. ಸಹಕಾರ ಚಳವಳವು ಇನ್ನೂ ಚೆನ್ನಾಗಿ ಅಭಿವೃದ್ಧಿಗೊಳ್ಳದೆ ಇರುವ ಮತ್ತು ಆರ್ಥಿಕ ಬಿಕ್ಕಟ್ಟಿನ ಈ ಸಮಯದಲ್ಲಿ, ಈ ಮೊದಲು ನೀಡಿದ್ದ ರಿಯಾಯಿತಿಯನ್ನು ಹಿಂತೆಗೆದದ್ದು ತುಂಬಾ ಅನ್ಯಾಯವೆಂದೂ, ಬಡತನವು ಹೆಚ್ಚುತ್ತಿರುವ ಈ ಕಾಲದಲ್ಲಿ ದೇಶದ ಏಳಿಗೆಗೆ ಅತ್ಯವಶ್ಯವಾಗಿರುವ ಸಹಕಾರ ಚಳವಳವು ಮುಂದೊತ್ತಬೇಕಾದರೆ ಈ ರಿಯಾಯಿತಿಯನ್ನು ಮೊದಲು ಇದ್ದಂತೆಯೇ ತೋರಿಸಬೇಕೆಂದೂ ದೇಶದ ಜನರು ಜವಾಬ್ದಾರರ ಸಂಘದ ಮೂಲಕವೂ, ಕೌನ್ಸಿಲು ಸಭೆಯಲ್ಲಿಯೂ, ಸಹಕಾರ ಪರಿಷತ್ತು ಮುಂತಾದ ಸಾರ್ವಜನಿಕ ಸಭೆಗಳಲ್ಲಿಯೂ ಗೊತ್ತುವಳಿಗಳನ್ನು ಮಂಜೂರುಮಾಡುತ್ತಾ ತಮ್ಮ ಅಸಮಾಧಾನವನ್ನು ಸೂಚಿಸಿದರು.

ರಿಯಾಯಿತಿಯನ್ನು ತೆಗೆದು ಹಾಕಿ ನಾಲ್ಕು ವರ್ಷಗಳು ದಾಟಿದವು. ಸಹಕಾರ ಚಳವಳಕ್ಕೆ ಇದರ ಪರಿಣಾಮವು ತಿಳಿದಾಗಿದೆಯೆಂದು ಅಧಿಕಾರಿಗಳಿಗೆ ಗೊತ್ತಾಗಿರಬಹುದು; ಮತ್ತು ಜನರಲ್ಲಿ ಉಂಟಾಗಿರುವ ಅತೃಪ್ತಿಯು ಅವರಿಗೆ ಮನವರಿಕೆಯಾಗಿರಬಹುದು. ಹೇಗೂ ಕಳೆದ ತಿಂಗಳ ಅಂತ್ಯದಿಂದ ಸ್ಟಾಂಪು ತೆರಿಗೆ ಮತ್ತು ರಿಜಿಸ್ಟ್ರೇಶನ್ ಚಾರ್ಜು ಪೂರ್ತಿ ಮಾಫಿ ಮಾಡಿ ಮೊದಲಿದ್ದಂತೆಯೇ ರಿಯಾಯಿತಿ ಕೊಡಲಾಗಿದೆಯೆಂದು ಚೀಫ್ ಕಮಿಷನರು ಗಜೆಟಿನಲ್ಲಿ ಪ್ರಕಟಿಸಿರುವರು. ಸರ್ಕಾರದವರ ಈ ತೀರ್ಮಾನವು ದೇಶದವರಲ್ಲಿ ಈ ವಿಷಯವಾಗಿ ಸಮಾಧಾನವನ್ನುಂಟುಮಾಡಿದೆ. ಜನಸಮುದಾಯದವರ ಕೋರಿಕೆಗೆ ಸರ್ಕಾರದವರು ಗಮನಕೊಟ್ಟದ್ದು ಅಭಿನಂದನೀಯ ಸಂಗತಿಯಾಗಿದೆ. ಇತರ ವಿಷಯಗಳಲ್ಲೂ ಸರ್ಕಾರದವರು ಹೀಗೆಯೇ ವರ್ತಿಸುವರೇ?

ಇಸ್ಲಾಂ ಮತದ ಧ್ಯೇಯ.

ಇಂಡಿಯಾ ಸರ್ಕಾರದ ವಾಣಿಜ್ಯ ಮೆಂಬರಾದ ಸರ್. ಮಹಮ್ಮದ್ ಜುಫರುಲ್ಲಾಖಾನರು ಮದ್ರಾಸಿನಲ್ಲಿ ಮುಸ್ಲಿಮರಿಗೆ ಭಾಷಣ ಮಾಡುತ್ತಾ, ಹೀಗೆಂದರು:—

'ದಿನ ಹೋಗುತ್ತಾ, ಸರ್ಕಾರದ ಧೋರಣೆಗಳೂ ಬದಲಾವಣೆಯಾಗುತ್ತಾ ಬರುತ್ತವೆ. ಅದೂ ಕಾಲನ ಲೀಲೆಯಿಂದಾಗಿಯೇ. ಹಾಗೆಯೇ ಧರ್ಮಗಳು ತಮ್ಮ ನಿಜ ಮಾರ್ಗವನ್ನು ಬಿಟ್ಟು ಹೊಸ ಕರ್ಮಗಳನ್ನು ಆಚರಿಸುತ್ತಾ ಬಂದಿವೆ. ಸರಿಯಾಗಿ ಪರ್ಯಾಲೋಚಿಸಿದಲ್ಲಿ ನಿಜವಾದದ್ದು, ಪೂರ್ವಿಕರಿಂದ ಆಚರಿಸಿ ಬಂದದ್ದು, ಆ ಧರ್ಮವು ಈಗ ಎಲ್ಲಿಯೂ ಇಲ್ಲವೆಂದು ನನ್ನ ಭಾವನೆ. ಕತ್ಯಸಾಮರ್ಥ್ಯದ ಪರೀಕ್ಷೆಯ ಸಮಯವಿದು; ನಿಜ ಧರ್ಮದ ಮಾರ್ಗವನ್ನು ಪಸರಿಸುವ ಅಪೂರ್ವ ಸಂದರ್ಭವಿದು. ದೇಶದಲ್ಲಿ ಇಸ್ಲಾಂ ಧರ್ಮದಷ್ಟು ಶ್ರೇಷ್ಠವಾದ ಧರ್ಮವು ಮತ್ತೊಂದಿಲ್ಲ. ಪರರನ್ನು ಬಾಧಿಸದೆ, ಕಲುಷಿತವಲ್ಲದ ಜೀವನವನ್ನು ನಡೆಸುವುದೂ, ಪರೋಪಕಾರಿಯಾಗಿ ಜೀವಿಸುವುದೂ, ಮುಂದುಗಾಣಿಕೆ ಮಾಡದೆ ನಿಶ್ಚಯವಾಗಿರುವುದೂ ಇಸ್ಲಾಂ ಧರ್ಮದ ಧ್ಯೇಯವಾಗಿರುತ್ತದೆ. ಪರರನ್ನು ಸಂಕಟಕ್ಕೀಡುಮಾಡಿ ಅವರಿಂದ ಧನವನ್ನು ಅಪಹರಿಸಿ ಮಿಲಿಯಾಧಿಪತಿಗಳಾಗುವವರನ್ನು ಇಸ್ಲಾಂ ಮತವು ಬಹಿಷ್ಕರಿಸುತ್ತದೆ. ತಮ್ಮ ಸ್ವಾರ್ಥಕ್ಕಾಗಿ ತಾವು ಲೆಜಿಸ್ಲೇಟಿವ್ ಎಸೆಂಬ್ಲಿಗೆ, ಅಥವಾ ಲೋಕಲ್ ಕೌನ್ಸಿಲುಗಳಿಗೆ ಪ್ರತಿನಿಧಿಗಳಾಗಿ ಹೋಗುವುದಾದರೆ, ನೀವು ನಿಮ್ಮ ಇಸ್ಲಾಮಿಯ ಧರ್ಮದ ಮರ್ಮವನ್ನರಿತಿಲವೆಂದೂ, ನೀವು ಏರ್ಪಡಿಸುವ ಸಂಘಗಳು ನಿಷ್ಪ್ರಯೋಜಕವಾದವುಗಳೆಂದೂ ಖಂಡಿತವಾಗಿಯೂ ಹೇಳಬಲ್ಲೆನು. ಅದಲ್ಲದೂ ನೀವು ಇಸ್ಲಾಂ ಧರ್ಮವನ್ನು ಅತ್ಯಂತವಾಗಿ ಓದಿದರೆ ನಿಮಗೆ ಮುಂದ ಟ್ಟಾಗಬಹುದು.'

ವಿವಿಧ ವಾರ್ತಾವಳಿ.

ಬಿಳೀ ಸ್ತ್ರೀಯರಿಗೆ ಸೀರೆ ಭೂಷಣವಲ್ಲವೇ?

ಲಂಡನ್ನಿನ ಅನೇಕ ಅಂಗಡಿಗಳಲ್ಲಿ ಹಿಂದೂ ದೇಶದ ಸೀರೆಗಳು ಮಾರಾಟಕ್ಕಾಗಿ ಇಡಲ್ಪಟ್ಟಿವೆ. ಅವನ್ನುಡುವ ಇಂಗ್ಲೀಷು ಹೆಂಗಸರೂ ದಿನಾಲೂ ಹೆಚ್ಚುತ್ತಿದ್ದಾರೆ.

ಸೀರೆಯು ಯೂರೋಪನ್ನು ಆಕ್ರಮಿಸುವುದರಲ್ಲಿದೆ ಎಂಬ ರವೀಂದ್ರನಾಥ ಟಾಗೂರರ ಸೊಸೆ ಶ್ರೀ ಪ್ರತಿಮಾ ದೇವಿಯವರು ಬರೆದದ್ದಕ್ಕೆ ಒಂದು ಇಂಗ್ಲೀಷು ಪತ್ರಿಕೆಯು ಹೀಗೆ ಹೇಳಿದೆ.—

'ಆಕೆಯ ಧೈರ್ಯದ ಸ್ವಾವಲಂಬನಗಳನ್ನು ಶ್ಲಾಘಿಸುತ್ತೇವೆ. ಆದರೆ ಪ್ಯಾರಿಸ್ ಮತ್ತು ಲಂಡನ್‌ಗಳಲ್ಲಿನ ಫ್ಯಾಷನ್ನಿನ ಡಿಕ್ಟೇಟರುಗಳನ್ನು ಆಕೆಯ ಮಾತುಗಳು ಸಾಕಷ್ಟು ಒಪ್ಪಿಸಿವೆಯೆಂದು ಹೇಳಲಾಗದು. ಏಕೆಂದರೆ, ಅವರೇ ಹೆಂಗಸರಿಗೆ ಫ್ಯಾಷನ್ನು ಹೀಗಿರಬೇಕೆಂದು ಹೇಳುವ ಡಿಕ್ಟೇಟರುಗಳು. ಅವರು ಈಗಿನ ಗೌನುಗಳು ಉಪಯೋಗವಲ್ಲವೆಂದು ಅಭಿಪ್ರಾಯ ಪಟ್ಟರೆ ಮಾತ್ರ ಗೌನುಗಳೆಲ್ಲ ಮೂಲೆ ಸೇರಬೇಕಾದದ್ದೆ. ಸೀರೆಯೇನಾದರೂ ಪಾಶ್ಚಿಮಾತ್ಯರಲ್ಲಿ ರೂಢಿಗೆ ಬಂದರೆ ಗೌನು, ಹ್ಯಾಟುಗಳನ್ನು ಮಾಡುವ ಎಷ್ಟೋ ಸಾವಿರಾರು ಜನರು ಉಪವಾಸವಿರಬೇಕಾದೀತು.'

—೦೦—

ಅತ್ಯಂತ ದೊಡ್ಡ ಕಟ್ಟಡ.

ನಗರದಲ್ಲಿ ಕಟ್ಟಡವೋ, ಕಟ್ಟಡದಲ್ಲಿ ನಗರವೋ?

ಸೆಂಟಲೂಯಿ ಎಂ. ಹೆನ್ರೀ ಎಂಬುವವರು ಅಮೇರಿಕೆಯಲ್ಲಿಯ ಒರ್ವ ಶಿಲ್ಪ ಶಾಸ್ತ್ರಜ್ಞರು. ಇವರು ಒಂದು ನಗರವನ್ನು ಒಂದೇ ಕಟ್ಟಡದಲ್ಲಿ ನಿರ್ಮಾಣ ಮಾಡಲು ಪ್ಲಾನ್ ಹಾಕಿರುವರು. ಇದಕ್ಕೆ 196 ಅಂತಸ್ತುಗಳಂತೆ, 2000 ಅಡಿ ಎತ್ತರವಿರಬೇಕಂತೆ. ಇದರಲ್ಲಿ 2 ಲಕ್ಷ ಜನರ ವಾಸವು. ರಸ್ತೆಗಳು ವ್ಯವಹಾರಕ್ಕಾಗಿ ಕಟ್ಟಡದಲ್ಲಿ ಸುತ್ತುವರಿಯಬೇಕಂತೆ. ಈ ಕಟ್ಟಡವು ಸಮುದ್ರದ ದಂಡೆಯ ಮೇಲೆ ಕಟ್ಟಲ್ಪಡುವ ದಿಕ್ಕು ಸಮುದ್ರಯಾನಕ್ಕಾಗಿ ಅನುಕೂಲಗಳನ್ನು ಕೊಡಲಾಗುವದು. ಈ ಕಟ್ಟಡದಲ್ಲಿ ಉದ್ಯಾನಗಳು, ಸಂಗೀತ ಸಭಾಗೃಹಗಳು, ಕಚೇರಿ ಆವಾಸಸ್ಥಾನಗಳು ಮುಂತಾದವು ಕಟ್ಟಲ್ಪಡುವವು. ಉಕ್ಕಿನ ಅಸ್ತಿಭಾರವುಳ್ಳ ಕಾಂಕ್ರೀಟ್ ಕೆಲಸವಂತೆ. ಕಟ್ಟುವಿಕೆ ಇದರಿಂದ 1 ಲಕ್ಷ ಜನರಿಗೆ ಕೆಲಸವಾಗುವದಂತೆ. ಪ್ಲಾನಿಗಿನ್ನೂ ಅರ್ಧದಷ್ಟು ಕೂಡ ಹಣದ ಸಹಾಯ ದೊರಕಿಲ್ಲ. ಅದಕ್ಕಾಗಿ ಅಮೇರಿಕೆಯ ಅಧ್ಯಕ್ಷರಾದ ರೂಜವೆಲ್ಟರನ್ನು ಕೇಳಲಿರುವರು.

—೦೦—

ಗೋಧಿಯ ಭವಿಷ್ಯದ್ವಾದಿ.

ಡಾಕ್ಟರ್ ಕೋಲಾಹಿಂದ್ ಎಂಬ ಅಮೇರಿಕದ ದೇಶೀಯರು ಗೋಧಿ ಬೆಳೆಯು ಎಷ್ಟು ಆಗುವದೆಂದು ಮೊದಲು ತಿಳಿಸುವದರಲ್ಲಿ ಪ್ರಸಿದ್ಧಿ ಪಡೆದಿರುವರು. ಆಕೆಯು ಗೋಧಿ ಬೆಳೆಯುವ ಜಮೀನಿನಲ್ಲಿ ಹೋಗುತ್ತಾ, ಆಗು ಮುಖ್ಯ ತೆನೆಗಳನ್ನು ತೆಗೆದು ನೋಡುತ್ತ ಒಂದು ಹಿಡಿ ತೆನೆಗಳನ್ನು ತಿಕ್ಕುತ್ತಿರುವರು. ಅವುಗಳ ಉದ್ದ, ಕಾಳಿನ ಗಾತ್ರ, ರೋಗಾದಿಗಳು, ಬೆಳೆದಿರುವ ಸರಿಯಾದ ಅವುಗಳನ್ನೆಲ್ಲಾ ಮನಸ್ಸಿನಲ್ಲಿಯೇ ಗುಣಿಸುವರು. ಆಮೇಲೆ ಆ ಜಮೀನಿನಲ್ಲಿ ಎಷ್ಟು ಫಸಲಾಗುವದೆಂದು ಹೇಳುವರು. ಇದು ವರೆಗೆ ಆಕೆ ಹೇಳಿರುವದರಲ್ಲಿ ಎಳ್ಳಷ್ಟು ವ್ಯತ್ಯಾಸವಾಗಿರುವುದಿಲ್ಲ. ಆಕೆಯು ಅಮೇರಿಕ, ಕೆನಡಾ ದೇಶಗಳಲ್ಲಿ 'ಗೋಧಿ ಭವಿಷ್ಯದ್ವಾದಿ' ಎಂದು ಪ್ರಸಿದ್ಧಳಾಗಿರುವಳು. ಆಕೆಯ ವಯಸ್ಸು 73 ವರ್ಷ. ಆಕೆಯ ಪ್ರವಾಸದಿಂದ ಆ ದೇಶಗಳಲ್ಲಿ ಗೋಧಿ ಧಾರಣೆಯು ವಿಶೇಷವಾಗಿ ವ್ಯಾಪಾರಿಗಳಿಗೆ ಬಹಳ ಲಾಭ ಉಂಟಾಗಿರುವುದು.

—೦೦—

ಪ್ರಪಂಚದಲ್ಲೆಲ್ಲಾ ಅತಿ ಪ್ರಕಾಶದ ದೀಪ.

ಅಮೇರಿಕದಲ್ಲಿ ಸ್ವಸ್ಥಿ ಉಪಯೋಗಕ್ಕಾಗಿ 50 ಮೈಲು ದೂರದ ವರೆಗೆ ಬೆಳಗುವ 7,50,000 ಕ್ಯಾಂಡಲ್ ಶಕ್ತಿಯುಳ್ಳ ದೀಪವೊಂದು ತಯಾರಿಸಲ್ಪಟ್ಟಿದೆ. ಇಷ್ಟೊಂದು ಪ್ರಕಾಶದ ದೀಪವು ಪ್ರಪಂಚದಲ್ಲೇ ಇಲ್ಲವಂತೆ. ಈ ದೀಪದ ಮೂಲಕ 20,000 ಅಡಿಗಳ ಎತ್ತರದಲ್ಲಿ ಘಂಟೆಗೆ 150 ಮೈಲು ವೇಗದಲ್ಲೋಡುವ ವಿಮಾನಗಳನ್ನು ಪತ್ತೆ ಹಚ್ಚಬಹುದೆಂದು ಇಂಜಿನೀಯರರ ಅಭಿಪ್ರಾಯ.

ಪಂಚಾಂಗಗಳ ಮಹಾಸಭೆಯ ಅಧ್ಯಕ್ಷರು.



(ಪಂಡಿತ ಮಾಳವೀಯರು)

ಬರುವ ಸೆಪ್ಟೆಂಬರು ತಿಂಗಳು 10 ರಲ್ಲಿ ಅಖಿಲ ಭಾರತ ಪಂಚಾಂಗಗಳ ಸಮ್ಮೇಳನವು ಇಂದೂರಿನಲ್ಲಿ ನಡೆಯಲಿಕ್ಕಿದೆ. ಅದರ ಅಧ್ಯಕ್ಷಸ್ಥಾನವನ್ನು ವಹಿಸಲು ಪಂಡಿತ ಮದನ ಮೋಹನ ಮಾಳವೀಯರು ಸಮ್ಮತಿಸಿರುವರು.

—೦೦—

ಮುದುಕನಿಗೆ ಬಾಯಿ ಬಂತು!

6 ವಾರಗಳಲ್ಲಿ 6 ಇಂಚು ಬೆಳವಣಿಗೆ.

ಹೆಳೆಯ ಇಲಿಗಳನ್ನು ಸ್ವಲ್ಪವೇ ಸಮಯದಲ್ಲಿ ಅತಿಕಾಯ ಇಲಿಗಳನ್ನಾಗಿ ಮಾರ್ಪಡಿಸಿರುವ 'ಪ್ಲಿಟ್ಯೂ ಗ್ಲೇಂಡ್ ಎಕ್ಸ್‌ಟ್ರಾಕ್ಟ್' ಎಂಬ ಜೀವ ಸತ್ವವನ್ನು ಅಮೇರಿಕದ ಫಿಲಡೆಲ್ಫಿಯದ ಡಾಕ್ಟರ್ ಆರ್ಥರ್ ಸ್ಮಿತ್ ಒರ್ಗರು, 5 ವರ್ಷದ ವರೆಗೆ ಮುದುಕನಾಗಿಯೇ ಇದ್ದ ಹುಡುಗನಿಗೆ ಪ್ರಯೋಗ ಮಾಡಿದಾಗ 2 ತಿಂಗಳೊಳಗೆ ಮಗುವು ಸರ್ವ ಸಾಮಾನ್ಯರಂತೆ ಮಾತಾಡತೊಡಗಿತು. ಇನ್ನೊಂದು ಮಗುವಿಗೆ ಪ್ರಯೋಗ ಮಾಡಿದ 6 ವಾರಗಳಲ್ಲಿ ಅದು 6 ಇಂಚು ಹೆಚ್ಚು ಉದ್ದವಾಗಿ ಬೆಳೆಯಿತು. ಈ ಜೀವ ಸತ್ವವನ್ನು ಪ್ರಥಮವಾಗಿ ಕಂಡು ಹಿಡಿದಿರುವ ಡಾಕ್ಟರ್ ಅರ್ಸ್ಟ್ರ, ಕರು ಹಾಕಿದ ದನಗಳಿಗೆ ಈ ಜೀವ ಸತ್ವದ ಪ್ರಯೋಗ ಮಾಡಿದರೆ ಕರುಗಳ ಮೇಲೆ ಎಂಥಹ ಪರಿಣಾಮವಾಗುವುದೆಂದು ಪರೀಕ್ಷಿಸುತ್ತಿರುವರು.

—೦೦—

ನಾಯಿಯ ವಿಶೇಷ ಸ್ವಾಮಿ ಭಕ್ತಿ.

ಧೂಳಿಂಪದ ಅನಾಹುತಕ್ಕೆ ಒಳಗಾದ ಕ್ವೆಟ್ಟಾದಲ್ಲಿ ಮಿ. ಎ. ಜೆ. ಡಬ್ಲ್ಯೂ. ಹೋಗನ್‌ರವರು ಮತ್ತು ಅವನ ದಳದವರು ಹಾಳುಬಿದ್ದಲ್ಲಿಂದ ಸತ್ತವರ ಹೆಣಗಳನ್ನು ತೆಗೆಯುವಾಗ ಒಂದು ಕಡೆ ಒಂದು ನಾಯಿಯು ತನ್ನ ಯಜಮಾನನ ಶವವನ್ನು ಕಾಯುತ್ತ ಕುಳಿತಿತ್ತು. ಆ ಶವವನ್ನು ತೆಗೆಯಲು [illegible] [illegible] [illegible]

—೦೦—

"ಇದ್ದದ್ದು ಇದ್ದ ಹಾಗೇ!"

ಲಂಡನ್ನಿನ ಒಂದು ಅಂಗಡಿಗೆ ಒಬ್ಬ ಮನುಷ್ಯನು ಬಂದು, ಈ ಕೆಳಗಿನ ಸಾಮಾನುಗಳನ್ನೇ ಕೇಳಿದನು:—(1) 24 ಹೆಗ್ಗಣಗಳು. (2) 48 ಇಲಿಗಳು. (3) ಒಂದು ಮಣ ಹೇನು (4) 1 ಜಿರಲೆ.

'ಏಕೆ ಸ್ವಾಮಿ ಈ ಸಾಮಾನುಗಳು?' ಎಂದು ಅಂಗಡಿಗಾರನ ಪ್ರಶ್ನೆ.

'ನಾನು ಬಾಡಿಗೆಗೆ ಪಡೆದ ಮನೆಯನ್ನು, ಬಾಡಿಗೆ ಪಡೆದಾಗ ಇದ್ದಂತೆಯೇ ಬಿಟ್ಟುಕೊಡಬೇಕೆಂದು ನೋಟೀಸು ಬಂದಿದೆ! ಹಾಗೆಯೇ ಮಾಡಬೇಕಾಗಿದೆ!' ಎಂದು ಉತ್ತರ.

ವಿದ್ಯಾವತಿಯರ ಅತಂತ್ರತೆ?

ಇಂದು ಸ್ತ್ರೀಯರಲ್ಲಿ ಸ್ವಾರ್ಥವು ಹೆಚ್ಚಿದೆಯೆಂದು ಕೆಲವು ಜನರ ಮತ. [illegible] ಆದರ ಅರ್ಥವನ್ನು ಹೆಂಗಸರು ತಿಳಿದುಕೊಳ್ಳಬೇಕೆಂದು ಮೈಸೂರಿನಲ್ಲಿ ಮಿಸೆಸ್ ಬ್ರೀಜ್‌ಲಾಲ್ ನೆಹ್ರೂರವರು ಭಾಷಣ ಮಾಡಿದರು.

ತನ್ನ ಸಿಂಗಾರ, ತನ್ನ ಆರಾಮ, ತನ್ನ ಒಟ್ಟು ಇಷ್ಟಕ್ಕೆ ಎಷ್ಟು ಬೇಕೋ ಅಷ್ಟು ಕೆಲಸ ಮಾಡುವುದು ವಿದ್ಯಾವಂತ ಹೆಂಗಸರ ಅಭಿಪ್ರಾಯ. [illegible]

—೦೦—

ಪರ ಶಿವ ಭಕ್ಷಣ!

[illegible] ವಿದ್ಯಾರ್ಥಿಯು [illegible] ತನ್ನ ಸಂಗಾತಿಯೊಡನೆ [illegible] ಕೋಪದಿಂದ ಆ ಸಂಗಾತಿಯ ಕಿವಿಯನ್ನು [illegible] ಇವನು ಮೊದಲು ಕಿವಿಯನ್ನು ಕೈಯಿಂದ ಹಿಡಿದು ನಂತರ ಬಾಯಿಂದ ಅದನ್ನು ಕಚ್ಚಿ ತಿಂದುಬಿಟ್ಟನು. ಕಿವಿಯು ಒಡನೆಯೇ ಅವನ ಬಾಯೊಳಕ್ಕೆ ಹೋಯಿತು. ಕಿವಿ ಕಳಕೊಂಡವನ ಕೂಗಿನಿಂದಾಗಿ ಬಂದರೂ, ಪೋಲೀಸರು ಈ ಒಂದು 'ಕರ್ಣ ಭಕ್ಷಕ'ನನ್ನು ದಸ್ತಗಿರಿ ಮಾಡಿರುವರು.

—೦೦—

ಅಬಿಸೀನಿಯದ ಹೊಸ ಸ್ನೇಹಿತ.

ವಾಯರ್ಲೆಂಡಿನ ಸರ್ಕಾರದ ಅಧ್ಯಕ್ಷರಾದ ಡಿ ವೇಲರರವರು ಬರುವ ಸೆಪ್ಟೆಂಬರು 4 ರಲ್ಲಿ ಜಿನೇವಾದಲ್ಲಿ ನಡೆಯುವ ಜನಾಂಗಗಳ ಕೂಟದ ಕೌನ್ಸಿಲು ಮೀಟಿಂಗಿಗೆ ಹೋಗಲು ನಿಶ್ಚಯಿಸಿರುವರು. ಅವರು ಇಟಲಿ—ಅಬಿಸೀನಿಯಾ ವಿವಾದದ

(ಡಿ ವೇಲರರವರು)

ನ್ನು ಕುರಿತು ತಮ್ಮ ಸರ್ಕಾರದ ಅಭಿಪ್ರಾಯವನ್ನು ತಿಳಿಸುವರಲ್ಲದೆ, ಶಾಂತಿಯನ್ನೂ, ಅಬಿಸೀನಿಯದ ಸ್ವಾತಂತ್ರ್ಯವನ್ನೂ ಕಾಪಾಡಲು ಜನಾಂಗಗಳ ಕೂಟದವರು ಮಾಡುವ ಪ್ರಯತ್ನಕ್ಕೆ ತಮ್ಮ ಸರ್ಕಾರದ ಸಂಪೂರ್ಣ ಸಹಕಾರವನ್ನು ಸೂಚಿಸಲಿರುವರಂತೆ.

—೦೦—

ಸರ್ಪ ಕುಣಿತದಿಂದ ಮಳೆ ಬೀಳುತ್ತದೆ.

ದಕ್ಷಿಣ ಅಮೇರಿಕದಲ್ಲಿ 'ಟಸ್ಕರೋರ' ಎಂದೆನ್ನುವ ಜಾತಿಯ ಕಾಡು ಜನಾಂಗಕ್ಕೆ ಮಳೆ ಬಾರದಿದ್ದಾಗ ಇವರ ನಾಯಕರು ಸರ್ಪಗಳನ್ನು ಕೈಗೆ ಸುತ್ತಿಕೊಂಡು ಕುಣಿಯುವರು. ಹಾಗೆ ಕುಣಿದರೆ ಸರ್ಪಗಳು ತೃಪ್ತಿಹೊಂದಿ ಮಳೆಯಾಗುವುದೆಂದೇ ಈ ಜನರ ನಂಬಿಕೆ.

—೦೦—

ಮನುಷ್ಯನೂ ಪ್ರದರ್ಶಕ ಮೃಗವಾದನೇ!

ಸ್ವಿಟ್ಜರ್ಲೆಂಡಿನ ಬಾಸೆಲ್ ಎಂಬಲ್ಲಿಯ ಮೃಗಶಾಲೆಯಲ್ಲಿ 65 ವರ್ಷದ [illegible]

Reg. No. M. 1550.

23-8-1935

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೊಚ್ಚಿನ ಸುಂದರ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

[illegible]

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಗೊಸ್ತು ತಾರೀಕು ೨೩ ನೇ ಶುಕ್ರವಾರ. [ಸಂಚಿಕೆ ೧೨

By Appointment
To H. E. The Governor of Madras.

CUPS AND MEDALS.

Telephone; 3145

Telegrams: 'PRECIOUS.'

V. SUBRAMANIA IYER.
Jeweller, & Diamond Merchant,

52-40 2 & 3 Kuppumuthu Street Tiruvateswaranpet. MADRAS. POST BOX 443 TRIPLICANE

Catalogue & special designs with quotations (free) on enquiry

THE CANARA BANKING CORPORATION, UDIPI, LTD.

IN RESPECTFUL MEMORY OF
OUR PRESIDENT FOUNDER, KHAN BAHADUR

HAJI ABDULLAH KASIM SAHEB BAHADUR,

Who passed away, on Monday, the 12th August, 1935, at Udipi.

ಕಷ್ಟಗಳಲ್ಲಿ ನಿಷ್ಪಕ್ಷಪಾತವಾದವೂ ಅಲ್ಲಿ ಕಾರ್ಯ ... ಮತ್ತು ಸಂಸ್ಥೆಗಳು ನಿಜಾಂಶವನ್ನು ವ್ಯಕ್ತಗೊಳಿಸುವವು.

ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

[illegible]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	36,030— 0—0
ಜಮೆಯಿಂದ ಠೇವಣಾತಿ	—	2,483 5—12—8
ವಸೂಲಾದ ಕ್ಷೇಮನಿಧಿ	—	94,623— 6—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲ್ಪಡುತ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,	ಮ್ಯಾನೇಜರ್
ಕೆ. ಎನ್. ಸುಬ್ರಾಯ.	ರಾ. ಸಾ. ಪಾಂಡಂಡ
(ಅಸಿಸ್ಟೆಂಟ್ ರಿಜಿಸ್ಟ್ರಾರ್.)	ಚಂಗಪ್ಪನವರು,

ಸೆಕ್ರೆಟರಿ

ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—7—1935.

ನೋಟೀಸು.

ಈ ಕೆಳಗಿನ ಮಹಾಶಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಜಾವಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಚಸುಡ ಮಾದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ ಜಿ. ಮುತ್ತಮ್ಮಯ್ಯನವರು

ಸುಂಟಿಕೊಪ್ಪ & ಶನಿವಾರಸಂತೆ—ಮೆ. ಬಿ ಮಾದಪ್ಪಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಪೆಮ್ಮಯ್ಯನವರು,

ಸೋಮವಾರಪೇಟೆ—ಮೆ. ಕೆ. ಬೋಗಪ್ಪನವರು

ಸೂಚನೆ.—ಪ್ರಿಂಟು ಆದ ರಶೀತಿ ಹೊರತಾಗಿ ಬೇರೆ ಯಾ ರಶೀತಿ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿದೆ.

ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ದಾಖಲೆಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಬಿರಾಯಿ ಫಾರಮುಗಳೂ, ಜಮ್ಮ ಮುಂಜೂರಾತಿ ಫಾರಮುಗಳೂ, ಕುಟುಂಬದ ಒಪ್ಪಿಗೆ ಫಾರಮುಗಳೂ, ಜಾಮೀನು ಬಿರಾಯಿ ಫಾರಮುಗಳೂ, ಸೆಟ್ಲೆಲ್ ಕೇಸ್ ಬಿರಾಯಿ ಫಾರಮುಗಳೂ ಲೆಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚು ಪುಸ್ತಕಗಳೂ, ಮತ್ತು ಬೇರೆ ಪುಸ್ತಕಗಳೂ ನಮ್ಮ ಕಛೇರಿಯಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಅನುಕೂಲ ಇಲ್ಲದವರು ಕಾಗದ ಬರೆದರೆ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮ್ಯಾನೇಜರ್
"ಕೊಡಗು" ಲಿಮಿಟೆಡ್,
ಮಡಿಕೇರಿ.

LESSONS LEARNT FROM THE

BIHAR & QUETTA EARTHQUAKES.

India has not had time to forget the great disaster occasioned by the Bihar Earthquake before it has to face an even greater calamity in the recent Quetta disaster. The Picturesque Garden City of Quetta is now in ruins and under its debris lie many thousands of people. The survivors have been rendered homeless and destitute. An occasion like this makes us all realise that, rich or poor, Hindu or Muslim, we are all one and should combine and Co-operate in giving relief to sufferers.

The principal of Life Assurance is the same for it is the sharing by a large number the risk of loss of a few. A Life Assurance Policy involves an act of charity and good-will to our fellow-men besides affording an immediate provision for one's own family.

The recent disaster has taught us one more lesson. Even investments on houses and lands or liable to depreciation or loss, owing to fire, floods or earthquake. But an investment by means of an Assurance Policy never depreciates and its value is unique and unrivalled.

Many Companies in India are economically managed and have sound invesments Others may be well-known for their low premiums and liberal Policy conditions But the "EMPIRE OF INDIA" combines all the above features and so it will be to your advantage to study the terms of Assurance offered by this popular Indian Company before you make choice of a Life Office for assuring your own life or for taking up an Agency.

For particulars please apply to :— Branch Secretary :—

52—41 152/3, COMMERCIAL STREET, Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1874ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3;14,01,970
ಜಾರಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮುದಾರ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29 88 814
ಫಂಡ್ಸ್ ಹೆಚ್ಚಿದ್ದು	ರೂ.	15,53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಶದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮ್ಯಾನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಬೆಂಗಳೂರು	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪೂರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪೂರ
ಅಲಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪೂರ	ತಿರುಚಿನಾಪಳ್ಳಿ
ಬಗ್ದಾದ್	ಗೌಹಾತಿ	ಮಂಡಲೆ	ರಾಜಕೋಟ	ತಿರುನೆಲ್ವೇಲಿ
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬತ್ತೂರು	ಗುಂಟೂರು	ಮಲ್‌ಪೇಗುರು	ಬೆಜವಾಡ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

52—33 **ಯಂ. ವಿ. ಮುತ್ತುಕೃಷ್ಣ ನಾಯುಡು,** (ಬ್ರಾಂಚ್ ಸೆಕ್ರೆಟರಿ.)

ಕಷಾಯ ಮಲೆ ಜ್ವರಕ್ಕೆ—ಇದು ಅಂಚಿಕ್ಕೆನ್ ಮತ್ತು ಕ್ವಿನೈನು ಸೇರಿಯೂ ಗುಣದಾಯಕವಾದ ಮಲೆ ಜ್ವರ ನಿವಾರಣೆ. ಬರುವ ಜ್ವರ, 3-4 ದಿವಸಕ್ಕೊಂದು ಸಾರಿ ಬರುವ ಜ್ವರ, ಸದಾ ಬರುವ ಜ್ವರ ಮತ್ತು ಜ್ವರಗಳಿಂದ ದೇಹದಲ್ಲಿ ಉಂಟಾಗುವ ವಿಕಾರಗಳಿಗೆ ಖಂಡಿತ ಗುಣ ಕೊಡುತ್ತದೆ. ಕ್ರಯ ಒಂದಕ್ಕೆ ರೂ. 1—8—0, 3ಕ್ಕೆ 4—0—0, 6ಕ್ಕೆ 7—8—0, 12ಕ್ಕೆ 14—0—0.

ಮಲೆ ಜ್ವರಕ್ಕೆ ರಾಮಬಾಣ ಕಷಾಯ

ಚಂದನಾಸವ—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹಳದಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಹಿಂದಿನ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಕಟ್ಟಿಕೊಂಡು ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲ್ಲಿ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ದಾಹ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಹುಟ್ಟುವ ರೋಗ ಇವುಗಳಿಗೆ ಪರಮ ದಿವ್ಯ. ಬಾಟ್ಲ 1ಕ್ಕೆ ರೂ. 1—4—0, 3ಕ್ಕೆ 3—8—0, 6ಕ್ಕೆ 6—12—0.

ರೋಗನಾಶಕಸಿದ್ಧಿ—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಗವಿರುವ ಭಾಗಕ್ಕೆ ಹಚ್ಚಲು ರೋಗವು ಶೀಘ್ರ ಗುಣವಾಗುತ್ತದೆ. ಡಬ್ಬಿ 1ಕ್ಕೆ ಆಣೆ, 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮನೋಲ್ಲಾಸಿನಿ ತೈಲ—ತಲೆನೋವು, ತಲೆ ತಿರುಗುವುದು, ತಲೆಭಾರ, ಕಂಠಸ್ರಾವ, ಶಿರಸ್ಸಿನಲ್ಲಿ ಶೀತ ಸೇರುವುದು, ಪಿತ್ತದಿಂದ ಕಣ್ಣು ಕೆಂಪಾಗುವುದು, ಉಷ್ಣ ಹೆಚ್ಚಾಗಿ ಉರಿಯುವುದು, ನಿದ್ರೆ ಬಾರದಿರುವುದು, ನಿದ್ರೆಯಲ್ಲಿ ಬೆಚ್ಚಿ ಬೀಳುವುದು ಇವುಗಳಿಗೆಲ್ಲಾ ಶಿರಸ್ಸಿಗೆ ಹಚ್ಚಿ ಸ್ನಾನಮಾಡಬೇಕು. ಇದರಿಂದ ತಲೆ ಕೂದಲು ಕಪ್ಪಾಗಿ ಬೆಳೆಯುವುದಲ್ಲದೆ ಶರೀರಕ್ಕೆ ಸೌಂದರ್ಯವನ್ನೂ, ಹೆಂಗಸರಿಗೆ ಕೇಶವನ್ನೂ ಹೆಚ್ಚಿಸುತ್ತದೆ. ತಲೆ ಕೂದಲು ಉದುರುವುದನ್ನು ತಪ್ಪಿಸುತ್ತದೆ. ಸೀಸೆ 1ಕ್ಕೆ ರೂ 1/, 3ಕ್ಕೆ 2—10—0, ಒಂದು ಡಜನ್ ಸೀಸೆಗೆ 2—0—0 3ಕ್ಕೆ 5—8—0

ವಿಳಾಸ—ವಿದ್ಯಾನಿಲಯ ಫಾರ್ಮಸಿ ಕಂಪೆನಿ,
9 ಮಂಗಳೂರು.

52—26 ಕಾಗದ ಬರೆದು ಕಳುಹಿಸಿ ನೋಡಿರಿ.

Printed & pudlished by P I Belliappa, at "Kodagu" Press, Mercara, for "Kodagu" Ltd.

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನ ಕಡವು ಮುದಪ್ಪರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರೆಂದು ತಿಳಿಯಬಂದಿದೆ. ಆದ್ದರಿಂದ ಮಲಯಾಳದಲ್ಲಿರುವ ಪರಸಿನಕಡವು ಮುದಪ್ಪರ ದೇವಸ್ಥಾನದ ಯಾವ ಕಾಣಿಕೆ ಯಾ ಹರಕೆಗಳನ್ನು ಆ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರಸಿನಕಡವು ದೇವಸ್ಥಾನದಿಂದ ಆ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದ್ದರಿಂದ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಆ ಕೆಳಗಿನ ವಿಳಾಸದಾರರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ.

ಪಿ. ಎಂ. ಕುಂಞಾರಾಮನ್

ಪರಸಿನಕಡವು [26–10] ಮೇನೇಜರ್,
25–5–'35 ಪರಸಿನಕಡವು ಮುದಪ್ಪರ ದೇವಸ್ಥಾನ

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯವರ

ಜ್ವರದ ಗುಳಿಗೆಗಳು.

ಚಳಿಜ್ವರ ಚಾತುರ್ಥಿಕ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ ೧. ಟಪಾಲ ಖರ್ಚು ಬೇರೆ. ಬರೆದು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52–48) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಶ್ರೇಯಸ್ಸು ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣವಾದ್ದಾಗಿರುತ್ತಿರಲಿಲ್ಲ. ಈ ಸಂಜೀವನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಜೀರ್ಣಿಸಿಕೊಳ್ಳಲಶಕ್ಯವಾಗಿ, ಅಗ್ನಿಮಾಂದ್ಯ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗಲೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್—
ಕೆ. ಟಿ. ಡೋಂಗರೆ ಕಂಪನಿ,
(52–27) ಗಿರಿಗಾಂವ್, ಮುಂಬಾಯಿ.

ARMS & AMMUNITION

All kinds of World Famous Guns, Rifles, Revolvers, Pistols, Hunting and Fishing Requisites at Lowest Competitive prices.



CATALOGUE FREE

The BOMBAY ARMOURY

BOMBAY

CURRENT CATALOGUE FREE

HUNTING & FISHING REQUISITES.

The Bombay Armoury,
329 331, Abdul Rehman Street,
12–12 BOMBAY, 3

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಈ ಸಾಬೂನು ನಿಮಗೆ ಭರವಸೆಯನ್ನೀಯುತ್ತದೆ

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52–65 ಬೆಂಗಳೂರು.

ಬೇಳೂರು ಜಯದೇವ ಶಾಲಾ ಪ್ರವೇಶ ಮಹೋತ್ಸವ.

ಬೇಳೂರು ಗ್ರಾಮವು ನೆಲಮಂಗಲದಿಂದ ಎರಡು ಮೈಲಿಗಳ ದೂರದಲ್ಲಿದ್ದು ಈ ಗ್ರಾಮಕ್ಕೆ ಒಂದು ಪ್ರಾಥಮಿಕ ಶಾಲೆ ಇಲ್ಲದೆ ಇದ್ದದ್ದು ಬಹಳ ವ್ಯಸನಕರವಾದ ವಿಷಯವಾಗಿತ್ತು. ಈ ಗ್ರಾಮದಲ್ಲಿ ಒಂದು ಕನ್ನಡ ಶಾಲೆಯು 1923ರಲ್ಲಿ ಶ್ರೀ ಮ. ಸಂಜೀವಗೌಡರವರಿಂದ ಸ್ಥಾಪಿಸಲ್ಪಟ್ಟಿತು. ತರುವಾಯ ಗ್ರಾಮದವರ ಸಹಾಯದಿಂದ 1932ರಲ್ಲಿ [illegible] ಬೆಳೆಯುತ್ತ ಬಂದಿತು. 1934ರಲ್ಲಿ ಗ್ರಾಮಸ್ಥರೆಲ್ಲರೂ ಜಯದೇವ [illegible] ಶ್ರೀಗುರು ಶ್ರೀ ಸ್ವಾಮಿಗಳವರನ್ನು ಬೇಳೂರು ಗ್ರಾಮಕ್ಕೆ ಒಂದು ಶಾಲಾ ಕಟ್ಟಡವನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಆ ಕೋರಿಕೆಗೆ ಗುರುಗಳು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಮಹಾಸ್ವಾಮಿಯವರ ಅಪ್ಪಣೆ ಪ್ರಕಾರ ಒಂದು ಪ್ರಾಥಮಿಕ ಶಾಲಾ ಕಟ್ಟಡವನ್ನು ಕಟ್ಟಿಸಿರುವರು.

ಮೇಲ್ಕಂಡ ಕಟ್ಟಡದ ಪ್ರವೇಶ ಮಹೋತ್ಸವವು ತಾ. 9—8—35 ನೇ ಶುಕ್ರವಾರ ಮಿ. ಬಿ. ಎಸ್. [illegible] ಎ. ಸಿ. ಎಸ್. (ಕೊರಟಗೆರೆ) [illegible] ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ಈ ಬೇಳೂರು ಶಾಲೆಯು ಸ್ಥಾಪಿತವಾಗಿ ಇಂದಿಗೆ 12 ವರ್ಷಗಳು ಕಳೆದವು. [illegible] ಈ ಶಾಲೆಯು ಈಗ [illegible] ಅಭಿವೃದ್ಧಿಯನ್ನು ಹೊಂದುತ್ತಾ ಬರುವುದಾಗಿಯೂ, [illegible] ಶ್ರೀಘ್ರದಲ್ಲಿ [illegible] ಎಂದು ನಂಬುವೆನು.

ಮ. ಚನ್ನಬಸಪ್ಪ,
(ಶಾಲಾ ಸೆಕ್ರೆಟರಿ)

ಪತ್ರವ್ಯವಹಾರ.

[ಪಾತ್ರಿಕೆಯಲ್ಲಿ ಬರುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಬಾಧ್ಯರಲ್ಲ. ಸಂ]

ಗೋಕಾಕ ಟೌನ್ ಹಾಲ್.

ಅಯ್ಯ,

ಗೋಕಾಕದಲ್ಲಿ ಪಟ್ಟಣಿಗರ ಸಹಕಾರದಿಂದ ಒಂದು ಟೌನ ಹಾಲ್ ನಿರ್ಮಿತವಾಯಿತು. [illegible]

[illegible]

ಜ್ವಾಲೆಗೆ ಆಹುತಿಯಾದ [illegible]

[illegible] ದರ ಮುಂದುಗಡೆಯಲ್ಲಿರುವ [illegible] ಅಯ್ಯಾ, [illegible]

ವಿಚಾರದಿಂದ [illegible]

'ಕಂಕ್ರೀಟು' ಬಸ್ಸಿನ ದುಸ್ಥಿತಿ

ಮಹಾಶಯರೇ,

[illegible]

[illegible]

[illegible]

[illegible] ಎಂದು ಹೇಳುತ್ತಿರುವವು ಈಗ [illegible] ಎಂದು ಉತ್ತರಕೊಟ್ಟನು.

ಈ ತಿಂಗಳ ಪ್ರಾರಂಭದಿಂದ [illegible]

'ಸಹಕಾರ'

ಸಂಗಾಪುರ — [illegible]

[illegible]

ಆದುದರಿಂದ ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಜಾಗ್ರತೆ ತೆಗೆದುಕೊಳ್ಳುವಿರಿ [illegible] ಎಂದು ಕೇಳಿಕೊಳ್ಳುವೆನು.

'ಪ್ರತ್ಯಕ್ಷದರ್ಶಿ.'

ಬುಲ್ಬುಲ್ ತಾಳಿಗೆಳು.

ಮೊದಲಿನ ಕ್ರಯ: 13—0—0, ಈಗ 5—4—0.

[illegible] 5 [illegible], 2½ [illegible] ಬಿಗನೆ ಕಳಿಸು [illegible]

ಕ್ರಯ [illegible] 5—4—0



MEHTA & CO.
11 Peryanayakaran Street.
12—2 G. T. Madras.

ಡಾಕ್ಟರ್ ಮೊಹಮ್ಮದ್ ಎಬ್ರಾಹಿಮ್.
ದಂತ ವೈದ್ಯರು.

ಗಿಡ್ಡಪ್ಪ ಬಿಲ್ಡಿಂಗ್.
(ಪೋಸ್ಟಾಫೀಸು ಎದುರಿಗೆ)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರು, ಸುಂದರವಾದ ಕೃತಕ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು [52—48]

ಕಿತ್ತಳೆ ಗಿಡದ ರೋಗಗಳು.

—ooo—

ಲೇಖಕ.—ಕೆ. ಅಣ್ಣಪ್ಪ.

ಪ್ರಾಣಿವರ್ಗದಲ್ಲಿರುವ ಎಲ್ಲಾ ಕಾಯಿಲೆಗಳು ಸಸ್ಯವರ್ಗದಲ್ಲೂ ಇದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೆ. ಪ್ರಾಣಿವರ್ಗದಲ್ಲಿ ಮನುಷ್ಯರಿಗೆ ಪ್ಲೇಗು, ಸಿಡುಬು, ವಗ್ಗೆರೆಯೂ ದನಗಳಿಗೆ ಕಾಲುಜ್ವರ, ಗಂಟಲುಕಟ್ಟು, ಭೇದಿ ವಗ್ಗೆರೆ ಹೇಗೋ ಹಾಗೆಯೇ ಸಸ್ಯವರ್ಗದಲ್ಲಿ ಹಲವು ಗಿಡಗಳಿಗೆ (ಕಾಫಿ, ಕಿತ್ತಳೆ, ಹಲಸು, ಮಾವು) ಎಲೆ ಉದುರುವ ಕಾಯಿಲೆಯೂ ಸಾಂಕ್ರಾಮಿಕ ರೋಗ ಬಂದಿರುವುದು. ಸಸ್ಯಗಳಿಗೆ ಇತರ ಹಲವು ರೋಗಗಳಲ್ಲಿ ಇದು ಅತಿ ಕಠಿಣವಾದದ್ದು.

ಈ ದೇಶದಲ್ಲಿ ಇತ್ತೀಚೆಗೆ ಹೆಚ್ಚಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವ ಕಿತ್ತಳೆ ವ್ಯವಸಾಯವು ಅನೇಕ ರೋಗಗಳಿಂದ ನಷ್ಟಕ್ಕೆ ಈಡಾಗುವ ಸಂಗತಿಯನ್ನು ಕೆಲವು ಮಟ್ಟಿಗೆ ಈ ಕೆಳಗೆ ವಿವರಿಸಲಾಗಿದೆ.

ಕಿತ್ತಳೆ ಗಿಡಗಳು ಸಮುದ್ರ ಮಟ್ಟದಿಂದ ಸುಮಾರು 1500 ರಿಂದ 3500 ಅಡಿಗಳ ಎತ್ತರದ ವರೆಗಿನ ಸ್ಥಳಗಳಲ್ಲಿ ಬೆಳೆಯುತ್ತವೆ. ಇದರ (ಸಂಕೀಸ) ಸಾಧಾರಣವಾಗಿ ಚೆನ್ನಾಗಿ ಬೆಳೆದ ಗಿಡದಲ್ಲಿ 35 ಅಡಿಗಳಾಗಿರುತ್ತವೆ. ಆದರೂ ಕೊಡಗಿನಲ್ಲಿ 2 ಅಡಿ ಸುತ್ತಳತೆಯ ಗುಂಡಿಗಳಲ್ಲಿ 3 ವರ್ಷದ ಈ ಗಿಡಗಳು 20 ಅಡಿಗಳಿಗಿಂತ ದೂರವಾಗಿ ನಡಲ್ಪಟ್ಟಿರುವುದಿಲ್ಲ. ಈ ಗಳು 20 ಅಡಿಗಳಿಗಿಂತ ದೂರವಾಗಿ ನಡಲ್ಪಟ್ಟಿರುವುದಿಲ್ಲ. ಈ ವ್ಯವಸಾಯಕ್ಕೆ ಸಮತಟ್ಟಾದ ಸ್ಥಳವಾಗಲಿ, ಯಾ ಕೆಲವು ಮಟ್ಟಿಗೆ ಇಳಿಜಾರಾಗಿರುವ ಸ್ಥಳವಾಗಲೀ ಆಗಬಹುದು. ಇವುಗಳು ವಿಶೇಷವಾದ ಮಣ್ಣಿನಲ್ಲಿ ಸೊಗಸಾಗಿ ಬೆಳೆಯುತ್ತವೆ. ಆದರೆ ಕಲ್ಲು ಮಿಶ್ರಿತ ಕೆಂಪು ಮಣ್ಣಿನಲ್ಲಿ ಬೆಳೆಯುತ್ತವೆ. ಕೆಂಪು ಮಣ್ಣಿನಲ್ಲಿ ಫಲವತ್ತು ಹುಲುಸಾಗಿರುವುದಿಲ್ಲ. ಕೆಂಪು ಮಣ್ಣಿನಲ್ಲಿ ಹಿಡಿಯುವುದಕ್ಕಿಂತ ಮುಂಚಿತವಾಗಿಯೆ ಮರಳು ಮಣ್ಣಿನಲ್ಲಿ ಹಿಡಿಸುತ್ತದೆ.

ಕಿತ್ತಳೆ ಗಿಡಗಳಿಗೆ ಹೆಚ್ಚಿನ ವ್ಯವಸಾಯವು ಅವಶ್ಯವಿಲ್ಲವೆಂದು ಹಳೆ ಜನರ ಹೇಳಿಕೆಯಾಗಿತ್ತು. ಆದರೆ ಫಸಲಿಗೆ ಬಂದ ಗಿಡಗಳಿಗೆ ಕೆಲವು ಮಟ್ಟಿಗೆ ವ್ಯವಸಾಯ ಮಾಡಿದರೇನೇ ಹೆಚ್ಚಾದ ಲಾಭ ದೊರೆಯುವುದು. ವರ್ಷಕ್ಕೊಂದು ಸಾರಿ ಕಾಸು ತೆಗೆಯುವುದು, ಮೂರು ವರ್ಷಕ್ಕೊಂದು ಸಾರಿ ಪೂರ್ತಿ ಅಗೆತೆಮಾಡುವುದು, ವನಸ್ಪತಿ ಮಣ್ಣನ್ನು ಸುರಿಸಿ ಗೊಬ್ಬರ ಹಾಕುವುದು, ಬೋರರ್ ತೆಗೆಯುವುದು, ಬಂದಳಕ್ಕೆ ಮತ್ತು ಒಣಗಿದ ಕೊಂಬೆಗಳನ್ನು ಕಡಿಯುವುದು ಇವೇ ಮುಖ್ಯ ಕೆಲಸಗಳಾಗಿವೆ. ಇಷ್ಟು ಕೆಲಸಗಳಿಗೆ ಆಗಬಹುದಾದ ಆದಾಯವು ಗಳಾಗಿವೆ. ಇಷ್ಟು ಕೆಲಸಗಳಿಗೆ ಒಂದು ಗಿಡ ಬಂದರ 6 ಆಣೆಯನ್ನು ವಿಕರಲಾಂದು. ಮರಳು ಮಣ್ಣಿನಲ್ಲಿ ನಡಲ್ಪಟ್ಟ ಗಿಡಗಳಿಗೆ ನೆರಳು ಅತ್ಯವಶ್ಯ. ಆದೇ ರೀತಿಯಲ್ಲಿ ತಗ್ಗು ಜಾಗದಲ್ಲಿಯೂ ನೆರಳು ಅವಶ್ಯ. ಗೋಡು ಮತ್ತು ಕೆಂಪು ಮಣ್ಣಿನಲ್ಲಿ ನೆರಳು ಕಡಮೆ ಇದ್ದಷ್ಟು ಗಿಡಗಳು ಹುಲುಸಾಗಿಯೂ, ದೀರ್ಘ ಕಾಲವೂ ಜೀವಿಸಬಹುದೆಂದು ಕಾರ್ಯಾನುಭವಗಳಿಂದ ಊಹಿಸಬಹುದು.

ಕಿತ್ತಳೆಗೆ ಬರಬಹುದಾದ ಕಾಯಿಲೆಗಳು ಯಾವುವೆಂದರೆ—
1. ಬೋರರ್, 2 ಗಿಡದ ಬುಡ ಭಾಗವು ಅರಸಿನ ಬಣ್ಣವಾಗಿ ಒಣಗುವುದು 3 ಕೊಗಟೆ ಏಳುವುದು. 4 ಬೇವು ಅಂದರೆ ಎಲೆ ಮತ್ತು ಹಣ್ಣು ಕೊಳೆಯುವುದು 5. ಬಂದಳಿಕೆ.

1. ಬೋರರ್ ಕಾಯಿಲೆಯನ್ನು ಪೂರ್ತಿ ನಾಶಮಾಡಲು ಅಸಾಧ್ಯವಾದರೂ ಚಿಕ್ಕನಿಂದಲೇ ಇತರ ಕೆಲಸಗಳೊಡನೆ ಬೋರರ್ ಹುಳಗಳನ್ನು ತೆಗೆದು ಹಾಕುವುದರಿಂದ ಗಿಡದ ಸ್ವಾಭಾವಿಕವು ತಪ್ಪುವುದಿಲ್ಲವೆಂಬುದು ನಮ್ಮ ಅನುಭವದ ಭೋದನೆಯನ್ನು ನಾವು ಒಪ್ಪುತ್ತೇವೆ.

2 ಇದು 'ಫಂಗಸ್' ಕಾಯಿಲೆಕ್ಕೊಳಪಟ್ಟದಾದರೂ ಇದು ಮರಗಳನ್ನು ಪೂರ್ತಿ ನಾಶಮಾಡದಕಾರದು. ಗಿಡದ ಅರ್ಧಭಾಗವು ಸತ್ತು ಹೋಗುವುದು. ಇಂತಹ ಭಾಗಕ್ಕೆ ಸುಮಾರು 3 ಅಡಿ ದೂರದಲ್ಲಿ 2 ಅಡಿ ಆಳದಲ್ಲಿ ಚರಂಡಿಯನ್ನು ತೆಗೆದು ಮಳೆಯು ನಿಂತೊಡನೆ ಅಂಥಾ ಗುಂಡಿಗಳನ್ನು ಮುಚ್ಚಿ ಇಟ್ಟಿಗೆ ಹುಡಿ ಮೊದಲಾದವುಗಳಿಂದ ತುಂಬಿಸುವುದರಿಂದ ಕೆಲವು ಮಟ್ಟಿಗೆ ಗುಣಕಾರಿಯಾಗುವುದೆಂದು 1927 ನೇ ಇಸವಿಯ 'ಮಾಡರ್ನ್ ರೆವ್ಯು' ಪತ್ರಿಕೆಯಲ್ಲಿ ಇತ್ತು. ಇದರ ವಿಷಯ ನಮ್ಮ ಅಭಿಪ್ರಾಯದ ಭೋಧನೆ ನಿರೀಕ್ಷಿಸಲಾಗಿದೆ.

3 ಕೊಗಟೆ ಏಳುವುದು ಮಂಜ ಸುಕ್ಕಿನಿಂದ ಆದರೆ ಮರವು ಒಣಗುವುದು ಬಂಡಿತ. ಅಂಥಾ ಕೊಗಟೆಗಳನ್ನು ಕೆರೆದು ಹಾರು ಹಚ್ಚುವುದರಿಂದ ಕೆಲವು ಮಟ್ಟಿಗೆ ಸನಗೆ ಗುಣ ಕಂಡಿದೆ. ಆದರೆ ಇತರ ಭಾಗದಲ್ಲಿ ಕೊಗಟೆ ಏಳುವುದರಿಂದ ಬೋರ್ಡೋ ಮಿಕ್ಸ್ಚರ್ ಹೊಡೆಯುವುದು ಉತ್ತಮವೆಂದು ಭಾವಿಸುತ್ತೇವೆ. ಹೇಗೂ ಕೊಗಟೆ ಎದ್ದ ಸ್ಥಳದಲ್ಲಿ ಮಲೆಯಾಳದ ಸೊಳ್ಳೆಗಳು ಕಂಡು ಬರುತ್ತವೆ. ಆದರಿಂದ ಒಂದು ತರದ ದ್ರವವಾದರೂ ಹಚ್ಚಿ ಬಿಡುತ್ತಾರೆ. ಇದಕ್ಕೆ ಹೆಂಚಿನ ಪಾಸನೆಯಿದೆ. ಆದರೊಳಗೆ ತುಂಬಾ ಇತರ ಹುಳಗಳೂ ಇರುತ್ತವೆ. ಆ ಗಾಯವನ್ನು ಕೆರೆದು ತಾರು ಹಚ್ಚಿದರೆ ಆ ಜಾಗವು ಕಾ

4 ಎಲೆ ಕೊಳೆಯುವುದು ಯಾ ಬೇವು—ಇದನ್ನು ಮನುಷ್ಯರ ಪ್ಲೇಗು ರೋಗಕ್ಕೆ ಹೋಲಿಸಬಹುದು. ಮರಳು ಜಾಗದಲ್ಲೂ, ಕಲ್ಲು ಜಾಗದಲ್ಲೂ ಈ ಕಾಯಿಲವು ಖಂಡಿತವಾಗಿ ಬರುವುದಿಲ್ಲ. ಗೋಡು ಮಣ್ಣು ಜಾಗದಿಂದ ಇದು ಹೋಗುವುದೇ ಇಲ್ಲ ಸುಮಾರು 50 ಇಂಚುಗಳಿಗಿಂತ ಹೆಚ್ಚು ಮಳೆ ಬಿದ್ದಾಗನೆ ಈ ಕಾಯಿಲವು ತಲೆದೋರುವುದು. ಹುಣ್ಣಿನ ಅರ್ಧಭಾಗವು ಸುಟ್ಟಂತಿರುವುದು. ಎಲೆಗಳ ಅರ್ಧ ಭಾಗವು ಸುಟ್ಟು ಹೋಗಿರುವುದು. ಕೆಲವು ವೇಳೆಗಳಲ್ಲಿ ರೆಂಬೆಗಳೂ ಕೂಡ ಕೊಳೆತು ಹೊಸ ಚಿಗುರುಗಳು ಬರುವುದೇ ಇಲ್ಲ. ಬಿಸಿಲು ಕಾದು ಮಳೆ ಹೊಡೆಯುವಾಗ ಸ್ವಲ್ಪ ಗುಣಕಾರಿಯಾಗುವುದು. ಮೋಡವು ಕವಿದುಕೊಳ್ಳುವುದರಿಂದಲೂ, ಮಳೆಯು ಒಂದೇ ಸನಸೆ ಸ್ವಲ್ಪಸ್ವಲ್ಪವಾಗಿ ಬೀಳುವುದರಿಂದಲೂ ಇದು ಹೆಚ್ಚಾಗುವುದು, ಒಂದು ತೋಟದಲ್ಲಿ ಒಂದು ಹುಣ್ಣಿಗೆ ಅಂಟಿದ

ಒಂದು ವಾರದೊಳಗೆ ಈ ಕಾಯಿ ಒಟ್ಟು ಇಡೀ ತೋಟವನ್ನೇ ಆಕ್ರಮಿಸುವುದು. ಕೊಡಗಿನ ಕೃಷಿ ಇಲಾಖೆಯವರು ಈ ಕಾಯಿಲಕ್ಕೆ ಸ್ಪ್ರೇ ಮಾಡಿಯೂ ಕೂಡ ಗುಣಕಾರಿಯಾಗಲಿಲ್ಲವೆಂದು ಒಪ್ಪುತ್ತಾರೆ. ಒಳ್ಳೆ ಕಾಯಿಬಿಟ್ಟ ಗಿಡಕ್ಕೆ ಈ ಕಾಯಿಲವು ಮೊದಲು ತಗಲುವುದು. ಕೊಳೆತ ಹಣ್ಣನ್ನು ಹೆಕ್ಕಿ ತೆಗೆಯುವುದರಿಂದ ಬೇರೆ ಹಣ್ಣುಗಳಿಗೆ ಅದರ ಕ್ರಿಮಿಗಳು ಹಾರಿ ಅವನ್ನು ಕೆಡಿಸುವುದು. ಹೇಗೂ ಹವಗುಣವು ಚೆನ್ನಾಗಿಲ್ಲದಿದ್ದರೆ ಈ ರೋಗವನ್ನು ತಡೆಯುವುದು ಕಷ್ಟ. ಅದಕ್ಕಾಗಿ ಮಳೆ ನಿಂತು ಹೋಗಿ ಬಿಸಿಲು ಕಾದರೆ ಕೆಲ ಕೆಲ ಸ ಮರದಲ್ಲಿಯೇ ಒಣಗುವುದು. ಕೊಗಟೆ ಏಳುವ ಮರಕ್ಕೆ ಈ ಕಾಯಿಲವು ಅತಿ ಬೇಗನೆ ಅಂಟುವುದು. ಬೀಜದ ದೋಷದಿಂದ ಈ ರೋಗವು ತಲೆದೋರುವುದಿಲ್ಲ. ಒಂದೇ ಮರದ ಬೀಜವನ್ನು ಹಲವು ರೀತಿಯ ಮಣ್ಣಿನಲ್ಲಿ ನೆಟ್ಟರೆ ಎಲ್ಲ ತೋಟಗಳಲ್ಲಿಯೂ ಈ ರೋಗವು ಕಾಣಬರುವುದಿಲ್ಲ. ಕೆಲವು ಸಮಯದಲ್ಲಿ ಪಕ್ಕಿಯಲ್ಲಿಯೂ ಸಹ ಈ ರೋಗವು ತಲೆದೋರಿ ಎಲೆಗಳೂ, ಸಣ್ಣ ರೆಂಬೆಗಳೂ ಸಹ ಕೊಳೆಯುವುದನ್ನು ಕಾಣಬಹುದು. ಕೆಂಪು ಮಿಶ್ರವಾದ ಮಣ್ಣಿನಲ್ಲಿ ಬೆಳೆದ ಬಟ್ಟೆಯು ಉಳಿಯುವುದರಿಂದ ರೋಗಗಳು ಕಡಿಮೆಯಾಗುವವೋ ಎಂಬ ಸಂಶಯವಿದೆ. ಆದರೆ ಅಂಥಾ ತೋಟಗಳಿಗೆ ಸಣ್ಣ ಹಾಕುವುದರಿಂದಾಗಲಿ, ಯಾ ಆಳವಾದ ಚರಂಡಿ ತೆಗೆದು ನೀರನ್ನು ಹರಿಯಬಿಡುವುದರಿಂದಾಗಲಿ ಅದರ ಫಲಿತಾಂಶವು ಉತ್ತಮ ವಾಗಿ ಕಾಣು. ಅನುಭವದಿಂದ ಹಾಗೆ ಕಂಡುಬರುವುದಿಲ್ಲ. ಭತ್ತದ ತೋಟ ಹಾಕಿದ ಸ್ಥಳದಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಈ ರೋಗವನ್ನು ತಡೆಕಟ್ಟಬಹುದು. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ? ಇದು ಮರಕ್ಕೆ ಈ ಕಾಯಿಲವನ್ನು ಸಲಭವಾಗಿ ಅಂಟಿಸುವುದಕ್ಕೆ ಹೇಗೆಂದರೆ ಒಂದು ಮರದ ಒಂದು ಹಣ್ಣಿನೊಳಕ್ಕೆ ಬಂದ ಹುಳಗಳು ಉತ್ಪನ್ನವಾಗುತ್ತವೆ ಒ ದ. ವಾರದೊಳಗೆ ಆ ಮರದಲ್ಲಿ ಈ ಕಾಯಿಲವು ತಲೆದೋರುವದು ಈ ರೀತಿಯಾಗಿ ಉಂಟಾಗಬಹುದಾದ ಕಾಯಿಲವನ್ನು ತಡೆಕಟ್ಟುವುದಕ್ಕೆ ಇಲಾಖೆಯವರು ಶ್ರಮಿಸಿದರಿದ್ದರೆ, ಕೊಡಗಿನಲ್ಲಿ ಲಕ್ಷಾಂತರ ರೂಪಾಯಿ ವರ್ಷಗಟ್ಟಲೆ ನಷ್ಟವಾಗುವುದನ್ನು ನೋಡಿ ಯಾರು ತಾನೆ ವ್ಯಸನಪಡದಿರಲಾರರು. ಇನ್ನಾದರೂ ಅಧಿಕಾರಿಗಳು ಇದರ ವಿಷಯ ಆಲೋಚಿಸಿ ಪ್ರಕಟಿಸುವರೇ.

5 ಬಂದಳಿಕೆಯು ಮಂಜ ಬೆಳವಣಿಗೆಯನ್ನು ಹಾಳುಮಾಡುವುದು. ಇತರ ಮರಗಳಲ್ಲಿನ ಬಂದಳಿಕೆ. ದಿನದಿಂದ ಇದಕ್ಕೂ ಅಂಟುವುದು. ಅವನ್ನು ವರ್ಷಂಪ್ರತಿ ತೆಗೆಯುವುದರಿಂದ ಪ್ರಯೋಜನವಾಗುವುದು. ಹೆಚ್ಚಿನ ಸಂಗತಿಗಳನ್ನು ಇಲಾಖಾಧಿಕಾರಿಗಳಿಂದ ತಿಳಿಯಲು ಅಪೇಕ್ಷಿಸುತ್ತೇನೆ.

ಉತ್ತಮ ತರಕಾರಿ ಮತ್ತು ಹೂವಿನ ಬೀಜಗಳು.

ಮಳೆಗಾಲ ಪ್ರಾರಂಭವಾಗಿರುವ ಪ್ರಯುಕ್ತ ಈ ಕೆಳಗೆ ಕಂಡ ಗ್ಯಾರಂಟಿಯಾದ ಗಿಡಗಳನ್ನು ಮತ್ತು ಬೀಜಗಳನ್ನು ರಿಯಾಯಿತಿ ದರಗಳ ಮೇಲೆ ಮಾರಲಾಗುತ್ತೆ.

12 ಪೊಟ್ಟಣ ಹೂವಿನ ಬೀಜಗಳು		1—0—0
12 ,,	ಸ್ವದೇಶಿ ತರಕಾರಿ ಬೀಜಗಳು	1—0—0
12 ,,	ಇಂಗ್ಲಿಷ್ ,,	2—0—0
12 ಜಾತಿ ಗುಲಾಬಿ ಸಸಿಗಳು		3—0—0
12 ,,	ಇತರ ಹೂವಿನ ಸಸಿಗಳು	3—0—0
12 ,,	ಕಸಿ ಮಾವಿನ ಸಸಿಗಳು	ರೂ. 6ರಿಂದ 8—0—0
12 ,,	ಹಣ್ಣಿನ ಸಸಿಗಳು	5—0—0

ಈ ದರಗಳು ಕೊಂಚ ಕಾಲ ಮಾತ್ರ ಜಾರಿಯಲ್ಲಿರುವುವು. ಪೂರ್ತಿ ವಿವರ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ. ಶೇಷಪ್ಪ ಅಂಡ ಸನ್,
ಲಾಲ್‌ಬಾಗ್ ರೋಡು,
ಬೆಂಗಳೂರು.

4—2

SHIROMANI NARAYANACHARYA
Choukhamba Benares City.

ಶಾಸ್ತ್ರಗಳೇ, ಪುರಾಣಗಳು ಆರೋಗ್ಯಕ್ಕೆ ಅಥವ ಅನಿಷ್ಟ ನಿವಾರಣೆಗೆ ರುದ್ರಾಕ್ಷಿಯನ್ನು ಧರಿಸಬೇಕೆಂದು ಹೇಳುತ್ತವೆ. ಆದರೆ ರುದ್ರಾಕ್ಷಿಯನ್ನು ಬಂದ ಯಾ ರಾಗ ಧಾರಣೆಮಾಡುತ್ತ ಇದ್ದರು, ಆದರಿಂದ ಏನು ಫಲ? ಅದನ್ನು ಧರಿಸಿದ ಜನರಿಗೆ ಕ್ಕಿ, ಬುದ್ಧಿಶಕ್ತಿ, ವಿದ್ಯಾಭ್ಯಾಸ, ಐಶ್ವರ್ಯ, ದೀರ್ಘಾಯುಷ್ಯ ಆಗುತ್ತವೆ. ಹಾಗಾದರೆ ನಿಜವಾದ ರುದ್ರಾಕ್ಷಿ ಎಲ್ಲಿ ದೊರೆಯುತ್ತವೆ? ಇದ ಈ ಕೆಳಗೆ ಕಂಡಿರುವ ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿಗಳು ದೊರೆಯುವುವು.

ಒಟ್ಟು ಆರೆ ಪ್ರವಾಳದ ಆ ಕಡ 1ಕ್ಕೆ ಆಣೆ 1 ರಿಂದ ರೂ. 250 ವರೆಗೆ. 108 ರುದ್ರಾಕ್ಷಿಗಳ ಸರ 1ಕ್ಕೆ ಆಣೆ 10ರಿಂದ ರೂ. 250 ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 1ರಿಂದ ರೂ. 500 ವರೆಗೆ ಏಕ ಮುಖ 3—4—5—7—8 ಮುಖಗಳ ಕಾಳು 1ಕ್ಕೆ ಆಣೆ 6 ರಿಂದ ರೂ. 10 ವರೆಗೂ 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 100 ವರೆಗೆ, 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100 ವರೆಗೆ. ಕಲಿಸ ರುದ್ರಾಕ್ಷಿ ಅವರ ಕಾಳಿಗಿಂತ ಕಂಡವಾಗುತ್ತಿರುವ ಜಾತಿ ದೊಡ್ಡ ರುದ್ರಾಕ್ಷಿ ಅವರೆಗಿಂತ ಚಿಕ್ಕದಾಗುತ್ತಿರುವ ಜಾತಿ ಆಗುವುದು (ಏಕ ಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪ್ ಕಳುಹಿದರೆ 3 ಇನಾಮುಗಳು—1 ಏಕಸ್ವರ ಪಟ 1 ಕಾಳಿ ನ ಕಾಳಿ ಚಿತ್ರಂತ ಕೆಟಲಾಗಿನೊಡನೆ ಇನಾಮಾಗಿ)

ಶಿರೋಮಣಿ ನಾರಾಯಣಾಚಾರ್ಯ,
52—2 ಚೌಖಂಬಾ, ಬೆನಾರಸ್ (ಕಾಶೀ.)

ಸೆಲ್ಫ್ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲಿಕ್ಕೆ ತಿಳಿದವರು ಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಬರೆಯುವುದನ್ನೂ, ಮಾತಾಡುವುದನ್ನೂ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 2 ತಿಂಗಳಲ್ಲಿ ಕಲಿಸತಕ್ಕ ಪುಸ್ತಕ. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. 884 ಪೇಜುಗಳ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವುವು. ಬೇಗನೆ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ 2.

ಕಲ್ಕತ್ತಾ ಸೀರೆಗಳು.

ಈ ಸೀರೆಗಳನ್ನು ದೊಡ್ಡ ಕಂಪೆನಿಯವರಿಂದ ತಯಾರಿಸಿದ್ದು, 18 ಮೊಳ ಉದ್ದವೂ, 2½ ಮೊಳ ಅಗಲವೂ ಇರುವುವು. ಇವನ್ನು ಹಸನ್ ಗಟ್ಟಿಯಾದ ಸಣ್ಣ ನೂಲಿನಿಂದಲೂ, ರೇಷ್ಮೆಯಿಂದಲೂ ತಯಾರಿಸಿದೆ. ಅಂಚು ಬಾಳ ಅಂದವೂ, ಸುಂದರವಾದ ರೇಷ್ಮೆಯ ಸೆರಗೂ ಇರುವುದು. ಇವು ಯಾವಾಗ್ಯೂ ಕೇಸ್ಸ್ಯಂತೆ ಇರುವವು. ಎಲ್ಲಾ ಬಣ್ಣಗಳಲ್ಲಿಯೂ ಸಿಕ್ಕುವವು. ಮತ್ತು ಎಲ್ಲಾ ಮತಸ್ಥರಿಗೂ ಅನುಕೂಲವಾದದ್ದು. ಕ್ರಯ 1ಕ್ಕೆ ರೂ. 5—12—0

ಶಕ್ತಿಯ ಉಂಗುರ.

ಈ ಉಂಗುರವು ಹಿಮಾಲಯ ಪರ್ವತದ ಋಷಿಯಿಂದ ತಯಾರಿಸಿದ್ದು. ಇದನ್ನು ಧರಿಸುವುದರಿಂದ ವ್ಯಾಪಾರದಲ್ಲಿ ಲಾಭ, ಕೋರ್ಟಿನ ವ್ಯಾಜ್ಯಗಳಲ್ಲಿ ಜಯ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಮಕ್ಕಳ ಕೊರಳಲ್ಲಿ ಕಟ್ಟುವುದರಿಂದ ಬರುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಗುಣಪಡಿಸುವುದು. ಇವುಗಳ ನಾವು ತಿಳಿಸಿರುವಂತೆ ಪ್ರಕೃತಿ ಕೆಲಸದಲ್ಲಿಯೂ ಲಾಭವನ್ನು ಕೊಡಲಿಲ್ಲವೆಂದು ವ್ಯಕ್ತಪಡಿಸುವವರಿಗೆ 50 ರೂಪಾಯಿಗಳನ್ನು ಇನಾಮಾಗಿ ಕೊಡುವೆವು. ಉಂಗುರ 1ಕ್ಕೆ ರೂ. 1—4—0, 3ಕ್ಕೆ 3—4—0.

MEHTA & CO.
11 Peryanayakaran Street.
12—2 G. T. Madras.

"ಹಸ್ತ ಶಾಂತಿಯೊಳಗೆ ನನ್ನ ವಸ್ತ್ರ ಯೊಗೆಯುವ ಕೆಲಸಗಳೆಲ್ಲವೂ ಪೂರೈಸಿದವು.

501 ಮಾರ್ಕಿನ ಸಾಬೂನಿಗೆ ನನ್ನ ಅಭಿವಂದನೆ."

501 Soap

ಚೆನ್ನ ಆಡಿಸು.
ವಸ್ತ್ರ ಬಾಳಿಕೆ.
ಕ್ರಯ ಅತೀ ಕಡಮೆ!

52—15

ಕಮೀಶನ ದವರು—ಕಾಶಾ ಆಯಿಲ್ ಮಿಲ್, ಕ ಪಿ, ಲಿ, ಬೊಂಬಾಯಿ ಮತ್ತು ... ಸಂತೆಪೇಟೆ, ಮೈಸೂರು.

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾರಾಪಿತ್ರಿ ಮಿಶ್ರಿತ.

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ... ಶರೀರದ ಉಷ್ಣ ... ಧಾತು ... ಮತ್ತು ... ಶಕ್ತಿಯನ್ನು ವೃದ್ಧಿ ಪಡಿಸುವದು. ... ಕಾಂತಿಯನ್ನು ...

ಡಬ್ಬಿ 1ಕ್ಕೆ ರೂ 2—8—0   3ಕ್ಕೆ ರೂ 7—0—0

ಮಲೇರಿಯಾ ನಿವಾರಿಣಿ.

... ಗಿಡ್ಡ ಜ್ವರ, ... ಕಫ ... ಜ್ವರ, ...

ಬಾಟ್ಲಿ 1ಕ್ಕೆ ರೂ 1—8—0   ಸಣ್ಣ ಬಾಟ್ಲಿಗೆ 0—13—0.

ಸೋಪ ಕುಠಾರ.

... ಮೂತ್ರ ... ಬರುವುದು. ಮೂತ್ರ ... ಇದೇ ಮೊದಲಾದ ... ಔಷಧ.

ಡಬ್ಬಿ 1ಕ್ಕೆ ರೂ 2—0—0   3ಕ್ಕೆ ರೂ 7—0—0.

ದ್ರಾಕ್ಷಾರಿಷ್ಟ— ಬಾಟ್ಲಿ 1ಕ್ಕೆ ರೂ. 2—0—0   ಅರ್ಧ ಬಾಟ್ಲಿಗೆ ರೂ 1—2—0.

ಚವನಪ್ರಾಶ— ಡಬ್ಬಿ 1ಕ್ಕೆ 2—8—0   ಅರ್ಧಕ್ಕೆ ರೂ 1—5—0.

ಅಶೋಕಾರಿಷ್ಟ—ಬಾಟ್ಲಿ 1ಕ್ಕೆ ರೂ 1—0—0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬರು 1, ಮಂಗಳೂರು.

52—6

ಭೂನಿಧಿಗಾಗಿ ನರಬಲಿ!

ಸ್ತ್ರೀಯ ಕಠಿಣ ಹೃದಯ.

ನಂಗೊಂಡ ಜಿಲ್ಲೆಯ ... ನೈತ್ರ ಎಂಬ ಗ್ರಾಮದಲ್ಲಿ ಒಬ್ಬ ಸ್ತ್ರೀಯು ಒಂದು ಹೊಸ ಮನೆಯನ್ನು ಕಟ್ಟಿಸುತ್ತಿದ್ದಾಗ್ಯೆ ... ಎಂಬ ಅಶರೀರ ವಾಣಿಯು ಕೇಳಿಬಂತು. ... ಆಗ ... ದೇವತೆಗೆ ನರಬಲಿ ಕೊಟ್ಟು, ಹುಡುಕಲು ನಿಶ್ಚಯಿಸಿ, ತನ್ನ ಗ್ರಾಮದ ... ವರ್ಷ ಪ್ರಾಯದ ... ಹುಡುಗಿಯರನ್ನು ... ತನ್ನ ಹೊಸ ಮನೆಗೆ ಕರೆತಂದು, ಅಲ್ಲಿ ಅವರನ್ನು ವಧಿಸಿ, ದೇವತೆಗೆ ಅರ್ಪಿಸಿದಳು. ... ಅವನ ಮನೆಯೊಳಗೆ ... ಈ ... ಕೃತ್ಯವನ್ನು ಪೋಲೀಸರಿಗೆ ತಿಳಿಸಿದನು. ಪೋಲೀಸರು ಆ ಸ್ತ್ರೀಯನ್ನು ... ವಿಚಾರ ನಡಿಸುತ್ತಿರುವರು

ವೈಸರಾಯರ ಕ್ವೆಟ್ಟಾ ಭೂಕಂಪ ಫಂಡಿಗೆ

ಹಣ ಸಹಾಯ ಮಾಡಿದ ಮಹನೀಯರು,

ಕಳೆದ ವಾರದ ವರೆಗೆ ವಸೂಲು	2507	13	10
ಲ್ಯಾಂಡ್‌ರೆಕಾರ್ಡ್ ಆಫೀಸಿನ ವಸೂಲು ಮ			
ಎ ಯಂ. ಮುತ್ತಪ್ಪ, ವೆಟರಿನರಿ ಡಾಕ್ಟರರಿಂದ	4	0	0
ಮಿಸೆಸ್ ಎ. ಎ. ತಿಮ್ಮಯ್ಯ	1	0	0
ವೀರರಾಜಪೇಟೆ ತಾಲೂಕು ಖಜಾನೆ ವಸೂಲು	11	13	0
ಶನಿವಾರಸಂತೆ ,,	8	12	0
ಸೋಮವಾರಪೇಟೆ ಸೋಶಿಯಲ್ ಕ್ಲಬ್ಬಿನಿಂದ	25	0	0
ಶನಿವಾರಸಂತೆ ಟೌನ್ ಸೊಸೈಟಿಯಿಂದ	3	0	0
ಕುಂಟಿಕೊಪ್ಪ ... ವಸೂಲು	1	12	0
ಅಮ್ಮತ್ತಿ ,,	6	4	0
ಮೆ ಸಕ್ಲಟ್‌ವಾಲಾ	50	0	0
,, ... ಕಾಫಿತೋಟ, ಪೊಳ್ಳಿಬೆಟ್ಟ, ಇವರಿಂದ	50	0	0
,, ...	15	0	0
,, ಎ ಜೆ ...	5	0	0
,, ಎಸ್ ಪಿ ಟಿ. ...	10	0	0
,, ... ಕಾಫಿ ತೋಟ	20	0	0
,, ...	50	0	0
,, ಆರ್ ಪಿ ... ಕಾಫಿ ತೋಟ ಗ್ರೂಪ್ಸ್	75	0	0
ಮೆ ಬಿ ಎಸ್. ...	25	0	0
,, ಡಿ. ಎಸ್ ಯಂಗ್‌ಹ್ಯೂಸ್	8	0	0
...	7	0	0
ಎಗ್ಜಿಕ್ಯೂಟಿವ್ ಇಂಜಿನಿಯರವರ ವಸೂಲು	4	8	0
ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರವರ ವಸೂಲು	3	12	0
ಒಟ್ಟು ಜಮ್ಮ	2952	10	10

ಪ್ರಸಿದ್ಧ ಔಷಧಗಳು

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆ ನೋವು, ... ಆರೋಗ್ಯವನ್ನು ಕಾಪಾಡುವ ... ಕ್ಕಿರುವದು.

ದೊಡ್ಡ ಕುಪ್ಪಿ 2—8—0
ಅರ್ಧ ಕುಪ್ಪಿ 1—6—0

ನವರತ್ನ ದ್ರಾಕ್ಷಾರಿಷ್ಟ.

ಕೆಮ್ಮು, ... ಶರೀರಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನು ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಕುಪ್ಪಿ 1—8—0   ಅರ್ಧ ಕುಪ್ಪಿ 1—13—0

ವಿ. ಪಿ.—ಔಷಧ ಬೇಕಾದವರು ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

52—15   ಒಟ್ಟಿ ವ್ಯಾಪಾರಿ, ಕುಂಟಿಕೊಪ್ಪ   ಏಜೆಂಟ್—ವಿ. ... ಮಡಿಕೇರಿ.

ನವರತ್ನ ಫಾರ್ಮಸಿ,

ರೋಲ್ಡ್‌ಗೋಲ್ಡ್ ಭಂಗಾರದ ಲೀವರ್ ವಾಚ್.

ಬೇಡವಾದರೆ ... ವಾಪಸು ಕೊಡಬಹುದು

ಇದು ಚಿತ್ರದಲ್ಲಿ ತೋರುವಂತೆ ... ಲಕ್ಷಣವಾಗಿರುವುದು. ... ಗಂಟೆ ತೋರುವುದು. ... ಉಪಯೋಗಿಸುತ್ತಿರುವರು. ... 3 ದಿನಗಳ ವರೆಗೆ ಇಟ್ಟು ನೋಡಿ. ಬೇಡವಾದರೆ ವಾಪಸು ಕಳುಹಿಸುವೆವು. ... ಗ್ಯಾರಂಟಿ 3 ವರ್ಷ ಕೊಡಲ್ಪಡುತ್ತೆ.

ಇನಾಮ ಟೈಂಪೀಸ್ ಸಹಿತ ಗಡಿಯಾರ 1ಕ್ಕೆ 7—4—0.
ರಿಸ್ಟ್‌ವಾಚ್ ಮಾತ್ರ 5—8—0.

MEHTA & Co,
11 Peryanayakaran Street,
12—2   G T, Madras

ವರ್ತಮಾನ ಸಂಗ್ರಹ.

ಒಳದೇಶ.

[illegible]

ಹಿಂದುದೇಶ.

[illegible]

ವಿದೇಶ.

[illegible]

ಬಲೂಚಿಸ್ಥಾನದ ಭೂಕಂಪ ನಿಧಿ.

(ಮುಂದುವರಿದದ್ದು.)

ಕಳೆದ ಮೇ ತಾ 30 ರಲ್ಲಿ ಬಲೂಚಿಸ್ಥಾನದಲ್ಲಿ ಉಂಟಾದ ಭಯಂಕರ ಭೂಕಂಪನದ ಆಘಾತಕ್ಕೆ ಸಿಕ್ಕಿ ಬಿದ್ದ ನಿರಾಶ್ರಿತರ ಸಹಾಯಕ್ಕಾಗಿ ಈ ಕೆಳಗಿನ ಮಹನೀಯರು ಧನ ಸಹಾಯ ಮಾಡಿರುವರು.

		ರೂ.	ಆ.	ಪೈ.
115.	ಮ. ರಾ. ರಾ ಸೋಮಯ್ಯನವರು [illegible] ಎಸ್ಟೇಟ್	1	0	0
116 ,,	[illegible]	1	0	0
117 ,,	[illegible] ಕೃಷ್ಣಪ್ಪನವರು	0	8	0
	ಒಟ್ಟು	2	8	0
	ಹಿಂದಿನ ಒಟ್ಟು	187	2	0
	ಒಟ್ಟು.	189	10	0

ಪಿ. ಬಿ. ಬೆಳ್ಳಪ್ಪ.

ಕೊಡಗು

ಆಗೋಸ್ಟು ತಾ. ೧೬ನೇ ಶುಕ್ರವಾರ ೧೯೩೫.

ಹೊಸ ಸುಧಾರಣೆಗಳ ಆಕ್ಟು.

ಎಷ್ಟೋ ಕಾನ್‌ಫರೆನ್ಸುಗಳನ್ನೂ, ಕಮಿಟಿಗಳನ್ನೂ, ಸೇರಿಸಿ, ಪಾರ್ಲಿಮೆಂಟು ಸಭೆಗಳಲ್ಲಿ ತಿಂಗಳು ಗಟ್ಟಲೆಯ ಚರ್ಚೆ ನಡಿಸಿ, ಮಸೂದೆ ರೂಪದಲ್ಲಿ ಪಾಸುಮಾಡಿದ ಇಂಡಿಯಾ ಬಿಲ್ಲ್ ಈ ತಾ. 2 ರಲ್ಲಿ ಚಕ್ರವರ್ತಿಯವರ ಒಪ್ಪಿಗೆ ಪಡೆದು ಆಕ್ಟು ಆಗಿದೆ. ಇತ್ತೀಚೆಗಲು ಎರಡುವರೆ ವರ್ಷಗಳಾದವು ಇನ್ನು ಇದನ್ನು ಜಾರಿಗೆ ತರಬೇಕಾದರೆ ಒಂದು ವರ್ಷವಾದರೂ ಬೇಕಾಗುವುದು. ಇಷ್ಟು ದೀರ್ಘ ಕಾಲದ ಪರಿಶ್ರಮದ ಫಲಿತಾಂಶವಾದ ರಾಜ್ಯಾಡಳಿತೆಯ ರಚನೆಯಾದರೋ ಇಂಡಿಯಾದ ಯಾವ ಪಂಗಡದವರಿಗೂ ತೃಪ್ತಿಯನ್ನುಂಟುಮಾಡಿರುವುದಿಲ್ಲ. ಆದುದರಿಂದ ಈ ಹೊಸ ಆಕ್ಟು ಹಿಂದೂ ದೇಶದಲ್ಲಿ ಉತ್ಸಾಹವನ್ನು ಹುಟ್ಟಿಸುವ ಬದಲು ತುಂಬಾ ನಿರುತ್ಸಾಹವನ್ನೂ, ಬ್ರಿಟಿಷರ ಮೇಲೆ ಅಪನಂಬಿಕೆಯನ್ನೂ ಉಂಟುಮಾಡಿದೆ.

ಆದರೆ ಇಂಗ್ಲೆಂಡಿನಲ್ಲಿ ರಾಜಕೀಯ ಪಕ್ಷಗಳ ಮುಖಂಡರು ವಿನಹ—ತಮ್ಮ ಈ ಪರಿಶ್ರಮದ ರಚನೆಯನ್ನು ಮಿತಿ ಇಲ್ಲದೆ ಹೊಗಳುತ್ತಿರುವರು. ಹಿಂದೂ ದೇಶದ ಮುಖ್ಯ ಸಮಸ್ಯೆಯನ್ನು ಹೇಗೂ ಪರಿಹರಿಸಿದೆವೆಂದು ಸಮಾಧಾನಪಟ್ಟುಕೊಳ್ಳುತ್ತಿರುವರು. ಇನ್ನು ತತ್ಕಾಲ ಈ ವಿಷಯದಲ್ಲಿ ಹಿಂದೀಯರ ಬೇಡಿಕೆಗಳಿಗೆ ಕಿವಿಗೊಡುವ ಅವಶ್ಯವಿಲ್ಲ, ರಚನೆ ಬೇಗನೆ ಜಾರಿಗೆ ಬಂದೇ ಬರುವುದು ಎಂದು ಅಂದುಕೊಳ್ಳುತ್ತಿರುವರು. ಆದರೆ ಅವರ ಈ ರಚನೆಯು ಮುಂದಿನ ಆಡಳಿತೆಯ ಮೇಲೆ ಬೀಳುವ ಪರಿಣಾಮವನ್ನು ಮರೆತಿರುವರು. ಪ್ರಜೆಗಳಿಗೆ ಒಪ್ಪಿಗೆಯಾಗದ ರಾಜ್ಯಾಡಳಿತೆ ಕ್ರಮವನ್ನು ಸರಕಾರದವರು ಅಧಿಕಾರ ಬಲದಿಂದ ಜನರ ಗಂಟಲಿಗೆ ತುರುಕಿ ಅದನ್ನು ಜಾರಿಗೆ ತರಬಹುದು. ಆದರೆ ಅದೆಂದಿಗೂ ಜಯಪ್ರದವಾಗಿ ನಡೆಸಲ್ಪಡಲಾರದು.

ಇಂಡಿಯಾದಲ್ಲಂತೂ ಈ ಆಕ್ಟಿನಿಂದ ಯಾವ ಪಾರ್ಟಿಯೂ ತೃಪ್ತಿಗೊಂಡಿರುವುದಿಲ್ಲವಷ್ಟೆ. ಇಂಗ್ಲೆಂಡಿನವರಾದರೂ ಇದಕ್ಕೆ ಎಲ್ಲಾ ಪಾರ್ಟಿಗಳ ಬೆಂಬಲವಿದೆಯೋ ಎಂದು ವಿಚಾರಿಸುವ. ಅಲ್ಲಿಯ ಲೇಬರ್ (ಶ್ರಮಜೀವಿಗಳ) ಪಾರ್ಟಿಯವರು ಈ ರಚನೆಯನ್ನು ಪೂರ್ತಿ ವಿರೋಧಿಸಿರುವರು. ಲಿಬರಲ್ ಪಾರ್ಟಿಯವರು ಫೆಡರಲ್ ಎಸೆಂಬ್ಲಿಗೆ ಚುನಾವಣೆಯ ವಿಷಯದಲ್ಲೂ, ಧರ್ಮಗಳ ಸಂಬಂಧವಾಗಿಯೂ ತಮ್ಮ ಅಸಮ್ಮತಿಯನ್ನು ಸೂಚಿಸಿರುವರು ಅಂದ ಮೇಲೆ ಇನ್ನುಳಿದುದು ಕನ್ಸರ್ವೇಟಿವ್ ಪಕ್ಷವೊಂದೇ. ಬ್ರಿಟನಿನ ಈಗಿನ ಸರಕಾರದಲ್ಲಿ ಬಹುಮತದಿಂದಿರುವ ಈ ಟೋರಿ ಪಕ್ಷದವರೇ ಈ ಆಕ್ಟಿಗೆ ಕಾರಣರು. ಅವರಲ್ಲಿಯೂ ಕೆಲವರು ರಚನೆಯಲ್ಲಿ ಬ್ರಿಟಿಷರ ಹಿತಕ್ಕಾಗಿ ಇಟ್ಟಿರುವ ಭದ್ರತೆಗಳು ಸಾಲವೆಂದೇ ಕೂಗುತ್ತಿರುವರು. ಆದುದರಿಂದ ಬ್ರಿಟಿಷ್ ರಾಜನೀತಿಜ್ಞರು ಹಿಂದೀಯರು ಕೇಳಿದ ಸಂಪೂರ್ಣ ಪ್ರಜಾ ಜವಾಬ್ದಾರಿ ಸರಕಾರವನ್ನಾಗಲೀ, ಸ್ವಾತಂತ್ರ್ಯವನ್ನಾಗಲೀ ಕೊಡಲು ಒಪ್ಪಲಿಲ್ಲ. ಬ್ರಿಟಿಷರ ಹಿತವನ್ನು ಕಾಯುತ್ತಾ, ಇಂಡಿಯಕ್ಕೆ ಎಷ್ಟು ಮಟ್ಟಿಗೆ ಸುಧಾರಣೆಗಳನ್ನು ಕೊಡಬಹುದೋ ಅಷ್ಟನ್ನು ಮಾತ್ರ ಕೊಡಲು ಸಿದ್ಧರಿರುವರು. ಇದರಿಂದ ಹಿಂದೀಯರಿಗೂ ಒಂದು ವಿಷಯವು ಚೆನ್ನಾಗಿ ಬೆಳಕಾಗುತ್ತದೆ. ಬ್ರಿಟಿಷರು ಇಂಡಿಯವನ್ನು ಆಳುವುದು ಬ್ರಿಟಿಷರ ಹಿತದ ದೃಷ್ಟಿಯಿಂದಲ್ಲದೆ, ಹಿಂದೀಯರ ಹಿತದ ಅಪೇಕ್ಷೆಯಿಂದಲ್ಲ. ಇದು ನಿಜವಾದರೆ ಬ್ರಿಟಿಷರ ನಿರ್ಧಾರದಲ್ಲಿ ಅನ್ಯಾಯವೇನೂ ಇಲ್ಲವೆನ್ನಬೇಕು.

ಇಂಡಿಯಾದ ಹಿತದ ದೃಷ್ಟಿಯಿಂದ ನೋಡುವುದಾದರೆ, ಈ ಆಕ್ಟಿನಿಂದ ಹಿಂದೂ ದೇಶದ ರಾಜಕೀಯ ಪರಿಸ್ಥಿತಿಯು ಅಂದುಕೊಂಡಷ್ಟು ಅಭಿವೃದ್ಧಿಗೊಳ್ಳುವುದಿಲ್ಲ. ವೈಸರಾಯರಿಗೂ, ಪ್ರಾಂತೀಯ ಗವರ್ನರುಗಳಿಗೂ ಈ ಹೊಸದಲ್ಲದಕ್ಕಿಂತ ಹೆಚ್ಚಿನ ಅಧಿಕಾರ ಕೊಡುವ, ಮತ್ತು ಸರಕಾರದ ಅನುಮತಿಯಲ್ಲಿ ಶೇಕಡ ೮೦ ರಷ್ಟು ಮೇಲೆ ಅಧಿಕಾರ ಜನರ ಪ್ರತಿನಿಧಿಗಳಿಗೆ ಇಲ್ಲದಿರುವ, ಕೆಲವು ಪ್ರಾಂತ್ಯಗಳಿಗೆ ಬಹು ಅಧಿಕ್ಯದ ಹಕ್ಕು ಕೊಡುವ... [illegible]

[illegible]

ಇಟಲಿ - ಅಬಿಸೀನಿಯಾ ಸಮಸ್ಯೆ.

ಇಟಲಿಗೂ, ಅಬಿಸೀನಿಯಕ್ಕೂ ಉಂಟಾಗಿರುವ ವಿವಾದವನ್ನು ತೀರ್ಮಾನಿಸಲು ಜನಾಂಗಗಳ ಕೂಟವು ಕಳೆದ ತಿಂಗಳ ಅಖೈರಿನಲ್ಲಿ ಸೇರಬೇಕಾಗಿತ್ತು. ಆದರೆ, ಮೊದಲೊಮ್ಮೆ ಅಬಿಸೀನಿಯಾದವರೊಡನೆ ರಾಜಿ ಸಂಧಾನಗಳನ್ನು ನಡಿಸಲು ತಿರಸ್ಕರಿಸಿದ್ದ ಇಟಲಿಯ ಸರಕಾರು ಒಂದು ತಿಂಗಳ ವರೆಗೆ ಬಹು ತೀವ್ರದಿಂದ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದು, ಈಗ ಪುನಃ ರಾಜಿ ಸಂಧಾನಗಳನ್ನು ನಡಿಸಲು ಒಪ್ಪಿಕೊಂಡಿದೆ. ಈ ಒಪ್ಪಿಗೆಗೆ ಕಾರಣವೇನೆಂದು ಊಹಿಸುವುದು ಕಷ್ಟವಾಗಿದೆ. ಅಬಿಸೀನಿಯದಲ್ಲಿ ಈಗ ಯುದ್ಧ ಮಾಡುವುದು ಅತೀ ಕಷ್ಟಕರವೆಂದು ಇಟಲಿಗೆ ಮನವರಿಕೆಯಾಗಿರಬಹುದೇ? ಅಥವಾ ಅಬಿಸೀನಿಯಾಕ್ಕೆ ಕಪ್ಪು ಜನಾಂಗ ಕಾದ ಜಪಾನ್, ಇಂಡಿಯಾ, ಆಫ್ರಿಕ ಮುಂತಾದವರೆಲ್ಲರ ಬೆಂಬಲ, ಬಿಳೀ ಜನಾಂಗಗಳಾದ ಬ್ರಿಟಿಷ್, ಜರ್ಮನ್ ಮೊದಲಾದವರ ಸಹಾನುಭೂತಿ ಇದೆಯೆಂದು ಈಗ ಇಟಲಿಗೆ ವಿಷದವಾಗಿರಬಹುದೇ? ಇವೆರಡು ನಿಜವಾಗಿದ್ದರೆ, ಅಬಿಸೀನಿಯಾವನ್ನು ಯುದ್ಧದ ಹೆದರಿಕೆಯಿಂದ ಹೆದರಿಸಿ, ತನ್ನ ಕಾರ್ಯ ಸಾಧನೆ ಮಾಡಿಕೊಳ್ಳಬಾರದೆ ಇಟಲಿಯು ಪುನಃ ರಾಜಿ ಸಂಧಾನಕ್ಕೆ ಇಳಿದಿರಬಹುದೇ? ಇದಲ್ಲದಿದ್ದರೆ ಇಟಲಿಗೆ ಯುದ್ಧದ ತಯಾರಿಗೆ ಇನ್ನೂ ಸಮಯ ಬೇಕಾಗಿರಬಹುದು; ಯುದ್ಧ ಪ್ರಾರಂಭಿಸಲು ಇದು ತಕ್ಕ ಸಮಯವಲ್ಲದಿರಬಹುದು. ಆದುದರಿಂದ ತನಗೆ ಬೇಕಾದ ಸಮಯ ಪಡೆಯಲು ರಾಜಿ ಮಾತುಗಳನ್ನಾಡುತ್ತಾ ಕಾಲ ಸಾಗಿಸುವ ಉಪಾಯ ಮಾಡಿರಬಹುದೆ?

ಹೇಗೂ ಇಟಲಿಯು ರಾಜಿ ಸಂಧಾನಕ್ಕೆ ಒಪ್ಪಿದ್ದರಿಂದ ಜನಾಂಗಗಳ ಕೂಟವು ಈಗ ಮುಂದಿನ ದಿವಸಕ್ಕೆ ಈ ತಾ. 25ರ ವರೆಗೆ ರಾಜಿನಿಯಮಗಳ ಕಾಯ್ದಿರುವರು. ಈ ರಾಜಿ ಸಂಧಾನ ನಡಿಸಲು ಬ್ರಿಟಿಷ್ ಮತ್ತು ಫ್ರಾನ್ಸಿನ ಪ್ರತಿನಿಧಿಗಳು ನೇಮಿಸಲ್ಪಟ್ಟಿರುವರು. ಈ ಸಂಧಾನವು ಈ ತಾ. 15 ರಲ್ಲಿ ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸಿನಲ್ಲಿ ಪ್ರಾರಂಭವಾಗಿದೆ. ಅಲ್ಲಿ ಈಗ ಬ್ರಿಟಿಷ್, ಫ್ರೆಂಚ್ ಮತ್ತು ಇಟಲಿಯ ಪ್ರತಿನಿಧಿಗಳು ಈ ಸಮಸ್ಯೆಯನ್ನು ಕುರಿತು ಚರ್ಚೆ ನಡಿಸುತ್ತಿರುವರು.

ಈ ಮಧ್ಯೆ ಅಬಿಸೀನಿಯಾದ ಚಕ್ರವರ್ತಿಯವರು ಇಟಲಿಯವರಿಗೆ ಒಂದು ಸೂಚನೆಯನ್ನು ಮಾಡಿದರು. ಅದೇನೆಂದರೆ—'ಅಬಿಸೀನಿಯಾ ದೇಶವನ್ನು ಅಭಿವೃದ್ಧಿಗೊಳಿಸಲಿಕ್ಕೂ, ನಾಗರೀಕತೆಯ ಕೆಲಸವನ್ನು ಮುಂದುವರಿಸಲಿಕ್ಕೂ, ಅಲ್ಲಿಯ ಸರಕಾರಕ್ಕೆ ಸಾಲ ತೆಗೆಯಬೇಕಾಗಿದೆ; ಅಲ್ಲದೆ ಆ ದೇಶದ ವ್ಯಾಪಾರವನ್ನು ಹೆಚ್ಚಿಸಿ, ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸಲು ಒಂದು ಬಂದರು ಬೇಕಾಗಿದೆ. ಇವೆರಡು ಸಂಗತಿಗಳನ್ನು ಸಲ್ಲಿಸುವ ಪಕ್ಷದಲ್ಲಿ ಒಗಾಡೆನ್ ಎಂಬ ಪ್ರಾಂತ್ಯದ ಒಂದು ಭಾಗವನ್ನು, ತಕ್ಕಷ್ಟು ವಿರೋಧವಾದರೂ, ಬಿಟ್ಟುಕೊಡಬಹುದು. ಆದರೆ ತುಂಬಾ ವಿವರಗಳನ್ನು ಚರ್ಚಿಸಬೇಕಷ್ಟೆ.'

ಈ ಸೂಚನೆಯು ಒಪ್ಪತಕ್ಕದಲ್ಲವೆಂತ ಇಟಲಿಯವರ ಅಭಿಪ್ರಾಯವೆಂದು ವರ್ತಮಾನ.

ಪ್ಯಾರಿಸಿನಲ್ಲಿ ರಾಜಿಸಂಧಾನಗಳು ನಡೆಯುತ್ತಿದ್ದರೂ, ಇಟಲಿ ಮತ್ತು ಅಬಿಸೀನಿಯಾದಲ್ಲಿ ಯುದ್ಧದ ಸಿದ್ಧತೆಯು ಎಡೆಬಿಡದೆ ನಡೆಯುತ್ತಿದೆ. ರಾಜಿಯ ಪ್ರಯತ್ನಗಳಿಂದ ಪ್ರಯೋಜನವಾಗಲಾರದೆಂದೂ, ಯುದ್ಧವಾಗದೆ ಈ ವಿವಾದವು ಅಂತ್ಯವಾಗಲಿಕ್ಕಿಲ್ಲವೆಂದೂ ಇಟಲಿಯವರ ಭಾವನೆ ಇರುವಂತೆ ಕಂಡುಬರುತ್ತದೆ. ಆದುದರಿಂದ ಕಪ್ಪು ಜನಾಂಗವಾದ ಅಬಿಸೀನಿಯನ್ನು ಸುಲಭವಾಗಿ ತಮ್ಮ ವಿಮಾನ ಪಡೆಯ ಸಹಾಯದಿಂದ ಗೆಲ್ಲಬಹುದೆಂದು ಮುಸೊಲಿನಿಯವರು ಅವರ ಸೈನಿಕರಲ್ಲಿ ಹುರಿದುಂಬಿಸುತ್ತಿರುವರು.

ಆದರೆ ಜ್ವರದ ಪೀಡೆಯನ್ನು ಸಹಿಸಲಾರದೆ ಸುಮಾರು 3700 ಇಟಲಿ ಸೈನಿಕರು ಆಫ್ರಿಕದಿಂದ ಇಟಲಿಗೆ ವಾಪಸು ಬಂದಿರುವರು. ಅವರ ಚಿಕಿತ್ಸೆಯು ಇಟೆಲಿಯ ಆಸ್ಪತ್ರೆಗಳಲ್ಲಿ ಬಹು ಗುಪ್ತರೀತಿಯಿಂದ ನಡೆಯುತ್ತಿದೆ ಎಂದು ನೇಪಲ್ಸಿನಿಂದ ವಾರ್ತೆ ಬಂದಿದೆ. ಇದೂ ಅಲ್ಲದೆ ಅಬಿಸೀನಿಯಕ್ಕೆ ಹೋಗಲು ಹುಕುಂ ಆಗಿದ್ದ ಇಟಲಿಯ ವಿಮಾನ ಸೈನಿಕರಲ್ಲಿ ಕೆಲವು ಸಿಪಾಯಿಗಳು ತಪ್ಪಿಸಿಕೊಂಡು, 'ಆಲ್ಪ್ಸ್' ಪರ್ವತವನ್ನು ದಾಟಿ, ಇಟಲಿ ಭಾಷೆಯನ್ನಾಡುವ ಟಿಸಿನೋ ಎಂಬ ಸ್ವಿಟ್ಸರ್ಲ್ಯಾಂಡ್ ಪ್ರಾಂತ್ಯಕ್ಕೆ ಹೋಗಿ ಅಲ್ಲಿ ಅಡಗಿಕೊಳ್ಳುತ್ತಿದ್ದಾರಂತೆ. ಈ ಸಂಗತಿಗಳು ಇಟಲಿಯವರ ಉತ್ಸಾಹವನ್ನು ಕುಗ್ಗಿಸದೆ ಇರದು.

ಇನ್ನೊಂದು ಕಡೆ ಅಬಿಸೀನಿಯಾದ ಸೈನ್ಯಕ್ಕೆ ಸೇರಲು ಬ್ರಿಟನ್, ಜರ್ಮನಿ, ಪೋಲೆಂಡ್, ಸ್ವೀಡನ್, ಜೆಕೋಸ್ಲೊವಾಕ್ಯ ಮುಂತಾದ ದೇಶಗಳಿಂದ ಸಾವಿರಗಟ್ಟಲೆ ಅಪ್ಲಿಕೇಶನುಗಳು ಬರುತ್ತಿವೆಯಂತೆ. ಗೋಲ್ಡ್ ಕೋಸ್ಟಿನ ರೆಸಿಡೆಂಟರು 10,000 ಸಿಪಾಯಿಗಳನ್ನು ಕೊಡಲು ಸೂಚಿಸಿರುವರು. ಆದರೆ ಅಬಿಸೀನಿಯಾದ ಚಕ್ರವರ್ತಿಗಳು ಈ ಅಪ್ಲಿಕೇಶನುಗಳನ್ನು ಅಂಗೀಕರಿಸುತ್ತಿಲ್ಲ.

'ರಾಜಿ ಸಂಧಾನಗಳು ನಡೆಯುತ್ತಿರುವ ಹಾಗೆಯೇ ಇಟಲಿಯವರು ತಮ್ಮ ಸೇನೆಯ ಪಡೆಗಳನ್ನು ಪೂರ್ವ ಆಫ್ರಿಕಕ್ಕೆ ಕಳುಹಿಸುತ್ತಲೇ ಇದ್ದಾರೆ. ಯುದ್ಧದ ಅಪಾಯವು ದಿನೇ ದಿನೇ ಹೆಚ್ಚುತ್ತಿದೆ. ಆದರೂ ಜನಾಂಗಗಳ ಕೂಟವೂ, ಬ್ರಿಟನ್ ಮತ್ತು ಫ್ರಾನ್ಸೂ ರಾಜಿಮಾಡಿಸ್ಯಾವೆಂದು ನೆನಸುತ್ತೇವೆ. ಶಾಂತಿಯ ಪ್ರಯತ್ನಗಳು ಮುರಿದು ಹೋಗಿ, ಸೈನಿಕ ಶಕ್ತಿಯು ಪ್ರಬಲವಾದರೆ, ಅಬಿಸೀನಿಯವು ಎಲ್ಲಾ, ಚಕ್ರವರ್ತಿಯ ಮುಂದಾಳುತನದಲ್ಲಿ ದೇಶವನ್ನು ಕಡೇ ಮನುಷ್ಯನ ವರೆಗೂ ಕಾಪಾಡುವುದು' ಎಂದು ಅಬಿಸೀನಿಯಾದ ಚಕ್ರವರ್ತಿಯವರಾದ ಹೈಲಿಸೆಲಾಸ್ಸಿಯವರು ಈ ತಾ 12 ರಲ್ಲಿ ಭಾಷಣ ಮಾಡಿದರು.

ದೂರದ ಬೆಟ್ಟ ನುಣ್ಣಗೆ.

ಹೀಗಿದೆ ಇಂದಿನ ಅಮೇರಿಕ!

ದೂರದ ಬೆಟ್ಟ ನುಣ್ಣಗೆ ಎಂಬ ಗಾದೆಯಂತೆ ನಾವು ಅಮೇರಿಕವೆಂದರೆ ಸ್ವರ್ಗ ಬೀಡು ಎಂದು ನಂಬಿರುವೆವು. ಆದರೆ ಇಂದಿನ ಅಮೇರಿಕದ ಚಿತ್ರವನ್ನು ನೋಡಿರಿ!— (1) ಹತ್ತು ಮಿಲ್ಲಿಯ ಜನರು ನಿರುದ್ಯೋಗಿಗಳಾಗಿರುವರು. (2) ಇಪ್ಪತ್ತು ಮಿಲ್ಲಿಯ ಜನರು ಸರಕಾರದಿಂದ ಧರ್ಮದ ಅನ್ನ ತಿನ್ನುವರು. (3) 30 ಕೋಟಿ ಡಾಲರು ಸರಕಾರದ ಸಾಲ. (4) ಕಟ್ಟಡಗಳನ್ನು ಕಟ್ಟಿಸುವ ಕಾಮಗಾರಿಗಳು ಕಡಿಮೆಯಾಗುತ್ತಿವೆ. (5) ಅನೇಕ ರೈಲು ಕಂಪೆನಿಗಳು ದಿವಾಳಿಯಾಗಿವೆ. (6) ಬ್ಯಾಂಕುಗಳಲ್ಲಿ ಹಣ ಹೆಚ್ಚು, ಕೊಂಡು ಕೊಳ್ಳುವವರು ಕಡಿಮೆ (7) ಕರಿಗೆಡಾರರ ಕ್ರಾಂತಿಗಳು ಹೆಚ್ಚುತ್ತಿವೆ. (8) ಮಜೂರರ ಮುಷ್ಕರಗಳು ಮೇರೆ ಮೀರಿವೆ (9) ಜೀವನದ ವೆಚ್ಚ ಹೆಚ್ಚುತ್ತಿದೆಯೆಂದು ಜನರು ಗೋಳಾಗುತ್ತಿದ್ದಾರೆ. (10) ಬೆಳೆ ತುಂಬಾ ನಾಶವಾಗುತ್ತಿದೆ (11) ಉತ್ಪನ್ನ ಕಾರ್ಖಾನೆಗಳು ಅರ್ಧ ದಿನ ಮಾತ್ರ ಕೆಲಸ ಮಾಡುತ್ತಿವೆ. (12) ರೈತರುಗಳ ಲಾಭವು ಕಡಿಮೆಯಾಗುತ್ತಿವೆ. (13) ಸಾಮಾನ್ಯ ವ್ಯಾಪಾರವೂ ಅಧೋಗತಿಗಿಳಿದಿದೆ!

ಯುದ್ಧದ ಪರಿಣಾಮ.

ಅದರೊ ಯುದ್ಧದ ತಯಾರಿ!

ಯುದ್ಧವೆಂದರೆ ಕೇಳಲಿಕ್ಕೆ ಬಹು ಸೊಗಸು. ಪ್ರತ್ಯಕ್ಷ ಅದರ ದುಷ್ಪರಿಣಾಮವನ್ನು ಅನುಭವಿಸಿದವರಿಗೆ ಅದು ಎಂಥ ಅಪಾಯಕರವೆಂಬುದು ಗೊತ್ತಾಗುತ್ತದೆ. ಮಹಾ ಯುದ್ಧವು ಕಳೆದು ಇನ್ನೂ ಕಾಲು ಶತಮಾನ ಸಹ ಕಳೆದಿಲ್ಲ. ಇಷ್ಟರಲ್ಲೇ ಅಲ್ಲಲ್ಲಿ ಪ್ರಚಂಡ ಯುದ್ಧದ ಪೂರ್ವ ಚಿಹ್ನೆಗಳು ಪ್ರಕಟವಾಗುತ್ತಲಿವೆ. ಕಳೆದ ಮಹಾ ಯುದ್ಧದಲ್ಲಾದ ಭಯಂಕರ ಪ್ರಾಣಹಾನಿಯನ್ನು ನೋಡಿದರೆ ಇನ್ನಾಗುವ ಯುದ್ಧಗಳು ಎಷ್ಟು ಭಯಂಕರ ಸ್ವರೂಪದವಾಗಬಹುದೆಂಬುದು ತಿಳಿದುಬರುತ್ತದೆ.

ಮಹಾ ಯುದ್ಧದಲ್ಲಿ ನಾನಾ ದೇಶಗಳ ಸೈನ್ಯವು ಈ ಪ್ರಕಾರವಾಗಿ ಮರಣ ಹೊಂದಿತು.

ಇಂಗ್ಲೆಂಡ್	7,44,000
ಹಿಂದೂಸ್ಥಾನ	64,000
ಫ್ರಾನ್ಸ್	13,20,000
ಜರ್ಮನಿ	20,00,000
ಆಸ್ಟ್ರಿಯಾ - ಹಂಗೇರಿ	1,20,000
ರಷ್ಯಾ	53 50,000
ಇಟಲಿ	7,00,000
ತುರ್ಕಸ್ಥಾನ	5,00 000
ಅಮೇರಿಕಾ	1 60,000
ಬೆಲ್ಜಿಯಂ	40,000
ಬಲ್ಗೇರಿಯಾ	1,00,000
ಜಪಾನ್	5,000
ಉಳಿದ ದೇಶಗಳು	5,11,000

ಆಗಿನದಕ್ಕಿಂತ ಈಗಿನ ಯುದ್ಧೋಪಕರಣ ಕಠಿಣವಾಗಿದೆ. ಯುದ್ಧ ಸಾಮಗ್ರಿಗಳೂ ಮೊದಲಿಗಿಂತ ವಿಶೇಷವಾಗಿ ತೀಕ್ಷ್ಣಗೊಳ್ಳುತ್ತಿವೆ. ಪ್ರಾಣವನ್ನು ಹರಣಮಾಡುವ, ನಗರ ಕೋಟೆಗಳನ್ನು ಉಧ್ವಸ್ತಗೊಳಿಸುವ, ಜನನಿಬಿಡ ಪಟ್ಟಣಗಳನ್ನು ಧ್ವಂಸಮಾಡುವ ಅನೇಕ ನೂತನ ವಿಧಾನಗಳೂ, ಶಿರೋಧಿಗಳೂ ಸಿದ್ಧವಾಗಿವೆ. ಈಗಾಗಲೇ ಜಗತ್ತಿನಲ್ಲೆಲ್ಲ ಆರ್ಥಿಕ ಮುಗ್ಗಟ್ಟಿನ ಹಂಗುರ ಹೊಡೆಯುತ್ತಿದೆ. ಇಂಥ ಕಾಲದಲ್ಲಿ ಯುದ್ಧವಾದರೆ ಅದರ ದುಷ್ಪರಿಣಾಮ ಎಷ್ಟಾದೀತು?

ಭಾವೀ ಭಾರತ ವಿಚಾರ.

—೦೦೦—

ಹೊಸ ಸುಧಾರಣೆಗಳೊಡನೆ ಹೊಸ ವ್ಯಸರಾಯರು.

[illegible]

ವಾಯಿಸ್‌ರಾಯರು ಲಾರ್ಡ್ ಲಿನ್‌ಲಿತ್‌ಗೋ.

[illegible]

ಇದಕ್ಕಾಗಿ ಸಿದ್ಧತೆಗಳು.

[illegible]

ಕೇಂದ್ರ ಸರಕಾರ ವಿಚಾರ.

[illegible]

ಅಖಿಲ ಭಾರತ ಚರಕ ಸಂಘದ

—೦೦೦—

ಹೊಸ ಯೋಜನೆ.

ವರ್ಧಾದಲ್ಲಿರುವ ಅಖಿಲ ಭಾರತ ಚರಕ ಸಂಘದ [illegible] ಈ ಕಾರ್ಯದ ಪ್ರಯೋಗವು ಕಳೆದ 3 ತಿಂಗಳಿಂದ [illegible] ಗ್ರಾಮದಲ್ಲಿ ನಡೆದಿದೆ. ಅಲ್ಲಿ [illegible] ಎಲ್ಲ ನೂಲನ್ನು ಅಲ್ಲಿ [illegible] ಅಲ್ಲಿಯ ಜನರಿಗೆ ಬಟ್ಟೆ [illegible] ಕೊಡುವ ವಿಚಾರವು ನಡೆದಿದೆ. [illegible]

(1) ಯಾರಾದರೂ ತಮ್ಮ [illegible] ಸ್ವಂತ ನೂಲನ್ನು ತಂದು ಕೊಟ್ಟರೆ ಅವನ್ನು 1000 ಗಜಕ್ಕೆ 9ಪೈ ದರದಿಂದ ತೆಗೆದುಕೊಂಡು [illegible] ಬಟ್ಟೆಯನ್ನು [illegible] ಸ್ವಾವಲಂಬನೆಗಾಗಿ [illegible].

(2) ಇನ್ನು ಯಾರಾದರೂ ತಮ್ಮ ಸ್ವಂತ ನೂಲಿನಿಂದ ಬಟ್ಟೆಯನ್ನು [illegible] ಕೇಂದ್ರಕ್ಕೆ [illegible] ನೇಗೆಯ ಕೂಲಿ [illegible] 20 000 ಗಜ ನೂಲನ್ನಾದರೂ [illegible]

ಅ ಭಾ. ಚ. ಸಂ. [illegible]
ತಾ 18—7—35

[illegible]

‘ಯುದ್ಧವನ್ನು ನಿಷೇಧಿಸಿರಿ’

—೦೦೦—

‘ಯುದ್ಧವನ್ನು ನಿಷೇಧಿಸಿರಿ’ ಎಂದು ದೀನಬಂಧು ಆಂಡ್ರೂಜರು ಹಿಂದೀಯರನ್ನು ಪ್ರಾರ್ಥಿಸಿದ್ದಾರೆ. ಆದರೆ ಹಿಂದೀಯರಿಗೆ ಅಧಿಕಾರವಾದರೂ ಏನಿದೆ? ಜನಾಂಗ ಸಂಘದ [illegible] ಭಾಗ್ಯವು ನಮಗಿದೆ. ಅಲ್ಲಿ ಹಿಂದೀಯರಿಗೆ ಸರ್ವತಂತ್ರ ಸ್ವತಂತ್ರ ಸ್ಥಾನವು ಇಲ್ಲ. [illegible]

(ದೀನಬಂಧು ಆಂಡ್ರೂಜರು)

[illegible] ಹಿಂದೀಯರಿಗಿಲ್ಲ. [illegible] ಹಿಂದೀಯರ ಕರ್ತವ್ಯವಾಗಿದೆ. ಹಿಂದೀ ಸರಕಾರದವರೂ ಈ ಕುರಿತು ಅಲಕ್ಷ್ಯವನ್ನು ವಹಿಸುತ್ತಲಿರುವದು [illegible].

ಕನ್ನಡ ಟೈಪ್‌ರೈಟರ್.

—೦೦೦—

ಆವಿಷ್ಕಾರಕರು ಶ್ರೀ ಸಿ. ಪಿ. ಪಡಿಯಾರರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರೂ, ಪ್ರಸಿದ್ಧ ಗ್ರಂಥಕರ್ತರೂ ಆಗಿರುವ ಶ್ರೀ ಸಿ ಪಿ ಪಡಿಯಾರರವರು [illegible] ವರ್ಷಗಳಿಂದಲೂ [illegible] ಕನ್ನಡದಲ್ಲಿ ಟೈಪ್‌ರೈಟರ್ ರಚಿಸಿರುವನ್ನು [illegible]. ಇಂಗ್ಲಿಷ್ ಟೈಪ್‌ರೈಟರಂತೆಯೇ [illegible] 90 ಲಿಪಿಗಳು, 45 ಮೆಟ್ಟಲು (Keys) ಗಳು, [illegible] ಕನ್ನಡ ವಾಙ್ಮಯವು ಸಿದ್ಧವಾಗ [illegible] 200 ಅಕ್ಷರಗಳ [illegible] 90 ಲಿಪಿಗಳಲ್ಲಿಯೇ ಕನ್ನಡ [illegible] ಸಿದ್ಧವಾಗ [illegible] ಕರ್ನಾಟಕದ [illegible] ಶ್ರೀ ಪಡಿಯಾರರ [illegible].

[illegible] ಕರ್ನಾಟಕ [illegible] ಕರ್ನಾಟಕ ಕಾಲೇಜಿನ [illegible] ಪ್ರೊಫೆಸರುಗಳೂ, ಪ್ರಿನ್ಸಿಪಾಲ್ [illegible] ಶ್ರೀ. ಪಡಿಯಾರರ ಕನ್ನಡ ಟೈಪ್‌ರೈಟರಿನ ರಚನೆ [illegible].

ಶ್ರೀ ಪಡಿಯಾರರವರು [illegible] ಯಂತ್ರವನ್ನು [illegible] 5—6 ಸಾವಿರ ರೂಪಾಯಿಗಳು ಬೇಕಾಗುತ್ತವೆ.

ಇಂಗ್ಲಿಷ, [illegible] ಹಿಂದಿ, ಉರ್ದು [illegible] ಟೈಪ್‌ರೈಟರುಗಳಿರುವಾಗ ಕನ್ನಡ [illegible] ಕನ್ನಡ ನಾಡಿಗೆ [illegible] ಕನ್ನಡ ಟೈಪ್‌ರೈಟರಿನ ಯಂತ್ರವನ್ನು [illegible] ಕರ್ನಾಟಕದ [illegible]

‘[illegible]’

ವಿವಿಧ ವಾರ್ತಾವಳಿ.

[illegible]

[illegible] (ಫ್ರಾನ್ಸ್) [illegible]

—೦೦೦—

ಪ್ರಯಾಣದ ಭಕ್ತಿಯೋ, ಭಯವೋ?

ಪಾರ್ಲಿಮೆಂಟು ಸದಸ್ಯರಿಗೆ ಲಂಡನ್ ಪಾರ್ಲಿಮೆಂಟ್ ಗೃಹದಿಂದ [illegible] 70,000 [illegible]

—೦೦೦—

ಜೈಲಿನಿಂದ ಜೈಲಿಗೆ!

ಖಾನ್ ಅಬ್ದುಲ್ ಗಫಾರ್ ಖಾನರ ವರ್ಗಾವಣೆ.

ಖಾನ್ ಅಬ್ದುಲ್ ಗಫಾರ್ ಖಾನರವರು ಈ ತಾ. 10 [illegible]

ಮಹಾತ್ಮರ ಕಾರ್ಯದರ್ಶಿ ಶ್ರೀ ಮಹದೇವ ದೇಸಾಯಿಯವರು ತಾ 10 ರ [illegible]

[illegible]

[illegible]

—೦೦೦—

[illegible]

[illegible]

—೦೦೦—

[illegible]

[illegible] 20 [illegible] 2 0 [illegible]

—೦೦೦—

[illegible]

[illegible] 5 [illegible] 45 [illegible] 150 [illegible]

—೦೦೦—

[illegible]

[illegible] 60 [illegible] 2500 [illegible] 31 [illegible] 31 [illegible]

—೦೦೦—

[illegible]

[illegible] 3 [illegible] 3 [illegible]

—೦೦೦—

[illegible]

[illegible]

—೦೦೦—

ಹಾವಿಗೂ ಮಹಾತ್ಮರನ್ನು ಗೊತ್ತು!

[illegible]

[illegible] 6—7 [illegible] 5 [illegible] 2—3 [illegible]

—೦೦೦—

ಪ್ರಪಂಚದ ರಕ್ಷಕರು ಯಾರು?

ಮಹಾತ್ಮ ಗಾಂಧಿಯವರು.

[illegible] (1) [illegible] (2) [illegible]

—೦೦೦—

Reg. No. M. 1550.   **16—8—1935**

KODAGU

IF NOT *delivered* *please return to* "**KODAGU**" **OFFICE, MERCARA.**

ಕೊಡಗು

ವಾರ್ಷಿಕ ಚಂದಾ ರೂ. ೩—೮—೦.   ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫]   ಮಡಿಕೇರಿ, ಸನ್ ೧೯೩೫ನೇ ಇಸವಿ ಆಗೋಸ್ಟು ತಾರೀಕು ೧೬ನೇ ಶುಕ್ರವಾರ.   [ಸಂಚಿಕೆ ೧೧

By Appointment
T. H. E. The Governor of Madras.

CUPS AND MEDALS.

Telephone: 3145

Telegrams: 'PRECIOUS.'



V. SUBRAMANIA IYER.

Jeweller, & Diamond Merchant,

52—39   2 & 3 Kuppumuthu Street Tiruvateswaranpet. MADRAS. POST BOX 123 TRIPLICANE.

Catalogue & special designs with quotations (free) on enquiry.

THE CANARA BANKING CORPORATION UDIPI, LTD.,

Established 1906.]   [Incorporated in British India

Head office: —UDIPI (S. Kanara.)

Branches:—(1) Udipi (2) Coondapur. (3) Car-Street (Mangalore). (4) Shimoga (Mysore State). (5) Madras (George Town) (6) Bunder (Mangalore). (7) Mercara (North Coorg). (8) Virarajendrapet (South Coorg).

Bankers at:—(1) Bombay. (2) Karachi (3) Calcutta. (4) Mysore. (5) Bangalore. (6) Cochin and other important centres in India and elsewhere

(1)	Authorised issued and Subscribed Capital	Rs	3 50,000
(2)	Paid up Capital	,,	2 69 735
(3)	Reserve and other funds	,,	3 21 326
(4)	Investment on Government securities	,,	6 77,169
(5)	Deposits	,,	25,47 464
(6)	Total working capital exceeds	,,	35,00,000

Rates on deposits:—(1) Fixed—for 1 and 2 years $1\frac{1}{2}$% and 3 and 4 years 5% (2) Savings Bank—$3\frac{1}{2}$% (3) Current—1 and 2%

All kinds of banking business transacted For further particulars please apply to any of our offices

Udipi. 29—7—1935.   52—40   M. Srinivasa Prabhu, Manager.

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

265 ಲಕ್ಷ
7) ಲಕ್ಷ
ರೂ. 16 ಲಕ್ಷ
ರೂ. 31 ಲಕ್ಷ

25%   20%

ಜನರಲ್ ಮೇನೇಜರ್, ಅಜ್ಮೀರ್.

52—11

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	31,397— 0—0
ಜಮೂಬಂದ ಠೇವಣಾತಿ	—	21 C 196—13—7
ವಸೂಲಾದ ಕ್ಷೇಮನಿಧಿ	—	75,248— 12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಲಾಗುತ್ತದೆ.

ಕ್ಷತ್ರಿಯನಿಗೆ ವೈಶ್ಯನ ದುಡ್ಡು ಬ್ರಾಹ್ಮಣನ ತಲೆಯೂ ಮೊದಲಿನಿಂದ ಅಧೀನವಾಗಿ ಸಹಾಯವು ಕೊಟ್ಟಿದೆ. ಕ್ಷತ್ರಿಯನ ರಾಜ್ಯಪ್ರಿಯ ಹಾಡಿಗೆ ಬ್ರಾಹ್ಮಣನ ಬುದ್ಧಿ ಸಲ್ಲುವಿ, ವೈಶ್ಯನ ಧನವು ಅನುಸಲ್ಲುವಿ. ಇಷ್ಟೇ ಅಲ್ಲ ಇತರ ದೇಶಗಳಲ್ಲಿ ಪೋಪರಲ್ಲಿನಿಂದ ಜನಸಮುದಾಯದ ಬಲವನ್ನು ಕ್ಷತ್ರಿಯನು ಸದಾ ಪಡೆಸಿಕೊಂಡಿದ್ದಾನೆ. [illegible]ದಲ್ಲಿ ಅಂಥವನ್ನೆತ್ತುವದು ಕ್ಷತ್ರಿಯನ ತನ್ನ ಬಾಹು ಧರ್ಮವೆಂದು ಭಾವಿಸಿ, ಬೇರೆ [illegible] [illegible]ಗೆ ಅಡ್ಡಿಯಾಗಿ ಪೂರ್ವದಲ್ಲಿ ಕೊಡುತ್ತಿದ್ದಿಲ್ಲ, ಬಡಬರುತ್ತಾ ಅನೂಹೋಯಿತು. ಎಲ್ಲ ಕಡೆಯಲ್ಲಿಯೂ ದೈತನ (ಶೂದ್ರ) ಸಂಖ್ಯಾ ಬಲವೂ ಯುದ್ಧ ಪ್ರಿಯರಿಂದ ಕೆಲಸಕ್ಕೆ ಹಚ್ಚಲ್ಪಟ್ಟಿತು. ಹೆಂಗಸನ್ನು ವಿದ್ಯಾ ವಿಹೀನಳನ್ನಾಗಿ ಮಾಡುವುದರಿಂದಲೂ, ಶೂದ್ರನನ್ನು ವಿದ್ಯಾಧನ ರಹಿತನನ್ನಾಗಿ ಮಾಡೋಣದರಿಂದಲೂ, ಒಂದೇ ಕೆಲಸದಲ್ಲಿ ಹಲ್ಪಟ್ಟ ಇವರಿಬ್ಬರೂ ಯಂತ್ರವತ್ ಧನ ಬಲ ಮಥಾಂಧರ ಸಕಲ ಸತ್ಕಾರ್ಯ ದುಷ್ಕಾರ್ಯಗಳಿಗೂ ಸಹಾಯಕರಾದರು. ಸ್ತ್ರೀ ಶೂದ್ರರಿಬ್ಬರೂ ಕಾಪಿಡಲ್ಪಟ್ಟ ಸ್ಥಿತಿಗತಿಗಳ ಕಾರಣದಿಂದ ತಪ್ಪಿಸಿಕೊಳ್ಳಲಾರದೆ ಅವರಿಗೇ ಮತ್ತು ಸಹಾಯಕರಾದರು. ಇವರ ಅನಿವಾರ್ಯ ಸಹಾನುಭೂತಿ ಸೇವೆಗಳಿಂದ ಬುದ್ಧಿಯ ಹಿಂಸಾತ್ಮಕ ಕುಕರ್ಮಗಳಿಗೆ ನೀರು ಗೊಬ್ಬರ ಸಿಕ್ಕುತ್ತಲೇ ಬಂದಿವೆ. ಸರ್ಕಾರಕ್ಕೆ ಬೇಕಾದಾಗ [illegible]ದ್ದಕ್ಕೆ ಟೊಂಕಕಟ್ಟುವನಿಲ್ಲವೆನ್ನುವರು ನ ಧರ್ಮ? ಅದನ್ನು ಕುರಿತು ತನ್ನ ಅಂತಃಕರಣಾ ಸ್ವತಂತ್ರ[illegible] ಹೇಳುವದು ಸಾಧ್ಯವೋ? [illegible] ಕಾಣದವರಿಗೆ ಶಿಕ್ಷೆಯನ್ನು ಕೊಡಲಿಕ್ಕೆ ಧರ್ಮವಾದ ಶಾಸನವಿದೆ. ಮುಕ್ತಿವನ್ನು ಮಾಡಿದರಾರು? ಈ ಸುದರಾಂಧತೇ ಮಾನವ ಬುದ್ಧಿಯು ಜಗತ್ತಿನಲ್ಲೆಲ್ಲ [illegible] ಪ್ರಚೋದಕ ವಾತಾವರಣವನ್ನೇ ಉಂಟುಮಾಡಿದೆ. ಮೇಲೇನಂದರೆ ಇದರಲ್ಲಿ ಚಳವಳವನ್ನುಂಟು ಮಾಡಲಿಕ್ಕೆ ಪುರಾಣ ಕಥಾನಗಳು, ಶಾಸ್ತ್ರ ವಾದ್ಯಗಳು, ಚರ್ಚ ಮಜೀದಿಗಳು ಕೆತೆಯು ಸದಾ ಸಾಕಷ್ಟು ದೊರೆಯುತ್ತ ಬಂದಿದೆ! ಜಗತ್ತಿಗೆ ಪ್ರಾಯವೇರುತ್ತ ಬಂತು. ಮಾನವನ ಬುದ್ಧಿಯಲ್ಲಿ ಮಾತ್ರ ಯೋಗ್ಯ ಮಾರ್ಪಾಡು ಇನ್ನೂ ಆಗಲಿಲ್ಲ. ಮಾನವನ ತನ್ನ ತನ್ನ ವ್ಯಕ್ತಿ ಕುಕರ್ಮಗಳ ಫಲವನ್ನಾದರೂ ನೋಡಿ, ವಿಮರ್ಶಿಸಿ, ತನ್ನ ಬುದ್ಧಿ ಧನ ಶಕ್ತಿಗಳನ್ನು ಪೋಲುಮಾಡದೇ ಜಗತ್ತಿನ ಕಲ್ಯಾಣಕ್ಕಾಗಿ ಉಪಯೋಗಿಸಬೇಡವೇ?

(ಪ್ರೇಮವಿದ್ಯಾಪೀಠ ಪತ್ರಿಕೋದ್ಯಮ ಶಾಲೆಯಿಂದ.)

---

* (1) ೧೦೩,೦೦೦,೦೦೦ ಜನ ಸಂಖ್ಯೆ.
(2) ೮,೦೦೦ ೦೦೦ „
(3) ೪,೫೫೫,೦೦೦ „
(4) ೪೯,೦೪೬,೦೦೦ „
(5) ೪೯,೫೦೦,೦೦೦ „
(6) ೬,೩೦,೭೦,೦೦ „
(7) ೬೫,೦೦೦,೦೦೦ „
(8) ೧೬೩,೦೦೦,೦೦೦ „

ಒಟ್ಟು ೩೨೯,೩೯೩,೦೦೦ „

ಕುಟುಂಬಕ್ಕೆ ಸರಾಸರಿ ೧೦ ಜನರಂತೆ ಅವರ ಆ ರಾಷ್ಟ್ರಗಳಲ್ಲಿ ಇದ್ದು. ಅದರ ಪ್ರಕಾರ ಕುಟುಂಬಗಳು ೩೨,೯೩,೯೦೦೦ ಮನೆಗಳಾಗುತ್ತಿದ್ದವು. ಯುದ್ಧದಲ್ಲಿ ಹಾಳಾದ ದುಡ್ಡಿನಿಂದ ಇಷ್ಟು ಮನೆಗಳನ್ನು ಕಟ್ಟಬಹುದಾಗಿತ್ತು.

ಮಡಿಕೇರಿ ಮುನ್ಸಿಪಲ್ ಕಮಿಟಿ ಮೀಟಿಂಗು.

ಕಳೆದ ಜೂನ್ ತಾರೀಖು 20ರಲ್ಲು ಮ ರಾ. ಐ ಸಿ. ಸುಬ್ಬಯ್ಯ ಎಂ. ಎ, ಬಿ. ಎಲ್., ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆದ ಮಡಿಕೇರಿ ಮುನ್ಸಿಪಲ್ ಕಮಿಟಿಯ ಮೀಟಿಂಗಿನ ಪ್ರೊಸಿಡಿಂಗ್ಸ್:—

ಹಾಜರಿದ್ದವರು—ಯಗ್ಸಿಕ್ಯೂಟಿವ್ ಇಂಜಿನೀಯರ ಪರ್ಸನಲ್ ಅಸಿಸ್ಟೆಂಟ್, ಸೀನಿಯರ್ ಸಬ್ ಅಸಿಸ್ಟೆಂಟ್ ಸರ್ಜನ್, ಮ. ರಾ. ಗ[illegible] ಕೆ. ಪುಲ್ಲಪ್ಪ ಬಿ. ಎ. ಬಿ. ಎಲ್., ಕೆ. ವೆಂಕಟಗಿರಿರಾವ್ ಬಿ. ಎ., ಎಲ್‌ಎಲ್ ಬಿ., ಎ. ಅಬ್ದುಲ್ ರಹಮಾನ್ ಖಾನ್, ಆರ್. ಫ್ರಾಂಬ್ಜಿ, ಕೆ. ಮಹ್ಮದ್ ಗೌಸ್ ಎಂ. ಎಂ. ಬೆಳ್ಯಪ್ಪ, ಪಿ ಐ. ಬೆಳ್ಯಪ್ಪ, ಎನ್. ಸೋಮಣ್ಣ ಬಿ ಎ., ಬಿ. ಎಲ್, ವಿ. ಎನ್. ನಂಜಪ್ಪಶೆಟ್ಟಿ.

ಗೈರಹಾಜರಾದವರು—ವೈಸ್ ಪ್ರೆಸಿಡೆಂಟರು, ಉತ್ತರ ಕೊಡಗು ಸುಭೇದಾರರು, ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್, ಡಾಕ್ಟರ್ ಎ ಎ. ವಾರುಣ್ಣಿ.

1. ಕಳೆದ ತಾರೀಖು 25ನೇ ಮೇ ಮಾಹೆಯ ಮೀಟಿಂಗಿನ ಫಲಿತಾಂಶವನ್ನು ಅಂಗೀಕರಿಸಲಾಯಿತು.

2. ಮೇ ತಿಂಗಳ ಪ್ಲಸ್ ಮೈನಸ್ ಮೆಮೊ, ಆಡಿಟ್ ರಿಪೋರ್ಟ್, ಓವರ್ಸಿಯರ ಕೆಲಸದ ರಿಪೋರ್ಟ್, ಸಿವಿಲ್ ಸರ್ಜನರ ಸಾನಿಟರಿ ರಿಪೋರ್ಟುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

3. ಸೈಕಲ್, ಗಾಡಿ, ನಾಯಿ ಮತ್ತು ಕುದುರೆಗಳಿಗೆ ಮುನ್ಸಿಪಲ್ ಬಿಲ್ಲೆ ಮತ್ತು ಲೈಸೆನ್ಸ್ ಇಲ್ಲದೆ ಮಡಿಕೇರಿ ಮುನ್ಸಿಪಾಲಿಟಿಯೊಳಗೆ ಓಡಿಯಾಡುತ್ತಿರುವವುಗಳನ್ನು ಹಿಡಿದು ಪ್ರಾಸಿಕ್ಯೂಟ್ ಮಾಡುವ ಹಕ್ಕು ಸಬ್ ಇನ್ಸ್‌ಪೆಕ್ಟರ್ ಕೆ. ಎ. ಕಾರ್ಯಪ್ಪನವರ ಬದಲು ಈಗಿನ ಟೌನ್ ಸಬ್ ಇನ್ಸ್‌ಪೆಕ್ಟರ್ ಕೋದಂಡ ಮಾದಪ್ಪನವರಿಗೆ ಕೊಡಲಾಯಿತು.

4 ಮಡಿಕೇರಿ ವೈಶ್ಯರು ತಮ್ಮ ದೇವಾಲಯಕ್ಕೆ ಪ್ರತ್ಯೇಕ ಪಂಪು ಕೊಡಬೇಕೆಂದು ಬರೆದಂಥ ಅರ್ಜಿಯನ್ನು ಓದಿ ಸದರಿ ದೇವಾಲಯದ ಬಾಗಿಲು [illegible] ಒಂದು ಪಂಪು ಇರುವ ಕಾರಣ [illegible] ಕೊಡಲಾಗುವುದಿಲ್ಲವೆಂದು ತೀರ್ಮಾನವಾಯಿತು.

5. ಮಡಿಕೇರಿ ಬ್ಲಾಕ್ ನಂ 11ರಲ್ಲಿರುವ ಅಂದರೆ ಹಳೇ [illegible] ಜಾಗ ಮಾರಾಟವನ್ನು ಪೂರೈಕೆಯ ಹಣ ಕೊಡದ ಕಾರಣ ಖಾಯಂ ಮಾಡಲಿಲ್ಲ.

6 ಮುನ್ಸಿಪಾಲಿಟಿ ಉಪಯೋಗಕ್ಕೋಸ್ಕರ ತಯಾರಿಸಿದ ಡ್ರಾಫ್ಟ್ ಶೆಡ್ಯೂಲ್ ಆಫ್ ರೇಟ್ಸನ್ನು ಎಗ್ಸಿಕ್ಯೂಟಿವ್ ಇಂಜಿನೀಯರವರಿಗೆ ಕಳುಹಿಸುವಂತೆ ನಿಶ್ಚಯವಾಯಿತು.

7. ಹಾಲು, ಬೆಣ್ಣೆ, ತುಪ್ಪ [illegible] ಮೊದಲಾದವುಗಳನ್ನು ಕೆಡಿಸಿ ಮಾರತಕ್ಕದ್ದನ್ನು ನಿಲ್ಲಿಸಲು ಮಾಡಿದ ಡ್ರಾಫ್ಟ್ ರೂಲ್ಸುಗಳನ್ನು ಮ. ರಾ. ಗಳಾದ ಕೆ ವೆಂಕಟಗಿರಿರಾವ್, ವಿ ಎನ್. ನಂಜಪ್ಪಶೆಟ್ಟಿ ಮತ್ತು ಡಾಕ್ಟರ್ ಸಿ ಬಿ. ಅಚ್ಚಯ್ಯನವರುಗಳು ನೋಡಿ ತಾರೀಖ 15ನೇ [illegible] ರಿಪೋರ್ಟ್ ಮಾಡಬೇಕಾಗಿ ನಿಶ್ಚಯಿಸಿದರು.

8. ಮಡಿಕೇರಿ ಮುನ್ಸಿಪಾಲಿಟಿಗೆ ಸಂಬಂಧಪಟ್ಟ ಕಟ್ಟಡಗಳ ಮತ್ತು ಸ್ಥಳ ಬಾಡಿಗೆಗಳನ್ನು ಏಲಂಹಾಕಬೇಕೆಂಬ ರಿಪೋರ್ಟನ್ನು ಓದಿ, ಬಡಗಿ ಸ್ಕೂಲಿನಲ್ಲಿರುವ ಕೋಣೆಗಳ ಬಾಡಿಗೆಯನ್ನು ಮಾಹೆಯಾನ 4—0—0 ರೂ. ಇದ್ದದನ್ನು 3—0—0 ರೂ ಗೆ ಇಳಿಸಿದರು. ಮತ್ತು ಇತರ ಬಾಡಿಗೆಗಳೆಲ್ಲಾ ಮೊದಲಿದ್ದಂತೆ ಈ ವರ್ಷವೂ ಇರಲೆಂದು ನಿಶ್ಚಯಿಸಿ ಇದನ್ನು 1936ನೇ ಫೆಬ್ರವರಿಯಲ್ಲಿ ಪುನಃ ತೀರ್ಮಾನಕ್ಕೆ ಬಿಟ್ಟರು.

9. ಮಡಿಕೇರಿ ಮುನ್ಸಿಪಾಲಿಟಿಯೊಳಗೆ ಕುಷ್ಟರೋಗಕ್ಕೆ ಕುರಿ ಮತ್ತು ಆಡುಗಳನ್ನು [illegible] ಮೊದಲು ವೆಟರಿನರಿ ಅಸಿಸ್ಟೆಂಟ್ ಸರ್ಜನರು ಪರೀಕ್ಷಿಸಬೇಕು [illegible] ಸರ್ಟಿಫಿಕೇಟ್ [illegible] ಮಾರಲು [illegible] ಮಾಡತಕ್ಕ ವೆಟರಿನರಿ [illegible] ಮಾಹೆಯಾನ 15 ರೂ. ಎಲೋವೆನ್ಸ್ ಕೊಡ[illegible] ಪತ್ರವನ್ನು ಓದಿದರು.

ಇದಕ್ಕೆ ಮಾಹೆಯಾನ 15 ರೂ. [illegible] ಕೊಡಲು ಸಾಧ್ಯವಿಲ್ಲವೆಂದೂ, ವೆಟರಿನರಿ ಅಸಿಸ್ಟೆಂಟ್ ಸರ್ಜನರು ಮುಫತ್ತಾಗಿ ಮಾಡಬೇಕೆಂದು ನಿಶ್ಚಯಿಸಿದರು.

10. ಮಹಾದೇವಪೇಟೆ ರಸ್ತೆಗೆ ತಾರು ಹಾಕಲು 895 ರೂ ಮತ್ತು ಪೌಂಡ್ರಿ ಕೆರೆ ಸುತ್ತಲಿನ ಬೇಲಿ ಹಾಕಲು 125 ರೂ. ಗಳನ್ನು ಮಂಜೂರು ಮಾಡಿದರು.

11. ಮಡಿಕೇರಿ ಮುನ್ಸಿಪಾಲಿಟಿ ಮಾರ್ಕೆಟ್ಟುಗಳಿಗೆ ಕೋಟು, ಕೊಡೆ ಮತ್ತು ಕಂಬಳಿಗಳನ್ನು ಕೊಡಬೇಕೆಂದು ನಿಶ್ಚಯಿಸಿದರು. ಇವುಗಳನ್ನು ಸಪ್ಲೆ ಮಾಡಲು ಬಂದ ಟೆಂಡರುಗಳನ್ನು ಓದಿ ಕೋಟುಗಳನ್ನು ಸಪ್ಲೆ ಮಾಡಲು ಎನ್. ಕೆ. ಅಪ್ಪಣ್ಣನವರಿಗೂ, ಕೊಡೆ ಮತ್ತು ಕಂಬಳಿಗಳನ್ನು ಸಪ್ಲೆ ಮಾಡಲು ಕೆ ಎ. ಮಹಮ್ಮದ್ ಹುಸೇನ್‌ರವರಿಗೂ ಕೊಡುವಂತೆ ನಿಶ್ಚಯಿಸಿದರು.

12 ಟಿ ಎ ಎನ್. ಮಾದಪ್ಪನವರ ಪೆನ್‌ಶನ್ ಪೇಪರ್‌ಗಳನ್ನು ಓದಿ ಮಾಹೆಯಾನ ಮುನ್ಸಿಪಾಲಿಟಿಯಿಂದ ರೂ. 20—8—0 ನ್ನು ಕೊಡುವಂತೆ ನಿಶ್ಚಯಿಸಿ, ಇದಕ್ಕೆ ಚೀಫ್ ಕಮಿಷನರವರ ಅನುಮತಿಯನ್ನು ಪಡೆಯುವಂತೆ ನಿಶ್ಚಯಿಸಿದರು.

13 ದೇವಾಂಗದ ಸಂಣಪ್ಪನು ಮನೆ ಜಮೀನು ವರ್ಗದ ವಿಚಾರ ಬರೆಕೊಂಡ ಅಪೀಲ್ ಅರ್ಜಿಯನ್ನು ಬರುವ ಮೀಟಿಂಗಿನಲ್ಲಿ ಚರ್ಚಿಸುವಂತೆ ನಿಶ್ಚಯಿಸಿದರು

14 ಪೋಸ್ಟಾಫೀಸಿನ ಪಂಪುಗಳನ್ನು ತೆಗೆದು ಬೇರೆ ಎರಡು ಪಂಪುಗಳನ್ನು ಹಾಕಬೇಕೆಂದು ಎಗ್ಸಿಕ್ಯೂಟಿವ್ ಇಂಜಿನಿಯರರವರು ಬರೆದುದನ್ನು ಮಂಜೂರು ಮಾಡಲಾಯಿತು

15. ಎಂ ಅಣ್ಣಿರಾವರು ತನ್ನ ಮನೆಗೆ ಒಂದು ಸ್ವಂತ ಪಂಪು ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ಮಂಜೂರು ಮಾಡಿದರು.

16. ಪ್ಲ್ಯಾನ್ ಬಾಯಿ ಖಾನಿಗೆ ಕೊಟ್ಟ ಜಾಗವನ್ನು ಬಿಡಾ ಮಾಡಿದ ವಿಷಯವನ್ನು ಬರುವ ಮೀಟಿಂಗಿನಲ್ಲಿ ಚರ್ಚಿಸುವಂತೆ ನಿಶ್ಚಯಿಸಿದರು.

17 ಯ. ಡಿ. ಸೋಮಪ್ಪ ಶೆಟ್ಟಿಗೆ ಸಲ್ಲತಕ್ಕ ಕಂಪಾನ್ಸೇಟರಿ ಪೆನ್‌ಶನ್‌ನನ್ನು ಪೂರಾ ಮುನ್ಸಿಪಾಲಿಟಿಯಿಂದಲೇ ಕೊಡಬೇಕೆಂದು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಬರೆದುದ್ದನ್ನು ಓದಿ ನೋಡಿ ಸಲ್ಲತಕ್ಕ ಪೆನ್‌ಶನ್ನಿನ ಶೇಕಡ 50 ರೂ. ಯನ್ನು ಮಾತ್ರ ಮುನ್ಸಿಪಾಲಿಟಿಯಿಂದ ಕೊಡಬಹುದೆಂದು ಬಾಕಿಯನ್ನು ಡಿಸ್ಟ್ರಿಕ್ಟ್ ಬೋರ್ಡು ಕೊಡಬೇಕೆಂದೂ ನಿಶ್ಚಯಿಸಿದರು.

18. ಕ್ವೆಟ್ಟಾ ಭೂಕಂಪ ರಿಲೀಫ್ ಫಂಡಿಗೆ 100 ರೂಪಾಯಿ ಕೊಡಬೇಕೆಂದು ಪ್ರೆಸಿಡೆಂಟರು ತಂದ ಠರಾವನ್ನು ಸರ್ವಸಮ್ಮತದಿಂದ ಅಂಗೀಕರಿಸಿ ಮುನ್ಸಿಪಾಲಿಟಿಯಿಂದ 100 ರೂ. ಯನ್ನು ಕೊಡುವಂತೆ ನಿಶ್ಚಯಿಸಿದರು.

23—6—'35

ಐ ಸಿ. ಸುಬ್ಬಯ್ಯ
ಪ್ರೆಸಿಡೆಂಟ್.

ವಿವಿಧ ವಾರ್ತಾವಳಿ.

ನಿಮ್ಮದೇನು ನಮ್ಮದು ನೋಡಿ!

ಅಬ್ಸೀನಿಯಾದವರಿಗೆ ಇಟಲಿಯವರ ಶಕ್ತಿಯ ಪ್ರದರ್ಶನ!

ಇಟಲಿ—ಅಬ್ಸೀನಿಯಾ ಯುದ್ಧವಾದರೆ ಅಬ್ಸೀನಿಯಾ ನಮ್ಮ [illegible] ಮುಷ್ಟಿಯಲ್ಲಿ ಹಿಡಿದು ಹಿಂಡಿಬಿಡುವೆವೆಂಬುದನ್ನು ಖಚಿತಪಡಿಸಲು ಇಟಲಿಯವರು ತಮ್ಮ ಮಿಲಿಟರಿ ಶಕ್ತಿಯ ಪ್ರದರ್ಶನವೊಂದನ್ನು ನಡೆಸಿದರು. ಅಬ್ಸೀನಿಯಾ ಗಡಿಯಲ್ಲೇ ಈ ಪ್ರದರ್ಶನ! ಅಬ್ಸೀನಿಯಾ ಅಧಿಕಾರಿಗಳೂ ಸೈನಿಕರೂ ಇದನ್ನು ಚೆನ್ನಾಗಿ ನೋಡಿದರು.

ಇಟಲಿಯ ಸೈನಿಕರು ನೂರು ವಿಮಾನಗಳು ಆಕಾಶಕ್ಕೇರಿ ಅಲ್ಲಿಂದ ಬಾಂಬನ್ನು ಎಸೆಯುವುದು! ಬಂದೂಕಗಳಿಂದ ಗುಂಡು [illegible] ಚಮತ್ಕಾರವನ್ನು ತೋರಿದುವು! [illegible] ಓಡುವು! ವೇಗವನ್ನು ತೋರಿದುವು.

ಇಟಲಿಯು ಅಬ್ಸೀನಿಯಾದ ಬಳಿ ಕಳುಹಿಸಿದ ತನ್ನ ಸೈನ್ಯಕ್ಕಾಗಿ ಯುಗೋಸ್ಲೇವಿಯಾದಿಂದ ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಿದೆ. ಇದರಿಂದ ಗುಪ್ತಾಟ ಮಾಡುವವರಿಗೆ ಲಾಭ! ಯುಗೋಸ್ಲೇವಿಯಾದಲ್ಲಿ ಆಹಾರ ಸಾಮಗ್ರಿಗಳ ವ್ಯಾಪಾರ ಜೋರಾಗಿದೆ.

ಜರ್ಮನಿಯಲ್ಲಿ ಹಿಟ್ಲರನೇ ಮಹಾ ದೇವತಾ.

'ಹಿಟ್ಲರನನ್ನು ದೇವರ ಸ್ಥಾನದಲ್ಲಿರಿಸಲಾರೆನು'

ಕಾರ್ಲ್ ಬಾರ್ತರು [illegible] ಪ್ರಖ್ಯಾತಿಪಟ್ಟ ವೇದವಿದ್ಯಾ ಪಂಡಿತರು. ಇವರು ಬೋನ್ ವಿಶ್ವವಿದ್ಯಾಶಾಲೆಯಲ್ಲಿ ಪ್ರೊಫೆಸರರಾಗಿದ್ದಾರೆ. ಇವರು ಹಿಟ್ಲರಿಗೆ ಸಲ್ಲತಕ್ಕ ರಾಜನಿಷ್ಠೆಯ ಪ್ರಮಾಣ ಮಾಡಲು ನಿರಾಕರಿಸಿದುದರಿಂದ ಇವರನ್ನು ಕೆಲಸದಿಂದ ನಿವೃತ್ತಿ ಮಾಡಿ [illegible] ಕಟ್ಟೆಗೆ ದಾಖಲು ಮಾಡುತ್ತಾರೆ. ಅವರನ್ನು ಸಸ್ಪೆಂಡ್ ಮಾಡಿದಾಗ್ಯೂ ಅವರ ಸಂಬಳ ಕಡಿಮೆ ಮಾಡಲಾಗಿತ್ತು. ಈಗ ಕೆಲಸದಿಂದ ಸಂಪೂರ್ಣ ನಿವೃತ್ತಿಯಾಯಿತು. ಹಿಟ್ಲರಿಗೆ ಸಲ್ಲತಕ್ಕ ನ್ಯಾಯವಾದ ರಾಜನಿಷ್ಠೆಯ ಪ್ರಮಾಣ ಮಾಡಲಿಕ್ಕೆ ತನಗೆ ಆಕ್ಷೇಪವಿಲ್ಲದಿದ್ದರೂ, ಆ ಪ್ರಮಾಣದ ಮಾತುಗಳಲ್ಲಿ [illegible] ಸೇರಿಸಿರುವುದರಿಂದಲೂ, ಈಗ ಅದು ತನಗೆ ಹಿಟ್ಲರನ ಕಡೆಗೆ ಇರುವ ಧರ್ಮವನ್ನು ದೇವರ ಕಡೆಗಿರುವ ಧರ್ಮಕ್ಕಿಂತಲೂ ವಿಶೇಷವಾಗಿ ದೊಡ್ಡ ಸ್ಥಾನದಲ್ಲಿರುವುದರಿಂದ ಇದ್ದಕ್ಕಿದ್ದ ಹಾಗೆ ಆ ಪ್ರಮಾಣದ ಮಾತುಗಳನ್ನು ಉಚ್ಚರಿಸುವುದು ತನ್ನಿಂದ ಅಸಾಧ್ಯವೆಂತಲೂ ಬಾರ್ತರು ಹೇಳುತ್ತಾರೆ.

ಇದೆಲ್ಲ ಭೂತಚೇಷ್ಟೆಯಂತೆ!!

ಉಡುಪಿಯಲ್ಲಿ [illegible]

ಉಡುಪಿ—ಸ್ಥಳೀಯ ಗೃಹಸ್ಥರೊಬ್ಬರ ಸೌಭಾಗ್ಯವತಿಯು ತಾ. 17 ನೇ ಶುಕ್ರವಾರ ಸಂಜೆ 5 ಗಂಟೆ ತನ್ನ ಮನೆಯಲ್ಲಿ ನಿದ್ರಿಸುತ್ತಿದ್ದು, ಸುಮಾರು 6 ಗಂಟೆ ಸಮಯಕ್ಕೆ [illegible] ಮನೆಯ ಹಿಂಬದಿಯ ಬಾಗಿಲು [illegible] ಮನೆಯವರು [illegible]. ಆದರೆ, ರಾತ್ರಿ ಗಂಟೆ 8 ಆದರೂ ಶ್ರೀಮತಿಯವರ ಸುಳಿವಿಲ್ಲದ ಕಾರಣ ಗಾಬರಿಗೊಂಡರು. ಕಳೆದ ಮೂರು ವರ್ಷಗಳಿಂದ ಇವರ ದೇಹಾರೋಗ್ಯವು ನೆಟ್ಟಗಿರದುದರಿಂದ, ಬಾವಿಯಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದೆಣಿಸಿ, ಯಂತ್ರದ ಮೂಲಕ ಬಾವಿಯ ನೀರನ್ನು ಖಾಲಿ ಮಾಡಲಾಯಿತು. [illegible] ಮೂಲಕ ಸಮೀಪದ ಗ್ರಾಮಗಳನ್ನೆಲ್ಲಾ ಹುಡುಕಲಾಯಿತು. ಆದರೂ ಪತ್ತೆ ದೊರೆಯದಾಯಿತು. ತದನಂತರ ಯಾವ ಉಪಾಯವೂ ತೋರದೆ, ಪ್ರಸಿದ್ಧ ಮಂತ್ರವಾದಿಗಳೊಬ್ಬರನ್ನು ಕರೆಸಿ, ಅಂಜನ ಹಾಕಿ ನೋಡಿದಲ್ಲಿ, 'ಕಲ್ಲುಕುಟಿಗ ಎಂಬ ದೈವವೊಂದು ಆಕೆಯನ್ನು ಮಾಯ ಮಾಡಿರುವುದು. ನಾಳೆ ಬೆಳಗ್ಗೆ ಪತ್ತೆ ದೊರೆಯುವುದೆಂದಾಯಿತು. ಅಂತೆಯೇ ತಾ. 18ನೇ ಬೆಳಗ್ಗೆ ಶ್ರೀಮತಿಯವರು ಮನೆಯ ಉಪ್ಪರಿಗೆಯ ಮೇಲೆ ನಿದ್ರಾವಸ್ಥೆಯಲ್ಲಿದ್ದರಂತೆ! ಅದೇ ಸ್ಥಳದಲ್ಲಿ ಈ ಮುಂಚೆ ಅನೇಕ ಬಾರಿ ನೋಡಿದ್ದಲ್ಲಿ ಇಲ್ಲಿದ್ದಿಲ್ಲವಂತೆ.

ಬೆಂಗಳೂರಿನಲ್ಲಿ ವಿಚಿತ್ರ ಬೆಂಕಿ!

ಕೆಲವು ಸಮಯಕ್ಕೆ ಹಿಂದೆ ಬೆಂಗಳೂರಿನ ನರಸಿಂಹರಾಜ ಸ್ಕ್ವೇರಿನಲ್ಲಿ, ಅಲ್ಬರ್ಟ್ ಗೇಟ್ ಬಳಿಯ [illegible] 'ಹಳೆ ಸಿಗರೇಟ್ ಫ್ಯಾಕ್ಟರಿ ಬಿಲ್ಡಿಂಗ್'ನಲ್ಲಿ (ಈಗ 'ಇಂಪೀರಿಯಲ್ ಟೊಬೆಕೋ ಕಂಪೆನಿ' [illegible] ಕಟ್ಟಡ) ಕೆಲವು [illegible] ಬಾಡಿಗೆಗಿದ್ದವು. ಒಂದು ದಿನ ರಾತ್ರಿ, ಅಕಸ್ಮಾತ್ತಾಗಿ 'ಬೆಂಕಿ' ಎಂಬ ಕೂಗು ಎದ್ದಿತು. ಹೋಗಿ ನೋಡುವಾಗ್ಗೆ ಒಳಗಿದ್ದವರೆಲ್ಲ ಭಯಭೀತರಾಗಿ ನಡುಗುತ್ತಿದ್ದರು. [illegible] ಬೆಂಕಿ ಹತ್ತುವ ಅದ್ಭುತಗಳು [illegible] ಉರಿಯುವುದು! 'ಪ್ರೇಕ್ಷಕರು [illegible]? ಪೋಲೀಸ್ ಸುಪರಿಂಟೆಂಡೆಂಟರೂ ಇತರ ಅಧಿಕಾರಿಗಳೂ ಕರೆಯಲ್ಪಟ್ಟರು. ಅವರ ಎದುರಿಗೂ ಈ ಬೆಂಕಿಯ ಅದ್ಭುತ [illegible] ಮಂತ್ರವಾದಿಯೂ ಕರೆಯಲ್ಪಟ್ಟನು. ಆತನು [illegible] ಇತ್ಯಾದಿಗಳನ್ನು [illegible] ಬಾಗಿಲ ಮೇಲೆ ಇರಿಸಿದಾಗ [illegible] ನಾನು ಕಣ್ಣಾರೆ ಕಂಡೆನು. ಪೋಲೀಸ್ ಅಧಿಕಾರಿಗಳು ಏನೂ ಮಾಡಲು ಶಕ್ಯವಿಲ್ಲ. [illegible] ಅನೇಕ [illegible] ಜನರಿಗೆ [illegible] ಕೊಡಲ್ಪಟ್ಟಿತು.

ಸ್ವರಾಜ್ಯವೆಂದರೆ ಆಕಾಶದಿಂದ ಬೀಳುವುದಲ್ಲ.

ಸಿಗರೇಟು-ಸಿಗಾರ್‌ಗಳು ಸ್ವರಾಜ್ಯವನ್ನು ತರಲಾರವು!

ಗಾಂಧೀಜಿಯವರ ಶಿಷ್ಯೆ ಮೀರಾಬಾಯಿಯವರು ಒಂದು ಸಲ [illegible] ಪ್ರಯಾಣ ಮಾಡುತ್ತಿದ್ದರು. [illegible] ಪ್ರಾಂತಿಕ ಯುವಕರು ಒಂದು, [illegible] —'ಮೀರಾಬಾಯಿಯವರೇ, ಈ ಸಿಗರೇಟು [illegible] ನಿಮಗೆ ಎಷ್ಟು ವೇತನ ದೊರೆಯುತ್ತದೆ?' ಎಂದು ದಿಟ್ಟತನದಿಂದ ಕೇಳಿದರು.

ಅದಕ್ಕವರು ರೇಗದೆ, [illegible] ಬಂದೆ, ಏಕೆ ಬಂದೆ, ಏನು ಮಾಡುತ್ತಿರುವೆ—ಎಂಬ ವಿಚಾರಗಳನ್ನು ತಿಳಿಸುತ್ತಾ—'ನೀವು [illegible] ಭಾರತ [illegible] ಇಲ್ಲ!' ಎಂದು ವಿವರಿಸಿದರು.

ಆ ಯುವಕರು ಪುನಃ ಪ್ರಶ್ನಿಸಿದರು—'ಗಾಂಧೀಜಿಯವರು [illegible] ಸ್ವರಾಜ್ಯ ಬಂದಿಲ್ಲ!'

ಬಾಯಿಯವರು ಶಾಂತ, ಉತ್ತರ ಕೊಟ್ಟರು—'ನೀವು [illegible] ಸೇದುತ್ತ, [illegible] ಸ್ವರಾಜ್ಯವು ಆಕಾಶದಿಂದ ನಿಮ್ಮ ತಲೆ ಮೇಲೆ ಬೀಳಲಿ ಎಂದು ನಿರೀಕ್ಷಿಸಿದರೆ,—ಅದು ಹಾಗೇನೂ ಬಾರದು. [illegible] ಕಷ್ಟಪಟ್ಟು ಅದನ್ನು ತರಬೇಕು; ತಿಳಿಯಿತೇ?'

ಮೌನವಾಗಿ, ಇಬ್ಬರು ಯುವಕರು [illegible]

ದೇಶದ ಏಳಿಗೆಗಾಗಿ ಮಡಿಯದ ದೃಢಕಾಯಗಳು ನಿರರ್ಥಕ.

ಜಟ್ಟಿಗಳಿಗೆ ಗಾಂಧೀಜಿಯವರ ಉತ್ತರ.

ಜಟ್ಟಿಗಳಾದರೇನಾಯಿತು—ಬಲಪೂರ್ಣವಾದ ಆ ಸ್ನಾಯುಗಳನ್ನು ಅಬಲ ಮಾನವರ ಕೋಟಿಯ ಸೇವೆಗಾಗಿ ಉಪಯೋಗಿಸದಿದ್ದರೆ—ಹಾಗೂ ಸ್ವಪ್ರಯೋಜನಕ್ಕಾಗಿಯೂ ಉಪಯೋಗಿಸಿ ಸ್ವತಂತ್ರರಾಗಲಿಚ್ಛಿಸದಿದ್ದರೆ,—ಆ [illegible]—ಆ [illegible]—ಅವು ನಿರರ್ಥಕ.

ಜಟ್ಟಿಗಳ ಒಂದು ಚಿಕ್ಕ ತಂಡವು ವಾರ್ಧಾಕ್ಕೆ ಬಂತು. ಗಾಂಧೀಜಿಯವರ ಆಶ್ರಮಕ್ಕೆ ಹೋಗಿ, ಗಾಂಧೀಜಿಯವರ ಮುಂದೆ ತಮ್ಮ ಆಟಗಳನ್ನು ಪ್ರದರ್ಶಿಸಲಿಚ್ಛಿಸಿತು. ನನಗೆ ಅದರಲ್ಲಿ ಆಸಕ್ತಿಯಿಲ್ಲವೆಂದು ಗಾಂಧೀಜಿಯವರು ಹೇಳಿದರೂ, ಒತ್ತಾಯದಿಂದ ತಮ್ಮ ಆಟಗಳನ್ನು ತೋರಿಸಿಯೇ ಬಿಟ್ಟರು. ಆ ಮೇಲೆ—'ನಮಗೆ ಕಾಶ್ಮೀರಕ್ಕೆ ಹೋಗಬೇಕಾಗಿದೆ ಹಣ ಕೊಡಿರಿ!' ಎಂದು ಗಾಂಧೀಜಿಯವರೊಡನೆ ಕೇಳಿದರು.

'ಹಣವೇಕೆ?' ಎಂದು ಗಾಂಧೀಜಿಯವರ ಪ್ರಶ್ನೆ.

'ನಾವು ಸಿರಿವಂತರಲ್ಲ; ಹಣವಿಲ್ಲದವರು. ರೈಲಿಗೆ ದುಡ್ಡು ಬೇಕು.'

'ರೈಲಿಗೆ ದುಡ್ಡು? ಬಲಶಾಲಿಗಳಾದ ನಿಮಗೆ ರೈಲು?'—ಗಾಂಧೀಜಿಯವರು ಆಶ್ಚರ್ಯದಿಂದ ಕೇಳಿದರು. 'ನಿಮಗೆ ಬಲವಿದೆ. ನೀವು ನಡೆಯಲಾರಿರೇ? ಕೈಯಿಂದ ಗುದ್ದಿ ಕಲ್ಲನ್ನು ಪುಡಿಮಾಡಬಲ್ಲಿರಿ! ನನಗೆ ಆ ಶಕ್ತಿಯಿಲ್ಲ!'

'ಆದರೆ, ನಿಮಗೆ ಮತ್ತೊಂದು ಶಕ್ತಿಯಿದೆ.'

'ಅದು ನಿಮಗೂ ಇದೆ.'

'ಇಲ್ಲ ಮಹಾತ್ಮಾಜಿ! ನಮಗೆ ಆ ಶಕ್ತಿಯಿಲ್ಲ. [illegible]!' ಎಂದು ದೈನ್ಯದಿಂದ ನುಡಿದರು ಜಟ್ಟಿಗಳು.

'ನಿಮಗಿದೆ ಆ ಶಕ್ತಿ; ನೀವು ನಿಮ್ಮ ಕಣ್ಣುಗಳನ್ನು ತೆರೆದು ಅದನ್ನು ನೋಡಿಲ್ಲ.' ಎಂದೇ ಗಾಂಧೀಜಿಯವರ ಉತ್ತರ. ಆದರೂ, ಆ [illegible] ಕುಳ್ಳರಾದ ಗಾಂಧೀಜಿಯವರ ಮುಂದೆ ದೈನ್ಯದಿಂದ ನಿಂತು ಬೇಡುತ್ತಿದ್ದರು!

[ಈ ವಿಷಯವಾಗಿ 'ಹರಿಜನ' ಪತ್ರಿಕೆಯಲ್ಲಿ ಬರೆಯುತ್ತ, ಮಹಾದೇವ ದೇಸಾಯಿಯವರನ್ನುತ್ತಾರೆ—'ಇವರ ಬಲದಿಂದೇನು ಪ್ರಯೋಜನ? ಇವರು ತಮ್ಮ ತಾಯಿ ತಂಗಿಗಳನ್ನು [illegible] ಮಾಡುವರೇ? ನಿರ್ಬಲರಿಗೆ ಬೇಕಾದ ಬಲದ ಸಹಾಯವನ್ನು ಕೊಡುವರೇ? ಉಪಯೋಗಕ್ಕೆ [illegible] ಕಾರ್ಯಗಳಲ್ಲಿ ಭಾಗವಹಿಸುವರೇ,—ಇಲ್ಲ. ಇವು ಬಲವಿದ್ದೂ ಬೇಡುತ್ತಿರುವರು; ಕೇವಲ ವ್ಯಾಪಾರ ದೃಷ್ಟಿಯಿಂದ ಮೈಬೆಳೆಸಿಕೊಂಡಿರುವರು.']

ಬರಗಾಲದ ನಂತರ ಮಳೆ ಬಂತು

ಯು. ಯಸ್. ಎ. (ಅಮೇರಿಕಾ) ಯ ನೈಋತ್ಯ ಪ್ರಾಂತ್ಯಗಳಲ್ಲಿ ಮಳೆ ಇಲ್ಲದೆ ಬರಗಾಲದಿಂದಲೂ, ಬಿರುಗಾಳಿಯಿಂದಲೂ ಜನರು ನೊಂದಿದ್ದರು. ಆ ವೇಳೆ ವಿಶೇಷ ಮಳೆ ಬಂದು ಮತ್ತೆ ನೆರೆಯಿಂದ [illegible] ಕಷ್ಟಕ್ಕೆ ಒಳಗಾಗಿರುವರು. ಪ್ರಕೃತಿಯ ಪಾಡೆಂದರೆ ಇದೇ!

ಆಕಾಶಕ್ಕೇರಿ [illegible] ದೇವತೆಗಳಾಗಲಿಲ್ಲವಷ್ಟೆ!!

ಫ್ರಾನ್ಸಿನಲ್ಲಿ [illegible] ಟೌನ್ [illegible] 19ನೇ ದಿನ [illegible] ಅಲ್ಲಿ [illegible] ಆ ವೇಳೆ [illegible] (ಲ [illegible])

[illegible] ಮೇಲೆ ಪೋಲೀಸರ ತಡೆ.

ಬೊಂಬಾಯಿಯ 1932ನೇ ಇಸವಿ ಸ್ಪೆಶಲ್ ಎಮರ್ಜೆನ್ಸಿ [illegible] ಮೇರೆಗೆ ಬೊಂಬಾಯಿಯ ಪೋಲೀಸು ಕಮಿಶನರು [illegible] ಪ್ರವೇಶಿಸಬಾರದೆಂದೂ ಕರಾಚಿಯಲ್ಲಿ [illegible] ತಾ. 19ರಲ್ಲಿ ಗುಂಡು ಹಾರಿಸಿದ ವಿಷಯದಲ್ಲಿ ಮುಂದೆ ತನಿಖೆ ನಡೆಸಬಾರದೆಂದೂ [illegible] ಸರದಾರ್ ಇಸ್ಮಾಯಿಲ್ ಖಾನ್ ಮತ್ತು [illegible] ಖಾನ್ [illegible] ಇವರಿಗೂ [illegible] ತಿಳಿದುಬರುತ್ತದೆ.

ಕ್ವೆಟ್ಟದ ಭಾವೀ ಸ್ಥಿತಿಯೇನಾಗುವುದು?

ಕ್ವೆಟ್ಟದಲ್ಲಿ ಮುಂದೆ ಏನಾಗಲಿದೆ? ಅಲ್ಲಿ ಇನ್ನೂ [illegible] ಆಗಲಿರುವುದೇ? ಈ ಪ್ರಶ್ನೆಗೆ ಸಿವಿಲ್ ಮತ್ತು ಮಿಲಿಟರಿಗಳ ವರದಿಯಲ್ಲಿ ಈ ಉತ್ತರವಿದೆ. [illegible] ಒಂದು [illegible] 'ದೊಡ್ಡ ಬಿರುಕು ಬಿದ್ದ ಆ ನೆಲವು ಸಿವಿಲ್ ಸ್ಟೇಶನಿನ ವರೆಗೆ ಹೋಗುತ್ತದೆ. ಅದು ಬರುವ 5 ಯಾ 6 ವರ್ಷಗಳೊಳಗೆ ಒಂದು ಜ್ವಾಲಾಮುಖಿಯಾಗಬಹುದು. ಕ್ವೆಟ್ಟದ ಮುಂದಿನ ಅದೃಷ್ಟ ಇದನ್ನು ಹೊಂದಿಕೊಂಡಿದೆ. ಒಮ್ಮೆ ಲಾವಾ ಹೊರಗೆ ಹರಿಯಲಾರಂಭಿಸಿದರೆ ಮತ್ತೆ ಭಯವಿಲ್ಲ. ಇದು ಸಂಪೂರ್ಣವಾಗುವ ವರೆಗೆ ಮಿಲಿಟರಿ ಅಧಿಕಾರಿಗಳು ಅಲ್ಲಿನ ಸೈನ್ಯಗಳನ್ನು ಮೂರು ಪಾಲು ಮಾಡಿ ಬೇರೆ ಬೇರೆ ಕಡೆ ನಿಲ್ಲಿಸುವ ಯೋಚನೆಯಲ್ಲಿ ಇದ್ದಾರೆಂದು ತಿಳಿದು ಬರುತ್ತದೆ.

ಚೀನದ ಮೇಲೆ ಜಪಾನಿಗೆ ಹಗೆ ಇಲ್ಲ!

ಅದನ್ನೀಗ ಜಪಾನಿಯರು ಜಗತ್ತಿಗೆ [illegible] ಯತ್ನಿಸುತ್ತಿರುವರು.

ಚೀನವು ಪ್ರಬಲ ವಿದೇಶೀ ರಾಜ್ಯಗಳ ಹಿತಕ್ಕೆ ಸಿಲುಕಿ ಹೋಗುವುದು ಜಪಾನಿಗೆ ಒಪ್ಪಿಗೆಯಿಲ್ಲ. ತನ್ನ ಸಮೀಪದ ಬಂಧುವು ತನ್ನದೇ ಆಗಿರಬೇಕೆಂಬ ಆಸೆಯಿಂದ ಜಪಾನು ಅದನ್ನು [illegible] ತೋರಿಸುತ್ತಿದೆ.

ಜಪಾನು ಲೀಗ್ ಆಫ್ ನೇಶನ್ಸ್ ಸಭೆಯಿಂದ ಹೊರಬಂದಿದೆ. 'ಚೀನವೂ ಆ ಸಭೆಯ ಸಂಗವನ್ನು ತೊರೆದುಬಿಟ್ಟರೆ [illegible] ಚೀನವನ್ನು ವಿದೇಶೀ [illegible] ರಕ್ಷಿಸುವೆವು' ಎಂಬುದಾಗಿ ಅಭಯ [illegible] ಜಪಾನ್ ರಾಯಭಾರಿಯವರ [illegible] ಎಂದು ಪ್ರಕಟವಾಗಿದೆ

ಪ್ರಕೃತಿಯ ಮುಂದೆ ಅಧಿಕಾರವೆಲ್ಲಿ!

ಇಂದಿನ ಲಕ್ಷಾಧಿಪತಿ ನಾಳೆ ಭಿಕ್ಷಾಧಿಪತಿ.

ಭೂಕಂಪದಂತಹ ವಿಪತ್ತು, ಮೇಲು—ಕೀಳು ಎಂಬ ಭಾವವನ್ನು ತಾತ್ಕಾಲಿಕವಾಗಿಯಾದರೂ ತೆಗೆದು ಬಿಡುವುದು. ಭೂಕಂಪದಲ್ಲಿ ಧ್ವಂಸವಾದ ಕಲಾತ್ ಸಂಸ್ಥಾನದ ಅಧಿಕ ಮಂತ್ರಿಯು, [illegible] ದಿನ [illegible]—ಅವರಲ್ಲೇನು ಆಶ್ಚರ್ಯ?

ಈ ಮಂತ್ರಿಗಳ ಹೆಸರು ಖಾನ್ ಬಹದೂರ್ ಗುಲ್ ಮಹಮದ್ ಎಂದು; ಕೋಟ್ಯಾಧೀಶರವರು. ಭೂಕಂಪವಾದಾಗ ಇವರ ಪ್ರಾಣ ಹೊರತು ಮತ್ತೆಲ್ಲವೂ ಹೋಯಿತು. [illegible] ದೀನ ದರಿದ್ರರಾದರು—ಇವರು. ಟಿಕೇಟಿಲ್ಲದೆ ರೈಲಿನಲ್ಲಿ ಜಕೊಬಾಬಾದಿಗೆ ಬಂದರು.

ಅಲ್ಲಿ, ಸ್ಟೇಶನಿನಲ್ಲಿ ಸ್ವಯಂಸೇವಕರು ಭೂಕಂಪ ಪ್ರದೇಶದಿಂದ ಬಂದವರಿಗೆ ಕುಡಿಯಲು ನೀರೆರೆಯುತ್ತಿದ್ದರು. ಈ ಮಂತ್ರಿಗಳು ಮೂರು ದಿನಗಳಿಂದ ಉಪವಾಸವಾಗಿದ್ದರು. ದಾಹದಿಂದ [illegible] ನೀರು ಕುಡಿದರು. ಆ ಮೇಲೆ ಗಳಗಳನೆ ಅತ್ತುಬಿಟ್ಟರು! ಬತ್ತಿ ಹೋದ ಕಣ್ಣುಗಳು ಈ ರೀತಿ ನೀರು ಕುಡಿದೇ ಜಲಪೂರ್ಣವಾದುವೆ?

ಇದನ್ನು ಕಂಡು ಅವರ ಸುತ್ತಲೂ ಜನರು ನೆರೆದರು. ಆ [illegible] 'ಇವರು ಕಲಾತದ [illegible]' ಎಂದು ಗುರುತು ಹಿಡಿದನು. ಖಾನರ ವೈಭವದ ಆವೇಗಗಳು ಧೂಳಿನಿಂದ ಮುಚ್ಚಿ ಹೋಗಿದ್ದವು!

Reg. No. M. 1550
If not delivered please return to "KODAGU" OFFICE, MERCARA

5—7—1935.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪುಟ ೧೫ || ಮಡಿಕೇರಿ, ... ಜುಲೈ ೫ನೇ ಶುಕ್ರವಾರ. || ಸಂಚಿಕೆ ೫

Telegrams: 'PRECIOUS.'

By Appointment To H. E. The Governor of Madras.

Telephone: 3145

M. R. Ry., DEWAN BAHADUR K. Chengappa Avl., B. A. (Retd) Commissioner of Coorg, Writes:

I have had dealings with V. Subramania Iyer, Jeweller, for the last 5 or 6 years. The firm is absolutely reliable, reasonable in prices and very obliging. The workmanship is good.

Ear rings Rs. 50 & upwards



Necklace Rs. 100 & upwards.

M. R. Ry. RAO BAHADUR A. B. Chengappa Avl. 'Green Hills', Virajpet Writes:—

I had all my work done by Mr V. Subramania Iyer Jeweller, for over ten years.... .... He gives THE BEST OF SATISFACTION His CHARGES are MODERATE, and the FINISH is VERY GOOD.

Fashionable ornaments for the marriage season.

Brooch Rs. 20 & upwards.

V. SUBRAMANIA IYER.

Jeweller, & Diamond Merchant,

52—39 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.

Catalogue & special designs with quotations (free) on enquiry.

THE CANARA BANKING CORPORATION UDIPI, LTD.,

(INCORPORATED IN BRITISH INDIA)

ESTABLISHED 1906.

ANNOUNCEMENT.

We beg to announce that a Branch of the Corporation ~~will be~~ has been opened at **VIRARAJENDRAPET** (Coorg) on 8—7—1935, Monday.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡ್ಪಿ, ಲಿಮಿಟೆಡ್.

1906ರಲ್ಲಿ ಸ್ಥಾಪಿತವಾದ್ದು.

ಹೆಡ್ ಆಫೀಸು—ಉಡುಪಿ.

ಶಾಖೆಗಳು:—(1) ಉಡುಪಿ, (2) ಕುಂದಾಪುರ, (3) ಮಂಗಳೂರು—ರಥಬೀದಿ, (4) ಮಂಗಳೂರು—ಬಂದರ್, (5) ಮದ್ರಾಸು, (6) ಶಿವಮೊಗ್ಗ, (7) ಮಡಿಕೇರಿ (ಕೊಡಗು).

ಇದರ ಇನ್ನೊಂದು ಶಾಖೆಯು ತಾ. 8—7—1935ನೇ ಸೋಮವಾರ ~~ವೀರರಾಜೇಂದ್ರಪೇಟೆ (ಕೊಡಗು) ಯಲ್ಲಿ ತೆರೆಯಲ್ಪಡುವುದು.~~ ತೆರೆಯಲಾಗಿದೆ

ಉಡುಪಿ,
ತಾ. 28—6—1935.

52—34

M. Srinivasa Prabhu,
Manager,

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

31—12—33ನೇ ಇಸವಿಗೆ ಮುಗಿದ ಮೂರು ವರ್ಷಗಳ ಕಾರ್ಯಕ್ರಮದ ಪರಿಶೀಲನೆಯು ಉತ್ತಮ ಫಲಿತಾಂಶವನ್ನು ಪ್ರಕಟಿಸಿರುವುದು.

... 6,75,000 ರೂ. ಗಳಿಗಿಂತ ಹೆಚ್ಚು ಉಳಿದಿದೆ.

...

... ರೂ. 25%o.

ಎಂಡೋಮೆಂಟ್ ಪಾಲಿಸಿಗಳ ಮೇಲೆ ... ರೂ. 20%o

... ರೂ. 25,000000

... ರೂ. 16,00000

... 70,00000

... ರೂ. 31,00000

...

ಎ. ಎಸ್. ಎಸ್. ಅಯ್ಯಂಗಾರ್.

ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ...

52—5

ಪ್ರಕಟಣೆ.

[illegible] ಸೆಂಟ್ರಲ್ ಕೋಆಪರೇಟಿವ್ [illegible]
[illegible]
[illegible]
([illegible])

		ರೂ
ಶೇರ್ ಬಂಡವಾಳ	—	50,000— 0—0
[illegible] ಶೇರ್ [illegible]	—	31,390— 0—0
[illegible]	—	21,0 193—13—7
[illegible] ಕ್ಷೇಮನಿಧಿ	—	75,248— 12—0

[illegible] ದೊರೆಯುವಂತೆ [illegible].

ಒಂದು ವರ್ಷ [illegible] ಶೇಕಡ [illegible] ರೂ 4–8 [illegible] ಬಡ್ಡಿ ಕೊಡಲಾಗುತ್ತಿದೆ [illegible] ಬಡ್ಡಿ ಕೊಡಲಾಗುತ್ತಿದೆ.

[illegible]

ಪ್ರೆಸಿಡೆಂಟರು, ಮೈನೇಜರ್
ಕೆ. ಎಸ್. ಸುಬ್ಬಯ್ಯ. ಆರ್. [illegible]
([illegible].) [illegible]ಪ್ಪನವರು,

ಸೆಕ್ರೆಟರಿ
[illegible]ಪ್ಪನವರು.

ತಾರೀಖು 1—7—1934.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ [illegible] ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ [illegible] ರಶೀತಿ ಪುಸ್ತಕಗಳು ಕೊಡಲಾಗಿವೆ. [illegible] ಅವರಿಗೆ [illegible] ಕೊಟ್ಟು [illegible] ಕೋರಿದೆ.

ಏಜೆಂಟರುಗಳು.

ಉತ್ತರ ಕೊಡಗಿಗೆ:—ಮೆ. ಪಿ. ಆರ್. [illegible]ಯ್ಯನವರು.
ದಕ್ಷಿಣ ಕೊಡಗಿಗೆ:—ಮೆ. [illegible] ಪೂವಯ್ಯನವರು.

ಸಬ್ ಏಜೆಂಟರುಗಳು.

[illegible]—ಮೆ. [illegible] ಸೋಮಯ್ಯನವರು,
([illegible].)
[illegible]—ಸಿದ್ದಾಪುರ—ಮೆ. [illegible] ಮೊದಪ್ಪನವರು,
[illegible]—ಮೆ. [illegible] ಮುತ್ತಣ್ಣಯ್ಯನವರು,
[illegible] ಕಾರ್ಯಪ್ಪನವರು,
[illegible]—ಮೆ. [illegible]ಯ್ಯನವರು,
[illegible]—ಮೆ [illegible]ಯ್ಯನವರು

[illegible] ಕೊಡಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮಾರಾಟಕ್ಕೆ ಸಿದ್ಧವಾಗಿವೆ.

[illegible] ಮತ್ತು [illegible] ಫಾರಂಗಳು, [illegible] ಫಾರಮುಗಳು, [illegible] ಫಾರಮುಗಳು, [illegible] ಫಾರಮುಗಳು, [illegible] ಪುಸ್ತಕಗಳು, [illegible] ಪುಸ್ತಕಗಳು, [illegible] ಪುಸ್ತಕಗಳು. ಮತ್ತು [illegible] ಪುಸ್ತಕಗಳು ನಮ್ಮ [illegible] ದೊರೆಯುತ್ತವೆ. [illegible]

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

THE EMPIRE OF INDIA
LIFE ASSURANCE COMPANY, LIMITED.
[illegible] 1 [illegible] Office—Bombay
SUMMARY OF RESULTS—
([illegible] Interim Bonus)
Rs. 16/— on Whole Life Policies } Per Rs. 1000 Sum Assured
Rs. 14/— on Endowment Policies }

Policies in force	Rs. 11,16,6[illegible],000
Assets	Rs. 4,37,51,000
Claims paid	Rs. 4,17,00,000
Income	Rs. 73,37,000

The PREMIUM RATES charged by the Company are REMARKABLY LOW and hence the above results are all the MORE CREDITABLE. We therefore recommend an "EMPIRE OF INDIA POLICY" to you and your friends.
WANTED INFLUENTIAL AGENTS IN ALL IMPORTANT PLACES.
For particulars please apply to — [illegible] Secretary —
52—34 [illegible] Bangalore

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

[illegible] ಸ್ಥಾಪಿಸಲ್ಪಟ್ಟದ್ದು) (ಹೆಡ್ ಆಫೀಸು — ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,12,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
[illegible] ಪಾಲಿಸಿಗಳು	ರೂ.	51,.0,38,518
[illegible] ಕೊಟ್ಟ ಹಣ	ರೂ.	16 29 88 814
ಫಂಡ್ಸು [illegible]	ರೂ	1 ,53, 8 813

ಈ ಮೇಲಿನ ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ [illegible] ತೋರಿಸುತ್ತವೆ.

[illegible]

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

[illegible] ಕೆಳಗಿನ [illegible] ಆಫೀಸುಗಳು [illegible].

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನ್
ಅಹ್ಮದಾಬಾದು	ಕಲ್ಕತ್ತಾ	ಕೊಲಂಬೊ	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	[illegible]	ಸಿಂಗಪುರ
ಅಲಹಾಬಾದು	ಡಕ್ಕಾ	ಲಕ್ನೋ	ಪೂನಾ	[illegible]
ಬಂಗಾಳ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಗಳೂರು	[illegible]	ತಿರುವನಂತಪುರ
ಬರೇಲಿ	[illegible]	[illegible]	[illegible]	ವಿಶಾಖಪಟ್ಟ
[illegible]	[illegible]	[illegible]	[illegible]	ಮಧುರೆ

[illegible] ಬಿಲ್ಡಿಂಗ್ಸ್, } [illegible]
[illegible], ಬೆಂಗಳೂರು,} 52—20 ([illegible])

[illegible] ಕಷಾಯ [illegible]—[illegible] ಜ್ವರ, 3—4 ದಿವಸಕ್ಕೊಂದ ಸಾರಿ ಬರುವ ಜ್ವರ, [illegible] ಜ್ವರ ಮತ್ತು [illegible] ಜ್ವರಗಳಿಗೆ [illegible] ರೂ 1— —0, 3ಕ್ಕೆ 3—0— 6ಕ್ಕೆ 7—8—0, 12ಕ್ಕೆ 11—0—0

ಮಹಾ ಪ್ರಖ್ಯಾತ
ರಕ್ತ ಕಷಾಯ

[illegible] 1ಕ್ಕೆ ರೂ 1 4—0 [illegible] 8 0, [illegible] 6—12—0.

[illegible] 1ಕ್ಕೆ [illegible] 3 [illegible] ರೂ 1 1 [illegible]

[illegible] ರೂ 1/ [illegible] 2—10—0, [illegible] 2—0—0 3ಕ್ಕೆ 5—8—0

ವಿಳಾಸ—[illegible] ಕಂಪೆನಿ,
52—19 [illegible] 9 ಬೆಂಗಳೂರು.

Printed & pudlished by P. I Belliappa at "Kodagu" Press, Mercara for 'Kodagu" Ltd.

ಪ್ರಕಟಣೆ.

[illegible]

— — —

[illegible]

ಕರ್ಕಶಂಪನಿ

[illegible]

(52–41)

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಾಗಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಕೆಮ್ಮು, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗ [illegible] ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಟರ್ಸ್—
ಕೆ. ಟಿ. ಡೋಂಗರೆ ಕಂಪನಿ,
(52–70) ಗಿರಿಗಾಂವ್, ಮುಂಬಯಿ.

A R M S & A M M U N I T I O N.



H U N T I N G & F I S H I N G R E Q U I S I T E S.

The Bombay Armoury,
329-331, Abdul Rehman Street,
12–5 BOMBAY, 3

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಶ್ರೇಷ್ಠವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

[illegible]
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52–18 ಬೆಂಗಳೂರು.

ಪತ್ರವ್ಯವಹಾರ.

[ವಾಚಕರಿಂದ ಬರುವ ಅಭಿಪ್ರಾಯಗಳಿಗೆ ಪತ್ರಿಕೆಯವರು ಜವಾಬ್ದಾರರಲ್ಲ. ಸಂ]

ಕೊಪ್ಪದ ತುಂಗಾಮಿ ಆಸ್ಪತ್ರೆ.

ಇಲ್ಲಿ ತುಂಗಾಮಿಯಾಗಿ ನಡೆಸುತ್ತಿದ್ದ ಆಸ್ಪತ್ರೆಯು ಈ ವರ್ಷ ಕ್ರಮಪ್ರಕಾರ ಅಂದರೆ ಕೆಲವು ವಾರದಲ್ಲಿ ಒಂದು ದಿವಸವೂ, ಇನ್ನು ಕೆಲವು ವಾರಗಳಲ್ಲಿ ತೆರೆಯದೇನೇ ಇದ್ದುದರಿಂದ ಬಡರೋಗಿಗಳಿಗೆ ಕಷ್ಟದಲ್ಲಿ ಕಷ್ಟವಾಯಿತು. ಎಷ್ಟೋ ಸಾರಿ ರೋಗಿಗಳು ಬಂದು ಆಸ್ಪತ್ರೆ ತೆರೆಯುತ್ತಾರೆಂಬ ಭರವಸೆಯಿಂದ ಕಾದು, ಕಾದು ಬೇಸತ್ತು, ನಿರಾಶರಾಗಿ ಹಿಂತಿರುಗಿದ ಪ್ರಸಂಗವೂ ಉಂಟು.

ಈ ಮಲೆನಾಡಿನಲ್ಲಿ ವಾಸಿಸುವ ಬಡ ರೈತರ ಮೇಲೆ ಕನಿಕರವಿಟ್ಟು ಮುಂದೆಯಾದರೂ ಕ್ರಮವಾಗಿ ಆಸ್ಪತ್ರೆ ತೆರೆಯುವಂತೆ ಸಮ್ಮಂಧಪಟ್ಟ ಅಧಿಕಾರಿಗಳು ದಯೆತೋರಿಸಬೇಕಾಗಿ ಬೇಡುತ್ತೇನೆ.

'ಬಡ ಗ್ರಾಮವಾಸಿಗಳಲ್ಲೊಬ್ಬ'

ಸಂತಾಪ.

ಇಲ್ಲಿ ನರಭಕ್ಷಕ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹುಲಿಗಳ ಘೋರ ಹಾವಳಿಯೂ, ಫಲ ಪೈರುಗಳನ್ನು ನಾಶಗೊಳಿಸುವ ಹಂದಿಗಳ ದಾಳಿಯೂ, ಸದಾ ಬ್ಬರಪೀಡಿತರನ್ನಾಗಿರುವ ಮಲೇರಿಯಾ ಪೀಡೆಯೂ ಅನುದಿನ ಎಂಬಂತೆ ಇಲ್ಲಿಯ ಗ್ರಾಮವಾಸಿಗಳಿಗೆ ಶೋಕಕ್ಕೀಡುಮಾಡುವ ವಿಷಯವು ಸರ್ವರಿಗೂ ತಿಳಿದಂತದೇ ಸರಿ.

ಆದರೆ ಇತ್ತೀಚೆಗೆ ಅಂದರೆ ಇದೇ ತಾ. 6—6—35 ರಿಂದ 13—6—35 ರ ಒಳಗೆ ಒಂದೇ ವಾರದಲ್ಲಿ ಇಲ್ಲಿಯ ಶಿಕಾರಿಗಳು ಮೂರು 'ಹೆಬ್ಬುಲಿ'ಗಳು ಒಂದು ಚಿರತೆ ಕೂಡಿ ನಾಲ್ಕು ಹುಲಿಗಳನ್ನು ಗುಂಡು ಹೊಡೆದು ಕೊಂದು ಬಡ ಮೂಗ ಪ್ರಾಣಿಗಳು ಬಾಣೆಗೆ ಹೋಗಿ ಬರುವ ಸೌಕರ್ಯವನ್ನು ತಾತ್ಕಾಲಿಕವಾದರೂ ಮಾಡಿದ್ದರಿಂದ ಈ ಊರಿಗೆಲ್ಲಾ ದೊಡ್ಡ ಉಪಕಾರ ಎಂದು ತಿಳಿಸಲು ಸಂತೋಷಪಡುತ್ತದೆ.

'ಪ್ರತ್ಯಕ್ಷದರ್ಶಿ.'

ಕೊಡಗಿನ ಮುಂದಿನ ಗತಿಯೇನು ?

ಮಹಾಶಯರೇ,

ನಮ್ಮ ನಮ್ಮೊಳಗೆ ಕಚ್ಚಾಡಿಕೊಂಡು ಪ್ರತ್ಯೇಕ ಪ್ರಾಂತ್ಯವಾಗಿ 1 ಶತಮಾನದಿಂದ ಇರುವುದರಿಂದ ಆದ ಲಾಭವೇನು. ನಷ್ಟವೇನು ಎಂಬುದನ್ನು ಪ್ರತಿ ಒಬ್ಬರೂ ಜ್ಞಾಪಕಕ್ಕೆ ತಂದುಕೊಂಡು, ಕೂಡಲೆ ನೆರೆಪ್ರಾಂತ್ಯದೊಂದಿಗೆ ಸೇರುವದು ಒಳ್ಳೆಯದಲ್ಲವೇ ಎಂದು ಆಲೋಚಿಸಬೇಕಾಗಿದೆ. ಸೈಮನ್ ಕಮಿಷನ ವರದಿಯಲ್ಲು ಆಡಳಿತದಲ್ಲಿ ಹೆಚ್ಚಿನ ರೀಯಾಯಿತಿ ಬೇಕೆಂಬ ಕೊಡಗಿನವರು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕೆಂತ ಸೂಚನೆ ಕೊಟ್ಟಿರುತ್ತಾರೆ. ಅಂದ ಮೇಲೆ ನಮಗೆ ಆಡಳಿತದಲ್ಲಿ ಹೆಚ್ಚಿನ ರಿಯಾಯಿತಿ ಸಿಕ್ಕುವದಿಲ್ಲವೆಂಬುದು ಖಂಡಿತವಾಯಿತಲ್ಲವೇ ?

ಆಡಳಿತದಲ್ಲಿ ಹೆಚ್ಚಿನ ರಿಯಾಯಿತಿಗೋಸ್ಕರ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕೆಂಬುದಾಗಿ ಅವರು ಹೇಳುವದರಲ್ಲಿ ಸ್ವಲ್ಪವೂ ನ್ಯಾಯವಿಲ್ಲ. ಮನಸು ಇದ್ದರೆ ಈಗ ಇರುವ ಕೌನ್ಸಿಲಿಗೆ ಆಡಳಿತದಲ್ಲಿ ಪೂರ್ತಿ ಜವಾಬ್ದಾರಿಕೆಯನ್ನು ಕೊಟ್ಟು ಬಜೆಟಿನಲ್ಲಿ ಖಾಸಗಿ ಕರಾವುಗಳನ್ನೆಲ್ಲಾ ಬಾಬಗಳೂ ಆಡಳಿತ ನಡೆಸುವದೇ ನಮಗೆ ಬೇಕಾಗಿರುವದು. ಈ ಮೇಲೆ ಅದಕ್ಕಾಗಿ ಪ್ರತ್ಯೇಕ ವಿಚಾರಗಳು ಬೇಕೆಂತಲೂ, ದೇಶದ ಉತ್ಪತ್ತಿ ಸಾಲದೆಂತಲೂ ಹೇಳಿ ವಿದ್ಯಾವಂತ ಬುದ್ಧಿವಂತರನ್ನು ಮಂಕು ಮಾಡುವದರಲ್ಲಿ ನ್ಯಾಯವಿಲ್ಲ. ಇದಕ್ಕೆ ಮೊದಲು ಹೇಳಿದ ಎಂದು ತಿಳಿಯುವ ನಮಗೂ ಬುದ್ಧಿ ಇಲ್ಲ. ಹಾಗಾದರೆ ಈಗ ಆಡಳಿತವನ್ನು ನಡೆಸುತ್ತಿರುವದು ಹೇಗೆ? ಕೌನ್ಸಿಲು ಕೊಟ್ಟು ಬಜೆಟಿನಿಂದ ಖಾಸಗಿ ಕರಾವುಗಳನ್ನು ನಿರಾಕರಿಸುವದರ ಅರ್ಥವೇನು ? ಇಂಥಾ ನಿಷ್ಪ್ರಯೋಜನವಾದ ಕೌನ್ಸಿಲಿಗೋಸ್ಕರ ಖರ್ಚು ಮಾಡಿ ಬಜೆಟನ್ನು ಬರಿದು ಮಾಡುವದನ್ನು ನೋಡಿಕೊಂಡು ಕೂರುವದು ಸಭ್ಯ ಗೃಹಸ್ಥರಿಗೆ ನ್ಯಾಯವೇ ?

ನಮ್ಮ ಹಿರಿಯರು ತಾವಾಗಿ ನಮ್ಮ ದೇಶವನ್ನು ಬ್ರಿಟಿಷರ ಆಳ್ವಿಕೆಗೆ ಒಪ್ಪಿಸಿಕೊಟ್ಟು 1 ಶತಮಾನವಾಯಿತು. ಇವರ ಆಳ್ವಿಕೆಯು ಉತ್ತಮವಾದದ್ದೋ ಯಾ ಕನಿಷ್ಟವಾದದ್ದೋ ಎಂಬ ವಿಚಾರವಾಗಿ ತುಂಬಾ ಯೋಚಿಸಿ ನೋಡಬೇಕಾದ ಸಂಗತಿಯಾಗಿದ್ದರೂ ಮುಖ್ಯವಾದ ಎರಡು ವಿಷಯಗಳನ್ನು ಗ್ರಹಿಸಿಕೊಂಡಲ್ಲಿ ತಿಳಿಯಬಹುದಿರುತ್ತದೆ. (1) ಜನಸಂಖ್ಯೆ ಏರಿದಾಗಿದೆಯೋ ಯಾ ಕುಂದಿಲ್ಪಟ್ಟಿದೆಯೋ ? (2) ದೇಶದ ಜನರು ಸಂತೃಪ್ತಿಯಿಂದ ಬಾಳ್ವೆ ಮಾಡುತ್ತಾರೋ ಯಾ ಬಡವರಾಗಿ ನರಳುತ್ತಾರೋ ? ದೇಶದ ಹಾಗು ಜನರ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿ ಬಂದಿರುವದರಿಂದ ಜನಸಂಖ್ಯೆ ಏರಿದಾಗಿದೆ ಎಂದು, ಕಳೆದ ಶತಮಾನದಲ್ಲಿ ಅವರ ಆಳ್ವಿಕೆಯು ನಿಜವಾಗಿದ್ದರೆ ಜನರು ಸಂತೃಪ್ತಿಯಿಂದಲೂ, ಆರೋಗ್ಯದಿಂದಲೂ ಕೂಡಿ ಸಂತೃಪ್ತರಾಗಿ ಇರುತ್ತಿದ್ದರು, ರೋಗಗ್ರಸ್ತರೂ ಆಗಿಯೂ ಅಂದಿಗಿಂತ ಇಂದೇ ಅಧಿಕವಾಗಿದ್ದು

ಒಂದು ಶತಮಾನದ ಇವರ ಆಳ್ವಿಕೆಯಲ್ಲಿ ಪಟ್ಟಾಭಿಷೇಕ, ರಜತೋತ್ಸವ ನಡೆದ ದಿನವಾದರೂ ಒಂದು ಸಂದರ್ಭದಲ್ಲಿ ಪ್ರಜೆಗಳಿಗೆ ರಿಯಾಯಿತಿಗಳನ್ನು ತೋರಿಸಿ ಸಂತೋಷಭರಿತರನ್ನಾಗಿ ಮಾಡಿರುತ್ತಾರೆಯೋ ? ಇಷ್ಟು ದೊಡ್ಡ ಸಾಮ್ರಾಜ್ಯ ನಡೆಸುವ ಬ್ರಿಟಿಷ್ ರಾಜ್ಯಾಡಳಿತಗಾರ್ರಿಗೆ ಆತಂಕವಾಗಿರುವ 1 500 ಚದರ ಮೈಲು ವಿಸ್ತೀರ್ಣವುಳ್ಳ ನ್ಯಾಯವಾದ ಮೂಲನಿವಾಸಿಗಳು ಅಂದರೆ ವ್ಯವಸಾಯಗಾರರ ಸಂಖ್ಯೆಯಲ್ಲು 1 ಲಕ್ಷಕ್ಕೆ ಏರದೆ ಇರುವ ಜನಸಂಖ್ಯೆಯುಳ್ಳ ಈ ಪುಟ್ಟ ದೇಶದ ನಿವಾಸಿಗಳು ಬಡತನದಿಂದ ಮತ್ತು ಮಲೇರಿಯ ರೋಗದಿಂದ ಪೀಡಿತರಾಗಿ ಗ್ರಾಮಗಳೂ ಕಡಿದ ನಿರ್ಜನ ಪ್ರದೇಶವಾದದನ್ನು ನೋಡಿದರೂ, ಕೇಳಿದರೂ ಯಾರಿಗೆ ತಾನೆ ದುಃಖವುಂಟಾಗದಿರುವದು. ಇಷ್ಟಕ್ಕೂ ಕೃಪ್ರರಾಗದ ನಾವು ದಿನೇ ದಿನೇ ದೇಶದಲ್ಲಿ ಬಡತನಗಳನ್ನು ಹೆಚ್ಚಿಸಿಕೊಂಡು ಸ್ವಾರ್ಥಪರತೆಯನ್ನು ಸಾಧಿಸುವದರಲ್ಲೇ ಇದ್ದೇವೆ. ಅಂದ ಮೇಲೆ ನಾವು ಬೇರೆಯವರನ್ನು ದೂಷಿಸಿ ಪ್ರಯೋಜನವೇನು?

ಒಂದು ಶತಮಾನದ ಇವರ ಆಳ್ವಿಕೆಯಿಂದ ಭಾರತೀಪ್ಪ ಮುಟ್ಟಾಪಳಿಯು ತೀರ ಕಡಿಮೆಯಾಗುವ ಸ್ಥಿತಿಯಲ್ಲಿದೆ; ಕಾಫಿ ಸಾಗುವಳಿಗೆ ಆಯತ್ತಾಗಿದ್ದ ಕಾಡುಗಳೆಲ್ಲ ಸಾಗುವಳಿ ಮಾಡಲ್ಪಟ್ಟು ಕೆಲವು ಭಾಗವು ತೀರ ಬಂಜರಾಗಿ ಹೋಗಿದೆ; ಉಳಿದವುಗಳಲ್ಲಿ ಸಹ ಕೆಲವು ಭಾಗಗಳು ಇತ್ತೆ ಬಂಜರಾಗುವ ಸ್ಥಿತಿಯಲ್ಲಿದೆ. ಉಳಿದ ಭಾಗದ ಆಯುಸ್ಸು ಇನ್ನು ಕಾಲು ಶತಮಾನದಲ್ಲಿ ಪೂರೈಸಿ ಹೋಗುತ್ತೆಂತಲೂ, ಗ್ರಾಮಾಂತರಗಳನ್ನು ನಿರ್ಜನ ಪ್ರದೇಶವಾಗುವಂತೆ ಮಾಡಿಟ್ಟಿರುವದರಿಂದ ದೇಶದ ಉತ್ಪತ್ತಿಯು ಹಿಂದುಸ್ಥಾನಕ್ಕೆ ಹೆಚ್ಚಿನ ಆಡಳಿತದ ಹಕ್ಕು ಕೊಡುವದರೊಳಗಾಗಿ ತೀರ ಕಡಿಮೆಯಾಗುತ್ತದೆಂಬುದೂ ಖಂಡಿತವಾಗಿರುವದರಿಂದ ಸೈಮನ್ ವರದಿಯಲ್ಲು ಹೆಚ್ಚಿನ ಆಡಳಿತದ ಹಕ್ಕು ಬೇಕಾದರೆ ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟಿರುವದರಲ್ಲಿ ಆಶ್ಚರ್ಯವೇನು ಪಡುವಂತಿಲ್ಲ.

ನಮ್ಮ ವಿದ್ಯಾವಂತರುಮತ್ತು ಬುದ್ಧಿವಂತರ ನಿದ್ರಾವಸ್ಥೆ, ಸ್ವಾರ್ಥಪರತೆಗಳನ್ನು ನೋಡಿದರೆ ಉತ್ಪತ್ತಿಯೂ ತೀರಾ ಕಡಿಮೆಯಾದ ನಂತರ, ಒಂದೇ ಬ್ರಿಟಿಷರ ಇರಾದೆಗೆ ಒಳಪಟ್ಟು ಗುಲಾಮಗಿರಿಯಲ್ಲು ಪ್ರತ್ಯೇಕ ಪ್ರಾಂತ್ಯವಾಗಿರಬೇಕು; ಇಲ್ಲವೇ ಅವರು ಇಷ್ಟಪಟ್ಟು ಸೇರಿಸುವ ಕಡೆ ಸೇರಲು ತಯಾರಾಗಿರಬೇಕು ಎಂದು ತೋರು ಬರುತ್ತದೆ. ಎಲ್ಲವನ್ನು ಚೆನ್ನಾಗಿ ಪರಿಶೀಲಿಸಿ ಈ ಸುಸಂದರ್ಭದಲ್ಲಿ ವಿದ್ಯಾವಂತರು ಬುದ್ಧಿವಂತರು ಎಲ್ಲರು ಒಂದುಗೂಡಿ ಸಂಪೂರ್ಣ ಅಧಿಕಾರವುಳ್ಳ ಕೌನ್ಸಿಲ್ ಪಡೆಯಬೇಕು, ಇಲ್ಲವೇ ನೆರೆಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕು. ಕೆಟ್ಟ ಮೇಲೆ ಬುದ್ಧಿ ಬಂದು, ಅಟ್ಟ ಮೇಲೆ ಒಲೆ ಉರಿದು ಪ್ರಯೋಜನವಿಲ್ಲ. ತಮ್ಮ ಮೇಲಣ ಹೊರೆಯನ್ನು ತಪ್ಪಿಸಿಕೊಳ್ಳಲಿಕ್ಕಾಗಿಯೋ ಸೈಮನ್ ವರದಿಯಲ್ಲು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಕೊಳ್ಳಬೇಕೆಂಬುದಾಗಿ ನಮ್ಮ ಮೇಲೆ ಭಾರವಿಟ್ಟಿರುತ್ತಾರೆಂಬುದನ್ನು ಗ್ರಹಿಸಿಕೊಂಡಿರಬಹುದು, ಬಗಲಿ ಹಾರದವನು ಗಗನ ಹಾರ್ಬ್ಯನೆ ಎಂಬಂತೆ ಎಸೆಬಲ್ಲಿಯಲ್ಲು ದೇಶಕ್ಕೆ ಪ್ರತಿನಿಧಿತ್ವವನ್ನು ಕೊಡಬೇಕೆಂತಿರುವ ಸೂಚನೆಯನ್ನು ನೋಡಿಕೊಂಡು ಈಗಾಗಲೇ ದೇಶದಲ್ಲಿ ಒಡಕಿಗೆ ಸಿದ್ಧತೆಯ ಒಳಸಂಚುಗಳು ಕಲೆದೋರುತ್ತಿವೆ. ಈ ಪ್ರತಿನಿಧಿತ್ವದಿಂದ ಪ್ರಯೋಜನವಾಗುವದಕ್ಕಿಂತ ನಿಷ್ಪ್ರಯೋಜನವಾಗದಿರದು. ಅದಲ್ಲದೆ ಸ್ವಾರ್ಥಪರರಾದ ನಾಯಕರುಗಳು ಮುಂದಕ್ಕೆ ಬಂದರಂತು ಕೇಳಬೇಕಾದದ್ದೇ ಇಲ್ಲ.

ಈ ರೀತಿಯಲ್ಲಿರುವ ನಮ್ಮ ಗುಣದೋಷಗಳನ್ನು ಅರಿತುಕೊಳ್ಳಲು ಶಕ್ತಿ ಸಾಮರ್ಥ್ಯಗಳಿಲ್ಲದವರಾದದರಿಂದಲೇ ಕೊಡಗಿನ ರಾಜರ ಕಾಲದಲ್ಲು ದಿವಾನನಿಂದ ಹಿಡಿದು ಜವಾನನವರೆಗೆ ದೇಶದ ಕಾರುಬಾರುಗಳನ್ನು ನಡಿಸುತ್ತಿದ್ದ ದೇಶೀಯರು ರಾಜನು ಕ್ರೂರನೆಂತಲೂ, ದೇಶದ್ರೋಹಿಯೆಂತಲೂ ಇಂದು ಸಹ ಆರೋಪಣೆಗಳನ್ನು ಹೇಳುವವರಾಗಿದ್ದೇವೆ. ಹಿಂದಿನ ಮತ್ತು ಈ ಹೊತ್ತಿನ ನಮ್ಮ ಕರ್ತವ್ಯಗಳನ್ನು ಚೆನ್ನಾಗಿ ಪರಿಶೀಲಿಸಿದರೆ ನಾಳೇ ಕ್ರೂರರು, ದೇಶದ್ರೋಹಿಗಳು ಆಗಿದ್ದೇವೆ ಎಂಬುದು ತಿಳಿಯಬಹುದಿರುತ್ತದೆ.

'ಕೆ. ಸಿ.'

ಮೋಟಾರುಗಳ ವ್ಯವಹಾರ.

ದಿನ ದಿನಕ್ಕೆ ಹಿಂದೂಸ್ಥಾನದಲ್ಲಿ ಮೋಟಾರುಗಳ ವ್ಯವಹಾರವು ಎಷ್ಟು ಬೆಳೆದಿದೆ ಎಂಬುವುದನ್ನು ಈ ಕೆಳಗಿನ ಅಂಕೆಗಳಿಂದ ತಿಳಿಯಬಹುದು.

ವರ್ಷ	1932	1933	1934
ಮೋಟಾರು ಕಾರುಗಳ ಸಂಖ್ಯೆ.	5,252	9,575	13,286
(ಬೆಲೆ ರೂ.)	10,632000	17,672000	23,950000
ಮೋಟಾರು ಸೈಕಲುಗಳ ಸಂಖ್ಯೆ.	731	719	870
(ಬೆಲೆ ರೂ.)	313000	332000	470000
ಮೋಟಾರು ಲಾರಿಗಳ ಸಂಖ್ಯೆ.	2,624	3,465	9,842
(ಬೆಲೆ ರೂ.)	6 424000	5,759000	11.438000
ಒಟ್ಟು ಸಂಖ್ಯೆ.	8 607	14,769	24007
(ಬೆಲೆ ರೂ.)	17,429000	27763000	35804000

ಇದರಿಂದ ಇಷ್ಟು ಮೋಟಾರುಗಳು ಪರದೇಶದಿಂದ ಈ ದೇಶಕ್ಕೆ ತರಲ್ಪಟ್ಟಿವೆ ಅಂದರೆ, ಇಷ್ಟು ಹಣವು ಈ ದೇಶದಿಂದ ಪರದೇಶಕ್ಕೆ ಹೋಯಿತು. ಇಷ್ಟೇ ಅಲ್ಲ! ಇವುಗಳಿಗೆ ಬೇಕಾಗುವ ಪೆಟ್ರೋಲ್ ಮೋಬಿಲಾಯಿಲ್ ಎಂಜಿನುಗಳಿಗೂ, ಮೋಟಾರಿನ ಇತರ ಸಣ್ಣ ಪುಟ್ಟ ಸಾಮಾನುಗಳಿಗೂ ಲಕ್ಷಾಂತರ ರೂಪಾಯಿಗಳು ಈ ದೇಶದಿಂದ ಪರದೇಶಕ್ಕೆ ಹೋಗುತ್ತಿವೆ. ಕಳೆದ ಮೂರು ವರ್ಷಗಳ ಅಂಕೆಗಳಿಂದ ಇದು ವರ್ಷ ವರ್ಷಕ್ಕೆ ಹೇಗೆ ಹೆಚ್ಚುತ್ತಿದೆ ಇದೆಂಬುದು ಗೊತ್ತಾಗುವದು. ಈ ಪ್ರಕಾರ ಮೋಟಾರುಗಳ ವ್ಯವಹಾರವು ದೇಶದಲ್ಲಿ ಬೆಳೆಯುತ್ತಲೇ ಇದೆ. ಮುಂಚೆ ಇಲ್ಲಿ ಕುದುರೆಗಾಡಿ ಮತ್ತು ಎತ್ತಿನ ಗಾಡಿಗಳು ಜನರ ಪ್ರವಾಸಕ್ಕೂ, ಸರಕುಗಳನ್ನು ಹೇರುವದಕ್ಕೂ ಹೇರಳವಾಗಿ ಉಪಯೋಗಿಸಲ್ಪಡುತ್ತಿದ್ದವು. ಅದಕ್ಕಾಗಿ ವೆಚ್ಚವಾಗುವ ಹಣವೆಲ್ಲ ಈ ದೇಶದಲ್ಲಿಯೇ ಉಳಿಯುತ್ತಿದ್ದದರಿಂದ, ಅನೇಕರು ಇದೇ ಉದ್ಯೋಗದಿಂದ ಉಪಜೀವಿಸುತ್ತಿದ್ದರಲ್ಲದೆ, ಒಕ್ಕಲುತನ ಮಾಡುವ ಜನರೂ ಕೂಡ ತಮ್ಮ ಬಿಡುವಿನ ಕಾಲದಲ್ಲಿ ಸರಕು ಹೇರು ಬಾಡಿಗೆ ಮಾಡಿ ಅಲ್ಪ ಸ್ವಲ್ಪ ಹಣ ಸಂಪಾದನೆ ಮಾಡುತ್ತಿದ್ದರು. ಈಗ ಈ ಮೋಟಾರುಗಳ ಹಾವಳಿಯಿಂದ ಆ ಜನರ ಉದ್ಯೋಗವೇ ಹಾಳಾಯಿತು. ಬಿಡುವಿನಲ್ಲಿ ನಾಲ್ಕು ದುಡ್ಡು ಸಂಪಾದನೆ ಮಾಡಿಕೊಳ್ಳುತ್ತಿದ್ದ ಬಡ ರೈತರ ಹೊಟ್ಟೆಯ ಮೇಲೆ ಹೊಡೆದಾಗಿದೆ. ಇದ ಕಾರಣ ಬಡ ದೇಶವಾದ ಭರತಖಂಡದಿಂದ ಹಣವು ಈಗಿನ ಕಠಿಣ ಕಾಲದಲ್ಲಿಯೂ ಕೂಡ ಬೇಗ ಪರದೇಶಕ್ಕೆ ಹೋಗುತ್ತಿದೆ ಎಂಬುದನ್ನು ನೋಡಿ ಯಾವ ಭಾರತೀಯನು ತಾನೇ ವಿಷಾದಪಡದಿರಲಾರನು ?

ಪಂಡಿತ ಗೋಪಾಲಾಚಾರ್ಲುರವರ

ಜೀವಾಮೃತ

ಅಧುನಿಕ ಕಾಲದ ಉತ್ಸಾಹವು ನಿಮ್ಮ ದಿನನಿತ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ನುಗಿಸುತ್ತಿದೆ. ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕಣ್ಣಿನ ಸ್ವಭಾವ ಇವೇ ಮೊದಲಾದವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸದಿರುವಂತೆ ನೀವೀಗಲೇ ತಡೆಹಾಕಬೇಕು. ಶಾಸ್ತ್ರೋಕ್ತವಾಯವೇ ಜೀವಾಮೃತ ಸೇವನೆ—ಈ ಪರಿಣಾಮಕಾರೀ ಪುಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತ ವರ್ಧನೆಯನ್ನುಂಟುಮಾಡುವುದು. ನೀವು ಕಳೆಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ತಿ ತಂಪು ಪೂರ್ಣ ಶಕ್ತಿಯುತ ಪುರುಷರನ್ನಾಗಿ ಮಾಡುವುದು.

ಎಲ್ಲೆಲ್ಲಿಯೂ ದೊರೆಯುವುದು—ದೊಡ್ಡ ಬಾಟ್ಲಿ 1ಕ್ಕೆ ರೂ. 3—4—0. ಸಣ್ಣ ಬಾಟ್ಲಿ 1ಕ್ಕೆ ರೂ. 1—12—0.

ಆಯುರ್ವೇದಾಶ್ರಮ, ಪೋ. ಬಾ. ನಂ. ೨೮೭, ಮದರಾಸ್.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರು:—

ದಿ ಸಿಟಿ ಮೆಡಿಕಲ್ & ಜನರಲ್ ಏಜೆನ್ಸಿ

೭೩, ಚಿಕ್ಕಪೇಟೆ, [ಉಡುಪಿ ಹೋಟೇಲ್ ಹತ್ತಿರ] ಬೆಂಗಳೂರು ಸಿಟಿ.

ಏಜೆಂಟ್:—ಹರಿಹರ ಪ್ರೆಸ್ ಮತ್ತು ಬುಕ್ ಡಿಪೋ, ಬ್ರಾಂಚ್, ಮಡಿಕೇರಿ.

ವರ್ತಮಾನದ ಸಂಗ್ರಹ.

[illegible]

ವ.ಕೆಗಾಲದ ರಜೆಗಾಗಿ [illegible] ತಾ 1 ರಲ್ಲಿ [illegible] ಅಗುತ್ತ, ತಾ 8 ಲ್ಲಿ ಪುನಃ [illegible]

ಈ ತಾ 21ರಿಂದ 28 [illegible] 3 11 [illegible] 11 ರಲ್ಲಿ 7 [illegible] ಮಳೆ ಬಿತ್ತು. [illegible] ಹಾನಿಯಾಗಿದೆ.

[illegible] ಅಧಿಕಾರಿ [illegible] ಶ್ರೀ ಯಂ ಯನ್. [illegible] ನೇಮಿಸಿರುತ್ತಾರೆ. [illegible] ಅಭಿನಂದಿಸುತ್ತೇವೆ.

[illegible] 'ಏಸ್ ವಿಸ್' [illegible]

'ಕನರೀ ಪ್ಯಾಕಿಂಗ್' [illegible] ಸೆಂಟ್ರಲ್ [illegible] ಸಂಗ್ರಹಿಸಿದೆ.

[illegible]

ಈ ತಾ. 26 ರಲ್ಲಿ [illegible]

ಒಂದು ಪಟ್ಟಿ.

21 ನೇಯ ಕನ್ನಡ ಸಾಹಿತ್ಯ ಸಮ್ಮೇಳನವು [illegible] ರಲ್ಲಿ [illegible]

[illegible]

ಪಂಡಿತ ಜವಾಹರಲಾಲರ ಸಹೋದರಿ ಮಿಸೆಸ್ [illegible]

ಇಡೀ ಹಿಂದೂಸ್ಥಾನದಲ್ಲಿ ಈ ತಾ 30 ನ್ನು [illegible] ಕಾಂಗ್ರೆಸ್ ಅಧ್ಯಕ್ಷರ [illegible]

[illegible] 9 ವಾರಗಳನಂತರ [illegible] ಹೊರಡಿಸಿದರು.

ಹಿಂದೂದೇಶದಲ್ಲಿ ಭಾಗಿನಗರಸಂಸ್ಥಾನ ಎಂಬುದು ಒಂದು ಪಟ್ಟ ಸಂಸ್ಥಾನ. [illegible]

[illegible] ತಾ. 20 ರ ವರೆಗೆ ರೂ 27010 [illegible] 70000 ರೂ. [illegible] ತಾ. 21 ವರೆಗೆ [illegible] 18 ಲಕ್ಷ [illegible]

[illegible] 2500 [illegible]

1934 ರ [illegible] 67,78,500 [illegible] 52 [illegible] 750 [illegible] 4,30,750 [illegible]

[illegible] 12 [illegible] 11 [illegible] 35 [illegible] 12 [illegible]

ಮದ್ರಾಸು ಸಂಸ್ಥಾನಕ್ಕೆ [illegible] 14 ಲಕ್ಷ ರೂ [illegible]

[illegible] 1 10 [illegible] 4 ರಲ್ಲಿ [illegible]

[illegible] 10 504 [illegible]

[illegible] 40 [illegible]

ನ್ ಅಬ್ದುಲ್ ಗಫಾರ್ ಖಾನರು ಮೇ ತಾ 18ರಲ್ಲಿ [illegible] ಜೂನ್ 1ಕ್ಕೆ [illegible]

ಪ್ರಪಂಚ.

[illegible]

ಈ ತಿಂಗಳ [illegible] ಶ್ರೀ ಸುಭಾಷ ಚಂದ್ರಬೋಸ್ [illegible]

[illegible] 60 ಸಾವಿರ [illegible] 6 [illegible]

100 ವರ್ಷ [illegible]

[illegible] 6 ತಿಂಗಳ [illegible]

[illegible] 14 [illegible] 59 [illegible] 82 [illegible]

[illegible] 12 [illegible] 17 [illegible] (16–1) 15 [illegible] (4–2) [illegible]

[illegible] 5 [illegible] 30 ಸಾವಿರ [illegible] 1 [illegible] 7 ಸಾವಿರ [illegible] 18 [illegible]

ಸೂಚನೆ.

ಮೇ ತಾ. 31ಕ್ಕೆ ನಮ್ಮ ಪತ್ರಿಕೆಯ ಹಳೇ ವರ್ಷವು [illegible] ಜೂನ್ 1ಕ್ಕೆ ಹೊಸ ವರ್ಷ ಪ್ರಾರಂಭವಾಗುವುದರಿಂದ [illegible]

[illegible] 31–5–'35. [illegible]

ಈಗ ಸರಕಾರದ ಪರಿಹಾರ ಸಮಿತಿಗಳವರಲ್ಲದೆ ಇತರ ಸಮಿತಿಗಳವರು ಆ ಭಾಗವನ್ನು ಹುಡುಕಿ ತೆಗೆಯಲು ಭೂಗರ್ಭಶಾಸ್ತ್ರ ಶೋಧನೆ ಮಾಡುವಾಗ ಅವಶ್ಯವಾಗಿ ಆ ಪಟ್ಟಣದ ಪ್ರದೇಶದಲ್ಲಿ ... ಅಡ್ಡಿ ಇಲ್ಲ. ಅದರಿಂದಲೇ ಈ ಅವರಿಗೆ ...

ಸರಕಾರದವರು ಆ ಪಟ್ಟಣವನ್ನು ... ಆ ಸಮಿತಿಗಳವರಿಗೆ ಅನ್ನಕ್ಕೆ ದಿನ ... ದೊರೆಯುವುದು.

'ಪ್ರಜಾಮತ'

ಫ್ರೀ ಪ್ರೆಸ್ ಪತ್ರಿಕೆಯ ಜಾಮೀನು ಜಪ್ತಿ ಮಾಡಲ್ಪಟ್ಟಿತು.

ಫ್ರೀ ಪ್ರೆಸ್ ಪತ್ರಿಕೆಯ ಸಂಪಾದಕರು ಮುದ್ರಣಾಲಯದ ಒಡೆಯರು ಪ್ರತ್ಯೇಕ 10 ಸಾವಿರ ರೂಪಾಯಿಯ ... ಠೇವಣಾತಿಯನ್ನು ಸರಕಾರದಲ್ಲಿ ಇಡಬೇಕಿದ್ದದಷ್ಟೆ? ಆ ಪತ್ರಿಕೆಯ ಇದೇ ತಿಂಗಳ 7 ನೇ ತಾರೀಖಿನ ಸಂಚಿಕೆಯಲ್ಲಿ 'ಜೀವವನ್ನು ಹೇಗೆ ಸಂರಕ್ಷಿಸುವುದು' ಹಾಗೂ 'ಕ್ವೆಟ್ಟದ ಅಶ್ರುಗಳು' ಎಂಬ ಶಿರೋಲೇಖನದ ಎರಡು ಲೇಖನಗಳು ಪ್ರಕಟವಾದ ಬಗ್ಗೆ ಫ್ರೀ ಪ್ರೆಸ್ ಪತ್ರಿಕೆಯ ಠೇವು 10 ಸಾವಿರ ರೂ. ಗಳನ್ನು ಜಪ್ತಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು.

ವೈಸರಾಯರ ಕ್ವೆಟ್ಟಾ ಭೂಕಂಪ ಫಂಡಿಗೆ

ಈ ಸಹಾಯ ಸಲ್ಲಿಸಿದ ಮಹನೀಯರು.

(ಕೊಡಗು ಕಮಿಷನರವರ ಆಫೀಸಿನಿಂದ)

25—6—'35	ಹಿಂದಣ	ಒಟ್ಟು	ರೂ. 317
ಮ. ರಾ	ಬಿ ಎ ಕುಟ್ಟಪ್ಪನವರು		10
,,	ಡಿ ರಾಮರಾವ	,,	5
,,	ಸಿ. ಜಿ ವಾಟ್ಸ್ ಹಾಫ್ಮನ್	,,	15
,,	ಮೇಜರ್ ಇ. ಎ. ಆಟಿನ್‌ಸನ್	,,	50
,,	ಡಾ. ಸಿ. ಕೆ. ಸುಬ್ಬಯ್ಯ	,,	5
,,	ಕ್ಯಾಪ್ಟನ್ ಎ. ಜಿ. ಸೆರಿಡನ್	,,	20
,,	... ಸಿ. ಕೆ. ಉತ್ತಯ್ಯ	,,	2
,,	ಎ ಪಿ ವಿಷ್ಣು	,,	1
	ಮಡಿಕೇರಿ ಜೈಲ್ ವಾರ್ಡರ್‌ಗಳು	,,	3
	ಫ್ರೇಜರ್‌ಪೇಟೆ ಸೋಷ್ಯಲ್ ಸರ್ವಿಸ್		
	ವಿದ್ಯಾ ಶಾಲಾಪತ್ರಕರ್ತರು		
	ಇವರಿಂದ ಜಮೆ ಬಂದದ್ದು	,,	5
ಮ. ರಾ.	ಪಿ ಯು ತಿಮ್ಮಯ್ಯನವರು.	,,	10
		ಒಟ್ಟು.	448

ಡೆಂಟಿಸ್ಟ್ ಮೋಹಮ್ಮದ್ ಎಬ್ರಾಹಿಂ.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.

(ಹೆಂಪ್ಲೇಸ್ ಎದುರುಗಡೆ)

ಸಕಲ ಹಲ್ಲು ರೋಗಗಳನ್ನು ಶೀಘ್ರವಾಗಿ ಗುಣಪಡಿಸುವನು. ಕೃತಕ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಹೊಸ ಒಪ್ಪವಂತೆ ಕಟ್ಟುವನು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [6—41]

ಸೆಲ್ಫ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲು ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನು, ಬರೆಯುವುದನ್ನು, ಮಾತಾಡುವುದನ್ನು ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸುವುದನ್ನು 2 ತಿಂಗಳಲ್ಲಿ ಕಲಿಸಿಕೊಡುವ ಪುಸ್ತಕ. 680 ಪೇಜುಗಳು ... ಇಂಥ ಪುಸ್ತಕ ಇಂದಿನವರೆಗೆ ಪ್ರಕಟವಾಗಿಲ್ಲ. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1ಕ್ಕೆ ರೂ. 2.

೧೨ ಸೆಂಟ್ ಇನ್ನೊಂದು ಇನಾಮು.



ಈ ಪೆನ್ನು ಇಂಗ್ಲೆಂಡಿನಲ್ಲಿ ತಯಾರಾದದ್ದು (Made in England). ಈ ಪೆನ್ನನ್ನು ಈ ವಾರದಲ್ಲಿ ತರಿಸಿಕೊಳ್ಳುವವರಿಗೆ ಬೋನಸ್ ವಲ್ಲಿಗೆ, ಇಷ್ಟು ಜೊತೆ 12 ಸೆಂಟ್ ಚಿನ್ನದ ನಿಬ್ಬು ಸಹಿತ ಪೆನ್ನು 1ಕ್ಕೆ ರೂ. 1—1—0

ವಿಳಾಸ—ಶೋಭಾ ಎಂಡ್ ಕಂಪೆನಿ,
11. ಸೆಯ್ಯದ್‌ಸಾಹೇಬ್ ಸ್ಟ್ರೀಟ್,
52—6 ಶಾಂತಿನಗರ ಪೇಟೆ, ಮದ್ರಾಸು.

ಲಾಭಕರವಾದದ್ದು ಯಾವುದು?



501 ಬಾರ್ಕಿನ ಒಂದು ಇಡೀ ಸಾಬೂನೋ ಯಾ ಅರ್ಧ ನೀರು ಮತ್ತು ಅರ್ಧ ಸಾಬೂನು ರೂಪ ಮಿಶ್ರಿತ ಸಾಬೂನೋ?

ಅನೇಕ ಅಗ್ಗದ ಸಾಬೂನುಗಳಲ್ಲಿ ಅರ್ಧಾಂಶವು ನೀರಾಗಿರುತ್ತದೆ. ಅದರಿಂದಲೇ ಅವು ಬೇಗನೆ ನೀರಾಗುವವು. 501 ಸಾಬೂನು ಅತೀ ಸುಲಭ ಖರ್ಚಿನದು. ಯಾತಕ್ಕೆಂದರೆ ಅದು ಒಳ್ಳೇ ಗಟ್ಟಿ ಸಾಬೂನು. ಅದರಲ್ಲಿ ಅವಶ್ಯಕವಾದಷ್ಟೇ ನೀರಿನ ಅಂಶವಿರುವುದು.

501 Soap

ವಜ್ರ ಕಡಿಮೆ. ವಸ್ತ್ರ ಬಾಳಿಕೆ ಕ್ರಯ ಅತೀ ಕಡಮೆ!

ಇತರ ವಿಷಯಗಳಿಗೆ ಬರೆಯಿರಿ—
ಟಾಟಾ ಕಂಪೆನಿಯ ಶಾಖೆ,
1ಗ. ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು

ತಯಾರಿಸುವವರು.—
ಟಾಟಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ತಾತಾಪುರಂ.
52—8. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ ಎಸ್ ಸುಬ್ಬಣ್ಣ, ಸಂತೆಪೇಟೆ, ಪೊನ್ನಂಪೇಟೆ.

... ಪ್ರಸಿದ್ಧ ಔಷಧಗಳು.

ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಋತುಮತಿಯರಾಗದಿರುವಿಕೆ ಮುಟ್ಟಾಗುವಾಗ ಬರುವ ಹೊಟ್ಟೆನೋವು, ಸೊಂಟನೋವು, ಪಿತ್ತಾಧಿಕ್ಯ, ಬಿಳಿಸೆರಗು, ಅತಿರಕ್ತಸ್ರಾವ, ಸ್ತ್ರೀಯರ ರೋಗಗಳನ್ನು ... ಆರೋಗ್ಯವನ್ನು ಕಾಪಾಡುವ ಗರ್ಭರಕ್ಷಿಣಿಯು,

ದೊಡ್ಡ ಕುಪ್ಪಿ 2-8—0, ಅರ್ಧ ಕುಪ್ಪಿ 1—6—0

ಸ್ವರ್ಣಮಿಶ್ರಿತ
ನವರತ್ನಾಮೃತ.

ಸಿಹಿಯಾದ ನಿಮ್ಮ ಶರೀರವನ್ನು ರಕ್ತವೃದ್ಧಿಯಿಂದ ದೇಹಪುಷ್ಟಿಯನ್ನೂ, ವೀರ್ಯವೃದ್ಧಿಯನ್ನೂ, ಮುಖಪುಷ್ಟಿಯನ್ನುಂಟುಮಾಡಿ, ವೃದ್ಧರನ್ನು ಯೌವನಸ್ಥರನ್ನಾಗಿ ಮಾಡಿ, ಆರೋಗ್ಯವಂತರನ್ನಾಗಿ ಮಾಡುವ ಭಂಗಾರ ಮಿಶ್ರಿತ ಅಮೋಘವಾದ ಟಾನಿಕ್ಕು.

ದೊಡ್ಡ ಕುಪ್ಪಿ 3-8—0 ಅರ್ಧ ಕುಪ್ಪಿ 1—14—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ, ಅರುಚಿ ಪಿತ್ತಾಧಿಕ್ಯ ವಗೈರೆ ಪರಿಹರಿಸಿ, ಜೀರ್ಣಶಕ್ತಿಯನ್ನೂ, ನರಗಳಿಗೆ ತ್ರಾಣವನ್ನೂ, ಮುಖದಲ್ಲಿ ಕಾಂತಿಯನ್ನೂ, ಮನಸ್ಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು.

ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0

ನವರತ್ನ
ಚ್ಯವನಪ್ರಾಶ.

ಉಬ್ಬಸ, ಕೆಮ್ಮು, ದಮ್ಮು, ಕ್ಷಯ, ಕಫದಲ್ಲಿ ರಕ್ತಬೀಳುವಿಕೆ, ಎದೆನೋವು, ಹುಳತೇಗು ವಗೈರೆ ಪರಿಹರಿಸಿ ಶಕ್ತಿಯನ್ನು ಕೊಡುವ ಆಯುರ್ವೇದದಲ್ಲಿನ ಪ್ರಸಿದ್ಧವಾದ ಲೇಹ್ಯವು

$\frac{1}{2}$ lb 1—8—0, $\frac{1}{4}$ lb 0—13—0.

ಒಪ್ಪಿನ ಮಾಹಿತಿಗೆ ಬರೆಯಿರಿ—

ಏಜಂಟರು—ಪಿ. ಎಸ್. ಮಾಚಯ್ಯ, ಒಪ್ಪಳಿ ಅಂಗಡಿ, ಸುಂಟಿಕೊಪ್ಪ.
ಸ್ಟಾಕಿಸ್ಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.

52—8

ನವರತ್ನ ಫಾರ್ಮಸಿ,

ಮಲೇರಿಯಾನ

ಮಲೇರಿಯಾನವು—ಮಲೆ ಜ್ವರ, ಛಳಿ ಜ್ವರ ... ದಿನ ಸಕಲವನ್ನು ಬರುವ ... ಬಿಡದಿರುವ ಜ್ವರಗಳನ್ನು ಗುಣಪಡಿಸುತ್ತದೆ ಜ್ವರಗಡ್ಡೆ ಸಹ ಕರಗಿಸುತ್ತದೆ ಸೀಸೆಗೆ ರೂ 1/8 ಮತ್ತು ಆಣೆ 11.

ರಿಂಗ್ ವರ್ಮ್ ಬಾಮು—ಗಜಕರ್ಣ ಉಗುರಸುತ್ತು, ಹುಳಕಡ್ಡಿ ಮುಂತಾದುವುಗಳಿಗೆ ... ಆಣೆ 5.

ಸಿರಪ್ ಬ್ಲಡ್—ಉಬ್ಬಸ, ಕೆಮ್ಮು, ಕಫ, ದಮ್ಮು ರೋಗಕ್ಕೆ ... ಸೀಸೆಗೆ ರೂ 3—8—0 ಮತ್ತು 1—13—0

ಟೈಗರ ಆಯಿಲ್—ಕಿವಿ ಸೋರುವುದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಾಣುವ ... ಅಸ್ವಸ್ಥಗಳನ್ನು ಗುಣಪಡಿಸುತ್ತದೆ ½ ಬಿನ್ನಿಗೆ ಆಣೆ 8

ಬಾಲಗ್ರಹ ಮಾತ್ರೆ—ಮಕ್ಕಳ ಚೇಷ್ಟೆ, ಕಫ ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೊಲೆಹಾಲು ಕಕ್ಕುವಿಕೆ ಇವುಗಳೆಲ್ಲವನ್ನೂ ಶೀಘ್ರವಾಗಿ ಗುಣಪಡಿಸುವುದು. 100ಕ್ಕೆ ಆಣೆ 8 ಮತ್ತು 50ಕ್ಕೆ ಆಣೆ 1.

ಟೂತ ಪಾವ್ಡರ್—ಹಲ್ಲು ಕೊಳೆತು ರಕ್ತ ಬಿದ್ದು ವಸಡು ಬಾಗಿ ಕೆಟ್ಟ ವಾಸನೆ ಬರುವ ರೋಗಕ್ಕೆ ರಾಮಬಾಣ. ಸೀಸೆಗೆ ಆಣೆ 8

ಚಾರ್ಕೊಲ್ ಟ್ಯಾಬ್ಲೆಟ್—ಪಿತ್ತ ಕಾಮಾಲೆ ತಲೆತಿರುಗುವದು, ಬಾಯಿ ಹುಳಿಯಾಗಿ, ಬಾಯಿ ರುಚಿ ತಪ್ಪುವದು ಅಜೀರ್ಣ, ಮಲಬದ್ಧತೆ ಎದೆ ಉರಿ, ನಿದ್ರಾಭಂಗ, ಎಳೆ ಮೂತ್ರ, ಈ ಮೊದಲಾದ ಪಿತ್ತದ ಲಕ್ಷಣಗಳನ್ನು ಗುಣಪಡಿಸುತ್ತದೆ. ಸೀಸೆಗೆ ರೂ 1—0—0.

ಸಿರಪು ಪೆಸಿಫೂಜಾ, ಮೇಹದ ಕಾಯಿಲೆ—ಪ್ರಮೇಹ, ಮೂತ್ರಕೃಚ್ಛ ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇನ್ನೂ ಹಲವು ಮೂತ್ರರೋಗದ ರೋಗಗಳಿಗೆ ಸಿದ್ಧೌಷಧ. ರೂ. 3—8—0 ಮತ್ತು 1—14—0

... ವರ್ಮ ... ಟಿಲ್ಡೆಗಳು—ಸಕಲ ತರದ ಹೊಟ್ಟೆ ಹುಳಗಳನ್ನು ನಾಶಪಡಿಸುವುದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5, 100ಕ್ಕೆ ರೂ. 2.

ಟೂತ್ ಪಾವ್ಡರ್—ದಂತ ಚೂರ್ಣ. ದಬ್ಬಿಗೆ ಆಣೆ 5.

ಶುದ್ಧ ಆಕ್ಕು ಮದ್ದುಗಳೂ, ಹೋಮಿಯೋಪತಿ ಔಷಧಿಗಳೂ ವಿವಿಧ ರೋಗಗಳಿಗಾಗುವ ಇತರ ಮದ್ದುಗಳೂ ನಮ್ಮಲ್ಲಿ ದೊರಕುತ್ತವೆ.

ಕೆಟಲಾಗು ಧರ್ಮಾರ್ಥ. ಬರೆಯಿರಿ—

The Malariana Co., No. 14, Mangalore,
ಮಲೇರಿಯಾನ ಕಂಪೆನಿ, ಹಂಪನಕಟ್ಟೆ, ನಂಬ್ರ 14, ಮಂಗಳೂರು, ದ. ಕ.
22—31.

ಯುವಕರೂ ನಿರುದ್ಯೋಗ ನಿ.

(ಕಿಲಾಶ.—ಕುಮಾರ್ [illegible])

ಇವರಿಗೆ ಪಟ್ಟಣ ಬೇಕ; ಪಟ್ಟಣದವರು ಬೇಡ ನೆಳು ಅಕ್ಷ ಸುಶಿಕ್ಷಿತ ಯುವಕರನ್ನು ಉದ್ಯೋಗವೇ ಕಾದಿಯುತ್ತದೆ.

ನಿರುದ್ಯೋಗದ ಹಾವಳಿ ಒಂದು ಎಲ್ಲ ಕಡೆಯೂ ಹಬ್ಬಿದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಜಗತ್ತಿನ ವ್ಯಾಪಾರವೆಲ್ಲ ಅಸ್ತವ್ಯಸ್ತವಾಗಿರುವುದು ಅದಕ್ಕೊಂದು ಕಾರಣವೆಂಬುವುದೇನೋ ನಿಜ. ಅದೊಂದೇ ಕಾರಣವೆಂದು ಹೇಳುವುದಕ್ಕೆ ಆಗುವುದಿಲ್ಲ. ಶಾಲೆ ಕಾಲೇಜುಗಳಲ್ಲಿ ಓದಿ ಹೊರಬಿದ್ದವರು ಹೆಚ್ಚಾಗಿ ಹುಡುಕುವದು ಸರಕಾರಿ ಕೆಲಸ, ಅಲ್ಲಿ ಇವರಿಗೆ ಜಾಗೆ ಇಲ್ಲ. ಇದ್ದರೂ, ಯೋಗ್ಯತೆಗಿಂತ ಅರ್ಜಿದಾರರ ಜಾತಿ ಮತಗಳಿಗೆ ಪ್ರಾಮುಖ್ಯತೆ ಹೆಚ್ಚು. ಎಷ್ಟೋ ಕಡೆ! ವ್ಯಾಪಾರಿ ಕೆಲಸಕ್ಕೆ ಇವರು ಹೋಗುವದು ವಿರಳವೇ ಇದೆ. ಹಾಗೆ ಹೋಗಬೇಕೆಂದಿದ್ದರೂ ವ್ಯಾಪಾರಕ್ಕೆ ಹಣ ಬೇಕು. ಅದು ಸಂ ಇದ್ದರೂ ಅನುಭವ ಬೇಕಾದ ಬುದ್ಧಿ ಇವರಿಗಿರಬೇಕಲ್ಲವೇ?

ಇನ್ನೊಂದು ಹಾದಿಯೆಂದರೆ, ಸಾರ್ವಜನಿಕ ಸೇವೆಯನ್ನು ಮಾಡೇ ಸ್ವತಂತ್ರರಾಗಿ ನಡೆದು, ಸೇವೆಗೆ ತಕ್ಕ ವರಮಾನದಿಂದ ಬದುಕುವದು. ಈ ಹಾದಿಯನ್ನು ತುಳಿಯುವವರು ನಮ್ಮಲ್ಲಿ ಬಹಳ ಅಪರೂಪ. ಅವರ ವೈಕಿ ಹೆಚ್ಚು [illegible] ವಕೀಲರು ಮತ್ತು ಡಾಕ್ಟರರು. ಇವರಿಗೆ ಪಟ್ಟಣಗಳನ್ನು ಬಿಟ್ಟರೆ ಬೇರೆ ಗತಿ ಇಲ್ಲ. ಆದರೆ ಇವರ ಸಂಖ್ಯೆಯು ಬೆಳೆಯುತ್ತ ಹೋದಂತೆ ಪಟ್ಟಣಗಳ ಸಂಪತ್ತು ಮಾತ್ರ ಇಳಿಯುತ್ತಿದೆ. ಡಾಕ್ಟರರ ಸಂಪಾದನೆಯು ಹೆಚ್ಚಾಗಿ ವಕೀಲರನ್ನು, ವಕೀಲರನ್ನು ಅವಲಂಬಿಸಿಕೊಂಡಿದೆ; ಮತ್ತು ಇವರ ಸಂಪಾದನೆಯೇ ಹಳ್ಳಿಯವರ ಸ್ಥಿತಿಗತಿಗಳನ್ನು ಅವಲಂಬಿಸಿಕೊಂಡಿದೆ.

ಹಳ್ಳಿಯವರ ಅಭಿವೃದ್ಧಿಗೆ ಅವರ ಬೇಸಾಯ ಕಸಬುಗಳ ದುಸ್ಥಿತಿಯೇ ಕಾರಣ. ಇವುಗಳಿಗೆ ಅವರ ಆರೋಗ್ಯ ಸ್ಥಿತಿಗಳೊಂದು ಕಾರಣ. ಬೇಸಾಯ ಕಸಬುಗಳಿಂದ ಹುಟ್ಟಿದ ಧಾನ್ಯ ವಸ್ತುಗಳು ಚೆನ್ನಾಗಿ ಮಾರಾಟವಾಗುವದು ಇನ್ನೊಂದು ಕಾರಣ. ಮೊದಲನೆಯದು ಹಳ್ಳಿಗಳನ್ನೇ ಅವಲಂಬಿಸಿಕೊಂಡಿದೆ. ಎರಡನೆಯದು ಜಗತ್ತಿನ ಮಾರ್ಕೆಟುಗಳನ್ನು ಅವಲಂಬಿಸಿಕೊಂಡಿದೆ. ಈಗ, ನೆಲಗಡಲೆಗಳ ಬೆಲೆಯು ಜಪಾನ್, ಇಂಗ್ಲೆಂಡ್ ಮುಂತಾದ ದೇಶಗಳ ವ್ಯಾಪಾರವನ್ನವಲಂಬಿಸಿಕೊಂಡಿದ್ದು, ಅದರಂತೆ ಏರುತ್ತ, ಇಳಿಯುತ್ತ ಹೋಗುವುದು ಸಾಮಾನ್ಯವಾಗಿ ತಿಳಿದಿರುವ ವಿಷಯ. ಇತರ ಧಾನ್ಯಗಳ ಬೆಲೆಯು ಮುಖ್ಯವಾದ ಇವುಗಳ ಬೆಳೆಕಷ್ಟೇ ಅನುಸರಿಸಿಕೊಂಡು ಹೋಗುತ್ತದೆ. ಈ ಭಾಗವನ್ನು ಒಕ್ಕಲಿಗರಿಗೆ ಅನುಕೂಲವಾಗುವಂತೆ ನಿಯಮಿಸುವದು ಒಕ್ಕಲಿಗರೊಬ್ಬರ ಕೈಯಲ್ಲಿಯೇ ಇಲ್ಲ. ಪರಸ್ಪರ ವ್ಯಾಪಾರವನ್ನು ನಡೆಸುವ ರಾಷ್ಟ್ರಗಳ, ಅಷ್ಟೇ ಏಕೆ, ಸಕಲ ರಾಷ್ಟ್ರಗಳ ಸಹಾನುಭೂತಿ ಸಹಕಾರಗಳಿಂದಲೇ ಇದಕ್ಕೆ ಯೋಗ್ಯವಾದ ಆರ್ಥಿಕ ತಿದ್ದುಪಡೆಯಾಗತಕ್ಕದ್ದು. ಅದೇನು ಸುಲಭವೋ, ಅದಕ್ಕೆ ಬೇಕಾದ ವಿಚಾರ, ಪ್ರಚಾರ, ಸಮ್ಮೇಳನ, ಸ್ವಲ್ಪವೋ? ಅದಕ್ಕಾಗಿ ಪ್ರಯತ್ನಗಳೇನೋ ಅಲ್ಪ ಸ್ವಲ್ಪ ನಡೆಯುತ್ತಿವೆ. ಆಂತರ್ರಾಷ್ಟ್ರೀಯ ಸಹಕಾರದಿಂದಲೇ ಪ್ರತಿಯೊಂದು ದೇಶದ ಉದ್ಧಾರವಾಗ ಬಹುದು ಎಂಬ ಎಚ್ಚರಿಕೆಯು ಮಾತ್ರ ಎಲ್ಲ ದೇಶಗಳಲ್ಲಿಯೂ ಉಂಟಾಗಿ ದಿನೇ ದಿನೇ ಹೆಚ್ಚುತಲಿದೆ. ಆದರೂ ಮುಂದಾಳುಗಳ [illegible] ಧ್ಯೇಯಗಳು ಕೈಗೂಡಲಿಕ್ಕೆ ಇನ್ನೂ ಎಷ್ಟೋ ವರ್ಷಗಳು ಬೇಕು.

ಈ ಅವಶ್ಯಕ ಬಳ [illegible] ಬೆಳೆಯಬೇಕಾದರೂ ಜಗತ್ತಿನ ಸಂಪತ್ತಿಗೆ ಮೂಲಾಧಾರರಾದ ರೈತರಲ್ಲಿಯೂ, ಕೂಲಿಗಾರರಲ್ಲಿಯೂ ಎಚ್ಚರಿಕೆಯುಂಟಾಗಬೇಕು. ಅವರು "ಬಂದದ್ದು ಬೊಮ್ಮನ ದಯೆ" ಎಂದು ಧನಾಢ್ಯ ಯಜಮಾನರ ಕೈನೆಕ್ಕುತ್ತ ಕೂತಿರುವ ವರೆಗೆ ಜಗತ್ತಿನ ಆರ್ಥಿಕ ಅವ್ಯವಸ್ಥೆ, ಅದರಿಂದುಂಟಾಗುವ ದುರ್ಭಿಕ್ಷ, ದುಃಸ್ಥಿತಿ ಮುಂತಾದುವುಗಳು ಎಂದಿಗೂ ಹೋಗಲಾರವು. ಹಲ ಕೆಲವು ಧನಪ್ರಿಯ ಕೋಟ್ಯಧೀಶ್ವರರು ಅರ್ಧ ಕಾಲು ಹಾಕುವುದರಿಂದಲೇ? ಈ ಅಂತರ್ರಾಷ್ಟ್ರೀಯ ಆರ್ಥಿಕೋದ್ಧಾರವೂ ಬೀಳುತ್ತ, ಏಳುತ್ತ, ನಿಲ್ಲ ಮೆಲ್ಲನೆ ಸಾಗುತ್ತಿದೆ. ಅದರ ಈ ಕೇವಲ ಸ್ವಾರ್ಥಪರ ಕೋಟ್ಯಧೀಶ್ವರರ ಹಿಂಡೇ ರೈತರ, ಕೂಲಿಗಾರರ ಅತೃಪ್ತಾವಸ್ಥೆಯೇ ಕಾರಣವೆಂಬುವುದು ಎಲ್ಲರಿಗೂ ತಿಳಿದು ಬಂದಿದೆ. ಧನಾಢ್ಯರಿಗಂತೂ ಚೆನ್ನಾಗಿ ಗೊತ್ತು; ಆದಕ್ಕಾಗಿಯೇ ಅವರು ರೈತರಿಗೆ, ಕೂಲಿಗಾರರಿಗೆ ಎರಡು ಕಾಸಿನಾದರೂ ಹೆಚ್ಚು ಕೊಟ್ಟಾರೆಯೇ ಹೊರತು, ಎರಡು ನ್ಯಾಯಪರವಾದ ಸ್ವತಂತ್ರವಾದ ವಿಚಾರಗಳನ್ನು ಹೇಳಲಿಕ್ಕೆ ಹೆದರುತ್ತಾರೆ. ಭಯಪಡುತ್ತಾರೆ. ಅವುಗಳನ್ನು ಶಿವಗಿ ಸಹ ಬೀಳಗೊಡಬಾರದು ಎಂಬುದಕ್ಕೇ ಅಲ್ಲವೇ ಮುಸೋಲಿನಿ, ಹಿಟ್ಲರ್, ಮುಂತಾದವರ ಹೊಸ ರಾಜ್ಯಗಳ ವ್ಯವಸ್ಥೆ?

ಸಾರಾಂಶವೇನು? ವಿಶಾಲ ದೃಷ್ಟಿಯಿಂದ ನೋಡಿದರೆ ಜಗತ್ತಿನ ಆರ್ಥಿಕ ಸ್ಥಿತಿಯು ತಿದ್ದುಪಡಿಯಾಗಿ, ಎಲ್ಲ ಕಡೆ ಸುಖ ದುಃಖಗಳು ಹಬ್ಬದೇ ಇರಬೇಕಾದರೆ ಈ ಭೂಮಿಯನ್ನು ತಿಳಿದವರಾಗಿಯೂ ಮುಖ್ಯವಾಗಿ ರೈತರಿಗೆ, ಕೂಲಿಕಾರರಿಗೆ ಯೋಗ್ಯ ಶಿಕ್ಷಣ ದೊರೆಯಬೇಕು. ನಮ್ಮ ಹಳ್ಳಿಗರಾದವು ಎಂಬುವುದನ್ನು ತಿಳಿದುಕೊಳ್ಳುವ ಯೋಗ್ಯತೆ ಅವರಿಗೆ ಬರಬೇಕು. ಅವುಗಳನ್ನು ನಡೆಸಲು ಬೇಕಾದ ಸಾಧನಸಾಮಗ್ರಿಗಳು ಅವರಿಗೆ ದೊರೆಯಬೇಕು. ಆದಕ್ಕಾಗಿಯೇ ಜಗತ್ತಿನ ಕ್ರೈಸ್ತ 'ಲೇಬರ್ ಮೂವ್‌ಮೆಂಟ್'ಗಳು ಉಂಟಾಗಿ ಬೆಳೆಯುತ್ತಿವೆ. (ಅವುಗಳಲ್ಲಿ ಕೆಲವು ಇದೆ ಎಂಬ ಮುಸೋಲಿನಿ ಹಿಟ್ಲರ್ ಮುಂತಾದ 'ಫೆಸಿಸ್ಟ'ರು ಅವುಗಳನ್ನು ತಮ್ಮಲ್ಲಿ ಕರೆಯಿಸಿಕೊಳ್ಳುವುದಿಲ್ಲ.)

ಆದರೆ ಇಂಡಿಯದ ಸ್ಥಿತಿಯು ಇತರ ದೇಶಗಳ ಸ್ಥಿತಿಯಂತಿಲ್ಲ. ಅಲ್ಲಿ ಉದ್ಯಮಗಳು ಹೆಚ್ಚು, ಇಲ್ಲಿ ಬೇಸಾಯ ಹೆಚ್ಚು, ಅಲ್ಲಿ ಕೂಲಿಗಾರರು ಹೆಚ್ಚು, ಇಲ್ಲಿ ರೈತರು ಹೆಚ್ಚು, ಅಲ್ಲಿ ಪಟ್ಟಣಗಳು ಹೆಚ್ಚು, ಇಲ್ಲಿ ಹಳ್ಳಿಗಳು ಹೆಚ್ಚು. ನೂರಕ್ಕೆ ಎಂಬತ್ತಾರರಷ್ಟು ಮಂದಿ ನಮ್ಮಲ್ಲಿ ಹಳ್ಳಿಗಳಲ್ಲಿರುತ್ತಾರೆ. ಹೀಗಿರುತ್ತ ಪಟ್ಟಣಗಳಲ್ಲಿ ನಡೆಯುವ ಚಳವಳಿಗಳ ಗಾಳಿಯೂ ಸಹ ಈ ನಿಂತ್ಕಗ ಹಳ್ಳಿಗಳ ಕಡೆಗೆ ಬೀಸುವುದಿಲ್ಲ. ಈ ಹಳ್ಳಿಗಳಲ್ಲಿಯೇ ಬೇಕಾದ ಎಚ್ಚರಿಕೆ ಉಂಟಾಗಬೇಕು. ಈ ಹಳ್ಳಿಗಳುದ್ಧಾರವೇ ಭಾರತದ ನಿಜವಾದ ಉದ್ಧಾರ. ಇಲ್ಲಿನ ಎಚ್ಚರಿಕೆಯೇ ಇಂಡಿಯದಲ್ಲಾದ ನಿಜವಾದ ಎಚ್ಚರಿಕೆ.

ಈ ಹಳ್ಳಿಗಳು ಹೆಚ್ಚು ಕಡಿಮೆ ಏಳು ಲಕ್ಷ ಇವೆ. ನಿಜವಾದ ದೇಶ ಭಕ್ತರನ್ನು ಸಲಿಗೆ ಉಪಯೋಗವ ಹಾದಿಯು ಇಲ್ಲಿ ತೆರೆದೇ ಇದೆ. ಹಳ್ಳಿಗೊಬ್ಬನಂತೆ ದುಡಿದರೆ ಏಳು ಲಕ್ಷ ಸುಶಿಕ್ಷಿತ ಯುವಕರಿಗೆ ಉದ್ಯೋಗ ನಿಂತಲ್ಲಿಟ್ಟಂತಿದೆ. ಆದರೆ ಸರಕಾರಿ ಶಾಲೆ ಕಾಲೇಜುಗಳಲ್ಲಿ ಕಲಿತವರಿಗೆ ಈ ಬುದ್ಧಿಯೇ ಇಲ್ಲ. ಹಳ್ಳಿಗಳಿಗೊಡವೆಯೇ ಇಲ್ಲ! ಇದ್ದರೂ ಹಳ್ಳಿಗಳಲ್ಲಿ ದುಡಿದುಕೊಂಡು ಹೊಟ್ಟೆ ತುಂಬಿಕೊಳ್ಳುವ ಯೋಗ್ಯತೆ ಇಲ್ಲ. ಇವರಿಗೆ ಪಟ್ಟಣಗಳೇ ಬೇಕು. ಆದರೆ ಪಟ್ಟಣಗಳಿಗೆ ಇವರು ಬೇಡ. ಆದರೆ ಹಳ್ಳಿಯಲ್ಲಿ ನೆಟ್ಟಗಾಗಿ ಇವರು ದುಡಿದರೆ ಆ ಹಳ್ಳಿಯಿಂದಲೇ ಧಾರಾಳವಾಗಿ ಅನ್ನ, ಬಟ್ಟೆ, ಸುಖ ಸೌಕರ್ಯಗಳು ಲಭಿಸಿಯೇ ತೀರುತ್ತವೆ. ಹಾಗೂ ಆ ಹಳ್ಳಿಯಲ್ಲಿಯೂ ಇಂಥವರಿಂದ ಎಷ್ಟೋ ಜಾಗೃತಿಯುಂಟಾಗುತ್ತದೆ. ಇದು ನನ್ನ ಅನುಭವ. ನಮ್ಮಲ್ಲಿ ಅಭ್ಯಾಸ ಮಾಡಿ ಹೋದ ಅನೇಕ ಯುವಕರ ಅನುಭವವೂ ಆಗಿರುವದೇ.

(ಪ್ರೇಮ ವಿದ್ಯಾಪೀಠ ಪತ್ರಿಕೋದ್ಯಮ ಶಾಲೆಯಿಂದ).

ತುಳಸಿಯ ಪ್ರಾಮುಖ್ಯತೆ.

ಔಷಧೋಪಚಾರದ ಗುಣಗಳು ತುಳಸಿ ಗಿಡದಲ್ಲಿ ಎಲ್ಲಕ್ಕಿಂತಲೂ ಮಿಗಿಲಾಗಿವೆ. ಈ ಕುರಿತು ಕವಿರಾಜ ಸುಖರಾಮ ಪ್ರಸಾದ ಬಿ ಎಸ್. ಸಿ. ಅವರು ಪಾಟ್ನ ಪಟ್ಟಣದೊಳಗಿನ 'ಸರ್ಚ್‌ಲೈಟ್' ಪತ್ರಿಕೆಯಲ್ಲಿ ಬರೆಯುವದೇನಂದರೆ:—'ಈ ಗಿಡದ ಬೇರು, ಎಲೆ, ಬೀಜ ಎಲ್ಲವೂ ಔಷಧಕ್ಕೆ ಬರುತ್ತಿದ್ದು ಬೇರೆ ಬೇರೆ ರೋಗಗಳನ್ನು ಗುಣಪಡಿಸುತ್ತವೆ. ಎಲೆಗಳಲ್ಲಿ ಹಳದಿ ಬಣ್ಣದ ಎಣ್ಣೆಯ ಸತ್ವವಿರುತ್ತದೆ. ಇದು ಕರ್ಪೂರದಂತೆ ಉಪಯೋಗಕ್ಕೆ ಬರುತ್ತದೆ. ಬೇರಿನಿಂದ ಜ್ವರಕ್ಕೆ ಉಪಚಾರ ಮಾಡುತ್ತದೆ. ಬೀಜಗಳಲ್ಲಿ ಮೈ [illegible] ಮಾಡುವ ಗುಣವಿದೆ. ಒಣಗಿದ ಗಿಡದಿಂದ ಹೊಟ್ಟೆಯ ನರಗಳನ್ನು ಬಲಪಡಿಸಬಹುದು; ಮತ್ತು ಕಫ ದೂರವಾಗಿ ಬರುತ್ತದೆ. ಎಲೆಗಳಿಂದಲೂ ಕಫ ಪರಿಹಾರವಾಗುವದಲ್ಲದೆ ನೆಗಡಿಯೂ ದೂರವಾಗಬಲ್ಲದು. ಮೇಲಾಗಿ ತುಳಸಿ ಗಿಡಗಳದ್ದಲ್ಲಿ ಗುಂಗಾಡುಗಳು ಸುಳಿಯುವದಿಲ್ಲ. ಈ ಬಗ್ಗೆ ಸರ್ ಜೋರ್ಜ ಬರ್ಡವುಡ್‌ರವರು ಸಾಕ್ಷ್ಯವನ್ನು ಬರೆದಿಟ್ಟಿದ್ದಾರೆ. ಅದೇನಂದರೆ:— 'ಮುಂಬಯಿಯಲ್ಲಿ 'ವಿಕ್ಟೋರಿಯಾ ಉಪವನ' ಹಾಗೂ ಆಲ್ಬರ್ಟ ವಸ್ತು ಸಂಗ್ರಹಾಲಯಗಳ ಕೆಲಸ ನಡೆದಿತ್ತು; ಆ ಕಾಲದಲ್ಲಿ ಗುಂಗಾಡುಗಳ ಉಪಟಳ ವಿಪರೀತ. ಬಂದ ಬಂದ ಸಾಹೇಬರಿಗೆ, ಕೆಲಸಗಾರರಿಗೆ ಗುಂಗಾಡು ಕಚ್ಚಿ ಚಳಿಜ್ವರ ಬಂದು ಬಲು ತೊಂದರೆಯಾಯಿತು. ಆಗ ಹಿಂದು ಮೇಸ್ತ್ರಿಗಳಿದ್ದರು, ಅವರು ಸುತ್ತಲೂ ತುಳಸಿಗಿಡ ಹಚ್ಚಿಸಿದರು. ಕೂಡಲೆ ಗುಂಗಾಡುಗಳೆಲ್ಲ ಕಾಲ್ಕಿತ್ತು ಚಳಿಜ್ವರ ಅಷ್ಟು ಪ್ರಾಬಲ್ಯ ಬಿಟ್ಟು ಓಡಿತು. ಇಂಪೀರಿಯಲ್ ಮಲೇರಿಯಲ್ ಪರಿಷತ್ತಿನವರು, ತುಳಸೀ ಗಿಡದಿಂದ ಚಳಿಜ್ವರ ಪರಿಹಾರವಾಗುತ್ತದೆಂಬ ಅಭಿಪ್ರಾಯಪಟ್ಟಿದ್ದಾರೆ. ಚಳಿಜ್ವರವು ತುಳಸೀ ಉಪಚಾರದಿಂದ ದೂರವಾಗುತ್ತದೆ. ಆಯುರ್ವೇದದಲ್ಲಿಯೂ ವಚನಗಳಿವೆ. ತುಳಸಿ ಎಲೆಗಳ ರಸದಲ್ಲಿ ಕಾಳುಮೆಣಸಿನ ಹುಡಿಯನ್ನು ಹಾಕಿ ಕೊಟ್ಟಲ್ಲಿ ಚಳಿಜ್ವರ ಹೋಗುತ್ತದೆಂಗಿ ಶಾರಂಗಧರರು ಬರೆದಿಟ್ಟಿದ್ದಾರೆ. ಎಲೆಗಳನ್ನು ನಿಂಬೆ ರಸದಲ್ಲಿ ಚೆನ್ನಾಗಿ ಅರೆದು ಹಚ್ಚಿದಲ್ಲಿ ಕಜ್ಜಿ, ಗುಳ್ಳೆಗಳು ನಿವಾರಣವಾಗುತ್ತವೆ. ಇದನ್ನು ಮೈಗೆ ಹಚ್ಚಿಕೊಂಡರೆ ಚರ್ಮವು ಮೃದುವಾಗುವದಲ್ಲದೆ ಚರ್ಮಕ್ಕೆ ಬಿದ್ದ ಕಪ್ಪು ಕಲೆಗಳು ಮಾಯವಾಗಿ ಸೌಂದರ್ಯವು ಹೆಚ್ಚುತ್ತದೆ. ಒಣ ಎಲೆಗಳನ್ನು ಪುಡಿ ಮಾಡಿ ಸೇದಿದಲ್ಲಿ ಪೀನಾಸ ರೋಗವು ದೂರವಾಗುತ್ತದೆ. ಕಿವಿ ನೋವಾದರೆ ಎಲೆಗಳ ರಸವನ್ನು ಕಿವಿಯಲ್ಲಿ ಹಿಂಡಬೇಕು. ಅಂದರೆ ಕಿವಿ ನೋವು ನಿಲ್ಲುತ್ತದೆ. ಮಕ್ಕಳಿಗೆ ಆಗುವ ಅನೇಕ ರೋಗಗಳು ಎಲೆ ತಿನ್ನಿಸಿದರೆ ಗುಣಹೊಂದುತ್ತವೆ. ಇದೇ ಉಪಚಾರದಿಂದ ಯಕೃತ್ತು, ಕಾಲರಾ ನಿವಾರಣವಾಗಬಲ್ಲದು. ಏಲಕ್ಕಿಯ ಹಿಟ್ಟನ್ನು ಎಲೆಯ ರಸದಲ್ಲಿ ವಿಶ್ರಮಾಡಿಕೊಟ್ಟರೆ ವಾಂತಿಯ ನಿಲ್ಲುತ್ತದೆ. ಯಾವದೇ ಪ್ರಕಾರದ ವಾಂತಿಯು ಇದ್ದರೂ ಈ ಮದ್ದಿನಿಂದ ನಿಲ್ಲುತ್ತದೆ. [illegible] ದೂರಮಾಡುವುದಕ್ಕೂ ಈ ಎಲೆಯ ರಸವನ್ನು ಹಚ್ಚಬೇಕು. ಆ ಎಲೆಯು ಒಂದು ಕಪ್ಪು ಕಲೆ ತುಳಸಿ ರಸದಲ್ಲಿ ಹಾಕಿ ಬೆರಸಿ ಬೆಳಗ್ಗೆ ಕುಡಿದಲ್ಲಿ ಚಳಿಜ್ವರದ ಬಾಧೆಯಾಗುವದಿಲ್ಲ. ಕಫ ಜ್ವರದ ಬಗ್ಗೆ ಸಹ ತುಳಸಿಯ ಉಪಚಾರ ಮಾಡಬಹುದು. ತುಳಸಿ ಗಿಡದ ಬೇರುಗಳನ್ನು ಸರಿಯಾಗಿ ಕುಟ್ಟಿ ಬೆಣ್ಣೆಯಲ್ಲಿ ಮಿಶ್ರಗೊಳಿಸಿ ತುಳಸಿ ಎಲೆ [illegible] ನೋವು ಇಟ್ಟು ಕರ್ಪೂರದಂತಹ ಭಾಗಕ್ಕೆ ಹಚ್ಚಬೇಕು. ಈ ಮಿಶ್ರಣವು ಕಣ್ಣಿನ ಬಳಿ ಆದನ್ನು ಸೇರದು ಮಾತ್ರವೇ ಹಚ್ಚಬೇಕು. ಹೀಗೆ ಮಿಶ್ರಣವು ಕಣ್ಣುಗಳ ಮೇಲೆ ಹಚ್ಚಬಾರದು. ಈ ಮಿಶ್ರಣವು ವಿಷವನ್ನು ಹೀರಿಕೊಳ್ಳುವುದರಿಂದ ತಪ್ಪುಗಳು ಆರದು. ಎಲೆಗಳ ಕಷಾಯ ಮಾಡಿ ಅದರೊಳಗೆ ಒಂದಿಷ್ಟು ಸಕ್ಕರೆ ಅಥವಾ ಹಾಲು ಹಾಕಿಕೊಂಡಲ್ಲಿ ದಣಿವು ಪರಿಹಾರವಾಗುತ್ತದೆ. ಪ್ಲೇಗ್ ನೆಗ, ಕಫ [illegible] ಇಲ್ಲ. ತುಳಸೀ ಬೀಜಗಳಿಂದ ವೀರ್ಯವರ್ಧನವಾಗುತ್ತದೆ. 18 ಗ್ರೇನು ($\frac{1}{10}$ ತೊಲೆ) ತುಳಸೀ ಬೀಜದ ಪುಡಿ 36 ಗ್ರೇನು ($\frac{1}{5}$ ತೊಲೆ) ಹಳೇ ಬೆಲ್ಲ ಇವನ್ನು ಮಿಶ್ರಮಾಡಿ ದಿನಾ ಬೆಳಗ್ಗೆ ಸಂಜೆ ಆಕಳ ಹಾಲಿನಲ್ಲಿ ತೆಗೆದುಕೊಳ್ಳಬೇಕು; ಮತ್ತು ಬ್ರಹ್ಮಚರ್ಯದಲ್ಲಿ ಇರಬೇಕು; ಸಾತ್ವಿಕ ಆಹಾರ ತೆಗೆದುಕೊಳ್ಳಬೇಕು; ಆದರೆ ಮನುಷ್ಯನು ಗಟ್ಟಿಗನಾಗುವನು. ತಿನ್ನುವ ಎಲೆ ಸುಗಂಧ ತುಳಸಿ ಬೀಜ ತಿಂದ ಕೆರಿಂದರೆ ಸಿರಿ [illegible] ಮಾರಾಟವಾಗುತ್ತದೆ!

ನ ಯ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆ.

ಸ್ಥಳ:—ಗದಗ (ಕಾಂಗ್ರೆಸ್ ಆಫೀಸ್.)

ತಾರೀಕು 31—6—1935ನೇ ರವಿವಾರ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಗದುಗಿನ ಕಾಂಗ್ರೆಸ್ ಕಚೇರಿಯಲ್ಲಿ ಮಧ್ಯಾಹ್ನ 3 ಗಂಟೆಗೆ ಕೂಡುವದು. ಈ ಸಭೆಯು ಅತ್ಯಂತ ಮುಖ್ಯವಿರುವದು. ಸದ್ಯದ ಪರಿಸ್ಥಿತಿಯ ವಿಷಯವಾಗಿ ಪ್ರಾಂತ್ಯದ ಅಭಿಪ್ರಾಯವನ್ನು ಈ ಸಭೆಯಲ್ಲಿ ನಿಶ್ಚಯಿಸಬೇಕಾಗಿದೆ. ಆದುದರಿಂದ ಎಲ್ಲಾ ಸಭಾಸದರು ಬರಬೇಕಾಗಿ ವಿನಂತಿ ಇದೆ.

ವಿಷಯಗಳು.

1 ಮಂಗಳೂರು ಪ್ರಾಂತೀಕ ಪರಿಷತ್ತಿನ ನಿರ್ಣಯಗಳ ಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಭಿಪ್ರಾಯ.

(2) ವಿಧಾಯಕ ಕಾರ್ಯಕ್ರಮದ ವಿಚಾರ

(3) ಅಧ್ಯಕ್ಷರ ಅಪ್ಪಣೆಯಿಂದ ಬಂದಿತರ ವಿಷಯಗಳು

ಕ ಪ್ರಾ. ಕಾ. ಕ. ಧಾರವಾಡ.	ರಾ. ಶ್ರಿ. ಹುಕ್ಕೇರಿಕರ ಪ್ರಧಾನ ಕಾರ್ಯದರ್ಶಿ.

ಟೀಪು:—ಅದೇ ದಿವಸ ಅಪರಾಹ್ನ 1 ಗಂಟೆಗೆ ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಕಮಿಟಿಯ ಕೌನ್ಸಿಲ್ ಸಭೆಯೂ ರಾತ್ರಿ 8 ಗಂಟೆಗೆ ಅಖಿಲ ಕರ್ನಾಟಕ ಗ್ರಾಮ ಸೇವಾ ಸಂಘದ ಸಭೆಯೂ ಸಹ ಸೇರುವದು.

ಕ್ವೆಟ್ಟಾದ ಗುಟ್ಟೇನು?

ಕ್ವೆಟ್ಟಾ ಪಟ್ಟಣವು ಭೂಕಂಪಕ್ಕೆ ಆಹುತಿಯಾಗಿರುವುದರ ವಿಷಯವು ಸರ್ವ ವಿದಿತವಾದುದು. ಅಲ್ಲಿ ಆಗಿರುವ ಅಸ್ತಿ ಪಾಸ್ತಿಗಳ ಅಪಾರ ನಷ್ಟವಂತೂ ಹೇಳತೀರದು. ಈ ನಷ್ಟ ಕಷ್ಟಗಳ ಪರಿಮಿತಿಯು ಬಿಹಾರದಲ್ಲಿ ಆಗಿದ್ದುದಕ್ಕಿಂತಲೂ ಮಿಗಿಲಾದುದು; ಇಲ್ಲಿಗೆ ಈಗ ಆಗಬೇಕಾಗಿರುವ ಪರಿಹಾರವೂ ಅಷ್ಟೇ ಮಿಗಿಲಾದುದೆಂದು ಮತ್ತೊಂದೆ ಹೇಳಬೇಕು. ಆದರೂ ಸರಕಾರದವರು ಖಾಸಗಿ ಪರಿಹಾರ ಸಮಿತಿಗಳವರನ್ನು ಕ್ವೆಟ್ಟಾ ಪ್ರದೇಶಕ್ಕೆ ಹೋಗಲು ಅಪ್ಪಣೆಯನ್ನೀಯುತ್ತಿಲ್ಲ. ಬಿಹಾರದಲ್ಲಿ ಈ ಅಡಚಣೆಯಿರಲಿಲ್ಲ.

ಹೀಗೆ ಸರಕಾರದವರು ಅಡಚಣೆಯನ್ನೊಡ್ಡಲು ಕಾರಣವಿಲ್ಲವಂತೆ! ಪ್ರಬಲವಾದ ಕಾರಣಗಳು! ರಹಸ್ಯವೂ ಹೌದು!

ಕ್ವೆಟ್ಟಾನಗರದ ಸ್ಥಾನವಂತಹುದು. ಇಂಡಿಯಾ ದೇಶದಲ್ಲಿ—ಅದರಲ್ಲೂ ಸಾಮ್ರಾಜ್ಯದಲ್ಲಿ—ಅದಿದ್ದ ಸ್ಥಾನವು ಹಿರಿಯಂತಹುದು. ಇದು ಇಂಡಿಯಾ ದೇಶದ ಪಶ್ಚಿಮದ ಸರಹದ್ದಿನಲ್ಲಿದೆ. ಪಶ್ಚಿಮದಿಕ್ಕಿನಿಂದ ಪರಕೀಯರು ಬಾರದಿರುವಂತೆ ರಕ್ಷಿಸುವ ಭಾಗವದು. ಆದುದರಿಂದಲೇ ಆಂಗ್ಲೇಯರು ಅಲ್ಲಿ ತಮ್ಮ ಸೈನ್ಯವನ್ನು ಇಟ್ಟಿದ್ದರು. ಅದನ್ನು ಸಾಮ್ರಾಜ್ಯದ ರಕ್ಷಣ ಕೇಂದ್ರಗಳಲ್ಲೊಂದನ್ನಾಗಿ ಮಾಡಿದ್ದರು.

ಹೀಗೆ ಅದನ್ನು ರಕ್ಷಣ ಕೇಂದ್ರವನ್ನಾಗಿ ಮಾಡಿದ್ದ ವಿಚಾರವೂ ರಹಸ್ಯವೇ ಹೌದು. ಈಗ ಭೂಕಂಪದ ದೆಸೆಯಿಂದ ಅದು ಬಹಿರಂಗವಾಗುವ ಸಂಧಿಯೊದಗಿದೆ. ಆದರೂ ಸರಕಾರದವರು ಅದನ್ನು ಕಾಪಾಡುವುದೊಂದೆ ಅಲ್ಲದೆ, ಆತನಿಂದ ಅಕಸ್ಮಾತ್ತಾಗಿ ಅದೇನು ಸಂಭವಿಸುವಂತಹುದನ್ನು ತಪ್ಪಿಸಲಿಚ್ಛಿಸಿದ್ದಾರೆ.

ಕ್ವೆಟ್ಟಾ ನಗರದ ಸುತ್ತಮುತ್ತಣ ಪ್ರಾಂತವೆಲ್ಲವೂ ಬರಿ ಮದ್ದಿನ ಗೂಡುಗಳು. ಎಲ್ಲವೂ ಭೂಗರ್ಭದಲ್ಲಿ ಅಡಗಿವೆ: ಕ್ಷಣಮಾತ್ರದಲ್ಲಿ ಅನೇಕ ಮೈಲುಗಳ ಭೂಭಾಗವನ್ನು ಆಕಾಶಕ್ಕೆ ಎಸೆಯುವಷ್ಟು ಮದ್ದಿನ ಪುಡಿಯು ಅಲ್ಲಿ ಅಡಗಿಸಲ್ಪಟ್ಟಿದೆಯಂತೆ! ಒಂದು ವೇಳೆ ಆ ಪ್ರಾಂತ್ಯವೇನಾದರೂ ಶತ್ರುಗಳ ವಶವಾದಲ್ಲಿ ಆ ಮದ್ದಿನ ಮನೆಗಳಿಗೆ ಬೆಂಕಿ ಕೊಟ್ಟು ಆ ಭೂಮಿಯನ್ನೇ ಮೇಲಕ್ಕೆ ಎಸೆಯುವಂತೆ ಮಾಡಿದ್ದಾರಂತೆ!

ಕೊಡಗು.

ಸನ್ ೧೯೩೫ನೇ ಇಸವಿ

ಜೂನ್ ತಾ ೨೮ನೇ ಶುಕ್ರವಾರ.

೧೯೩೩—೩೪ ನೇ ವರ್ಷದ ಸಹಕಾರಿ ಸಂಘಗಳ ವರದಿ.

ಸನ್ 1934ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ ವರ್ಷದಲ್ಲಿ ಕೊಡಗಿನ ಸಹಕಾರಿ ಕ್ಷೇತ್ರದಲ್ಲಿ ನಡೆದ ಕಾರ್ಯ ಕಲಾಪಗಳನ್ನು ಕುರಿತು ಸಹಕಾರಿ ಸಂಘಗಳ ರಿಜಿಸ್ಟ್ರಾರರು ವಾರ್ಷಿಕವಾಗಿ ಪ್ರಕಟಿಸುವ ವರದಿಯು ಹೊರಬಿದ್ದಿದೆ. ಇದರ ಪ್ರಕಾರ ವ್ಯವಸಾಯಿಕ ಪತ್ತಿನ ಸಂಘಗಳ ಸಂಖ್ಯೆಯು (157) ಹಿಂದಿನ ವರ್ಷದಕ್ಕಿಂತ ಒಂದು ಕಡಿಮೆಯಾಯಿತು; ಅದರ ಮೆಂಬರುಗಳ ಸಂಖ್ಯೆಯು 8653 ರಿಂದ 8981 ಕ್ಕೂ, ಪಾಲು ಭಂಡವಾಳವು ರೂ. 1,52,988 ರಿಂದ ರೂ. 1,56,778 ಕ್ಕೂ ಮತ್ತು ಚಲಾವಣೆಯ ಭಂಡವಾಳವು ರೂ. 6,41,800 ರಿಂದ ರೂ. 7,08,101ಕ್ಕೂ ಏರಿದವು. ಸಂಘಗಳಿಂದ ಸದಸ್ಯರುಗಳಿಗೆ ಕೊಟ್ಟ ಸಾಲಗಳ ಮೊಬಲಗು ರೂ. 1,53,771 ರಿಂದ ರೂ. 1,48,780 ಕ್ಕೆ ಇಳಿಯಿತು; ಮತ್ತು ವರ್ಷಾಂತ್ಯದಲ್ಲಿ ಮೆಂಬರುಗಳ ಮೇಲಿದ್ದ ಸಾಲಗಳ ಮೊಬಲಗು ರೂ. 5,81,044ರಿಂದ ರೂ. 6,31,431ಕ್ಕೆ ಏರಿತು. ಸಾಲ ವಸೂಲಾತಿಯು ಶೇಕಡ 40 ರಿಂದ 41.09 ಕ್ಕೆ ಏರಿತು.'

ಇದರಿಂದ ಸಹಕಾರಿ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯಲಿಲ್ಲವೆಂಬುದು ಕಂಡುಬರುತ್ತದೆ. ಆದರೆ ಒದಲು ಇರುವ ಸಂಘಗಳನ್ನೇ ಪುನಸ್ಸಂಘಟಿತವಾಗಿ ಮಾಡಲು ಯುಕ್ತವೆಂದು ಸೂಚಿಸಲಾಗಿದೆ. ಪ್ರತಿಯೊಂದು ಗ್ರಾಮಕ್ಕೂ ತನ್ನದೊಂದು ಸಹಕಾರಿ ಸಂಘವಿರಬೇಕಾದ್ದು ಅಗತ್ಯ. ಆದರೆ ಕೊಡಗಿನಲ್ಲಿ ಹಾಗೆ ಸಂಘಗಳಿಲ್ಲದ ಗ್ರಾಮಗಳು ಇನ್ನೂ ಹಲವು ಇವೆ. ಈ ಕಾರಣ ಇರುವ ಸಂಘಗಳನ್ನು ಒಂದುಗೂಡಿಸುವ ಕೆಲಸದೊಂದಿಗೆ ಸಹಕಾರಿ ಚಳವಳಿ ಕ್ಷೇತ್ರವನ್ನು ವಿಸ್ತರಿಸುವ ಕೆಲಸಕ್ಕೂ ಗಮನಕೊಡಬೇಕಾಗಿದೆ. ಸಾಲ ವಸೂಲಾತಿಯು ಹಿಂದಿನ ವರ್ಷಕ್ಕಿಂತ ಶೇಕಡ 1.09 ರಷ್ಟು ಉತ್ತಮವಾಗಿದ್ದರೂ, ಅದು ಏನೂ ತೃಪ್ತಿಕರವಲ್ಲ. ಅದಕ್ಕೆ ರೈತರುಗಳು ಸರ್ವರಿಗೂ ಗೊತ್ತಿರುವಂತೆ, ಬೆಳೆ ಬೆಲೆ ಕಡಿಮೆಯಾದುದೇ ಮುಖ್ಯ ಕಾರಣವು. [illegible] ಇಲ್ಲದಿರುವುದೂ ಅಗಿದೆ. ಗ್ರಾಮಸ್ಥರು ತಮ್ಮ ಮುಖ್ಯ ಬೆಳೆ ಒಂದರ ಮೇಲೆಯೇ ನಂಬಿಕೊಂಡಿರಲು ಬಿಡದೆ, ಉಪ ಕೈಗಾರಿಕೆ [illegible] ಅವರಿಗೆ ತೋರಿಸಿಕೊಟ್ಟು, ಅವುಗಳಿಗೆ ಬೇಕಾದ ಸಹಾಯವನ್ನು ಸಹಕಾರಿ ಸಂಘಗಳು ಮಾಡಬೇಕಾಗಿದೆ.

ಜನರ ಸಾಲ [illegible] ಕಂಡುಬರುತ್ತದೆ. ಸಂಘಗಳಲ್ಲಿ ಸಾಲದ ಬಡ್ಡಿಯ ದರವನ್ನು ಶೇಕಡ 10 ರಿಂದ 9 3/8 ಕ್ಕೆ ಇಳಿಸಿರುವುದಲ್ಲದೆ ಒಂದು ಸಂಘದವರು ಶೇಕಡ 6 1/4 ರಷ್ಟು ಬಡ್ಡಿ [illegible] ಇದೆಯೆಂದೂ ವರದಿಯಲ್ಲಿ ಕಾಣಿಸಲಾಗಿದೆ. ಜನರ ಅವಶ್ಯಕತೆಗಳು ದಿನೇ ದಿನೇ ಹೆಚ್ಚುತ್ತಾ ಉತ್ಪತ್ತಿಯನ್ನು ಮಿತಿಗೊಳಿಸುತ್ತಿರುವಲ್ಲಿ ಬೀರ್ಘ ಕಾಲಗಳಿಂದ ಗ್ರಾಮಸ್ಥರಿಗೆ ಹೆಚ್ಚಿನ ಪ್ರಯೋಜನವಾಗುವುದೇ ಹೊರತು [illegible] ಹೇಳಲು ಸಾಧ್ಯವಿಲ್ಲ. ಬಡ್ಡಿಯ ದರವನ್ನು ಇಳಿಸಬೇಕಾದದ್ದು ಅತ್ಯವಶ್ಯ. ಅದಕ್ಕೋಸ್ಕರ ಸಹಕಾರಿ ಸೆಂಟ್ರಲ್ ಬ್ಯಾಂಕಿನವರು ಇಟ್ಟಿರುವ ಬಡ್ಡಿಯನ್ನು ರೂ. 7—4—0 ರಿಂದ ರೂ. 6—8—0ಗೆ ಇಳಿಸಿರುವಾಗ್ಯೂ ಸಂಘಗಳು ತಮ್ಮ ದರವನ್ನು ಇಳಿಸಬೇಕಾದದ್ದು ಸಹಜವಾಗಿದೆ.

ಹಿಂದಿನ ವರ್ಷದಲ್ಲಿ ಧವಸ ಭಂಡಾರಗಳ ಸಂಖ್ಯೆಯು 55ರಿಂದ 54ಕ್ಕೆ ಇಳಿಯಿತು. ಮೆಂಬರುಗಳ ಸಂಖ್ಯೆಯೂ 9 ಕಡಿಮೆಯಾಯಿತು. ಒಟ್ಟಿಗೆ ರೂ. 3 [illegible] ಒಟ್ಟು ಧನದ ಬೆಲೆಯು ರೂ. 41,415 ಆಗಿತ್ತು. ಸಾಲವಾಗಿ ಕೊಟ್ಟ ಧನದ ಬೆಲೆ ರೂ. 26,177 ಆಗಿತ್ತು. ವರ್ಷದಲ್ಲಿ ವಸೂಲಾಗಬೇಕಾಗಿದ್ದ ರೂ 31,003ರ ಬೆಲೆಯ ಧನದಲ್ಲಿ ರೂ. 25,325ರಷ್ಟು ಮಾತ್ರ ವಸೂಲಾಗಿ ರೂ. 6,678ರಷ್ಟು ಬಾಕಿ ಉಳಿದಿದೆ. ಈ ವಸೂಲಾತಿಯು ತೃಪ್ತಿಕರವಲ್ಲ. [illegible] ಶೇಕಡ 14ರಿಂದ 25ರಷ್ಟಾಗಿತ್ತು. ಈ ಕಡೆಯಲ್ಲಿ [illegible] ಭಂಡಾರಗಳ ಒಟ್ಟು ಧನದ ಬಡ್ಡಿ (ಹಿಂದಿನ ವರ್ಷದ) ರೂ. 2,421 ರಿಂದ ರೂ 1,466 ಕ್ಕೆ ಇಳಿದಿದೆ. ಇದು ಲಾಭಗಳ ಕಡೆ ಗಮನಕೊಡುವ ಕಾಲವಲ್ಲ; ಜನರ ಬಡ್ಡಿ, ಸಾಲದಲ್ಲಿ ಮುಳುಗಿ ನರಳುತ್ತಿರುವ ರೈತರಿಗೆ ಎಲ್ಲಾ ವಿಧದಲ್ಲಿ ಸಹಾಯದ ಕೈಯನ್ನು ನೀಡಬೇಕಾದದ್ದು ಅತ್ಯಗತ್ಯ.

ಭೂಕಂಪದ ನಿರಾಶ್ರಿತರಿಗೆ ಸಹಾಯ.

ಕಾಂಗ್ರೆಸು ಅಧ್ಯಕ್ಷರ ಪ್ರಕಟಣೆ.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಈ ತಾ 21 ರಲ್ಲಿ ಈ ಕೆಳಗಿನ ಸಂದರ್ಭದ ಪ್ರಕಟಣೆಯನ್ನು ಹೊರಡಿಸಿರುವರು:—

[illegible]	ರೂ	3,14,01,970
[illegible] ಪಾಲಿಸಿಗಳು	ರೂ	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ	16 29 88 814
ಫಂಡ್, [illegible]	ರೂ	15 53,88 843

ಈ [illegible] ಫಲಿತಾಂಶಗಳು "ಓರಿಯಂಟಲ್" ಕಂಪೆನಿಯ [illegible] ಪ್ರಸಿದ್ಧಿಯನ್ನು [illegible]

ಈ ಪ್ರಸಿದ್ಧಿಗೊಂಡಿರುವ [illegible] ಕಂಪೆನಿಯಲ್ಲಿ ವಿಮೆ [illegible]

[illegible] ಕೆಳಗಿನ [illegible] —

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ [illegible]

ಆಗ್ರ	[illegible]	[illegible]	[illegible]	ರಂಗೂನು
ಅಹ್ಮದಾಬಾದು	ಕಲ್ಕತ್ತಾ	[illegible]	ನಾಗಪುರ	ರಾವಲ್ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲಹಾಬಾದು	ಢಾಕ್ಕಾ	ಲಕ್ನೋ	ಪೂನ	[illegible]
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
[illegible]	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂದ್ರಮ್
ಬರೇಲಿ	ಬೆಲಗಾಂ	[illegible]	ರಾಂಚಿ	ವಿಶಾಖಪಟ್ಟ
[illegible]	ಗೆಂಟೂರು	[illegible]	[illegible]	ಮಧುರೆ

ಓರಿಯಂಟಲ್ ಬಿಲ್ಡಿಂಗ್ಸ್, } [illegible] ಪೇರೇಡ್, ಬೆಂಗಳೂರ. } 52—24

ಎಂ. ವಿ. [illegible] ನಾಯುಡು,
(ಬ್ರಾಂಚ್ ಸೆಕ್ರೆಟರಿ)

[illegible] 3—4 [illegible] 1—0—0 3[illegible] 4—0—0 6[illegible] 7—8—0 12[illegible] 14—0—0

ರಕ್ತ ಕಷಾಯ

[illegible] 1 4—0 [illegible] 3—8 0 [illegible] 6—12—0

[illegible] 1[illegible] 1 1 [illegible] 3—8—0

[illegible] 1/-[illegible] 2—10—0, [illegible] 2—0—0 3[illegible] 5—8—0

[illegible]

52—17 [illegible] [illegible]

Printed & published by P. I Belliappa at "Kodagu" Press, Mercara for "Kodagu" Ltd

For Sale.

KODAGARAHALLI ESTATE

Kodagarahalli Estate adjoining Coorghally Estates Ltd, near 11th mile Stone Mercara—Farzerpet road Sunticoppa

For particulars apply to:—

K. Narsimha Murthy
Brahmin Valley,
Mercara

ಮಾರಾಟಕ್ಕಿದೆ.

ಮಡಿಕೇರಿಯಿಂದ ಫ್ರೇಜರ್‌ಪೇಟೆಗೆ ಹೋಗುವ 11 ನೇ ಮೈಲು ಕಲ್ಲಿನ ಬಳಿ ಇರುವ ಕೂರ್ಗಳ್ಳಿ ಕಂಪೆನಿ ... ತೋಟಕ್ಕೆ ಹೊಂದಿಕೊಂಡಿರುವ ಕೊಡಗರಹಳ್ಳಿ ತೋಟವು ಮಾರಾಟಕ್ಕೆ ಸಿದ್ಧವಾಗಿದೆ. ಕೊಳ್ಳಲು ಅಪೇಕ್ಷಿಸುವವರು ಹೆಚ್ಚಿನ ವಿವರಗಳಿಗೆ ತಿಳಿದುಕೊಳ್ಳುವುದು.

ಕೆ. ನರಸಿಂಹ ಮೂರ್ತಿ,
ಬ್ರಾಹ್ಮಣ ಕಣಿವೆ,
8—7 ಮಡಿಕೇರಿ.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ್ ಕಂಪನಿ (?)

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿಕ ಜ್ವರ, ... ಜ್ವರ, ... ಜ್ವರ ಇತ್ಯಾದಿ ... ರಾಮಬಾಣದಂತೆ ಇವೆ. ... ಬರೆದು ತರಿಸಿಕೊಳ್ಳಿ.

ಗಣೇಶ ... ಕಂಪನಿ,
(52—39) ... ಕಂಪನಿ,
... ಮುಂಬಯಿ,

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲ್ಗಳನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಅಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲ ಕಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಕೆ. ಟಿ. ಡೋಂಗರೆ ಕಂಪನಿ,
(52—18) ಗಿರಿಗಾಂವ್, ಮುಂಬಯಿ.

ARMS & AMMUNITION.

All kinds of World Famous Guns, Rifles, Revolvers, Pistols, Hunting and Fishing Requisites at Lowest Competitive prices.



CURRENT CATALOGUE FREE

HUNTING & FISHING REQUISITES.

The Bombay Armoury,
329–331, Abdul Rehman Street,
12—3 BOMBAY, 3.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—16 ಬೆಂಗಳೂರು.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಮೇಲ್ಕಂಡ ಕಂಪೆನಿಯ ಶೇರ್ ಹೋಲ್ಡರುಗಳ 38ನೇ ವಾರ್ಷಿಕ ಜನರಲ್ ಮೀಟಿಂಗು ಕಳೆದ ಏಪ್ರಿಲ್ ತಾ. 24ರಲ್ಲಿ ನಡೆಯಿತು. ಎ. ಡುಕ್ಕಂ ಕೆ. ಆರ್. ಕಾವಸಜಿರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಕಂಪೆನಿಯ ವಾರ್ಷಿಕ ವರದಿಯ ಪರಿಶೀಲನೆಯಿಂದ ಇದು ವರ್ಷ ವರ್ಷಕ್ಕೆ ಅಭಿವೃದ್ಧಿಯನ್ನೈದುತ್ತಾ ಬಂದಿದೆಯೆಂದೂ, ಇದರ ಆರ್ಥಿಕ ಸ್ಥಿತಿಯು ಉತ್ತಮವಾಗಿಯೂ, ಭದ್ರವಾಗಿಯೂ ಇದೆಯೆಂದೂ ತಿಳಿಯುತ್ತದೆ. ಫೆಬ್ರವರಿ ತಾ. 28ಕ್ಕೆ ಮುಗಿದ ಒಂದು ವರ್ಷದಲ್ಲಿ 3,511 ಹೊಸ ಪಾಲಿಸಿಗಳು ಕೊಡಲಾಗಿದೆ. ಅಂದರೆ ಇದು ಹಿಂದಿನ ಸಾಲಿಗಿಂತಲೂ 909 ಪಾಲಿಸಿಗಳು ಹೆಚ್ಚಾಗಿ 9,33,000 ರೂ. ಗೆ ಹೆಚ್ಚಾಗಿ ವಿಮೆ ಮಾಡಲಾಗಿದೆ. ಈ ಕಂಪೆನಿಯಲ್ಲಿ ಕಳೆದ ಸಾಲಿನಲ್ಲಿ ಜನರು ಇನ್‌ಷ್ಯೂರೆನ್ಸ್ ಮಾಡಿಸಬೇಕಾಗುಗಳು ಅನೇಕ ಸಂದರ್ಭದಲ್ಲಿ ತಕ್ಕೇನೂ ಭಾಗವಾಗಿಲ್ಲದಿರುವುದರಿಂದ ವಿಮೆ ಮಾಡಿಸುವ ನೌಕರಿಗಳ ಸಂಖ್ಯೆ ಕಳೆದ ಸಾಲಿಗಿಂತಲೂ ಸ್ವಲ್ಪ ಕಡಿಮೆಯಾಗಿರುತ್ತದೆ. ಕಳೆದ ಸಾಲಿನಲ್ಲಿ ಪಾಲಿಸಿದಾರರುಗಳ ಮರಣದಿಂದ ಸುಮಾರು 12 ಲಕ್ಷ ರೂ. ಅವರ ನಾಮಿನಿಗಳಿಗೆ ಹಂಚಲಾಗಿದೆ. ಇದು ಹಿಂದಿನ ಸಾಲಿಗಿಂತಲೂ ಸ್ವಲ್ಪ ಹೆಚ್ಚಾಗಿದೆಯೆಂದೇ ಹೇಳಬೇಕು. ಪಾಲಿಸಿಗಳ ಅವಧಿ ಪೂರ್ತಿ ಹಣ ಪಡೆದವರ ಸಂಖ್ಯೆ ಕಳೆದ ಸಾಲಿಗಿಂತಲೂ ಈ ಸಾಲಿನಲ್ಲಿ ಬಹಳ ಕಡಿಮೆಯಾಗಿದೆ. ಕಳೆದ ಸಾಲಿನಲ್ಲಿ 26,84,000 ರೂ. ಗಳು ಅವಧಿ ಪೂರ್ತಿಯ ಸಂಬಂಧ ಪಾಲಿಸಿದಾರರಿಗೆ ಕೊಡಲಾಯಿತು. ಹಿಂದಿನ ಸಾಲಿನಲ್ಲಿ 1,43,000 ರೂ. ವಾಪಸು ಕೊಡಲಾಗಿದೆ. ಪ್ರೀಮಿಯಂ ಆದಾಯವು ಕಳೆದ ಸಾಲಿಗಿಂತಲೂ 1,94,000 ರೂ. ಹೆಚ್ಚಾಗಿರುವುದನ್ನು ನೋಡಿದರೆ ಕಂಪೆನಿಯು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬುದು ಎಲ್ಲರಿಗೂ ವೇದ್ಯವಾಗುತ್ತದೆ. ಈ ಕಂಪೆನಿಯ ರಿಜರ್ವ್ ಫಂಡು ಕಳೆದ ಸಾಲಿನಲ್ಲಿ 4,29,15,000 ರೂ. ಗೆ ವೃದ್ಧಿಯಾಯಿತು. ಇದರ ಆಸ್ತಿಯು 4½ ಕೋಟಿ ರೂ. ಅನೇಕ ಪಾಲಿಸಿ ಹೋಲ್ಡರುಗಳು ಇನ್ನೂ ಹೆಚ್ಚು ಹೆಚ್ಚಾಗಿ ಪಾಲಿಸಿಗಳನ್ನು ತೆಗೆದುಕೊಳ್ಳುತ್ತಾರೆ. ಈ ಕಂಪೆನಿಯ ಆಸ್ತಿಪಾಸ್ತಿಯನ್ನೂ, ಸ್ಥಿತಿಗತಿಯನ್ನೂ, ಅದು ಮಿತವ್ಯಯದಿಂದ ಕೆಲಸ ನಡಿಸಿ ಹೆಚ್ಚು ಲಾಭ ಸಂಪಾದಿಸುತ್ತಿರುವುದನ್ನೂ ನೋಡಿದಲ್ಲಿ "ಎಂಪೈರ್ ಆಫ್ ಇಂಡಿಯಾ" ಅಷ್ಯೂರೆನ್ಸ್ ಕಂಪೆನಿಯಲ್ಲಿ ವಿಮೆ ಮಾಡುವುದೇ ಮೇಲೆಂದು ಎಲ್ಲರಿಗೂ ಮನಸ್ಸಾಗುವುದೆಂದು ಈ ವಾರ್ಷಿಕ ರಿಪೋರ್ಟ್ ಹೇಳುತ್ತದೆ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ದೇಶದ ಸಂಸ್ಕೃತಿಯು ಇಷ್ಟು ಕನಿಷ್ಠಾವಸ್ಥೆಯನ್ನು ಹೊಂದಲು ಕಾರಣವೇನು?

ಅಯ್ಯ,

ನಮ್ಮ ದೇಶದ ಮತ್ತು ಜನರ ಸ್ಥಿತಿಗತಿಗಳು ದಿನೇ ದಿನೇ ಕೆಡುತ್ತಾ ಬರುತ್ತಿರುವುದಕ್ಕೆ ಕಾರಣವೇನೆಂಬುದನ್ನು ಅರಿತು ಪರಿಹರಿಸಿಕೊಳ್ಳಲು ಮಾಡಬೇಕಾದ ಕರ್ತವ್ಯಗಳ ಕಾಲವು ಕಳೆದು 20 ವರ್ಷದ ಮೇಲ್ಪಟ್ಟಿದ್ದರೂ 'ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆ ಆಯಿತೆಂ'ಬಂತೆ ಜಾಗ್ರತೆಯನ್ನು ಹೊಂದುವುದರ ಬದಲು ವಿದ್ಯಾವಂತರು ಮತ್ತು ಐಶ್ವರ್ಯವಂತರು ಸ್ವಾರ್ಥಪರರೂ ಹೇಡಿಗಳೂ ಆದುದರಿಂದ ನಿದ್ರಾವಸ್ಥೆಯನ್ನು ಹೊಂದಿ ಸೀಡು ಬರುವ ಕಂಡ್ಯಾಸಲ್ಲು ರಕ್ಷಣೆ ಇಲ್ಲ ಕಟುಕರ ಬಡತನದಲ್ಲು ಮತ್ತು ರೋಗಾದಿಗಳಲ್ಲು ಇಂತು ಹಲವಾರಾಗಿದ್ದೇವೆ.

ಹೀಗಾಗಲು ಮುಖ್ಯ ಕಾರಣಗಳೇನೆಂಬುದನ್ನು ಕುರಿತು ಹೊರಗಿನಿಂದ ಬಂದ ಅನೇಕ ಮುಂದಾಳುಗಳೂ, ಮಹಾತ್ಮರೂ ಮತ್ತು ಪತ್ರಿಕೆಗಳೂ ಸಾರುತ್ತಿದ್ದರೂ ಕೇಳುವ ಕಾಲಕ್ಕೆ ಬುದ್ಧಿಯಿಲ್ಲ, ಮರಣಕಾಲಕ್ಕೆ ಮದ್ದಿಲ್ಲ ಎಂಬ ಗಾದೆಯಂತೆ ನಮ್ಮ ವಿದ್ಯಾವಂತರು, ಪಟೇಲರು ಮತ್ತು ಐಶ್ವರ್ಯವಂತರು ಇವುಗಳ ಕಡೆ ಗಮನವಿತ್ತರೆ ನಾವು ಕೂಡ ಇಂಗ್ಲೆಂಡಿನಲ್ಲಿ ಹುಟ್ಟಿ ಬೆಳೆದವರಾಗಿ ಅವರನ್ನು ಮೀರುವಂತೆ ಉಚ್ಚಾಗಿ ಕೊಡಗಿನವರನ್ನು ಕಲಿತವರಾಗಿ ತಮ್ಮನ್ನು ತಾವೇ ನುರಿತು ಅವರು ಮೇಲು ನಾವು ಕೀಳು ಎಂಬ ಭಾವನೆಯಿಂದ ಕೊಡಗಿನ ಹಿಂದಿನ ಅಲಂಕಾರದ ಪೋಷಾಕಿನ ಹಿಂದಿನ ಜನ್ಮವು ನ್ಯಾಯಿಸಿ ದೇಶವನ್ನೇ ಅವಲಂಬಿಸಿಕೊಂಡಿರುವುದರಿಂದ ಇಂದು ಈ ಬಡತನದ ಕಷ್ಟಕ್ಕೆ ಗುರಿಯಾಗಿದ್ದೇವೆ ಎಂದರೆ ತಪ್ಪಾಗಲಾರದು.

ಗೊತ್ತಾಗಿದ್ದರೂ ಇರುವ ಸಮಯಕ್ಕೆ ತಾಳ್ಮೆಯಿಂದ ಸ್ವಭಾವದ ಆಡಂಬರದ ಪೋಷಾಕಿನಿಂದ ಎಷ್ಟೋ ಮನೆಗಳು ದಿವಾಳಿಯಾದರೂ ಬುದ್ಧಿ ಬಂದಿಲ್ಲ ಎಂದು ಹೇಳದೆ ವಿಧಿಯಿಲ್ಲ.

ಸ್ತ್ರೀಯರೂ ಸ್ವಾಭಿಮಾನಿಗಳೂ ಆದ ದೇಶಪ್ರೇಮಿಗಳು ಈ ಸಂಕಟದ ಕಷ್ಟವನ್ನು ನೋಡಿ ಸಗಾಡುವ ಕಾಲ ಸನ್ನಿಹಿತವಾದರೆ ಎಲ್ಲಾ ಸರಿಯಾಗಿ ಹೋಗು... ತ್ತಿದೆ ಎಂಬ ಯೋಚನೆಯು ನಮ್ಮ ನಮ್ಮಂಥ ನೀಚ ಸಂಪಾದನೆಯನ್ನೆಲ್ಲ ವ್ಯರ್ಥವಾಗಿ ಕಳೆವ ಪೋಷಾಕುಗಳಿಗೆ ಪ್ರೋತ್ಸಾಹವನ್ನು ಬಿಡುವರೆಂದು ನಂಬುವೆನು.

ಕೆಳಗೇರಿಗಳಾದ ನಾವು ಹಿಂದುಗಳಂತೆ ಯೋಚಿಸದೆ ದೀನರ ಬೆಳೆಸಿ ಭಾರತೀಯರೆನಿಸಿ ನಮ್ಮ ಪ್ರಾಣವನ್ನು ಕಳೆದುಕೊಳ್ಳುವಂತೆ ಪರಕೀಯರ ಆಡಂಬರದ ಪೋಷಾಕುಗಳಿಗೂ, ಸಾವಿಗೆಳೆಯುವ ವಿಷಯಗಳಿಗೂ ಮತ್ತು ಮದ್ಯಪಾನಗಳಿಗೂ ಸೋಮಾರಿಗಳಾಗಿ ಸಂಪಾದನೆಯನ್ನೆಲ್ಲಾ ಕಳೆದುಕೊಂಡು ಬಡತನದ ನೋವುಗಳಿಂದ ನಾವು ನಮ್ಮ ಪ್ರಾಣವನ್ನು ಬಿಡುವ ಈ ಬವಣೆ ನಮಗೆ ಸಾಕಾಗುತ್ತಿರುವಂತೆ ಕಾಲಾವಸ್ಥೆಯು ದಿನೇ ದಿನೇ ಭಯಂಕರವಾಗಿ ಪರಿಣಮಿಸುತ್ತಿರುವುದನ್ನು ನೋಡುತ್ತಾ, ಕೇಳುತ್ತಾ, ನನಗೇನು ತನಗೇನು ಎನ್ನುತ ಸುಮ್ಮನೆ ಕೂರುವಷ್ಟು ಕಾಲ ದೇಶದಲ್ಲಿ ಬಡತನವು ಬೆಳೆಸಿ ಅಲ್ಪ ಸ್ವಲ್ಪ ಉಳಿಯುವ ವಿದ್ಯಾವಂತರಿಗೂ, ಐಶ್ವರ್ಯವಂತರಿಗೂ ಈ ಬಡತನದ ದುಃಸ್ಥಿತಿಯು ತಗಲುತ್ತದೆ. ವಿದ್ಯಾವಂತರಾದ ತರುಣರಿಗೆ ಇದು ನಾಚಿಕೆಗೇಡಿನ ವಿಷಯವೆಂಬುದು ಖಂಡಿತವಾಗಿದೆ. ಪರದೇಶದ ಆಡಂಬರದ ಪೋಷಾಕುಗಳನ್ನೆಲ್ಲ ತ್ಯಜಿಸಿ ಇದಕ್ಕಾಗಿ ವೆಚ್ಚಮಾಡುವ ಹಣವನ್ನೆಲ್ಲ ಸಂಗ್ರಹಿಸಿ ಗ್ರಾಮಾಂತರಗಳಲ್ಲಿ ಬಡತನದಿಂದಲೂ, ರೋಗಾದಿಗಳಿಂದಲೂ ಸಹಾಯ ಕಾಣದೆ ನರಳುತ್ತಿರುವ ಗ್ರಾಮವಾಸಿಗಳನ್ನು ಉದ್ಧರಿಸಲು ಗಮನವೀಯುವಂತೆ ಭಗವಂತನು ನಮಗೆ ಸುಬುದ್ಧಿಯನ್ನು ಕೊಟ್ಟು ದೇಶವನ್ನು ಉದ್ಧಾರಮಾಡುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ.

'ದೂರದೃಷ್ಟಿ'

ಕೊಡಗಿನ ವ್ಯವಸಾಯಗಾರರು.

ಅಯ್ಯ,

ಮೇಲ್ಕಂಡ ಶಿರೋನಾಮದ ಲೇಖನವನ್ನು ನೋಡಿದೆನು. ಈ ಲೇಖನದಲ್ಲಿ ರೈತರು ಸೋಮಾರಿಗಳೇ ಎಂಬ ಒಂದು ಅಂಶವು ಸೇರಿರುತ್ತೆ. ಆದರೆ ರೈತರು ಸೋಮಾರಿಗಳು ಎಂಬ ಅಪವಾದವು ಎಲ್ಲರಿಗೂ ಸಲ್ಲದು. ಪ್ರತ್ಯೇಕ ಕೊಡಗು ದೇಶದ ರೈತರನ್ನು ಮಾತ್ರ ತೆಗೆದುಕೊಂಡು ವಿಮರ್ಶಿಸಿದರೆ ಎಂದೂ ಆಗಲಾರದು. ಇದು ಕೂಲಿಕಾರರ ನ್ಯಾಯದಂತಾಗುತ್ತೆ. ಅದರಂತೆ ಪಕ್ಕದ ದೇಶವಾದ ಮಲಬಾರು, ದಕ್ಷಿಣ ಕನ್ನಡ, ಮೈಸೂರು, ಈ ದೇಶದ ರೈತರುಗಳನ್ನು ತೆಗೆದುಕೊಳ್ಳೋಣ. ಭೂದೇವಿಯು ಕೃಪೆಯಿಂದ ಇವರು ಮಳೆ ಬಿದ್ದಮೇಲೆ ಎದ್ದು ವ್ಯವಸಾಯದ ಕೆಲಸಕ್ಕೆ ಹೊರಡುವರು. ಮಳೆ ಹೆಚ್ಚಾದಾಗ ಗದ್ದೆ ವ್ಯವಸಾಯ ಮಾಡುವರು. ಮಳೆ ಕಡಿಮೆಯಾದಾಗ ಕುಷ್ಕಿ ವ್ಯವಸಾಯವನ್ನು ಮಾಡುವರು. ಇದರ ಮಧ್ಯೆ ಇತರ ವ್ಯವಸಾಯ ಬೇರೆ. ನೀರು ಕಡಿಮೆ ಎಂದರೆ ಬಾವಿಗಳನ್ನು ತೋಡಿಸಿ ನೀರೆತ್ತಿ, ಮೆಣಸು, ನವಣೆ, ಜೋಳ, ಉರುಳಿಗಡ್ಡೆ, ಗೆಣಸು, ಕಬ್ಬು, ನೀರುಳ್ಳಿ ವಗೈರೆಗಳನ್ನು ಹೇರಳವಾಗಿ ಬೆಳೆಯುವರು. ಮಳೆ ಬೀಳದಿದ್ದಾಗ ಬೇಸಾಯ ಮಾಡುವ ಎಡೆಯಿಲ್ಲ. ಮಳೆ ಇಲ್ಲದಿದ್ದರೂ ಸೇಂದಿಕಟ್ಟಿ ನೀರನ್ನು ಏತಗಳಿಂದಲೋ, ಕಪಿಲೆಗಳಿಂದಲೋ ಹಾಯಿಸಿ ವ್ಯವಸಾಯ ಮಾಡಿ ರೈತರೆಂಬ ನಾಮಧೇಯವನ್ನು ಸಾರ್ಥಕಗೊಳಿಸುವರು.

ಜಾನುವಾರುಗಳನ್ನು ಕಾಪಾಡುವುದರಲ್ಲಿ ಕರುಭಂಗುಗಿ ಎಯನ್ನು ಪಡೆದಿದ್ದಾರೆ.

ಇವರ ಮನೆಯ ಆಡಳಿತವು ಒಂದು ರಾಜ್ಯಕ್ಕೆ ಸಮಾನ. ಮನೆಗೆ ಗೃಹಸ್ಥ, ಗೃಹಿಣಿಯರೇ ಅಧಿಪತಿಗಳು. ಉಳಿದವರೆಲ್ಲರೂ ಇವರ ಅಧೀನರು. ಗೃಹಸ್ಥನು ಹೊರಗಿನ ಕಾರ್ಯಭಾರಗಳನ್ನು ಎಲ್ಲಾ ನಡೆಸಲು ಶಕ್ತನು. ಗೃಹಿಣಿಯು ಮನೆಯ ಒಳಗಿನ ಕಾರುಬಾರುಗಳನ್ನು ಏಕ ರೀತಿಯಾಗಿ ಸಮಂಜಸವಾಗಿ ನಡೆಸುವಳು. ಗೃಹಸ್ಥ, ಗೃಹಿಣಿಯರ ಅಪ್ಪಣೆಗೆ ಮಿಕ್ಕ ಉಳಿದವರೆಲ್ಲರೂ ಒಳಪಟ್ಟಿರುವರು. ಕಷ್ಟದ ಪರಿಣಿಂದ ಮೈಯ್ಯನ್ನು ನೆನೆಸಿಸುವರು. ಇವರ ಮನೆಯ ಶಾಂತಿಯ ವಿಷಯ ಹೇಳಲಾರದು. ಯುವಕರ, ಯುವತಿಯರ ಅಪ್ಪಣೆಯೇ ವೇದವಾಕ್ಯ. ಲಕ್ಷ್ಮಿಯು ನೆಲೆಸೀರು ಇದು.

ಕೊಡಗು ವ್ಯವಸಾಯಗಾರರನ್ನು ತೆಗೆದುಕೊಳ್ಳೋಣ. ಮೈನಾಟಿ ಕಳೆದು ಮೆಣಸು ಬಿತ್ತಿದರೆ ಆಗ ನಾಟಿಗೆ ಬೀಜ. ತೋಟ, ಗದ್ದೆ ವ್ಯವಸಾಯವೇ ಪ್ರಮುಖವಾದುದು. ಇವರಿಗೆ ಗದ್ದೆ ವ್ಯವಸಾಯ ನಾಲ್ಕು ತಿಂಗಳು; ಇದನ್ನು ಕಟಾವು ಮಾಡುವುದಕ್ಕೆ ಒಂದು ತಿಂಗಳು. ಒಟ್ಟು 5 ತಿಂಗಳೂ ಗದ್ದೆ ವ್ಯವಸಾಯಕ್ಕೆ ಕಳೆಯುತ್ತೆ. ಮಿಕ್ಕ ಏಳು ತಿಂಗಳನ್ನು ಹ್ಯಾಗೆ ಕಳೆಯುವರು ಎಂಬುದೊಂದು ಸಮಸ್ಯೆ. ಕಾಫಿ ತೋಟ ವಗೈರೆ ಮಾಡಲು ಅನುಕೂಲವಿದ್ದ ಇತರ ಸ್ಥಳದವರಿಗೂ ಇದೆ. ಬೆಳಗಾಯಿತೆಂದರೆ ತಿಂಡಿ ತಿನ್ನುವುದರೊಳಗೆ ಕಾಫಿತೋಟದ ಬಿಡಲಾಗುವುದಿಲ್ಲ. ಪ್ರತಿ ಫಸಲಿಗೂ ಬೇಕಾಗುವ ಈ ಎಂಟನೆ ಕಾಫಿ ಬೀಜವನ್ನು ಅನೇಕರು ಅಂಗಡಿಗಳಿಂದ ಕೊಳ್ಳುವುದನ್ನು ನಾನು ನೋಡಿದ್ದೇನೆ. ಕೊಡಗಿನಿಂದ ಮೇಲಾಗಿ ರವೆ, ಅಗಸ ಪದಾರ್ಥವು ಭತ್ತ, ಕಾಫಿಯು ಕೆಲವರಿಗೆ. ಇನ್ನು ಅನೇಕರಿಗಿಲ್ಲ. ಆದರೆ ತಮ್ಮ ಅತ್ಯಲ್ಪವಾದ ಉಳಿದ ಏಳು ತಿಂಗಳು ಕಾಲವನ್ನು ಹ್ಯಾಗೆ ಕಳೆಯುವರು ಎಂಬುದನ್ನು ತಿಳಿಯಬೇಕಾಗಿದ್ದೇ.

ತಿನ್ನಲಿ ಕೋಟೆಗಳಿಗಿಂತ್ಲ ಕಾಯಿಲೆ ಬಂದು ಹೋಯಿತೆನ್ನುತ್ತಾರೆ. ಈ ಕಾಯಿಲೆಗಳು ಮನುಷ್ಯ ಆಕೃತ್ಯಯಲ್ಲ ದೈವ ಉತ್ಪತ್ತಿ. ಜಗತ್ಕರ್ತನಾದ ಉಪಾಸನೆ ಎಂದರೆ ಹೊಂದಿಸಿ ಬೆಳೆಯುತ್ತ ಬಂದಿರುವ ರಸಮಾಡುಗಳ ಉತ್ಪನ್ನ ಫಲವನ್ನು ರೈತರು ಬಾವಿಗಳಿಂದ ನೀರನ್ನು ಹಾಯಿಸಿ ವೈಜ್ಞಾನಿಕರು ಹೇಳುವ ಅನೇಕ ಕಡೆಗಳಲ್ಲಿ ಬೆಳೆಯಿಸಿ ಸಂಪಾದಿಸುತ್ತಾರೆ. ಈ ವರ್ಷವೂ ಅದೇ ರೀತಿ ವ್ಯವಸಾಯ ಮಾಡಿದರು. ಒಂದು ಬಂದ ಕರಡ ಬಾಕ್ಕು ಗಿಡದ ಬೇರನ್ನ ಗೆ ಸೋಂಕು ಬಳೆಗಳು ಕಂಡುಬರತೊಡಗಿದವು. ಮಾರ್ಕೆಟ್ಟಿನ ಗಳಿಗೆ ರೈತರು ಹಂಗಲಿ ಕಟ್ಟಿ ತೊಂದರೆಯು. ಕಷ್ಟ ಅಧಿಕಾರಿಗಳನ್ನು ನೋಡಿದರು. ಔಷಧಿಗಳನ್ನು ತಂದು ಸ್ಪ್ರೇ ಮಾಡುವ ಸಲಕರಣೆಗಳನ್ನು ಎರಚಿದರು. ಕ್ರಿಮಿಕೀಟ ಪರೀಕ್ಷಕರೂ ಬಂದು ಎಲ್ಲ ಉಪಾಯವನ್ನು ತರಿಸಿದರು, ಸಫಲವಾಗಲಿಲ್ಲ. ಗಿಡಗಳೆಲ್ಲ ಒಣಗಿ ಹೋದವು. ವ್ಯವಸಾಯವೆಲ್ಲಾ ನಿರಾಶೆಯಾಯಿತು. ಬುದ್ಧಿವಂತರಾದ ಕೆಲವು ರೈತರು ಅದನ್ನು ಕಿತ್ತು ಹಾಕಿ ರಾಗಿ ಬೆಳೆಯನ್ನು ಬೆಳೆದರು. ಅದೇ ಬಳಸಿದ ಹಾಕಿ ವ್ಯವಸಾಯ ಮಾಡಿದವರು ನಷ್ಟವನ್ನು ಅನುಭವಿಸಿದರು. ರೈತನ ಮಕ್ಕಳು, ಜಾನುವಾರುಗಳ ಜೀವನಕ್ಕೆ ಆಗುವಷ್ಟು ಬೆಳೆದರು. ಮನುಷ್ಯನ ಕಾಳಜಿಯ ಅನುಕೂಲತೆ ಇರುವಾಗ ವ್ಯವಸಾಯದ ನಿರಾಶೆಯಾದ ರೈತರಿಗೆ ಬೇರೆ ಬೆಳೆಯ ಬಗ್ಗೆ ಹೇಳಿಕೊಡಲಿಲ್ಲ. ಒಂದು ಸಫಲವಾಗದಿದ್ದರೆ ಇನ್ನೊಂದನ್ನು ಪ್ರಯತ್ನಿಸಬೇಕು. ಮಳೆ ಬತ್ತದ ನಂತರ ಮಳೆ ಬಿದ್ದ ಮೇಲೆ ಸಫಲವಾಗದು. "ಶ್ರೀಗಂಧ ವೃಕ್ಷ" ಎಂಬುದನ್ನು ಎಂದಿಗೂ ಕೇಳಿಯೇ ಇಲ್ಲ ಹೇಳಿ ಕೇಳಿದಾಗಲೂ, ಅವರಾಗಿ ನಡೆದರೆ ಆಯಿತು.

ಬಿ. ಯಂ. ಅಪ್ಪಯ್ಯ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ.

ಈ ವಿದ್ಯಾಪೀಠದ ಮುಂದಿನ ವರ್ಷದ ಕಾರ್ಯಕ್ರಮವು ಜೂನ್ 15ನೇ ಬುಧವಾರಕ್ಕೆ ಪ್ರಾರಂಭವಾಗುವದು. ಅವರ ಎಲ್ಲಾ ಶಾಖೆಗಳಲ್ಲಿಯ ಶಿಕ್ಷಣವೂ ಆ ದಿನವೇ ಮೊದಲಾಗುವದು. ಇಲ್ಲಿ ಶಿಕ್ಷಣವನ್ನು ಪಡೆಯಬಯಸುವವರು ಪ್ರವೇಶಕ್ಕಾಗಿ ಇಲ್ಲಿಂದ "ಫಾರ್ಮ್"ಗಳನ್ನು ತರಿಸಿಕೊಂಡು, ಅವನ್ನು ಸಕ್ರಮವಾಗಿ ತುಂಬಿ, ಇದೇ ತಿಂಗಳು 20ರೊಳಗೆ ಇಲ್ಲಿಗೆ ಮುಟ್ಟುವಂತೆ ಕಳುಹಿಸಬೇಕು.

ಬಡ ವಿದ್ಯಾರ್ಥಿಗಳಿಗಾಗಿ ಧರ್ಮಾರ್ಥ ಶಿಕ್ಷಣದ ವ್ಯವಸ್ಥೆಯೂ ಇದೆ. ಆ 'ಫ್ರೀಶಿಪ್' (Freeship) ಗಳ ವಿವರ ಹೀಗಿದೆ.

ಭೂಷಗಿಂದು–ಇವರ ಶಿಕ್ಷಣಕ್ಕೆ 6 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಮೆಟ್ರಿಕ್. ಎಸ್. ಎಸ್. ಎಲ್. ಸಿ., ಸೀನಿಯರ್ ಕೇಂಬ್ರಿಜ ಪಾಸಾದವರು ಅರ್ಜಿ ಹಾಕಬಹುದು.

ಆಯುರ್ವೇದ ಶಿರೋಮಣಿ–ಇದಕ್ಕೆ 6 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಇವನ್ನು ಪಕ್ಷಕ್ಕೆ ಮೂಲ್ಕಿ, ಅಪ್ಪರ್ ಸೆಕೆಂಡರಿ ಪರೀಕ್ಷೆ ಪಾಸಾದವರು ಬೇಕು.

ಚಿತ್ರಕಲೆ–ಇದಕ್ಕೆ 9 ವಿದ್ಯಾರ್ಥಿಗಳನ್ನು ಧರ್ಮಾರ್ಥ ಸೇರಿಸಿಕೊಳ್ಳಲಾಗುವದು. ಕನ್ನಡ ಭಾಷಾಜ್ಞಾನ ಚೆನ್ನಾಗಿ ಇರಬೇಕು.

ವಿಶೇಷ ಶಿರೋಮಣಿ–ಇವರ ಶಿಕ್ಷಣಕ್ಕೆ 4 ವಿದ್ಯಾರ್ಥಿಗಳನ್ನು 'ಫ್ರೀ' ಸೇರಿಸಿಕೊಳ್ಳಲಾಗುವದು. ಇದಕ್ಕೆ ಮೆಟ್ರಿಕ್, ಎಸ್. ಎಸ್. ಎಲ್. ಸಿ., ಸೀನಿಯರ್ ಕೇಂಬ್ರಿಜ ಪಾಸಾದವರು ಅರ್ಜಿ ಹಾಕಬಹುದು.

ಪುಸ್ತಕ ಮಾಹಿತಿಗಾಗಿ 'ಸ್ಟಾಂಪು' ಇಟ್ಟು ಬರೆಯಿರಿ.

ಸೂ. ಸೂ.–ಅರ್ಜಿದಾರರ ವಯಸ್ಸು 18ಕ್ಕೆ ಕಡಿಮೆಯಿರಬಾರದು. ಧರ್ಮಾರ್ಥ ಶಿಕ್ಷಣವನ್ನು ಬಯಸುವ ಬಡವರು ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಬೇಕು.—

ರಜಿಸ್ಟ್ರಾರ್, ಪ್ರೇಮ ವಿದ್ಯಾಪೀಠ,
ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಪ್ರಕಟಣೆ.

ಪರಸಿನಿಕಡವು ಮುದಪ್ಪುರ ದೇವಸ್ಥಾನದಿಂದ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನಿಕಡವು ಮುದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿಬಂದಿದೆ. ಆದ್ದರಿಂದ ಮಲಯಾಳದಲ್ಲಿರುವ ಪರಸಿನಿಕಡವು ಮುದಪ್ಪುರ ದೇವಸ್ಥಾನಕ್ಕೆ ಯಾವ ಕಾಣಿಕೆಯೂ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರಸಿನಿಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವುದಿಲ್ಲ. ಆದ್ದರಿಂದ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದಾರರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಕೆ. ಯಂ. ಕೆ. ರಂಗ್‌ರಾಜನ್,
ಪ. ಸಿನಿಕಡವು. ಮ್ಯಾನೇಜರ್,
25—5—'35. ಪರಸಿನಿಕಡವು ಮುದಪ್ಪುರ ದೇವಸ್ಥಾನ.
26—2

ಗರಡಿ.

[illegible]

ಆಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಂಗಣಾಂಕುಶ

ಡಿ. ಗೋಪಾಲಾಚಾರ್ಯರವರ

ಬಾಲಭಾಸ್ಕರ

(ಗವರ್ನ್ಮೆಂಟು ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ.

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ ಇದು. ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆ ಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿದೆ.

ಆಯುರ್ವೇದಾಶ್ರಮಂ, ಮದರಾಸು.

ಸೋಲ್ ಏಜೆಂಟ್ಸ್:—

ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ,

೯೨, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಲೋಕಲ್ ಏಜೆಂಟು:—

ಹರಿಹರ ಪ್ರೆಸ್ ಮತ್ತು ಬುಕ್ ಡಿಪೋ, ಬ್ರಾಂಚ್, ಮಡಿಕೇರಿ.

50

'ಗ್ರಾಮ ಸ್ನೇಹಿ'

501 ಸ್ಪೆಷಲ್ ಸಾಬೂನು ಬಂದಿದೆ.

52—6

ಮೇಲ್ಪಂಗತಿಯ ಚೆನ್ನಾಗಿ ಒಗೆಯುವ ಸಾಬೂನು ಬೇಕೆಂಬ ಗಿರಾಕಿಗಳು ಹೆಚ್ಚಾದ್ದರಿಂದ 501 ಸ್ಪೆಷಲ್ ಒಗೆಯುವ ಸಾಬೂನನ್ನು ತಯಾರಿಸಿದೆ. ಹೆಸರುವಾಸಿಯಾದ ಟಾಯ್ಲೆಟ್ 501 ಒಗೆಯುವ ಸಾಬೂನಿನಿಂದ ಸ್ಪೆಷಲಾಗಿ ತಯಾರಿಸಿದೆ. ಇದು ಸ್ವಚ್ಛವಾಗಿಯೂ, ಮೃದುವಾಗಿಯೂ ಇದೆ. ಒಳ್ಳೆ ನಾಜೂಕಿನ ಬಟ್ಟೆಗಳನ್ನು ಚೊಕ್ಕಟವಾಗಿ ಒಗೆಸಬಹುದು.

ಇತರ ವಿಷಯಗಳಿಗೆ ಬರೆಯಿರಿ—
ಟಾಟಾ ಆಯಿಲ್ ಮಿಲ್ ಸುಳಿಗೆ,
೧. ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

ತಯಾರಿಸುವವರು:—
ಟಾಟಾ ಆಯಿಲ್ ಮಿಲ್, ಕಂಪನಿ, ಲಿಮಿಟೆಡ್, ಬೊಂಬಾಯಿ ಮತ್ತು ಟಾಟಾಪುರಂ.
ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಕೊಡಗಿನ ಅಭಿವೃದ್ಧಿ ಪ್ರಾಥಮಿಕ ಶಾಲೆಯ ದ್ವಿತೀಯ ವಾರ್ಷಿಕ ಮಹೋತ್ಸವ.

ಮೇಲ್ಕಂಡ ಶಾಲಾ ದ್ವಿತೀಯ ವಾರ್ಷಿಕ ಮಹೋತ್ಸವ ಮಹೋತ್ಸವವು ತಾರೀಕು 16—5—35ನೇ ಗುರುವಾರ ಕೊಡಗು ಮತ್ತು ಮಂಗಳೂರು ಡಿವಿಜನ್ ಇನ್ಸ್‌ಪೆಕ್ಟರ್ ಸಿ. ಎಫ್. ಎಫ್. ... ಎಸ್. ... ಅವರ ಅಧ್ಯಕ್ಷತೆಯಲ್ಲಿ ಅತ್ಯಂತ ವೈಭವದಿಂದ ನಡೆಯಿತು. ಶಾಲೆಯ ... ಭಾಗದಲ್ಲಿರುವ ಮರಗಳ ತೋಪು, ಆ ಬಳಿಯ ಮೈದಾನವೂ ... ಶೃಂಗರಿಸಲ್ಪಟ್ಟಿದ್ದುವು.

ಆಟ ಓಟಗಳು.

ಆ ದಿವಸ ಬೆಳಿಗ್ಗೆ 8 ಗಂಟೆಗೆ ಅಲಂಕರಿಸಲ್ಪಟ್ಟಿದ್ದ ಶಾಲಾ ಮೈದಾನದಲ್ಲಿ ನಾಡಿನ ಪ್ರೇಕ್ಷಕ ಜನರ ... ಸೇರಿದ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳ ... ವಿದ್ಯಾರ್ಥಿಗಳೂ ... ಆಟ ಓಟಗಳಲ್ಲಿ ಭಾಗಿಗಳಾದರು ... ವಿದ್ಯಾರ್ಥಿಗಳು ... ನಿಯಮಿತರಾಗಿದ್ದ ... ವಿನೋದ ... 8 ಗಂಟೆಯಿಂದ ಆಟ ಓಟಗಳು ಪ್ರಾರಂಭವಾದವು.

ಶಾಲಾ ಹುಡುಗ ವಿದ್ಯಾರ್ಥಿಗಳಿಂದ ಬಹಳ ಕೋಲಾಟವು ಬಹು ತೃಪ್ತಿಕರವಾಗಿ ಅಭಿನಯಿಸಲ್ಪಟ್ಟಿತು. ಈ ಪ್ರಕಾರ 11½ ಗಂಟೆಗೆ ಆಟ ಓಟಗಳೆಲ್ಲಾ ಮುಗಿದವು.

ವಸ್ತು ಪ್ರದರ್ಶನ.

ಶಾಲೆಯ ಎರಡು ದೊಡ್ಡ ಕೋಣೆಗಳನ್ನು ಶೃಂಗರಿಸಿ. ಒಂದರಲ್ಲಿ ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ, ಪುರಜನರಿಂದಲೂ, ... ತಯಾರಿಸಲ್ಪಟ್ಟಿದ್ದ ನಾನಾ ವಿಧವಾದ ... ಸಾಮಾನುಗಳನ್ನು ... ಜೋಡಿಸಿದ್ದರು. ಇನ್ನೊಂದರಲ್ಲಿ ... ಉಪಾಧ್ಯಾಯರಾದ ... ತರಗತಿಗೆ ... ರೀತಿಯಲ್ಲಿ ಬೋಧಿಸಲು ಬೇಕಾಗುವ ... ಇಡಲ್ಪಟ್ಟಿದ್ದುವು. ಇದಲ್ಲದೆ ... ಕಬ್ಬಿನ ಹಾಲು ... ಯಂತ್ರಗಳೂ, ... ಸಾಧನಗಳೂ ಇದ್ದವು. ಈ ಸಾಮಾನು ವಸ್ತು ಪ್ರದರ್ಶನವು ... ವಸ್ತುಗಳ ಸಂಗ್ರಹದಲ್ಲಿಯೂ, ಜೋಡಿಸಿದ್ದರಲ್ಲಿಯೂ ... ಬಹು ಶ್ಲಾಘನೀಯವಾದುದೇ ಸರಿ.

ಉಪನ್ಯಾಸಗಳು ಮತ್ತು ಬಹುಮಾನ ವಿತರಣೆ.

ಶಾಲೆಯ ... ವಿಶಾಲವಾದ ... ಈ ಸಭೆಯನ್ನು ... ಶೃಂಗರಿಸಿದ್ದರು. ... ಸಭೆ ಸೇರಿದ ... ಶಾಲೆಯ ಹೆಡ್ಮಾಸ್ಟರವರು ವರ್ಷದ ವರದಿಯನ್ನೋದಿದರು. ಅನಂತರ ... ವಿದ್ಯಾಭ್ಯಾಸದ ... ವಿಷಯವಾಗಿ ... ಭಾಷಣವನ್ನಿತ್ತರು ... ವಿದ್ಯಾಭ್ಯಾಸವನ್ನು ಕುರಿತು ಭಾಷಣವಿತ್ತರು. ಅನಂತರ ಶಾಲೆಯ ಉಪಾಧ್ಯಾಯರಾದ ... ಅವರು ... ಉಪನ್ಯಾಸವಿತ್ತರು. ಅನಂತರ ಅಧ್ಯಕ್ಷರು ... ಜಯಶೀಲರಾದವರಿಗೆ ... ಬಹುಮಾನ ... ವಿದ್ಯಾರ್ಥಿ ... ಬಹು ... ಮಾಡಿದರು.

ಅಧ್ಯಕ್ಷರ ... ಭಾಷಣವಾದ ಬಳಿಕ ... 'ದಿ ... ' ಎಂಬ ಇಂಗ್ಲಿಷ್ ನಾಟಕವೂ 'ಸಾಧು ... ' ಎಂಬ ಕನ್ನಡ ನಾಟಕವೂ ... ಅಭಿನಯಿಸಲ್ಪಟ್ಟಿತು. ನಾಟಕಗಳು ಮುಗಿದ ನಂತರ ಶಾಲಾ ಉತ್ಸವವು ಕೊನೆಗೊಂಡಿತು.

ಶ್ರೀ ... ನವರಕ್ಷ ಪ್ರಸಿದ್ಧ ಔಷಧಗಳು. ...

ನವರಕ್ಷ **ಅಶೋಕಾರಿಷ್ಟ.**	ಸ್ವರ್ಣಮಿಶ್ರಿತ **ನವರತ್ನಾಮೃತ.**
ಸ್ತ್ರೀಯರು ಋತುವಾಗಿ ... ಬಿಳಿ ಮುಟ್ಟಾಗುವಾಗ ಬರುವ ಹೊಟ್ಟೆನೋವು, ಸೊಂಟನೋವು ... ಅಧಿಕಸ್ರಾವ ... ರೋಗ ... ಆರೋಗ್ಯವನ್ನು ... ಗರ್ಭ ...	... ಶಕ್ತಿವೃದ್ಧಿಯಿಂದ ... ಮನಸ್ಸನ್ನು ... ಆರೋಗ್ಯ ... ಧಾತುಪುಷ್ಟಿ ... ಅನೇಕಜನರ ...
ದೊಡ್ಡ ಕುಪ್ಪಿ 2—8—0, ಅರ್ಧ ಕುಪ್ಪಿ 1—6—0	ದೊಡ್ಡ ಕುಪ್ಪಿ 3—8—0, ಅರ್ಧ ಕುಪ್ಪಿ 1—14—0.
ನವರಕ್ಷ **ದ್ರಾಕ್ಷಾರಿಷ್ಟ.**	ನವರಕ್ಷ **ಚ್ಯವನಪ್ರಾಶ.**
ಅಜೀರ್ಣ, ಅಗ್ನಿಮಾಂದ್ಯ, ಅರುಚಿ ... ಬೇನೆ ... ಪ್ರಸಿದ್ಧವಾದ ಔಷಧವು.	ಉಬ್ಬಸ, ಕೆಮ್ಮು, ದಮ್ಮು, ಕ್ಷಯ ... ರಕ್ತಪಿತ್ತ ... ಪ್ರಸಿದ್ಧವಾದ ಲೇಹ್ಯವು.
ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0	½ lb 1—8—0, ¼ lb 0—13—0.

ಪತ್ರವ್ಯವಹಾರಕ್ಕೆ ವಿಳಾಸ:—

ಏಜೆಂಟರು—ಎಸ್. ನಾರಾಯಣ, ಜನ್ಮಶೀಲಂಗಡಿ, ಸಂಟಿಕೊಪ್ಪ | ಪ್ರೊಪ್ರೈಟರ್—ವಿ. ಬಿ. ... , ... ಪೇಟೆ, ಮಂಗಳೂರು

52—6

ನವರಕ್ಷ ಫಾರ್ಮಸಿ,

ಮಲೇರಿಯ ಔಷಧವು— ಚಳಿ ಜ್ವರ, ... ಜ್ವರ, 2, 3 ದಿವಸಕ್ಕೊಮ್ಮೆ ಬರುವ ... ಜ್ವರಗಳನ್ನು ಗುಣಪಡಿಸುತ್ತದೆ. ... ಬೆಲೆ ... 14.

... ಗಳಿಗೆ ... ಬೆಲೆ 5.

ಸಿರಪ್ ... —ಉಬ್ಬಸ, ... ಬೆಲೆ ರೂ. 2—8—0 ಮತ್ತು 1—14—0.

... —ತಲೆ ನೋವು ... ಗುಣವಾಗುತ್ತದೆ ... ಬೆಲೆ 8.

... —ಮಕ್ಕಳ ... ಉಬ್ಬಸ, ... ಗುರುಗುರು ...

... ಬೆಲೆ ... 100ಕ್ಕೆ ಬೆಲೆ 8 ಮತ್ತು 50ಕ್ಕೆ ಬೆಲೆ 4.

... —ಹಲ್ಲು ನೋವು ... ಬೆಲೆ ...

... —ಪಿತ್ತ, ... ಮೂತ್ರ ... ಲಕ್ಷಣಗಳನ್ನು ಗುಣಪಡಿಸುತ್ತದೆ. ಬೆಲೆ ರೂ. 1—0—0

... —ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರರೋಗ ... ರೋಗಗಳಿಗೆ ... ರೂ. 3—8—0 ಮತ್ತು 1—14—0

... ಬಿಲ್ಲೆಗಳು— ... ಬೆಲೆ 5, 100ಕ್ಕೆ ರೂ. 2.

... ಬೆಲೆ 5

... ಗಳಿಗೆ ... ಕೊಡಲ್ಪಡುತ್ತದೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ.—

The Malariaa Co., No. 14, Mangalore.

ಮಲೇರಿಯಾದ ಕಂಪನಿ, ಹಂಪನಕಟ್ಟೆ, ನಂಬ್ರ 14, ಮಂಗಳೂರು, ದ. ಕ.

...—...

ಪತ್ರದ ... ಗಳು ... ಆನೆ ನಿಂ.

... ವಾಚ್ ... ಕಟ್ಟಿದ ... ಕಲ್ಲುಗಳ ... ವಾಚುಗಳು ...



... ಕ್ಕೆ 12 ಆನೆ 3 ಉಂಗುರಗಳಿಗೆ 1 ಟೈಂಪೀಸನ್ನೂ, 6 ಉಂಗುರಗಳಿಗೆ 1 ವಾಚ್ ... , 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ... ಕೊಡುವೆವು.

ವಿಳಾಸ—... ಕಂಪೆನಿ.
11. ... ಸ್ಟ್ರೀಟ್.
52—6 ...

ವರ್ತಮಾನ ಸಂಗ್ರಹ.

ಒಳದೇಶ.

ಚಿತ್ರನಾಡು ಅನವೇರಿ ಗ್ರಾಮದ ಮ. ರಾ. ಶಂಕ್ರಪ್ಪ ಪೂಜಾರಯ್ಯನವರು ಈ ತಾ. 10 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಶಿರಾಳಕೊಪ್ಪದ ವಿದ್ಯಾಭಿವೃದ್ಧಿ ಸಂಘದ ವಾರ್ಷಿಕ ಜನರಲ್ ಮೀಟಿಂಗು ಬರುವ ಜುಲೈ ತಾ. 5ರಲ್ಲಿ ಮಠದೊಳಗೆ ನಡೆಯುವದೆಂದು ತಿಳಿಯುತ್ತೇವೆ.

ಶಿರಾಳಕೊಪ್ಪ ಸೆಂಟ್ರಲ್ ಬ್ಯಾಂಕಿನ ಪಾಲುಗಾರರ ಮೀಟಿಂಗೊಂದು ಈ ತಾ. 18ನೇ ಮಂಗಳವಾರ ಚಿತ್ರನಾಡು ಕಂಚುಗಾರರ ಗ್ರಾಮದಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಮ. ರಾ. ಬಿ. ಟಿ. ಗೋವಿಂದಯ್ಯನವರು ಬೆಂಗಳೂರು ಯೂನಿವರ್ಸಿಟಿಯ ಎಲ್. ಎಲ್. ಬಿ. (ಆನ) ಕೋರ್ಸಿನ ಪ್ರಥಮ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಹರುಷಪಡುತ್ತೇವೆ.

ದೇಶದಲ್ಲಿ ಇತ್ತೀಚೆಗೆ ಮಳೆ ಇಲ್ಲದ ಕಾರಣ ಕುಡಿಯಲಿಕ್ಕೆ, ವ್ಯವಸಾಯಕ್ಕೆ ನೀರಿಲ್ಲದೆ ಜನರು ಕಷ್ಟಪಡುತ್ತಿದ್ದರು. ಆದರೆ ತಾ. 13 ರಿಂದ ಮಳೆಯು ಎಲ್ಲಾ ಕಡೆ ಪ್ರಾರಂಭವಾಗಿದೆಯೆಂದು ತಿಳಿಯಬರುತ್ತದೆ.

ಕ್ವೆಟ್ಟಾ ಭೂಕಂಪದ ನಿಧಿಗೆ ಧನ ಸಹಾಯ ಪಡೆಯಲಿಕ್ಕಾಗಿ ಶಿರಾಳಕೊಪ್ಪದ ಶಿವಪ್ಪನವರು ಈ ತಾ. 18ರಲ್ಲಿ ಬೆಳಿಗ್ಗೆ 11 ಗಂಟೆಗೆ ಶಾಲೆಯ ಹಾಲಿನಲ್ಲಿ ಒಂದು ಪಬ್ಲಿಕ್ ಮೀಟಿಂಗಿನಲ್ಲಿ ಭಾಷಣ ಮಾಡುವರಾಗಿ ಪ್ರಕಟವಾಗಿದೆ.

ಶಿರಾಳಕೊಪ್ಪ ಕೋಆಪರೇಟಿವ್ ಸೊಸೈಟಿಯ ಮ. ರಾ. ಗಣಪತಿ ಕುಂದೂರು ಪೊನ್ನಪ್ಪನವರು, ಚಿಟ್ಟರಾಳ ಅಪ್ಪಣ್ಣನವರು ಮತ್ತು ಕಟ್ಟಿಂದ ಚಂಗಪ್ಪನವರು ಮೈಸೂರಿನ ಕರ್ನಾಟಕ ಅಭ್ಯಾಸದಳಗಳಾಗಿ (ಮಮೇದಾರರುಗಳಾಗಿ) ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಶಿರಾಳದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿರುವ ಮ. ರಾ. ಬಂಡೀರಂಡ ಮುಂಗ್ಲಪ್ಪನವರು ಮತ್ತು ಡೆಪ್ಯುಟಿ ಕೈರಿಲ್ಲರೂ, ತಹಸೀಲು ಸಂಘಗಳ ಪರಿಸ್ಥಿತಿಯಿಂದ ಆಗಿರುವ ಮ. ರಾ. ಕರವಂಡ ಚಂಗಪ್ಪನವರು ಅವರವರ ಉದ್ಯೋಗಗಳಲ್ಲಿ ಖಾಯಂ ಮಾಡಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಬೆಂಗಳೂರು ಉಪಾಧ್ಯಾಯರ ಟ್ರೈನಿಂಗ್ ಕಾಲೇಜಿನಲ್ಲಿ ಶಿಕ್ಷಣ ಹೊಂದುತ್ತಿದ್ದ ಮ. ರಾ. ಗಳಿಂದ ಕುಪ್ಪಂಡ ಮಾದಯ್ಯನವರು, ಉಟ್ಟಂಡ ಸುಬ್ಬಯ್ಯನವರು, ಪೋಲಯ್ಯನ ದೇವಯ್ಯನವರು ಮತ್ತು ಕರ್ನಾಟಕ ಅಪ್ಪಚ್ಚನವರು ಟೀಚರ್ಸ್ ಟ್ರೈನಿಂಗ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರಿಗೆ ನಮ್ಮ ಅಭಿನಂದನೆಗಳಿವೆ.

ಕುಶಾಲ್ ನಗರ್ ಸರ್ಪಗಳ ಹೊಸ ಬಸ್ಸೊಂದು ಈ ತಾ. 7ರಿಂದ ಮಡಿಕೇರಿಯಿಂದ ಬೆಳಿಗ್ಗೆ 6.45 ಗಂಟೆಗೆ ಹೊರಟು, ಕುಶಾಲನಗರ, ಕುಂದಾಪುರ ಮುಂತಾದ ಸ್ಥಳಗಳಿಗೆ ಹೋಗುವ ಪ್ರಯಾಣಿಕರು ಅದೇ ದಿನ ಹಿಂತಿರುಗುವಂತೆ ಮಂಗಳೂರಿನಲ್ಲಿ ಅನುಕೂಲಕ್ಕೆ ಸರ್ವೀಸಿನಲ್ಲಿ ಸೇರಿಸಲ್ಪಟ್ಟು, ಮಧ್ಯಾಹ್ನ 1 ಗಂಟೆಗೆ ವಾಪಸು ಹೊರಟು, ಮಡಿಕೇರಿಗೆ ಸಾಯಂಕಾಲ 7 ಗಂಟೆಗೆ ತಲುಪುತ್ತದೆಂದು ತಿಳಿಯಬರುತ್ತದೆ.

ಕೊಡಗಿನ ಇಂಟರ್‌ನ್ಯಾಷನಲ್ ಎನ್‌ಕ್ವಯರಿ (ಅಧಿಕಾರ ವಿಚಾರಣಾ) ಕಮಿಟಿಯ ಮೀಟಿಂಗೊಂದು ಕಳೆದ ತಾ. 31ರಲ್ಲಿ ಮಡಿಕೇರಿಯಲ್ಲಿ ನಡೆದು ದೇಶದ ಕೆಲವು ಮಹನೀಯರಿಂದ ಒದಗ ಮೂಲಕ ಬಂದ ಅಭಿಪ್ರಾಯಗಳನ್ನು ಪರಿಶೀಲಿಸಿ, ಬಳಿಕ ತಾ. 10ರ ಒಂದು ವಾರದ ವರೆಗೆ ದೇಶದ ಕೆಲವು ಮುಖ್ಯ ಸ್ಥಳಗಳನ್ನು ಸಂದರ್ಶಿಸಿ, ಕೆಲವು ಮಹನೀಯರಿಂದ ಮುದ್ದು ಮೂಲಕ ಅಭಿಪ್ರಾಯ ತೆಗೆದುಕೊಳ್ಳಲು ನಿಶ್ಚಯಿಸಿರುವದಾಗಿ ತಿಳಿಯಬರುತ್ತದೆ.

ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ಪ್ರಕಾರ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು.

ಮಡಿಕೇರಿ ಹೈಸ್ಕೂಲಿನಲ್ಲಿದ್ದ ಒಟ್ಟು 38 ವಿದ್ಯಾರ್ಥಿಗಳಲ್ಲಿ ಪರೀಕ್ಷೆಗೆ ಕಳುಹಿಸಲ್ಪಟ್ಟಿದ್ದ 29 ರಲ್ಲಿಯಲ್ಲಿ—(1) ಕಡ್ಲಿಪೇಟೆ ಪಿ. ವೆಂಕಟರಮಣಯ್ಯನವರು, (2) ಚಪ್ಪಂಡ ಪಿ. ಕಾಳಪ್ಪನವರು, (3) ಮಡಿಕೇರಿ ಎ. ಅಪ್ಪಣ್ಣನವರು, (4) ಕೇಚ ವಿ. ಕೃಷ್ಣಪ್ಪನವರು, (5) ನಡಿಕೇರಿಯಂಡ ಎಂ. ಕಾಳಪ್ಪನವರು, (6) ಕುಕ್ಕ ಮನೆ ಸರವೇಶ್ವರನವರು, (7) (8) ಕೋಣಂಡ ಎಸ್. ಅಪ್ಪಯ್ಯನವರು, (9) ಅಜ್ಜಿಕುಟ್ಟಿರ ಪಿ. ಮುತ್ತಪ್ಪನವರು, (10) ಕರ್ನಂಡ ಕೆ. ಗಣಪತಿಯವರು, (11) ನಾಶೀಕರ್ ಶಂಕರನಾರಾಯಣನವರು, (12) ಪಟ್ಟಮಾಡ ಯಂ. ಸೋಮಣ್ಣನವರು, (13) ಜೆ. ಎಸ್. ಸುಬ್ಬಯ್ಯನವರು, (14) ನಂದಿನೆರವಂಡ ತಿಮ್ಮಯ್ಯನವರು, ಅಪ್ಪನವರು, ಮತ್ತು (15) ಪಿ. ಪಿ. ಪೂವಯ್ಯನವರು (ಅಪಜಿಲ್ಲೆಯವರು) ಪಾಸಾಗಿರುವರು. ಇವರು ಯಾರೂ ಫಸ್ಟ್ ಕ್ಲಾಸಿನಲ್ಲಿ ಬಂದಿರುವುದಿಲ್ಲ.

ವೀರಾಜಪೇಟೆ ಹೈಸ್ಕೂಲಿನಲ್ಲಿದ್ದ 31 ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗೆ ಕಳುಹಿಸಲ್ಪಟ್ಟಿದ್ದ 17 ವಿದ್ಯಾರ್ಥಿಗಳಲ್ಲಿ (1) ಮತ್ತು ಮುತ್ತಯ್ಯನವರು (2) ಎಸ್. ಪೊನ್ನಪ್ಪನವರು, (3) ಅಮ್ಮಣಿಚಂಡ ಯು. ಬೆಳ್ಳಿಯಪ್ಪನವರು, (4) ಮನೆಯಪಂಡ ಸುಬ್ಬಯ್ಯ ಮುತ್ತಣ್ಣನವರು, (5) ಕಂಬೀರ ಕೆ. ಪೂವಯ್ಯನವರು, (6) ಮುಕ್ಕಾಟೀರ ಯು. ಚಂಗಪ್ಪನವರು, (7) ಒಲ್ಲಚಂಡ ಯು. ಕಟ್ಟಿಪ್ಪನವರು, (8) ಉದಿಯಂಡ ಬಿ. ರೇವಯ್ಯನವರು, (9) ಒಲ್ಲಚಂಡ ಯು. ತಿಮ್ಮಯ್ಯನವರು, (10) ಕೀರಿಯಂಡ ಸೋಮಣ್ಣನವರು, (11) ಪುಲಿಯಂಡ ಯು. ಚಂಗಪ್ಪನವರು, (12) ಒಲ್ಲಚಂಡ ಟಿ. ಕಟ್ಟಪ್ಪನವರು, (13) ಪಟ್ಟಡ ಎ. ಬೆಳ್ಳಪ್ಪನವರು, (14) ಚಕ್ಕಮಾಡ ಪಿ. ಗಂಗಾಧರನವರು ಮತ್ತು ನಂಜಡವಂಡ ಪಿ. ಅಪ್ಪಯ್ಯನವರು ತೇರ್ಗಡೆ ಹೊಂದಿರುವರು. ಇವರು ಯಾರೂ ಫಸ್ಟ್ ಕ್ಲಾಸಿನಲ್ಲಿ ಬಂದಿರುವುದಿಲ್ಲ.

ಸೋಮವಾರಪೇಟೆ ಹೈಸ್ಕೂಲಿನ 8 ವಿದ್ಯಾರ್ಥಿಗಳಲ್ಲಿ ಎಲ್ಲರೂ—ಅದರ (1) ಕಾಯಪಂಡ ಅಕ್ಕಮ್ಮನವರು, (2) ಕರ್ತಮಾಡ ಎಂ. ಸುಬ್ಬಯ್ಯನವರು, (3) ನಾಪಂಡ ಕೆ. ಕಾರ್ಯಪ್ಪನವರು, (4) ಪಟ್ಟಮಾಡ ಎಂ. ನೇಟ್ಟಪ್ಪನವರು, (5) ಕೇಪಂಡ ಯು. ಕಾವೇರಪ್ಪನವರು, (6) ಕರೋಟಂಡ ಪಿ. ಪೂವಯ್ಯನವರು, (7) ಸಂಪಂಡ ಯು. ಅಕ್ಕಮ್ಮನವರು ಮತ್ತು (8) ಕಲಿಯಂಡ ಎಂ. ಸೀತಮ್ಮನವರು ಉತ್ತೀರ್ಣರಾಗಿರುವರು.

ಇವರನ್ನೆಲ್ಲ ಅಭಿನಂದಿಸುತ್ತೇವೆ.

ಹಿಂದೂದೇಶ.

ಕ್ವೆಟ್ಟದಲ್ಲಿ ಕಳೆದ ವಾರದವೆರೆಗೂ ಕಾಲೀಕರಿಸಲ್ಪಡಿಯಾ ಎರಡನೆಯ ಬಾರಿಗೆ ಭೂಕಂಪ ಉಂಟಾಗಿ, ಶೇಷವಾಗಿ ಉಳಿದಿದ್ದ ಕೆಲವು ಕಟ್ಟಡಗಳನ್ನೂ ನೆಲಸಮ ಮಾಡಿತು.

ಕಳೆದ ಗುರುವಾರ ಲಕ್ನೋ ನಗರದಲ್ಲಿಯೂ ಅದರ ಆಕ್ಕಪಕ್ಕದ ಊರುಗಳಲ್ಲಿಯೂ ಉಷ್ಣಾಧಿಕ್ಯದಿಂದ ಒಟ್ಟು 11 ಮರಣಗಳು ಸಂಭವಿಸಿವೆಯೆಂದು ಹೇಳಲಾಗಿದೆ.

ಆಸ್ಟ್ರೇಲಿಯಾ ಸರ್ಕಾರದವರು ಕ್ವೆಟ್ಟಾ ಭೂಕಂಪದಲ್ಲಿ ನಷ್ಟಪಟ್ಟವರ ಸಹಾಯಕ್ಕಾಗಿ ಇಂಡಿಯಾ ಸರ್ಕಾರದವರಿಗೆ ಹತ್ತು ಸಾವಿರ ಪವುಂಡುಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

ಮುಂಬಯಿಯಲ್ಲಿ ಒಂದು ಶಿವಾಲಯವನ್ನು ಪೋಲೀಸರು ನೆಲಸಮ ಮಾಡಿ ಆ ವಿಗ್ರಹವನ್ನು ಗಂಗೆಗೆ ಬಿಸಾಡಿದರೆಂದು ಅಲ್ಲಿನ ಮ್ಯಾಜಿಸ್ಟ್ರೇಟರಲ್ಲಿ ಹರಕೋರಿಯನ್ನು ಮಾಡಿದ್ದಾರೆ.

ಲೀಗ್ ಆಫ್ ನೇಷನ್ಸ್ ಮುಂದಿನ ಅಧಿವೇಶನದಲ್ಲಿ ಶ್ರೀ ಬಿ. ಕೆ. ಪರುಸಿ ಪಿ. ಆ. ಯವರು ಒಬ್ಬ ಡೆಲಿಗೇಟರು. ಇಂಡಿಯಾ ಸರಕಾರದವರು ಇವರನ್ನು ಆರಿಸಿದೆ.

ಮರಾಠಾ ಪ್ರಾಂತದ ಸಂಚಾರವನ್ನು ಮುಗಿಸಿಕೊಂಡು, ಬಾಬು ರಾಜೇಂದ್ರ ಪ್ರಸಾದರು, ಇದೇ ಜೂನ್ ತಾ. 17 ರಿಂದ 26ರ ವರೆಗೆ ಮಹಾಕೋಸಲ ಪ್ರಾಂತದಲ್ಲಿ ಸಂಚರಿಸುವರು.

ಕ್ವೆಟ್ಟಾ ನಿಧಿಗಾಗಿ ಚಕ್ರವರ್ತಿ ಸಾರ್ವಭೌಮರು 500 ಪವುಂಡುಗಳನ್ನೂ, ಚಕ್ರವರ್ತಿನಿಯವರು 250 ಪವುಂಡುಗಳನ್ನೂ, ಬ್ರಿಟಿಷ್ ಸರ್ಕಾರದವರು 50 ಸಾವಿರ ಪವುಂಡುಗಳನ್ನೂ ದಯಪಾಲಿಸಿರುತ್ತಾರೆ.

ಚಕ್ರವರ್ತಿ ಸಾರ್ವಭೌಮರವರು ಕಳೆದ ಗುರುವಾರ ಬೆಳಿಗ್ಗೆ ತಮ್ಮ ಪ್ರಿವಿ ಕೌನ್ಸಿಲಿನ ಮೀಟಿಂಗನ್ನು ನಡೆಸಿ ಸರ್ ಜೇಮ್ಸ್ ಬ್ಲೆಯರ್ ಪಪ್ಪಾರವರನ್ನು ಪ್ರಿವಿ ಕೌನ್ಸಿಲರಾಗಿ ನೇಮಿಸಿದರೆಂದು ಪ್ರಕಟವಾಗಿದೆ.

ಶ್ರೀ ಶಂಕರಾಚಾರ್ಯರ ಮಠದ ಜಾಧ್ಯಗುರು ಶಂಕರಾಚಾರ್ಯರ ಹಲವು ದಿವ್ಯಾಭರಣಗಳು ಕಾಶಿಯಲ್ಲಿ ಕಳುವಾಗಿದೆ. 15 ವಿಗ್ರಹಗಳು, 400 ತೊಲೆಯ ಬೆಳ್ಳಿಯ ಸಾಮಗ್ರಿಗಳು, ಮತ್ತು 200 ರತ್ನಗಳ ಹಾರಗಳು.

ಚಕ್ರವರ್ತಿ ಸಾರ್ವಭೌಮರವರ ಸಿಲ್ವರ್ ಜ್ಯೂಬಿಲಿ ನಿಧಿಗೆ ಹಣ ಒದಗಿಸಿಕೊಟ್ಟಿರುವ ಡಿಸ್ಟ್ರಿಕ್ಟುಗಳಲ್ಲಿ ಕೊಡಗು ಮುಂತಾದವನ್ನು ಉದಾಹರಿಸಿ ಆ ನಿಧಿಗೆ ಸಹಾಯ ಮಾಡುವ ಡಿಸ್ಟ್ರಿಕ್ಟು ಇಂಡಿಯಾ ದೇಶದಲ್ಲಿ [illegible] ಡಿಸ್ಟ್ರಿಕ್ಟಿನಲ್ಲಿ ಸಂಗ್ರಹವಾದ ಹಣ ರೂ 1,03,291 [illegible]

ಪ್ರಿನ್ಸ್ ಆಫ್ ವೇಲ್ಸ್ [illegible] ಕಂಪನಿ ಪಾವತಿಗೆ [illegible] ಪೌಂಡು ಒಂದು ಲಕ್ಷ [illegible] ಮಂಡಲಿಯವರು 15 ಸಾವಿರ ರೂಪಾಯಿ, [illegible] ರೂ. 1,500, ಮುಂಬಯಿ [illegible] 2 ಸಾವಿರ. ಈ ನಿಧಿಗೆ ಈಗ ಒಟ್ಟು 15 ಲಕ್ಷ ರೂಪಾಯಿ ಸಂದಿದೆ.

ನಾಗಪುರದ ಎಂಪ್ರೆಸ್ ಮಿಲ್ಲಿನಲ್ಲಿ ಕಳೆದ ಕೆಲವು ದಿನಗಳಿಂದ ಮುಷ್ಕರವು ನಡೆದಿದ್ದು, ಸಂಪೂರ್ಣವಾಗಿ ಆಡಳಿತದವರು ಮಿಲ್ಲನ್ನು ಮುಚ್ಚಿರುವರು. 1700 ಮಂದಿ ಕೆಲಸಗಾರರು ಕೆಲಸವಿಲ್ಲದೆ ತಿರುಗುತ್ತಿರುವರಾಗಿ, 850 ಕೆಲಸಗಾರರು ಮಿಲ್ಲಿನ ಗೇಟಿನೆದುರು ಸತ್ಯಾಗ್ರಹವನ್ನು ನಡೆಸುತ್ತಿದ್ದಾರೆ.

ಈ ತಾ. 14 ರಲ್ಲಿ ಕುರ್ತಕೋಟಿ ಮತ್ತು [illegible] ಪರಿಷತ್ತಿನ ಚುನಾವಣೆಯನ್ನು [illegible], ಅದರ ಗೌರವಾಧ್ಯಕ್ಷರಾಗಿ, ಅಲ್ಲಿನ ಎಲ್ಲ ಕಾಲೇಜಿನ [illegible] ರಜೆ ಕೊಟ್ಟಿದ್ದರು. ಈ ರಜೆ ಸರ್ಕಾರದ ಶಾಲೆಗಳಿಗೆ ವಿಸ್ತರಿಸಿದರೆಂದೂ, ಅನುದಾನದ ಆ ದಿನದ ಸಂಬಳವನ್ನು ಅಭಾವ್ಯೋಪಯೋಗದ ಸಂಘದಿಂದ ಕಡಿತಗೊಳಿಸಲಾಗುವದೆಂದೂ ಸರ್ಕಾರದ ಆಜ್ಞೆ.

ಕ್ವೆಟ್ಟಾ ಭೂಕಂಪದ ನಿಧಿಗೆ ಇಂಡಿಯಾ ಗವರ್ನ್‌ಮೆಂಟ್ ಬೊಕ್ಕಸದಿಂದ ಗವರ್ನರ್-ಜನರಲ್‌ರವರು ಹತ್ತು ಲಕ್ಷ ರೂಪಾಯಿ ಹಾಗೂ ಬಲೂಚಿಸ್ತಾನದ ಕೇಂದ್ರ ಸ್ಥಳವಾದ ಕ್ವೆಟ್ಟಾ ನಗರದಲ್ಲಿ ವಾಸಿಸುತ್ತಿದ್ದ 1,020 ಪಠಾಣರುಗಳ ನೈಜ ಕಡುಹಿಸಿಕೊಟ್ಟಿರುತ್ತಾರೆ.

ಬೇಳಿಧ್ಯದ ಬರಡನೆಯ ಒಂದು ಭಾಗದಲ್ಲಿ ಮಧುರ ದೃಷ್ಟಿ ಅಂಗೀಕರಿಸಿಯೂ ಕೇಳುವವಾಗಿದೆ. ಆತನ ಮನದ ಮನುಷ್ಯನಲ್ಲಿ, ವಾರ್ಷಿಕ ದೇಶದ ಮಂಡಳಿಯ ರಾಶಿ ಈ ರಾತ್ರಿ ನಗರಿಗೆ ಮುಂದಕ್ಕೆ ಬಾಯುವನ್ನು ತಂದು ಕಾಂತ ಗಳ ವಾಯುವಿನ ಸಂಪರ್ಕದಿಂದ, ಆ ಮಂಡಳಿ ಹಾಡುವಂತೆ ನಡೆಸುವ ವಿಸ್ತಾರದಿದೆ. ಇವರ್ಕೆ ಅನ್ನಡೆಯ ಗಾಮದನೆಂದು ಹೆಸರು!

ಪೋಲೀಸರು ಕಳ್ಳರನ್ನು ಹಿಡಿಯಲು ನೂತನ ವಿಧಾನಗಳನ್ನು ಕಂಡು ಹಿಡಿದು ಉಪಯೋಗಿಸುತ್ತಿರುವಂತೆ ಕಳ್ಳರು ತನ್ನ ವಿಧಾನಗಳನ್ನು ಬದಲಾಯಿಸಲು ಆ ಕಳ್ಳರಂತ ಕಾನೂನುಗಳನ್ನು ಕಂಡು ಹಿಡಿಯುತ್ತಿರುವರು. ಕಲ್ಕತ್ತೆಯಲ್ಲಿ 3 ಸಂಗಡ ಕಳ್ಳ ಅಪರಾಧಿಗಳು ಹಿಡಿತಕ್ಕೆ ಅವರಲ್ಲಿ ವಿದ್ಯುಚ್ಛಕ್ತಿಯ ಉಪಕರಣ, ಆತನ ಯಂತ್ರಗಳು, ಅಪರಾಧಿಗಳ ಗುಟ್ಟನ್ನು ಬಯಲು ಮಾಡುವ ಬೆರಳುಗಳ ಗುರುತನ್ನು ಅಳಿಸುವ ಕೈಚೀಲಗಳು ಸಿಕ್ಕಿರುವವು.

ಕ್ವೆಟ್ಟಾ, ಮಾಸ್ಟರಿಂಗ್ ಮತ್ತು ಕಾಲೊಟ್ ಈ ಊರುಗಳಲ್ಲಿ ಉಂಟಾದ ಭೂಕಂಪದ ದೆಸೆಯಿಂದ ಅಲ್ಲಿ ಗಂಡಾಂತರದಿಂದ ಪಾರಾಗಿ ಉಳಿದಿರುವ ವೃದ್ಧರೆಲ್ಲರೂ ನಿರ್ಗತಿಕರಾಗಿ ಅವರ ಒಳಿತುಲ್ಲಿ ಒಂದು ಕಾಸೂ ಇಲ್ಲದಿರುವ ಕಾರಣ ಅವರು ಇತರ ಊರುಗಳಲ್ಲಿರುವ ತಮ್ಮ ಬಂಧು ಮಿತ್ರಾದಿಗಳಿಗೆ ಕಾಗದ ಬರೆಯುವುದಕ್ಕಾಗಲಿ ಸ್ಟಾಂಪು ಹಚ್ಚದೆ ಹಾಕುವ ಕಾಗದಗಳನ್ನು ಪೋಸ್ಟ್ ಗೆ ಹಾಕಬಹುದೆಂದು ಪೋಸ್ಟ್ ಆಫೀಸಿನವರು ಅಪ್ಪಣೆ ಕೊಟ್ಟಿರುತ್ತಾರೆ.

ಶಿಕಾರಪುರದಲ್ಲಿ ಹುಡುಗಿಯರ ನೂತನ ಪರಿಷ್ಕರಣದ ಉಡುಗೆ ತೊಡುಗೆಗಳ ವಿಷಯವಾಗಿ ಪ್ರಬಲವಾದ ಒಂದು ಚಳವಳಿ ಎದ್ದಿದೆ. 'ಫ್ಯಾಷನ್' ಪ್ರಿಯರಾದ ಹುಡುಗಿಯರು ಅಲ್ಲಿನ ಶಾಲೆಗಳಿಗೆ ಪ್ರವೇಶಿಸದಂತೆ ಶಾಲೆಗಳನ್ನು ಪಿಕೆಟ್ ಮಾಡಬೇಕೆಂದು ಆ ಟೌನ್ ಪಂಚಾಯಿತಿಯು ನಿರ್ಧರಿಸಿದೆ. ಜಮೀದಾರರ ನ್ಯಾಯಾಲಯದ ದೇವಾಲಯಕ್ಕೆ, ಹಳೆ ಸಂಪ್ರದಾಯಗಳಿಂದ ಉಡುಗೆ ತೊಡುಗೆಗಳನ್ನು ಧರಿಸಿ ಬಾರದ ಹೆಂಗಸರಿಗೆ ಗೇಟಿನೊಳಗೆ ಪ್ರವೇಶವೇ ಇಲ್ಲವೆಂಬ ಕಠಿಣ ನಿರ್ಬಂಧ!

ಜಯಪುರ ಸಂಸ್ಥಾನದ ಮಹಾರಾಜರು ಜಯಪುರದಲ್ಲಿ, ಶಿಲ್ಪಕಲೆಯಲ್ಲಿ ಶಾಚಾಮಹಾಲಿನಂತೆ ಅನ್ವೀಯವಾದ ಸಾಧ್ಯವಾದಷ್ಟು ಮಹಲೊಂದನ್ನು ಕಟ್ಟಿಸುತ್ತಿದ್ದಾರೆ. ಇದರ ಹೆಸರು "ರಾಮಬಾಗ್ ಪ್ರಾಸಾದ"ವೆಂದು. ಈ ಮಹಾಲಿಗೆ 1000 ಪ್ರವೇಶದ್ವಾರಗಳಿವೆ. 3500 ಕಿಟಕಿಗಳಿವೆ. ಮಹಲಿನಲ್ಲಿ ಸ್ವಯಂಪಾಕ ಗೃಹದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಆಹಾರವು ಸಿದ್ಧವಾಗುವ ವ್ಯವಸ್ಥೆಯಿದೆ. ಮಹಾರಾಜರು ಈಗ ಲಂಡನ್ನಿನಲ್ಲಿದ್ದು, ಈ ಮಹಾಲಿಗೆ ಬೇಕಾಗುವ ಅಮೂಲ್ಯವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದಾರೆ.

ಅಖಿಲ ಭಾರತೀಯ ಹಾಕಿ ಟೀಮಿನವರು ಕಳೆದ ಗುರುವಾರ ನ್ಯೂಜೀಲ್ಯಾಂಡಿನ ಮುಖ್ಯ ಪಟ್ಟಣವಾದ ವೆಲ್ಲಿಂಗ್ಟನ್ನಿನಲ್ಲಿ ಸಾಕರ್ ಕ್ಯಾಂಟರ್ಬರಿ ಟೀಮಿನವರ ಮೇಲೆ ಹತ್ತೆರಡು ಗೋಲುಗಳನ್ನು ಹೊಡೆದು ಗೆದ್ದಿರುತ್ತಾರೆ. ಭಾರತೀಯ ಆಟಗಾರರು ನ್ಯೂಜೀಲ್ಯಾಂಡಿಗೆ ಹೋದಂದಿನಿಂದಲೂ ಅಲ್ಲಿನ ಜನರು ಅವರ ಅಧಿಕಾರಿಗಳು (ನೆರೆದ) ಆಟದವರು)ಗಳಿಗಾಗಿ ಇವರನ್ನು ಒಪಳ ಹರಿಸುತ್ತಿದ್ದರಂತೆ. ಆಟದ ಪ್ರತಿಯೊಬ್ಬ ಆಟಗಾರನ ತಮ್ಮ ಪ್ರತಿಯೊಂದು ಆಟೋಗ್ರಾಫುಗಳ ಅರ್ಧ ಸೆನ್ನಿ ಚಾರ್ಜುಮಾಡಬೇಕೆಂದು ಗೊತ್ತುಮಾಡಿದ್ದಾರೆಂದೂ, ಬಂದ ಹಣವನ್ನು ಇಂಡಿಯಾ ದೇಶದ ಭೂಕಂಪ ಸಹಾಯನಿಧಿಗೆ ಕಳುಹಿಸುವುದಾಗಿ ತಿಳಿಸಿರುತ್ತಾರೆಂದೂ ಹೇಳಲಾಗಿದೆ.

ಹಂಗೇರಿಯದಲ್ಲಿ ಎಲ್ಲ ಓಟಗಾರ ಓಟ ಕಲಿಯಬೇಕಾದುದು ಅವಶ್ಯಕ; ಇಲ್ಲದಿದ್ದರೆ ಬಾಳ್ವೆ ಇಲ್ಲ. ಆದರೆ ಅಮೆರಿಕದ ಸ್ಟೇಟ್ ಚಿಕ್ಕದಾಗಿ ನ ನಗರದಲ್ಲಿ 1 ಲಕ್ಷ ಮಂದಿ ಓಟ ಓಟ ಕಲಿಯಲ್ಲ. ಇವರಲ್ಲಿ 2 ಸಾವಿರ ಮಂದಿ ಓಟ ಕಲಿಯಲು ಪತ್ರ ಬರೆದಿರುವರು. ಆ ನಗರಿಗೆ ಕಲ್ಯಾಣವಾಗಲೆಂದು ಅದರಲ್ಲಿ ಪ್ರತಿಯೊಬ್ಬನು 15 ಶಿಲ್ಲಿಂಗು ಗಳ ಬಹುಮಾನ ಕೊಡಬೇಕಾಗಿದೆ. ಒಟ್ಟಿಗೆ ಈ ಬಹುಮಾನದ ಹಣದ ಮೊತ್ತವು 1 ಲಕ್ಷ 20 ಸಾವಿರ ಪೌಂಡುಗಳಷ್ಟಾಗುವುದು. ಮುಂದೆ ಈ ರೀತಿ ಓಟದ ಇಷ್ಟರಷ್ಟು ದೊಡ್ಡ ಪ್ರಮಾಣದಿಂದ ಓಟ ಕಲಿಸದೆ ಇರುವ ಹಾಗೆ ಈ ಬಹುಮಾನದ ಹಣವನ್ನು ವಸೂಲು ಮಾಡಬೇಕೆಂದರೆ, ಆ ವೆಚ್ಚವನ್ನು ಆ ರಾಷ್ಟ್ರದ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದೂ ನಿಶ್ಚಯಿಸಲಾಗಿದೆ.

NOTICE.

(The General Assurance Society Ltd., Ajmer.)

This is to inform the public that a deposit receipt book no. 3 containing blank receipts from No. 2355 to 2375, belonging to the above Society, is lost in transit and these receipts have been cancelled. Persons owning such receipts will have no rights whatever over the Society.

ಕೊಡಗು.

ಸನ್ ೧೯೩೫ನೇ ಇಸವಿ
ಜೂನ್ ತಾ ... ನೇ ಶುಕ್ರವಾರ.

ವ್ಯವಸಾಯ ಮತ್ತು ಕೈಗಾರಿಕೆಗಳ ತರಬೇತು.

ನಿರುದ್ಯೋಗಿಗಳ ಕಾಲವಿದು. ಇಂದು ನಿರುದ್ಯೋಗಿಗಳು ಭಾರತ ದೇಶದಲ್ಲೆಲ್ಲಾ ವಿಪರೀತವಾಗಿ ಹೆಚ್ಚುತ್ತಿದೆ. ಇದನ್ನು ಎದುರಿಸುವ ಸಮಸ್ಯೆಯು ಈಗ ಬಹು ಕಠಿಣವಾದ್ದಾಗಿ ಪರಿಣಮಿಸಿದೆ. ಪ್ರಪಂಚದ ಹಲವು ದೇಶಗಳ ಸ್ವಾತಂತ್ರ್ಯ ಸರ್ಕಾರಗಳು ಈ ಸ್ಥಿತಿಯನ್ನು ಬಿಡಿಸಲು ಬಹುತರವಾಗಿ ಪ್ರಯತ್ನಿಸುತ್ತಿರುವವು. ಆದರೆ ಇನ್ನೂ ಸಫಲವಾಗಿರುವುದಿಲ್ಲ. ಗುಲಾಮಗಿರಿಯಲ್ಲಿ ನರಳುತ್ತಿರುವ ಹಿಂದೂಸ್ಥಾನದಲ್ಲಾದರೋ ಸರ್ಕಾರದವರು ಈ ಸಮಸ್ಯೆಗೆ ಗಮನ ಕೊಟ್ಟಂತೆಯೇ ಕಾಣುವುದಿಲ್ಲ. ... ಇದರ ಪರಿಣಾಮವನ್ನು ತಿಳಿದುಕೊಂಡಿಲ್ಲ; ಆದರೆ ಅದರ ನಿವಾರಣೆ ಬಗ್ಗೆ ಕೈಗೊಳ್ಳಬೇಕಾಗುವದೆಂದು ಸರ್ಕಾರದವರು ಈ ವಿಷಯದಲ್ಲಿ ಉದಾಸೀನರಾಗಿರುವರೋ ಏನೋ? ಪಶ್ಚಿಮ ದೇಶಗಳಲ್ಲಿ ಗ್ರಾಮಾಭಿವೃದ್ಧಿಯನ್ನು ಬಿಟ್ಟು, ಗ್ರಾಮಾಂತರಗಳಿಂದ ಜನರನ್ನು ಪಟ್ಟಣಗಳಿಗೆ ಸೆಳೆದು ದೊಡ್ಡ ಕಾರ್ಖಾನೆಗಳನ್ನಿಟ್ಟು, ಗ್ರಾಮಗಳಲ್ಲಿ ಜನರು ನಡೆಸುತ್ತಿದ್ದ ಮನೆ ಕೈಗಾರಿಕೆಗಳನ್ನೂ ವ್ಯವಸಾಯವನ್ನೂ ಮೂಲೆಗೊತ್ತಿದ್ದೇ ಈ ನಿರುದ್ಯೋಗಕ್ಕೆ ಮುಖ್ಯ ಕಾರಣವೆಂದು ಹಲವರು ಈಗೀಗ ಒಪ್ಪಿಕೊಳ್ಳುತ್ತಿರುವರು. ಹಿಂದೂಸ್ಥಾನಕ್ಕೂ ಕಾರ್ಖಾನೆಗಳ ಮೋಹವು ಇತ್ತೀಚೆಗೆ ಹರಡುತ್ತಾ, ಒಂದು ಗ್ರಾಮಗಳ ಸ್ಥಿತಿಯು ಬಹು ಹೀನವಾಗುತ್ತಿದೆ. ಇದರ ನಿವಾರಣೆಗಾಗಿಯೇ ಮಹಾತ್ಮ ಗಾಂಧಿಯವರು ಗ್ರಾಮೋದ್ಯೋಗ ಸಂಘವನ್ನು, ನೂಲುವವರ ಸಂಘವನ್ನೂ ಸ್ಥಾಪಿಸಿರುವರಾಗಿದೆ. ಈ ಸಂಘಗಳ ಕಾರ್ಯಕಲಾಪಗಳು ಎಲ್ಲಾ ಗ್ರಾಮಗಳಿಗೂ ಹರಡುವಂತೆ ನಡೆಸುವುದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಾಗಿದೆ.

ಹಿಂದೂದೇಶದಲ್ಲಿ ನಿರುದ್ಯೋಗಿಗಳಿಗೆ ಇನ್ನೊಂದು ಮುಖ್ಯ ಕಾರಣವಿದೆ. ಸ್ವಾತಂತ್ರ್ಯ ಜೀವನಕ್ಕೆ ಅಯೋಗ್ಯವಾದ ಈಗಿನ ವಿದ್ಯಾಭ್ಯಾಸ ಕ್ರಮವೇ ಈ ಕಾರಣವಾಗಿದೆ. ಬ್ರಿಟಿಷರು ಇಂಡಿಯಾವನ್ನು ಆಳಲು ತೊಡಗಿದಾಗ್ಯೆ ಅವರಿಗೆ ಬಹಳ ಗುಮಾಸ್ತರುಗಳ ಅವಶ್ಯಕತೆ ಇತ್ತು. ಆದುದರಿಂದ ಗುಮಾಸ್ತರುಗಳನ್ನು ತಯಾರಿಸುವ ವಿದ್ಯಾಭ್ಯಾಸವನ್ನೇ ಜಾರಿಗೆ ತಂದರು. ... ಸರ್ಕಾರದವರು ತಾವು ಪ್ರಾರಂಭಿಸಿದ ವಿದ್ಯಾಭ್ಯಾಸ ಕ್ರಮವನ್ನು ದೇಶದ ಅವಶ್ಯಕತೆಗೆ ಸರಿಯಾಗಿ ಬದಲಾಯಿಸದೆ ಇರುವುದು ತೀರ ಶೋಚನೀಯವಾದ ಅನ್ಯಾಯವಾಗಿದೆ. ಉಚ್ಚ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಯುವಕ ಯುವತಿಯರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಇರುವಂತೆ ಸರ್ಕಾರಿ ಉದ್ಯೋಗಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಿಲ್ಲವಾದ ಕಾರಣ ಬೇರೆ ಯಾವ ಕಸಬಿಗೂ ಯೋಗ್ಯರಲ್ಲದ ಯುನಿವರ್ಸಿಟಿ ... ಈಗ ಬೀದಿಗಳಲ್ಲಿ ಅಲೆದಾಡುತ್ತಿರುವರು. ಈ ಪರಿಸ್ಥಿತಿಯು ಮಿತಿಮೀರಿ ಹೋಗುವ ಮುಂಚೆ ಇದನ್ನು ಪರಿಹರಿಸುವ ಬಗೆ ಕಂಡುಹಿಡಿಯುವುದು ಅಗತ್ಯವಾಗಿದೆ. ದೇಶ, ಕಾಲಗಳ ಅವಶ್ಯಕತೆಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡುವುದು ಈ ಸಮಸ್ಯೆಯನ್ನು ಬಿಡಿಸಲು ಮುಖ್ಯ ಸಾಧನ.

ಹಿಂದೂದೇಶದ ಬೇರೆ ಭಾಗಗಳಿಗಿಂತಲೂ ಹೆಚ್ಚಾಗಿ ಕೊಡಗು ಗ್ರಾಮಗಳ ಮತ್ತು ವ್ಯವಸಾಯಗಾರರ ಪ್ರಾಂತ್ಯವಾಗಿದೆ. ಆದರೂ ಕಾಡ ವ್ಯವಸಾಯ ಗೃಹ ಕೈಗಾರಿಕೆಗಳ ಕಲಿಕೆಗೆ ಇತರ ಪ್ರಾಂತ್ಯಗಳಲ್ಲಿರುವಷ್ಟು ಅನುಕೂಲವು ಇಲ್ಲಿ ಇಲ್ಲ. ಇದೇ ಪ್ರಾಂತ್ಯಕ್ಕಾಗಿ ... ಯಲ್ಲಿ ಒಂದು ನೇಯಿಗೆಯ ಶಾಲೆಯೂ ಮತ್ತು ವೀರರಾಜಪೇಟೆಯಲ್ಲಿ ಒಂದು ಬಡಗಿ ಶಾಲೆಯೂ ಮಾತ್ರ ಇವೆ. ಇವುಗಳಿಗೆ ಸರ್ಕಾರದಿಂದ ಸಾಕಷ್ಟು ಉತ್ತೇಜನವಿಲ್ಲವೆಂದರೆ ತಪ್ಪಾಗಲಾರದು. ಉದಾಹರಣೆಗಾಗಿ, ವೀರರಾಜಪೇಟೆಯಲ್ಲಿರುವ ಬಡಗಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ತಿಂಗಳಿಗೆ ... ರೂಪಾಯಿಯಂತೆ (ಸ್ಟೈಪೆಂಡು) ವೇತನ ಕೊಟ್ಟು ಎರಡು ವರ್ಷಗಳ ವರೆಗೆ ಕಲಿಸಿ ಬಿಡುತ್ತಾರೆ. ನಂತರ ಅವನು ಶಾಲೆ ಬಿಟ್ಟು ಸ್ವತಂತ್ರ ಜೀವನ ನಡೆಸಬೇಕಾಗಿದೆ. ... ಬಡಗಿಯಾಗಿದ್ದರೂ ಕೆಲಸ ಅವನ ಮಕ್ಕಳು ಚೆನ್ನಾಗಿ ಕಲಿಯಬೇಕಾದರೆ ಅವನೊಂದಿಗೆ ಎಂಟು ವರ್ಷಗಳ ವರೆಗೆ ಕೆಲಸದೊಡನೆ ಅಭ್ಯಾಸ ಮಾಡಬೇಕು. ಇದಲ್ಲದೆ ಇಂಡಿಯಾದ ಇತರ ಕಡೆಗಳಲ್ಲಿಯೂ, ಪರ ದೇಶಗಳಲ್ಲಿಯೂ ವಿದ್ಯಾರ್ಥಿಗಳು ... ಕಲಿಯುತ್ತಾ ಬಂದರೆ ಏಳು ಅಥವಾ ಐದು ವರ್ಷಗಳಾದರೂ ಮನೆಗೆಲಸದಲ್ಲಿ ತರಬೇತು ಹೊಂದಬೇಕೆಂದು ನಿಯಮವಿರುವುದಾಗಿದೆ. ಆದರೆ ಕೊಡಗಿನಲ್ಲಿ ಮಾತ್ರ ಎರಡು ವರ್ಷಗಳಲ್ಲಿ ಈ ತರಬೇತನ್ನು ಮುಗಿಸಬೇಕೆಂದು ನಿಯಮ ಮಾಡಿರುವುದು ಆಶ್ಚರ್ಯವಾಗಿದೆ.

ಅದರಲ್ಲೂ ಕೊಡಗಿಗೆ ಮರ ಗೆಲಸದವರು ಹೆಚ್ಚಾಗಿ ಹೊರಪ್ರಾಂತ್ಯಗಳಿಂದ ಬರುವುದರಿಂದ ಇಲ್ಲಿಯ ನಿವಾಸಿಗಳಿಗೆ ಬಡಗಿ ಕೆಲಸದ ವಾಸನೆಯೇ ಇಲ್ಲ. ಹೀಗಿರುವಲ್ಲಿ ಬರೇ ಎರಡು ವರ್ಷಗಳ ತರಬೇತು ಹೊಂದಿದ ಯುವಕನು ಒಂದು ಮನೆಯ ಅಥವಾ ದೊಡ್ಡ ಕಟ್ಟಡದ ಕೆಲಸವನ್ನು ಹೇಗೆ ತಾನೇ ಮಾಡಬಲ್ಲನು? ಹಾಗೆ ಅವನು ನಿರುಪಯೋಗವಾದನೆಂದ ಕಾರಣ ಬಡಗಿ ಶಾಲೆಯಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ಕೆಲವರು ಅಭಿಪ್ರಾಯಪಟ್ಟಿರುವಂತೆ. ಇದು ಪೂರ್ತಿ ತಪ್ಪು ಅಭಿಪ್ರಾಯವಾಗಿದೆ. ಬೇರೆ ಕಡೆಗಳಲ್ಲಿ ಜಾರಿಯಲ್ಲಿರುವಂತೆ ಇಲ್ಲಿಯೂ ಐದು ವರ್ಷಗಳ ತರಬೇತು ಕೊಟ್ಟರೆ ಖಂಡಿತವಾಗಿಯೂ ನಮ್ಮ ಪ್ರಾಂತ್ಯದ ಯುವಕರು ಈ ಕಸಬನ್ನು ಚೆನ್ನಾಗಿ ನಡೆಸಬಲ್ಲವರಾಗುವರು; ಅಲ್ಲದೆ ಅವರು ತನ್ನ ತರಬೇತನ್ನು ಮುಗಿಸುವ ಮುಂಚೆಯೇ ಮಾರಾಟದ ... ಕುರ್ಚಿ ಮುಂತಾದ ಚಿಲ್ಲರೆ ಸಾಮಾನುಗಳನ್ನು ಮಾಡಿ ಶಾಲೆಯ ಹಾಗೂ ತನ್ನ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಶಕ್ತರಾಗುವರು. ವಿದ್ಯಾರ್ಥಿಗಳು ಶಾಲೆಯಲ್ಲಿ ಮಾಡಿದ ಸಾಮಾನುಗಳ ಮಾರಾಟದ ಉತ್ಪತ್ತಿಯಲ್ಲಿ ಅರ್ಧ ಶಾಲೆಗೂ, ಉಳಿದ ಅರ್ಧ ಮಾಡಿದ ವಿದ್ಯಾರ್ಥಿಗೂ ದೊರಕುವಂತೆ ಮಾಡುವುದು ಉತ್ತಮ. ಆದುದರಿಂದ ಅಧಿಕಾರಿಗಳು ಈ ಶಾಲೆಯಲ್ಲಿ ತರಬೇತಿನ ಕಾಲವನ್ನು 2 ರಿಂದ 5 ವರ್ಷಗಳ ವರೆಗೆ ಹೆಚ್ಚಿಸಿ ಈ ಕೈಗಾರಿಕೆಯ ಶಾಲೆಗೆ ಪ್ರೋತ್ಸಾಹವನ್ನೀಯುವುದು ಅಗತ್ಯವಾಗಿದೆ.

ಸರ್ಕಾರದವರು ದೇಶಕಂಟಕರೋ, ಅಥವಾ ದೇಶೀಯರ ಏಳಿಗೆಗೆ ... ಕೊಡುವವರೆಂದರೋ ... ಕಾರ್ಯಗಳಿಗೆ ... ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ವ್ಯವಸಾಯ ಕ್ರಮದ ತರಬೇತನ್ನು ಸೇರಿಸಿಕೊಳ್ಳಬೇಕೆಂದು ಎಷ್ಟೋ ವೇಳೆ ಜನರು ಕೇಳಿಕೊಂಡರು. ಅದನ್ನು ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದರು. ಸುಧಾರಿಸಿದ ವ್ಯವಸಾಯ ಕ್ರಮಗಳನ್ನು ಅನುಸರಿಸದೆ ಇದ್ದು, ಇತರ ಕಾರಣಗಳಿಂದಲೂ ರೈತನ ಉತ್ಪತ್ತಿಯು ಬಹು ಮಟ್ಟಿಗೆ ಇಳಿದು ಹೋಗಿ ಅವನು ಸರ್ಕಾರಕ್ಕೆ ಕಂದಾಯವನ್ನೇ ಕೊಡಲಾರದಷ್ಟು ಅಧೋಗತಿಗೆ ಇಳಿದಿರುವಾಗ್ಯೆ ಸರ್ಕಾರದವರು ಕಣ್ಣು ತೆರೆದಂತೆ ತೋರುತ್ತದೆ. ಇನ್ನು ಮುಂದೆ ವೀರರಾಜಪೇಟೆ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ವ್ಯವಸಾಯ ಕ್ರಮವನ್ನು ಬೋಧಿಸಲು ಏರ್ಪಾಡು ಮಾಡುವರೆಂದು ಕೇಳಿ ಸಂತೋಷವಾಯಿತು. ಐದನೇ ಫಾರಮಿನಿಂದ ವಿದ್ಯಾರ್ಥಿಗಳು ವ್ಯವಸಾಯ ಕ್ರಮವನ್ನು 'ಆಪ್ಷನಲ್ ಸಬ್ಜೆಕ್ಟ್' ಐಚ್ಛಿಕ ಪಾಠವಾಗಿ ತೆಗೆದುಕೊಳ್ಳಬಹುದಂತೆ, ಇದರ ತರಬೇತಿಗಾಗಿ ಶಾಲೆಯ ಬಳಿ ಭೂಮಿಯನ್ನು ಏರ್ಪಡಿಸಿರುವರಂತೆ. ಇದರಲ್ಲಿ ಎರಡು ವರ್ಷಗಳ ತರಬೇತು ಆದ ಮೇಲೆ ಸ್ಕೂಲ್ ಫೈನಲ್ ... ಯೊಂದಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಇದಲ್ಲದೆ ಈ ತರಬೇತಿಗಾಗಿಯೇ ಬರುವ ಯುವಕರಿಗೆ ಮಾಸಿಕ 5 ರೂಪಾಯಿಯ ವೇತನ ಕೊಡುವ ಏರ್ಪಾಡು ಮಾಡಬೇಕಾಗುವದೆಂದೂ ... ಇದು ಅಗತ್ಯವಾಗಿಯೂ ಪಡೆಯಬೇಕಾದ ಕಾರ್ಯವಾಗಿದೆ. ತಡವಾಗಿಯಾದರೂ ಈ ಏರ್ಪಾಡನ್ನು ಮಾಡಿದ್ದಕ್ಕೆ ಅಧಿಕಾರಿಗಳನ್ನು ವಂದಿಸಬೇಕಾಗಿದೆ.

ಆದರೆ ವ್ಯವಸಾಯ ತರಬೇತಿನ ವಿದ್ಯಾರ್ಥಿಗಳಿಗೆ ವೇತನ ಕೊಡಲು ಬಡಗಿ ಶಾಲೆಯ ವಿದ್ಯಾರ್ಥಿಗಳ ವೇತನದ ಹಣವನ್ನು ಉಪಯೋಗಿಸುವ ಆಲೋಚನೆ ನಡೆಯುತ್ತಿದೆಯೆಂಬುದಾಗಿಯೂ ಸುದ್ದಿ ಇದೆ. ಮೇಲೆ ಹೇಳಿದಂತೆ ಬಡಗಿ ಶಾಲೆಯಿಂದ ಹೆಚ್ಚಿನ ಪ್ರಯೋಜನವಾಗಿಲ್ಲವೆಂದು ಕೆಲವರು ಗ್ರಹಿಸಿಕೊಂಡು ಆ ಶಾಲೆಯನ್ನು ಮುಚ್ಚಿ, ಅದರ ಬದಲು ವ್ಯವಸಾಯ ಬೋಧನೆಗೆ ಅನುಕೂಲ ಮಾಡಬೇಕೆಂದು ಕೆಲವರ ಸೂಚನೆಯಂತೆ. ಇದು ನಿಜವಾದರೆ, ಇದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ದೇಶಾಭಿವೃದ್ಧಿಗೆ ಅವಶ್ಯವಾದ ಈಗಿರುವ ಸಂಸ್ಥೆಯನ್ನು ತೆಗೆದು ಹಾಕಿ, ಆ ಸಹಾಯವನ್ನು ಇನ್ನೊಂದು ವಿಧದಲ್ಲಿ ಕೊಡುವ ಬದಲಾಗಿ ಈಗ ಜನರಿಗೆ ಬೇಕಾದಷ್ಟು ಉಪಯುಕ್ತವಾದ ಆ ಸಂಸ್ಥೆಯನ್ನು ಬಲಪಡಿಸಿ, ಅದರೊಂದಿಗೆ ಪ್ರಯೋಜನಕರವಾದ ಬೇರೆ ಸಂಸ್ಥೆಗಳನ್ನು ಏರ್ಪಡಿಸಬೇಕೆಂಬುದೇ ಜನರ ಕೋರಿಕೆ. ಆದಕಾರಣ ಸರ್ಕಾರದವರು ಬಡಗಿ ಶಾಲೆಯಿಂದ ಮತ್ತಷ್ಟು ಪ್ರಯೋಜನವಾಗುವಂತೆ ಅಲ್ಲಿಯ ತರಬೇತಿನ ಕಾಲವನ್ನು 5 ವರ್ಷಗಳಿಗೆ ಹೆಚ್ಚಿಸಿ, ವ್ಯವಸಾಯ ಕ್ರಮ ತರಬೇತಿನ ವಿದ್ಯಾರ್ಥಿಗಳಿಗೆ ವೇತನಕ್ಕಾಗಿ ಪ್ರತ್ಯೇಕ ಹಣ ಕೊಡಬೇಕಾಗಿದೆ. ಸ್ಥಳೀಯ ಸರ್ಕಾರದಲ್ಲಿ ... ಇದಕ್ಕೆ ಸಾಕಷ್ಟು ಹಣವಿಲ್ಲವೆಂದಾದರೆ ಗ್ರಾಮಾಭಿವೃದ್ಧಿಗಾಗಿ ಇಂಡಿಯಾ ಸರ್ಕಾರದವರು ಕೊಡುವ ಹಣದಲ್ಲಿ ಸ್ವಲ್ಪವನ್ನು ಇದಕ್ಕೆ ಉಪಯೋಗಿಸಬಹುದಲ್ಲವೇ.

ಬಲೂಚಿಸ್ಥಾನ ಭೂಕಂಪ ನಿಧಿ.

ಕಳೆದ ತಾ 29 ರಲ್ಲಿ ಬಲೂಚಿಸ್ಥಾನದಲ್ಲಿ ಉಂಟಾದ ಭಯಂಕರ ಭೂಕಂಪದ ಅನಾಹುತಕ್ಕೆ ಸಿಕ್ಕಿ ಬಿದ್ದ ನಿರಾಶ್ರಿತರ ಸಹಾಯಕ್ಕಾಗಿ ಈ ಕೆಳಗಿನ ಮಹನೀಯರು ಧನ ಸಹಾಯ ಮಾಡಿರುವರು.

				ರೂ	ಆ	ಪೈ.
1	ಮ. ರಾ.	ರಾ ಪಾಂಡಂಡ ಸೋಮಪ್ಪನವರು		5	0	0
2	,,	ರಾ ಚೇರಂಡ ಸೋಮಯ್ಯ	,,	5	0	0
3	,,	ಕ್ಯಾಪ್ಟನ್ ಚೆಪ್ಪುಡಿರ ಪೊನ್ನಪ್ಪ	,,	5	0	0
4	,,	ರಾ ಕೊಂಗೆಟ್ಟಿರ ಮುಂದಣ್ಣ	,,	5	0	0
5	,,	ಸಿ ಯನ್. ವೆಂಕಪ್ಪಯ್ಯ	,,	3	0	0
6	,,	ಪಂದ್ಯಂಡ ಬೆಳ್ಯಪ್ಪ	,,	3	0	0
7	,,	ಪಾಂಡಂಡ ಚಂಗಪ್ಪ	,,	2	0	0
8	ಮೆಸರ್ಸ್	'ಶುಗರ್' ಸ್ಟೋರ್ಸ್	,,	2	0	0
9	ಮ. ರಾ.	ಕೆ ಯನ್. ಸುಬ್ಬಯ್ಯ	,,	1	0	0
10	,,	ಮನೆಯಪಂಡ ಬೆಳ್ಯಪ್ಪ	,,	1	0	0
11	,,	ಬಿಸಂಡ ಕಾರ್ಯಪ್ಪ	,,	1	0	0
12	,,	ಪುಟ್ಟಿಚಂಡ ಮುಂದಪ್ಪ	,,	1	0	0
13	,,	ಪಳಂಗಂಡ ಅಪ್ಪಯ್ಯ	,,	1	0	0
14	,,	ಒಲ್ಲಚಂಡ ಯಸ್. ಚಂಗಪ್ಪ	,,	1	0	0
15	,,	ಪಟ್ರಪಂಡ ಪೊಂಣಪ್ಪ	,,	1	0	0
16	,,	ಮಂಡೇಪಂಡ ಸೋಮಯ್ಯ	,,	1	0	0
17		,, ಸಂಬಪ್ಪ	,,	1	0	0
18	,,	ಪುತ್ತಮನೆ ಮುದ್ದಯ್ಯ	,,	1	0	0
19	,,	ಪಾರ್ವಂಗಡ ಚಂಗಪ್ಪ	,,	1	0	0
20	,,	ಅಂಜಪರವಂಡ ಮುತ್ತಪ್ಪ	,,	1	0	0
21	,,	ರಾ. ನಡಿಕೇರಿಯಂಡ ಜಿ ಸುಬ್ಬಯ್ಯ	,,	1	0	0
22	,,	ಕೊಕ್ಕೇಂಗಡ ಪೊಂಣಪ್ಪ	,,	1	0	0
23	,,	ಮದನಮೋಹನ್ ಸಿಂಗ್	,,	1	0	0
24	,,	ಪೋಕೇರಿರ ಯಸ್. ಮಾದಪ್ಪ	,,	1	0	0
25	,,	ಯಸ್. ರಾಮಲಾಲ್	,,	1	0	0
26	,,	ಪುಟ್ಟಿಚಂಡ ಅಚ್ಚಯ್ಯ	,,	1	0	0
27	,,	ಚೆಪ್ಪುಡಿರ ಪೂಣಚ್ಚ	,,	1	0	0
28	,,	ಕೊಂಗೆಟ್ಟಿರ ಅಪ್ಪಯ್ಯ	,,	1	0	0
29	,,	ಒಕ್ಕರಂಡ ಕಾರ್ಯಪ್ಪ	,,	1	0	0
30	,,	ಒಲ್ಯಂಡ ಪೂವಯ್ಯ	,,	0	8	0
31	,,	ಪೊನ್ನಚಂಡ ಮುದ್ದಪ್ಪ	,,	0	8	0
32	,,	ಉದಿಯಂಡ ಪೂಚಯ್ಯ	,,	0	8	0
33	,,	ಜಿ ಎಸ್. ರಾಮಚಂದ್ರರಾವ್	,,	0	8	0
34	,,	ಮಂಡೆಪಂಡ ದೇವಯ್ಯ	,,	0	8	0
35	,,	ಮಸೋದು ... ಗಣಪತಿ	,,	0	8	0
36	,,	ಜಿ. ...	,,	0	8	0
37	,,	ಬೈರೆಟ್ಟಿರ ಚಂಗಪ್ಪ	,,	0	8	0
38	,,	ಜಿ ಎ ಮಾದಯ್ಯ	,,	0	8	0
39	,,	ಮುಂಡಚಾಡಿರ ದೇವಯ್ಯ	,,	0	8	0
40	,,	ಕೇಕಿರ ಅಂಣಯ್ಯ	,,	0	8	0
41	,,	ಅಜ್ಜಮಾಡ ಮಾದಪ್ಪ	,,	0	8	0
42	,,	ಕಾಟ್ಯಮಾಡ ಅಪ್ಪಣ್ಣ	,,	0	8	0
43	,,	ಎ ಸಿ. ಸುಬ್ಬಯ್ಯ	,,	0	8	0
44	,,	ಮುಂಡಂಡ ಬಿದ್ದಪ್ಪ	,,	0	8	0
45	,,	ಅಪ್ಪಂಡೆರಂಡ ಅಪ್ಪಚ್ಚ	,,	0	8	0
46	,,	... ಕೊಂಡರ್	,,	0	8	0
			ಜುಮ್ಲ.	59	8	0

ಈ ಮೊಬಲಗನ್ನು ಸಿಂಧ್ ಕಾಂಗ್ರೆಸ್ ಕಮಿಟಿಯವರು ಏರ್ಪಡಿಸಿರುವ ನಿರಾಶ್ರಿತರ ಸಹಾಯ ನಿಧಿಗೆ ಕಳುಹಿಸುವ ಏರ್ಪಾಡು ಮಾಡಲಾಗಿದೆ. ಈ ಬಗ್ಗೆ ನನಗೆ ಕಳುಹಿಸುವ ಚಂದಾ ಮೊಬಲಗನ್ನು ವಂದನಾಪೂರ್ವಕ ಸ್ವೀಕರಿಸಲಾಗುವುದು.

ಪಿ. ಡಿ. ಬೆಳ್ಯಪ್ಪ.

ಈಶ್ವರ ಪ್ರಾರ್ಥನೆ.

ಇಂದು ಮಹಾತ್ಮಾ ಗಾಂಧಿಯವರ ಹೆಸರನ್ನು ಕೇಳದವರು ಇಲ್ಲವೇ ಇಲ್ಲ. ಸ್ವತಃ ಅವರು ಪ್ರಾರ್ಥನೆಯ ವಿಷಯದಲ್ಲಿ ತಮ್ಮ ಅನುಭವವನ್ನು ಹೇಳಿದ್ದಾರೆ. ನಾಸಿಕರು ಧರ್ಮಶಾಸ್ತ್ರಗಳನ್ನು ಮನಸ್ಸಿಗೆ ಬಂದಂತೆ ಅರ್ಥೈಸುವ ಈ ಕಾಲದಲ್ಲಿ ಅವರ ಮಾತುಗಳು ಮಾರ್ಗದರ್ಶಕವಾಗುವುವು. ಆ ವಿಚಾರದಿಂದಲೇ ಸ್ವಲ್ಪ ಭಾಗವನ್ನು ಓದುಗರಿಗೆ ಇಲ್ಲಿ ಪ್ರಕಟಿಸಲಾಗಿದೆ.

'ಈಶ್ವರ ಪ್ರಾರ್ಥನೆಯು ನನ್ನ ಜೀವನವನ್ನು ಉಳಿಸಿದೆ. ನನ್ನ ಜೀವನದಲ್ಲಿ ಈಶ್ವರ ಪ್ರಾರ್ಥನಾ ಶಕ್ತಿ ಇಲ್ಲದಿದ್ದರೆ ನಾನು ಇದು ವರೆಗೆ ಹುಚ್ಚನಾಗುತ್ತಿದ್ದೆ. ನನ್ನ ಜೀವನದಲ್ಲಿ ಅನೇಕ ಕಷ್ಟಗಳನ್ನು ಸಹಿಸಬೇಕಾಯಿತು. ಹೆಜ್ಜೆ ಹೆಜ್ಜೆಗೂ ವಿಘ್ನಗಳನ್ನು ಎದುರಿಸಬೇಕಾಯಿತು. ನನ್ನ ಕಷ್ಟಗಳನ್ನು, ವಿಘ್ನಗಳನ್ನು ದೂರಮಾಡುವುದರಲ್ಲಿ ಈಶ್ವರ ಪ್ರಾರ್ಥನೆಯು ಹೊರತು ಮತ್ತಾವುದರಿಂದಲೂ ಸಹಾಯವಾಗಲಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಲ್ಲೆ. ನನ್ನ ಆತ್ಮಕ್ಕೆ ಶಾಂತಿಯನ್ನು ಕೊಡಲು ಇದರ ಹೊರತು ಇನ್ನೊಂದು ಜಗತ್ತಿನಲ್ಲಿ ಮತ್ತಾವ ಸಾಧನವೂ ಇಲ್ಲ.

'ಯದ್ಯಪಿ ಸತ್ಯವು ನನ್ನ ಜೀವನದ ಒಂದು ಅಂಗವಾಗಿದೆ, ಆದರೆ ಈಶ್ವರ ಪ್ರಾರ್ಥನೆಯು ನನ್ನ ಜೀವನದ ಒಂದು ಆವಶ್ಯಕ ವಸ್ತುವಾಗಿದೆ. ಇದರ ಹೊರತು ನನ್ನ ಜೀವನದ ಧಾರೆಯು ಬಾಧಿತವಾಗುತ್ತದೆ.

'ಈಶ್ವರ ಪ್ರಾರ್ಥನೆಯು ಅವಲಂಬನೆಯು ನನಗೆ ಇಲ್ಲದಿದ್ದರೆ ನಾನು ಈ ಸಂಸಾರರೂಪ ವಿಚಿತ್ರವಾದ ಸಾಗರದಲ್ಲಿ ಎಂದಿಗೂ ತೇಲಿಯಾಗುತ್ತಿರಲಿಲ್ಲ. ನನಗೆ ಸತ್ಯದಲ್ಲಿ ವಿಶ್ವಾಸವು ಹೆಚ್ಚಿದಂತೆಲ್ಲಾ ಈಶ್ವರ ಪ್ರಾರ್ಥನೆಗಾಗಿ ನಾನು ಉತ್ಸುಕನಾದೆ. ಅದರ ಹೊರತು ನನಗೆ ಶಾಂತಿ ಇಲ್ಲ, ಅಲ್ಲದೆ ಜೀವನವು ನೀರಸವಾಗಿಯೂ, ಅಂಧಕಾರಮಯವಾಗಿಯೂ ಕಾಣುತ್ತದೆ.

'ನಾನು ಈಶ್ವರ ಪ್ರಾರ್ಥನೆಗೆ ತೊಡಗುವುದಕ್ಕೆ ಪ್ರಾರಂಭಿಸಿದಾಗ ಈಶ್ವರನಲ್ಲಿ ನನಗೆ ನಂಬಿಕೆ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ಕ್ರಮೇಣ ಪ್ರಾರ್ಥನೆಯು ಹೊರಬಿತು. ಅಕ್ಕದ ಕೆಲಸವು ನಡೆಯಬಾರದೆಂಬುದನ್ನು ನಾನು ಅನುಭವಿಸಿ ಸಹಜವಾಗಿ ನೋಡಿದಾಗ ಆತ್ಮಕ್ಕೆ ಪ್ರಾರ್ಥನೆಯು ಅತ್ಯಾವಶ್ಯಕ. ಇದಕ್ಕೆ ಕಾರಣವೇನೆಂದರೆ ಮನುಷ್ಯನ ಸ್ವಸ್ಥಿತಿಯಲ್ಲಿ ಆಹಾರವು ಎಷ್ಟು ಆವಶ್ಯಕವಾಗಿರುತ್ತದೆಯೋ, ಆದರೆ ಈಶ್ವರ ಪ್ರಾರ್ಥನೆಯ ವಿಷಯದಲ್ಲಿ ಈಶ್ವರ ಪ್ರಾರ್ಥನೆಯಂತಹ ಉಪವಾಸದ ವಿಷಯವಿಲ್ಲ. ಈಶ್ವರ ಪ್ರಾರ್ಥನೆಯ ಹೊರತು ಒಂದು ಕ್ಷಣವೂ ಕೆಲಸ ನಡೆಯಲಾರದು.

'ಪ್ರಪಂಚದ ದೊಡ್ಡ ಉಪದೇಶಕರಾದ ಬುದ್ಧ, ಏಸು, ಪೈಗಂಬರ್ ಮಹಮ್ಮದ್ ಈ ಮೂವರೂ ಅದ್ಭುತ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ಅವರಿಗೆ ಪ್ರಾರ್ಥನೆಯಿಂದಲೇ ಜ್ಞಾನ ಜ್ಯೋತಿಯು ದೊರೆಯಿತು. ಅದರ ಹೊರತು ಅವರು ಜೀವಿಸಲಾರದವರಾಗಿದ್ದರು.

'ಲಕ್ಷಾಂತರ, ಹಿಂದೂ, ಕ್ರಿಸ್ತಾಯಿ ಮತ್ತು ಮುಸಲ್ಮಾನರು ತಮ್ಮ ಜೀವನದಲ್ಲಿ ಪ್ರಾರ್ಥನೆಯಿಂದಲೇ ಶಾಂತಿಯನ್ನು ಹೊಂದುತ್ತಾರೆ. ಅವರನ್ನು ತಾವು ಅಸತ್ಯ ಪಥಗಾಮಿಗಳೆಂದಾಗಲಿ ತಿಳಿಯಿರಿ, ಹೇಗಾದರೂ ತಿಳಿಯಿರಿ. ಈ ಅಸತ್ಯ ದೆಸೆಯಲ್ಲಿಯೂ ನನಗೆ ಆನಂದ ಅನುಭವವನ್ನು ದೊರೆಯುತ್ತಿದೆಯೆಂದು ಧಾರಾಳವಾಗಿ ಹೇಳಬಲ್ಲೆ.

'ನಾನು ದೊಡ್ಡ ಜ್ಞಾನಿಯಲ್ಲ. ಆದರೂ ನಾನು ಪ್ರಾರ್ಥನೆ ಮಾಡತಕ್ಕ ಮನುಷ್ಯನೆಂದು ಎದೆ ತಟ್ಟಿಕೊಂಡು ಹೇಳಬಲ್ಲೆ. ಯಾವ ತರಹವಾಗಿ ಪ್ರಾರ್ಥನೆ ಮಾಡಬೇಕೆಂಬ ಗೊಂದಲದಿಂದ ನಾನು ದೂರನಾಗಿದ್ದೇನೆ. ಏಕೆಂದರೆ ಈ ವಿಷಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸ್ವಯಂ ಒಂದು ಶಾಸನವಿದೆ. ಆದರೆ ಕೆಲವು ಅರಿತಿದ ದಾರಿಗಳಿವೆ. ಮತ್ತು ಅವರವರ ಪೂರ್ವಜರು ಯಾವ ರೀತಿಗೆ ಇಂಗಿತ ಮಾಡಿದ್ದಾರೆಯೋ ಆ ರೀತಿಗೆ ಹೋಗುವುದು ಎಲ್ಲರಿಗೂ ಎಲ್ಲಕ್ಕಿಂತಲೂ ಒಳ್ಳೆಯದು. ಅವರು ಅದರಂತೆಯೇ ನಡೆಯಬೇಕು.

'ಯಾರ ಮನಸ್ಸಿನಲ್ಲಾದರೂ ಈಶ್ವರನ ಕಡೆಗೆ ವಿಶ್ವಾಸ ಹುಟ್ಟಿಸುವುದು ನನ್ನ ಶಕ್ತಿಯು ಹೊರಗಿನ ಮಾತು. ಪ್ರಪಂಚದಲ್ಲಿ ಸ್ವಯಂ ಪ್ರಮಾಣವಾದ ವಿಷಯಗಳು ಕೆಲವಿವೆ—ಅವುಗಳನ್ನು ಸಿದ್ಧಪಡಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ—ಶೀಘ್ರವಾಗಿ ಸಿದ್ಧಪಡಿಸುವವರ್ಕಾಗದಿರುವಂತಹವೂ ಕೆಲವಿವೆ. ರೇಖಾಗಣಿತದಲ್ಲಿ ಕೆಲವು ಪ್ರಕ್ರಿಯೆಗಳು ಸ್ವಯಂ ಸಿದ್ಧವಾಗಿವೆ—ಅವುಗಳನ್ನು ಸಿದ್ಧಪಡಿಸಲು ಉಪಪತ್ತಿಯ ಆವಶ್ಯಕತೆ ಇಲ್ಲ. ಈಶ್ವರನ ಅಸ್ತಿತ್ವವೂ ಇದೇ ರೀತಿಯಾಗಿದೆ. ಅದರ ಉಪಪತ್ತಿಯು ಮಾನವ ಬುದ್ಧಿಯ ಎಲ್ಲೆಯನ್ನು ಮೀರಿದೆ. ಈ ವಿಷಯದಲ್ಲಿ ಬುದ್ಧಿಯ ಕಾಲು ಕುಂಟಾಗುತ್ತದೆ. ಅದರ ವಿಚಾರವು ಬಹುಮಟ್ಟಿಗೆ ಭ್ರಮೆಯಿಂದ ಸಿದ್ಧವಾಗುತ್ತದೆ. ಏಕೆಂದರೆ ತರ್ಕದ ಆಧಾರದಿಂದ ಈಶ್ವರನನ್ನು ನಂಬಲಾಗುವುದಿಲ್ಲ—ಈಶ್ವರನ ವಿವೇಚನೆಯು ತಾರ್ಕಿಕವನ್ನು ದಾಟಿ ಹೋಗುತ್ತದೆ. ಈಶ್ವರನ ಅಸ್ತಿತ್ವವನ್ನು ಸಿದ್ಧಗೊಳಿಸುವ ಎಷ್ಟೋ ಸಿದ್ಧಾಂತಗಳಿವೆ.

'ನಾನು ಹೇಳುವದೇನೆಂದರೆ— ಈಶ್ವರನ ಅಸ್ತಿತ್ವವನ್ನು ತರ್ಕದ ತಕ್ಕಡಿಯಲ್ಲಿ ತೂಗುವುದಕ್ಕೆ ಪ್ರಯತ್ನಿಸುವುದು ವ್ಯರ್ಥ. ಒಂದಾಗಿ ಎರಡು ಅಂದರೆ ಬಾಲಕನಿಗೆ ಈಶ್ವರನಲ್ಲಿ ನಂಬಿಕೆ ಇರಲು ಪ್ರಾರಂಭಿಸುತ್ತದೆ. ಸತ್ಯವಾಗಿ ನನ್ನ ಅಸ್ತಿತ್ವವಿದ್ದರೆ ಈಶ್ವರನೂ ಇದ್ದಾನೆಂದು ತಿಳಿದುಕೊಳ್ಳಿ. ಈಶ್ವರನ ಅಸ್ತಿತ್ವಕ್ಕೆ ನಾನೇ ಪ್ರಮಾಣನೆಂದು ತಿಳಿದುಕೊಂಡರೆ ಸಾಕು. ಈಶ್ವರನ ವಿಷಯದಲ್ಲಿ ನಾನಾ ವಿಚಾರವನ್ನು ಪ್ರಕಟಿಸಲು ಬಾರದವರಾದರೂ ಎಲ್ಲಾ ಮನುಷ್ಯರಿಗೂ ಇದೇ ಪ್ರಮಾಣ ಸಾಕಾಗಿದೆ. ಆದರೆ ಅವರ ಜೀವನದ ಮೇಲೆ ದೃಷ್ಟಿ ಮಾಡಿದರೆ ಈಶ್ವರನು ಅವರ ಜೀವನದ ಒಂದು ಅಂಗವೆಂದು ಗೊತ್ತಾಗುತ್ತದೆ. ಸ್ವಾಭಾವಿಕವಾಗಿ ವಿಶ್ವಾಸವನ್ನು ಪೃಥಕ್ಕರಿಸಲೆಂದು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಹೀಗೆ ಮಾಡುವುದರಲ್ಲಿ ನಿಮಗೆ ತಾರ್ಕಿಕ ಸಾಹಿತ್ಯ ಪುಸ್ತಕಗಳನ್ನು ಓದಬೇಕಾದ ಆವಶ್ಯಕತೆ ಇಲ್ಲ. ನಂಬುವುದಕ್ಕೆ ಪ್ರಾರಂಭಿಸಿ, ನೀವು ನಮ್ಮನ್ನು ಒಂದು ಚಣ ನಿಗ್ರಹಿಸಿ ತುಚ್ಛರೆಂದು ತಿಳಿದುಕೊಳ್ಳುವಿರಿ. ಚಿಕ್ಕದಾಗಿದೆ ಏಕೆಂದರೆ ಬ್ರಹ್ಮಾಂಡದಲ್ಲಿ ಒಂದು ಪರಮಾಣುವೂ ನಮ್ಮ ಅಸ್ತಿತ್ವವನ್ನು ಬೆಳಗಿಸಿ ಬಿಟ್ಟಿದೆ. ಆದರೆ ನಾವು ನಮ್ಮ ಅಜ್ಞಾನದ ಉನ್ಮಾದದಲ್ಲಿ ನಮ್ಮ ಅಸ್ತಿತ್ವವನ್ನು ಮರೆತು ಪ್ರಕೃತಿ ವಿಧಾನವನ್ನು ಅರಿಯಲಾರದವರಾಗಿರುವೆವು. ಒಂದು ಸಲ ನಾವು ಈಶ್ವರನ ಅಸ್ತಿತ್ವದ ಮೇಲೆ ವಿಶ್ವಾಸವಿಟ್ಟರೆ ಪ್ರಾರ್ಥನೆಯ ಹೊರತು ಇನ್ನೊಂದು ಆತ್ಮಶಕ್ತಿಯ ಕರ್ತವ್ಯ ಉಳಿದಿರುವ ಕಾರಣವಿಲ್ಲ.

'ನನ್ನ ಜೀವನವೆಲ್ಲಾ ಪ್ರಾರ್ಥನಾಮಯವಾಗಿದೆಯೆಂದು ನಾನು ಹೇಳುವುದಿಲ್ಲ. ದಿನಕ್ಕೆ ಗಿಡಿ ಕಳೆದ ನಂತರ ದಲ್ಲಿ ಪ್ರಾರ್ಥನೆಯಲ್ಲಿ ಕಳೆದ ಘಳಿಗೆಗಳು ಅಕರ್ಮಣ್ಯರೂ ಆಗಬಾರದು. ಯಾರು ಯಥಾರ್ಥವಾಗಿ ಪರಮಾತ್ಮನ ಚಿಂತನೆಯಲ್ಲಿ ಮಗ್ನನಾಗಿರುತ್ತಾರೆಯೋ ಅವರನ್ನು ಪರಮಾತ್ಮನು ಎಲ್ಲಾ ಕಷ್ಟಗಳಿಂದಲೂ ಪಾರುಮಾಡುವನೆಂಬುದನ್ನು ಮರೆಯಬೇಡಿ. ನಿತ್ಯವೂ, ದೇವ ದೇವನನ್ನು ಪ್ರಾರ್ಥಿಸಿ. ನಿಮ್ಮ ನ್ಯೂನತೆಗಳನ್ನು ತಿಳಿದು ಪಶ್ಚಾತ್ತಾಪ ಪಡಿರಿ. ದಯಾಮಯನಾದ ಭಗವಂತನು ನಿಮ್ಮಲ್ಲಿ ಸ್ಥಿರವಾಗುವನು.

'ಸಂಸ್ಕೃತಿ.'

ಅಲ್ಲಿಯೂ ಭತ್ತೆ—ಭ್ರಮೆ ಆಚ್ಚರವೇ ?

(ಲೇಖಕ—ಪಂಡಿತ್ ಕಾಶೀನಾಥ)

ಕ್ವೆಟ್ಟಾದಲ್ಲಿ ಮೊನ್ನೆ ಆದ ಅನಾಹುತದ ಭಯಂಕರ ವಾರ್ತೆ ಈಗ ಜಗತ್ತಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಭೂಕಂಪದ ಒಂದು ಕ್ಷಣದಿಂದ ಆ ಭಾಗವೆಲ್ಲಾ ನಾಶವಾಗಿ ಹೋಗಿದೆ. ಸುಮಾರು 50,000 ಜನರು ಸತ್ತಿರುವರು, ಎಂದು ತಿಳಿದವರು ಹೇಳುತ್ತಿದ್ದಾರೆ. ಈಗಾಗಲೇ ಸಾವಿರಾರು ಹೆಣಗಳನ್ನು ಮಣ್ಣಿನ ರಾಶಿಗಳಿಂದ ಅಗೆದು ಎತ್ತಲಾಗಿದೆ. ಅಗೆಯುವಾಗ ಹಲವರು ಜೀವಂತರಾಗಿ ದೊರೆತದ್ದು ಉಂಟು. ಇನ್ನು ಜೀವಂತರಾಗಿಯೇ ಹಲಕೆಲವರು ಇರಬಹುದು ಎಂದು ಅನೇಕರ ಭಾವನೆ ಇದೆ. ಇಂಥಾ ಸತ್ಯಾಗ್ರಹದ ಅನುಭವದಿಂದ ಕುಂಟಿದ ಬಾಬು ರಾಜೇಂದ್ರ ಪ್ರಸಾದರ ಸಲಹೆಯೂ ಹಾಗೆಯೇ ಇದೆ.

ಆದರೆ ಅಂಧರು. ಇಷ್ಟಿಷ್ಟು ದಿನ ಹಾಗೆಯೇ ಬದುಕಿದ್ದಾರೆ? ಬಿದ್ದ ಕಟ್ಟಡಗಳನ್ನು ಎತ್ತಿ ಹಾಕಲಿಕ್ಕೆ ಸಾಕಷ್ಟು ಜನರಿದ್ದು, ಹೂತು ಬಿದ್ದವರನ್ನು ಬೇಗನೇ ಅಗೆದು ಹಾಕಿಸಿ ಬಿಡಲ್ಲವೇ ಅಂಥ ಊರಿಗೆ ತಕ್ಕ ಫಲವೂ ದೊರೆಯುವದು? ಸರ್ಕಾರದವರು ಸ್ವಯಂಸೇವಕರನ್ನು ಅಲ್ಲಿ ಹೋಗದಂತೆ ತಡೆಯುವ ವಿಷಯದಲ್ಲೇ ಪ್ರಕಟಿಸಿ ಬಿಟ್ಟರು. ಆದರೆ ಅದಕ್ಕೆ ತಕ್ಕ ಕಾರಣವೂ ಬೇಡವೇ ? ಅದು ಹೇಗಿದೆ ?

ಅಂಥ ದೊಡ್ಡ ಭೂಕಂಪದಿಂದ ಹಾಳಾಗಿ ಬಿದ್ದ ಜಾಗೆಯು ವಿಸ್ತಾರ ಎಂದರೆ 130 ಮೈಲು ಉದ್ದ 20 ಮೈಲು ಅಗಲ. ಅಷ್ಟು ವಿಶಾಲವಾದ ಪ್ರದೇಶವನ್ನು ಅಗೆದು ಹಾಕಲಿಕ್ಕೆ 6000 ಮಂದಿ ಕೂಲಿಗಳು ಸಾಕೇ ? ಅಲ್ಲಿ ಮುಖ್ಯವಾಗಿ ಕೆಲಸ ಮಾಡುವ ಅಧಿಕಾರಿಗಳು ನೇಮಿಸಿದವರ ಸಂಖ್ಯೆಯೇನೋ ಸದ್ಯಕ್ಕೆ ಅಷ್ಟೇ ! ಸಾಕೋ ಅಷ್ಟು ?

ಅದರ 10 ರಷ್ಟು ಸಂಖ್ಯೆಯಿದ್ದರೂ ಹೆಚ್ಚಾಗದು. ಆ ಸಂಖ್ಯೆಗೆ ಲೋಪವೆಲ್ಲಿದೆ ಮತ್ತೆ ? ಆ ಜಾಗೆಯ ಅಧಿಕಾರಿಗಳಿಗೆ ಇನ್ನು ಹೆಚ್ಚಿನ ಕೂಲಿಯನ್ನು ನೇಮಿಸುವದು ಸಾಧ್ಯವಿಲ್ಲವಂತೆ. ಇರಲಿ. ಬೇಕಾದಷ್ಟು ನಮ್ಮ ಜನ ಧೈರ್ಯಶಾಲಿಗಳಿಂದ ಅದನ್ನು ಪೂರೈಸಲಿಕ್ಕೆ ಸಿದ್ಧರೇ ಆಗಿಲ್ಲವೇ ?

ಕಾಂಗ್ರೆಸ್ ಸೆಕ್ರೆಟರಿಗಳಾದ ಆಚಾರ್ಯ ಕೃಪಲಾನಿ ಮತ್ತು ಜಯರಾಮದಾಸ್ ದೌಲತ್‌ರಾಮರು ಅಲ್ಲಿಗೆ ಹೋಗಿದ್ದಾರೆ. ಬಾಬು ರಾಜೇಂದ್ರ ಪ್ರಸಾದರು ಅವರನ್ನಲ್ಲಿಗೆ ಬೇಕಾದ ಸೇವೆಗಾಗಿಯೇ ಕಳುಹಿಸಿದ್ದಾರೆ. ಕರಾಚಿಯ 'ಮೇಯರ್' ಆಗಿದ್ದ ಜಮಶೆಡ್ ಎನ್. ಆರ್. ಮೆಹತಾ ಇವರೂ ಅಲ್ಲಿದ್ದಾರೆ. ಸಾಧು ವಾಸ್ವಾನಿಯವರೂ ಅಲ್ಲಿದ್ದಾರೆ. ಇವರೆಲ್ಲರಿಗೆ ಬೆಂಬಲವಾಗಿ ದುಡಿಯಲಿಕ್ಕೆ ಸಾವಿರಾರು ಮಂದಿ ಯುವಕ ಯುವತಿಯರು ಸಿದ್ಧರೇ ಆಗಿದ್ದಾರೆ. ಆದರೆ ಇವರಿಗೆ ಆ ಪ್ರದೇಶಕ್ಕೆ ಪ್ರವೇಶವೇ ಇಲ್ಲ. ಇವರ ಹೃದಯವು ಆ ಊರೊಳಗೇ ಇದ್ದರೂ ಇವರ ಪ್ರಯತ್ನವೇನೂ ಊರ ಹೊರಗಿದ್ದೇ ತೀರಬೇಕು ! ಇದೇಕೆ ?

ಅಲ್ಲಿಯ ಕೆಲಸವನ್ನೆಲ್ಲಾ ಒಂದೇ ಸೈನ್ಯದ ಇಲಾಖೆಗೆ ಒಪ್ಪಿಸಿ ಕೊಟ್ಟಿದ್ದಾರೆ. ಅದಕ್ಕೆ ಸೇರಿದವರು ಮಾತ್ರವೇ ದುಡಿಯತಕ್ಕ ಇದ್ದಾರೆಂಬುದು ನಿಜವಾದ ಮಾತು. ಆದರೂ ಅವರು ಸಾಕಷ್ಟು ಇಲ್ಲದವರು. ಅವರ ಸಂಖ್ಯೆ ವಿಪುಲ ಕಡಿಮೆ. ಅವರ ಕೈಗಳನ್ನು ಸ್ವತಂತ್ರ ಸೇವಕ ವರ್ಗದಿಂದ ಸಹಕಾರವು ಏಕೆ ಬಲಗೊಳಿಸಬಾರದು ?

ಈಗ ಆ ಪ್ರದೇಶವೆಲ್ಲಾ 'ಮಾರ್ಷಲ್ ಲಾ' ಗೆ ಒಳಪಟ್ಟು ಕೊಂಡಿದೆ. ಹೊರಗಿನವರಿಗೆ ಸರಳವಾಗಿ ಒಳಗೆ ಹೋಗಲಿಕ್ಕೆ ಅವಕಾಶವಿಲ್ಲ. ಒಳಗೆ ಹೋಗಲಿಚ್ಛಿಸುವವರು ಮಿ. ಜಿನ್ನಾರವರಾಗಲೀ, ಪಂಡಿತ ಮಾಲವೀಯರಾಗಲೀ, ಮಹಾತ್ಮಾಜಿಯವರಾಗಲೀ ಅನುಮತಿಯನ್ನು ಪಡೆದ ಕೊಳ್ಳಬೇಕು. ಆದರೆ ಕ್ವೆಟ್ಟಾದ ಅಧಿಕಾರಿಗಳು ಅವರಿಗೆ ಅನುಮತಿ ಕೊಡುವುದಿಲ್ಲ. ಎಂಥಾ ಬಡಿಯುವ ಅವಕಾಶ ಇವರು ಅನುಮತಿ ಕೊಡಬೇಕಿಲ್ಲ. ಅಂತೂ ಇಂಥ ಸಾರ್ವತ್ರಿಕ ಅಧಿಕಾರ ಸ್ವಬ್ಬಾದ ನಿರ್ಬಂಧಗಳೇಕೆ ! ಇವಕ್ಕೆ ಕಾರಣವೇನು ?

ಬಿಹಾರದಲ್ಲಿ ಸರ್ಕಾರವೂ ಸ್ವಯಂ ಸೇವಕ ವರ್ಗವೂ ಒಂದಾಗಿಯೇ ದುಡಿದು, ಸಾಕಷ್ಟು ಉಪಕಾರ ಮಾಡಿ ಚಿರಸ್ಮರಣೀಯರಾಗಲಿಲ್ಲವೇ ? ಆದರೆ ಈಗ ಸರಕಾರಕ್ಕೆ ಇಂಥ ಯಾವ ಹಟ ಹಿಡಿದಿದೆ ?

ಕ್ವೆಟ್ಟಾದ ಸ್ಥಾನ ಮಹಿಮೆಯೋ ! ಯಾರಿಗೆ ಗೊತ್ತು ! ಅದೇನೇ ಇರಲಿ—ದಯೆಯಿಂದ ಕೂಡಿದ ಅಧಿಕಾರ ವರ್ಗದ ಮನಸ್ಸನ್ನು ಈಗ ಸರಿಪಡಿಸಿ ಎಂದು ಹೇಳಬೇಕಾಗುತ್ತದಲ್ಲವೇ ?

ಕೊಡಗು ವಿದ್ಯಾರ್ಥಿಗಳ್ಳಿ ಕ ಧನ ಸಹಾಯಸಂಘ
ಮಡಿಕೇರಿ, ತಾ 15—6—1935.

ನೋಟೀಸು.

ಮೇಲ್ಕಂಡ ಸಂಘದಿಂದ ಸಾಲ ಬೇಕೆಂದು ಕೇಳುವವರು ತಾ 25—6—1935 ರ ಒಳಗೆ ಸಂಘದ ಪ್ರೆಸಿಡೆಂಟರಿಗೆ ನಿಯಮದಂತೆ ಅರ್ಜಿ ಫಾರಂ ಮೂಲಕ ಅರ್ಜಿ ಬರೆದುಕೊಳ್ಳತಕ್ಕದ್ದು. ಅರ್ಜಿ ಫಾರಂಗಳು ಮೇಲ್ಕಂಡ ಸಂಘದಲ್ಲಿ ದೊರೆಯುವುವು. ಸಾಲದ ಮತ್ತು ನಿಯಮಗಳ ವಿವರಗಳನ್ನು ಸ್ಥಳೀಕ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಪ್ರತ್ಯೇಕ ಅರ್ಜಿದಾರರಿಗೆ ತಿಳಿಸಲು ಸಾಧ್ಯವಿಲ್ಲ.

ಮೇಲ್ಕಂಡ ಸಂಘದ ವಾರ್ಷಿಕ ಸಮ್ಮೇಳನವು ಜುಲೈ ತಿಂಗಳು 5ನೇ ತಾರೀಕಿನಲ್ಲಿ 5 ಗಂಟೆಗೆ ಜರುಗುವುದರಿಂದ ಸಂಘದ ಸಭಾಸದರೆಲ್ಲಾ ಸಂಘದ ನಿಯಮಾವಳಿಗೆ ಅನುಸಾರವಾಗಿ ತಮ್ಮ ಸಾಲದ ಮಾಸಿಕ ಕಂತುಗಳನ್ನು ಕೂಡಲೇ ಸಂದಾಯ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ವಾರ್ಷಿಕ ಸಭೆಯಲ್ಲಿ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಯನ್ನು ಆರಿಸಲಾಗುವುದು.

ಮೇಲ್ಕಂಡ ಸಂಘಕ್ಕೆ ಎಲ್ಲಾ ಜನಾಂಗದವರಿಗೆ ಸಂಘದ ಶ್ರೇಯೋಭಿವೃದ್ಧಿಯನ್ನು ಅಪೇಕ್ಷಿಸತಕ್ಕದ್ದು. ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ.

ಸಂಘದಿಂದ ಕೊಡಲ್ಪಡುವ ಬಹುಮಾನಕ್ಕೆ ಪ್ರಬಂಧ ಬರೆಯುವವರು ಸ್ಪರ್ಧೆಗೆ ಬರುವ ಸಭ್ಯರುಗಳು ತಮ್ಮ ಪ್ರಬಂಧಗಳನ್ನು ಮಾತ್ರ ತಾರೀಖು 15—7—1935 ರಲ್ಲಿ 5 ಗಂಟೆಗೆ ಒಳಗೆ ಕಳುಹಿಸತಕ್ಕದ್ದು. ಸಂಘದಿಂದ (Coorg and the Coorgs) ಎಂಬ ಪುಸ್ತಕವನ್ನು ಮತ್ತು ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳುವವರು ಅವುಗಳನ್ನು ಅವರವರ ಮನೆಗೆ ತರಿಸಿ ಬೆಲೆ ಕಳುಹಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ವಾರ್ಷಿಕ ಸಮ್ಮೇಳನ ಸಮಯದಲ್ಲಿ ಸಂಘದ ಸಭ್ಯರುಗಳು ಒಂದು ಟೀ ಪಾರ್ಟಿ ಕೊಡಲು ಒಪ್ಪಿರುತ್ತಾರೆ. ಆ ದಿವಸ ಎಲ್ಲರೂ ಬಂದು ಭಾಗಿಗಳಾಗಬೇಕಾಗಿ ಕೇಳಿಕೊಳ್ಳಲಾಗಿದೆ.

ಕೆ. ಎಂ. ಜೋಯಪ್ಪ,
ಗೌರವ ಕಾರ್ಯದರ್ಶಿ.

ಡಾಕ್ಟರ್ ಮೋರಿಸನ್ ಎಬ್ರಡಾರ್.
ದಂತ ವೈದ್ಯರು.
ಗೀತಾಂಜಲಿ ಬಿಲ್ಡಿಂಗ್.
(ಪೋಸ್ಟಾಫೀಸು ಎದುರುಗಡೆ)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರು, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಖರ್ಚು ಬಹಳ ಕಡಿಮೆ. [6—39

ವಿವಿಧ ವಾರ್ತಾವಳಿ.

ಮುಂಬಯಿಯಲ್ಲಿ ಕ್ವೆಟ್ಟಾನಿಧಿ.

ಈ ತಾ. ೪ರಲ್ಲಿ ವೋಮಸ್ ಸರಮನ್‌ರು ಕಾರ್ಪೋರೇಶನದಲ್ಲಿ ಕ್ವೆಟ್ಟಾ ಸಹಾಯಾರ್ಥವಾಗಿ ಸರ್ವ ಪಕ್ಷೀಯ ಸಭೆ ಕರೆದಿದ್ದರು. ಸಭೆಯಲ್ಲಿ ನಿಧಿ ಕೂಡಿಸಲು ಒಂದು ಕಮಿಟಿ ನಿರ್ಮಿಸಲ್ಪಟ್ಟಿತು. ಆಗಿಂದಾಗ್ಗೆ 7327 ರೂ. ಕೂಡಿದವು.

ಭೂಕಂಪವಾಗುವದೆಂದು ಮೊದಲೇ ಹೇಳಿದ್ದನಂತೆ.

ಕ್ವೆಟ್ಟಾದಲ್ಲಿ ಈ ಪೂರ್ವದಲ್ಲಿ ಅಂದರೆ 1931ರಲ್ಲಿಯೂ ಭೂಕಂಪವಾಗಿತ್ತು. ಆಗ ಓರ್ವ ಬಂಗಾಲಿ ಹವಾಮಾನ ಶಾಸ್ತ್ರಜ್ಞನು 5 ವರ್ಷದ ಮೇಲೆ ಪುನಃ ಭೂಕಂಪವಾಗುವದೆಂದು ಭವಿಷ್ಯ ಹೇಳಿದ್ದನಂತೆ. ಆತನ ಭವಿಷ್ಯ ಪ್ರಸಿದ್ಧ ಮಾಡಿದರೆ ಜುಟ್ಟಿ ಹಾಕಲ್ಪಡುವುದಾಗಿ ಬೆದರಿಕೆ ಹಾಕಲ್ಪಟ್ಟಿತ್ತಂತೆ.

ವಯಸ್ಸು 125—ಅಗ್ನ 3— ಇಕ್ಕಳು 30

ಅಜ್ಜನ ಆಯುಷ್ಯ

ಕಾಬೂಲಿನಲ್ಲಿ ಅಬ್ದುಲ್ ರಹೀಮ್ ಖಾನ್ ಎಂಬವನು ತನ್ನ 125ನೇ ಜನ್ಮೋತ್ಸವವನ್ನು ಆಚರಿಸಿದನು. ಇವನು ಮೂವರು ಹೆಂಗಸರನ್ನು ಮದುವೆಯಾದನು. ಅವರಿಂದ 30 ಮಕ್ಕಳಿದ್ದಾರೆ. ಈತನು ಆರೋಗ್ಯದಿಂದಿದ್ದಾನೆ. ಯುವಕನಷ್ಟೇ ವೇಗವಾಗಿ ನಡೆಯಬಲ್ಲ. ದೃಷ್ಟಿ ಚೆನ್ನಾಗಿದೆ.

ಕಳ್ಳರನ್ನು ಗುರುತಿಸುವ ಪೆಟ್ಟಿಗೆ.

ಕಳೆದ ತಿಂಗಳಲ್ಲಿ ನಡೆದ ಇಂದೂರಿನ ವಸ್ತು ಪ್ರದರ್ಶನದಲ್ಲಿ ಒಬ್ಬ ದೇಶೀಯ ಕಸ್ಬಿಣದ ಕೆಲಸಗಾರನು ಒಂದು ಆಶ್ಚರ್ಯಕರವಾದ ಕಬ್ಬಿಣದ ಪೆಟ್ಟಿಗೆಯನ್ನು ತಯಾರಿಸಿ ತಂದಿದ್ದನು. ಅದರಲ್ಲಿ ಕಳ್ಳನನ್ನು ಗುರುತಿಸುವುದಕ್ಕೆ ಅನುಕೂಲವಾದ ಸಾಧನಗಳನ್ನು ನಿರ್ಮಿಸಿದ್ದನಂತೆ. ಹೀಗಿದ್ದರೆ ಅನೇಕ ಪೋಲೀಸರ ಹೊಟ್ಟೆಯ ಮೇಲೆ ಕಾಲು ಬಂದಂತೆಯೇ.

55 ವರ್ಷಗಳ ವರೆಗೆ ಶೀರವನ್ನೇ ಕುಡಿದಿಲ್ಲ.

ಯೂಸುಫ್ ಕೋಹರ್ ಎಂಬ ಓರ್ವ ವಿಚಿತ್ರ ಪುರುಷನು ಮೊನ್ನೆ ತಾನೇ ತನ್ನ 136ನೇ ವರ್ಷ ವಯಸ್ಸಿನಲ್ಲಿ ಸತ್ತನು. ಇವನಿಗೆ ನಾಲ್ಕು ಜನ ಮಕ್ಕಳಿದ್ದು ಆ ಪೈಕಿ ಕೊನೆಯವನು ಇವನ 102ನೇ ವರ್ಷ ವಯಸ್ಸಿನಲ್ಲಿ ಹುಟ್ಟಿದನಂತೆ. ಈ ಮನುಷ್ಯನ ಆಹಾರವಾದರೋ ಕೇವಲ ಹಣ್ಣು ಮತ್ತು ಹಾಲು. ಕಳೆದ 55 ವರ್ಷಗಳಿಂದ ಅವನು ಒಂದು ಹನಿಯಾದರೂ ನೀರು ಕುಡಿದಿಲ್ಲವಂತೆ!

ಹೊಯ್ಸಳರಾಜರ ಮನೆ

ಇಟಲಿ ದೇಶದಲ್ಲಿ ಓರ್ವ ಮಧ್ಯಮ ಸ್ಥಿತಿಯ ಗೃಹಸ್ಥನು ಒಂದು ವಿಚಿತ್ರತರವಾದ ಮೂರಂತಸ್ತಿನ ಮನೆಯನ್ನು ಕಟ್ಟಿಸಿದ್ದಾನೆ. ಮುಂಜಾನೆಯಿಂದ ಸಂಜೆಯ ವರೆಗೂ ಅದಕ್ಕೆ ಯಾವಾಗಲೂ ಬಿಸಿಲು ಬೀಳುತ್ತಿರಬೇಕಂತೆ. ಸೂರ್ಯನು ಹೇಗೆ ಹೇಗೆ ತಿರುಗುವನೋ ಅದೇ ರೀತಿ ಅವನ ಮನೆಯೂ ಸಹ ತಿರುಗುವದಂತೆ!

ವಿಚಿತ್ರ ವೃಕ್ಷ.

ಶಿಕಾರಪುರದಲ್ಲಿ ಕರಂಜ ವೃಕ್ಷವೊಂದು ವಿಚಿತ್ರ ವೃಕ್ಷವನ್ನು ತೋರಿಸುತ್ತಿದೆ. ಸುಮಾರು ತಿಂಗಳಿಂದ ಹೊತ್ತಿನಲ್ಲಿ ಈ ಮರದ ಕಾಂಡದಿಂದಲೂ, ಎಲೆಗಳಿಂದಲೂ ನೀರು ತನ್ನಷ್ಟಕ್ಕೆ ತಾನೇ ಸುರಿಯುತ್ತಿದೆ. ಆ ನೀರನ್ನು ಪರೀಕ್ಷೆ ಮಾಡಿ ನೋಡಲಾಗಿ ಕೆಲವು ರೋಗಗಳನ್ನು ಗುಣಪಡಿಸುವ ಶಕ್ತಿಯೂ ಆ ನೀರಿನಲ್ಲಿರುವದೆಂದು ಕಂಡುಬಂದಿದೆ. ಗಂಡಸರು, ಹೆಂಗಸರು ಮಕ್ಕಳು ಎಲ್ಲರೂ ಆ ಮರವನ್ನು ಸಂದರ್ಶಿಸಿ ಅದರ ನೀರು ತೆಗೆದುಕೊಳ್ಳುತ್ತಿದ್ದಾರಂತೆ.

ಕಾಂಗ್ರೆಸಿನ ಸ್ವರ್ಣಮಹೋತ್ಸವ

ಬರುವ ಡಿಶೆಂಬರ ತಿಂಗಳಿಗೆ ಹಿಂದೀ ರಾಷ್ಟ್ರೀಯ ಸಭೆಯು ಸ್ಥಾಪಿತವಾಗಿ 50 ವರ್ಷವಾಗುವುದರಿಂದ ಅದರ ಸ್ವರ್ಣಮಹೋತ್ಸವವನ್ನು ಈ ವರ್ಷ ವಿಜೃಂಭಣೆಯಿಂದ ಜರುಗಿಸುವ ಕುರಿತು ಕಾಂಗ್ರೆಸ್ ಪ್ರೆಸಿಡೆಂಟರು ಆಲೋಚಿಸುತ್ತಿರುವರು. ಆ ವಿಷಯವನ್ನು ವರ್ಕಿಂಗ ಕಮಿಟಿಯ ಮುಂದಿಡಲಿರುವರು. ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಕಳೆದ 50 ವರ್ಷಗಳಿಂದ ಎಡೆಬಿಡದೆ ಪ್ರಯತ್ನಿಸಿಕೊಂಡು ಬಂದ ಈ ಪ್ರಿಯ ಸಂಸ್ಥೆಯ ಸ್ವರ್ಣಮಹೋತ್ಸವವು ಯೋಗ್ಯ ರೀತಿಯಲ್ಲಿ ನಡೆಯಲ್ಪಡುವದು ಅವಶ್ಯವೆಂದು ಕಾಂಗ್ರೆಸ್ ಪಕ್ಷೀಯರೆಲ್ಲರ ಅಭಿಪ್ರಾಯವಾಗಿದೆ. ಇದು ಯಾವ ರೂಪದಲ್ಲಿ ಆಚರಿಸಲ್ಪಡುವದೆಂಬುದು ಮುಂದೆ ನಿಶ್ಚಯಿಸಲ್ಪಡುವದು. ಕಾಂಗ್ರೆಸಿನ ಸಂಪೂರ್ಣ ಇತಿಹಾಸವನ್ನೊಳಗೊಂಡ ಗ್ರಂಥವೊಂದನ್ನು ಪ್ರಕಟಿಸುವರು. ಕಾಂಗ್ರೆಸ್ಸಿನ ಕಾರ್ಯ ಕರ್ತರುಗಳ ಚರಿತ್ರೆಗಳ ...

ನಿರ್ಭಾಗ್ಯ ಭಾರತ.

ಇದೇನು! ರುದ್ರನ ಲೀಲೆಯೋ!!

ಉತ್ತರದಲ್ಲಿ ಭಯಂಕರ ಭೂಕಂಪ.

ದಕ್ಷಿಣದಲ್ಲಿ ಎಲ್ಲೆಲ್ಲೂ ಬೆಂಕಿಯ ಅನಾಹುತ,

ಬಿಸಿಲಿನ ತಾಪ, ನೀರಿನ ಅಭಾವ.

ಉತ್ತರದ ವಿಚಾರ ನೋಡಿ.

ಬಲೂಚಿಸ್ಥಾನದ ಕ್ವೆಟ್ಟಾ ನಗರದಲ್ಲಿ ಹೆಣಗಳು ಕೊಳೆಯುತ್ತಿವೆ! ಬದುಕಿದವರುಗಳು ಸಂತೋಷದಿಂದ ಹೊಟ್ಟೆ ತುಂಬಿಕೊಳ್ಳುತ್ತಿವೆ! ಕ್ವೆಟ್ಟಾ ನಗರವು ಇಂದು ಭೀಕರವಾದ ಮಹಾಸ್ಮಶಾನ!

ನಗರದಲ್ಲಿ ಮಾರಕ ರೋಗಗಳು ಕೆರಳಿತು ಉಂಟಾದ ದುರ್ವಾಸನೆ ಯ ಜಲೆಗೆ 'ಗ್ಯಾಸ್ ಮಾಸ್ಕ್' ಮುಖವಾಡಗಳಿಲ್ಲದೆ ಅತ್ತಿತ್ತ ಚಲಿಸಲಾರದಂತೆ ನಿರ್ಬಂಧಿಸುತ್ತಿದೆ. ಜನರು ಸ್ವೇಚ್ಛೆಯಾಗಿ ತಿರುಗದಂತೆ ಕಟ್ಟಪ್ಪಣೆ ಇದೆ. ಕ್ವೆಟ್ಟಾ ಕಡೆಗೆ ಪ್ರಯಾಣ ಬೆಳೆಸಲು ಇಚ್ಛಿಸುವವರಿಗೆ ಟಿಕೇಟುಗಳು ದೊರೆಯದಂತೆ ಸರ್ಕಾರದ ಆಜ್ಞೆ.

ಸತ್ತವರಿಗೆ ಶಾಸ್ತ್ರೋಕ್ತ ಅಂತ್ಯೇಷ್ಟಿ 'ಸತ್ಕಾರ'ವಿಲ್ಲ. ಸತ್ಕಾರ! ಎಂತಹ ಪರಿಹಾಸ್ಯದ ಶಬ್ದವಿದು! ತಂದೆಯ ಶವದ ಮುಂದೆ ಮಗನಿಲ್ಲ, ತಂದೆಯೂ ಮಗನೂ ಶವವಾಗಿರುವದು ಇಲ್ಲವೆನ್ನುವರು ಬರೆಯಲ್ಲೇ!

ಎಲ್ಲರೂ ಒಂದೇ

ಕ್ವೆಟ್ಟಾದಲ್ಲಿ ಇಂದು ಎಲ್ಲರೂ ಸಹೋದರರು. ಹಿಂದೂಗಳೂ, ಮುಸಲ್ಮಾನರೂ ಒಂದೇ ಚಿತೆಯಲ್ಲಿ ನಿದ್ರಿಸುತ್ತಿದ್ದಾರೆ! ಹರಿಜನನು, ಬ್ರಾಹ್ಮಣನು ಒಬ್ಬರನ್ನೊಬ್ಬರು ಮುಟ್ಟಿಕೊಂಡು ಮಲಗಿರುವರು! ಅಹಾ! ಇಲ್ಲಿ, ಮತ್ಸರವಿಲ್ಲ, ತಾರತಮ್ಯವಿಲ್ಲ, ಕೋಪವಿಲ್ಲ, ಮೇಲು—ಕೀಳು ಭೇದ ಭಾವಗಳಿಲ್ಲ—ಎಲ್ಲ ಹೃದಯಗಳೂ ನಿಶ್ಚಲವಾಗಿವೆ

ಕಲಾತ್ ನಗರ.

ಕ್ವೆಟ್ಟಾದಂತೆ ಧ್ವಂಸವಾದ ಮತ್ತೊಂದು ನಗರವೆಂದರೆ ಕಲಾತ್ ನಗರ. ಈ ನಗರವೂ, ಖಾನನ ಅರಮನೆಯೂ ನೆಲಸಮವಾಗಿವೆ. ಖಾನರೂ, ಕುಟುಂಬವೂ ವೃತ್ತಿಯ ವಿಪತ್ತಿನಿಂದ ಪಾರಾಗಿದ್ದಾರೆ.

ಮೃತ ಹೊಂದಿದ ಬ್ರಿಟಿಷರು.

ಸುಮಾರು 250 ಬ್ರಿಟಿಷರು ಬ್ರಿಟಿಷರು ಈ ಕಂಪನದಲ್ಲಿ ಬಲಿಯಾಗಿರಬಹುದೆಂದು ಎಣಿಸಲಾಗಿದೆ. ರಾಯಲ್ ಏರ್ ಫೋರ್ಸಿನವರೇ ಅಧಿಕ.

ಒಟ್ಟು ನಷ್ಟ.

ಕ್ವೆಟ್ಟಾ ನಗರದಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳ ಸೊತ್ತು ನಷ್ಟವಾಗಿರಬಹುದೆಂದು ಒಂದು ಅಂದಾಜು! (ಬಿಹಾರದಲ್ಲಿ ಸುಮಾರು 12 ಕೋಟಿ ರೂಪಾಯಿಗಳ ನಷ್ಟವಾಗಿತ್ತು. ಆದರೆ ಪ್ರಾಣ ಹಾನಿ ಮಾತ್ರ 8 ಸಾವಿರ.)

ಜಾನುವಾರುಗಳೇ ಇಲ್ಲ!

ಜಾನುವಾರುಗಳು ಸತ್ತುದಕ್ಕಂತೂ ಲೆಕ್ಕವೇ ಇಲ್ಲ. ದನ, ಎತ್ತುಗಳು ಸಾವಿರಾರು ಸತ್ತಿವೆ; ನಾಯಿ, ಕೋಳಿಗಳೂ ಹಲವು ಸತ್ತು, ಕೊಳೆಯುತ್ತಿವೆ. ಕ್ವೆಟ್ಟಾದಲ್ಲಿ ಜಾನುವಾರುಗಳೇ ಗೋಚರಿಸುವುದಿಲ್ಲ!

ಕಂದಹಾರ್ ಮತ್ತು ಚಮನ್

ಇದು ದಕ್ಷಿಣ ಅಫಘಾನಿಸ್ಥಾನದ ಒಂದು ಮುಖ್ಯ ವ್ಯಾಪಾರ ಕೇಂದ್ರ. ಚಮನ್—ಇದು ಬಲೂಚಿಸ್ಥಾನದ ಬ್ರಿಟಿಷ್ ಗಡಿಯ ಒಂದು ಮಹತ್ವದ ಊರು. ಇವೆರಡೂ ನಗರಗಳೂ ಕಂಪನದಲ್ಲಿ ಕಷ್ಟ—ನಷ್ಟಗಳಿಗೀಡಾಗಿವೆ.

ಪರ್ವತವು ಇಬ್ಭಾಗವಾಯಿತು!

ಮತ್ತೊಂದು ಕಂಪನ!!

ಎರಡನೆಯ ಕಂಪನವೊಂದು ನಡು ಹಗಲಲ್ಲಿ ಮತ್ತೊಮ್ಮೆ ಉಂಟಾಯಿತಷ್ಟೆ. ಇದರಿಂದ ಒಂದು ಪರ್ವತವು ಅತಿ ಭಯಂಕರವಾಗಿ ಸೀಳಿಲಿನಂತೆ ಕಟ್ಟ ನಡುವೆ ಇಬ್ಭಾಗವಾಯಿತು! ಅದರಿಂದುಂಟಾದ ಧೂಳು ಬಿರುಕಿನಿಂದ ಧೂಳು ಮೋಡಗಳೆದ್ದು, ಕೆಲವು ಮೈಲುಗಳ ಆಕಾಶವನ್ನು ಕಂಪಗೆ ಮುಚ್ಚಿಬಿಟ್ಟವು! ಭಾಗವಾದ ಪರ್ವತವು ಸುಮಾರು 14000 ಅಡಿ ಉನ್ನತವಾಗಿತ್ತು!

ದೈವ ಕೃಪೆಯಿಂದ ಪಾರಾಯಿತು.

ಒಂದು ಮನೆಯಲ್ಲಿ ಆರು ವರುಷದ ಚಿಕ್ಕ ಮಗುವು ತೊಟ್ಟಿಲು ಹೊರಗೆ ಆಗುತ್ತಿತ್ತು. ಸೋಜಿಗವಾಗಿ, ಇತ್ತಿನ ಗೋಡೆಯು ಮೈಮೇಲೆ ಮಡಚಿನಂತೆ ನಿಂತಿರುವ ಕಾರಣ ಅದು

ಚಿಕ್ಕ ಹಳ್ಳಿ—ಗೋಲ್ಯಾ

